# ಸಾಮ್ರಾಜ್ಯ ಮತ್ತು ಸಂಸ್ಥಾನ

## ಪ್ರಸ್ತಾವನೆ

ಇತಿಹಾಸವೆಂದರೆ ಗತಕಾಲದ ಬದುಕಿನ ಅಧ್ಯಯನವೆಂದು ಹೇಳಿದರೆ ಸರಳ ನಿರೂಪಣೆಯಾಗುತ್ತದೆ. ಹೀಗೇ ನಡೆಯಿತು ಎಂಬುದನ್ನು ಖಚಿತವಾಗಿ ಹೇಳುವುದಾದರೆ ಹೇಗೆ? ಅದನ್ನು ಸತ್ಯವೆಂದು ನಿರ್ಧರಿಸಲು ಸಾಮಗ್ರಿಗಳು ಅಗತ್ಯ. ಆದರೆ ಸಾಮಗ್ರಿಗಳು ಸಂಪೂರ್ಣವಾಗಿ ದೊರೆಯುವುದಿಲ್ಲ. ಅಲ್ಲದೆ ಲಭ್ಯವಿರುವ ಸಾಮಗ್ರಿಗಳಲ್ಲೂ ಅನೇಕ ವೇಳೆ ಕೊರತೆ. ಪೂರ್ವಗ್ರಹ ಭಾವನೆ, ವೈಭವೀಕರಣ ಇತ್ಯಾದಿ ಅಂಶಗಳು ತಮಗರಿವಿಲ್ಲದೇ ಎನ್ನುವುದು ಕಷ್ಟ. ಈ ರೀತಿಯ ಸಮಸ್ಯೆಗಳನ್ನು ಇತಿಹಾಸಕಾರನು ಸಾಧ್ಯವಾದಷ್ಟು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಅಂತಿಮ ತೀರ್ಮಾನಕ್ಕೆ ಬರುವಲ್ಲಿ ಸಫಲನಾಗಬೇಕಾಗಿದೆ.

ಇತಿಹಾಸದ ವಸ್ತು ಮುಖ್ಯವಾಗಿ 'ಗತಕಾಲ' ಎಂಬುದು ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ. ಆದರೆ ಗತಕಾಲದ ಎಲ್ಲಾ ಸಂಗತಿಗಳನ್ನು ಇತಿಹಾಸಕಾರ ಅಭ್ಯಾಸ ಮಾಡುವುದಿಲ್ಲ. ಏಕೆಂದರೆ ಇತಿಹಾಸವು ಕೇವಲ ವಿಶಿಷ್ಟವಾದ ವಿಷಯಗಳನ್ನು ಮಾತ್ರ ತನ್ನ ಮೂಲ ವಸ್ತುವಾಗಿ ಸ್ವೀಕರಿಸುತ್ತದೆನ್ನಬಹುದು. ನಮ್ಮ ದೈನಂದಿನ ಬದುಕಿನ ಸಂಬಂಧಿಸಿದ ಊಟ, ವಸತಿ, ಬಟ್ಟೆ, ವಸ್ತುಗಳು ಇಲ್ಲಿ ಸಂಪೂರ್ಣವಾಗಿ ಗೌಣವಾಗಿರುತ್ತವೆ. ಆದರೆ ಮತ, ಧರ್ಮ, ಸಾಹಿತ್ಯ, ರಾಜ್ಯವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ, ಆಡಳಿತ ಹಾಗೂ ಸಂಸ್ಕೃತಿಯ ವಿವಿಧ ಮುಖಗಳು ಇದರ ಮುಖ್ಯ ವಸ್ತುಗಳಾಗಿ ಕಂಗೊಳಿಸುತ್ತವೆ.

ಇಂದಿನ ಯುಗಕ್ಕಂತು ಇತಿಹಾಸದ ಅಧ್ಯಯನ ಎಂದಿಗಿಂತಲೂ ಅತಿಹೆಚ್ಚು ಅವಶ್ಯಕವಾಗಿದೆ ಎನ್ನಬಹುದು History makes men wise ಎಂಬ ಮಾತೊಂದಿದೆ. ಹಾಗೆಯೇ ಇತಿಹಾಸವು ಮಾನವನನ್ನು ವಿವೇಕಿಯನ್ನಾಗಿ ಮಾಡುತ್ತದೆ ಎಂದೂ ಹೇಳುತ್ತಾರೆ. ಬೆಳಗಿನ ಸೂರ್ಯನ ಹೊಂಗಿರಣವನ್ನು ನೆನಪಿಸುವ ಹಾಗೆ ಪ್ರಾರಂಭವಾಗಿರುವ ೨೧ನೇ ಶತಮಾನದ ಪ್ರಾರಂಭದ ದಿನಗಳಲ್ಲಿಯೇ ಆ ಸೊಬಗಿನ ಹೊಂಗಿರಣವನ್ನು ನಿರ್ಲಕ್ಷಿಸುತ್ತಿರುವ ಮಾನವನು ಸಾವಿರಾರು ವರ್ಷಗಳ ಇತಿಹಾಸದ ಅಧ್ಯಯನದಿಂದ ವಿವೇಕಿ ಆಗಿದ್ದಾನೆಯೇ ಎಂಬುವುದು ಪ್ರಮುಖವಾಗಿ ಮೂಡುವ ಪ್ರಶ್ನೆ. ಇದಕ್ಕೆ ಯಾವುದೇ ಸಂಕೋಚವಿಲ್ಲದೆ 'ಇಲ್ಲ' ಎಂದೇ ಉತ್ತರ ಕೊಡಬೇಕಾಗುತ್ತದೆ ಏಕೆಂದರೆ ಅನಾಗರಿಕ ಸ್ಥಿತಿಯಲ್ಲಿದ್ದ ಹಾಗೆಯೇ ಶಿಲಾಯುಗಗಳಲ್ಲಿದ್ದ ಮಾನವನು ಬಿಲ್ಲು, ಕಲ್ಲುಗಳನ್ನು ಉಪಯೋಗಿಸಿ ನಂತರ ಲೋಹಗಳನ್ನು ಬಳಸಿ ತದನಂತರ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಅಂದು ಸಮರದಲ್ಲಿ ತೊಡಗಿದ್ದರೆ. ಇಂದು ಅದೇ ಮಾನವನು ವೈಜ್ಞಾನಿಕ ಪ್ರಗತಿಯಿಂದಾಗಿ ಅತ್ಯಂತ ಭಯಂಕರವಾದ ಶಸ್ತ್ರಾಸ್ತ್ರಗಳನ್ನು ನಿರ್ಮಿಸಿಕೊಂಡು ಸಮಗ್ರ ಬದುಕನ್ನೇ ಸಂಪೂರ್ಣ ನಾಶಮಾಡುವ ಸ್ಥಿತಿಯಲ್ಲಿದ್ದಾನೆ. ಇದೇನು ಇತಿಹಾಸದಿಂದ ಬಂದಂತಹ ವಿವೇಕವೇ? ಈ ಹಂತದಲ್ಲಿ ನಾವು ನಾಗರಿಕತೆಯಲ್ಲಿ ಮುಂದುವರಿಯುತ್ತಿದ್ದೇವೆ ಎಂದನ್ನಿಸಬಹುದು. ಆದರೆ ಸಂಸ್ಕೃತಿಯಿಂದಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು. ಗೌತಮಬುದ್ಧ, ಮಹಾವೀರ ಬಸವಣ್ಣ, ಕನಕ – ಪುರಂದರರ ಕಾಲದಲ್ಲಿ ಇಂದಿನ ರೀತಿಯ ಅಧುನಿಕ ಸೌಕರ್ಯಗಳಿರಲಿಲ್ಲ. ಆದರೆ ಅವರು ಹಾಗೂ ಅವರ ಅಲೋಚನೆಗಳು ಇಂದಿಗೂ – ಮುಂದಿಗೂ ಪ್ರಸ್ತುತವೆನಿಸುತ್ತವೆ. ಆದುದರಿಂದಲೇ ಒಬ್ಬ ಪ್ರಸಿದ್ಧ ಇತಿಹಾಸಕಾರ ಹೇಳಿರುವುದು “One of the important lessons that we have to, draw from history is that nobody ever learns from History” ಇತಿಹಾಸದಿಂದ ಮಾನವ ಎಂದೂ ಪಾಠವನ್ನು ಕಲಿಯುವುದಿಲ್ಲ ಎಂಬ ಮುಖ್ಯವಾದ ಪಾಠವನ್ನು ನಾವು ಚರಿತ್ರೆಯಿಂದ ಕಲಿಯಬಹುದು. ಆದುದರಿಂದಲೇ ಇಂದಿಗೂ. ಎಂದೆಂದಿಗೂ ಇತಿಹಾಸದ ಅವಶ್ಯಕತೆ ಇದ್ದೇ ಇರುತ್ತದೆ.

ಗತಕಾಲದ ಬದುಕಿಗೂ ಮತ್ತು ಇಂದಿನ ಹತ್ತಿರದ ಬದುಕಿಗೂ ಬಹುಮುಖ್ಯವಾದಂತಹ ಸುಮಧುರ ಸಂಬಂಧವಿದೆ. ಅಂದಿನಿಂದ ಇಂದಿನವರೆಗೂ ಮಾನವನ ದೈನಂದಿನ ಬದುಕಿನಲ್ಲಿ ತೋರಬಹುದಾದಂತಹ ಆಸೆ ಆಕಾಂಕ್ಷೆಗಳ ಪೂರೈಕೆಯಲ್ಲಿ, ವಿಧಾನದಲ್ಲಿ ವ್ಯತ್ಯಾಸವಿದ್ದರೂ ಸಹ ಗುರಿಯಲ್ಲೇನೂ ಬದಲಾವಣೆ ಕಂಡುಬರುವುದಿಲ್ಲ. ಆದರೆ ಜೀವನದ ಶ್ರೇಷ್ಠ ಮೌಲ್ಯಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಶತಮಾನಗಳಿಂದಲೂ ಅವುಗಳು ಹಾಗೆಯೇ ಉಳಿದಿರುವುದು ಸತ್ಯ. ಅವುಗಳನ್ನು ಮತ್ತೆ ಜೀವಂತಗೊಳಿಸುವ

ಕಾರ್ಯದಲ್ಲಿ ಇಂದು ಇತಿಹಾಸವು ವರ್ತಮಾನದ ಬದುಕಿಗೆ ಮಾರ್ಗದರ್ಶನ ಮಾಡುತ್ತಿದೆ ಎನ್ನಬಹುದು. ಇದರ ಜೊತೆಗೆ ಸುಸಂಸ್ಕೃತವಾದಂತಹ ಭವಿಷ್ಯವನ್ನು ರೂಪಿಸಲು ನೆರವಾಗುತ್ತದೆನ್ನಲೂಬಹುದು. ಈ ಅರ್ಥದಲ್ಲಿಯೇ “HIstory is a dialogue between past and present” ಎಂದು ಕರೆದಿರುವುದು.

ಕರ್ನಾಟಕ ಸಂಸ್ಕೃತಿ ಇತಿಹಾಸವು ಶ್ರೀಮಂತವೂ, ವೈವಿಧ್ಯವೂ ಆಗಿರುವುದು ಸಣ್ಣ ಪುಟ್ಟ ಭೌಗೋಳಿಕ ಘಟಕಗಳು ನೀಡಿರುವ ಕಾಣಿಕೆಗಳಿಂದ. ಆದುದುರಿಂದಲೇ ಇಲ್ಲಿ ಪ್ರಾಚೀನ ಕಾಲದಿಂದ ಇಂದಿನವರೆಗೂ ನೂರಾರು ರಾಜಸಂಸ್ಥಾನಗಳೂ ಆಳ್ವಿಕೆ ನಡೆಸಿ ತಮ್ಮ ಸೇವೆಯನ್ನು ಈ ನಾಡಿಗೆ ಸಲ್ಲಿಸಿ ಇತಿಹಾಸದ ಪುಟಗಳಲ್ಲಿ ಸೇರಿಕೊಂಡಿವೆ. ಈ ಎಲ್ಲ ಸಂಸ್ಥಾನಗಳಲ್ಲಿ ಕರ್ನಾಟಕದ ಮಧ್ಯಯುಗದಲ್ಲಿ ಆಳ್ವಿಕೆ ನಡೆಸಿದಂತಹ ವಿಜಯನಗರ, ಇಕ್ಕೇರಿ, ಮೈಸೂರಿನ ದೊರೆಗಳು ಅವರಿಗೆ ದೊರೆಕಿದಂತಹ ಭೌಗೋಲಿಕ ಹಿನ್ನೆಲೆಯ ದೃಷ್ಟಿಯಿಂದ ತಮ್ಮದೆ ಆದ ಸೇವೆ ಮಾಡಿ ಕರ್ನಾಟಕ ಸಂಸ್ಕೃತಿಯನ್ನು ಶ್ರೀಮಂತ ಗೊಳಿಸುವಂತ ಮುನ್ನಡೆದರು. ಪ್ರಸ್ತುತ ಈ ಅಧ್ಯಯನದಲ್ಲಿ ಮೇಲೆ ಸೂಚಿಸಿರುವ ಮೂರು ಅರಸರ ಕಾಲದಲ್ಲಿ ಕನ್ನಡದ ಮಣ್ಣಿನಲ್ಲಿ ಕಂಡುಬಂದಂತಹ ಸಂಸ್ಕೃತಿಯ ಅಧ್ಯಯನವನ್ನು ಕೈಗೊಂಡಿರುವುದು ಅಧ್ಯಯನದ ದೃಷ್ಟಿಯಲ್ಲಿ ಹೆಚ್ಚು ಫಲಕಾರಿಯಾಗಿರುತ್ತದೆ ಎನ್ನಬಹುದು.

**ಸಂಸ್ಕೃತಿ ಎಂದರೇನು ?**

‘ಸಂಸ್ಕೃತಿ’ ಎಂಬ ಶಬ್ದ ಬಹುವಿಶಾಲವಾದದ್ದು, ಬಹುಮುಖವಾದದ್ದು ಹಾಗೆಯೇ ನಮ್ಮ ಜೀವನಕ್ಕೆ ಬಹುಮುಖ್ಯವಾದದ್ದು, ಯಾವುದೇ ಅಧಿಕಾರವಾಗಲಿ ಯಾವುದೇ ನಿಘಂಟಾಗಲಿ ಅದಕ್ಕೆ ಸರಿಯಾದ ಅರ್ಥವಿವರಣೆ ಕೊಡದಿದ್ದರೂ ಜ್ಞಾನದ ಪ್ರಯೋಗದಿಂದ ಆ ಪದದ ಅರ್ಥವನ್ನು ನಮ್ಮನಮ್ಮ ಮನಸ್ಸುಗಳಲ್ಲಿ ವಿವರಿಸಿಕೊಳ್ಳಬಹುದಾಗಿದೆ. ನಾವು ಅತ್ಯಂತ ಸುಲಭವಾಗಿ ನಮ್ಮ ದಿನನಿತ್ಯ ಉಪಯೋಗಿಸುವ ಎಷ್ಟೋ ಪದಗಳಿಗೆ ಅರ್ಥವನ್ನು ಕಂಡುಹಿಡಿಯುವುದು ಸುಲಭವಲ್ಲ. ಉದಾಹರಣೆಗೆ ಪ್ರಾಣಿ ಎಂದರೇನು? ಸತ್ಯ ಎಂದರೇನು? ಧರ್ಮ ಎಂದರೇನು? ಸುಳ್ಳು ಎಂದರೇನು? ಇಂಥ ಅನೇಕ ಪ್ರಶ್ನೆಗಳನ್ನು ಕೇಳಲಿಕ್ಕೆ ಎಷ್ಟು ಸುಲಭವೊ ಉತ್ತರಗಳನ್ನು ಹೇಳುವುದೂ ಸಹ ಅಷ್ಟೆ ಕಷ್ಟಕರವಾಗಿರುತ್ತದೆ. ಈ ಸಾಲಿನಲ್ಲಿ ಪ್ರಮುಖವಾಗಿ ಕಂಡುಬರುವ ಪ್ರಶ್ನೆಯೇ ಸಂಸ್ಕೃತಿ ಎಂದರೇನು ಎಂಬುವುದು. ಸಂಸ್ಕೃತಿ ಎಂಬ ಪದಕ್ಕೆ ಒಂದರ್ಥದಲ್ಲಿ “ಮನುಷ್ಯನು ತಾನು ಜೀವಿಸುತ್ತಿರುವಂತಹ ಪ್ರದೇಶದಲ್ಲಿ ತನ್ನ ಮಾನಸಿಕವಾದ ಬೆಳವಣಿಗೆಯ ಸ್ಥಿತಿಯನ್ನು ಜೀವಿಸುತ್ತಿರುವಂತಹ ಪ್ರದೇಶದಲ್ಲಿ ತನ್ನ ಮಾನಸಿಕವಾದ ಬೆಳವಣಿಗೆಯ ಸ್ಥಿತಿಯನ್ನು ಪದೇಪದೇ ಬದಲಾಯಿಸಿಕೊಳ್ಳ ಬಯಸಿರುತ್ತಾನೆ. ಹಾಗೆಯೇ ಬದಲಾವಣೆ ಕಂಡುಬರುವಂತಹ ಮಾನಸಿಕವಾದಂತಹ ಬೆಳವಣಿಗೆಯನ್ನೇ “ಸಂಸ್ಕೃತಿ” ಎನ್ನಬಹುದಾಗಿದೆ

ಒಂದು ದೇಶದ ಅಥವಾ ಸಾಮ್ರಾಜ್ಯದ ಅದರಲ್ಲಿಯೂ ಅಲ್ಲಿ ವಾಸಿಸುತ್ತಿದ್ದಂತಹ ಜನರ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡುವಾಗ ಇತರರು ಈ ವಿಷಯದ ಬಗ್ಗೆ ಏನೇನು ಹೇಳಿದ್ದಾರೆಂಬುದು ಇಲ್ಲಿ ಪ್ರಸ್ತುತವೆನಿಸುತ್ತದೆ. ಒಂದರ್ಥದಲ್ಲಿ ಜನಾಂಗದ ಜಾತಿ, ಕುಲ, ಧರ್ಮಗಳ ಸಂಸ್ಕೃತಿಯನ್ನು ನಾವು ಸಾಮಾನ್ಯ ಜನತೆಯ ಸಂಸ್ಕೃತಿ ಅಥವಾ ಜನತೆಯ ಸಂಸ್ಕೃತಿಯಂತಲೂ ಕರೆಯಬಹುದು. (ಇದನ್ನೇ ಇಂಗ್ಲಿಷನಲ್ಲಿ Folklore ಎಂದು ಕರೆಯುವುದು.) ಇದನ್ನೆ ನಾವು ಇಂದಿನ ಅಧ್ಯಯನದ ಅನುಕೂಲಿಕೆಯ ದೃಷ್ಟಿಯಿಂದ “ಜನತೆಯ ಸಂಸ್ಕೃತಿ” ಎಂದು ಕರೆದರೆ ಮಹತ್ವವೆನ್ನಿಸಬಹುದೇನೋ, ಹಾಗಾದರೆ “ಜನತೆಯ ಸಂಸ್ಕೃತಿ” ಎಂದರೇನು? ಇದಕ್ಕೆ Encyclopaedia Britannica, XI Ed; ವಿಶ್ವಕೋಶವು “ನಾಗರಿಕ ಜನಾಂಗದ ವಿವಿಧ ಕುಲಗಳಲ್ಲಿ ಕಂಡುಬರುವ ಪರಂಪರಾಗತವಾದಂತಹ ತಿಳಿವು, ಅರಿವು, ಅದೇ ಜನತೆಯ ಸಂಸ್ಕೃತಿ” ಎಂದೂ, ಅದೆ ರೀತಿಯಲ್ಲಿ Encyclopaedia of Relegion and ethics ಎಂಬ ಮಹತ್ವದ ವಿಶ್ವಕೋಶವು “ಒಂದು ಸಾಮ್ರಾಜ್ಯದಲ್ಲಿರುವ ಕುಲಗಳ, ವ್ಯಕ್ತಿಗಳ, ಗುಂಪುಗಳ ಪದ್ಧತಿಗಳು, ಆಚಾರ ವಿಚಾರಗಳು, ನಂಬಿಕೆಗಳು ಹಾಗೂ ಇವುಗಳೆಲ್ಲದರ ಸಮೂಹವೇ ಜನತೆಯ ಸಂಸ್ಕೃತಿ” ಎಂದು ಹೇಳುವುದರ ಜೊತೆಗೆ ಸಂಪ್ರದಾಯಬದ್ಧವಾದ ಆಚಾರಗಳು, ಪದ್ಧತಿಗಳು, ನಂಬಿಕೆಗಳು ಇವುಗಳೆಲ್ಲಕ್ಕೂ ಈ ಜನತೆಯ ಸಂಸ್ಕೃತಿಯು ವಿರುದ್ಧವಾದುದು ಎಂದೂ ಹೇಳಿರುವುದನ್ನು ಕಾಣಬಹುದಾಗಿದೆ.

ಮೇಲಿನ ಅಭಿಪ್ರಾಯಗಳಲ್ಲಿಯೇ ಕಂಡುಬರುವಂತಹ ಪ್ರಮುಖ ಲಕ್ಷಣಗಳನ್ನೇ ಒಟ್ಟಿಗೆ ಸೇರಿಸಿ ನಾವೂ ನಮ್ಮ ಜನಾಂಗದ, ನಮ್ಮ ಸಾಮ್ರಾಜ್ಯಗಳ ಸಂಸ್ಕೃತಿಯನ್ನು ಸಂಕ್ಷಿಪ್ತವಾಗಿ ವಿವರಸಬಹುದು. ಆದರೆ ಮೇಲೆ ಉಲ್ಲೇಖಿಸಿರುವ ಗ್ರಂಥಗಳು ಹೇಳುವಂತೆ, ನಮ್ಮ ಸಾಮ್ರಾಜ್ಯದ ಕೀಳುಕುಲವೆಂದೆನ್ನಿಸಿಕೊಂಡಿರುವ ಜನಾಂಗದವರನ್ನು ಮಾತ್ರ ಗಮನದಲ್ಲಿರಿಸಿಕೊಂಡು ನಮ್ಮ ನಮ್ಮ ಸಂಸ್ಕೃತಿಯನ್ನು ಕುರಿತು ಬರೆಯುವುದು ಅಸಾಧ್ಯವಾದದ್ದು. ಏಕೆಂದರೆ ಅದು ನಮ್ಮ ಹಿಂದಿನ ವೈಭವೀಕೃತ ಸಾಮ್ರಾಜ್ಯಗಳ ಅಧ್ಯಯನಕ್ಕೆ ಒಪ್ಪದ ಮಾತು, ಏಕೆಂದರೆ ವಿಜಯನಗರ ಸಾಮ್ರಾಜ್ಯದಲ್ಲಿಯೇ ಆಗಲಿ, ಮೈಸೂರು ಒಡೆಯರ ಆಸ್ಥಾನದಲ್ಲಿಯೇ ಆಗಲಿ ರಾಮಾಯಣ, ಮಹಾಭರತ, ಭಗವದ್ ಗೀತೆಯನ್ನು ಸಂಪೂರ್ಣವಾಗಿ ಕಂಠಪಾಠ ಮಾಡಿ ಆ ಕೊನೆಯಿಂದ ಈ ಕೊನೆಯವರೆಗೆ ಹೇಳುತ್ತಿದ್ದವರೂ ಇದ್ದರು; ನಿಮಿಷದಲ್ಲಿಯೇ ಹಾಡು, ಲಾವಣಿ, ವಚನಗಳನ್ನು ಸೃಷ್ಟಿಸಿ ಹೇಳುವವರೂ ಇದ್ದರು; ಸಾವಿರಾರು ನುಡಿಗಳನ್ನೊಳಗೊಂಡಿರುವ ಹಾಡುಗಳು ಸ್ವಲ್ಪವೂ ತಪ್ಪಾಗದೆ ಹಾಗೆ ಇತರರ ಸಹಾಯವಿಲ್ಲದೆ ಬಾಯಲ್ಲಿ ಹೇಳಿರುವ ಪುರುಷ ಹಾಗೂ ಮಹಿಳಾ ಮೇಧಾವಿಗಳೂ ಸಹ ಇದ್ದರು. ಇಂತವರು ಇದ್ದಂತಹ ನಾಡುಗಳಲ್ಲಿ ಇದು ಪಂಡಿತರ ಸಂಸ್ಕೃತಿ, ಇದು ಕೀಳುಜಾತಿಯವರ ಸಂಸ್ಕೃತಿ, ಮೇಲು ಜಾತಿಯವರ ಸಂಸ್ಕೃತಿ, ಬಹುಸಂಸ್ಕೃತಿ, ಉಪಸಂಸ್ಕೃತಿ ಎಂಬ ವಿಭಾಗ ಮಾಡಿಕೊಳ್ಳದೆ ಒಟ್ಟಾರೆಯಾಗಿ "ನಮ್ಮ ಸಂಸ್ಕೃತಿ ಅಥವಾ ಕರ್ನಾಟಕ ಸಂಸ್ಕೃತಿ" ಎಂದು ಒಂದೇ ವ್ಯಾಖ್ಯಾನದಲ್ಲಿ ಕರೆಯುವುದು ಅತ್ಯಂತ ಸೂಕ್ತ.

ನಮ್ಮ ಸಂಸ್ಕೃತಿ ಅಥವಾ ಕರ್ನಾಟಕ ಸಂಸ್ಕೃತಿ ಎಂದೂ ಒಟ್ಟಾಗಿ ಕರೆಯುವುದಾದರೆ ಇಲ್ಲಿ ಮತ್ತೊಂದು ವಿಷಯ ಪ್ರಸ್ತಾಪಕ್ಕೆ ಬರದೇ ಇರಲಾರದು. ಇಂದಿನ ಆಧುನಿಕ ಕರ್ನಾಟಕ ಎಂದೂ ಹೇಳಿಕೊಳ್ಳುವುದರಲ್ಲಿಯೂ ನಾನಾ ಆಚಾರ ಸಂಪ್ರದಾಯಗಳು ಬೆಳೆಯುತ್ತಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬ್ರಾಹ್ಮಣ, ವೀರಶೈವ, ಒಕ್ಕಲಿಗ ಎಂಬ ಶ್ರೀಮಂತ ಹಾಗೂ ಉತ್ತಮರೆಂದು ಸ್ವಘೋಷಿಸಿಕೊಂಡಂತಹ ಜಾತಿಗಳು ಇಂದಿನ ಎಲ್ಲಾ ಜನತೆಯು (ಕೆಲವು ಪ್ರತಿಗಾಮಿಗಳನ್ನು ಹೊರತುಪಡಿಸಿ) ಬ್ರಾಹ್ಮಣರನ್ನೇ ಧಾರ್ಮಿಕ ಹಾಗೂ ಪೌರೋಹಿತ್ಯ ಕಾರ್ಯಗಳಿಗೆ ಅವಲಂಬಿಸಿಕೊಂಡು ಜೀವನ ಅವಲಂಬಿಸಿರುವುದು. ವೀರಶೈವ ಜಂಗಮರು ಹಾಗೂ ಒಕ್ಕಲಿಗರ ಮಠಗಳಲ್ಲಿ ಸ್ವಾಮೀಜಿಯವರನ್ನು ಸೃಷ್ಟಿಸಿಕೊಂಡು ಅವರನ್ನೇ ತಮ್ಮೆಲ್ಲರ ಗುರುಗಳೆಂದು ನಂಬಿಕೊಂಡು ತಮ್ಮ ತಮ್ಮ ದಿನನಿತ್ಯದ ಕಾರ್ಯಗಳನ್ನು ಮಾಡಿಕೊಂಡು, ಚಾಚುತಪ್ಪದೆ ತಮ್ಮ ಜೀವನ ಮುಂದುವರಿಸಿಕೊಂಡು ಬರುತ್ತಿರುವುದು ಕಾಣಬಹುದು. ಆದರೆ ಇತ್ತೀಚಿನ ಬೆಳವಣಿಗೆಯನ್ನು ಗಮನಿಸುವುದಾದರೆ ಎರಡನೆಯ ಗುಂಪು ಸಹ ವೇದಗಳ ಅಧ್ಯಯನಗಳನ್ನು ಹೆಚ್ಚಾಗಿ ಮೈಗೂಡಿಸಿಕೊಂಡು ಮೊದಲನೆ ಗುಂಪಿನ ಕಡೆಗೆ ಹೆಚ್ಚಾಗಿ ವಾಲುತ್ತಿರುವುದು ಕಂಡುಬರುತ್ತಿದೆ. ಒಂದರ್ಥದಲ್ಲಿ ಇದು ಐಡೆಂಟಿಟಿ ಕ್ರೇಸಿ ಎಂದೂ ಕರೆಯಬಹುದು. ಕಡೆಗಣಿಸಲ್ಪಟ್ಟವರಲ್ಲಿ ವಿಶೇಷತೆ ಹುಡುಕುವುದು; ವಿಶೇಷತೆ ಹೊಂದಿರುವ ವರ್ಗದಲ್ಲಿ ಸಾಮ್ಯಾನತೆ ನೋಡುವುದು; ಹಾಗೆಯೇ ನಡೆಗಣಿಸಲ್ಪಟ್ಟವರಿಂದ ವಿಶೇಷತೆ ಮತ್ತೆ ವಿಶೇಷದಲ್ಲಿ ಕೆಳಮಟ್ಟದ ವರ್ತನೆಯನ್ನು ಕಂಡುಹಿಡಿಯುವುದು. ಈ ರೀತಿಯಲ್ಲಿ ನಮ್ಮ ಸಂಸ್ಕೃತಿ ಬೆಳೆಯುತ್ತಿದೆ ಎಂದೆನ್ನಬಹುದು. ಕಣ್ಣು, ಕಿವಿ, ಮೂಗು, ಬಾಯಿ, ಕೈ, ಕಾಲು ಮೊದಲಾದ ಅಂಗಾಂಗಗಳು ಕ್ರಮವಾಗಿ ಎಲ್ಲಾ ಮನುಷ್ಯರಿಗೂ ಇರುತ್ತದೆ. ಇಷ್ಟರಮಟ್ಟಿಗೆ ಎಲ್ಲ ಮನುಷ್ಯರ ಲಕ್ಷಣಗಳು ಒಂದೇ; ಆದರೆ ಒಬ್ಬ ವ್ಯಕ್ತಿಯ ಮುಖದಂತೆ ಮತ್ತೊಬ್ಬ ನದಿಲ್ಲ; ಒಬ್ಬನ ಮೂಗಿನಂತೆ ಇನ್ನೊಬ್ಬನದಿಲ್ಲ; ಮತ್ತೊಬ್ಬನ ಬುದ್ಧಿಶಕ್ತಿಯಂತೆ ಮಗದೊಬ್ಬನಿಗೆ ಹೋಲಿಸಿದರೆ ಅನೇಕ ವ್ಯತ್ಯಾಸಗಳಿರುವುದು ಕಂಡು ಬರುತ್ತದೆ. ಮೇಲಿನ ರೂಪುರೇಷೆಯಲ್ಲಿ ಹೇಗೋ ಹಾಗೆ ಅಂತರಂಗದ ರಚನೆಯ ವಿಧಾನದಲ್ಲಿಯೂ ಒಬ್ಬೊಬ್ಬ ಮನುಷ್ಯನೂ ಒಂದೊಂದು ರೀತಿಯಲ್ಲಿ ಪ್ರತ್ಯೇಕತೆಯನ್ನು ಹೊಂದಿರುತ್ತಾನೆ. ಒಂದೇ ಮರದ ಹಣ್ಣುಗಳಲ್ಲಿ ಒಂದೇ ರುಚಿ ಇರುವುದಿಲ್ಲವೆಂಬಂತೆ ಒಂದೇ ಕುಟುಂಬದಲ್ಲಿ ಜನಿಸಿದಂತಹ ಐವರು ಮಕ್ಕಳ ಆಟಪಾಠಗಳೂ ಬೇರೆ ಬೇರೆಯಾಗಿರುತ್ತವೆಂದು ನಿಸ್ಸಂಕೋಚವಾಗಿ ಹೇಳಬಹುದು. ಒಟ್ಟಿನಲ್ಲಿ ಸಂಸ್ಕೃತಿಯ ದೃಷ್ಟಿಯಲ್ಲಿ ವರ್ಗವೆಂಬುವುದು ಒಂದೇಯಾಗಿದ್ದರೂ ಸಹ ವ್ಯಕ್ತಿ ಎನ್ನುವುದು ಹೆಚ್ಚಾಗಿರುತ್ತದೆ.

ಸಂಸ್ಕೃತಿಯಲ್ಲಿ ಪ್ರಮುಖವಾಗಿ ಎರಡು ವಿಧಗಳನ್ನು ನಾವು ಗುರುತಿಸಬಹುದು. ಅವುಗಳಲ್ಲಿ

೧. ಭೌತಿಕ ಸಂಸ್ಕೃತಿ (ಗೋಚರಿಸುವ ಸಂಸ್ಕೃತಿ)

೨. ಅಭೌತಿಕ ಸಂಸ್ಕೃತಿ (ಗೋಚರವಾಗುವ ಸಂಸ್ಕೃತಿ) ಎಂದು ಗುರ್ತಿಸಬಹುದಾಗಿದೆ. ಈ ರೀತಿಯ ಸಂಸ್ಕೃತಿಗಳು ಪ್ರತಿಯೊಬ್ಬರ ಜೀವನದಲ್ಲಿಯೂ ಅನುಭವಕ್ಕೆ ಬಂದಿರುತ್ತದೆ. ನಮ್ಮ ನಾಡಿನ ವರ ನದಿಗಳಾಗಿರುವಂತಹ ಕಾವೇರಿ, ಕೃಷ್ಣ, ತುಂಗಭದ್ರ ನದಿಗಳು ತಾವು ಹರಿದುಹೋಗುವ ದಾರಿಯಲ್ಲಿ ಆ ಪಕ್ಕ ಈ ಪಕ್ಕಗಳಿಂದ ಹತ್ತಾರು ಉಪನದಿಗಳನ್ನು ತಮ್ಮ ಮಡಿಲಿಗೆ ಸೇರಿಸಿಕೊಂಡು. ಒಂದಾಗಿ ಹರಿದು ಸಮುದ್ರಕ್ಕೆ ಅನೇಕ ಮುಖಗಳಿಂದ ನೀರನ್ನು ಸೇರಿಸುತ್ತವೆ. ಇಲ್ಲಿ ನದಿಯು ಭೌತಿಕ ಸಂಸ್ಕೃತಿಯ ರೂಪವಾಗಿ ಗೋಚರವಾಗುತ್ತದೆ. ಅದೇ ರೀತಿಯಲ್ಲಿ ಅಭೌತಿಕ ಸಂಸ್ಕೃತಿಯನ್ನು ಗುರ್ತಿಸುವುದಕ್ಕೆ ಕಲ್ಪವೃಕ್ಷವನ್ನು ಆಯ್ಕೆಮಾಡಿಕೊಳ್ಳಬಹುದು. ಕಲ್ಪವೃಕ್ಷದ ಪಾದ ತನ್ನದೆ ಆದಂತಹ ಸೀಮಿತ ಆಗಲದ ನೆಲದಲ್ಲಿ ನಿಂತು ಅಲ್ಲಿಯೇ ಸ್ಥಿರವಾಗಿರುತ್ತದೆ. ಆದರೆ ಬುಡದಿಂದ ತಲೆಯ ಕಡೆಯವರೆವಿಗೂ ಮರದ ನರನಾಡಿಗಳು ನೂರಾರು ಕಡೆಯಿಂದ ಸಾರವನ್ನು ಹೀರಿಕೊಳ್ಳುತ್ತಾ ಸಾವಿರಾರು ಮನುಷ್ಯರಿಗೆ, ಪಕ್ಷಿಗಳಿಗೆ ವಿವಿಧ ರೀತಿಯಲ್ಲಿ ಆಸರೆಯಾಗಿರುತ್ತದೆ. ಮೂಲದಲ್ಲಿ ಅದೊಂದು ಶಾಶ್ವತವಾದ ಸಂಸ್ಕೃತಿಯನ್ನು ತನ್ನ ಮಡಿಲಿನಲ್ಲಿ ಗೋಚರಿಸದೆಯೇ ಪೋಷಿಸಿಕೊಂಡಿರುತ್ತದೆನ್ನಬಹುದು. ಇದೇ ಒಂದು ದೃಷ್ಟಿಯಲ್ಲಿ ಅಭೌತಿಕ ಸಂಸ್ಕೃತಿ ಎಂದೆನ್ನಿಸಿಕೊಳ್ಳುತ್ತದೆ. ಸಂಸ್ಕೃತಿಯು ಹೀಗೆ ಭೌತಿಕ ಹಾಗೂ ಅಭೌತಿಕ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಮೂಲವಾಗಿ ಒಂದೇ ಸಮಾಜದ ಏಕಜನಪದ ಮೂಲವಾಗಿ ಹುಟ್ಟಿಕೊಂಡು. ಬೆಳೆದು ಬೆಳೆದಂತೆಲ್ಲಾ ಎಲ್ಲಾ ಜನರ ಜಾತಿಯ ಧರ್ಮದ ಸಾರವನ್ನು ತನ್ನೊಳಗೆ ಸೇರಿಸಿಕೊಂಡು ಅಖಂಡ ಲೋಕದ ಜನತೆಗೆ ಒಂದು ಪ್ರತ್ಯೇಕ ಸಂಪತ್ತಾಗುವುದರಲ್ಲಿ ಸಂದೇಹವಿರಲಾರದು. ಹೀಗೆ ಭೌತಿಕ ಅಭೌತಿಕಗಳ ಸಮ್ಮಿಶ್ರಣವೇ "ಸಂಸ್ಕೃತಿ" ಎನ್ನುವುದಾದರೆ ಮಾನವರ ದೃಷ್ಟಿಯಲ್ಲಿ ಈ ಬೌತಿಕ ಹಾಗೂ ಅಭೌತಿಕ ಸಂಸ್ಕೃತಿಯ ಅರ್ಥವೇ ಬೇರೆ ರೂಪ ಪಡೆದಿರುತ್ತದೆ.

ಪ್ರಪಂಚದ ಪ್ರಾಚೀನ ಇತಿಹಾಸವನ್ನು ಗಮನಿಸಿದರೆ ಮನುಷ್ಯ ತನ್ನ ಅಧ್ಯಾತ್ಮಿಕ ಹಾಗೂ ಭೌತಿಕ ಭಾವನೆಗಳನ್ನು ಕಾಲದಿಂದ ಕಾಲಕ್ಕೆ, ದೇಶದಿಂದ ದೇಶಕ್ಕೆ ಸಮಯಕ್ಕೆ ಸರಿಯಾಗಿಯೇ ಭದ್ರಮಾಡಿಕೊಂಡು, ಜೋಪಾನ ಮಾಡಿಕೊಂಡು ತನ್ನ ಬುದ್ಧಿಶಕ್ತಿಯಿಂದ ಆತ್ಮ ಸಿದ್ಧಿಗಾಗಿ ಉಪಯೋಗಿಸಿಕೊಂಡನೆಂಬುದನ್ನು ಕೇಳಿದಾಗ ನೋವಾಗುತ್ತದೆ. ಏಕೆಂದರೆ ಸಂಸ್ಕೃತಿಯು ಮುಖ್ಯವಾಗಿ ಆಧ್ಯಾತ್ಮಿಕ ಮತ್ತು ವ್ಯಕ್ತಿಪರವಾದದ್ದು. ಆದರೆ ಇಲ್ಲಿ ಗುಪ್ತವಾಗಿ ಆಯಾ ದೇಶ ಸಾಮ್ರಾಜ್ಯ ಕಾಲಲ್ಲಿನ ಆರ್ಥಿಕ ಸ್ಥಿತಿಗತಿ ಮುಂತಾದವನ್ನು ಅನುಸರಿಸಿ ಜೋಡಿಸಿ ನೋಡಿದರೆ ಸಂಸ್ಕೃತಿಗೆ ಭೇದಗಳಿರುವುದೆಂದು ಧೈರ್ಯವಾಗಿಯೇ ಹೇಳಬಹುದು. ಪ್ರತಿಯೊಬ್ಬ ಮಾನವನ ಪ್ರಗತಿಯಲ್ಲಿ ಪ್ರಮುಖವಾಗಿ ಸಂಸ್ಕೃತಿಯು ಜೀವ ಸ್ವರೂಪವಾಗಿರುತ್ತದೆ. ಏಕೆಂದರೆ ಆಸೆ, ಜ್ಞಾನ ಹಾಗೂ ಕಾರ್ಯ ಪ್ರವೃತ್ತನಾಗುವ ಗುಣವು ಸಂಸ್ಕೃತಿಯಿಂದ ಕಂಡುಬರುತ್ತದೆ.

ಮೇಲೆ ಚರ್ಚಿಸಬಯಸಿರುವಂತಹ 'ಸಂಸ್ಕೃತಿಗೆ ಭೇದಗಳಿರುವುದು' ಎಂಬ ವಿಷಯಕ್ಕೆ ಸಾಕ್ಷಿಯಾಗಿ ಈ ಕೆಳಗಿನ ಉದಾಹರಣೆಯನ್ನು ನೀಡಬಹುದು. ನಮ್ಮ ಪ್ರಪಂಚದ ಸಂಸ್ಕೃರಿಗೆ ಒಟ್ಟಾರೆ ಹೋಲಿಸಿಕೊಂಡರೆ ಅನೇಕ ರೀತಿಯ ವೈಶಿಷ್ಟ್ಯತೆಯಿರುವುದು ಕಂಡು ಬರುತ್ತದೆ ಹೇಗೆಂದರೆ ಚೀನಾ ಸಂಸ್ಕೃತಿಯಲ್ಲಿ ಹೆಚ್ಚಾಗಿ ನೀತಿಬೋಧನೆಯನ್ನು ಕಾಣಬಹುದಾದರೆ. ಭಾರತೀಯ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕವಾದಂತಹ ವಿವೇಚನೆಗೆ ಹೆಚ್ಚಿನ ಒತ್ತು ನೀಡಿರುವುದು ಕಾಣಬಹುದಾಗಿದೆ. ಮೆಸಪಟೋಮಿಯಾದ ಸಂಸ್ಕೃತಿಗಳಲ್ಲಿ ಪ್ರಥಮ ಸ್ಥಾನವನ್ನು ಕೈಗಾರಿಕೆ ಮತ್ತು ವಾಣಿಜ್ಯ ವ್ಯಾಪಾರಗಳು ಅಲಂಕರಿಸಿಕೊಂಡಿದ್ದರೆ, ಈಜಿಪ್ಟ್‌ನಲ್ಲಿ ಸಾಮ್ರಾಜ್ಯಶಾಹಿ ತತ್ವ ಪ್ರಮುಖವಾಗಿ ಎದ್ದು ಕಾಣುತ್ತದೆ. ಅದೇ ರೀತಿಯಲ್ಲಿ ಗ್ರೀಕರು ಕಲಾ ಮತ್ತು ಸ್ವಾತಂತ್ರ್ಯಕ್ಕೆ ಅದರಲ್ಲಿಯೂ ವ್ಯಕ್ತಿಸ್ವಾತಂತ್ರ ಕಲೆ ಹೆಚ್ಚಿನ ಗಮನ ನೀಡಿರುವುದು ಕಂಡುಬರುತ್ತದೆ. ಹಾಗೆಯೆ ರೋಮ್ ಸಂಸ್ಕೃತಿಯಲ್ಲಿ ಕಟ್ಟಳೆ, ಕಾನೂನುಗಳಿಗೆ ಪ್ರೋತ್ಸಾಹ ನೀಡಿದರೆ ಅರಬ್ ಸಂಸ್ಕೃತಿಯಲ್ಲಿ ಮತಾಭಿಮಾನ, ಧರ್ಮಾಭಿಮಾನಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಕಂಡುಬರುತ್ತದೆ.

ಮೇಲಿನ ಒಂದೊಂದು ಸಂಸ್ಕೃತಿಯನ್ನು ಒಟ್ಟಾಗಿ ಚಿಂತಿಸತೊಡಗಿದಾಗ ಒಂದೇ ಒಂದು ಅಂಶ ಪ್ರಧಾನವಾಗಿ ಕಂಡುಬರುವುದು. ಅದೇನೆಂದರೆ ಅಲ್ಲಿನ ಜನರಲ್ಲಿದ್ದಂತಹ ಆತ್ಮಗುಣಗಳು, ಇದಕ್ಕೆ ಪೂರಕವಾಗಿ ಅಲ್ಲಿನ ದೇಶ ಕಾಲ ಚಾರಿತ್ರಿಕ ಸನ್ನಿವೇಶಗಳು ಅತ್ಯಂತ ಹೆಚ್ಚಿನ ರೀತಿಯಲ್ಲಿ ಪ್ರೇರಣೆ ನೀಡಿರಬಹುದು. ಈ ದೃಷ್ಟಿಯಿಂದಲೇ ತೌಲನಿಕವಾಗಿ ಅಧ್ಯಯನ ಕೈಗೊಂಡಿದ್ದೇ ಆದರೆ ನಮ್ಮ ಕರ್ನಾಟಕದ ಸಂಸ್ಕೃತಿಯನ್ನು ವಿವಿಧ ರಾಜಮನೆತನಗಳ, ದೊರೆಗಳ, ಪಾಳೆಗಾರರ ಆಳ್ವಿಕೆಯ ಕಾಲದಲ್ಲಿಯೂ ಗುರುತಿಸಬಹುದಾಗಿದೆ.

ನಮ್ಮ ಇತಿಹಾಸಗಾರರು ಕರ್ನಾಟಕದ ಸಂಸ್ಕೃತಿಯು ವಿಜಯನಗರ, ಇಕ್ಕೇರಿ ಮೈಸೂರು ಅರಸರುಗಳ ಆಳ್ವಿಕೆಯ ಕಾಲದಲ್ಲಿ ಇಡಿ ದಕ್ಷಿಣ ಭಾರತದಲ್ಲಿಯೇ ಅಖಂಡ ಹಾಗೂ ಅನಾದಿಯಾಗಿ ಮೆರೆಯಿತೆಂದು ಅಭಿಪ್ರಾಯ ಪಟ್ಟಿದ್ದಾರೆ. ಗೋದಾವರಿ ನದಿಯಿಂದ ಕನ್ಯಾಕುಮಾರಿವರೆವಿಗೂ ಹರಿಹರ ಹಕ್ಕಬುಕ್ಕರಿಂದ ಮೈಸೂರಿನ ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ವರಿವಿಗೂ ಹೇಗೆ ಕನ್ನಡ ನಾಡು ಅನೇಕ ಅಡೆತಡೆಗಳ ನಡುವೆಯೂ ಮೆರೆಯಿತೋ. ಹಾಗೆಯೇ ಸಾಹಿತ್ಯ ರತ್ನಗಳೆನ್ನಿಸಿಕೊಂಡಿರುವಂತಹ ಪಂಪ, ರನ್ನ, ಜನ್ನ, ರಾಘವಾಂಕ, ಹರಿಹರ, ಬಸವಣ್ಣ, ಕುಮಾರವ್ಯಾಸ, ಸರ್ವಜ್ಞ, ಕನಕ, ಪುರಂದರದಾಸರುಗಳಲ್ಲದೆ ಇತ್ತೀಚಿನ ಕುವೆಂಪು, ಬೇಂದ್ರೆ, ಮಾಸ್ತಿ, ಗೋಕಾಕ, ಅನಂತ ಮೂರ್ತಿ, ಕಂಬಾರ, ತೇಜಸ್ವಿಯವರವರೆವಿಗೂ ಅಖಂಡ ಕನ್ನಡ ನಾಡಾಗಿಯೇ ಮುನ್ನಡೆಯುತ್ತಿದೆ. ಈ ನಡುವೆ ಅನೇಕ ಅನ್ಯ ಧರ್ಮೀಯರ ದಾಳಿಗೆ ಕರ್ನಾಟಕ ತುತ್ತಾದರೂ ಸಹ ಕನ್ನಡದ ಸಂಸ್ಕೃತಿಯು ತನ್ನ ಮೂಲರೂಪವನ್ನು ಕಾಪಾಡಿಕೊಂಡು ಬರುವುದರಲ್ಲಿ ತಪ್ಪು ಮಾಡಿದಂತೆ ಕಂಡುಬರುವುದಿಲ್ಲ. ಇದಕ್ಕೆ ಪ್ರಬಲವಾದಂತಹ ಕಾರಣವೆಂದರೆ ಕನ್ನಡ ನಾಡಿನ ರಾಜಮಹಾರಾಜರುಗಳು ಅನುಸರಿಸಿಕೊಂಡು ಬಂದಂತಹ ಆಧ್ಯಾತ್ಮಿಕ ನೀತಿಸಾರವೆನ್ನಬಹುದು.

ಕರ್ನಾಟಕ ಸಂಸ್ಕೃತಿಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಪ್ರಾಧಾನ್ಯತೆ ಇದೆ. ಹಾಗೆಯೇ ಆಧ್ಯಾತ್ಮಿಕ ವಿವೇಚನೆಗೆ ಅಧಿಕ ಪ್ರಾಶಸ್ತ್ಯ ನೀಡಿದರೂ ಸಹ ಧರ್ಮಕ್ಕೆ ವಿರುದ್ಧವಾಗಿರುವಂತಹ ಕಾಮ, ಧರ್ಮದ ದುರುಪಯೋಗ, ಹಣದ ಸಂಪಾದನೆ, ವರ್ಣಾಶ್ರಮಗಳಿಗೆ ಹೆಚ್ಚಿನ ಆಧ್ಯತೆ ನೀಡಲಾಗಿತ್ತು. ಆದ್ದರಿಂದ ಈ ಸಂಸ್ಕೃತಿಯೂ ಕೂಡ ವ್ಯಕ್ತಿಯ ಸಂಪೂರ್ಣ ಅಭಿವೃದ್ದಿಗೆ ಅವಶ್ಯಕವೆಂದು ನಿರ್ಣಯಿಸುವುದು ತಪ್ಪು. ಏಕೆಂದರೆ ಕರ್ನಾಟಕದ ಜನತೆ ಕೇವಲ ತಪ್ಪು ಕಲ್ಪನೆಯನ್ನು ಹೊಂದಿದವರೆಂಬ ಅಪಾದನೆಯು ಆಧಾರ ರಹಿತವಾದುದೆನ್ನಬಹುದು. ಮೇಲಿನ ವಿಷಯಕ್ಕೆ ಉದಾಹರಣೆ ನೀಡುವುದಾದರೆ ಕರ್ನಾಟಕದಲ್ಲಿ ಅದರಲ್ಲಿಯೂ ವಿಜಯನಗರ ಸಾಮ್ರಾಜ್ಯದಲ್ಲಿನ ಸಂಸ್ಕೃತಿಯು ವಿದ್ವಾಂಸರಿಂದ ಕಲಿತ ವಿದ್ಯೆಯ ಪ್ರಭಾವವೆನ್ನುವುದಕ್ಕಿಂತಲೂ, ಸ್ವತಃ ಕರಗತ ಮಾಡಿಕೊಂಡ ಪರಿಣಾಮದಿಂದ ಉಂಟಾದ ಅನುಭವದ ಅನಂದವೇ ಸಂಸ್ಕೃತಿಯಾಗಿ ಇಲ್ಲಿ ಹೊರಹೊಮ್ಮಿರುವುದು ಕಂಡುಬರುತ್ತದೆ. ಇದಕ್ಕೆ ವಿಜಯನಗರದ ಅರಸ ಕೃಷ್ಣದೇವರಾಯನ ಕಾಲದಲ್ಲಿ ವ್ಯಾಸತೀರ್ಥರು ಒಡ್ಡಿದಂತಹ ಸಣ್ಣ ಪ್ರಮಾಣದ ಪರೀಕ್ಷೆಯೇ ನಿದರ್ಶನವಾಗಿದೆ. ಒಮ್ಮೆ ಸಾಮ್ರಾಜ್ಯದ ಅಸ್ಥಾನದ ಮೇಧಾವಿಗಳಾಗಿದ್ದಂತಹ ವ್ಯಾಸರಾಯರು ಕನಕದಾಸರೂ ಸೇರಿದಂತೆ ಅನೇಕ ಶಿಷ್ಯರನ್ನು ಕರೆದು ದೇವರಿಗೆ ಪೂಜೆ ಸಲ್ಲಿಸಲಾಗಿದ್ದಂತಹ ಬಾಳೆಯ ಹಣ್ಣುಗಳನ್ನು ಕೊಟ್ಟು 'ಯಾರೂ ಇಲ್ಲದೆಡೆ ಯಾರಿಗೂ ತೋರಿಸದೆ ತಿಂದು ಬನ್ನಿ' ಎಂದು ಅಪ್ಪಣೆ ಮಾಡಿದರಂತೆ. ಪಂಡಿತರುಗಳು ಶಿಷ್ಯರುಗಳು ತಮಗೆ ತೋರಿದಂತೆ ಅನೇಕ ಗೌಪ್ಯ ಸ್ಥಳಗಳಲ್ಲಿ ತಿಂದುಬಂದರು. ಆದರೆ ಕನಕದಾಸರಿಗೆ ಮಾತ್ರ ಎಲ್ಲೆಲ್ಲಿ ಹೋದರೂ ತಮ್ಮ ನೆಚ್ಚಿನ ಗುರುಗಳು ಹಾಗೂ ಅವನ ಆರಾಧ್ಯದೈವ ಕೃಷ್ಣ ಇದ್ದೇ ಇರುವುದು ಕಂಡುಬರುತ್ತಿತ್ತು. ಅವನು ಈ ದೃಷ್ಟಿಯಲ್ಲಿ ಯಾರೂ ಇಲ್ಲದ ಎಡೆಯೇ ಈ ಲೋಕದಲ್ಲಿಲ್ಲವೆಂದು ತಿಳಿದು ಹಣ್ಣನ್ನು ತಿನ್ನದೆ ಹಿಂದಕ್ಕೆ ತಂದನಂತೆ, ಇದನ್ನೆ ನಾವು ಇಲ್ಲಿ ಶಿಷ್ಯರದು (Knowledge) ವಿದ್ವತ್ತು ಎಂದೆನ್ನಿಸಿಕೊಂಡರೆ. ಕನಕದಾಸರದನ್ನು ಸಂಸ್ಕೃತಿ (Culture) ಎಂದು ಹೇಳಬಹುದಾಗಿದೆ. ಮೇಲಿನ ಉದಾಹರಣೆಯಿಂದ ನಡೆನುಡಿಗಳೆರಡರಲ್ಲಿಯೂ ಸಡಲಿಕೆ ಮಾಡಿಕೊಳ್ಳದಂತೆ "ಎರಡನ್ನೂ ಒಂದೇ ನಾಣ್ಯದ ಎರಡು ಮುಖಗಳಂತೆ ಕೊಂಡೊಯ್ಯುವ ಮನಸ್ಸಿನ ಹಿಡಿತವೇ ಸಂಸ್ಕೃತಿ" ಎಂದು ತಿಳಿಯಬಹುದಾಗಿದೆ. ಏಕೆಂದರೆ ವಿಚಾರ ಮಾಡುವುದೇ ಒಂದು, ಆಚಾರ ಮಾಡುವುದೇ ಮತ್ತೊಂದಾಗಿಸಿಕೊಂಡಿದ್ದರೆ, ಅಂಥಹವರ ಮನಸ್ಸಿನ ಕಾರ್ಯವು ಸಂಸ್ಕೃತಿಯಾಗುವುದಿಲ್ಲ. ಮನುಷ್ಯನ ದಿನನಿತ್ಯದ ಬದುಕು ಅವನ ಜೀವನವೆಲ್ಲವೂ ನಡೆನುಡಿಗಳೆರಡರಲ್ಲಿಯೇ ಅಡಕವಾಗಿರುತ್ತದೆನ್ನಬಹುದು. ಸಂಸ್ಕೃತಿಯ ಪರಿಶೋಧನೆಯನ್ನು ಕೈಗೊಂಡಿರುವಂತವರು ಮೊದಲು ಈ ನಡೆನುಡಿಗಳನ್ನು ಗಮನಿಸಬೇಕೆನ್ನಿಸುತ್ತದೆ. ಈ ಎರಡರಲ್ಲಿ ತಕ್ಷಣ ಕೈಗೆ ಸಿಗುವುದೆಂದರೆ 'ನುಡಿ' ನುಡಿಯ ಬಗ್ಗೆ ಹೇಳುವುದಾದರೆ ಇಲ್ಲಿ ಹಾಡು, ಕಥೆ, ಒಗಟು, ಗಾದೆ, ಸಂಗೀತ ಪುರಾಣಕಥೆಗಳು, ಲಾವಣಿ, ತತ್ವಪದಗಳು ಮುಂತಾದವುಗಳು ಒಟ್ಟಾಗಿ ಬರುತ್ತವೆನ್ನಬಹುದು. ಇಂದಿಗೂ ಕೂಡ ಸಂಸ್ಕೃತಿಯು ತನ್ನದೆಯಾದ ವೈಶಿಷ್ಟ್ಯತೆಯನ್ನು ಪಡೆದಿರಲು ಕಾರಣವೆಂದರೆ ನುಡಿಯ ಪಾತ್ರ ಎದ್ದು ಕಾಣುತ್ತದೆ. (ಇಂದು ಪ್ರಪಂಚದ ಎಲ್ಲಾ ರಾಷ್ಟ್ರಗಳು ಒಂದು ಕಡೆ ಸೇರಿಸಿರುವ ಭಾಷೆ "ಇಂಗ್ಲಿಷ್" ಎನ್ನುವುದು ನಮಗೆಲ್ಲ ತಿಳಿದಿರುವ ವಿಷಯವೇ.)

ಸಂಸ್ಕೃತಿಯ ಬಗ್ಗೆ ಚಿಂತಿಸುತ್ತಾ ಮುಂದುವರೆದರೆ ಸಂಸ್ಕೃತಿಯು ವ್ಯಕ್ತಿ ಪ್ರಧಾನವೇ? ಅಥವಾ ಸಮಾಜ ಪ್ರಧಾನವೇ? ಅಥವಾ ವ್ಯಕ್ತಿಗೆ ವಿಧೇಯವಾಗಿರುವುದೇ? ಅಥವಾ ಸಮಾಜಕ್ಕೆ ವಿಧೇಯಿಯಾಗಿರುವುದೇ? ಎಂಬ ಪ್ರಶ್ನೆ ಉಂಟಾಗುವುದು ಸಹಜವೇ, ಆದರೆ ಇಲ್ಲಿ. ಈ

ಪ್ರಶ್ನೆ ವ್ಯಕ್ತಿ ಮತ್ತು ಸಮಾಜಗಳೆಲ್ಲವೂ ತನ್ನದೆಯಾದ ರೀತಿಯಲ್ಲಿ ಬೇರೆ ಬೇರೆಯಾದವುಗಳೆನ್ನಬಹುದು. ಹಾಗೆಯೇ ಇವುಗಳ ಸಾಮಾನ್ಯವಾಗಿ ಒಂದನ್ನೊಂದು ಬಿಟ್ಟಿರಲೂಬಲ್ಲವು ಎಂಬ ಭಾವನೆಯಿಂದ ಉಂಟಾಗುತ್ತದೆ ಎಂದೂ ಹೇಳಬಹುದು. ಇಂದಿನ ಪ್ರಪಂಚದಲ್ಲಿ ಲೋಕದ ಪರಿಜ್ಞಾನವನ್ನು ಹೆಚ್ಚಾಗಿ ಹೊಂದಿರುವವರಂತೂ ಆ ಭೇದ ಭಾವನೆಗಳಿಗೆ ಯಾವುದೇ ರೀತಿಯ ಆಧಾರವಿಲ್ಲವೆಂದು ವಾದಿಸುತ್ತಿರುವುದು ಕಂಡುಬರುತ್ತದೆ. ಮನೆ, ಕಾಲ, ಜಾತಿ, ಉದ್ಯೋಗ, ರಾಜಕೀಯಗಳೆಲ್ಲವೂ ವ್ಯಕ್ತಿಯ ಮೇಲೆ ಕ್ಷಣಕ್ಷಣವೂ ತನ್ನದೆಯಾದ ಪ್ರಭಾವ ಬೀರುತ್ತಿರುತ್ತದೆ. ವ್ಯಕ್ತಿಯ ಪಾತ್ರವೂ ಇಲ್ಲಿ ತನ್ನದೇ ಪ್ರಮಾಣದಲ್ಲಿ ಪ್ರಭಾವವನ್ನು ಅವುಗಳ ಮೇಲೆ ಸತತವಾಗಿ ಬೀರಲು ಪ್ರಭಾವಿತರಾಗುವಂತೆ ಮಾಡುತ್ತದೆ. ಈ ರೀತಿಯಲ್ಲಿ ಕಣ್ಣಿಗೆ ಕಾಣುವ ಹಾಗೂ ಕಾಣದೆ ಇರುವ ಸಂಸ್ಕೃತಿಯು ರೂಪಗೊಳ್ಳುತ್ತಿರುತ್ತದೆಂದು ಹೇಳಬಹುದು.

ಕರ್ನಾಟಕ ಸಂಸ್ಕೃತಿ ಚರಿತ್ರೆಗೆ ವಿಶೇಷ ಕೊಡುಗೆ ನೀಡಿರುವಂತಹ ಡಾ. ಎಸ್.ಎಸ್. ತಿಪ್ಪೇರುದ್ರಸ್ವಾಮಿಯವರು 'ಸಂಸ್ಕೃತಿ' ಎಂಬ ಪದಕ್ಕೆ ಅನೇಕ ರೀತಿಯ ವಿಶ್ಲೇಷಣೆಯನ್ನು ನೀಡಿರುತ್ತಾರೆ. ಅವರ ಪ್ರಕಾರ "ಸಂಸ್ಕೃತಿಯೆಂಬುವುದು ಸೂತ್ರ ರೂಪದಲ್ಲಿ ಹಿಡಿದಿಡಲಾಗದ ವಿರಾಟ್ ಶಕ್ತಿ ಎಂಬುದನ್ನು ನಮಗೆ ತೋರಿಸುತ್ತದೆ. ಹಂತ ಹಂತವಾಗಿ ಅದು ವಿಕಾಸಗೋಳ್ಳುತ್ತದೆ. ಪದರ ಪದರವಾಗಿ ಜೀವನವನ್ನು ವ್ಯಾಪಿಸುತ್ತದೆ. ಸಂಸ್ಕೃತಿ ಎನ್ನುವುದು ಅಂತರಂಗದ ವಿಕಾಸ; ನಿಜ ಆ ವಿಕಾಸಕ್ಕೆ ಕಾರಣವಾದ ಸಾಮಾಜಿಕ ಪರಿಕರಗಳು; ಅದೂ ಹೌದು" ಎಂದು ಹೇಳಬಯಸಿರುತ್ತಾರೆ. ಅವರು ಮುಂದುವರೆದು ನುಡಿದಂತೆ ನಡೆಯುವುದೇ ಸಂಸ್ಕೃತಿ; ಸಮಾಜದೊಡನೆ ಸಹಬಾಳ್ವೆಯ ಸೌಜನ್ಯದ ಮಾರ್ಗವೇ ಸಂಸ್ಕೃತಿ; ಶೀಲದ ಸೌಭಾಗ್ಯವೇ ಸಂಸ್ಕೃತಿ; ಆತ್ಮ ಶಿಕ್ಷಣವೇ ಸಂಸ್ಕೃತಿ, ಸಾಹಿತ್ಯದ ಸರಸ ಕಲೆಗಳೇ ಸಂಸ್ಕೃತಿ, ಇವೆಲ್ಲವೂ ನಿಜ. ಈ ಎಲ್ಲ ಮುಖಗಳನ್ನು ಒಳಗೊಂಡಿರುವುದೆ ಸಂಸ್ಕೃತಿ ಎಂದು ಅವರ ಮಹತ್ವದ ಕೃತಿಯಾಗಿರುವ "ಕರ್ನಾಟಕ ಸಂಸ್ಕೃತಿ ಸಮೀಕ್ಷೆ"ಯಲ್ಲಿ ನಿರೂಪಿಸಿರುತ್ತಾರೆ. ಅವರ ಅಭಿಪ್ರಾಯ ಒಂದರ್ಥದಲ್ಲಿ ನಿಜವೆನ್ನಬಹುದು. ಏಕೆಂದರೆ ನಮ್ಮ ಉಡುಗೆ, ತೊಡುಗೆಗಳಲ್ಲಿ, ನಡೆನುಡಿಗಳಲ್ಲಿ, ನಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳಲ್ಲಿ ಜೀವನ ಪದ್ಧತಿಯ ಒಂದೊಂದು ಹಂತದಲ್ಲಯೂ ಅದರ ಪ್ರಭಾವ ಹೆಚ್ಚಾಗಿಯೇ ಕಂಡುಬರುತ್ತದೆ. ಇದೇ ರೀತಿಯಾಗಿ ಕೇವಲ ಬಾಹ್ಯವೆನ್ನಬಹುದಾದ ನಾಗರಿಕತೆಯ ಅಂಶಗಳ ಮೇಲೂ ಇದು ತನ್ನ ಪ್ರಭಾವವನ್ನು ಬೀರದೆ ಇರಲಾರದು.

ಚಾರಿತ್ರಿಕವಾಗಿ ಸಂಸ್ಕೃತಿಯನ್ನು ಜೀವನ ವಿಧಾನಗಳಿಂದ ಒಂದುದೆನ್ನಬಹುದು. ಇದು ನೋಡುವುದರಿಂದಾಗಲಿ, ಕಲಿಯುವುದರಿಂದಾಗಲಿ ಹೆಚ್ಚಾಗಿ ಬರುತ್ತದೆಯನ್ನುವುದು ಹೆಚ್ಚು ಮನಶಾಸ್ತ್ರಜ್ಞರ ಅಭಿಪ್ರಾಯ, ತಂತಾನೆ ಅನುವಂಶಿಕವಾಗಿ ಬರದೆ, ವ್ಯಕ್ತಿಯೊಬ್ಬನು ಬೆಳೆಯುತ್ತಿರುವ ವಾತಾವರಣದಿಂದ ಅವನ ಸಂಸ್ಕೃತಿಯು ತನ್ನದೆ ಆದ ರೀತಿಯಲ್ಲಿ ಬೆಳೆಯುತ್ತಿರುತ್ತದೆ. ವಾಸ್ತವವಾಗಿ ವ್ಯಕ್ತಿಯು ಬದುಕುತ್ತಿರುವ ಭಾಗದ ಸಂಸ್ಕೃತಿಯೇ ಅವನ ಪ್ರಧಾನ ಸಂಸ್ಕೃತಿಯಾಗಿ ರೂಪಗೊಂಡಿರುತ್ತದೆ. ಹಾಗೆಯೇ ವ್ಯಕ್ತಿ ಅಥವಾ ಅನೇಕ ಜನರಿಂದ ಕೂಡಿರುವ ಸಮೂಹವೊಂದು ಅಸ್ತಿತ್ವದಲ್ಲಿರುವ ಸಂಸ್ಕೃತಿಗಿಂತ ಭಿನ್ನ ಭಿನ್ನವಾದಾಗ ಮಾತ್ರ ಹಾಗೂ ಇದರ ಜೊತೆಗೆ ಈ ಭಿನ್ನ ಭಾವವು ಹೆಚ್ಚು ಒತ್ತಡದಿಂದ ಕೂಡಿದಾಗ ಮಾತ್ರ ಬದಲಾವಣೆಯ ಕ್ರಿಯೆ ಕಂಡುಬರುತ್ತದೆ. ಈ ಮೇಲಿನ ಮಾತನ್ನು ನಾವು ನಮ್ಮ ಹಿಂದಿನ ಇತಿಹಾಸ ಪ್ರಸಿದ್ಧ ಸಾಮ್ರಾಜ್ಯಗಳಿಗೆ ಎಷ್ಟರಮಟ್ಟಿಗೆ ಹೋಲಿಸಬೇಕೆನ್ನುವುದೇ ಕಷ್ಟವಾಗಿ ಪರಿಣಮಿಸುತ್ತದೆ. ಏಕೆಂದರೆ ಯಾವುದೇ ಸಂಸ್ಕೃತಿಯು ಬದಲಾವಣೆಯನ್ನು ಸುಲಭವಾಗಿ ಒಪ್ಪಿಸಿಕೊಳ್ಳುವುದಿಲ್ಲ. ಅದೇ ರೀತಿಯಲ್ಲಿ ಸಂಸ್ಕೃತಿಯು ವ್ಯಕ್ತಿಯನ್ನು ಅಲ್ಲಿನ ಪರಿಸರವು ಸಂಪೂರ್ಣವಾಗಿ ಅವರಿಸಿ ಅಂತರಂಗದಲ್ಲಿ ಮನೆ ಮಾಡಿಕೊಳ್ಳುತ್ತದೆ. ಇದರಿಂದಾಗಿ ನಾವು ಹುಟ್ಟಿ ಬೆಳೆಯುವಾಗಲೇ ಜಗತ್ತಿನ ವಾಸ್ತವ ವಿಷಯಕ್ಕಿಂತಲೂ ಹೆಚ್ಚಾಗಿ ಭ್ರಮೆ ಎಂಬ ದೈತ್ಯವನ್ನು ಬುದ್ಧಿ, ಭಾವಗಳಿಗೆ ಬೆಸೆದುಕೊಂಡೇ ಬೆಳೆಯುತ್ತೇವೆ. ಈ ಬೆಳವಣಿಗೆಯಲ್ಲಿಯೇ ವಿಜಯನಗರ, ಮೈಸೂರು ಅರಸರ ಕಾಲದಲ್ಲಿನ ಸಂಸ್ಕೃತಿ ಭವ್ಯ ಸಂಸ್ಕೃತಿ, ನಮ್ಮ ಭೂಮಿ ಪುಣ್ಯಭೂಮಿ, ಸ್ನೇಹಭೂಮಿ, ಗಂಡುಭೂಮಿ, ಸೌಂದರ್ಯಯುಗದ ನಾಡು ಎಂದೆಲ್ಲಾ ಬಾಯಿಪಾಠ ಮಾಡಿಕೊಂಡು ನಮ್ಮ ಕಿರಿಯರಿಗೂ ಚಾಚು ತಪ್ಪದೆಯೇ ಒಪ್ಪಿಸತೊಡಗುತ್ತೇವೆ. ಇಂತಹ ಸಮಯದಲ್ಲಿ ಆ ಭವ್ಯ ನಾಡಿನಲ್ಲಿಯೇ ಅದೇ ಪ್ರದೇಶದಲ್ಲಿದ್ದಂತಹ ದೀನದಲಿತರು, ಬಡವರು, ಭಿಕ್ಷುಕರು, ರೋಗಿಗಳು, ನಿರ್ಗತಿಕರು ಒಟ್ಟಾರೆಯಾಗಿ ಪಾಮರರುಗಳು ಈ ಭೂಮಿಯ ಪಾಪಪುಣ್ಯಕ್ಕೆ ಒಕ್ಕರಿಸಿದಂತಹ ಪಾಪಿಗಳಾಗಿ ಕಂಡುಬರುತ್ತಾರೆ. ಆದರೆ ಯಾರಿಗೂ ಯಾವ ಸಂಸ್ಕೃತಿ ಚರಿತ್ರೆಗಾರನಿಗೂ ಸಹ ಈ ಪಾಪದ ಕಾರಣಗಳು ಮಾತ್ರ ಸ್ವಲ್ಪವೂ ಗೋಚರಿಸಿದಂತೆ ಕಂಡುಬರುವುದಿಲ್ಲ. ಇದು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿಯೇ ಇದೆ. ಏಕೆಂದರೆ ರಾಜ್ಯದಲ್ಲಿ

ರಾಷ್ಟ್ರಮಟ್ಟದಲ್ಲಿ ಜಾತೀಯತೆಯು ತಾಂಡವಾಡುತ್ತಿದ್ದರೂ, ಮೇಲುಕೀಳು ಎಂಬ ಭಾವನೆ ಹುಟ್ಟುವ ಮಕ್ಕಳಿಗೂ ಗೋಚರವಾಗುವಂತಿದ್ದರೂ ಮೇಲ್ನೋಟಕ್ಕೆ ನಮ್ಮ ದೇಶವನ್ನು "ಜಾತ್ಯಾತೀತ ದೇಶ" ಎಂದು ಕರೆದುಕೊಳ್ಳುತ್ತೇವೆ. ನಮ್ಮ ಸಂಸ್ಕೃತಿ ಪ್ರಪಂಚದಲ್ಲಿಯೇ ಶ್ರೇಷ್ಠವಾದುದೆಂದು ಹೇಳಿಕೊಂಡು ನಮಗೆ ನಾವೇ ಅತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇವೆ.

ಡಾ. ಬರಗೂರು ರಾಮಚಂದ್ರಪ್ಪನವರು ಈ ದೇಶದ ಸಂಸ್ಕೃತಿಯ ಮೂಲದ ಬಗ್ಗೆ ಪ್ರಸ್ಥಾಪಿಸುತ್ತಾ ನೀಡಿರುವ ಹೇಳಿಕೆ ಹಾಗೂ ಅದಕ್ಕೆ ತಕ್ಕ ಸಲಹೆಯನ್ನು ಗಮನಿಸುವುದು ಇಲ್ಲಿ ಅವಶ್ಯಕತೆಯನ್ನಿಸುತ್ತದೆ. ಅವರ ಪ್ರಕಾರ "ವಿಧೇಯತೆ ಒಂದು ಮುಖ್ಯ ಮೌಲ್ಯವಾಗಿ ನಮ್ಮ ಜೀವನ ವಿಧಾನದಲ್ಲಿ ಸೇರಿಕೊಂಡಿದೆ. ಇದರಿಂದ ಆದ ಪ್ರಯೋಜನವಾದರೂ ಏನು? ವಿಧೇಯತೆಯಲ್ಲಿ ಕುಗ್ಗಿ ಹೋದವರು ಪ್ರತಿಭಟನೆಯ ಪರಿಭಾಷೆಯನ್ನೇ 'ಪ್ರತಿಭಟಿಸುವಷ್ಟರ' ಮಟ್ಟಿಗೆ ಹೂತುಹೋದರು. ಇದಕ್ಕೆ ಹೊಂದಿಕೊಂಡಂತೆ ಸೃಷ್ಟಿಯಾದಂತಹ ಪೂಜ್ಯತೆ ಮತ್ತು ಶರಣಾಗತಿಗಳು ಶ್ರೀಣೀಕೃತ ಸಮಾಜದ ಶೋಷಣೆಯ ಸಾಧನೆಗಳೆಂದು ಅರಿವಾಗಲು ಸಾಕಷ್ಟು ಕಾಲವೇ ಹಿಡಿಯಿತು. ಪೂಜ್ಯತೆ ವಿಧೇಯತೆಗಳು ಅನಿವಾರ್ಯ ಹಾಗೂ ಅಗತ್ಯವೆಂಬ 'ಅರಿವು' ಇಂದು (ಪ್ರಜ್ಞಾವಂತ ದಲಿತರನ್ನೊಳಗೊಂಡಂತೆ) ದಟ್ಟವಾಗಿರುವುದಿಂದಲೇ ಶೋಷಿತ ಸಮೂಹ ಶರಣಾಗತಿಯ ಸ್ಥಿತಿ ತಲುಪುತ್ತಿದೆ' ಎಂದೇಳಿ, ಮುಂದೆ ನಮ್ಮಕ ಸಂಸ್ಕೃತಿಯು ನ್ಯಾಯವಾಗಿ ವಿಧೇಯತೆಯ ಬದಲು ವಿನಯವನ್ನು, ಪೂಜ್ಯತೆಯ ಬದಲು ಪ್ರಜ್ಞೆಯನ್ನು ಸ್ಥಾಪಿಸಬೇಕಾಗಿದ್ದುದು. ವಿನಯ. ಪ್ರಜ್ಞೆ ಸೌಜನ್ಯ ಸ್ವಾಭಿಮಾನಗಳ ಬದಲು ವಿಧೇಯತೆ ಪೂಜ್ಯತೆ, ಶರಣಾಗತಿಗಳನ್ನು ಕಲಿಸಿದ ಸಂಸ್ಕೃತಿ ಸಂಸ್ಕೃತಿಯೇ ಅಲ್ಲ. ಇದೊಂದು ಸಾಮಾನ್ಯ ಜನರ ಬೆನ್ನಿಗೆ ಪೊರೆ ಕಟ್ಟಿದ ಜೇಡವಿದ್ದಂತೆ ಎಂಬ ಮಾತುಗಳನ್ನು ಹೇಳಿದ್ದಾರೆ.

ಬರಗೂರರ ಮಾತನ್ನು ಸೂಕ್ಷ್ಮವಾಗಿ ಗಮನಿಸುವುದಾದರೆ ಹೊಗಳಿಕೆ, ಪ್ರಶಂಸೆ, ಸನ್ಮಾನಗಳಿಲ್ಲದ ಸಮಾಜವಿಲ್ಲವೆಂದೇ ಹೇಳಬಹುದು. ಉತ್ತಮ ಕೆಲಸವಾದಾಗ ಅದಕ್ಕೆ ಸಂಬಂಧಿಸಿದವರನ್ನು ಹೊಗಳುವುದು ತಪ್ಪೇನಲ್ಲ. ಆದರೆ ಇಂಥ ಹೊಗಳಿವಿಕೆ ಅನಗತ್ಯವಾಗಿ ಮಿತಿಮೀರಿ ಒಂದು ಸಾಮಾಜಿಕ ಕ್ರಿಯೆಯಾದಾಗ ಅದೇ ಮುಂದೆ "ಸ್ತೋತ್ರ' ವಾಗುತ್ತದೆ ಇಂದಿನ ದಿನಕ್ಕಾಗಲೇ ಇದು ಸ್ತೋತ್ರವಾಗಿಬಿಟ್ಟಿದೆ ಎಂದು ಹೇಳಬಹುದು. ಏಕೆಂದರೆ ಅಂದಿನಿಂದ ಇಂದಿನವರೆಗೂ ವ್ಯಕ್ತಿಯೊಬ್ಬನಿಂದ ಮತ್ತೊಬ್ಬ ವ್ಯಕ್ತಿಗೆ ಸಲ್ಲುವ ಗೌರವದ ಸಂದರ್ಭದಲ್ಲೂ ಅವನ ಹಿನ್ನೆಲೆಗೆ ಅವನ ಸಾಮಾಜಿಕ ನೆಲೆಯೊಂದಿಗೆ ತಾಳೆಮಾಡಿ ನೋಡಲಾಗುತ್ತದೆ. ಈ ಸಂದರ್ಭದಲ್ಲಿ ಹೊಗಳುವಿಕೆಯು ತನ್ನೆಲ್ಲಾ ಮಿತಿಯನ್ನು ಮೀರಿದ ಒಂದು ಬೂಟಾಟಿಕೆಯ ಕ್ರಿಯೆಯಾಗಿರುತ್ತದೆನ್ನಬಹುದು. ಇದು ಬೂಟಾಟಿಕೆಯ ಕ್ರಿಯೆಯಾಗಿರುವುದರಿಂದಲೇ ಅದು ಸ್ವಾಭಾವಿಕವಾಗಿಯೇ 'ನಿಷ್ಕ್ರಿಯ'ವಾಗಿರುತ್ತದೆ. ಇದು ಇಂದು ನಮ್ಮ ಮುಂದೆ ಕಾಣುತ್ತಿರುವ ನೈಜವಸ್ತು.

೧

ರಾಜ್ಯ ಅಥವಾ ಸಾಮ್ರಾಜ್ಯ ಎಂಬ ವ್ಯವಸ್ಥೆಯನ್ನು ಮಾನವನು ತಾನು ಬದುಕುತ್ತಿರುವ ಸಮಾಜಗಳು ಹಾಗೂ ನಾಗರಿಕ ವ್ಯವಸ್ಥೆಯಲ್ಲಿ ರೂಢಿಸಿಕೊಂಡಿರುತ್ತಾನೆ. ಈ ವ್ಯವಸ್ಥೆಯು ಕೆಲವು ಪ್ರಾಥಮಿಕ ರೂಪುರೇಷೆಗಳ ನಿರ್ಮಾಣಕ್ಕೂ ಸಾವಿರಾರು ವರ್ಷಗಳನ್ನೆ ತೆಗೆದುಕೊಳ್ಳುತ್ತದೆ ಎನ್ನಬಹುದು. ಇಲ್ಲಿ ಸಾಮ್ರಾಜ್ಯವು ಒಂದು ಸುವ್ಯವಸ್ಥಿತ ಆಳ್ವಿಕೆಯ ವ್ಯವಸ್ಥೆಯಾಗಿರುತ್ತದೆ. ಅಷ್ಟೇ ಅಲ್ಲದೆ ಅದು ಒಂದು ನಿರ್ದಿಷ್ಠ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಜನರನ್ನು ಆಳುವ ಸೌರ್ವಭೌಮತ್ವದ ಶಕ್ತಿಯಾಗಿರುತ್ತದೆ. ಈ ಆಳ್ವಿಕೆಯನ್ನು ಒಂದು ಆಡಳಿತ ವ್ಯವಸ್ಥೆಯ ಮೂಲಕ ನಡೆಸಲಾಗುತ್ತದೆ. ಈ ರೀತಿಯಲ್ಲಿ ರಾಜ್ಯ ಅಥವಾ ಸಾಮ್ರಾಜ್ಯ ಎಂಬುವುದು ಒಂದು ಸಂಕೀರ್ಣ ಅಧಿಕಾರ ವ್ಯವಸ್ಥೆಯಾಗಿರುತ್ತದೆ.

ಕ್ರಿ.ಪೂ. ಆರು ಅಥವಾ ಐದನೆಯ ಶತಮಾನದಲ್ಲಿ ಇಂತಹ ವ್ಯವಸ್ಥೆಗಳು ಪ್ರಾಚೀನ ಕರ್ನಾಟಕದಲ್ಲಿ ಬೆಳೆದುಬರಲು ಪ್ರಾರಂಭವಾದವೆಂದು ಹೇಳಬಹುದು. ಆದರೆ ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ರಾಜಪ್ರಭುತ್ವದ ಸಾಮ್ರಾಜ್ಯಗಳು ನಿರ್ಮಾಣವಾಗಿರುವುದು ಇತಿಹಾಸದಿಂದಲೇ ತಿಳಿದುಬರುತ್ತದೆ. ಇಂದಿಗೂ ನಾವು ಕನ್ನಡದ ಪ್ರಥಮ ಸಾಹಿತ್ಯ ಕೃತಿ ಎಂದು ಪರಿಗಣಿಸಿರುವಂತಹ ಕವಿರಾಜಮಾರ್ಗದ ಇಂತಹ ರಾಜ್ಯದ ಆಳ್ವಿಕೆಯನ್ನು ಗಳಿಸುವ ಹಾಗೂ ನಡೆಸುವ ಮಾರ್ಗಗಳನ್ನು

ಬೋಧಿಸುತ್ತದೆ. ಈ ರೀತಿಯಾಗಿ ಕರ್ನಾಟಕದ ಇತಿಹಾಸವು ಈ ಕಾಲಗಳ ನಂತರ ಕೇವಲ ರಾಜಮನೆತನಗಳು ಇತಿಹಾಸವಾಗಿ ಮಾರ್ಪಟ್ಟಿದೆ ಎನ್ನಬಹುದು. ರಾಷ್ಟ್ರೀಯ ಯುಗದಲ್ಲಿ ಹಾಗೂ ಅದಕ್ಕೂ ಸ್ವಲ್ಪ ಪೂರ್ವದ ವಸಾಹತುಶಾಹಿ ಇತಿಹಾಸದ ಆಚಾರ ವಿಚಾರದಲ್ಲಿ ರಾಜಮನೆತನಗಳ ರಾಜಕೀಯ ಇತಿಹಾಸಕ್ಕೆ ಹೆಚ್ಚಿನ ಒತ್ತು ಬಿದ್ದಿದೆ. ಈ ರೀತಿಯ ಇತಿಹಾಸವು ಶಾತವಾಹನರು, ರಾಷ್ಟ್ರಕೂಟರು, ಚಾಳುಕ್ಯರು, ವಿಜಯನಗರದ ಅರಸರಿಂದ ಕೊನೆಗೆ ಮೈಸೂರು ಒಡೆಯರವರೆವಿಗೂ ಪುರಾಣಗಳು, ಶಾಸನಗಳು, ಜಾನಪದ ಕಥೆಗಳು ಅನೇಕ ರಾಜವಂಶಗಳನ್ನು ಪ್ರಾಚೀನ ಕರ್ನಾಟಕದ ಇತಿಹಾಸದ ಕೇಂದ್ರದಲ್ಲಿಟ್ಟು ನೋಡಿರುವುದು ಕಂಡುಬರುತ್ತದೆ. ಈ ಎಲ್ಲಾ ಆಧಾರಗಳು ಪ್ರಕಾರ ಒಂದು ಸಾಮ್ರಾಜ್ಯವಾಗಲಿ ಅಥವಾ ಒಂದು ರಾಜ್ಯವಾಗಲಿ ಸ್ಥಾಪನೆಯಾಗಬೇಕಾದರೆ ಒಂದು ರಾಜವಂಶದ ನಿರ್ಣಾಮದೊಂದಿಗೆ ಆ ರಾಜ್ಯವೂ ಅಥವಾ ಸಾಮ್ರಾಜ್ಯವೂ ನಾಶವಾಗುತ್ತದೆ ಎಂದು ಸೂಚಿಸುತ್ತದೆ. ಈ ದೃಷ್ಟಿಯಿಂದ ನಮ್ಮ ನಾಡಿನ ಚರಿತ್ರೆಯನ್ನು ಅದರಲ್ಲಿಯೂ ಸಂಸ್ಕೃತಿ ಚರಿತ್ರೆಯನ್ನು ಬರೆಯುವಾಗ ಪೂರ್ವದಲ್ಲಿನ ಪುರಾಣಗಳ ವಂಶಾನುಚರಿತದ ಮೊರೆ ಹೊಗಲೇಬೇಕಾಗುತ್ತದೆ. ನಮ್ಮ ಇಂದಿನ ಸಂಸ್ಕೃತಿಗೆ ಹೊಂದಿಕೊಂಡಂತೆ ನಮ್ಮ ನಾಡಿನ ಅದರಲ್ಲಿಯೂ ಸಾಮ್ರಾಜ್ಯಗಳ ಅರಸರ ಮೂಲದ ಬಗ್ಗೆ ಬರೆಯುವಾಗ ಸೂರ್ಯ ಚಂದ್ರ ಮುಂತಾದ ದೇವತೆಗಳಿಂದ ಪ್ರಾರಂಭಿಸಿ, ಮಹಾಕಾವ್ಯಗಳ ಪುರಾಣ ಪುರುಷರ ವಂಶಗಳಿಂದ ಮುಂದುವರಿದು ಮನಬಂದಂತೇ ವೈಭವೀಕೃತವಾಗಿ ಚಿತ್ರಿಸಿರುವುದನ್ನು ನಾವು ಓದಿದ್ದೇವೆ. ಈ ವೈಭವೀಕರಣದ ಮುಖ್ಯ ಉದ್ದೇಶವೆಂದರೆ ರಾಜವಂಶಾವಳಿಗಳ ಆಳ್ವಿಕೆ ಅನಾದಿ ಹಾಗೂ ಸೃಷ್ಠಿಯ ನಿಯಮ ಎಂಬಂತೇ ತೋರಿಸುವುದಾಗಿರುತ್ತದೆ. ಇತ್ತೀಚಿನ ರಾಷ್ಟ್ರೀಯವಾದಿ ಇತಿಹಾಸಕಾರರು ಈ ಪುರಾಣ ಪುರುಷರನ್ನೇ ಇತಿಹಾಸದ ಕಾಲಾನುಕ್ರಮಕ್ಕೆ ಅಳವಡಿಸಿ ರಾಜಕೀಯ ಇತಿಹಾಸದ ಜೊತೆಗೆ ಸಾಂಸ್ಕೃತಿಕ ಇತಿಹಾಸವನ್ನು ಬರೆಯಲು ಪ್ರಾರಂಭಿಸಿದರೆನ್ನಬಹುದು. ಇಷ್ಟೆಲ್ಲ ದೊಡ್ಡ ಪ್ರಯತ್ನಗಳು ನಡೆಯುತ್ತಿದ್ದರೂ ಇಂದು ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸ ಇಂದು ರೀತಿಯಲ್ಲಿ ದೊಡ್ಡ ಕಗ್ಗಂಟಾಗಿಯೇ ಉಳಿದಿದ್ದೆನ್ನಬಹುದು.

ಮೇಲಿನ ಕಗ್ಗಂಟಿಗೆ ಪ್ರಮುಖ ಕಾರಣವೆಂದರೆ ನಮ್ಮ ನಾಡಿನ ರಾಜಕೀಯ ಚರಿತ್ರೆಯ ರಾಜ್ಯ ಅಥವಾ ಸಾಮ್ರಾಜ್ಯ ಕುರಿತು ಸೃಷ್ಟಿಸಿದಂತಹ ಕೆಲವು ಮಿತವಾದಂತಹ ಕಲ್ಪನೆಗಳೆನ್ನಬಹುದು. ಏಕೆಂದರೆ ಸಾಮ್ರಾಜ್ಯವನ್ನು ಅವರು ಒಂದು ಸಾಮಾಜಿಕ ಪ್ರಕ್ರಿಯೆಯ ಸಾವಯವ ಅಂಗವನ್ನಾಗಿ ನೋಡದೆ ಇದ್ದದಾಗಿದೆ. ಇಲ್ಲ ಸಾಮ್ರಾಜ್ಯ ಅಥವಾ ರಾಜ್ಯವನ್ನು ರಾಜಮನೆತನದ ಒಂದು ಖಾಸಗಿ ಚಟುವಟಿಕೆ ಎಂಬಂತೆ ನೋಡಲಾಗಿರುವುದೇ ದೊಡ್ಡ ಅಪರಾಧವಾಗಿ ಪರಿಣಮಿಸಿದೆ. ರಾಜಕೀಯ ಎಂಬುದನ್ನು ಕೇವಲ ಸೈನ್ಯ, ಯುದ್ಧ, ರಾಜವಂಶಗಳ ಸಂಬಂಧ, ರಾಣಿಯರ ಜೀವನ, ಸಾಮ್ರಾಜ್ಯದ ರಾಜಧಾನಿಯ ವೈಭವದ ವರ್ಣನೆ, ಕೆಲವು ಅಂತರಿಕ ಹಾಗೂ ಬಾಹ್ಯ ವಿದ್ವಾಂಸರಿಗೆ ಆಶ್ರಯ, ಇವುಗಳನ್ನೆ ಮೇಲಿಂದ ಮೇಲೆ ವೈಭವೀಕರಿಸಿರುವುದು ಕಂಡುಬರುತ್ತದೆ. ಅದ್ದರಿಂದ ಇಲ್ಲಿ ನಾಡಿನ ಜನರ (ಸಾಮಾನ್ಯ ಜನರ) ಸಾಮಾಜಿಕ ಜೀವನ, ಅವರ ಅಧಿಕಾರ ಹಂಚಿಕೆಯ ಹಾಗೂ ಅವರ ಗಳಿಕೆಯ ವ್ಯವಸ್ಥೆ ಎಂಬುವುದು ಸಂಪೂರ್ಣವಾಗಿ ಗೌಣವಾಗಿರುತ್ತದೆ. ಇಂಥಹ ಸಂದರ್ಭದಲ್ಲಿಯೂ ಇತಿಹಾಸಕಾರನಿಗೆ ಈ ರಾಜವಂಶಗಳು ಹೇಗೆ ಉದ್ಭವವಾದವು. ರಾಜವಂಶಗಳ ಹೊರತಾಗಿಯೂ ರಾಜ್ಯ ಅಥವಾ ಸಾಮ್ರಾಜ್ಯಗಳು ಅಸ್ತಿತ್ವದಲ್ಲಿರಬಹುದೇ ಎಂಬುವಂತಹ ಪ್ರಶ್ನೆಗಳು ಒಮ್ಮೆಗೆ ಮೂಡಲಾರಂಭಿಸುತ್ತವೆ.

ಸಾಮ್ರಾಜ್ಯವೆಂಬುವುದು ಭಾರತೀಯ ಪರಿಭಾಷೆಯಲ್ಲಿ "ಸಾಮ್ರಾಟ" ಎಂಬ ಶಬ್ದದಿಂದ ಹುಟ್ಟಿದ್ದೆನ್ನಬಹುದು. ಆದರೆ ಸಾಮ್ರಾಜ್ಯವನ್ನು 'ಡೈನೆಸ್ಟಿ' ಎಂಬರ್ಥದಲ್ಲಿಯೇ ಗ್ರಹಿಸಿದರೆ ಇದೊಂದು ಪ್ರಭುತ್ವದ ವ್ಯವಸ್ಥೆಯಾಗಿ ಅರ್ಥೈಸುತ್ತದೆ. ಪ್ರಭುತ್ವವೆಂಬುದು 'ಸಾಮ್ರಾಟ'ನಲ್ಲೇ ಇರಬೇಕೆಂದೇನೂ ಇಲ್ಲ ಎಂಬುವುದು ತಪ್ಪಾಗುತ್ತದೆ. ಏಕೆಂದರೆ ಈ ರೀತಿಯ ರಚನೆಯು ಮನುಷ್ಯ ಸಮಾಜದಲ್ಲಿ ಒಂದು ಪ್ರಮುಖ ಸಂಕೀರ್ಣವಾದ ಬೆಳವಣಿಗೆಯಾಗಿದೆ. ಅಂದರೆ ಇಲ್ಲಿ ಸಾಮ್ರಾಜ್ಯದ ವ್ಯವಸ್ಥೆಯು ಹುಟ್ಟಬೇಕಾದರೆ ಮೊದಲು ಅದಕ್ಕೆ ತನ್ನದೆ ಆದಂತಹ ಸಾಮಾಜಿಕ ಬೆಳವಣಿಗೆ ತಡೆದಿರುತ್ತದೆ. ಇದರ ಜೊತೆಗೆ ಸಮಾಜದಲ್ಲಿನ ಪ್ರತಿಯೊಂದು ಉತ್ಪಾದನಾ ಸಂಬಂಧಗಳು ತಂತ್ರಜ್ಞಾನದ ಪೂರಕವಾಗಿ ಬೆಳೆದಿರುತ್ತವೆ. ಸಾಮ್ರಾಜ್ಯದ ದೊರೆಗಳಲ್ಲಿ ಹಾಗೂ ಅವರ ಸಾಮಂತ ಪಾಳೆಗಾರರುಗಳಲ್ಲಿ ಆಳುವ ವರ್ಗಗಳಲ್ಲಿ ಅಧಿಕಾರ ಕೇಂದ್ರಿಕೃತವಾದಂತೆಲ್ಲಾ ಅವರವರ ಹಿತಾಸಕ್ತಿಗನುಗುಣವಾಗಿ ಕಾಯಿದೆ. ಕಾನೂನು, ತಾತ್ವಿಕ ತಿಳುವಳಿಕೆಗಳು, ಸ್ಥಾನಮಾನ, ಮೇಲುಕೀಳು ಮುಂತಾದವುಗಳ ನಿರೂಪಣೆಯಾಗುತ್ತದೆ. ಇಲ್ಲಿ ರಾಜ್ಯದ ಬೆಳವಣಿಗೆಯು ಆ ಸಾಮ್ರಾಜ್ಯದ ಸಂಸ್ಕೃತಿಯ ಬೆಳವಣಿಗೆಯ ಜೊತೆಜೊತೆಗೆ ಮುನ್ನಡೆಯಬೇಕಾಗಿರುತ್ತದೆ. ಹಾಗಾಗಿ ಸಾಮ್ರಾಜ್ಯದ ಉಗಮವು ಒಂದು ಸಮಾಜದ ಸಮಗ್ರವಾದಂತಹ

ಪರಿವರ್ತನೆಯನ್ನು ಹುಟ್ಟು ಹಾಕುತ್ತದೆ. ಸಾಮ್ರಾಜ್ಯದ ಜನರನ್ನೆಲ್ಲ 'ಪ್ರಜಾಸಮೂಹವನ್ನಾಗಿ' ಪರಿವರ್ತಿಸುವುದಾದರೆ ಅದು ನಾಡಿನ ಸಂಸ್ಕೃತಿಯನ್ನು ಬೆಳೆಸಿಕೊಂಡಂತೆ ಏಕೆಂದರೆ ಪ್ರಾಚೀನ 'ರಾಜ'ಕೇಂದ್ರಿತ ರಾಜ್ಯಗಳು ರಾಜನ ಅತಿಯಾದ ಮಾನವೀಯತೆ, ದೈವತ್ವಗಳನ್ನು ರಾಜವಂಶದವರ ದಿನನಿತ್ಯದ ಕಾರ್ಯವೈಖರಿಗಳನ್ನು ಹಾಗೂ ಅವುಗಳ ಅನಿವಾರ್ಯತೆಯನ್ನು ಕುರಿತಂತಹ ವಿಷಯವನ್ನು ಪ್ರತಿಪಾದಿಸುತ್ತದೆ ಎಂದರೆ ಸರಿಯಾಗಬಹುದೇನೋ.

ಸಾಮಾಜಿಕ ಬದಲಾಣೆಗಳನ್ನು ಸರಿಸಿಯೇ ವೈದಿಕರಲ್ಲಿ ವರ್ಣಕಲ್ಪನೆ ರೂಪು ತಳೆಯಿತೆಂದು ಹೇಳಿರುವುದು ಸತ್ಯ. ಏಕೆಂದರೆ ತಮಗೆ ಋಗ್ವೇದದ ೧೦ ನೇ ಮಂಡಲದಲ್ಲಿನ ಪುರುಷಸೂಕ್ತವು ನಾಲ್ಕು ವರ್ಣಗಳ ಒಂದು ಸಮಾಜದ ಕಲ್ಪನೆಯನ್ನು ನೀಡುತ್ತದೆ. ಈ ೧೦ ನೇ ಮಂಡಲವನ್ನು ಕ್ರಿ.ಪೂ. ೮೦೦ ರ ವೇಳೆಗೆ ಆರ್ಯರಲ್ಲಿ ನಾಲ್ಕು ವರ್ಣನೆಗಳ ಕಲ್ಪನೆ ಬೆಳೆಯಲಾರಂಭಿಸಿತ್ತು. ಇದೇ ಕಾಲ ಹಾಗೂ ಇದರ ನಂತರದ ಕಾಲದ ವೈದಿಕ ಸಾಹಿತ್ಯದಲ್ಲಿ ವರ್ಣಕಲ್ಪನೆ ಮತ್ತೆ ಮತ್ತೆ ಕಂಡುಬರುತ್ತದೆ.

ಭಾರತದ ಪ್ರಾಚೀನ ಇತಿಹಾಸದಿಂದಲೂ ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯ ಈ ಮೂರು ವರ್ನಗಳು ದ್ವಿಜ ವರ್ಣಗಳೆನಿಸಿಕೊಂಡಿವೆ. ಪ್ರಮುಖವೆಂದು ಹೇಳಿಕೊಂಡಿದ್ದಂತಹ ಈ ಮೂರು ವರ್ಣಗಳೂ ಆರ್ಯರ ಬ್ರಾಹ್ಮಣ, ರಾಜನ್ಯ ಹಾಗೂ ವಿಶಃ ಋಗ್ವೇದದ ಕಾಲದ ಪಂಗಡಗಳಿಂದಲೇ ಉದಿಸಿದ್ದು ಎಂದು ಹೇಳುವುದು ಸತ್ಯಸಂಗತಿಯೇ ಏಕೆಂದರೆ ಅಂದಿನ ಕಾಲದಲ್ಲಿ ಇವರಿಗೆಲ್ಲ ಯಜ್ಞ ಸಂಸ್ಕೃತಿ ಎಂಬುವುದು ಸರ್ವೇಸಾಮಾನ್ಯವಾಗಿದ್ದಿತು. ಹಾಗೆಯೇ ಉಪನಯನ ಸಂಸ್ಕಾರ ಹಾಗೂ ಮಂತ್ರೋಚ್ಚಾರಣೆಗಳು ಆಯಾ ವರ್ಗಕ್ಕೆ ಬೇರೆ ಬೇರೆ ಪದ್ಧತಿಯಲ್ಲಿದ್ದವು. ಉಪನಯನ ಸಂಸ್ಕಾರವನ್ನು ಇವರು ಎರಡನೆಯ ಹುಟ್ಟು ಎಂದು ಪರಿಗಣಿಸಿದ್ದರಿಂದ ಇವರು "ದ್ವಿಜ" ಎಂದು ಕರೆದುಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ವರ್ಣವ್ಯವಸ್ಥೆಯಲ್ಲಿ ವೈಶ್ಯರು ಉತ್ಪಾದಕರಾಗಿ ರಾಜ ಹಾಗೂ ಬ್ರಾಹ್ಮಣರಿಗಿಂತಲೂ ಕೆಳಹಂತದಲ್ಲಿ ಬರುತ್ತಿದ್ದರು. ಈ ವರ್ಣ ವ್ಯವಸ್ಥೆಯಲ್ಲಿ ನಾಲ್ಕನೆಯ ವರ್ಣವೆನ್ನಿಸಿಕೊಂಡಿರುವ "ಶೂದ್ರ" ವರ್ಣವು ಮಾತ್ರ ದ್ವಿಜ ವರ್ಣವಾಗಿರಲಿಲ್ಲ. ಅಂದರೆ ಇದು ಆರ್ಯ ಮೂಲದ್ದಾಗಿರಲಿಲ್ಲವೆಂಬ ಅರ್ಥ ಸ್ಪಷ್ಟವಾಗಿ ತಿಳಿಯುತ್ತದೆ. ಆರ್ಯರ ವೈದಿಕ ವಿಧಿ. ವಿಧಾನಗಳಾವುವು ಸಹ ಈ ಜನರ ಸಂಸ್ಕೃತಿಯಾಗಿರಲಿಲ್ಲ. ಇಂತಹ ಸಮಯದಲ್ಲಿ ಶೂದ್ರರು ಆರ್ಯರ ವರ್ಣಕಲ್ಪನೆಯಲ್ಲಿ ಹೇಗೆ ಅಂತರ್ಗತರಾದರು? ಎಂಬುವ ಪ್ರಶ್ನೆ ಸಹಜವಾಗಿಯೇ ಪ್ರತಿಯೊಬ್ಬರಲ್ಲಿಯೂ ಮೂಡುತ್ತದೆ.

ಕರ್ನಾಟಕದ ಸಂಸ್ಕೃತಿಯಲ್ಲಿಯೇ ಪ್ರಮುಖವಾಗಿ 'ಶೂದ್ರ' ಎನ್ನುವ ಶಬ್ದ ಮೂಲತಃ ಒಂದು ಬುಡಕಟ್ಟಿನ ಹೆಸರಾಗಿತ್ತು ಎಂದು ಕಂಡುಬರುತ್ತದೆ. ಮಧ್ಯಕಾಲದಲ್ಲಿ ವಿಜಯನಗರದ ಅರಸರು ಪ್ರಾಬಲ್ಯಕ್ಕೆ ಬಂದಾಗ ಇವರೂ ವೈದಿಕ ಬುಡಕಟ್ಟುಗಳಂತೇ ಪಶುಸಂಗೋಪನೆ ಮಾಡಿಕೊಂಡಿದ್ದಂತೆ ಕಂಡುಬರುತ್ತದೆ. ಬಹುಶಃ ನಾಲ್ಕು ವರ್ಣಗಳ ಕಲ್ಪನೆಯನ್ನು ಹುಟ್ಟುಹಾಕಿದ ಬುಡಕಟ್ಟುಗಳಿಗೆ ಶೂದ್ರರೇ ದಾಸ - ದಾಸಿಯರಾಗಿದ್ದರಿಂದ 'ಶೂದ್ರ' ಶಬ್ದವನ್ನು ದಾಸ್ಯಕ್ಕೆ ಸಮೀಕರಿಸಿರಬಹುದೆಂದು ತೋರಿಸುತ್ತದೆ. ಪ್ರಾಚೀನ ಚರಿತ್ರೆಯನ್ನು ಗಮನಿಸಿದರೆ ಉತ್ತರ ವೈದಿಕ ಸಮಾಜದ ಪ್ರಾರಂಭದಲ್ಲಿ ಬ್ರಾಹ್ಮಣರಾದಿಯಾಗಿ ಆರ್ಯವರ್ಣದವರಿಗೆಲ್ಲರಿಗೂ ಈ ಶೂದ್ರರೇ ದಾಸರಾಗಿದ್ದರೆಂದು ತೋರುತ್ತದೆ. ಅಂದರೆ ಸಾಮ್ರಾಜ್ಯದಲ್ಲಿ ಅವರು ಅತ್ಯಂತ ಕಷ್ಟದ. ಶ್ರಮದ ಹಾಗೂ ಅಸಹ್ಯ ತರುವಂತಹ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಇದಕ್ಕಾಗಿಯೇ ಶೂದ್ರರನ್ನು ಪುರುಷನ ಪಾದದಿಂದ ಹುಟ್ಟಿಬಂದರು. ಹಾಗೂ ಅವರ ಕರ್ತವ್ಯವೆಂದರೆ ಮೇಲಿನ ಮೂರು ವರ್ಣಗಳ ಸೇವೆ ಮಾಡಲು ಜನ್ಮವೆತ್ತಿದ ಜನರೆಂದು ನಿರೂಪಿಸಲಾಗಿದೆ. ಆರ್ಯ ಸೇವಕ ವರ್ಗವಾದ್ದರಿಂದ ಇವರೂ ಸಹ ಆರ್ಯರ (ಸಮಾಜದ) ಒಂದು ಭಾಗವಾಗಿದ್ದರಿಂದ ಹೇಳಲಾಗಿದೆ. ಆದರೆ ಶೂದ್ರರು ಎಲ್ಲ ವರ್ಗಗಳಿಗಿಂತಲೂ ಸ್ಥಾನಮಾನದಲ್ಲಿ ಕೀಳಾಗಿದ್ದರು. ಆರ್ಯರ ವರ್ಣಕಲ್ಪನೆಯು ಭೌಗೋಳಿಕವಾಗಿ ವಿಸ್ತರಿಸಿದಂತೆಲ್ಲ. 'ಶೂದ್ರ' ವರ್ಣದ ಅರ್ಥ ಹಾಗೂ ವ್ಯಾಪ್ತಿಯು ಸಂಪೂರ್ಣವಾಗಿ ಬದಲಾವಣೆ ಕಾಣುತ್ತಿರುವುದನ್ನು ನೋಡಬಹುದಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ವ್ಯವಸಾಯವನ್ನಳವಡಿಸಿಕೊಂಡ ಉನ್ನತ ವರ್ಗದ ಜನರು ಶ್ರಮಜೀವಿಗಳನ್ನು ಹೆಚ್ಚು ಹೆಚ್ಚಾಗಿ ಅಲಂಬಿಸತೊಡಗಿದರು. ವಿಭಿನ್ನ ಅವೈದಿಕ ಹಿನ್ನಲೆಯ ಜನರನ್ನು ಹೊಸದಾಗಿ ಉದಯಿಸಿದ ರಾಜ್ಯವು ಶೂದ್ರರನ್ನು ಶ್ರಮಿಕರನ್ನಾಗಿ ಅಳವಡಿಸಿಕೊಂಡು ಇವರಿಗೆಲ್ಲ 'ಶೂದ್ರ'ರೆಂಬ ಪರಿಭಾಷೆಯು ಬೆಳೆದುಕೊಂಡು ಬಂದಿತು.

ವಿಜಯನಗರ ಕಾಲದಲ್ಲಿ ಈ ನಾಲ್ಕು ವರ್ಣದ ಕಲ್ಪನೆ ವೈದಿಕ ಪಂಗಡಗಳಿಗೆ ಸೀಮಿತವಾದ ಒಂದು ಲೋಕದೃಷ್ಟಿಯಾಗಿತ್ತು. ಏಕೆಂದರೆ ಇದೊಂದು ವೈದಿಕ ಕೇಂದ್ರಿತ ಸಾಮಾಜಿಕ ನಿರೂಪಣೆ. ವೈದಿಕ ಸಮಾಜದಲ್ಲಿ ಈ ಕಾಲದಲ್ಲಿ ಕಂಡುಬರುತ್ತವೆ. ಉದಾ: ಚಂಡಾಳರು, ಹೊಲೆಯರು, ಮಾದಿಗರು, ನಿಷಾದರು, ಪುಶಿಂದರು, ದಸ್ಯು, ಕೋಚ್ಚ ಕೊರಮ ಮುಂತಾದವರು, ಮೇಲ್ಕಂಡವರೆಲ್ಲರನ್ನು ವರ್ಣವ್ಯವಸ್ಥೆಯ ಒಂದು ಭಾಗವನ್ನಾಗಿ ನೋಡಲಾಗುತ್ತಿತ್ತೆಂದು ಹೇಳಬಹುದು. ಮಧ್ಯಯುಗದ ಚರಿತ್ರೆಯಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಜಾರಿಯಲ್ಲಿದ್ದಂತಹ ವ್ಯವಸ್ಥೆಯೇ “ಸಂಕೀರ್ಣ ಜಾತಿ ವ್ಯವಸ್ಥೆ: ಈ ಕಾಲದಲ್ಲಿದ್ದಂತಹ ವರ್ನ ಪ್ರತಿಪಾದಕರು ತಮ್ಮ ತಿಳುವಳಿಕೆಗೆ ಬಂದಂತಹ ಹೊಸ ಸಮಾಜವನ್ನು ಸಂಕೀರ್ಣ ಜಾತಿಗಳೆಂದು ತಿಳಿಸಿ ಅವು ಯಾವ ಸನ್ನಿವೇಶದಲ್ಲಿ ಉದಯಿಸಿದವೆಂಬುದನ್ನು ವಿವರಿಸಿ ವರ್ಣವ್ಯವಸ್ಥೆಗೆ ಅವನ್ನು ಜೋಡಿಸುತ್ತಿದ್ದರು ಎಂದು ತಿಳಿಸುವ ಅನೇಕ ಆಧಾರಗಳು ನಮಗೆ ಲಭ್ಯವಾಗುತ್ತವೆ. ಈ ರೀತಿಯ ಸಂಕೀರ್ಣ ಜಾತಿಯ ಕಲ್ಪನೆಯನ್ನು ಬೆಳೆಸಲು ಮತ್ತೊಂದು ಮುಖ್ಯ ಕಾರಣವೆಂದರೆ ಅಂದಿನ ಕಾಲದಲ್ಲಿ ಹೆಚ್ಚುತ್ತಿದ್ದಂತಹ ವೃತ್ತಿಗಳು, ವಿಜಯನಗರ ಕಾಲದಲ್ಲಿ ವಿಭಿನ್ನ ಲೋಹಗಳ ಕೆಲಸಗಾರರು, ಬುಟ್ಟಿ ಹೆಣೆಯುವವರು, ನೇಯ್ಗೆಯವರು, ಬಣ್ಣ ಹಾಕುವವರು, ಬಡಗಿಗಳು, ಕುಂಬಾರರು, ಚರ್ಮಕಾರರು, ಮಣಿಕಾರರು, ನರ್ತಕರು, ಕಣಿ ಹೇಳುವವರು, ಸೋತರು, ಡೊಂಬರು ಮುಂತಾದ ಅನೇಕ ವೃತ್ತಿಪರ ಪಂಗಡಗಳನ್ನು ಅಂದೇ ಜಾತಿಯ ಪಟ್ಟಿಯಲ್ಲಿ ಸೇರಿಸಲಾಗಿತ್ತು.

ಈ ಮೇಲಿನ ಜಾತಿವ್ಯವಸ್ಥೆ ಹಾಗೂ ಮೇಲುಕೀಳಿ ಎಂಬ ಭೇದಭಾವವನ್ನು ಅಂದಿನ ಕಾಲದಲ್ಲಿ ಯಾವ ರೀತಿಯಲ್ಲಿ ಅನುಸರಿಸಲಾಗುತ್ತಿತ್ತೆಂದು ಅಂದಿನ ದಾಸಸಾಹಿತ್ಯ ಹಾಗೂ ಸಾಹಿತ್ಯ ಕೃತಿಗಳಿಂದ ತಿಳಿಯಬಹುದಾಗಿದೆ. ಆಧಾರವಿಲ್ಲದೆ ಇತಿಹಾಸವಿಲ್ಲವೆಂಬ ವಿಷಯ ಸತ್ಯ. ಇದು ಅಂದಿನ ಕಾಲದ ಜನರಿಗೂ ತಿಳಿದಿತ್ತೆಂದು ಹೇಳಬಹುದು. ವಿಜಯನಗರದ ಹಾಗೂ ಮೈಸೂರಿನ ಇತಿಹಾಸವನ್ನು ಪ್ರಮುಖವಾಗಿ ಐತಿಹ್ಯ, ಗಾಥೆ, ಜನಪದ, ಶಾಸನ ಪ್ರಶಸ್ತಿಪತ್ರ ನಾಣ್ಯ, ಸ್ಮಾರಕ ಮುಂತಾದ ಆಕಾರಗಳ ಸಹಾಯದಿಂದ ರಚಿಸಬಹುದಾಗಿದೆ. ಕರ್ನಾಟಕದ ಪ್ರಾಚೀನ ಕವಿಗಳಾದ ಪಂಪ, ರನ್ನ, ಜನ್ನ, ರಾಘವಾಂಕ, ಹರಿಹರ ಹಾಗೂ ದಾಸರುಗಳು ಇಂದಿನ ಲೇಖಕರಿಗೆ ಪರಾಮರ್ಶಿತರಾಗಿದ್ದಾರೆ. ಇದರಿಂದಾಗಿ ಅಂದಿನ ಸಾಹಿತ್ಯ ಕೃತಿಗಳು ಪಾಂಡಿತ್ಯಪೂರ್ಣ ಮಾತ್ರವಲ್ಲದೆ ವಿಶ್ವಾಸನೀಯವೂ ಹೌದು. ಕಥೆ - ಪುರಾಣ - ಮೂಡನಂಬಿಕೆಗಳು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವೆಂದು ತೀರ್ಮಾನಿಸಿ ಅವುಗಳನ್ನು ತಮ್ಮ ಸಾಹಿತ್ಯದಲ್ಲಿ ಬಳಸಿಕೊಂಡಿದ್ದಾರೆ ಎನ್ನಬಹುದು. ಆದರೆ ಚಾರಿತ್ರಿಕ ವಿಷಯಗಳನ್ನು ವಿಮರ್ಶಾತ್ಮಕವಾಗಿ (ಜಾತಿವ್ಯವಸ್ಥೆಯ ವಿರುದ್ಧ) ನೋಡಿದವರಲ್ಲಿ ದಾಸರುಗಳನ್ನು ಮೊದಲಿಗರೆನ್ನಬಹುದು. ವಸ್ತುಸ್ಥಿತಿ ಹೀಗಿರುವಾಗ “ಕರ್ನಾಟಕದವರಿಗೆ ಅದರಲ್ಲಿಯೂ ಭಾರತೀಯರಿಗೆ ಐತಿಹಾಸಿಕ ಪ್ರಜ್ಞೆ ಇರಲಿಲ್ಲ”ವೆಂದು ಹೇಳಿರುವಂತಹ ಆಲ್ಬೋರೋನಿಯು ಇಲ್ಲಿ ಚರ್ಚಾಸ್ಪದ ವ್ಯಕ್ತಿಯಾಗುತ್ತಾನೆ.

ಕವಿಗಳು ಸಂಗೀತಗಾರರು ಆಗಿ ಈ ಮೂಲಕ ಇತಿಹಾಸಕಾರರೂ ಆಗಿರುವಂತಹ ದಾಸರನ್ನು ಹಾಗೂ ಅವರ ಸಾಮಾಜಿಕ ಕಾಳಜಿಯನ್ನು ಮೆಚ್ಚುವಂತಾದ್ದೆ. ವಿಜಯನಗರ ಸಾಮ್ರಾಜ್ಯವು ಭವ್ಯ - ವೈಭವದ ನಾಡು, ಚಿನ್ನವನ್ನು ಬೀದಿಯಲ್ಲಿಯೇ ಸೇರಿನಿಂದ ಅಳೆದು ಮಾರುತ್ತಿದ್ದ ನಾಡು. ಎಲ್ಲಾ ಜನರು ಸುಖಶಾಂತಿಯಿಂದ ಸುಖಜೀವನ ನಡೆಸುತ್ತಿದ್ದು, ಇದೊಂದು ರಾಮ ರಾಜ್ಯವಾಗಿತ್ತೆಂದು ನಾವು ಇದುವರೆಗೆ ಏನೆಲ್ಲ ಉತ್ಪ್ರೇಕ್ಷೆಯಿಂದ ಅಭಿಮಾನದಿಂದ ಹೇಳಿಕೊಂಡು ಬಂದಿದ್ದೇವೆ ಎಂದರೆ ಈ ಹೇಳಿಕೆಗಳಿಂದ ನಮ್ಮ ಅಭಿಮಾನಕ್ಕೆ ಸ್ವಲ್ಪವಾದರೂ ಧಕ್ಕೆ ಉಂಟಾಗಬಹುದೆಂದು ಸ್ವಲ್ಪವೂ ಚಿಂತಿಸಿದಂತೆಯೇ ಕಂಡುಬರುವುದಿಲ್ಲ, ಇದು ಸತ್ಯವೂ ಕೂಡ, ಏಕೆಂದರೆ ಅಂದಿನ ಕಾಲದಲ್ಲಿ ಸುಮಾರು ಶೇ. ೯೦ ಜನ ಬಡವರು ಒಪ್ಪೊತ್ತಿನ ಗಂಜಿಗಾಗಿ ಪೇಚಾಡುತ್ತಿದ್ದುದ್ದು. ಜೀತದಾಳುಗಳಾಗಿ ಹೀನಾಯ ಸ್ಥಿತಿಯಲ್ಲಿದ್ದು, ಪ್ರಾಣಿಗಳಿಗಿಂತಲೂ ಕೀಳುಜೀವನ ನಡೆಸುತ್ತಿದ್ದು, ಮೇಲು ಕೀಳೆಂಬ ಭಾವನೆಯಿಂದ ಕೀಳು ಕಾತಿಯವರು ಪಡುತ್ತಿದ್ದ ಕಷ್ಟವನ್ನು ಇತಿಹಾಸದಿಂದ ತಿಳಿದದ್ದೇ ಆದರೆ ಇಲ್ಲಿ ಶ್ರೇಷ್ಠ ರಾಜನಾರು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇತಿಹಾಸಗಾರ ಇದರ ಅರ್ಥವಾದರೂ ಏನೆಂದು ಪ್ರಶ್ನಿಸಿ ಓದುಗರ ತೀರ್ಮಾನಕ್ಕೆ ಬಿಟ್ಟಿದಾನೆಯೇ? ಏಕೆಂದರೆ ಅಂದಿನ ಕಾಲದ ದಾಸರು (ಕನಕ - ಪುರಂದರ) ಹೇಳಿರುವಂತಹ ಕೀರ್ತನೆಯ ಸಾಲುಗಳನ್ನು ಗಮನಿಸಿದರೆ ಅಂದಿನ ಕಾಲದ ಸಾಮಾಜಿಕ ಜೀವನ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಅದೆಷ್ಟೂ ಶಾಸನಗಳು, ಸಾಹಿತ್ಯ ಕೃತಿಗಳು ಅಂದಿನ ಉಳಿಗಮಾನ್ಯ ಪದ್ಧತಿ, ದೇವದಾಸಿ ಪದ್ಧತಿ, ಸತಿ ಪದ್ಧತಿ, ಜಾತಿ ಪದ್ಧತಿಗಳು ಮುಂತಾದ ಅನಿಷ್ಟ ಆಚರಣೆಗಳ ಬಗ್ಗೆ ಹೆಚ್ಚು ಹೆಚ್ಚಾಗಿ ಭವ್ಯ ವಿಜಯನಗರ ಎಂದು ಹೇಳಿಕೊಂಡಿರುವುದರ ಬುಡದಲ್ಲಿಯೇ ಬೆಂಕಿಯ

ಜ್ವಾಲೆಯಾಗಿ ಉರಿಯುತ್ತಿದ್ದಂತಹ ಹಾಗೂ ಉರಿದು ಹೋದಂತಹ ಕ್ಷಣಗಳನ್ನು ಉಲ್ಲೇಖಿಸಿವೆ. ಅಷ್ಟೇ ಅಲ್ಲದೆ ಅಂದಿನ ಕಾಲದ ಗಂಡು ಹೆಣ್ಣುಗಳ ಸಂಬಂಧಗಳು ಅವರ ಒಲವು ನಿಲುವುಗಳು, ಸಾಮ್ರಾಜ್ಯದ ತಿಂಡಿ ತಿನಿಸು ಉಡುಗೆ ತೊಡುಗೆ ಆಚಾರ ವಿಚಾರ ನಡೆ ನುಡಿಗಳು ಸಂದರ್ಭೋಚಿತವಾಗಿ ತಿಳಿ ಹೇಳಲ್ಪಟ್ಟಿವೆ. ಕೇವಲ ಅರಮನೆ ಗುರುಮನೆಗಳನ್ನೇ ಹೊಗಳಿ ವೈಭವೀಕರಿಸುವುದೇ ಇತಿಹಾಸವಲ್ಲ ಎಂಬುವುದಕ್ಕೆ ಈ ದಾಸಪದಗಳೆ ಅಲ್ಲದೆ ಅನೇಕ ಶಾಸನಗಳು ಹಾಗೂ ಲಾವಣಿಗಳು ಇತರ ಸಾಹಿತ್ಯಾಧಾರಗಳೂ ಉತ್ತಮ ಸಾಕ್ಷಿಗಳಾಗಿವೆ.

ವಿಜಯಗರ ಸಾಮ್ರಾಜ್ಯದಲ್ಲಿ ಅಸ್ಪೃಶ್ಯರಲ್ಲಿಯೇ ಅತ್ಯಂತ ಕೆಳವರ್ಗದವರಾದ ಹೊಲೆಯರು ಮತ್ತು ಮಾದಿಗರು ಊರ ಹೊರಗೆ ಒಟ್ಟಾಗಿ ವಾಸಮಾಡುತ್ತಿದ್ದರು. ಆ ಕೇರಿಗಳನ್ನು ಹೊಲಗೇರಿ ಎಂದು ಕರೆಯುತ್ತಿದ್ದರೆಂಬುದನ್ನು ಸಾಹಿತ್ಯಾಧಾರಗಳು, ಶಾಸನಧಾರಗಳು ಹಾಗೂ ಜನರಿಂದ ಜನರಿಗೆ ಬಾಯಿಂದ ಬಾಯಿಗೆ ಬಳುವಳಿಯಾಗಿ ಬಂದಿರುವ ಜಾನಪದ ಸಾಹಿತ್ಯಾಧಾರಗಳಲ್ಲಿ ಲಭ್ಯವಿದೆ. ಹೊಲೆಯ ಮಾದಿಗ ಎಂಬ ಜಾತಿಸೂಚಕವನ್ನು ಸೂಚಿಸುವ ಹೆಸರುಗಳವರೂ ಇದ್ದರು. (ಉದಾ. ಹೊಲೆಯರ ಹುಳ್ಳ ಮಾದಿಗರ ಕಂಪ ಮುಂತಾದವರು.) ಹಾಗೆಯೇ ಹಂಪಿ ಪರಿಸರದಲ್ಲಿರುವ ಮಾತಂಗಿಯನ್ನು ಕವಿ 'ಮಾದಿಗಿತ್ತಿ' ಎಂದು ಕರೆದಿರುವುದಕ್ಕೂ ಆಧಾರಗಳಿವೆ. ಅಸ್ಪೃಶ್ಯತೆ ನಿವಾರಣೆಯ ಬಗೆಗೆ ನಮ್ಮ ಸಂವಿಧಾನದಲ್ಲಿಯೇ ಕಾನೂನುಗಳಾಗಿದ್ದರೂ ಇವತ್ತಿಗೂ ಹಳ್ಳಿ ಹಾಗೂ ಗ್ರಾಮಗಳಲ್ಲಿ ಹೊಲಗೇರಿ ಎಂಬುದಿದೆ. ಕೆಲವು (ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ) ಕಡೆ 'ಹೊಲೇರಿ ಹಟ್ಟಿ' ಎಂದೂ ಮತ್ತೆ ಕೆಲವು ಕಡೆ 'ಮಾದಿಗ ಹಟ್ಟಿ' ಎಂದು ಇಂದಿಗೂ ಕರೆಯುವ ವಾಡಿಕೆ ಇರುವುದು ಕಂಡುಬರುತ್ತದೆ. ಶತಶತಮಾನಗಳಿಂದಲೂ ಅಸ್ಪೃಶ್ಯತೆ ಯಾವ ರೂಪದಲ್ಲಿತ್ತೆಂಬುದಕ್ಕೆ ನಿದರ್ಶನವಾಗಿ ಈ ಕೆಳಗಿನ ಗಾದೆಗಳು ಉದಾಹರಿಸಬಹುದು. ಊರು ಅಂದ ಮೇಲೆ ಹೊಲಗೇರಿ ಇರಲೇ ಬೇಕು', 'ಊರು ಹೊಲಗೇರಿ ಒಂದು ಮಾಡಿಬಿಟ್ಟ' ಈ ರೀತಿಯ ಇನ್ನೂ ಅನೇಕ ಗಾದೆಗಳನ್ನು ಸಾಕ್ಷಿಯಾಗಿ ನೀಡಬಹುದು. ಈ ಮೇಲಿನವೆಲ್ಲವೂ ತಿಳಿಯುವುದು ದೇಶಿಯ ಸಾಹಿತ್ಯಧಾರಗಳಿಂದ ಮಾತ್ರ ಆದರೆ ವಿದೇಶಿ ಪ್ರವಾಸಿಗರ ವರದಿಯಲ್ಲಾಗಲೀ, ಶಾಸನಗಳಲ್ಲಾಗಲೀ ಅಸ್ಪೃಶ್ಯರ ಜೀವನದ ಒಂದು ಸಂಪೂರ್ಣ ಚಿತ್ರ ನಮಗೆ ಸರಿಯಾಗಿ ದೊರಕದಿರುವುದು ದುರಾದೃಷ್ಟಕರ. ಇದಕ್ಕೆ ಕಾರಣ ನೀಡುವುದಾದರೆ ವಿದೇಶಿ ಯಾತ್ರಿಕರು ಹೆಚ್ಚಾಗಿ ರಾಜರ ಆಸ್ಥಾನದಲ್ಲಿಯೇ ಸಕಲ ಸೌಕರ್ಯಗಳಿಂದ ಜೀವಿಸಿ ಅಲ್ಲಿ ಕಂಡು ಕೇಳಿದ ಅನುಭವಿಸಿದ ಅನುಭವವನ್ನು ಮಾತ್ರ ಹೆಚ್ಚಾಗಿ ಬರೆದಿರುವುದು ಕಂಡುಬರುತ್ತದೆ. ಇವರಿಗೆ ಹೊರಗಿನ ಜನರ ಜೀವನದ ಬವಣೆಯನ್ನು ಚಿತ್ರಿಸಲು ಸಾಧ್ಯವಾಗದ ಮಾತಾಗಿತ್ತು.

ಮಧ್ಯಕಾಲಿನ ಇತಿಹಾಸವನ್ನು ಸೂಕ್ಷ್ಮವಾಗಿ ಅಧ್ಯಯನ ನಡೆಸುತ್ತಾ ಹೋದಂತೆಲ್ಲಾ ಅಲ್ಲಿನ ಆಡಳಿತದಲ್ಲಿ ಕಂಡುಬರುವ ಪ್ರಮುಖವಾದ ಅಂಶವೆಂದರೆ ನಾಯಕರ ಪದ್ಧತಿ, ನಾಯಕರು ಗ್ರಾಮಗಳಲ್ಲಿ ಪಟ್ಟಣಗಳಲ್ಲಿ ಸೈನಿಕ ದಂಡನಾಯಕನ ಸ್ಥಾನಮಾನ ಮಡೆದವರಾಗಿದ್ದರು. ಈ ನಾಯಕ ಪದ್ಧತಿಯು ಅಂದು ಊಳಿಗಮಾನ್ಯ ಪದ್ಧತಿಯನ್ನು ಹೋಲುತ್ತಿತ್ತೆಂದು ಇತಿಹಾಸಗಾರರು ಅಭಿಪ್ರಾಯ ಪಡುತ್ತಾರೆ. ಅಸ್ಪೃಶ್ಯರ ಮೇಲೆ ದೌರ್ಜನ್ಯ ಹೆಚ್ಚಾಗಿತ್ತೆಂದು ಆಧಾರಗಳು ಸೂಚಿಸುತ್ತವೆ. ಇಂತಹ ಸನ್ನಿವೇಶದಲ್ಲಿಯೇ ವಿಜಯನಗರ ಸಾಮ್ರಾಜ್ಯದಲ್ಲಿ ಕವಿಗಳು, ನೀತಿಶಾಸ್ತ್ರಜ್ಞರುಗಳು, ತತ್ವಜ್ಞಾನಿಗಳು ಸಾಮಾಜಿಕ ದೋಷಗಳನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಈ ಹಂತದಲ್ಲಿ ಪ್ರಮುಖರಾದವರೆಂದರೆ ಸರ್ವಜ್ಞ, ಕನಕ, ಪುರಂದರ, ಪಪಿಲಾರ್, ವೇಮನರು ಪ್ರಮುಖ ಸ್ಥಾನದಲ್ಲಿ ನಿಲ್ಲುತ್ತಾರೆ. ಇವರು ಜಾತಿಪದ್ಧತಿ ಹಾಗೂ ಅಸ್ಪೃಶ್ಯತೆಯ ನಿವಾರಣೆಗೆ ಚಳುವಳಿಯನ್ನು ಆರಂಭಿಸಿರುವುದಕ್ಕೆ ಇಂದಿಗೂ ಸಹ ನಿದರ್ಶನವಾಗಿ ಸಾಕ್ಷಿಯಾಗಿ ನಿರಂತರವಾಗಿದ್ದಾರೆ.

* * *

# ಪ್ರವೇಶ

ಸಂಸ್ಕೃತಿ ಎಂಬುದು ಮಾನವ ಸಮಾಜದಲ್ಲಿ ಒಂದು ಸೂಕ್ಷ್ಮವಾದ ವಿಚಾರವಾಗಿದೆ. ಏಕೆಂದರೆ ಸಾಂಸ್ಕೃತಿಕವಾಗಿ ಸಮಾಜದಲ್ಲಿ ಎಲ್ಲರಿಗೂ ಸಮಾನಾವಕಾಶವಿರಬೇಕೆಂಬುದು ಸಾಮಾಜಿಕ ನ್ಯಾಯದ ದೃಷ್ಟಿಯಲ್ಲಿ ಅಪೇಕ್ಷಣೀಯವಾದುದು. ಆದರೆ ಭಾರತದಂತಹ ಜಾತಿ ಹಾಗೂ ವರ್ಣ ವ್ಯವಸ್ಥೆಯ ಸಂಸ್ಕೃತಿಗೆ ಇದು ಮರೀಚಿಕೆಯಾಗಿಯೆ ಇರುತ್ತದೆ. ಚರಿತ್ರೆಯುದ್ದಕ್ಕೂ ನಾವು ನಮ್ಮ ಸಾಂಸ್ಕೃತಿಕ ವಿಷಯಗಳನ್ನು ಗಮನಿಸಿದಾಗ ಒಂದು ವರ್ಗ ಸುಖಭೋಗದಲ್ಲಿ ಜೀವನ ನಡೆಸಿದರೆ, ಮತ್ತೊಂದು ವರ್ಗ ಜೀವನಕ್ಕೆ ಬೇಕಾಗುವ ಪ್ರಾಥಮಿಕ ಸೌಕರ್ಯಗಳಿಂದಲೂ ವಂಚಿತರಾಗಿರುವುದು ಕಣ್ಮುಂದೆ ಇರುವ ಸತ್ಯದ ವಸ್ತುವೆ. ಈ ಜನರಲ್ಲಿ ಅಸಮಾನತೆ ಏಕಿದೆ ಅದರ ಕಾರಣಗಳೇನು ಅದನ್ನು ಕಡಿಮೆ ಮಾಡಬಹುದೊ ಅಥವಾ ಸಂಪೂರ್ಣ ನಿರ್ಮೂಲಗೊಳಿಸಬಹುದೊ ಅಥವಾ ಸಮಾಜದಲ್ಲಿ ಇದು ಅನಿವಾರ್ಯ ಅಥವಾ ಅವಶ್ಯಕವೆಂದು ಒಪ್ಪಿಕೊಳ್ಳಬೇಕೋ ಎಂಬುವ ಪ್ರಶ್ನೆಗಳು ಪ್ರತಿಯೊಬ್ಬ ಪ್ರಜ್ಞಾವಂತರನ್ನು ಕಾಡದೆ ಇರದು. ಇದರ ಬಗ್ಗೆ ಚರಿತ್ರೆ ತಿರುಗಿ ನೋಡಿದರೆ ಹಿಂದಿನಿಂದಲೂ ದಾರ್ಶನಿಕರು ಹಾಗೂ ಸಾಮಾಜಿಕ ಚಿಂತಕರು ಚಿಂತನೆ ಮಾಡಿದ್ದಾರೆ. ಆದರೆ ಇವುಗಳ ಫಲ ಮಾತ್ರ ಶೂನ್ಯವೆಂದರೆ ತಪ್ಪಾಗದು. ಈ ಕೃತಿಯಲ್ಲಿ ನಾನು ವಿಜಯನಗರ, ಇಕ್ಕೇರಿ ಹಾಗೂ ಮೈಸೂರು ಅರಸರುಗಳ ಆಳ್ವಿಕೆಯ ಕಾಲದಲ್ಲಿದ್ದಂತಹ ಸಾಂಸ್ಕೃತಿಕ ಚರಿತ್ರೆಯನ್ನು ಹೇಳಲು ಬಯಸಿದ್ದೇನೆ. ಈ ವಿಷಯ ಕುರಿತು ದಾಖಲೆಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ತೊಡಗಿದ್ದಾಗ ಅಂದಿನ ದಾಖಲೆಗೂ ಇಂದಿನ ವಾಸ್ತವ ಸ್ಥಿತಿಗೂ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲವೆನ್ನಿಸಿತು. ಈ ಹಂತದಲ್ಲಿ ಮೇಲಿನ ಪ್ರಶ್ನೆಗಳು ಸಹಜವಾಗಿಯೇ ಮೂಡಿ ಉತ್ತರ ದೊರಕದೆ ಪ್ರಶ್ನೆಯಾಗಿಯೇ ಉಳಿಯಿತು.

ಮಾನವ ಸಮಾಜ ಸಂಕೀರ್ಣಗೊಂಡಂತೆ ಮುಂದೆ ಭಿನ್ನತೆ ಹಾಗೂ ವೈವಿಧ್ಯತೆ ಹೊಂದುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಇಂತಹ ಸಮಾಜದಲ್ಲಿ ದೊರಕುವ ಹಾಗೂ ಇರುವಂತಹ ಸಾಧನ ಸಂಪತ್ತುಗಳು ಸಮಾನವಾಗಿ ಹಂಚಿಕೆಯಾಗುವುದು ವಿರಳ. ಏಕೆಂದರೆ ಈ ಹಂಚಿಕೆಯು ವ್ಯಕ್ತಿಯ ಶ್ರಮ ಮತ್ತು ದಕ್ಷತೆಯ ಮೇಲೆ ಅವಲಂಬಿತವಾಗಿರುತ್ತದೆ. ಆದರೆ ಈ ಶ್ರಮ ಮತ್ತು ದಕ್ಷತೆಯ ಎಲ್ಲರಲ್ಲೂ ಏಕರೀತಿಯಿರದೆ ಭಿನ್ನಭಿನ್ನವಾಗಿರುತ್ತದೆ. ಇದರಿಂದಲೇ ನಮ್ಮ ಸಂಸ್ಕೃತಿಯ ಜನಜೀವನದ ಸ್ಥಿತಿಗತಿಯಲ್ಲಿ ಅನೇಕ ವ್ಯತ್ಯಾಸಗಳನ್ನು ಕಾಣಬಹುದು. ಈ ರೀತಿಯ ವ್ಯತ್ಯಾಸಗಳನ್ನು ಅವಳಿ ಮಕ್ಕಳಲ್ಲಿಯೂ, ಅಣ್ಣತಮ್ಮಂದಿರಲ್ಲಿಯೂ ಕಾಣಬಹುದು. ಅಂದರೆ ಯಾರಿಬ್ಬರೂ ಸಹ ಒಂದೆ ತರಹದವರಾಗಿರುವುದಿಲ್ಲ. ಇದನ್ನೇ ನಾವು ಸಾಂಸ್ಕೃತಿಕ ಅಸಮಾನತೆಯ ಮೂಲವೆಂದು ಕರೆಯಬಹುದು. ಇದರಿಂದಾಗಿಯೇ ಸಮಾಜದಲ್ಲಿ ಮೇಲುಕೀಳು, ಉಚ್ಚ ನೀಚವೆಂಬ ಭೇದಗಳು ಸೃಷ್ಟಿಯಾಗುವುದು, ಈ ಭೇದದಿಂದಾಗಿ ಸಮಾಜವು ವಿವಿಧ ರೂಪಗಳನ್ನು ಹೊಂದುವುದು ಎಂದು ನಮ್ಮ ಸಂಸ್ಕೃತಿ ಚರಿತ್ರೆಯನ್ನು ಅಧ್ಯಯನ ಮಾಡಲು ತೊಡಗಿದ್ದಾಗ ನಾನು ಕಂಡುಕೊಂಡ ಪ್ರಮುಖ ಅಂಶ.

ಈ ಕೃತಿಯು - ಮೊದಲೇ ತಿಳಿಸಿರುವ ಹಾಗೆ - ಕರ್ನಾಟಕದ ಪ್ರಸಿದ್ಧ ಮೂರು ರಾಜವಂಶಗಳ ಕಾಲದ ಸಂಸ್ಕೃತಿ ಚರಿತ್ರೆಯನ್ನು ಚರ್ಚಿಸುತ್ತದೆ. ಮೊದಲ ಭಾಗದಲ್ಲಿ ವಿಜಯನಗರದ ಅರಸರ ಕಾಲದ ಸಾಂಸ್ಕೃತಿಕ ವಿಷಯದಲ್ಲಿ ದೃಷ್ಟಿಹರಿಸಿ, ವಿಶ್ವವಿಖ್ಯಾತವಾದ ಹಾಗೂ ಶ್ರೀಮಂತ ಸಾಮ್ರಾಜ್ಯವೆಂದು ನಮ್ಮ ಇತಿಹಾಸಕಾರರು ಹೇಳಿರುವುದರ ಹಾಗೂ ಅದನ್ನೇ ನಾವು ಓದಿಕೊಂಡು ಬಂದಿರುವುದರ ಅಧ್ಯಯನದ ಪರಿಸ್ಥಿತಿ ಏನು ಎಂದು ವಿಶ್ಲೇಷಿಸಬಯಸುತ್ತದೆ. ಅಂದಿನ ಕಾಲದ ಅನಿಷ್ಟ ಪದ್ಧತಿಗಳಾಗಿದ್ದಂತಹ ದೇವದಾಸಿ, ಬಸವಿ ಬಿಡುವ ಪದ್ಧತಿ, ಗೆಜ್ಜೆಪೂಜೆ, ಸತಿ ಸಹಗಮನ ಹಾಗೂ ವಿಧವೆಯರ ಸ್ಥಿತಿಗತಿ, ಅನಕ್ಷರತೆ, ದಾರಿದ್ರ್ಯ, ಆರೋಗ್ಯದ ಕೊರತೆ, ಬರ, ಅಸ್ಪೃಶ್ಯತೆ ಮುಂತಾದವುಗಳನ್ನು ಅಂದಿನ ಕಾಲದ ಚರಿತ್ರೆ ಹಾಗೂ ಸಮಾಜದ ಜೊತೆಗೆ ತುಲನೆ ಮಾಡಿ ವಿಜಯನಗರ ಕಾಲದ ಸಂಸ್ಕೃತಿಯ ಪರಿಸ್ಥಿತಿಯನ್ನು ಮನಗಾಣನಲು ಪ್ರಯತ್ನಿಸಲಾಗಿದೆ. ಎರಡು ಹಾಗೂ ಮೂರನೆಯ ಅಧ್ಯಯನದಲ್ಲಿ ಇಕ್ಕೇರಿ ನಾಯಕರು ಹಾಗೂ ಮೈಸೂರಿನ ಒಡೆಯರ ಕಾಲದ ಸಂಸ್ಕೃತಿ ಚರಿತ್ರೆಯನ್ನು ಚರ್ಚಿಸಲಾಗಿದೆ. ಇವರ ಕಾಲವನ್ನೂ ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ವಿಜಯನಗರದ ಕಾಲಕ್ಕಿಂತ ಭಿನ್ನವಾದಂತೆ ಕಂಡುಬರುವುದಿಲ್ಲವೆನ್ನಬಹುದು. ಏಕೆಂದರೆ ಸಾಮಂತ ಸಂಸ್ಥಾನಗಳಾಗಿದ್ದಂತಹ ಈ ಎರಡು ಸಂಸ್ಥಾನಗಳು ಪ್ರಬಲ ವಿಜಯನಗರದ ಸಂಸ್ಕೃತಿಯನ್ನು ತಮ್ಮ ತಮ್ಮಲ್ಲಿ ಅಳವಡಿಸಿಕೊಂಡು, ರಕ್ಷಿಸಿಕೊಂಡು ಮುಂದುವರಿಸಿಕೊಂಡು ಬರಲು ಬಯಸಿತ್ತೇ ವಿನಃ ಅದರ ವಿರುದ್ಧವಾಗಲಿ ಅಥವಾ ಅದನ್ನು ಅನುಸರಿಸದೆ ಇರುವುದಕ್ಕಿಲ್ಲ

ಕಷ್ಟ ಸಾಧ್ಯವೇ ಆಗಿತ್ತು. ಏಕೆಂದರೆ ಇಂದಿನ ಆಧುನಿಕ ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿಯೇ ಅನ್ಯಾಯ ಅಸಮಾನತೆ ತುಂಬಿ ತುಳುಕುತ್ತಿದ್ದು, ಕೆಲವೇ ಕೆಲವು ಜನ ಸಂಪತ್ತು ಸಮೃದ್ಧಿಯಲ್ಲಿ ಹೊರಳಾಡುತ್ತಿರುವಾಗ ಇದಕ್ಕೆ ವಿರುದ್ಧವಾಗಿ ಬಹುಸಂಖ್ಯಾತ ಜನಕೋಟಿ ತಿನ್ನಲು ಒಪ್ಪೊತ್ತಿನ ಕೂಳಿಗೂ ದಿಕ್ಕಿಲ್ಲದೆ ನರಳುತ್ತಿರುವುದನ್ನು ಕಾಣುತ್ತಿರುವಾಗ ಇನ್ನೂ ನಾವು ಚರಿತ್ರೆಯನ್ನು ತಿರುವಿಹಾಕಲು ಸಾಧ್ಯವೆ? ವರ್ತಮಾನ ಕೇವಲ ವರ್ತಮಾನವಾಗಿ ಇರುವುದಿಲ್ಲ. ಅದು ತನ್ನ ಮಡಿಲಿನಲ್ಲಿ ಭೂತದ ಬುತ್ತಿಯನ್ನು ಹೊತ್ತು ತಂದಿರುತ್ತದೆ. ಹಾಗೆಯೇ ಭವಿಷ್ಯಕ್ಕೂ ಕೊಂಡೊಯ್ಯುತ್ತದೆ ಎಂದು ಹೇಳಿದರೆ ನಮ್ಮ ಸಂಸ್ಕೃತಿಗೆ ಹೆಚ್ಚಿನ ಅರ್ಥ ಬರುವುದೇನೋ. ಏಕೆಂದರೆ ನಮ್ಮ ಸಂಸ್ಕೃತಿ ಎಂದು ಹೇಳಿಕೊಳ್ಳುವುದೆಲ್ಲವೂ ನಿನ್ನೆಯದು ಹಾಗೂ ಇಂದಿನದಲ್ಲ. ಇದಕ್ಕೆ ನೂರಾರು ವರ್ಷಗಳ ಇತಿಹಾಸವಿರುವುದು ನಮಗೆ ಆಧಾರಗಳಿಂದ ತಿಳಿದುಬರುತ್ತದೆ.

ಇಂದಿನ ಆಧುನಿಕ ಕಾಲದ ಸನ್ನಿವೇಶದಲ್ಲಿ ಬ್ರಿಟಿಷ್‌ರಿಂದ ನಮ್ಮ ರಾಷ್ಟ್ರವನ್ನು ಮುಕ್ತಗೊಳಿಸಿವೆಂದುಕೊಂಡು ಹಾಗೂ ಇಂದು ಭಾರತವು ಪ್ರಜಾತಂತ್ರ ದಾರಿಯಲ್ಲಿ ದಾಪುಗಾಲು ಹಾಕುತ್ತಾ ಸಾಧಿಸಿದ ಹಾಗೂ ಸಾಧಿಸುತ್ತಿರುವ ಅಭಿವೃದ್ಧಿಯ ಕುರಿತು, "ಮಹಾನ್ ಸಾಧನೆ" ಕುರಿತು ನಮ್ಮ ರಾಷ್ಟ್ರ ನಾಯಕರೆನ್ನಿಸಿಕೊಂಡವರು ಆಗಾಗ ನೆನಪಿಸುತ್ತಲೇ ಇದ್ದಾರೆ. ವಿಶ್ವದಲ್ಲಿಯೇ ನಮ್ಮದು ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಎಂದು ಘಂಟಾಘೋಷವಾಗಿ ಹೇಳುತ್ತ ಅಭಿಮಾನದಿಂದ ಬೀಗುತ್ತಿದ್ದಾರೆ. ಅಷ್ಟೇ ಅಲ್ಲದೆ, "ಇಂದು ಭಾರತ ವಿಶ್ವದ ಪ್ರಮುಖ ಆರ್ಥಿಕ ವ್ಯವಸ್ಥೆಗಳಲ್ಲಿ ಒಂದಾಗಿದೆ. ಜಾಗತಿಕ ವಿಜ್ಞಾನ ತಂತ್ರಜ್ಞಾನದ ಅಭಿವೃದ್ಧಿಯಲ್ಲಿ ಮುಂಚೂಣಿಯ ಸ್ಥಾನ ಅಲಂಕರಿಸಿದೆ ಹಾಗೂ ಆಧುನಿಕ ಕೈಗಾರಿಕೋದ್ಯಮದಲ್ಲಿಯೂ ಅಷ್ಟೇ ಮುನ್ನಡೆಯನ್ನು ಸಾಧಿಸಿದೆ." ಎಂದು. ಹಾಗಿದ್ದರೆ ನವು ಚರಿತ್ರೆಯಲ್ಲಿ ಅಧ್ಯಯನ ಮಾಡಿರುವ ಪ್ರಗತಿಯ ನೋಟ ಸುಳ್ಳಾದಂತಾಗುವುದಿಲ್ಲವೆ. ಇದರ ಜೊತೆಗೆ ಈ ಸರ್ವಾಂಗೀಣ ಬೆಳವಣಿಗೆಯು ಭಾರತದ ಕೋಟ್ಯಾಂತರ ಪ್ರಜೆಗಳ ಬದುಕಿನ ಮಟ್ಟ ಎತ್ತರಿಸುವಲ್ಲಿ ವಿಫಲವಾದದ್ದೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ. ಬಡತನದ ರೇಖೆಯ ಕೆಳಗೆ ಅರೆ ಮಾನವ ಜೀವನ ನಡೆಸುತ್ತಿರುವ ಲಕ್ಷ ಲಕ್ಷ ಪ್ರಜೆಗಳ ದಾರುಣದ ಅಸ್ತಿತ್ವಕ್ಕೆ ಕಾರಣರಾರು? ತನ್ನ ಕೋಟ್ಯಾಂತರ ಪ್ರಜೆಗಳನ್ನು ಇಂಥಾ ಔದಾಸೀನ್ಯ, ನಿರ್ಲಕ್ಷತೆಯಿಂದ ನೋಡಿಕೊಳ್ಳುತ್ತಿರುವ ದೇಶವನ್ನು ನಾವು ಒಂದು ಸುಸಂಸ್ಕೃತ ನಾಗರಿಕ ದೇಶವೆಂದು ಕರೆಯಬಹುದೆ? ರಾಷ್ಟ್ರದ ವ್ಯವಹಾರವನ್ನು ಸಂಘಟಿಸುವ, ದೇಶದ ಆಡಳಿತವನ್ನು ನಡೆಸುವ ಅನೇಕ ಪ್ರಕಾರಗಳಲ್ಲಿ ಪ್ರಜಾಪ್ರಭುತ್ವವೇ ಅತ್ಯಂತ ಉತ್ತಮವಾದ, ಉದಾತ್ತವಾದ ವಿಧಾನವೆಂದು ಹೇಳಲಾಗುತ್ತದೆ. ಇದಕ್ಕಾಗಿ ನಾವು ನಮ್ಮ ಅಖಂಡ ಭಾರತಕ್ಕೆ ಈ ವಿಧಾನವನ್ನೇ ಅಳವಡಿಸಿಕೊಂಡಿದ್ದೇವೆ. ಆದರೆ ಈ ಕುರಿತು ಸಾದರಪಡಿಸಲಾಗುವ ವಾದ ಹೀಗಿರುತ್ತದೆ. ಎಲ್ಲಾ ರೀತಿಯ ಅವಕಾಶಗಳಿಂದ ವಂಚಿತರಾದ, ಸೇವಾಸೌಲಭ್ಯಗಳಿಂದ ದೂರಾಗಿ ಮೂಲೆಗೆ ತಳ್ಳಲ್ಪಟ್ಟ ಜನಸಮುದಾಯ ಪ್ರಜಾಪ್ರಭುತ್ವ ಮತ್ತು ರಾಜಕೀಯ ಸ್ವಾತಂತ್ರ್ಯದ ಮೂಲಕ ಮಾತ್ರ ಮಾನವೀಯ ಘನತೆಯೊಂದಿಗೆ ಬದುಕಿ ಬಾಳುವ ಹಕ್ಕನ್ನು ಪಡೆದು ಕೊಳ್ಳಲು ಸಾಧ್ಯವಿದೆ. ಪ್ರಜಾಪ್ರಭುತ್ವ ಮತ್ತು ರಾಜಕೀಯ ಸ್ವಾತಂತ್ರ್ಯದ ಮೂಲಕ ಮಾತ್ರ ಪ್ರಜಾತಾಂತ್ರಿಕ ಹಕ್ಕುಗಳೊಂದಿಗೆ ಲಭಿಸುವ ಎಲ್ಲಾ ಸೇವಾ ಅವಕಾಶಗಳನ್ನು ಪಡೆದುಕೊಳ್ಳಲು ಸಾಧ್ಯ. ಆದರೆ ಸ್ವಾತಂತ್ರ್ಯ ನಂತರದ ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ದೀರ್ಘ ಪಯಣದ ನಂತರವೂ ನಮ್ಮ ಪ್ರಜಾಪ್ರಭುತ್ವ, ಭಾರತೀಯ ನಾಗರಿಕರ ಅರ್ಧದಷ್ಟು ಜನರಿಗೆ ಘನತೆ ಗೌರವದ ಬದುಕಿನ ಸಾಧ್ಯತೆಗಳನ್ನು ಕಲ್ಪಿಸಿಕೊಡಲು ವಿಫಲವಾಗಿರುವುದೇಕೆ? ಇದನ್ನೇ ಬೇರೆ ಮಾತುಗಳಲ್ಲಿ ಕೇಳುವುದಾದರೆ, ಭಾರತದ ಜನಸಂಖ್ಯೆಯ ಅರ್ಧದಷ್ಟು ಜನರು ತಮ್ಮ ಪ್ರಜಾತಾಂತ್ರಿಕ ಹಕ್ಕುಗಳನ್ನು ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಬಳಸಿ ತಮ್ಮ ಬದುಕಿನ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳುವಲ್ಲಿ ಸೋತದ್ದೇಕೆ? ಭಾರತದ ಕೆಳವರ್ಗದ ಅರ್ಧದಷ್ಟು ಜನರು ಮಾನವೀಯ ಘನತೆಯಿಂದ ಬದುಕಲೂ ಸಾಧ್ಯವಾಗದೇ ಇರುವ ಸ್ಥಿತಿಯಲ್ಲಿ ಅವರು ಮೂಲಭೂತ ಹಕ್ಕುಗಳನ್ನು ಪ್ರಜಾಪ್ರಭುತ್ವದ ಅವಕಾಶಗಳನ್ನು ಅನುಭೋಗಿಸಲು ಸಾಧ್ಯವೇ? ಕಳೆದ ಐದು ದಶಕಗಳಿಂದಲೂ ಹೆಚ್ಚು ಕಾಲದಿಂದ ಜೀವಂತಿಕೆಯಿಂದ ಪುಟಿಯುತ್ತಿರುವ ಪ್ರಜಾಪ್ರಭುತ್ವದ ಹೊರತಾಗಿಯೂ ಬಹುಸಂಖ್ಯೆಯ ಜನರು ಕಡುಬಡತನದಲ್ಲಿ ತೊಳಲಾಡುತ್ತಿರುವುದನ್ನು ಹಾಗೂ ಅರ್ಧದಷ್ಟು ಜನರು ಅನೇಕ ಅವಕಾಶಗಳಿಂದ ವಂಚಿತರಾಗುತ್ತಿರುವುದನ್ನು ನಾವು ಸಮರ್ಥಿಸಿಕೊಳ್ಳಲು ಸಾಧ್ಯವೆ? ಜೀವಂತ ಪ್ರಜಾಪ್ರಭುತ್ವದಲ್ಲಿಯೇ ಈ ರೀತಿಯ ಕಡುಬಡತನ, ದಾರಿದ್ರ್ಯ, ಸಾಮೂಹಿಕ ದುಃಸ್ಥಿತಿ ಇವೆಲ್ಲವೂ ಕಲ್ಪನೆಗೂ ನಿಲುಕದ ಅಸಂಗತಗಳಾಗಿರುವಾಗ ಇನ್ನು ನಮ್ಮ ರಾಜಪ್ರಭುತ್ವದ ಕಲ್ಪನೆಯನ್ನು ಕೆಲವು ಕ್ಷಣ ಕಣ್‌ಮುಚ್ಚಿ ಕುಳಿತರೆ ಕತ್ತಲಲ್ಲೇ ಬೆಳಕಾಗಿ ಸುಳಿದಾಡಿ ಬಿಡುತ್ತದೆ. ಮಧ್ಯಕಾಲೀನ ಕರ್ನಾಟಕದ ಸಂಸ್ಕೃತಿಯನ್ನು ಕುರಿತು ಬರೆಯುವಾಗ ಮೇಲಿನ ಅಂಶಗಳು ಹೆಚ್ಚಾಗಿ ನನಗೆ ಕಾಡಿವೆ. ಮುಂದೆಯೂ ಕಾಡುತ್ತಿರುತ್ತವೆ.

ಇಂದಿಗೂ ಸಹ ಭಾರತದ ಸಂಸ್ಕೃತಿಯಲ್ಲಿ ಬಡವ ಶ್ರೀಮಂತರ ನಡುವಿನ ಕಂದರ ದಿನೇ ದಿನೇ ಹೆಚ್ಚು ಅಗಲವಾಗುತ್ತಿದ್ದು ಇನ್ನೇನು ಮುಚ್ಚಲಾಗದ ಸ್ಥಿತಿಗೆ ಬಂದು ತಲುಪಿದೆ. ಕೆಳಭಾಗದ ಶೇ. ೪೦ ರಷ್ಟು ಭಾರತೀಯ ದಲಿತರ ಸ್ಥಿತಿಗತಿ ಮತ್ತು ಮೇಲಂತಸ್ತಿನ ೧೦ ರಿಂದ ೧೫ ರಷ್ಟು ಭಾರತೀಯರ ಬದುಕಿನ ಸ್ಥಾನಮಾನ ಇವೆರಡರ ನಡುವಿನ ಹೋಲಿಕೆ ಕಲ್ಪನೆಗೂ ಕಷ್ಟಸಾಧ್ಯವಾಗಿದೆ. ಮೇಲಿನವರ ಬದುಕಿನ ವೈಭವದ ಸಮ್ಮುಖದಲ್ಲಿ ಕೆಳಹಂತದ ಕೋಟ್ಯಾಂತರ ಜನರ ಬದುಕಿನ ಬವಣೆ ನೋಡಿದರೆ ಇವರೂ ಭಾರತೀಯರೇ? ಎಂದು ಉದ್ಗಾರ ತೆಗೆಯದೆ ವಿಧಿಯಿಲ್ಲ. ಶತಶತಮಾನಗಳಿಂದ ಭಾರತದ ಶೇ. ೪೦ ರಷ್ಟು ಜನರ ಬದುಕು ಸಿರಿವಂತರ ಸಾಕುಪ್ರಾಣಿಗಳಿಗೆ ಲಭ್ಯವಾಗಿರುವ ಬದುಕಿನ ಮಟ್ಟದೊರಕಿಸಿಕೊಳ್ಳುವುದಕ್ಕಿಂತಲೂ ಕಷ್ಟವಾಗಿದೆ. ಸಿರಿವಂತರು ತಮ್ಮ ಪ್ರೀತಿಯ ಪ್ರಾಣಿಗಳ ಮೇಲೆ ಖರ್ಚು ಮಾಡುವ ಮೊತ್ತ ಕೆಳಹಂತದ ಶೇ. ೪೦ ರಷ್ಟು ಭಾರತೀಯರ ತಲಾ ಖರ್ಚಿಗಿಂತಲೂ ಎಷ್ಟೋ ಪಟ್ಟು ಹೆಚ್ಚಾಗಿರುತ್ತದೆ. ಈ ಶೇ. ೪೦ ರಷ್ಟು ಬಡಭಾರತೀಯರು ಸಿರಿವಂತರ ನಾಯಿಗಳಿಗೆ ಸಿಗುವ ಸೌಭಾಗ್ಯದಿಂದಲೂ ಶತ ಶತಮಾನಗಳಿಂದ ವಂಚಿತರಾಗಿದ್ದಾರೆ. ಈ ವಂಚಿತರ ಕುರಿತು ಅಧ್ಯಯನಗಳು ಇಂದು ಹೆಚ್ಚುಹೆಚ್ಚಾಗಿ ನಡೆಯುತ್ತಿದೆ.

ಅಂದು ನಾವು ಚರಿತ್ರೆಯಲ್ಲಿ ತಿಳಿಯುವುದೆಲ್ಲವೂ ಸಹ ಒಂದು ದೇಶದ ಚರಿತ್ರೆ ಮಾತ್ರವಾಗಿತ್ತು. ಒಂದು ದೇಶದ ಚರಿತ್ರೆಯೆಂದರೆ ಅದು ಕೇವಲ ರಾಜಮಹಾರಾಜರ ವೈಭವದ ವಿಲಾಸಮಯ ಜೀವನಚಿತ್ರವೆಂದಾಗಲೀ, ಅವರು ನಡೆಸಿದ ಯುದ್ಧಗಳ ವರ್ಣನೆಯಾಗಲೀ ಅಲ್ಲ. ಅಂದು ಆ ದೇಶದ ಜೀವನಾಡಿಯಾದ ಜನತೆಯ ಇತಿಹಾಸವಾಗಿರಬೇಕು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುತ್ತಾರೆ. ಅಂದರೆ ಈ ಕನ್ನಡ ಭೂಮಿಯಲ್ಲಿ ದಲಿತರು, ಪಂಚಮರು ಹಾಗೂ ಸಾಮಾನ್ಯ ಜನರ ಬದುಕಿನ ರೀತಿ ನೀತಿ, ಜನತೆಯ ನಡೆನುಡಿಗಳು, ಆಚಾರ ಸಂಪ್ರದಾಯಗಳು, ಅನುಸರಿಸಿದ ಧರ್ಮ, ಬೆಳಗಿಸಿದ ಕಲೆ ಹಾಗೂ ಜೀವನ ಸಮಸ್ಯೆಗಳು, ಮನೆಯ ಹಾಗೂ ಕೋಟೆಗಳ ರಚನಾವಿನ್ಯಾಸ ಮುಂತಾದ ಮಾನವನ ಸಹಜ ಚಟುವಟಿಕೆಯ ವಿವರಗಳನ್ನು ಒಳಗೊಂಡಿವೆ. ಅಂತಹ ಚರಿತ್ರೆಯ ರಚನೆಯು ಇಂದಿನ ಜನಾಂಗದ ಪ್ರತಿಯೊಬ್ಬರ ಜ್ಞಾನದ ಅರಿವಿಗೆ ಉತ್ತಮ ವಾದ ರೀತಿಯಲ್ಲಿ ಪ್ರತಿಬಿಂಬಿಸುತ್ತದೆ. ಏಕೆಂದರೆ ಸಂಸ್ಕೃತಿ ಚರಿತ್ರೆಯ ಅರ್ಥ ಹಾಗೂ ವ್ಯಾಪ್ತಿಯು ಕಾಲಕಾಲಕ್ಕೆ ವಿಶಾಲವಾಗುತ್ತದೆ ಎಂಬುದು ಸತ್ಯವಾದ ಮಾತು. ಚರಿತ್ರೆಯು ಪ್ರಾರಂಭವಾದ ಹಂತದಲ್ಲಿ ರಾಜಮಹಾರಾಜರು ಹಾಗೂ ಘಟನೆಗಳೇ ಕಥಾವಸ್ತುಗಳಾಗಿದ್ದು, ಜನಸಾಮಾನ್ಯರ ವಿಷಯ ಸಂಪೂರ್ಣವಾಗಿ ಗೌಣವಾಗಿತ್ತು. ಈ ದೃಷ್ಟಿಯಿಂದ ನಮ್ಮ ವಿಭಾಗವು ಕರ್ನಾಟಕ ಸಂಸ್ಕೃತಿ ಚರಿತ್ರೆ ಎಂಬ ಮೌಲಿಕೆಯಲ್ಲಿ ಕ್ರಿಸ್ತಪೂರ್ವ ದಿನದಿಂದ ಹಂತಹಂತವಾಗಿ ಇಂದಿನವರೆಗೂ ಆರು ಸಂಪುಟಗಳಲ್ಲಿ ಅಧ್ಯಯನ ಕೈಗೊಂಡಿದೆ.

೧

ಈ ಯೋಜನೆಯನ್ನು ವಿಭಾಗವು ಕೈಗೆತ್ತಿಕೊಳ್ಳಲು ನಮ್ಮ ಮಾಜಿ ಕುಲಪತಿಗಳಾದ ಡಾ. ಎಂ. ಎಂ. ಕಲಬುರ್ಗಿಯವರು ಕಾರಣ. ಇಂತಹ ಮಹತ್ವದ ಯೋಜನೆಯನ್ನು ಕೈಗೊಂಡು ಕೆಲಸ ಮಾಡಲು ತೊಡಗಿಸಿದ ಕಲ್ಬುರ್ಗಿಯವರಿಗೂ ಹಾಗೂ ಈ ಯೋಜನೆಯು ಪೂರ್ಣಗೊಳ್ಳಲು ಸಹಕರಿಸಿದ ಮಾಜಿ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡರಿಗೂ ನಾನು ಆಭಾರಿಯಾಗಿರುತ್ತೇನೆ. ಈ ನಾಡಿನ ಸಾಂಸ್ಕೃತಿಕ ಚಿಂತಕರೂ ಹಾಗೂ ನೆಚ್ಚಿನ ಕುಲಪತಿಗಳೂ ಆಗಿರುವ ಪ್ರೊ. ಬಿ.ಎ. ವಿವೇಕ ರೈ ರವರ ಪ್ರೋತ್ಸಾಹ ಹಾಗೂ ಬೆಂಬಲದಿಂದ ಈ ಕೃತಿಯು ಹೊರಬರುತ್ತಿದೆ. ನನ್ನ ಎಲ್ಲ ಸಂಶೋಧನಾ ಕೆಲಸಗಳಿಗೂ ಪ್ರೋತ್ಸಾಹ ನೀಡುತ್ತಿರುವ ಪ್ರೊ.ಕೆ.ವಿ. ನಾರಾಯಣ, ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಹಿ.ಚಿ. ಬೋರಲಿಂಗಯ್ಯ, ಪ್ರೊ. ಕರೀಗೌಡ ಬೀಚನಹಳ್ಳಿ ಹಾಗೂ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರಿಗೆ ಕೃತಜ್ಞನಾಗಿರುತ್ತೇನೆ. ಈ ಯೋಜನೆಗೆ ಉತ್ತಮ ಸಲಹೆಸೂಚನೆಗಳನ್ನು ನೀಡಿದಂತಹ ವಿಷಯತಜ್ಞರಾಗಿದ್ದ ಪ್ರೊ. ಓ. ಅನಂತರಾಮಯ್ಯ ನವರಿಗೆ ಅಭಾರಿಯಾಗಿರುತ್ತೇನೆ. ಅಧ್ಯಯನದ ಪ್ರತಿಹಂತದಲ್ಲಿಯೂ ಉತ್ತಮ ಸಲಹೆ ಸೂಚನೆಗಳನ್ನು ನೀಡುತ್ತಾ ಬಂದಿರುವ ಆತ್ಮೀಯ ಸಹೋದ್ಯೋಗಿ ಮಿತ್ರರಾದಂತಹ ಡಾ. ಟಿ.ಪಿ. ವಿಜಯ್, ಡಾ. ಸಿ.ಆರ್. ಗೋವಿಂದರಾಜು, ಡಾ. ಮೋಹನಕೃಷ್ಣ ರೈ ಹಾಗೂ ಡಾ. ವಿರೂಪಾಕ್ಷಿ ಪೂಜಾರಹಳ್ಳಿಯವರಿಗೆ ವಂದನೆಗಳು.

ಹಸ್ತಪ್ರತಿಯ ಕರುಡನ್ನು ತಿದ್ದಲು ನನ್ನೊಂದಿಗೆ ತನ್ನ ಸಮಯವನ್ನೆಲ್ಲ ಕಳೆದ ಪ್ರೀತಿಯ ಧರ್ಮಪತ್ನಿ ಬಿ.ವಿ. ನಾಗವೇಣಿಗೆ ಋಣಿಯಾಗಿರುತ್ತೇನೆ. ನಮ್ಮಿಬ್ಬರ ಈ ಕೆಲಸಕ್ಕೆ ತುಂಟಾಟದ ನಡುವೆಯೂ ಸಹಕರಿಸಿದ ಪುಟಾಣಿ ಮಗಳು ಸ್ಫೂರ್ತಿಯನ್ನು ನೆನೆಯದೆ

ಇರಲಾರೆ. ಈ ಕೃತಿಯು ಸುಂದರವಾಗಿ ಹೊರಬರಲು ಸಹಕರಿಸಿದ ಆತ್ಮೀಯ ಗೆಳೆಯರಾದ ಶ್ರೀ ಮಲ್ಲಿನಾಥ್, ಶ್ರೀ ಸುಜ್ಞಾನಮೂರ್ತಿ, ಶ್ರೀ ಕೆ.ಎಲ್. ರಾಜಶೇಖರ್, ಶ್ರೀ ಎಚ್.ಬಿ. ರವೀಂದ್ರ, ಶ್ರೀ ಕೆ.ಕೆ. ಮಕಾಳಿ, ಶ್ರೀ ಶ್ರೀಧರರಾವ್ ಪಿಸ್ಸೆ, ಶ್ರೀ ಗಾದಲಿಂಗಪ್ಪರವರುಗಳಿಗೆ ಹಾಗೂ ಅಚ್ಚುಕಟ್ಟಾಗಿ ಬೆರಳಚ್ಚು ಮಾಡಿಕೊಟ್ಟಂತಹ ಆತ್ಮೀಯ ಗೆಳೆಯ ಶ್ರೀ ವೈ.ಎಂ. ಶರಣಬಸವರವರಿಗೆ ಕೃತಜ್ಞನಾಗಿರುತ್ತೇನೆ. ಪರೋಕ್ಷವಾಗಿ ಹಾಗೂ ಪ್ರತ್ಯಕ್ಷವಾಗಿ ಈ ಅಧ್ಯಯನದಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

**ಡಾ. ಎನ್. ಚಿನ್ನಸ್ವಾಮಿ ಸೋಸಲೆ**

## ಬಯಲನು ತುಂಬುವ ಆಲಯದ ಬೆಳಕಿನ ಬೀಜಗಳು

ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಂಸ್ಕೃತಿಯ ಬಹುತ್ವದ ನೆಲೆಗಳನ್ನು ಹುಡುಕುವ, ಗಟ್ಟಿಗೊಳಿಸುವ, ಹರಡುವ ಕಾಯಕವನ್ನು ನೋಂಪಿಯಂತೆ ನಡೆಸಿಕೊಂಡು ಬಂದಿದೆ. ಕನ್ನಡ ಸಂಸ್ಕೃತಿಯನ್ನು ಮತ್ತೆ ಮತ್ತೆ ನಿರ್ವಚನ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಒಂದು ಆಡುಂಬೊಲವಾಗಿ ಕಾರ್ಯ ನಿರ್ವಹಿಸುತ್ತಿದೆ. ನಮಗೆ ಗೊತ್ತಿರುವ ಸಂಸ್ಕೃತಿಯ ಅರ್ಥಗಳ ಆಚೆಗೆ ಅನೂಹ್ಯ ಲೋಕಗಳ ಕಡೆಗೆ ತನ್ನನ್ನು ಮತ್ತು ಕನ್ನಡಿಗರನ್ನು ಒಯ್ಯುವ ಪಯಣದ ದಾರಿಗಳನ್ನು ರೂಪಿಸುವ ಮಹತ್ವದ ಸಾಹಸದ ಹೆಜ್ಜೆಗಳು ಮೂಡಿಬಂದಿವೆ. ಇದು ನಿರಂತರ ನಡೆಯಬೇಕಾದ ಬಹುದಾರಿಗಳ ಮಹಾಯಾನ.

ಇಪ್ಪತ್ತೊಂದನೆಯ ಶತಮಾನದ ಆರಂಭದಲ್ಲಿ ಜಾಗತೀಕರಣದ ಈ ಸಂಕ್ರಮಣ ಸ್ಥಿತಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ರಚನೆ ಮತ್ತು ಕಾರ್ಯಗಳು ಸವಾಲಿನವು ಮತ್ತು ಜವಾಬ್ದಾರಿಯವೂ ಆಗಿವೆ. 'ಕನ್ನಡ' ಎನ್ನುವ ಪರಿಕಲ್ಪನೆಯನ್ನು ಭಾಷೆ, ಸಾಹಿತ್ಯ, ಬದುಕು ಮತ್ತು ಅದರ ಆಧುನಿಕ ಸನ್ನಿವೇಶಗಳಲ್ಲಿ ಅರ್ಥೈಸುವ ಮತ್ತೆ ಕಟ್ಟುವ ಕೆಲಸವನ್ನು ಕನ್ನಡ ವಿಶ್ವವಿದ್ಯಾಲಯ ಒಂದು ಕಾಯಕದಂತೆ ಕೈಗೆತ್ತಿಕೊಂಡಿದೆ. ಕನ್ನಡ ಮತ್ತು ಅಭಿವೃದ್ಧಿ ಎನ್ನುವ ಎರಡು ಪರಿಕಲ್ಪನೆಗಳು ಎದುರುಬದುರಾಗುವ ಆತಂಕ ಒಂದು ಕಡೆಯಾದರೆ, ಅವು ಒಂದನ್ನೊಂದು ಪ್ರಭಾವಿಸಿ ನೆರವಾಗುವ ಆವರಣವನ್ನು ನಿರ್ಮಾಣ ಮಾಡುವುದು ಇನ್ನೊಂದೆಡೆ ಇರುತ್ತದೆ. ಇಂತಹ ಸಂದರ್ಭದಲ್ಲಿ ಕನ್ನಡ ವಿಶ್ವವಿದ್ಯಾಲಯವು ಈ ಸಂಬಂಧಿಯಾದ ಹೊಸ ಆಲೋಚನೆಗಳ ಸಂವಾದ ಮತ್ತು ಅದರ ಆನ್ವಯಿಕ ಸಾಧನೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಬಯಸಿದೆ.

ಮಾಹಿತಿ ತಂತ್ರಜ್ಞಾನವು ಜಾಗತೀಕರಣದ ಪ್ರಮುಖ ಅಸ್ತ್ರವಾಗಿ ಪ್ರಯೋಗವಾಗುತ್ತಿರುವಾಗ ಈ ಅಸ್ತ್ರವನ್ನು ಕನ್ನಡದ ಅಭಿವೃದ್ಧಿಗಾಗಿ ಬಳಸುವ ಹೊಣೆಗಾರಿಕೆಯು ಕನ್ನಡ ವಿಶ್ವವಿದ್ಯಾಲಯದ ಮೇಲೆ ಇದೆ. ಕನ್ನಡ ತಂತ್ರಾಂಶಗಳ ಅಭಿವೃದ್ಧಿಯ ಎಲ್ಲಾ ತೊಡಕುಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕೆನ್ನುವ ಉದ್ದೇಶದಿಂದ ಕನ್ನಡ ವಿಶ್ವವಿದ್ಯಾಲಯ ಈ ಸಂಬಂಧ ಸಾಹಿತಿಗಳ, ಭಾಷಾತಜ್ಞರ, ತಂತ್ರಜ್ಞರ ಸಮಾಲೋಚನೆಯನ್ನು ನಡೆಸಿ ಕನ್ನಡವು ಸರ್ವವ್ಯಾಪಿಯಾಗಿ ಬೆಳೆಯಲು ಶ್ರಮಿಸುತ್ತಿದೆ.

ಕನ್ನಡವು ಕಾಗದರಹಿತ ಮಾಧ್ಯಮದಲ್ಲಿ ಕಾಣಿಸಿಕೊಳ್ಳುತ್ತಿರುವಾಗಲೂ ಪುಸ್ತಕ ರೂಪದಲ್ಲಿ ಕನ್ನಡ ಕೃತಿಗಳ ಪ್ರಕಟಣೆ ಸಮಾನಾಂತರವಾಗಿ ಕ್ರಿಯಾಶೀಲವಾಗಿ ನಡೆಯುವುದು ಬಹಳ ಮುಖ್ಯವಾದದ್ದು. ತಾಂತ್ರಿಕ - ಮೌಖಿಕ ಮಾಧ್ಯಮದಲ್ಲಿ ಕನ್ನಡವು ಬಳಕೆಯಾಗುತ್ತಿರುವಾಗಲೇ ಕಾಗದದಲ್ಲಿ ಕನ್ನಡ ಅಕ್ಷರಗಳು ಮುದ್ರಣಗೊಂಡು ಕಣ್ಣಿಗೆ, ಕಿವಿಗೆ ಮತ್ತು ಮನಸ್ಸಿಗೆ ಕನ್ನಡವನ್ನು ಸಂವಹನಗೊಳಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯಬೇಕಿದೆ. ಇಲ್ಲಿ ಪ್ರಕಟಗೊಳ್ಳುವ ಮಾಧ್ಯಮದೊಂದಿಗೆ ಅಭಿವ್ಯಕ್ತಗೊಳ್ಳುವ ಚಿಂತನಾ ಶರೀರವೂ ಮುಖ್ಯವಾದದ್ದು. ಭಾಷೆ, ಸಾಹಿತ್ಯ, ಕಲೆಗಳು, ವಿಜ್ಞಾನ, ತಂತ್ರಜ್ಞಾನ, ಸಮಾಜವಿಜ್ಞಾನ ಎನ್ನುವ ಬೌದ್ಧಿಕ ಗಡಿರೇಖೆಗಳನ್ನು ಕಳಚಿಕೊಂಡು ಕನ್ನಡ ಜ್ಞಾನವು ಕನ್ನಡ ವಿಶ್ವವಿದ್ಯಾಲಯದಲ್ಲಿ ರೂಪುಗೊಳ್ಳುವ ಮತ್ತು ಪ್ರಕಟಗೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗವು ಇಂಥ ಪ್ರಕ್ರಿಯೆಯ ಅನಂತರೂಪಗಳನ್ನು ಸಾಕಾರಗೊಳಿಸುವ ಒಂದು ನವರಂಗ. ಈ ಪ್ರಕಟಣೆಗಳು ಚಿಂತನೆ ಮತ್ತು ಪ್ರಯೋಗಗಳ ಫಲಗಳಾಗಿರುವುದರ ಜೊತೆಗೆ ಕರ್ನಾಟಕವನ್ನು ಮತ್ತು ಕನ್ನಡ ಸಂಸ್ಕೃತಿಯನ್ನು ಇಪ್ಪತ್ತೊಂದನೆಯ ಶತಮಾನದುದ್ದಕ್ಕೂ ಮುನ್ನಡೆಸುವ ಬೆಳಕಿನ ಬೀಜಗಳಾಗಿವೆ. ಈ ಆಶಯದ ಹಿನ್ನೆಲೆಯಲ್ಲಿ ರೂಪಿತವಾಗಿರುವ ಪ್ರಸ್ತುತ ಕೃತಿ 'ಸಾಮ್ರಾಜ್ಯ ಮತ್ತು ಸಂಸ್ಥಾನ'.

ಪ್ರಾಚೀನ ಕಾಲದಲ್ಲಿ ಅರ್ಥೈಸುವುದೊಂದು ಶ್ರಮದಾಯಕ ಕೆಲಸ. ಆ ಕಾಲದ ಸಂಸ್ಕೃತಿ ಕುರಿತು ವ್ಯಾಖ್ಯಾನಿಸುವುದಂತೂ ಇನ್ನಷ್ಟು ಜಟಿಲವಾದುದು. ಚರಿತ್ರೆ ವಿಭಾಗವು ಕೈಗೆತ್ತಿಕೊಂಡ ಕರ್ನಾಟಕ ಸಂಸ್ಕೃತಿ ಅಧ್ಯಯನ ಕುರಿತ ಸರಣಿಯಲ್ಲಿ ನಾಲ್ಕನೆಯದಾದ 'ಸಾಮ್ರಾಜ್ಯ ಮತ್ತು ಸಂಸ್ಥಾನ' ಕೃತಿಯು ವಿಜಯನಗರ, ಇಕ್ಕೇರಿ, ಮೈಸೂರು ಅರಸರ ಕಾಲದ ಕರ್ನಾಟಕದ ಸಾಂಸ್ಕೃತಿಕ ಪರಿಸರದ ಚಿತ್ರಣವನ್ನು ಈ ಗ್ರಂಥದಲ್ಲಿ ಸ್ಪಷ್ಟವಾಗಿ ಮೂಡಿಸುತ್ತದೆ. ಇಂತಹ ಉಪಯುಕ್ತ ಕೃತಿಯನ್ನು ರಚಿಸಿಕೊಟ್ಟ ಡಾ. ಎನ್. ಚೆನ್ನಸ್ವಾಮಿ ಸೋಸಲೆ ಅವರಿಗೆ ನಮ್ಮ ಅಭಿನಂದನೆಗಳು.

**ಬಿ.ಎ. ವಿವೇಕ ರೈ**
ಕುಲಪತಿ

# ಭಾಗ ೧ - ವಿಜಯನಗರ ಸಂಸ್ಕೃತಿ ಚರಿತ್ರೆ

## ೧. ವಿಜಯನಗರದ ಸಂಕ್ಷಿಪ್ತ ಚರಿತ್ರೆ

ವಿಜಯನಗರದ ಕಲೆ, ಸಾಹಿತ್ಯ, ಆಚಾರ, ವಿಚಾರ, ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುವ ಮೊದಲು ಆ ಸಾಮ್ರಾಜ್ಯದ ಪ್ರಾರಂಭಿಕ ಇತಿಹಾಸದ ಅಧ್ಯಯನ ಅವಶ್ಯವೆನ್ನಿಸುತ್ತದೆ. ೧೩೩೬ರಲ್ಲಿ ವಿಜಯನಗರ ಸ್ಥಾಪನೆಯಾಯಿತೆಂದು ಆಧಾರಗಳಿಂದ ಹೇಳಿ ಕೊಂಡಿರುವ ನಾವು ಅದಕ್ಕೂ ಮುಂಚೆ ದಕ್ಷಿಣ ಭಾರತದಲ್ಲಿ ಪ್ರಮುಖವಾಗಿ ಆರು ಹಿಂದೂ ಸಾಮ್ರಾಜ್ಯಗಳು ರಾಜ್ಯವಾಳಿ ಮೆರೆದು ಅಳಿವಿನ ಸ್ಥಿತಿಯಲ್ಲಿದ್ದವೆಂದು ಹೇಳಬಹುದು. ಅವುಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

೧. ಯಾದವರ ರಾಜ್ಯ : ದೇವಗಿರಿ ಅವ ರಾಜಧಾನಿ. ಇದು ಮುಂದೆ ಬಂದಂತಹ ವಿಜಯನಗರ ಸಾಮ್ರಾಜ್ಯದ ಪಶ್ಚಿಮೋತ್ತರ ಭಾಗಗಳನ್ನು ವ್ಯಾಪಿಸಿತ್ತು.
೨. ಕಾಕತೀಯರ ರಾಜ್ಯ : ಓರಂಗಲ್ಲು ಇದರ ರಾಜಧಾನಿ.
೩. ಚೋಳರ ರಾಜ್ಯ : ತಂಜಾವೂರು ಅವರ ರಾಜಧಾನಿ
೪. ಪಾಂಡ್ಯರ ರಾಜ್ಯ : ಮಧುರೆ ಅವರ ರಾಜಧಾನಿ
೫. ಚೇರರ ರಾಜ್ಯ : ತಿರುವನಂತಪುರ, ಕೊಚ್ಚಿನ್, ಕಲ್ಲಿಕೋಟೆಯ ಪ್ರಾಂತ್ಯಗಳನ್ನು ಇದು ವ್ಯಾಪಿಸಿತ್ತು.
೬. ಹೊಯ್ಸಳರ ರಾಜ್ಯ : ಹಳೆಬೀಡು ಇವರ ರಾಜಧಾನಿಯಾಗಿತ್ತು.

ದೇವಗಿರಿಯ ಯಾದವರನ್ನು ಹೊಯ್ಸಳರಿಂದ ಈಗಿನ ಬೊಂಬಾಯಿ ಪ್ರಾಂತ್ಯದ ಮಧ್ಯೆ ಮತ್ತು ದಕ್ಷಿಣಭಾಗಗಳನ್ನು ಗೆದ್ದುಕೊಂಡಿದ್ದರು. ಕ್ರಿ.ಶ. ೧೨೯೪ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಯಾದವ ವಂಶಸ್ಥರನ್ನು ಸೋಲಿಸಿ ದೆಹಲಿಗೆ ಹಿಂದಿರುಗುವಾಗ ಆರುನೂರು ಮಣಗಳಷ್ಟು (ಒಂದು ಮಣವೆಂದರೆ ನಲವತ್ತು ಸೇರು) ಮುತ್ತುಗಳನ್ನೂ, ಒಂದು ಸಾವಿರ ಮಣಗಳಷ್ಟು ಬೆಳ್ಳಿಯನ್ನು, ಎರಡು ಮಣಗಳಷ್ಟು ವಜ್ರ, ಕೆಂಪು ಪಚ್ಚೆ, ನೀಲ ಮುಂತಾದ ರತ್ನಗಳನ್ನು ಹಾಗೆಯೇ ಸುಮಾರು ನಾಲ್ಕು ಸಾವಿರ ರೇಷ್ಮೆ ಬಟ್ಟೆಗಳ ಸುರುಳಿಗಳನ್ನು ಮುಂತಾದಂತಹ ಅಮೂಲ್ಯ ವಸ್ತುಗಳನ್ನು ಅಪಹರಿಸಿಕೊಂಡು ಹೋದನೆಂದು ಫರಿಷ್ತಾ ಸ್ಪಷ್ಟವಾಗಿ ತಿಳಿಸಿದ್ದಾನೆ.

೧೪ನೇ ಶತಮಾನದ ಪ್ರಾರಂಭದಲ್ಲಿ ಮುಸಲ್ಮಾನರು ದಕ್ಷಿಣ ಭಾರತಕ್ಕೆ ದಂಡಯಾತ್ರೆ ಕೈಗೊಂಡು ಪ್ರಸಿದ್ಧ ಹಿಂದೂ ಸಾಮ್ರಾಜ್ಯಗಳನ್ನು ಕೊಳ್ಳೆಹೊಡೆದರು, ಅಲ್ಲಾವುದ್ದೀನನ ಪ್ರಸಿದ್ಧ ಸೇನಾಧಿಪತಿಯಾಗಿದ್ದಂತಹ ಮಲ್ಲಿಕಾಫರನು ಕ್ರಿ.ಶ. ೧೩೦೬ ರಿಂದ ಕ್ರಿ.ಶ. ೧೩೩೦ರವರೆಗೆ ದಕ್ಷಿಣ ಭಾರತವನ್ನು ತನ್ನ ಹತೋಟಿಗೆ ಒಳಪಡಿಸಿಕೊಳ್ಳಲು ಪ್ರಯತ್ನಿಸಿದನು. ದೇವಗಿರಿಯನ್ನು ಗೆದ್ದು ಅಲ್ಲಿಯ ರಾಜನನ್ನು ಶೂಲಕ್ಕೇರಿಸಿದನು. ತದನಂತರ ಓರಂಗಲ್ಲಿನ ಉತ್ತರ ಪ್ರಾಂತ್ಯವನ್ನು ಜಯಿಸಿದನು. ಮುಂದುವರೆದು ಕೇರಳದ ಅನೇಕ ದೇವಾಲಯಗಳನ್ನು ನಾಶ ಮಾಡಿ ತನ್ನ ಪ್ರತಿನಿಧಿಯನ್ನು ರಾಮೇಶ್ವರದಲ್ಲಿ ಸ್ಥಳ ಊರಿಸಿದನು. ಪಾಂಡ್ಯ ರಾಜ್ಯಕ್ಕೆ ಬಂದು ವಿಶ್ವವಿಖ್ಯಾತ ಮಧುರೆ ದೇವಾಲಯವನ್ನು ಕೊಳ್ಳೆಹೊಡೆದನು. ವೀರಕಂಪಣ್ಣನ ರಾಣಿ ಕವಯತ್ರಿ ಗಂಗಾದೇವಿಯ ತನ್ನ ಮಧುರಾವಿಜಯಂ ಎಂಬ ಐತಿಹಾಸಿಕ ಕಾವ್ಯದಲ್ಲಿ ಈ ಮೇಲ್ಕಂಡ ಸ್ಥಳಗಳಲ್ಲದೆ. ಶ್ರೀರಂಗ ಮೊದಲಾದ ಸ್ಥಳಗಳು ಇವರ ದಬ್ಬಾಳಿಕೆಗೆ ಹಾಳಾದುದನ್ನು ತುಂಬ ದುಃಖಕರವಾದ ರೀತಿಯಲ್ಲಿ ವರ್ಣಿಸಿದ್ದಾಳೆ.

ಉತ್ತರ ಭಾರತವನ್ನಾಳುತ್ತಿದ್ದಂತಹ ಮುಸ್ಲಿಂ ದೊರೆ ಮಹಮದ್ ಬಿನ್ ತುಘಲಕ್ ಕಾಲದಲ್ಲಿಯೇ ಅವನ ಸಾಮ್ರಾಜ್ಯದಲ್ಲಿ ಒಡಕು ಹುಟ್ಟಿಕೊಂಡಿತು. ಈ ದೃಷ್ಟಿಯಿಂದ ದಕ್ಷಿಣ ಭಾರತದಲಿದ್ದಂತಹ ಮುಸ್ಲಿಂ ರಾಜ್ಯಗಳಲ್ಲಿ ಒಡಕುಂಟಾಯಿತು. ಅಖಂಡವಾಗಿದ್ದಂತಹ ದಕ್ಷಿಣದ ಮುಸ್ಲಿಂ ರಾಜ್ಯವು ಗುಲ್ಬರ್ಗಾ, ಬಿಜಾಪುರ, ಗೋಲ್ಕಂಡ, ಅಹಮದ್ ನಗರ, ಬೀದರ್‌ಗಳಾಗಿ ವಿಂಗಡಣೆಯಾಯಿತು. ಮಲ್ಲಿಕಾಫರನ ಕನಸು ನುಚ್ಚು ನೂರಾಯಿತು. ಇದೇ ವೇಳೆಗೆ ದೆಹಲಿಯ ಸುಲ್ತಾನರಿಗೆ ತಿಳಿಯದೆಯೇ ದಕ್ಷಿಣದ ಹಿಂದೂ ಸಾಮ್ರಾಜ್ಯವೆನ್ನಿಸಿಕೊಂಡಿದ್ದಂತಹ ಹೊಯ್ಸಳರ ರಾಜ್ಯವು ಸಂಗಮ ವಂಶದ (ವಿಜಯನಗರ ಪ್ರಾರಂಭಿಕ ದೊರೆಗಳ ವಂಶ) ರಾಜರಿಗೆ ಹಸ್ತಾಂತರವಾಯಿತು. ದಕ್ಷಿಣ ಭಾರತದಲ್ಲಿನ ಮಧುರೆಯಲ್ಲಿದ್ದಂತಹ ದೆಹಲಿಯ ಪ್ರತಿನಿಧಿಗೂ ಇದು ತಿಳಿದಿರಲಿಲ್ಲ. ಹಕ್ಕಬುಕ್ಕ ಎಂಬ ಸಹೋದರರು ವಿದ್ಯಾರಣ್ಯ ಮತ್ತು ವೇದಾಂತ ದೇಶಿಕರ ಸಹಾಯದಿಂದಾಗಿ ೧೩೩೬ರಲ್ಲಿ ವಿಜಯನಗರ ರಾಜ್ಯವನ್ನು ಸ್ಥಾಪಿಸಿ ರಾಜ್ಯವನ್ನಾಳತೊಡಗಿದರು.

ಅನೇಕ ರಾಜಕೀಯ ಒತ್ತಡದಲ್ಲಿ ಉದಯಿಸಿದ ವಿಜಯನಗರ ರಾಜ್ಯವು ಸುಮಾರು ನಾಲ್ಕು ಶತಮಾನಗಳ ಕಾಲ ತನ್ನದೇ ಆದಂತಹ ತತ್ವ ಹಾಗೂ ಪರಾಕ್ರಮದಿಂದಾಗಿ ಆಳ್ವಿಕೆ ಮಾಡಿ ಬೃಹತ್ ಸಾಮ್ರಾಜ್ಯವೆನ್ನಿಸಿಕೊಂಡು ಭಾರತದ ಚರಿತ್ರೆಯಲ್ಲಿಯೇ ಅಲ್ಲದೆ ಪ್ರಪಂಚದ ಚರಿತ್ರೆಯ ಪುಟಗಳಲ್ಲಿ ತನ್ನ ಛಾಪನ್ನು ಮೂಡಿಸಿ ಮರೆಯಾಗಿದೆ. ಇಂಥಹ ಬೃಹತ್ ಸಾಮ್ರಾಜ್ಯವನ್ನು ಕ್ರಮವಾಗಿ ನಾಲ್ಕು ವಂಶದವರು ಆಳ್ವಿಕೆ ಮಾಡಿದರೆಂದು ಆಧಾರಗಳಿಂದ ಆಳ್ವಿಕೆ ನಡೆಸಿದ ರಾಜ ವಂಶ ಹಾಗೂ ರಾಜರುಗಳನ್ನು ಪಟ್ಟಿಮಾಡುವುದಾದರೆ,

**ಸಂಗಮ ವಂಶ**

| | |
|---|---|
| ೧. ಒಂದನೆಯ ಹರಿಹರ | ಕ್ರಿ.ಶ. ೧೩೦೫ - ೧೪೦೧ |
| ೨. ಒಂದನೆಯ ಬುಕ್ಕರಾಯ | ಕ್ರಿ.ಶ. ೧೩೦೫ - ೧೪೦೧ |
| ೩. ಎರಡನೆಯ ಹರಿಹರ | ಕ್ರಿ.ಶ. ೧೩೭೭ - ೧೪೦೪ |
| ೪. ಎರಡನೆಯ ಬುಕ್ಕರಾಯ | ಕ್ರಿ.ಶ. ೧೪೦೪ - ೧೪೦೬ |
| ೫. ಒಂದನೆಯ ದೇವರಾಯ | ಕ್ರಿ.ಶ. ೧೪೦೬ - ೧೪೨೨ |
| ೬. ವೀರ ವಿಜಯರಾಮ | ಕ್ರಿ.ಶ. ೧೪೨೨ - ೧೪೨೩ |
| ೭. ಪ್ರೌಢದೇವರಾಯ | ಕ್ರಿ.ಶ. ೧೪೨೩ - ೧೪೪೭ |
| ೮. ಮಲ್ಲಿಕಾರ್ಜುನರಾಯ | ಕ್ರಿ.ಶ. ೧೪೪೭ - ೧೪೬೫ |
| ೯. ವಿರೂಪಾಕ್ಷರಾಯ | ಕ್ರಿ.ಶ. ೧೪೬೫ - ೧೪೮೫ |

**ಸಾಳ್ವವಂಶ**

| | |
|---|---|
| ೧೦. ಸಾಳ್ವ ನರಸಿಂಹ | ಕ್ರಿ.ಶ. ೧೪೭೮ - ೧೪೯೦ |
| ೧೧. ಇಮ್ಮಡಿ ನರಸಿಂಹ | ಕ್ರಿ.ಶ. ೧೪೯೦ - ೧೫೦೩ |

**ತುಳುವ ವಂಶ**

| | |
|---|---|
| ೧೨. ವೀರ ನರಸಿಂಹರಾಯ | ಕ್ರಿ.ಶ. ೧೫೦೩ - ೧೫೦೯ |
| ೧೩. ಕೃಷ್ಣದೇವರಾಯ | ಕ್ರಿ.ಶ. ೧೫೦೯ - ೧೫೩೦ |
| ೧೪. ಅಚ್ಯುತರಾಯ | ಕ್ರಿ.ಶ. ೧೫೩೦ - ೧೫೪೨ |
| ೧೫. ವೆಂಕಟದೇವರಾಯ | ಕ್ರಿ.ಶ.೧೫೪೨ - ೧೫೪೩ |
| ೧೬. ಸದಾಶಿವರಾಯ | ಕ್ರಿ.ಶ. ೧೫೪೩ - ೧೫೭೦ |

**ಅರವಿಡು ವಂಶ**

| | |
|---|---|
| ೧೭. ಅಳಿಯ ರಾಮರಾಯ | ಕ್ರಿ.ಶ. ೧೫೪೧ - ೧೫೬೯ |
| ೧೮. ತಿರುಮಲ ದೇವರಾಯ | ಕ್ರಿ.ಶ. ೧೫೬೯ - ೧೫೭೨ |
| ೧೯. ಶ್ರೀರಂಗರಾಯ | ಕ್ರಿ.ಶ. ೧೫೭೨ - ೧೫೮೫ |
| ೨೦. ವೆಂಕಟಪತಿ | ಕ್ರಿ.ಶ.೧೫೮೫ - ೧೬೧೪ |
| ೨೧. ರಂಗರಾಯ | ಕ್ರಿ.ಶ. ೧೬೧೪ - ೧೬೭೮ |
| ೨೨. ಪೆದ್ದ ವೆಂಕಟಪತಿರಾಯ (ಅಥವಾ ಗೋಪಾಲರಾಯ) | ಕ್ರಿ.ಶ. ೧೬೭೮ - ೧೬೮೦ |

ವಿಜಯನಗರ ಸಾಮ್ರಾಜ್ಯವು ಕ್ರಿ.ಶ. ೧೩೦೫ ರಿಂದ ಕ್ರಿ.ಶ. ೧೬೮೦ರವರೆಗೆ ಒಟ್ಟು ೩೭೫ ವರ್ಷಗಳ ಕಾಲ ಕನ್ನಡನಾಡಿನಲ್ಲಿ ತನ್ನ ಏಳುಬೀಳುಗಳನ್ನು ಕಂಡಿತು. ಒಟ್ಟಾರೆ ಹೇಳುವುದಾದರೆ ಈ ಸಾಮ್ರಾಜ್ಯವು ಮೊದಲನೆಯ ಮತ್ತು ಎರಡನೆಯ ವಂಶಗಳ ಆಳ್ವಿಕೆಯ ಕಾಲದಲ್ಲಿ ಹುಟ್ಟಿ ಬೆಳೆದು ಪ್ರಾಯಕ್ಕೆ ಬಂದಿತ್ತೆನ್ನಬಹುದು. ತುಳುವಂಶದ ಕಾಲದಲ್ಲಿ ಅದರಲ್ಲಿಯೂ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ತನ್ನ ವೈಭವದ ತುತ್ತತುದಿಯನ್ನು ಮುಟ್ಟಿ ವಿಶ್ವದಲ್ಲೆಲ್ಲ ಬೆಳಗಿತು ಎಂದರೆ ತಪ್ಪಾಗದು. ಕೃಷ್ಣದೇವರಾಯನ ನಂತರ ಸಂಸ್ಥಾನವು ಕ್ಷೀಣಸ್ಥಿತಿಗೆ ಆರಂಭಿಸಿತು. ಕ್ರಿ.ಶ. ೧೫೬೫ರಲ್ಲಿ ನಡೆದಂತಹ ರಕ್ಕಸ ತಂಗಡಿಗೆ (ತಾಳೀಕೋಟೆ) ಯುದ್ಧದಲ್ಲಿ ಮುಸಲ್ಮಾನ್ ರಾಜ್ಯಗಳಿಂದ ಸೋಲನ್ನು ಅನುಭವಿಸಿತು. ಇದರ ನಂತರವೂ ಅದು ಸಂಪೂರ್ನವಾಗಿ ನಶಿಸಿಹೋಗದೆ ಸುಮಾರು ೧೧೫. ವರ್ಷಗಳ ಕಾಲ ತನ್ನದೆ ಆದಂತಹ ಮಿತಿಯಲ್ಲಿ ಮುಂದುವರೆದು ಕ್ರಿ.ಶ. ೧೬೮೦ರಲ್ಲಿ ಸಂಪೂರ್ಣವಾಗಿ ಅಂತ್ಯವನ್ನು ಕಂಡಿತು.

ಅರವೀಡು ವಂಶದ ಪ್ರಸಿದ್ಧ ದೊರೆ ತಿರುಮಲ ದೇವನ ಕಾಲದವರೆವಿಗೂ ಹಂಪಿಯ ವಿರೂಪಾಕ್ಷನ ಅಂಕಿತವು ರಾಜಶಾಸನಗಳಲ್ಲಿ ಅಳಿಯದೆ ಉಳಿದಿದ್ದಿತು. ಅನಂತರವೇ ತಿರುಪತಿಯ ವೆಂಕಟರಮಣನ ಹೆಸರಿನಲ್ಲಿ ಶಾಸನಗಳು ಬರಲಾರಂಭಿಸಿದವೆಂದು ಇತಿಹಾಸಗಾರರು ಅಭಿಪ್ರಾಯಪಡುತ್ತಾರೆ. ಇಂದಿಗೂ ದಿನನಿತ್ಯದ ಜ್ವಲಂತ ಸಮಸ್ಯೆಯಾಗಿರುವ ಕರ್ನಾಟಕ ಮತ್ತು ಆಂಧ್ರ ಭಾಗದ ಗಡಿ ಸಮಸ್ಯೆ ಹಾಗೂ ಭಾಷೆಯ ಸಮಸ್ಯೆಯೂ ಕೂಡ ಈ ಕಾಲದಲ್ಲಿಯೇ ತಲೆದೋರಿತೆಂದು ಹೇಳುತ್ತಾರೆ, ರಾಮರಾಯನಿಗೆ ತೆಲುಗು ಭಾಷೆಯಲ್ಲಿ ಪಕ್ಷಪಾತವಿತ್ತೆಂದು ಹೇಳಬಹುದು. ಏಕೆಂದರೆ ಇವನು ತೆಲುಗು ನಾಡಿನವನಾಗಿದ್ದು ತದನಂತರ ಕನ್ನಡನಾಡಿನೆಡೆಗೆ ಬಂದು ಕೃಷ್ಣದೇವರಾಯ ಮತ್ತು ಅಚ್ಯುತರಾಯರೊಡನೆ ಬೆಳೆಸಿದ್ದಂತಹ ಬಾಂಧವ್ಯದಿಂದ ಆತನು ಕನ್ನಡನಾಡಿನಲ್ಲಿ ಬೇರೂರಲು ಕಾರಣನಾದನು. ಅಚ್ಯುತರಾಯನ ಆಸಕ್ತಿಯಿಂದಾಗಿ ಅವನು ಪ್ರವರ್ಧಮಾನಕ್ಕೆ ಬಂದಿದ್ದನು. ಕೃಷ್ಣ ದೇವರಾಯನು ತೆಲುಗಿನಲ್ಲಿಯೂ ಅದ್ಭುತವಾದಂತಹ ಪಾಂಡಿತ್ಯವನ್ನು ಪಡೆದು ಐತಿಹಾಸಿಕ ಗ್ರಂಥಗಳನ್ನು ರಚಿಸಿರುವುದರಿಂದ (ಅಮುಕ್ತಮೌಲ್ಯದ ಜಾಂಬವತೀ ಪರಿಣಯ) ಅವನಿಗೆ ಯಾವ ಭಾಷೆಯ ಪಕ್ಷಪಾತವಾಗಲಿ ಇರಲಿಲ್ಲವೆಂದು ಹೇಳಬಹುದು. ಒಂದು ಕಡೆಯಿಂದ ಭಾವ ಮೈದುನನೂ, ಇನ್ನೊಂದು ಕಡೆಯಿಂದ ಅಳಿಯನೂ ಆದ ಅರವೀಡು ವಂಶದ ರಾಮರಾಯನು ಕೃಷ್ಣದೇವರಾಯನ ಕಾಲದಲ್ಲಿ ತಲೆಎತ್ತಲಿಲ್ಲ. ಇತ್ತೀಚಿನ

ಇತಿಹಾಸಗಾರರು ಅಭಿಪ್ರಾಯ ಪಡುವಂತೆ ವಿಜಯನಗರ ಕ್ಷೀಣತೆಯ ಅಚ್ಯುತರಾಯನ ಕಾಲದಲ್ಲಿಯೇ ಪ್ರಾರಂಭವಾಯಿತೆಂದು ಹೇಳುತ್ತಾರೆ. ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿಕೊಂಡರೆ ಈ ವಿಷಯದಲ್ಲಿ ಸತ್ಯಾಂಶವನ್ನು ಕಾಣಬಹುದಾಗಿದೆ.

ಅತಿಯಾದ ಬಹಮನಿ ರಾಜ್ಯಗಳೊಂದಿಗಿನ ಬಾಂಧವ್ಯಗಳು, ಇದನ್ನು ದುರುಪಯೋಗ ಪಡಿಸಿಕೊಂಡು ಅವರ ಕುತಂತ್ರಿಕೆಗಳು ಮತ್ತು ವಿಜಯನಗರದ ಆಡಳಿತದಲ್ಲಿ ತಲೆದೋರಿದ ದುರಾಚಾರಗಳು ಪ್ರಮುಖವಾಗಿ ವಿಜಯನಗರದ ದೌರ್ಬಲ್ಯಕ್ಕೆ ಪ್ರಮುಖ ಕಾರಣಗಳಾದವು. ರಾಜ್ಯವನ್ನು ಸ್ಥಾಪಿಸುವ ಸಮಯದಲ್ಲಿದ್ದ ಬಲವಾದ ಹಿಂದೂ ಧರ್ಮವು ಕೊನೆಯಲ್ಲಿ ಅನೇಕ ತೊಂದರೆಗೆ ಸಿಲುಕಿಕೊಂಡು ಬಲಹೀನವಾಯಿತು. ಇದು ಹಿಂದೂ ಸಾಮಂತರ ಬೆಂಬಲವನ್ನು ಸಂಪೂರ್ಣವಾಗಿ ಕಳೆದುಕೊಂಡಿತು. ಮುಸ್ಲಿಮರ ದಬ್ಬಾಳಿಕೆಯು ಮನೆಗೆ ನುಗ್ಗಿದ ಮಾರಿಯಂತೆ ಸಾಮ್ರಾಜ್ಯವನ್ನು ನಾಶಮಾಡಿತು. ಆದರೆ ಇಂದು ನಾಶವಾಗಿರುವ ಹಂಪಿಗೆ, ಅದರ ದೇವಸ್ಥಾನಗಳೂ ಕೋಟೆಕೊತ್ತಲಗಳು ನಾಶವಾದುದಕ್ಕೆ ಕೇವಲ ಮುಸ್ಲಿಮರ ದಾಳಿಯೊಂದೇ ಕಾರಣವೆಂದು ನಮ್ಮ ಇತಿಹಾಸಕಾರರು ಉಲ್ಲೇಖಿಸಿರುವುದು. ಹೆಚ್ಚಾಗಿ ಕಂಡುಬರುತ್ತದೆ. ಆದರೆ ಹಂಪಿಯ ಅಂದಿನ ಸ್ಥಿತಿಗೆ ಮುಸ್ಲಿಂರ ದಾಳಿಗಿಂತಲೂ ಹೆಚ್ಚಾಗಿ ಶತಮಾನಗಳಿಂದಲೂ ತಮ್ಮ ಅಸೂಯೆಯನ್ನು ತೋರಿಸಲು ಬೇಡರು ಹಾಗೂ ಸ್ಥಳೀಯ ಜನರೇ ಕಾರಣವೆಂದು ಚರಿತ್ರಕಾರರು ಹೇಳಿರುವ ಹೇಳಿಕೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗದು. ಇದಕ್ಕೆ ನಿದರ್ಶನವೆಂದರೆ ರಕ್ಕಸತಂಗಡಿ ಯುದ್ಧದ ನಂತರ ಏನೆಲ್ಲಾ ನಾಶವಾದರೂ ಹಂಪಿಯ ವಿರೂಪಾಕ್ಷ ದೇವಾಲಯಕ್ಕೆ ಸ್ವಲ್ಪವೂ ಅಪಾಯವಾಗಿಲ್ಲದಿರುವುದು ಅನೇಕ ಚರ್ಚೆಗೆ ಎಡೆಮಾಡಿಕೊಡುತ್ತದೆ.

ವಿಜಯನಗರದ ಅರಸರಲ್ಲಿಯೇ ಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟವರೆಂದರೆ ಸಂಗಮ ವಂಶಸ್ಥರು. ಅದರಲ್ಲಿಯೂ ಮಹಾರಾಜಾಧಿರಾಜ ಪರಮೇಶ್ವರ ಎಂಬ ಬಿರುದಾಂಕಿತನಾಗಿದ್ದ ಎರಡನೆಯ ಹರಿಹರನೂ, ಒಂದನೇಯ ದೇವರಾಯನೂ ಪ್ರಸಿದ್ಧರಾಗಿದ್ದಾರೆ. ತದನಂತರ ಸಾಳ್ವ ಮನೆತನದಲ್ಲಿ ನರಸಿಂಹರಾಯನು ಹೆಸರುವಾಸಿಯಾದರೆ, ತುಳು ಅರಸರ ಮನೆತನದಲ್ಲಿ ಕೃಷ್ಣದೇವರಾಯ, ಅಚ್ಯುತರಾಯ ಹೆಚ್ಚಾಗಿ ಬೆಳಕಿಗೆ ಕಂಡುಬರುತ್ತಾರೆ. ಕೊನೆಯ ವಂಶ ಅರವೀಡುವಿನಲ್ಲಿ ಅಳಿಯ ರಾಯರಾಯ, ತಿರುಮಲ ದೇವರಾಯ, ವೆಂಕಟಪತಿರಾಯ ಮುಖ್ಯರಾಗಿದ್ದಾರೆ.

ಎರಡನೇ ಹರಿಹರನ ಐದು ಜನ ಮಹಾಮಂತ್ರಿಗಳಾಗಿದ್ದ ಸಯನಾಚಾರ್ಯರು, ಮಾಧವಚಾರ್ಯರು (ವೇದಭಾಷ್ಯದ ಕರ್ತೃ) ಮುದ್ದಪ್ಪ ದಂಡನಾಥ, ಇರುಗಪ್ಪ ದಂಡನಾಥ (ಗಾಣಗಿತ್ತಿ ದೇವಸ್ಥಾನವನ್ನು ಕಟ್ಟಿಸಿದವನು), ಗುಂಡಪ್ಪ ದಂಡನಾಥ ಮುಂತಾದವರು ರಾಜ್ಯವನ್ನು ಸುಭದ್ರಗೊಳಿಸಿ ಅಭಿವೃದ್ಧಿಯ ಪಥದತ್ತ ಕೊಂಡೊಯ್ದರು, ಶಂಕರಾಚಾರ್ಯರ ಸೌಂದರ್ಯಲಹರಿಗೆ ಟಿಪ್ಪಣಿ ಬರೆದಂತಹ ಲಕ್ಷ್ಮಣನು ಒಂದನೆಯ ದೇವರಾಯನ ಆಸ್ಥಾನದಲ್ಲಿ ಮಂತ್ರಿಯಾಗಿದ್ದನು. ಇವನು ಹಂಪಿಯ ಸಮೀಪದಲ್ಲಿರುವ ಮಾಲ್ಯವಂತ ಬೆಟ್ಟದ ಮೇಲೆ ವಿನಾಯಕನನ್ನು ಪ್ರತಿಸ್ಥಾಪಿಸಿದನು. ವಿಜಯನಗರದ ರಾಜಧಾನಿಯಾಗಿದ್ದ ವಿದ್ಯಾರಣ್ಯಕ್ಕೆ ಭದ್ರವಾದ ಕೋಟೆಕೊತ್ತಲುಗಳನ್ನು ಕಟ್ಟಿಸಿದನು. ತುಂಗಭದ್ರೆಯಿಂದ ಅರಮನೆಯ ಸಮೀಪಕ್ಕೆ ನೀರು ಸರಬರಾಜಾಗುವಂತೆ ಕಾಲುವೆಗಳನ್ನು ಕಲ್ಲಿನ ಕೊಳವೆಗಳನ್ನು ಹಾಕಿಸಿದನು. ಕೆಲವು ಮೂಲಗಳ ಪ್ರಕಾರ ರಾಜ್ಯಕ್ಕೆ ೧೨ ಲಕ್ಷ ವರಮಾನವು ಬರುವಂತೆ ಅಣೆಕಟ್ಟುಗಳನ್ನು ವಿಸ್ತರಿಸಿದನೆಂದು ತಿಳಿದುಬರುತ್ತದೆ.

ಎರಡನೆಯ ದೇವರಾಯನು ಸಿಂಹಳ ದ್ವೀಪದವರೆವಿಗೂ ಸಮುದ್ರಯಾನವನ್ನು ಮಾಡಿದ್ದನು. ಹಾಗೆಯೇ ಜೈನ ಮತೋದ್ಧಾರಕನಾಗಿದ್ದ ರಾಜಧಾನಿ ವಿಜಯನಗರವನ್ನು ಕಲಾವೈಭವದಲ್ಲಿ ಸರ್ವತೋಮುಖವಾಗಿ ಊರ್ಜಿತಕ್ಕೆ ತಂದನು. ನಾಡಿನಲ್ಲಿ ನೀರಾವರಿಗಾಗಿ ಕೈಗೊಂಡ ಕ್ರಮಗಳು, ರಾಜಧಾನಿಯ ಶೃಂಗಾರಕ್ಕೆ, ಸೈನ್ಯವಿಸ್ತರಣೆಗೆ ಅವನು ತೆಗೆದುಕೊಂಡಂತಹ ಆಸಕ್ತಿಯಿಂದ ಕರ್ನಾಟಕ ಮತ್ತು ಆಂಧ್ರ ಸಂಸ್ಥಾನಗಳಲ್ಲಿ ಹೆಚ್ಚು ಪ್ರಖ್ಯಾತಿಗೆ ಬಂದನು. ಇದಕ್ಕಾಗಿಯೇ ಇವನನ್ನು 'ದಕ್ಷಿಣ ಸಮುದ್ರಾಧೀಶ್ವರ' ಪ್ರೌಢ ದೇವರಾಯ' 'ವೀರ ಪ್ರತಾಪ ದೇವರಾಯ' ಎಂಬಿತ್ಯಾದಿ ಬಿರುದುಗಳು ಇವನಿಗೆ ಬಂದಿದ್ದವು. ವಿದೇಶಿಯಾತ್ರಿಕರಾಗಿರುವ ಪೋರ್ಚುಗಲ್‌ನ ಅಬ್ದುಲ್ ರಜಾಕ್, ನಿಕಲೋ ಕೊಂಟಿ ಮುಂತಾದವರು ವಿಜಯನಗರಕ್ಕೆ ಭೇಟಿ ನೀಡಿದ್ದು ಇವನ ಕಾಲದಲ್ಲಿಯೇ 'ವಿಥಿನಾಟಕಂ' ಕಳಾಹಸ್ತಿ ಮಾಹಾತ್ಮ್ಯಂ' ಮುಂತಾಧ ಗ್ರಂಥಗಳ ರಚನಕಾರರಾದ ಮಹಾಕವಿ ಶ್ರೀನಾಥನು ಇವನ ಆಸ್ಥಾನದ ಕವಿಯಾಗಿದ್ದನು. ಸಂಗಮ ಮಲ್ಲಿಕಾರ್ಜುನ

ರಾಯನ ಯುವರಾಜನಾಗಿದ್ದಂತಹ ಸಾಳ್ವ ನರಸಿಂಹರಾಯನ ಕಾಲದಲ್ಲಿ ರಾಮಾಭ್ಯುದಯವೆಂಬ ಕರತಿಯ ಮೂಲಕ ಮಲ್ಲಿಕಾರ್ಜುನನ ದಿಗ್ವಿಜಯವು ವರ್ಣಿತವಾಗಿರುವುದು ಕಂಡುಬರುತ್ತದೆ.

ತುಳುವ ವಂಶದ ನರಸರಾಯ ವೀರನು, ಅಂದಿನ ಕಾಲದಲ್ಲಿಯೇ ಪ್ರವಾಹದಿಂದಾಗಿ ಅನೇಕ ತೊಂದರೆಗಳನ್ನು ಉಂಟುಮಾಡುತ್ತಿದ್ದ ಕಾವೇರಿ ನದಿಗೆ ಸೇತುವೆ ಹಾಗೂ ಅಡ್ಡಗೋಡೆಯನ್ನು ಕಟ್ಟಿಸಿದನೆಂದು ಇತಿಹಾಸವು ಉಲ್ಲೇಖಿಸುತ್ತದೆ. ಇವನ ಆಸ್ಥಾನದಲ್ಲಿ ಘಂಟಾಸಿಂಗಯ್ಯ, ನಂದಿಮಲ್ಲಯ್ಯರಂಥಹ ಕವಿಶ್ರೇಷ್ಠರಿದ್ದರು. ಇವನೊಬ್ಬ ಕಲಾಪ್ರೇಮಿಯಾಗಿದ್ದನ್ನಲ್ಲದೆ ವಿಜಯನಗರವನ್ನು ಒಂದು 'ಸಾಮ್ರಾಜ್ಯದ' ಮಟ್ಟಕ್ಕೆ ಕೊಂಡೊಯ್ದವನಾಗಿದ್ದನೆಂದು ತಿಳಿದುಬರುತ್ತದೆ. ಇವನ ನಂತರ ಬಂದ ದೊರೆ ಕೃಷ್ಣದೇವರಾಯ. ಇವನು ಸುಮಾರು ೨೮ ವರ್ಷಗಳ ಕಾಲ ಈ ನಾಡಿನಲ್ಲಿ ಇಲ್ಲಿನ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದನೆಂದು ಹೇಳಬಹುದು. ಇವನು ವಿಜಯನಗರ ಚರಿತ್ರೆಯಲ್ಲಿಯೇ ಪ್ರಖ್ಯಾತ ದೊರೆಯಾಗಿ ಕಂಗೊಳಿಸಿದ್ದಾನೆ. ಕೃಷ್ಣದೇವರಾಯನಿಗೆ ಒಬ್ಬ ಮಗನೂ ಇಬ್ಬರು ಹೆಣ್ಣು ಮಕ್ಕಳೂ ಇದ್ದರು. ತಿರುಮಲ ದೇವಿಯಿಂದ ಜನಿಸಿದ ತಿರುಮಲಾಂಬೆಯನ್ನು ಅರವೀಡು ರಾಮರಾಯನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮತ್ತೊಬ್ಬ ಹೆಂಡತಿ ಚಿನ್ನಾಂಬಿಕೆಗೆ ಜನಿಸಿದ ಮಂಗಳಾಂಬಿಕೆಯನ್ನು ರಾಯರಾಯನ ತಮ್ಮನಾದಂತಹ ತಿರುಮಲದೇವರಾಯನಿಗೆ ಮದುವೆ ಮಾಡಿಕೊಟ್ಟಿದ್ದನು. ಕ್ರಿ.ಶ. ೧೫೧೫ ರಲ್ಲಿ ಕೃಷ್ಣದೇವರಾಯನು ಶ್ರೀ ಶೈಲ ಯಾತ್ರೆ ಕೈಗೊಂಡು ಅಲ್ಲಿನ ಮಲ್ಲಿಕಾರ್ಜುನ ದೇವಾಲಯಕ್ಕೆ ಉತ್ತಮ ಶಿಲ್ಪಕಲಾಕೃತವಾದಂತಹ ಪ್ರಾಕಾರವನ್ನು ನಿರ್ಮಿಸಿದ್ದನು. (ಕಲೆ ಮತ್ತು ವಾಸ್ತುಶಿಲ್ಪ ಎಂಬ ಅಧ್ಯಯನದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ) ೧೫೧೬ರಲ್ಲಿ ಕೃಷ್ಣದೇವರಾಯನು ಕಳಿಂಗದ ಮೇಲೆ ದಿಗ್ವಿಜಯಕ್ಕೆ ಹೊರಟು ಪುತ್ತನೂರಿನಲ್ಲಿ ಜಯಸ್ತಂಭವನ್ನು ಸ್ಥಾಪಿಸಿದನು. ಕಾಳಹಸ್ತಿಯಲ್ಲಿ ನೂರು ಕಂಬಗಳ ಮಂಟಪವನ್ನೂ ಪೂರ್ವ ದಿಕ್ಕಿನ ಗೋಪುರವನ್ನು ಕಟ್ಟಿಸಿದ್ದ ಕೃಷ್ಣದೇವರಾಯ ನಂತರ ತಿರುಮಣ್ಣಮಲೆಗೂ ಹಾಗೂ ಚಿದಂಬರಕ್ಕೂ ಪ್ರಯಾಣ ಬೆಳೆಸಿದನು. ತಿರುಮಣ್ಣಾಮಲೆಯಲ್ಲಿ ಸಾವಿರ ಕಂಬಗಳ ಮಂಟಪವನ್ನು ನಿರ್ಮಿಸಿದ್ದನು. ಚಿದಂಬರಂನಲ್ಲಿರುವ ದೇವಾಲಯದ ಉತ್ತರ ದಿಕ್ಕಿನ ಬೃಹತ್ ಗೋಪುರವನ್ನು ಕಟ್ಟಿಸಿದನು. ಇದೆಲ್ಲವೂ ಸಹ ಸಾಹಿತ್ಯ ಹಾಗೂ ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಮೇಲೆ ತಿಳಿಸಿದ ದಿಗ್ವಿಜಯದಿಂದ ರಾಜಧಾನಿಗೆ ಹಿಂದಿರುಗಿದ ಕೃಷ್ಣದೇವರಾಯನು ರಾಜಧಾನಿ ವಿದ್ಯಾನಗರಕ್ಕೆ "ವಿಜಯನಗರ" ಎಂದು ನಾಮಕರಣ ಮಾಡಿದನು. ರಾಯನು ಸಂಸ್ಕೃತ ಹಾಗೂ ತೆಲುಗಿನಲ್ಲಿ ಉತ್ತಮ ಪಾಂಡಿತ್ಯ ಪಡೆದಿದ್ದನಲ್ಲದೆ ಆ ಭಾಷೆಯಲ್ಲಿಯೇ ಉತ್ತಮ ಕೃತಿಗಳನ್ನು ರಚಿಸಿದ್ದಾನೆ. ಜಾಂಬವತೀ ಕಲ್ಯಾಣಂ, ಮದಾಲಸಾಚರಿತ್ರಂ, ಸತ್ಯವಧೊಪ್ರೀಣನಂ, ರಸಮಂಜರಿ, ಜ್ಞಾನಚಿಂತಾಮಣಿ, ಸಕಲಕಥಾಸಾರ ಇವೇ ಮೊದಲಾದ ಸಂಸ್ಕೃತ ಕೃತಿಗಳ ಜೊತೆಗೆ ಅಮುಕ್ತಮೌಲ್ಯದ ಎಂಬುವ ಐತಿಹಾಸಿಕಗ್ರಂಥವನ್ನು ತೆಲುಗಿನಲ್ಲಿ ಬರೆದಿದ್ದಾನೆ. ಅಚ್ಚುತರಾಯನು ಕೂಡ ಕಲಾಪ್ರೇಮಿ, ಅವನು ಕಟ್ಟಿಸಿದ ದೇವಾಲಯಗಳಲ್ಲಿ ಹಂಪಿಯ ಅಚ್ಚುತರಾಯ ದೇವಾಲಯ, ಕಮಲಾಪುರದಲ್ಲಿರುವ ಪಟ್ಟಾಭಿರಾಯ ದೇವಾಲಯಗಳು ಇಂದಿಗೂ ಉಳಿದುಕೊಂಡಿವೆ.

ಅರವಿಡು ವಂಶದ ರಾಮರಾಯನ ರಾಣಿ ತಿರುಮಲಾಂಬಿಕೆ ಮೋಹನಾಂಬಿಕೆ ಎಂಬ ಇನ್ನೊಂದು ಹೆಸರಿದೆ. ಈ ಮೋಹನಾಂಬಿಕೆಯು ಕವಿಯಾಗಿದ್ದುದರಿಂದ 'ಮಾರೀಚಿ ಪರಿಣಯ' ಎಂಬ ಕೃತಿ ಹೊರಬಂದಿತು. ಸವತಃ ರಾಮರಾಯನಿಗೂ ಕಲೆ, ಸಂಗೀತದಲ್ಲಿ ಹೆಚ್ಚಿನ ಆಸಕ್ತಿ ಇದ್ದಂತೆ ಕಾಣುತ್ತದೆ. ಇವನ ಉತ್ತೇಜನದಿಂದಲೆ ರಾಗಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಸುವ ಉದ್ದೇಶದಿಂದಾಗಿ ತೋದರ ಮಲ್ಲರಾಂಯ್ಯ ಮಾತ್ಯನಿಂದ 'ಸರ್ವಮೇಳ ಕಳಾನಿಧಿ' ಎಂಬ ಸಂಗೀತ ಶಾಸ್ತ್ರವು ರಚಿತವಾಯಿತೆಂದು ನಂಬಲಾಗಿದೆ. ರಾಮರಾಯನ ತಮ್ಮ ತಿರುಮಲರಾಯನೂ ಸಹ ಸ್ವತಹ ಪಂಡಿತನಾದ್ದರಿಂದ ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದವನಾಗಿದ್ದನು. ಇವನು ಜಯದೇವನ 'ಗೀತ ಗೋವಿಂದ'ದ ಮೇಲೆ 'ಸ್ಮೃತಿರಂಜಿನಿ' ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ, ತೆನಾಲಿ ರಾಮಕೃಷ್ಣನೂ, ಶಾಸನದ ಕರ್ತನಾದಂತಹ ಕೃಷ್ಣಕವಿಯೂ ಇವನ ಆಸ್ಥಾನದಲ್ಲಿ ತಮ್ಮದೇ ಆದ ಪ್ರತಿಭೆಯನ್ನು ಪ್ರದರ್ಶಿಸಿದ್ದರು.

ಇವರೆಲ್ಲರ ಪರಿಶ್ರಮ ಮತ್ತು ಆಸಕ್ತಿಯಿಂದಾಗಿ ಅಂದು ಕರ್ನಾಟಕದ ಸಂಸ್ಕೃತಿ ವಿಶಿಷ್ಟ ದಿಕ್ಕಿನೆಡೆಗೆ ಮುಖ ಮಾಡುವಂತಾಯಿತು.

***

# ೧. ರಾಜಧಾನಿ ಮತ್ತು ಕೋಟೆಕೊತ್ತಲೆಗಳು

## ೧.೧ ಭೌಗೋಳಿಕ ಪರಿಸರ

ರಾಜಧಾನಿಯಾದ ವಿದ್ಯಾರಣ್ಯವು (ವಿದ್ಯಾನಗರ) ಹಂಪಿಯ ಸುಂದರ ಪ್ರದೇಶದಲ್ಲಿ ದಕ್ಷಿಣಗಂಗೆ ಎಂದು ಪ್ರಸಿದ್ಧವಾಗಿರುವ ತುಂಗಭದ್ರೆಯ ಮಡಿಲಿನಲ್ಲಿ ವಾಸ್ತುವಿನ ಕ್ರಮದಂತೆಯೇ ನಿರ್ಮಾಣವಾಗಿತ್ತು. ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ಹಿಂದೆ ಪ್ರಸ್ತಾಪಿಸಿರುವ ಹಾಗೆ ವಿಜಯನಗರವೆಂಬುದಾಗಿ ಮರುನಾಮಕರಣ ಹೊಂದಿತು. ಪ್ರಸಿದ್ಧ ವಾಸ್ತುಗ್ರಂಥವೆಂದು ಪರಿಗಣಿಸಿರುವ "ಶುಕ್ರನೀತಿ"ಯಲ್ಲಿ ರಾಜಧಾನಿಗಳ ರಚನಾಕ್ರಮದ ಬಗ್ಗೆ ಯಾವ ರೀತಿಯ ವರ್ಣನೆ ಕಂಡುಬರುತ್ತದೋ ಅದಕ್ಕೆ ತಕ್ಕಂತೆ ವಿಜಯನಗರ ಸಾಮ್ರಾಜ್ಯದ ರಾಜಧಾನಿಯು ನಿರ್ಮಾಣವಾಗಿರುವುದನ್ನೂ ಕಾಣಬಹುದು, ಶುಕ್ರನೀತಿಯ ಪ್ರಕಾರ ರಾಜಧಾನಿಯು ಸಮುದ್ರ ತೀರದಲ್ಲಿ, ಬೆಟ್ಟಗಳ ಸಮೀಪದಲ್ಲಿ, ಮೃಗಗಳು ಹಾಗೂ ಪಕಿಷಗಳು ಹೇರಳವಾಗಿರುವ ಕಡೆಯಲ್ಲಿ ವಿವಿಧ ರೀತಿಯ ಹೂವು ಹಣ್ಣುಗಳು ಬೆಳೆಯುವ ಕಡೆಗಳಲ್ಲಿ, ಆಹಾರಧಾನ್ಯವನ್ನು ಸಮೃದ್ಧಿಯಾಗಿ ಬೆಳೆಯುವ ಫಲವತ್ತಾದಂತಹ ಪ್ರದೇಶದಲ್ಲಿ, ಸಾಕು ಪ್ರಾಣಿಗಳಿಗೆ ಯೋಗ್ಯವಾದಂತಹ ಸಮತಲ ಪ್ರದೇಶದಲ್ಲಿ ರಾಜಧಾನಿಯನ್ನು ನಿರ್ಮಿಸಬೇಕೆಂದು ಸಾರುತ್ತದೆ. ಆದರೆ ವಿಜಯನಗರದ ರಾಜಧಾನಿಗೆ ಮೇಲಿನ ಎರಡು ಅಂಶಗಳು ಅಂದರೆ ಸಮುದ್ರ ತೀರ ಮತ್ತು ಸಮತಲದ ಲಕ್ಷಣಗಳು ಹೊರತುಪಡಿಸಿ ಮಿಕ್ಕ ಎಲ್ಲಾ ಲಕ್ಷಣಗಳು ಎರುವುದು ಕಂಡುಬರುತ್ತದೆ.

ಪಾಶ್ಚಾತ್ಯ ದೇಶದ ಪ್ರಮಾಣಿಕನಾದ ಪೇಸನು (Paes) ವಿಜಯನಗರಕ್ಕೆ ಭೇಟಿ ನೀಡಿದಾಗ 'ವಿಜಯನಗರವು ಬೆಟ್ಟಗುಡ್ಡಗಳ ನಡುವೆ ಕಂಗೊಳಿಸುತ್ತದೆ' ಎಂದು ಅಭಿಮಾನದಿಂದ ನುಡಿದಿದ್ದಾನೆ, ಅಷ್ಟೇ ಅಲ್ಲದೆ ಕೆಲವು ಬೆಟ್ಟಗಳು ಈ ಪಟ್ಟಣಕ್ಕೆ ಇಪ್ಪತ್ನಾಲ್ಕು ಮುಖ್ಯ ರಸ್ತೆಗಳ ದೂರದಲ್ಲೂ, ಇನ್ನೂ ಕೆಲವು ಬೆಟ್ಟಗಳು ರಾಜಧಾನಿಗೆ ಹತ್ತಿರದಲ್ಲೂ ಸುತ್ತುವರಿದಿವೆ. ಬೆಟ್ಟದ ಸಾಳುಗಳನ್ನು ಒಂದೊಂದಾಗಿ ದಾಟಿದಂತೆಲ್ಲ ಎಲ್ಲೆಲ್ಲಿ ಸಮತಟ್ಟಾದ ಪ್ರದೇಶಗಳಿರುವುವೋ ಅಲ್ಲೆಲ್ಲ ಶತ್ರುಗಳು ರಾಜಧಾನಿಗೆ ಸುಲಭವಾಗಿ ಧಾಳಿ ಮಾಡಲಾಗದಂತೆ ಬಲವಾದ ಬೃಹತ್ ಗೋಡೆಗಳನ್ನು ಕಟ್ಟಿಸಿದ್ದರಿಂದ ಮೊದಲನೆಯ ಪರ್ವತ ಶ್ರೇಣಿಯಲ್ಲಿ ನಿರ್ಮಿಸಿದ ಮಹಾದ್ವಾರಗಳ ಮೂಲಕ ಪ್ರವೇಶವನ್ನು ಹೊರತುಪಡಿಸಿದರೆ ಈ ಪಟ್ಟಣಕ್ಕೆ ಬೇರೆ ದಾರಿಗಳಿರಲಿಲ್ಲವೆಂದು ರಾಜಧಾನಿಯ ಬಿಗಿಭದ್ರತೆಯನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾನೆ. ಈ ನೂತನ ಪಟ್ಟವನ್ನು ತುಂಬ ಅದ್ಭುತವಾಗಿದೆ. ಒಂದು ಕಡೆ ಮೂರು ಕೋಟೆಗಳು, ಒಂದು ಕಡೆ ನದಿಯ ಅಂಚಿನಲ್ಲಿ ಭಯಂಕರವಾದಂತಹ ಕಾಡು. ಮತ್ತೊಂದು ಕಡೆ ಬೃಹತ್ ಕಣಿವೆ, ಮಗದೊಂದು ಕಡೆ ಕಾಡುಪ್ರಾಣಿಗಳು - ಇವು ಪಟ್ಟಣವನ್ನು ಸುತ್ತುವರಿದಿದ್ದುವೆಂದು ಪೇಸನು ರಾಜಧಾನಿಯ ಭದ್ರತೆಯನ್ನು ವಿವರವಾಗಿ ತನ್ನ ಪ್ರವಾಸಿ ಕಥನದಲ್ಲಿ ತಿಳಿಸಿದ್ದಾನೆ.

ಪ್ರಾಚೀನ ಕಾಲದಿಂದಲೂ ಹಿಂದೂ ಸಂಸ್ಕೃತಿಯಲ್ಲಿ 'ಸಪ್ತ' ಸಂಖ್ಯೆಗೆ ವಿಶಿಷ್ಟ ಸ್ಥಾನ ನೀಡಲಾಗಿದೆ. ಇದೊಂದು ರೀತಿಯಲ್ಲಿ ಬಹು ಅರ್ಥವನ್ನು ಸೂಚಿಸುವಂತಹ ಸಂಖ್ಯೆ ಎಂದೇ ಹೇಳಬಹುದು. ಸಪ್ತಸಮುದ್ರ ಸಪ್ತಸಾಗರ, ಸಪ್ತ ಮಹರ್ಷಿಗಳು, ಸಪ್ತ ಸ್ವರ, ಏಳುಕೋಟೆ (ಸಪ್ತಕೋಟೆ) ಹಾಗೆಯೇ ವಧೂವರರಿಗೆ ಲೋಕದಲ್ಲಿ ಸುಖಶಾಂತಿಯನ್ನು ನೀಡುವ ಸಪ್ತಪದಿ ಇವುಗಳಲ್ಲೆಲ್ಲವೂ ಸಪ್ತ ಸಂಖ್ಯೆಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆ ನೀಡಿರುವುದು ಕಂಡುಬರುತ್ತದೆ. ಮೇಲಿನ ಈ ಸಪ್ತದ ಸ್ವರೂಪವನ್ನು ಇಲ್ಲೇಕೆ ಪ್ರಸ್ಥಾಲಿಸಲಾಯಿತೆಂದರೆ ಹಂಪಿ ಪ್ರದೇಶದಲ್ಲಿ ಹೇಮಕೂಟ, ಸುಗ್ರೀವ, ಜಾಂಬವಂತ, ಋಷ್ಯಶೃಂಗ, ಅಂಜನೀ, ಮಾಲ್ಯವಂತ, ಮಾತಂಗ ಎಂಬ ಸಪ್ತ ಪರ್ವತಗಳು ಪವಿತ್ರ ಸ್ಥಾನಪಡೆದಿರುವುದನ್ನು ಇಂದಿಗೂ ಕಾಣಬಹುದಾಗಿದೆ. ಅಷ್ಟೇ ಅಲ್ಲದೆ ಈ ಸಪ್ತ ಪರ್ವತಗಳು ಕ್ಷಾಮ, ಶಮ, ದಮ, ತುಷ್ಟಿ, ಸತ್ಯ, ದಾನ, ಅಹಿಂಸಾಗಳಂತಹ ಸಪ್ತ ಮಾರ್ಗಗಳನ್ನು ಜನತೆಯಲ್ಲಿ ಬಿಂಬಿಸುವಂತಹ ಪ್ರತೀಕವಾಗಿದ್ದವೆನ್ನಬಹುದು. ಈ ಅಭಿಪ್ರಾಯವು ಹೆಚ್ಚಾಗಿ ಮೌಖಿಕವಾಗಿ ಸ್ಥಳೀಯವಾಗಿ ದೊರೆಯುತ್ತದೆ.

ರಾಜಧಾನಿಯ ನಿರ್ಮಾಣವನ್ನು ಒಂದನೆಯ ಹರಿಹರದೇವನು ಪ್ರಾರಂಭಿಸಿದ್ದನೆಂದು ಆಧಾರಗಳಿಂದ ತಿಳಿದುಬರುತ್ತದೆ. ಆದರೆ ಅವನ ಕಾಲದಲ್ಲಿ ಮುಗಿಯಲಿಲ್ಲ. ಮುಂದೆ ಬುಕ್ಕದೇವರಾಯನ ಕಾಲದಲ್ಲಿ ಮುಕ್ತಾಯವಾಗಿರಬೇಕೆಂದು ಕೆಲವು ಭೌಗೋಳಿಕ ಕಾರಣವೇ ಹಂಪಿಯನ್ನು ರಾಜಧಾನಿಯನ್ನಾಗಿ ಆಯ್ಕೆ ಮಾಡಿಕೊಳ್ಳಲು ಪ್ರೇರಣೆ ನೀಡಿತ್ತೇ ವಿನಃ ಇಲ್ಲಿವರೆಗೆ ನಾವು ಜನಪದರಿಂದ ಹಾಗೂ ಕೆಲವು

ಇತಿಹಾಸಗಾರರು ಗುರುತಿಸಿರುವ ಹಾಗೆ ಮೊಲ ನಾಯಿಗಳ ಬೇಟೆಯ ಕಥೆಯು ಪ್ರಮುಖ ಕಾರಣವಾಗಿರಲಿಲ್ಲವೆಂದೇ ಹೇಳಬಹುದು. ನಮ್ಮ ಜನತೆ ಪುರಾಣಮಿಶ್ರಿತವಾದ ಚರಿತ್ರೆಗೆ ಹೆಚ್ಚಿನ ಒತ್ತು ನೀಡುತ್ತಾರೆಯೇ ಹೊರತು. ಸತ್ಯವಾದ ಶುದ್ಧ ಚರಿತ್ರೆಗೆ ಹೆಚ್ಚಾಗಿ ಆಸಕ್ತಿ ವಹಿಸುವುದಿಲ್ಲ ಎಂದೇ ಹೇಳಬಹುದು.

ತುಂಗಭದ್ರ ನದಿಗೆ ಪಂಪಾನದಿ ಎಂಬ ಇನ್ನೊಂದು ಹೆಸರಿದೆ. ಇಲ್ಲಿನ ಕೆಲವು ಪವಿತ್ರ ಜಾಗವನ್ನು ಪಂಪ ತೀರ್ಥ, ಪಂಪ ಸರೋವರ, ಪಂಪ ಕ್ಷೇತ್ರಗಳ ತಾಣವೆಂದು ಗುರ್ತಿಸಲಾಗಿದೆ. ಪಶ್ಚಿಮ ಚಾಳುಕ್ಯ ರಾಜನಾಗಿದ್ದಂತಹ ವಿನಯಾದಿತ್ಯ ಸತ್ಯಾಶ್ರಯನು (ಕ್ರಿ.ಶ. ೬೮೯ - ೬೯೦) ತನ್ನ ಪ್ರಸಾದ ಪತ್ರದಲ್ಲಿ ಹಂಪಾ ಎಂಬ ಮಾತನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಹಾಗೆಯೇ ಪಶ್ಚಿಮ ಚಾಲುಕ್ಯರ ರಾಜನಾದ ಜಗದೇಕಮಲ್ಲ ಜಯಸಿಂಹನು ಪಂಪೆ(ಹಂಪೆ)ಯನ್ನು ಸಂದರ್ಶಿಸಿದ ಹಾಗೆ ಅವನ ಅನೇಕ ಶಾಸನಗಳಲ್ಲಿ (ಕ್ರಿ.ಶ. ೧೦೧೮ ರಿಂದ ೧೦೧೯) ಬರೆಸಿಕೊಂಡಿದ್ದಾನೆ. ಕ್ರಿ.ಶ. ೧೧ನೆಯ ಶತಮಾನದಲ್ಲಿ ಚೋಳವಂಶದ ಒಂದನೆಯ ರಾಜರಾಜನೂ, ಕ್ರಿ.ಶ.೧೩ನೇ ಶತಮಾನದಲ್ಲಿ ಅದೇ ವಂಶದವರಾದ ಮೂರನೆಯ ರಾಜರಾಜನೂ ಹಂಪಿಗೆ ಬಂದಿದ್ದರೆಂದು ತಿಳಿದುಬರುತ್ತದೆ. ಹಂಪಿಯನ್ನು "ಸ್ವಾಮಿ ಪಂಪಾಸ್ಥಳವೆಂದು" ಪಶ್ಚಿಮ ಚಾಳುಕ್ಯರ ಸೇನಾಧಿಪತಿಯಾದ ಮಹದೇವನು ಕರೆದುಕೊಂಡಿದ್ದಾನೆ.

ವಿಜಯನಗರದ ರಾಜಧಾನಿಯನ್ನು ದಟ್ಟವಾದ ಅರಣ್ಯವು ಸುತ್ತುವರೆದುಕೊಂಡಿತ್ತು. ಇದು ರಾಜಧಾನಿಯ ಮೊದಲ ಕವಚವಾಗಿತ್ತೆನ್ನಬಹುದು. ವಿದೇಶಿ ಪ್ರವಾಸಿಗನಾದ ಫರಿಸ್ತನು ಇದಕ್ಕೆ ಸಂಬಂಧಿಸಿದಂತೆ "ಈ ಪ್ರದೇಶದಲ್ಲಿ ಅತ್ಯಂತ ಎತ್ತರವಾದಂತಹ ಕೋಟೆಗಳು, ಕಾಡುಗಳೂ ತುಂಬಿದ್ದವು. ಹಾಗೆಯೇ ಮುಂದುವರೆದು ಈ ಕಾಡಿನೊಳಗೆ ಅಶ್ವದಳಗಳೂ ಸಹ ಪ್ರವೇಶಿಸಲು ಕಷ್ಟವಾಗಿತ್ತು. ಎರಡನೆಯ ಭದ್ರತಾ ವ್ಯವಸ್ಥೆಯಲ್ಲಿ ಸುಮಾರು ಐವತ್ತು ಗಜಗಳವರೆಗೆ ಸೈನ್ಯ ಪ್ರದೇಶಕ್ಕೆ ಅವಶ್ಯವಾಗುವಂತೆ ಅರ್ಧ ಅರ್ಧವಾಗಿ ಹೂತಿರುವಂತಹ ಕಲ್ಲಿನ ಗುಂಡುಗಳಿದ್ದವು. ಏಳುಕೋಟೆಯ ಗೋಡೆಗಳು ತುಂಬ ಬಲವಾಗಿ ನಿರ್ಮಿತವಾಗಿದ್ದವು. ಹೊರಗಿನ ಗೋಡೆಯಾದ ಮೇಲೆ ಬರುವಂತಹ ಸಮತಲವಾದಂತಹ ಮೈದಾನದಲ್ಲಿ ಒಂದರ ಹತ್ತಿರ ಮತ್ತೊಂದರಂತೆ ಗುಂಡುಗಳನ್ನು ಹೂಳಿದ್ದಿತು. ಇದರಿಂದಾಗಿ ಸೈನಿಕರ (ವೈರಿಪಡೆಗಳ) ಕಾಲ್ದಳಗಳೂ, ಅಶ್ವದಗಳಗಳೂ ರಾಜಧಾನಿಯೊಳಕ್ಕೆ ಧಾಳಿಮಾಡಲು ಕಷ್ಟವಾಗುತ್ತಿತ್ತು" ಎಂದು ವಿವರವಾಗಿ ವರ್ಣಿಸಿದ್ದಾನೆ. ಮತ್ತೊಬ್ಬ ವಿದೇಶಿ ಪ್ರವಾಸಿಗನಾದ ಅಬ್ದುಲ್ ರಜಾಕನು ತನ್ನ ಹೋಳಿಕೆಯಲ್ಲಿ "ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿದ ಕೋಟೆಯ ಗೋಡೆಗಳೂ, ಕಲ್ಲಿನ ಮಂಟಪಗಳೂ, ದ್ವಾರ ಬಾಗಿಲುಗಳು ಸಾಲುಸಾಲಾಗಿದ್ದವು. ಈ ಏಳು ಗೋಡೆಗಳ ಮಧ್ಯದಲ್ಲಿ ಜೀವಕಳೆಯಿಂದ ಕೂಡಿದಂತಹ ರಾಜಧಾನಿಯು ಶೋಭಿಸುತ್ತಿತ್ತು" ಎಂದು ಹೇಳಿದ್ದಾನೆ. ಇದು ರಾಜಧಾನಿಯ ನಿರ್ಮಾಣ ಹಾಗೂ ಅದರ ನಿರ್ಮಾಣದ ಹಿಂದಿರುವ ಸಂಸ್ಕೃತಿಯನ್ನು ಗ್ರಹಿಸಬಹುದಾಗಿದೆ.

**೧.೨ ಕೋಟೆಯ ನಿರ್ಮಾಣ, ಶೈಲಿ**

ಕೆಲವು ಆಧಾರಗಳನ್ನು ಗಮನದಲ್ಲಿಟ್ಟುಕೊಂಡು ಹಂಪಿಯ ಕೋಟೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕೋಟೆಯ ಸ್ಥಾನಮಾನವನ್ನು ಈ ಕೆಳಗಿನ ರೀತಿಯಲ್ಲಿ ವರ್ಣಿಸಬಹುದಾಗಿದೆ. ವಿಜಯನಗರ ಸಾಮ್ರಾಜ್ಯದ ಕೋಟೆಯು ಏಳುಸುತ್ತಿನ ಕೋಟೆ ಎಂದು ಕರೆಸಿ ಕೊಂಡಿತ್ತೆಂದು ಹೇಳುವುದಕ್ಕೆ ನಿದರ್ಶನವಾಗಿಯೇ ಇತಿಹಾಸಗಾರರು ಈ ಕೆಳಗಿನ ರೀತಿ ಗುರುತಿಸುತ್ತಾರೆ. ಹೊಸಪೇಟೆಗೆ (ಹಿಂದಿನ ಹೆಸರು ತಿರುಮಲಾಂಬ ನಗರ) ನೈರುತ್ಯ ದಿಕ್ಕಿನಲ್ಲಿ ಮೊದಲನೆಯ ಕೋಟೆಯೂ, ಹೊಸಪೇಟೆಯಲ್ಲಿಯೇ ತನ್ನ ಎರಡನೆಯ ಕೋಟೆಯನ್ನು. ಹೊಸಪೇಟೆಗೆ ಉತ್ತರದಲ್ಲಿ ತನ್ನ ಮೂರನೆಯ ಕೋಟೆಯನ್ನೂ. ಮಲಪನಗುಡಿ ಗ್ರಾಮದ ದಕ್ಷಿಣಕ್ಕೆ ನಾಲ್ಕನೆಯ ಕೋಟೆಯೂ, ಮಲಪನಗುಡಿ ಗ್ರಾಮದ ಉತ್ತರಕ್ಕೆ ಐದನೆಯ ಕೋಟೆಯೂ, ಹಾಗೆಯೇ ಕಮಲಾಪುರದ ಕೆರೆಯ ದಕ್ಷಿಣಕ್ಕೆ ಆರನೆಯ ಕೋಟೆಯೂ ಮತ್ತು ಈಗ ಕಂಡುಬರುವಂತಹ ಅರಮನೆಯ ಕಟ್ಟಡಗಳ ಪ್ರಾಂತ್ಯದ (ಈ ಕೋಟೆಯ ಪರಿಸರದಲ್ಲಿ ಹಲವಾರು ಸ್ಮಾರಕಗಳನ್ನು ಕಾಣುತ್ತೇವೆ. ಉದಾಹರಣೆಗೆ ರಾಣಿಯರ ಸ್ನಾನದ ಗೃಹ, ವಿಜಯನಗರದ ಹೊಡಸುತ್ತಿನ ಸ್ಮಾರಕಗಳು, ರಾಜನ ಅರಮನೆ ಎಂದು ಹೇಳಲಾಗುವ ಸ್ಥಳ, ಸಭಾಮಂದಿರ, ಮಹಾನವಮಿ ದಿಬ್ಬ. ಅಂತಃಪುರ, ಕಮಲಮಂದಿರ, ಒಳಕೋಟೆ, ಹಜಾರರಾಮ ದೇವಾಲಯ, ಆನೆಲಾಯ ಮೊದಲಾದವುಗಳು) ಸುತ್ತಲೂ ಏಳನೆಯ ಕೋಟೆಯೂ ಇದ್ದವೆಂದು ಹೇಳಬಹುದು. ಈ ವರ್ಣನೆಯನ್ನೇ ವಿದೇಶಿಯಾತ್ರಿಕ ಸೇವೆಲ್ಲಿಯು ತನ್ನ ಪ್ರವಾಸಿ ಕಥನದಲ್ಲಿ ವಿವರಿಸಿರುವುದು ಕಂಡುಬರುತ್ತದೆ.

ವೀರಕಂಪಣ್ಣನ ಪತ್ನಿ ಗಂಗಾದೇವಿಯು ರಚಿಸಿರುವಂತಹ ಸಂಸ್ಕೃತಗ್ರಂಥ ಮಧುರಾ ವಿಜಯಂನಲ್ಲಿ ಕೋಟೆಯ ವೈಭವವನ್ನು ವರ್ಣನಾತ್ಮಕವಾಗಿ ವರ್ಣಿಸಿರುವುದು ಕಂಡುಬರುತ್ತದೆ. "ಮೇರು ಪರ್ವತದಂತೆ ಪ್ರಜ್ವಲವಾದ ಚಕ್ರರೂಪದ ಗೋಪುರಗಳೊಡನೆ ನಾಗಕೇಸರಿಯ ಶೈಲಿಯಲ್ಲಿ ಕಟ್ಟಲ್ಪಟ್ಟಿರುವ ಚಕ್ರಾಕೃತಿಯುಳ್ಳ ಗೋಪುರಗಳು ಪಟ್ಟಣಕ್ಕೆ ಚಕ್ರಾಕೃತಿಯನ್ನು ನೀಡಿವೆ. ನೈಸರ್ಗಿಕವಾಗಿ ಸೃಷ್ಟಿಯಾಗಿರುವಂತಹ ಬೃಹತ್ ಬಂಡೆಗಳನ್ನೇ ಕೋಟೆಯ ನಿರ್ಮಾಣಕ್ಕೆ ಬಳಸಿಕೊಂಡು ಅವಶ್ಯವಿದ್ದಲ್ಲಿ ಕಲ್ಲಿನಿಂದ ಬೃಹತ್ ಗೋಡೆಗಳನ್ನು ನಿರ್ಮಿಸಲಾಗಿದೆ. ಬೃಹತ್ ಬಂಡೆಗಳ ತುತ್ತತುದಿಯಲ್ಲಿ ಕಾವಲು ಗೋಪುರವನ್ನು ನಿರ್ಮಿಸಿಕೊಂಡು ಶತ್ರುಗಳನ್ನು ಗಮನಿಸಲಾಗುತ್ತಿತ್ತೆಂದು ಸಂಕ್ಷಿಪ್ತವಾಗಿ ವಿವರಿಸಿದ್ದಾಳೆ. ಈ ದೃಷ್ಟಿಯಿಂದ ಈ ಗ್ರಂಥ ಐತಿಹಾಸಿಕವಾಗಿದೆ.

ಇಲ್ಲಿಯ ಪುರಾತತ್ವ ಮತ್ತು ಶಿಲ್ಪಗಳ ಅಧ್ಯಯನವೇ ಹತ್ತಾರು ಸಂಪ್ರದಾಯಕ್ಕೆ ತಕ್ಕದಾದುದರಿಂದ ಅವುಗಳ ವಿವರಣೆ ಹಾಗೂ ಚರ್ಚೆಗೆ ಇಲ್ಲಿ ತೊಡಗದೆ ಅಲ್ಲಿಯ ಪುರಾತತ್ವ ಅವಶೇಷಗಳು ಈ ಕೋಟೆಯನ್ನು ಸಂಗಮ ವಂಶದವರಾದ ಹರಿಹರ ಬುಕ್ಕರ ಕಾಲದಲ್ಲಿ ನಿರ್ಮಾಣದ ಕೆಲಸ ಪ್ರಾರಂಭವಾಗಿರಬೇಕೆಂದು ಸಾಬೀತುಪಡಿಸುತ್ತದೆ ಎಂದು ಹೇಳಬಹುದಷ್ಟೆ.

ಹಿಂದಿನ ಕಾಲದ ರಾಜಕೀಯ ವ್ಯವಸ್ಥೆಗೆ ಕೋಟೆಯ ತುಂಬ ಅವಶ್ಯಕವಾಗಿತ್ತು. ಈಗಲೂ ನಾವು ನಮ್ಮ ನಾಡಿನ ಪ್ರತಿಯೊಂದು ಐತಿಹಾಸಿಕ ಪಟ್ಟಣಗಳನ್ನೆ ಗಮನಿಸುವುದಾದರೆ ಕೋಟೆ ಇಲ್ಲದಿರುವ ಪಟ್ಟಣಗಳು ಒಂದೂ ಕಣ್ಣಿಗೆ ಬೀಳುವುದಿಲ್ಲ, ಸಣ್ಣ ಪುಟ್ಟ ಸಂಸ್ಥಾನಗಳು, ಪಾಳೇಗಾರಿಕೆಯ ಊರುಗಳಲ್ಲಿಯೂ ಕೋಟೆ ಇದ್ದವೆಂದು ಹೇಳಬಹುದು. ಇದಕ್ಕೆ ನಿದರ್ಶನವೆಂಬಂತೆ ಪ್ರಾಚೀನ ಗ್ರಾಮಗಳಲ್ಲಿ ಅಗ್ರಹಾರ, ಕೋಟೆಬೀದಿ ಮುಂತಾದ ಸ್ಥಳನಾಮಗಳನ್ನು ಗುರುತಿಸಬಹುದಾಗಿದೆ. ವಿಜಯನಗರದ ಅರಸರು ಕೋಟೆಯ ನಿರ್ವಹಣೆ ಹಾಗೂ ಸೈನ್ಯದ ವ್ಯವಸ್ಥೆಗಾಗಿ ಜನರ ಮೇಲೆ ಕೆಲವು ವಿಶೇಷ ತೆರಿಗೆಗಳನ್ನು ಹಾಕಿದ್ದುದು ಆಧಾರಗಳಿಂದ ತಿಳಿದುಬರುತ್ತದೆ.

ನಮ್ಮ ಜನರು ರಾಜಮಹಾರಾಜರ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡುವಲ್ಲಿ ಕೋಟೆ, ಅರಮನೆ, ಗುರುಮನೆಗಳ ಪಾತ್ರ ಪ್ರಮುಖವಾದ ಪಾತ್ರವಹಿಸುತ್ತವೆ. ಕೋಟೆ ಎಂಬ ಶಬ್ದಕ್ಕೆ ಸಂಕ್ಷಿಪ್ತವಾದ ಅರ್ಥವ್ಯಾಪ್ತಿಯನ್ನು ಬೆಟಗೇರಿ ಕೃಷ್ಣಶರ್ಮರವರು ಕೊಡುವ ಈ ಅರ್ಥಪೂರ್ಣ ವಿವರಣೆಯನ್ನು ಉಲ್ಲೇಖಿಸುವುದು ಇಲ್ಲಿ ಪ್ರಸ್ತುತವೆನ್ನಿಸುತ್ತದೆ. "ಕೋಟೆಗೆ ಹಳೆಗನ್ನಡದಲ್ಲಿ 'ಕೊಂಟೆ' ಎಂಬ ಮೂಲ ರೂಪವಿದೆ ಸಂಸ್ಕೃತದಲ್ಲಿ ಕೋಟೆಯನ್ನು ದುರ್ಗವೆಂದು ಹೇಳುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಕೋಟೆ ಎಂಬುವುದು ರಾಜಧಾನಿಯ ರಕ್ಷಣೆಯ ರಕ್ಷಕವಚ" ಎಂದು ತಿಳಿಸಿದ್ದಾರೆ. ಕೋಟೆಯ ಬಗ್ಗೆ ನಂದರಿಂದ ಅವಮಾನಿತನಾಗಿ ಅವರ ನಿರ್ಮೂಲನೆಗೆ ಪಣತೊಟ್ಟು ಮೌರ್ಯ ಸಾಮ್ರಾಜ್ಯದ ನಿರ್ಮಾಣಕ್ಕೆ ಕಾರಣನಾದನೆಂದು ಇತಿಹಾಸಗಾರರು ಹೇಳಿರುವ ಚಾಣಕ್ಯನ ಅರ್ಥಶಾಸ್ತ್ರ ಎಂಬ ಗ್ರಂಥದಲ್ಲಿ ಸುಂದರವಾದ, ಭೌಗೋಳಿಕ ಅಂಶವನ್ನು ಒಳಗೊಂಡ ವಿಶ್ಲೇಷಣೆ ಕಂಡುಬರುತ್ತದೆ. ಕೌಟಿಲ್ಯ ಅಥವಾ ಚಾಣಕ್ಯನು ಕೋಟೆಯನ್ನು ಪ್ರಮುಖವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಿ ಪ್ರತಿಯೊಂದರ ಪ್ರಾಮುಖ್ಯತೆಯ ಬಗ್ಗೆಯೂ ಚರ್ಚಿಸಿರುವುದು ಕಂಡುಬರುತ್ತದೆ. ಅವುಗಳೆಂದರೆ ೧. ಜಲದುರ್ಗ ೨. ಗಿರಿದುರ್ಗ, ೩. ವನದುರ್ಗ ೪. ಭೂದುರ್ಗ.

ನಮ್ಮ ಕನ್ನಡ ನಾಡಿನ ಸಾಂಸ್ಕೃತಿಕ ಬದುಕಿಗೆ ಮೇಲಿನ ನಾಲ್ಕು ರೀತಿಯ ಕೋಟೆಗಳು ಸಾಕ್ಷಿಯಾಗಿ ನಿಂತಿವೆ. ಜಲದುರ್ಗಕ್ಕೆ ಶ್ರೀರಂಗಪಟ್ಟಣ, ಲಿಂಗಸೂರು ಕೋಟೆಯನ್ನು ಸೂಚಿಸುವುದಾದರೆ, ಗಿರಿದುರ್ಗಕ್ಕೆ ಸಿಡಿಲಿಗೂ ಬೆಚ್ಚದ ಉಕ್ಕಿನಕೋಟೆ ಎಂದೆ ಹೆಸರಾಗಿರುವಂತಹ ಚಿತ್ರದುರ್ಗ ಹಾಗೂ ಸಾವನದುರ್ಗ, ಬಳ್ಳಾರಿ, ಕೊಪ್ಪಳ ಕೋಟೆಯನ್ನು ಸೂಚಿಸಬಹುದು. ವನದುರ್ಗಕ್ಕೆ ಭಾರತದಲ್ಲಿಯೇ ವಿಸ್ತಾರವಾದಂತಹ, ವಿಶಾಲವಾದಂತಹ ಕೋಟೆಗಳಲ್ಲಿ ಎರಡನೆಯ ಸ್ಥಾನಪಡೆದಿರುವ ಬಿಜಾಪುರದ ಸುಲ್ತಾನರ ಕೋಟೆಯನ್ನು ಹೆಸರಿಸಬಹುದಾಗಿದೆ. ಇದು ಉತ್ತರ ಕರ್ನಾಟಕ ಬೃಹತ್ ಬಯಲು ಪ್ರದೇಶದಲ್ಲಿ ವಿಶಾಲವಾದಂತಹ ಜಾಗದಲ್ಲಿರುವುದು ಕಂಡುಬರುತ್ತದೆ.

**ಶ್ರೀರಂಗಪಟ್ಟಣದ ಕೋಟೆ :** ಮೈಸೂರು ಒಡೆಯರ ಕಾಲದಲ್ಲಿಯೇ ಕೋಟೆಯ ಕೆಲಸ ಪ್ರಾರಂಭವಾದರೂ ಸಹ ಅದು ಪ್ರಖ್ಯಾತಿಗೆ ಬಂದದ್ದು ಹೈದರ್ ಮತ್ತು ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ. ಇವರು ಸರ್ವಾಧಿಕಾರಿಯಾಗಿ ಮೈಸೂರು ಸಂಸ್ಥಾನವನ್ನು ಆಳ್ವಿಕೆ

ನಡೆಸುತ್ತಿದ್ದಾಗ ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದರು. ಈ ಕೋಟೆಯು ಕಾವೇರಿ ನದಿಯು ಎರಡು ಕವಲಾಗಿ ಹರಿಯುವ ಸ್ಥಳದಲ್ಲಿ ನಿರ್ಮಾಣವಾಗಿದೆ.

**ಚಿತ್ರದುರ್ಗದ ಕೋಟೆ :** ಸಿಡಿಲಿಗೂ ಬೆಚ್ಚದ ಉಕ್ಕಿನ ಕೋಟೆ ಎಂದೇ ಜನಸಾಮಾನ್ಯರಲ್ಲಿ ಪ್ರಸಿದ್ಧವಾಗಿರುವ ಈ ಕೋಟೆಯನ್ನು ಚಿತ್ರದುರ್ಗದ ಪಾಳೇಗಾರರು ನಿರ್ಮಾಣಮಾಡಿದರು. ಅದರಲ್ಲಿಯೂ ಮದಕರಿನಾಯಕನ ಕಾಲದಲ್ಲಿ ಹೆಚ್ಚಿನ ಭದ್ರತೆಯ ವ್ಯವಸ್ಥೆಯನ್ನು ಅಳವಡಿಸಲಾಯಿತೆಂದು ತಿಳಿದುಬರುತ್ತದೆ. ಈ ಕೋಟೆಯು ಇಕ್ಕಟ್ಟಾದ ಇಳಿಜಾರು ಹಾಗೂ ಬೃಹತ್ ಬಂಡೆಗಳಿಂದ ಕೂಡಿರುವ ನೈಸರ್ಗಿಕ ಕಲ್ಲು ಬೆಟ್ಟಗಳನ್ನೆ ಅವಲಂಬಿಸಿ ಕೊಂಡು ನಿರ್ಮಾಣವಾಗಿರುವ ಕೋಟೆ. ಇದು ಇಂದಿಗೂ ಕರ್ನಾಟಕದ ಸುರಕ್ಷಿತವಾಗಿರುವ ಕೋಟೆ ಎನ್ನಬಹುದು. ಇದರ ಮೇಲೆ ದಾಳಿ ಮಾಡಿದ ಹೈದರ್ ಆಲಿಯು ಕೋಟೆಯ ಒಳಗಡೆ ದಾಳಿ ಮಾಡಲು ಒಂದು ವರ್ಷ ಕಾಯಬೇಕಾಯಿತೆಂಬುದು ಗಮನಾರ್ಹವಾದ ವಿಷಯವೆ.

ಮೇಲಿನ ಕೋಟೆಯ ವಿಧಗಳು ಹಾಗೂ ಅವುಗಳ ಸವರೂಪವನ್ನು ಈ ಅಧ್ಯಯನದಲ್ಲಿ ಚರ್ಚಿಸಲು ಪ್ರಮುಖ ಕಾರಣವೆಂದರೆ, ಮೇಲಿನ ನಾಲ್ಕು ರೀತಿಯ ಲಕ್ಷಣಗಳನ್ನು ತನ್ನ ಮಡಿಲಿನಲ್ಲಿ ಸೇರಿಸಿಕೊಂಡಿರುವ ಹಂಪಿಯ ಕೋಟೆಯ ಬಗ್ಗೆ ಚರ್ಚಿಸಲು. ಈ ಬೃಹತ್ ಕೋಟೆಯು ಜಲದುರ್ಗವೂ ಹೌದು, ಗಿರಿದುರ್ಗವೂ ಹೌದು, ವನ ಅಥವಾ ಭೂದುರ್ಗವೂ ಹೌದು. ತುಂಗಭದ್ರೆ ಕೋಟೆಯನ್ನು ಮುಕ್ಕಾಲುಭಾಗ ಸುತ್ತಿಕೊಂಡಿದ್ದರೆ ನೋಡಲು ಅಸಾಧ್ಯವಾದಂತಹ ಬೃಹತ್ ಕಲ್ಲು ಬಂಡೆಗಳಿಂದ ನಿರ್ಮಿತವಾಗಿರುವ ಬೆಟ್ಟ ಸಾಲುಗಳು ಅವುಗಳಲ್ಲಿಯೇ ಅವಕಾಶವಾದ ಕಡೆಯಲ್ಲಿ ಸ್ವಾಭಾವಿಕ ಬಂಡೆಗಳ ಜೊತೆಗೆ ಕೋಟೆಯ ನಿರ್ಮಾಣ ಹಾಗೂ ಬಯಲು ಪ್ರದೇಶದಲ್ಲಿ ವಿಸ್ತಾರವಾಗಿ ಕೋಟೆಯನ್ನು ನಿರ್ಮಿಸಿರುವುದು ಇದಕ್ಕೆ ಇಂದಿಗೂ ಸಾಕ್ಷಿಯಾಗಿ ನಿಂತಿವೆ.

**೧.೩. ರಾಜಧಾನಿಯ ಜನಜೀವನ**

ವಿಜಯನಗರ ಸಾಮ್ರಾಜ್ಯದ ರಾಜಧಾನಿಯ ಹಾಗೂ ಸಾಮ್ರಾಜ್ಯದ ಜನ ಜೀವನವನ್ನು ತಿಳಿಯಲು, ಅಂದಿನ ವೈಭವ ಹಾಗೂ ಅನಿಷ್ಚತೆಯನ್ನು ತಿಳಿಯಲು ದಾಸಸಾಹಿತ್ಯ ಹಾಗೂ ಲಿಖಿತ ಸಾಹಿತ್ಯಾಧಾರಗಳ ಜೊತೆಗೆ ವಿದೇಶಿಯರ ಬರವಣಿಗೆಗಳು ಹೆಚ್ಚಾಗಿ ಸಹಕಾರಿಯಾಗುತ್ತವೆ. ಒಂದರ್ಥದಲ್ಲಿ ದಾಸಸಾಹಿತ್ಯವನ್ನು ಅಂದಿನ ಕಾಲದ ಜನ ಜೀವನವನ್ನು ರೂಪಿಸಲು ನೆರವಾಗುವಂತಹ 'ವಿಶ್ವಕೋಶ'ವೆಂದೇ ಕರೆಯಬಹುದು. ಇವುಗಳಲ್ಲಿ ನಾವು ಕಾಣದ, ಕೇಳದ ವಸ್ತುವೆಂಬುವುದೇ ಇರುವುದಿಲ್ಲ. ಈ ಹಂತದಲ್ಲಿ ಕನಕದಾಸರ ಮೋಹನತರಂಗಿಣಿಯು ಎರಕಹೊಯ್ದು ಮುತ್ತಿನ ನೀರಿನಂತೆ ಕಂಗೊಳಿಸುತ್ತದೆ. ಇವುಗಳ ಜೊತೆಗೆ ರಾಜಧಾನಿಗೆ ಭೇಟಿ ನೀಡಿದ್ದ ವಿದೇಶಿಯರ ಬರವಣಿಗೆಗಳು ಅಪಾರವಾಗಿಯೇ ದೊರಕಿದ್ದು ಅವುಗಳ (ಡಾ. ಎಚ್.ಎಲ್. ನಾಗೇಗೌಡರು ಸಂಪಾದಿಸಿರುವ ಪ್ರವಾಸಿ ಕಂಡ ಇಂಡಿಯಾ ಕೃತಿಗಳಿಂದ) ವರ್ಣನೆಯನ್ನು ಆಧಾರವನ್ನಾಗಿ ಮಾಡಿಕೊಳ್ಳಬಹುದು. ಆದರೆ ವಿದೇಶಿ ಪ್ರವಾಸಿಗರಾಗಿರುವ ಬಾರ್ಬೋಸ, ನ್ಯೂನಿಜ್, ಪೇಸ್, ಅಬ್ದುಲ್ ರಜಾಖ್, ನಿಕೋಲೊಕೌಂಟ್ ಮುಂತಾದವರು ನೀಡಿರುವ ಮಾಹಿತಿಯು ಕೇವಲ ರಾಜಧಾನಿಯ ಶ್ರೀಮಂತ ವರ್ಗದವರ ಆಚಾರ ವಿಚಾರಗಳನ್ನು ಮಾತ್ರ ತಿಳಿಸುತ್ತದೆ ಎನ್ನಬಹುದು. ಆದರೆ ಇವರು ಸಾಮ್ರಾಜ್ಯದ ಎಲ್ಲಾ ಜನಾಂಗದ ಜೀವನ ಹಾಗೂ ಬದುಕಿನ ವಿವರಣೆಗಳನ್ನು ತಾವು ಕಂಡು, ಕೇಳಿದ ರೀತಿಯಲ್ಲಿ ಸ್ವಲ್ಪ ವಿವರಿಸಿರುವುದು ಕಂಡು ಬರುತ್ತದೆ. ಹಾಗೆಯೇ ಜನರ ಕಾವ್ಯಗಳಾಗಿರುವ ಜನಪದ ಮಹಾಕಾವ್ಯಗಳಲ್ಲಿಯೂ ಹೆಚ್ಚಾಗಿ ಮಾಹಿತಿ ದೊರಕುತ್ತದೆ. ಇವು ಸ್ಥಳೀಯ ಭಾಷೆಯಲ್ಲಿಯೇ ಲಭ್ಯವಿರುವುದರಿಂದ ಒಂದು ರೀತಿಯಲ್ಲಿ ಇತಿಹಾಸಗಾರರಿಗೆ ಅದರಲ್ಲಿಯೂ ಸ್ಥಳೀಯ ಇತಿಹಾಸಗಾರರಿಗೆ ವರಪ್ರಸಾದವೆ.

ಕನಕದಾಸರು ರಾಜಧಾನಿಯ ವರ್ಣನೆಯನ್ನು ನೀಡುತ್ತಾ ರಾಜರ ಅರಮನೆಗಳು ರಾಜವೈಭವದಿಂದ ಮೆರೆಯುತ್ತಿದ್ದವು ಹಾಗೂ ಹಂಪಿಯಲ್ಲಿನ ಬ್ರಾಹ್ಮಣರುಗಳ ಮನೆಗಳನ್ನು ವರ್ಣಿಸುತ್ತಾ "ಅವು ಹೊಂದಗಡಿನ ಹೊದಿಕೆಯ ಮನೆಗಳಾಗಿದ್ದವು" ಎಂದು ಬ್ರಾಹ್ಮಣರು ಉತ್ತಮ ವಸತಿಯ ಸೌಕರ್ಯದ ಮನೆಗಳನ್ನು ಹೊಂದಿದ್ದರೆಂದುವ ಅರ್ಥೈಸುವ ರೀತಿಯಲ್ಲಿ ಚರ್ಚಿಸಿದ್ದಾರೆ. ಅಂದಿನ ಕಾಲದ ಮನೆಗಳು ಕಂಬಗಳಿಂದ ಕೂಡಿ ಚೌಕಾಕಾರವಾಗಿ ವಿಶಾಲವಾಗಿದ್ದವು. ಮನೆಯ ಅಳತೆಯೂ ಆ ಮನೆಯು ಒಳಗೊಂಡಿರುವ ಕಂಬದ ಆಧಾರದ

ಮೇಲೆಯೇ ನಿರ್ಧಾರಿಸಲಾಗುತ್ತಿತ್ತು. (ಈ ಮಾದರಿಯ ಮನೆಗಳನ್ನು ನಮ್ಮ ಗ್ರಾಮಗಳಲ್ಲಿ ಇಂದಿಗೂ ಕಾಣಬಹುದಾಗಿದೆ.) ನಾಲ್ಕು ಕಂಬದ ಹಟ್ಟಿ, ಹನ್ನೆರಡು ಕಂಬದ ಹಟ್ಟಿ, ಹದಿನಾರು ಕಂಬದ ಹಟ್ಟಿ ಎಂದು ಕಂಬದ ಆಧಾರದ ಮೇಲೆಯೇ ಚಿಕ್ಕ ಹಾಗೂ ದೊಡ್ಡ ಮನೆಗಳಿಗೆ ಜನಪದರು ಸೂಚಿಸುತ್ತಿದ್ದುದು ಕಂಡುಬರುತ್ತದೆ. "ಅಷ್ಟ ಕಂಬವನಕ್ಕಿ ಚೌಕದುಪ್ಪರಿಗೆಯ ಕಟ್ಟಿದ ಮನೆಯು" ಎಂದು ಹಾಡಿರುವ ದಾಸರ ಕೀರ್ತನೆಯು ಇದಕ್ಕೆ ಉತ್ತಮ ನಿದರ್ಶನವಾಗಿದೆ. ಇಂದಿನಂತೆ ಅಂದೂ ಸಹ ಮನೆಯ ವಿವಿಧ ಭಾಗಗಳಿಗೆ ಅನೇಕ ಹೆಸರುಗಳಿಂದ ಕರೆಯುತ್ತಿದ್ದರೆಂದು ಅನೇಕ ಸಾಹಿತ್ಯಾಧಾರಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ : ಕಿರುಮನೆ, ನೆಲಮನೆ, ಅಟ್ಟದಮನೆ, ದೇವರಮನೆ, ಹಿತ್ತಲಮನೆ, ಗದ್ದೆಮನೆ, ಮೂಲಿಮನೆ, ಎಂಬಿತ್ಯಾದಿ ಹೆಸರುಗಳು ಕೇಳಿಬರುತ್ತದೆ. ಮನೆಯ ಒಳಭಾಗದಲ್ಲಿ ಚೌಕಿ, ಜಗಲಿ, ಹಜಾರ, ಶಯನಗೃಹ, ಸ್ನಾನದಮನೆ, ಊಟದಮನೆ, ಕೊಟ್ಟಿಗೆ, ಬಚ್ಚಲುಮನೆ ಮುಂತಾದ ಹೆಸರುಗಳು ಮನೆಯ ಎಲ್ಲಾರಿಗೂ ಪರಿಚಿತವಾದವುಗಳೇ ಆಗಿದ್ದವು, ಸಂಸ್ಕೃತಿ ನಿರಂತರವೆಂದಂತೆ ಮೇಲಿನ ಎಲ್ಲಾ ಪದಗಳೂ ಚಾಚು ತಪ್ಪದೆ ಇಂದಿಗೂ ಉಳಿದುಕೊಂಡು ಬಂದಿವೆ. ಇದಕ್ಕೆ ವರ್ತಮಾನವೆಂಬುದು ಭೂತದ ಬುತ್ತಿಯನ್ನು ಹೊತ್ತುಕೊಂಡು ಬರುತ್ತದೆನ್ನುವುದು. ರಾಜಧಾನಿಯ ಮನೆಗಳಲ್ಲಿ ಸಾಲುಗನ್ನಡಿಗಳು, ತಲೆಬಾಚಿಕೊಳ್ಳಲು ಬಾಚಣಿಗಿ, ಮಂಚ ಹಾಗೂ ಗೋಡೆಯ ಮೇಲೆ ರಂಗೋಲಿ ಹಾಗೂ ದೇವತೆಗಳ ಚಿತ್ರದ ಚಿತ್ತಾರ ಬಿಡಿಸಿಕೊಳ್ಳುತ್ತಿದ್ದರೆಂದು ಬಾರ್ಬೋಸ ವಿವರಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಮನೆಯ ಮುಂದೆ ಪಡಸಾಲೆ (ಜಗುಲಿ) ಇರುತ್ತಿದ್ದುದು ಸಾಮಾನ್ಯವಾಗಿತ್ತು. ಇದು ಮನೆಯ ಅನೇಕ ಸಾಂಸ್ಕೃತಿಕ ಕಾರ್ಯಗಳ ನೆಲೆಯಾಗಿತ್ತೆನ್ನಬಹುದು.

ರಾಜಧಾನಿಯ ಜನರ ಮುಖ್ಯ ಕಸುಬು ಪ್ರಮುಖವಾಗಿ ಎರಡು ರೂಪದ್ದಾಗಿತ್ತು. ಒಂದನೆಯದು; ದೇವತಾಕಾರ್ಯ ಬ್ರಾಹ್ಮಣರು ದೇವಾಲಯಗಳಲ್ಲಿ ಹಾಗೂ ರಾಜಸ್ಥಾನಗಳಲ್ಲಿ ದೇವದೂತರಾಗಿ ಕಾರ್ಯನಿರ್ವಹಿಸುವುದು ಎರಡನೆಯದು; ವ್ಯಾಪಾರಗಳು ರಾಜಧಾನಿಯ ಜನರು ಹೆಚ್ಚಾಗಿ ಕೈಗೊಳ್ಳುತ್ತಿದ್ದಂತಹ ಕಸುಬು ಇದಾಗಿತ್ತು. ಇನ್ನೂ ವ್ಯವಸಾಯ ರಾಜಧಾನಿಯ ಹೊರಗಿನವರ ಪ್ರಮುಖ ಕಸುಬು ಎಂಬುವುದು ಇತಿಹಾಸದಿಂದಲೇ ತಿಳಿದಿರುವ ವಿಷಯ, ಆದರೆ ಕೃಷಿಯ ಉತ್ಪನ್ನವನ್ನು ಮಾರಾಟ ಮಾಡಲು ರಾಜಧಾನಿಯಂತಹ ಬೃಹತ್ ವ್ಯಾಪಾರ ಮಳಿಗೆಗಳಿಗೆ ತರುವುದು ಸರ್ವೇ ಸಾಮಾನ್ಯವಾಗಿತ್ತು. ರಾಜಧಾನಿಯು ನೃತ್ಯಗಾರ್ತಿಯರಿಂದ, ಸಂಗೀತಕಾರರಿಂದ, ಜಾನಪದ ಕಲಾವಿದರಿಂದ ಕ್ರೀಡಾಪಟುಗಳಿಂದ, ದಾಸರುಗಳಿಂದ, ಸನ್ಯಾಸಿಗಳಿಂದ, ವೇಶ್ಯೆಯರುಗಳಿಂದ ಹಾಗೂ ದೇವದಾಸಿಯರಿಂದ ತುಂಬಿರುತ್ತಿತ್ತು. ಹೆಚ್ಚಾಗಿ ಇವರೆಲ್ಲರೂ ಉತ್ತಮ ಜೀವನ ನಡೆಸುತ್ತಿದ್ದರಂದು ಅನೇಕ ಮೂಲ ದಾಖಲೆಗಳಿಂದ ತಿಳಿಯಬಹುದು.

ಮಹಿಳೆಯರು ಹೆಚ್ಚಾಗಿ ವ್ಯಾಪಾರದಲ್ಲಿ ತಲ್ಲೀನರಾಗಿರುತ್ತಿದ್ದರು. ಸಾಮಾನ್ಯವಾಗಿ ಚಿನ್ನ, ಬೆಳ್ಳಿ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಮಾರುತ್ತಿದ್ದವರು ಮಹಿಳೆಯರೇ ಇಂದಿಗೂ ಅಚ್ಯುತರಾಯ ದೇವಾಲಯದ ಬಜಾರು (ಸೂಳೇಬಜಾರು) ಹಾಗೂ ವಿಠ್ಠಲಸ್ವಾಮಿ ದೇವಾಲಯದ ಬಜಾರುಗಳಲ್ಲಿ ಮಹಿಳೆಯರು ವ್ಯಾಪಾರ ಮಾಡುತ್ತಿದ್ದರು ಎಂದು ಶಾಸನಾಧಾರಗಳು ತಿಳಿಸುತ್ತವೆ. ರಾಜಧಾನಿಯಲ್ಲಿ ಆರೋಗ್ಯ ತಪಾಸಣೆಗೆ ದವಾಖಾನೆಗಳ (ಆರೋಗ್ಯ ತಪಾಸಣಾ ಕೇಂದ್ರ) ಸೌಲಭ್ಯವಿದ್ದದ್ದು ಕಂಡು ಬರುತ್ತದೆ. ಈ ದವಾಖಾನೆಯ ಸೌಲಭ್ಯವು ಕೆಲವೇ ಕೆಲವು ಜನವರ್ಗಕ್ಕೆ ಮಾತ್ರ ಮೀಸಲಿದ್ದದ್ದು ಉಲ್ಲೇಖನೀಯವಾಗಿದೆ.

ರಾಜಧಾನಿಯಲ್ಲಿ ಅಸ್ಪೃಶ್ಯರೆಂದು ಕರೆಸಿಕೊಳ್ಳುತ್ತಿದ್ದ ಜನರ ಬದುಕು ಶೋಚನೀಯವಾಗಿದ್ದಿತು. ಹೊಲೆಯ ಮಾದಿಗರು ರಾಜಧಾನಿಯಿಂದ ಬಹುದೂರ ವಾಸಿಸುತ್ತಿದ್ದರು. ಇವರು ಪ್ರತಿದಿನವು ರಾಜಧಾನಿಗೆ ನಿಗದಿತ ಸಮಯದಲ್ಲಿ ಬಂದು ಅಲ್ಲಿನ ಬೀದಿ, ಬಚ್ಚಲು ಇನ್ನಿತರ ಕೊಳಕಾಗಿದ್ದ ಪ್ರದೇಶಗಳನ್ನು ಸ್ವಚ್ಚಗೊಳಿಸಬೇಕಾಗಿತ್ತು. ಇದಕ್ಕೆ ತಪ್ಪಿದರೆ ಘೋರಶಿಕ್ಷೆಗೆ ಒಳಗಾಗುತ್ತಿದ್ದರು. ಇವರುಗಳು ರಾಜಧಾನಿಯನ್ನು ಪ್ರವೇಶಿಸಬೇಕಾದರೆ ಅನುಸರಿಸಬೇಕಾಗಿದ್ದ ಆಚರಣೆಗಳು ನಿಜಕ್ಕೂ ಅಮಾನುಷವಾಗಿದ್ದವೆಂದೇ ಹೇಳಬಹುದು. ಆಮಾನುಷತೆಯ ವರ್ಣನೆ ಇಲ್ಲಿ ಬೇಕಿಲ್ಲವೆನ್ನಿಸುತ್ತದೆ. ಏಕೆಂದರೆ ಇಂದಿನ ಪ್ರಜಾಪ್ರಭುತ್ವದ ಆಧುನಿಕ ಯುಗದಲ್ಲಿಯೇ ನಾವು ದಿನಂಪ್ರತಿ ನೋಡುತ್ತಿರುವ ಜಾತಿವ್ಯವಸ್ಥೆ ಹಾಗೂ ಅಸ್ಪೃಶ್ಯತೆಯನ್ನು ಅಂದಿನ ಯುಗಕ್ಕೆ (ಅಜ್ಞಾನದ ಯುಗ, ಮೂಡನಂಬಿಕೆಯ ಯುಗ ಎಂದು ಕರೆದಿರುವ ಕಾಲ) ಹೋಲಿಸಿಕೊಂಡು ಚಿಂತಿಸಿದರೆ ನಿಖರವಾದ ಉತ್ತರ ದೊರಕಬಹುದೇನೊ. ಅಂದು ಬ್ರಾಹ್ಮಣರು ಹಿಂದೂ ಧರ್ಮದಲ್ಲಿಯೇ ಶ್ರೇಷ್ಠರಾದವರೆಂದು ಮಡಿವಂತಿಕೆಯಿಂದ ಜೀವನ ಮಾಡುತ್ತಿದ್ದದ್ದನ್ನು ಕಂಡು ಕನಕದಾಸರು ಬ್ರಾಹ್ಮಣರು

ಯಾರು? ಎಂಬುವುದಕ್ಕೆ ನೀಡಿದ ವಿವರಣೆಯು ಸ್ವಾರಸ್ಯಕರವಾಗಿದೆ. ಧರ್ಮವು ನಿಜವಾದ ತತ್ವಗಳನ್ನು ಅರಿಯದೆ. ಕೇವಲ ನಾಮ ವಿಭುತಿ ಇತ್ಯಾದಿ ಧರಿಸಿಕೊಂಡು ಹೊರಗಿನ ಆಡಂಬರಗಳನ್ನು ತೋರಿಸುತ್ತಾ ನೀತಿ ತಪ್ಪಿ ನಡೆದರೆ ಅವರು ಬ್ರಾಹ್ಮಣರೂ ಅಲ್ಲ. ಲಿಂಗವಂತರೂ ಅಲ್ಲ. ಮುಸಲ್ಮಾನರೂ ಅಲ್ಲ. ಎಂಬುವ ಬಹುಸೂಕ್ಷ್ಮದ ನುಡಿಯನ್ನು ನುಡಿದಿದ್ದಾರೆ. ಅವರ ಮಾತಿನಲ್ಲಿಯೇ ಹೇಳುವುದಾದರೆ

*ಮೂಗ್ಹಿಡಿದು ನೀರೊಳಗೆ ಮುಳುಗಿ ಜಪತಪಮಾಡಿ*
*ಭಗವತ ಶಾಸ್ತ್ರಾದಿಗಳನೆಲ್ಲ ಓದಿ*
*ಬಾಗಿ ಪರಸತಿಯರನು ಬಯಸಿ ಕಣ್ಣಿಡುವಂಥ*
*ನೀತಿ ತಪ್ಪಿದವರೆಲ್ಲ ದೇವ ಬ್ರಾಹ್ಮಣರೇ?* ೧

*ಲಿಂಗಾಂಗದೊಳಗಿರುವ ಚಿನುಮಯದ ತಿಳಿಯದೆ*
*ಅಂಗ ಲಿಂಗದ ನೆಲೆಯ ಗುರುತರಿಯದೆ*
*ಜಂಗಮ ಸ್ಥಾವರದ ಹೊಲಬನರಿಯದ ಇಂಥ*
*ಭಂಗಿ ಮುಕ್ಕುಗಳೆಲ್ಲ ಲಿಂಗವಂತರು ಅಹುದೇ?* ೨

*ಅಲ್ಲಾ ಖುದಾ ಎಂಬ ಅರ್ಥವನು ಅರಿಯದೆ*
*ಮುಲ್ಲಾ ಶಾಸ್ತ್ರ ನೆಲೆಯ ಗುರುತರಿಯದೆ*
*ಕಳ್ಳ ಕೂಗನೆ ಕೂಗಿ ಬೊಗಳಿ ಬಾಯ್ದೆರೆವಂಥ*
*ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ?* ೩

ಎಂದು ಬ್ರಾಹ್ಮಣರು, ಲಿಂಗವಂತರು, ಮುಸಲ್ಮಾನರುಗಳನ್ನು ನೇರವಾಗಿಯೇ ಪ್ರಶ್ನಿಸಿದ್ದಾರೆ. ಇವರುಗಳು ಮೇಲುಕೀಳು, ಶ್ರೇಷ್ಠ ಕುಲದವನು, ಹೀನ ಕುಲದವನೆಂದು ಭೇದಭಾವ ಮಾಡುತ್ತಿದ್ದಂತಹ ರಾಜಧಾನಿಯ ಜನರಿಗೆ ಅವರು ತಮ್ಮ ತಮ್ಮ ಧರ್ಮದ ತತ್ವ ತಿಳಿದು ಅವುಗಳನ್ನು ಮೌನವಾಗಿಯೇ ಆಚರಿಸಬೇಕು. ಹಾಗೆಯೇ ಅವುಗಳ ವಾಸನೆಗಳ ಗುಟ್ಟು ತಿಳಿದು ಆಸೆಗಳನ್ನು ಅರಿಯಬೇಕು ಎಂದು ಕಿವಿಮಾತ ನೇಳಿರುವುದು ಇಂದಿಗೂ ಪ್ರಸ್ತುತ ಹಾಗೂ ಸತ್ಯವಾಗಿದೆ. ಮೇಲಿನ ಕನಕರ ಕೀರ್ತನೆಗಳೇ ಅಂದಿನ ಸಾಮಾಜಿಕ ಜೀವನದ ಪರಿಪರಿಯನ್ನು ಸೂಕ್ಷ್ಮವಾಗಿ ಸೂಚಿಸುತ್ತವೆ.

*ವೇಷ ಭಾಷೆಯ ಕಲಿತು ಗೋಸನಿಯ ಕಡೆಗಿಟ್ಟು*
*ಆಸೆಯನ್ನು ತೊರೆಯದೆ ತಪನ ಮಾಡಿ*
*ವಾಸನೆಯ ಗುರುತಿನಾ ಹೊಲಬನರಿಯದ ಇಂಥ*
*ವೇಷಧಾರಿಗಳು ಸನ್ಯಾಸಿಗಳು ಅಹುದೇ?*

ಎನ್ನುವಂತಹ ಪ್ರಶ್ನೆಯನ್ನು ಸನ್ಯಾಸಿಗಳ ನಡವಳಿಕೆಯ ಬಗ್ಗೆ ಹೇಳಿದ್ದಾರೆ. ವೇಷಧಾರಿಯಾದ ಮಾತ್ರಕ್ಕೆ ಸನ್ಯಾಸಿಯಾಗಲಾರ ಅದೇ ಅಂತರಂಗದಲ್ಲಿ ತುಂಬಿರುವ ದೇವರನ್ನು ಮನಮುಟ್ಟಿ ಭಜಿಸಿದರೆ ಎಂದೆಂದಿಗೂ ಅವನಿಗೆ ಸಾವಿನ ಭಯವಿಲ್ಲ ಎಂದು ಸನ್ಯಾಸಿಗಳಿಗೆ ಮಾನವರಿಕೆ ಮಾಡಿರುವುದು ಇಂದಿನ ಜಗದ್ಗುರುಗಳೆಂದು ಕರೆಸಿಕೊಳ್ಳುವ ಸ್ವಾಮಿಗಳಿಗೂ ಅನ್ವಯವಾಗುತ್ತದೆ.

ರಾಜಪರಿವಾರದವರು ಗುರುಹಿರಿಯರೆನ್ನಿಸಿಕೊಂಡವರಿಗೆ ಪೂಜಾರಿಗಳಿಗೆ ಸಲ್ಲಿಸುತ್ತಿದ್ದ ಗೌರವ ವಿಶೇಷವಾಗಿದ್ದಿತ್ತು. ಗುರುಗಳನ್ನು ರಾಜರು ಅಥವಾ ರಾಜಪರಿವಾರದವರು ಕಾಣಲು ಹೋದಾಗ ಅದರ ನೆನಪಿಗಾಗಿ ನೆನಪಿನ ಕಾಣಿಕೆ ಕೊಡುವುದು ಸಂಪ್ರದಾಯವಾಗಿದ್ದಿತು. ಸಾಮಾನ್ಯವಾಗಿ ಬೆಳ್ಳಿ, ಚಿನ್ನದ ವಸ್ತುಗಳ ಜೊತೆಗೆ ನಿಂಬೆ ಹಣ್ಣನ್ನು ಹೆಚ್ಚಾಗಿ ಕೊಡುತ್ತಿದ್ದದ್ದು

ಶಾಸನಧಾರಗಳಿಂದ ತಿಳಿದುಬರುತ್ತದೆ. ರಾಜನನ್ನು ಕಾಣಲು ಬರುತ್ತಿದ್ದ ಯಾವುದೇ ಜಾತಿಗೆ ಸೇರಿದ ಪ್ರಜೆಗಳು ಬರಿಗೈಯಲ್ಲಿ ಬರುತ್ತಿರಲಿಲ್ಲ. ಆಯಾ ಜಾತಿಯವರು ಉತ್ಪಾದಿಸುವ ವಸ್ತುಗಳನ್ನೇ ಕಾಣಿಕೆಯನ್ನಾಗಿ ನೀಡಿ ರಾಜರಿಂದ ಹೊಗಳಿಕೆಯನ್ನು ಪಡೆಯುತ್ತಿದ್ದರು. ರಾಜರು ಎಷ್ಟೇ ಪ್ರಬಲರಾಗಿದ್ದರೂ ಸಹ ಧರ್ಮಕ್ಕೆ ತಲೆಬಾಗುತ್ತಿದ್ದರು. ಬ್ರಾಹ್ಮಣರು, ಗುರುಗಳು, ಆಚಾರ್ಯರು, ಸಾಧುಸಂತರನ್ನು ಕಂಡರೆ ಭಕ್ತಿಯಿಂದ ತಲೆ ಬಾಗುತ್ತಿದ್ದರು. ಹೊರನಾಡಿನಿಂದ ರಾಜಧಾನಿಗೆ ಬರುತ್ತಿದ್ದ ಮುನಿಗಳು, ಸಂತರು, ಕವಿಗಳು, ವಿದೇಶಿಯರನ್ನು ಸ್ವಾಗತಿಸಲು ರಾಜಪರಿವಾರವೇ ನೆರೆದಿರುತ್ತಿತ್ತು. ಈ ಸಂಪ್ರದಾಯವನ್ನು ಇಂದಿಗೂ ಸಹ ಆಧುನಿಕ ರೂಪದಲ್ಲಿ ಕಾಣಬಹುದಾಗಿದೆ.

**೧.೪. ಸಾರಿಗೆ – ಸಂಪರ್ಕ**

ರಾಜಧಾನಿಯ ಸಾರಿಗೆ ಸಂಪರ್ಕವು ಉತ್ತಮವಾದ ರೀತಿಯಲ್ಲಿ ಇದ್ದಿತ್ತೆಂದು ಹೇಳಬಹುದು. ಒಳನಾಡಿನ ಸಾಗಾಣಿಕೆಯು ಸುಲಭವಾಗಿತ್ತೆಂದು ಕಂಡುಬರುತ್ತದೆ. ನಮ್ಮ ಪ್ರಾಚೀನ ಚರಿತ್ರೆಯಿಂದಲೂ ಹಾಗೂ ಪ್ರಾಚೀನ ಮಹಾಕಾವ್ಯ ಹಾಗೂ ಪುರಾಣ ಕಥೆಗಳಿಂದಲೂ ಸಾರಿಗೆಯು ಅಡ್ಡೆ, ತಲೆಹೊರೆ, ಕುದುರೆ, ಎತ್ತು. ಕತ್ತೆ ಹಾಗೂ ಒಂಟೆಗಳ ಮೇಲೆ ನಡೆಯುತ್ತಿತ್ತು. ಎಂಬುದು ಕಂಡುಬರುತ್ತದೆ. ವಿಜಯನಗರದ ರಾಜಧಾನಿ ಹಾಗೂ ಹೊರಗಿನ ಜನರ ಸಾರಿಗೆ ಸಂಪರ್ಕದ ಬಗ್ಗೆ ವಿದೇಶಿ ಪ್ರವಾಸಿಗರಾಗಿರುವ ಬಾರ್ಬೋಸ, ಪಾಯೇಸ್, ನ್ಯೂನಿಜ್, ನಿಕೋಲೂಕೌಂಟೆಯವರ ಬರವಣಿಗೆಯಿಂದ ಹೆಚ್ಚಿನ ವಿಷಯ ತಿಳಿಯಬಹುದಾಗಿದೆ. ಎತ್ತಿನಗಾಡಿ (ಬಂಡಿ) ಅಂದಿನ ಪ್ರಮುಖ ಸಾಗಾಣಿಕೆಯ ಸಂಚಾರಿ ವಾಹನವಾಗಿತ್ತೆನ್ನಬಹುದು (ಇಂದಿಗೂ ಸಹ ನಮ್ಮ ಗ್ರಾಮಗಳಲ್ಲಿ ಇದೆ ಪ್ರಮುಖ ಸಂಚಾರಿ ವಾಹನ). ಇದೂ ಸಹ ಪ್ರಾಚೀನ ಕಾಲದಿಂದಲೂ ಜನಸಾಮಾನ್ಯರ ಸಾರಿಗೆಯ ಬಹುಮುಖ್ಯ ಸಾಧನವಾಗಿತ್ತೆಂದು ಕಂಡುಬರುತ್ತದೆ. ಪಾಯೇಸನು ಅರಮನೆಯ ಮುಂದಿರುವ ವಿಶಾಲವಾದ ಮೈದಾನದಲ್ಲಿ ದವಸ ಧಾನ್ಯಗಳನ್ನು ತುಂಬಿದ್ದ ಲೆಕ್ಕವಿಲ್ಲದಷ್ಟು ಬಂಡಿಗಳು ಸಂಚರಿಸುತ್ತಿದ್ದುದ್ದನ್ನು ತಾನು ಕಂಡಿದ್ದಾಗಿ ಹೇಳಿದ್ದಾನೆ. ಅಂದು ರತ್ತಿನ ಗಾಡಿಗಳನ್ನು ಹೊಂದಿರದವರನ್ನು ಕುರಿತು ಸರ್ವಜ್ಞ ಮಹಾಕವಿಯು "ಬಂಡಿ ಇಲ್ಲದ ಕೃಷಿಕರ ಆರಂಭ ವ್ಯರ್ಥ"ವೆಂದು ವಿಶ್ಲೇಷಿಸಿದ್ದಾನೆ ಇದರಿಂದ ಬಂಡಿಯು ಅಂದಿನ ದಿನ ಯಾವ ಸ್ಥಾನಮಾನ ಪಡೆದಿತ್ತೆಂದು ಊಹಿಸಬಹುದಾಗಿದೆ.

ಅಂದಿನ ಜನರು ಮುಖ್ಯವಾಗಿ ಭೂ ಸಂಚಾರದವರಾಗಿದ್ದರು. ಇದರಲ್ಲಿ ಪ್ರಮುಖವಾಗಿ ಮನುಷ್ಯರು ಹಾಗೂ ಪ್ರಾಣಿಗಳು ಸರಕು ಸಾಗಾಣಿಕೆ ಮತ್ತು ಪ್ರಯಾಣದ ಸಮಸ್ಯೆಯನ್ನು ಬಗೆಹರಿಸುತ್ತಿದ್ದರು. ರಾಜಪರಿವಾರದವರು ಸುಂದರವಾದ ಬೆಲೆಬಾಳುವ ಪಲ್ಲಕ್ಕಿಯಲ್ಲಿ ಕುಳಿತು ಸಂಪ್ರದಾಯಕವಾಗಿ ಪಲ್ಲಕ್ಕಿಯನ್ನು ಹೊರಲು ನೇಮಿಸಲಾಗಿದ್ದ ಬೋಯಿಗಳಿಂದ ಹೊರಿಸಿಕೊಂಡು ಹೋಗುವುದ ರೂಢಿಯಲ್ಲಿತ್ತು. ಇದನ್ನು ಹೊರಲು ನೇಮಿಸಲಾಗಿದ್ದ ಜನತೆಯು ತಮ್ಮದೇ ಕಸುಬಿನ ಆಧಾರದ ಮೇಲೆ ಪರಿವಾರದವರೆ ಎಂದು ಗುರ್ತಿಸಿಕೊಂಡರು. ಇಂದು ಇದೊಂದು ಜಾತಿಯಾಗಿ ಪರಿವರ್ತನೆಯಾಗಿದೆ. ಎತ್ತಿನಗಾಡಿ, ಎಮ್ಮೆಯಗಾಡಿ, ಕುದುರೆಗಾಡಿ, ಕತ್ತೆ ಮುಂತಾದವುಗಳೂ ಜನಸಾಮಾನ್ಯರ ಪ್ರಮಾಣದ ಮತ್ತು ಸರಕು ಸಾಗಿಸುವ ಬಹುಮುಖ್ಯ ಸಾರಿಗೆ ಸೌಕರ್ಯವಾಗಿತ್ತು, ಆನೆ ಕುದುರೆಗಳು ಹೆಚ್ಚಾಗಿ ಯುದ್ಧ ಭುಮಿಯಲ್ಲಿ ಬಳಕೆಯಾಗುತ್ತಿದ್ದವು. ವಿಜಯನಗರವು ದಕ್ಷಿಣ ಭಾರತದಲ್ಲಿಯೇ ಮುಖ್ಯ ಸಂಚಾರಿ ವ್ಯವಸ್ಥೆಯ ಕೇಂದ್ರವಾಗಿತ್ತೆಂದು ಡಾ. ಜಿ.ಎಸ್. ದೀಕ್ಷಿತ್ ಅಭಿಪ್ರಾಯಪಡುತ್ತಾರೆ. ಅಂದು ನದಿ ಸಾರಿಗೆಯು ಹೆಚ್ಚಿನ ಆದಾಯವನ್ನು ತರುವುದಾಗಿದ್ದಿತ್ತು. ಹೆಚ್ಚಾಗಿ ಸಾಮಾನು ಸರಂಜಾಮುಗಳನ್ನು ತೆಪ್ಪ, ದೋಣಿ, ನಾವೆ, ಹರಿಗೋಲುಗಳ ಮೂಲಕ ನದಿಯನ್ನು ದಾಟಿಸುತ್ತಿದ್ದರು. ಕೇವಲ ನದಿ ದಾಟುವುದಕ್ಕೆಂದೇ ಅಲ್ಲದೆ ಸಮುದ್ರದಲ್ಲಿ ಹಡಗಿದೆ ಪೂರಕವಾಗಿ, ಸಾಮಾನು ಮುಂತಾದವುಗಳನ್ನು ದಡಕ್ಕೆ ಸಾಗಿಸಲು ಹೆಚ್ಚಿನ ಸಂಖ್ಯೆಯಲ್ಲಿ ದೋಣಿಗಳನ್ನು ಉಪಯೋಗಿಸುತ್ತಿದ್ದರು. ದೋಣಿ ನಡೆಸುವವನನ್ನು 'ಅಂಬಿಗ' ಎಂದು ಕರೆಯುತ್ತಿದ್ದರು.

ಪ್ರಯಾಣಿಕರ ಅನುಕೂಲಕ್ಕಾಗಿ ಅನೇಕ ಮೂಲಭೂತ ಸೌಕರ್ಯಗಳನ್ನು ದಾರಿಯ ಉದ್ದಕ್ಕೂ ವಿವಿಧ ರೀತಿಯಲ್ಲಿ ಪೂರೈಸಿಕೊಳ್ಳಲಾಗುತ್ತಿತ್ತು. ಹಸಿದು ಬಂದವರಿಗೆ ಊಟ ಹಾಕಲು ಅನ್ನಛತ್ರಗಳು, ಶ್ರಮಿಸುವವರಿಗೆ ನಿವಾಸಿಗಳು, ಬಾಯಾರಿಕೆಯನ್ನು ನಿವಾರಿಸಲು ಅರವಟ್ಟಿಗೆಗಳು ಇರುತ್ತಿದ್ದವು. ಇಷ್ಟೇ ಅಲ್ಲದೆ ದಾರಿಯುದ್ದಕ್ಕೂ ಪ್ರಯಾಣಿಕರಿಗೆ ತಂಪು ನೀಡಲು ಸಾಲು ಮರಗಳು ಇದ್ದವು.

ಆಲದ ಮರ, ಅರಳಿ ಮರ, ಹುಣಸೇ ಮರ, ಮಾವಿನ ಮರ ಈ ಬಗೆಯಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದವು ಹಾಗೂ ವಿವಿಧ ರೀತಿಯ ಫಲವೃಕ್ಷಗಳು ಇದ್ದವೆಂದು ಹೇಳುತ್ತಾ, ನೀರಿನ ಅನುಕೂಲಕ್ಕಾಗಿ ಕೆರೆ, ಸರೋವರ, ಬಾವಿ, ಕಾಲುವೆ ಮುಂತಾದ ಸೌಕರ್ಯಗಳಿದ್ದವು, ಬೇಸಿಗೆಯ ಸಮಯದಲ್ಲಿ ಕೆಲವು ದಾನಿಗಳು ಪ್ರಮುಖ ಸ್ಥಳಗಳಲ್ಲಿ ಪಾನಕ, ಕೆನೆಮೊಸರನ್ನು ಪ್ರಯಾಣಿಕರಿಗೆ ಕೊಡುತ್ತಿದ್ದರು ಎಂದು **ಸೀಜರ್ ಫ್ರೆಡ್ರಿಕ್** ಎಂಬ ವಿದೇಶಿ ಪ್ರವಾಸಿಗರು ಹೇಳಿರುವುದು ಅಂದಿನ ಸಾರಿಗೆ ವ್ಯವಸ್ಥೆಗೆ ಹಾಗೂ ಅದರ ಅನುಕೂಲಕ್ಕೆ ರಾಜರು ನೀಡಿದ ಪ್ರೋತ್ಸಾಹವನ್ನು ಸೂಚಿಸುತ್ತದೆ.

***

# ೩. ಸಾಮಾಜಿಕ ಸ್ಥಿತಿಗತಿಗಳು (೧)

ಮಾನವ ಜಾತಿಯು ಸಾವಿರಾರು ವರ್ಷಗಳು ಬಾಳಿಕೊಂಡು ಬರುತ್ತಿರುವುದರ ಒಂದು ಅನುಭವ, ಅಲೋಚನಾ ಫಲ, ನಂಬಿಕೆಗಳು, ನಡವಳಿಕೆಗಳು ಇವುಗಳನ್ನೇ ನಾವು ಸಂಸ್ಕೃತಿಯ ಮೂಲ ಅಂಶವೆಂದು ಪರಿಗಣಿಸಬಹುದಾಗಿದೆ. ಇಲ್ಲಿ "ಸಂಸ್ಕೃತಿ" ಎಂಬ ಪದವು ಕೇವಲ ಮಾತಿಗೆ ನಿಲುಕದೆ, ಜನರು ಅನುಭವಿಸುವ, ಆಚರಿಸುವ ರೀತಿ ನೀತಿಗಳಿಂದ ಹಾಗೂ ಅದರಿಂದ ಪಡೆಯುವ ಅನುಭವಕ್ಕೆ ಕಂಡುಬರುವ ವಿಷಯ ಎಂದು ಹೇಳಬಹುದು. ಈ ಸಂಸ್ಕೃತಿಯು ಒಂದು ದಿನಕ್ಕಾಗಿಯೇ ವ್ಯಕ್ತಿಗಾಗಲಿ ಅಥವಾ ಸಮಾಜಕ್ಕಾಗಲಿ ಬರತಕ್ಕದ್ದಲ್ಲ. ಗದ್ದೆಯಲ್ಲಿ ನೆಟ್ಟ ಕಬ್ಬಿನ ತುಂಡು ರುಚಿಕರವಾದ ಕಬ್ಬಿನ ಜಲ್ಲವನ್ನು ನೀಡಲು ಹಲವಾರು ದಿನಗಳ ಕಾಲಾವಕಾಶ ಬೇಕು. ಅದೇ ರೀತಿಯಲ್ಲಿ ಜನತೆಯ ಸಾವಿರಾರು ವರ್ಷಗಳ ನಡವಳಿಕೆ, ತಿಳಿವಳಿಕೆಗಳ ಫಲವಾಗಿಯೇ ಸಮಾಜಕ್ಕೆ ಕೂಡಿಬರುವ ಸಂಸ್ಕಾರವನ್ನು ನಾವು 'ಸಂಸ್ಕೃತಿ' ಎಂದು ಕರೆದಿರುವುದು. ಯಾವುದೇ ಸಮಾಜವಿರಲಿ ಅದಕ್ಕೆ ತನ್ನದೆ ಆದ ಸಂಸ್ಕೃತಿ ಇದ್ದೇ ಇರುತ್ತದೆ. ಸಂಸ್ಕೃತಿ ಎಂಬುವುದು ಒಂದು ರೀತಿಯಲ್ಲಿ ಸಮಾಜಕ್ಕೆ ಸ್ಫೂರ್ತಿಯನ್ನು ಕೊಂಡುವಂತದ್ದು ಎನ್ನಬಹುದು. ಪ್ರಾಚೀನ ಕಾಲದಿಂದಲೂ ನಮ್ಮ ಇತಿಹಾಸವನ್ನು ಗಮನಿಸಿದರೆ ಭಾರತದಲ್ಲಿ ವಾಸಿಸಿಕೊಂಡು ಬಂದಿರುವ ಜನಜೀವನದ ಸ್ವರೂಪಕ್ಕೆ ಧರ್ಮವೇ ಪ್ರಬಲ ಶಕ್ತಿಯಾಗಿ ಅಂತಿಮ ಹಂತದಲ್ಲಿ ರೂಪಗೊಂಡಿತ್ತೆನ್ನಬಹುದು. ಇದರಿಂದಾಗಿ ಇಂದಿಗೂ ಜೀವನದ ಎಲ್ಲಾ ರಂಗಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ ಪರಿಗಣಿಸುವಂತಾಗಿದೆ. ಒಂದರ್ಥದಲ್ಲಿ ಇದರಿಂದ ಒಳ್ಳೆಯದಾಯಿತೆನ್ನಬಹುದಾದರೂ ಸಹ ಮತ್ತೊಂದು ರೀತಿಯಲ್ಲಿ ಸಾಮಾಜಿಕ ಜೀವನವೂ ಸಹ ಕಲುಷಿತವಾಗಿತ್ತೆನ್ನಬಹುದು. ಈ ಎರಡರ ಮಧ್ಯೆ ವಿಜಯನಗರದ ಅರಸರ ಕಾಲದಲ್ಲಿ ಅನೇಕ ತತ್ವಜ್ಞಾನಿಗಳು, ದಾಸರುಗಳು ತಮ್ಮ ತತ್ವ ಹಾಗೂ ದಾಸಪದಗಳಿಂದ ವಿಜಯನಗರದ ಸಾಮಾಜಿಕ ಅನಿಷ್ಟಗಳನ್ನು ಪ್ರತಿಭಟಿಸಿ ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನುಗೊಳಿಸುವ ಪ್ರಯತ್ನಗಳೂ ನಡೆಯುತ್ತಾ ಬಂದುವೆನ್ನಬಹುದು. ಅಂದಿನ ಕಾಲದ ಸಾಮಾಜಿಕ ಜೀವನವನ್ನು ಅನೇಕ ಸ್ತರಗಳಲ್ಲಿ ಅಧ್ಯಯನ ಮಾಡಬಹುದಾಗಿದೆ. ಒಂದರ್ಥದಲ್ಲಿ ವಿಜಯನಗರ ಅರಸರುಗಳು ಸಾಮಾಜಿಕ ಜೀವನವನ್ನು ಸಮಾನತೆಯ ಆಧಾರದ ಮೇಲೆ ಕಟ್ಟಲು, ಕಟ್ಟುವ ಪ್ರಯತ್ನದಲ್ಲಿ ಅಷ್ಟು ಇಷ್ಟು ಪ್ರಭಾವ ಶಾಲಿಯಾಗಿದ್ದ ಪ್ರಯತ್ನಗಳನ್ನು ನಡೆಸಿದರು. ಇದಕ್ಕೆ ಅಂದು ಸೃಷ್ಟಿಯಾಗಿರುವ ದಾಸ ಪದಗಳೇ ಸಾಕ್ಷಿಯಾಗಿವೆ. ಹಾಗೂ ಸ್ವಲ್ಪ ಪ್ರಮಾಣದಲ್ಲಿ ಶಾಸನಗಳು ವೀರಗಲ್ಲುಗಳು ಅಧ್ಯಯನಕ್ಕೆ ಸಹಕಾರಿಯಾಗಿವೆ.

### ೩.೧. ಕುಟುಂಬ

ಪ್ರಾಚೀನ ಭಾರತದ ಇತಿಹಾಸದಿಂದಲೂ ಕಂಡುಬರುವ ಹಾಗೆ ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿಯೂ ಕುಟುಂಬವು ಸಮಾಜದ ಮೂಲಭೂತ ಸ್ಥಿತಿಯದ್ದಾಗಿತ್ತು. ಅಂದು ಇದು ಚಿಕ್ಕ ಹಾಗೂ ವಿಶಾಲ ಸಮಾಜದ ಶಕ್ತಿಶಾಲಿ ಘಟಕವಾಗಿ ಬೆಳೆದು ನಿಂತಿತ್ತೆನ್ನಬಹುದು. ಕೆಲವು ಇತಿಹಾಸಗಾರರು ಅಂದಿನ ಕುಟುಂಬವನ್ನು ಮಾನವ ಸಮಾಜದ ಪ್ರಾಥಮಿಕ ಸಂಸ್ಥೆಯಾಗಿತ್ತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಮತ್ತೆ ಕೆಲವು ಇತಿಹಾಸಗಾರರು ಕುಟುಂಬವನ್ನು ಅಂದಿನ ಸಮಾಜದ ಕೇಂದ್ರ ಬಿಂದುವಾಗಿತ್ತೆಂದು ಹೇಳಿಕೆ ನೀಡಿದ್ದಾರೆ. ಕುಟುಂಬವು ವ್ಯಕ್ತಿಯ ಸಂಪರ್ಕ ಪಡೆಯುವ ಮೊದಲನೆಯ ಸಮೂಹ ಮತ್ತು ಅವನ ಭವಿಷ್ಯದ ಬದುಕಿಗೆ ತಳಪಾಯವನ್ನು ಹಾಕಿಕೊಡುವ ಸಂಸ್ಥೆಯಾಗಿತ್ತೆನ್ನಬಹುದು. ಅದುದರಿಂದಲೇ ವಿಜಯನಗರದ ಅರಸರ ಆಳ್ವಿಕೆಯ ಕಾಲದ

ಸಂಸ್ಕೃತಿಯನ್ನು ಚರ್ಚಿಸುತ್ತಿರುವ ಈ ಸಮಯದಲ್ಲಿ ಯಾವುದೇ ಸಮಾಜದ ಸಾಮಾಜಿಕ ಜೀವನದ, ಯಾವುದೇ ವಿಶ್ಲೇಷಣೆಯಲ್ಲಿ ಕುಟುಂಬವನ್ನು ಅಧ್ಯಯನದ ಮೊದಲ ಘಟಕವಾಗಿ ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ ಕುಟುಂಬವು ನಿರಂತರವಾಗಿ ಬದಲಾಗುತ್ತಿರುವ ಒಂದು ರೀತಿಯಲ್ಲಿ ಚಲನಾತ್ಮಕ ಸಂಸ್ಥೆ ಎನ್ನಬಹುದು.

ವಿಜಯನಗರ ಕಾಲದ ಕುಟುಂಬ ವ್ಯವಸ್ಥೆಗಳಲ್ಲಿ ಅನೇಕ ವಿಧಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಏಕಪತಿ ಹಾಗೂ ಏಕಸತಿಯನ್ನು ಒಳಗೊಂಡ ಏಕಸಂಗಾತಿ ಕುಟುಂಬ ವ್ಯವಸ್ಥೆ ಹಾಗೂ ಒಬ್ಬ ಗಂಡಸು ಅನೇಕ ಪತ್ನಿಯರನ್ನು ಹೊಂದಿರುವ ಬಹುಪತ್ನಿತ್ವದ ಕುಟುಂಬ ಅಥವಾ ಒಬ್ಬ ಹೆಂಗಸು ಅನೇಕ ಪತಿಯರನ್ನು ಹೊಂದಿದ್ದ ಬಹುಪತ್ನಿತ್ವ ಕುಟುಂಬ ಹಾಗೂ ಒಂದು ಗುಂಪಿನ ಪುರುಷರು ಒಟ್ಟಿಗೆ ಇನ್ನೊಂದು ಗುಂಪಿನ ಸ್ತ್ರೀಯರನ್ನು ಮದುವೆಯಾಗುವ ಸಮೂಹ ವಿವಾಹದ ಆಧಾರದ ಮೇಲಿನ ಕುಟುಂಬ, ಈ ರೀತಿಯ ವಿವಿಧ ಕುಟುಂಬಗಳು ಅನೇಕ ಆಧಾರಗಳಿಂದ ಕಂಡುಬರುತ್ತವೆ. ಈ ಎಲ್ಲಾ ಮಾದರಿಯ ಕುಟುಂಬ ವ್ಯವಸ್ಥೆಯು ಕೇವಲ ವಿಜಯನಗರದ ಕಾಲದಲ್ಲಿಯೇ ಅಲ್ಲದೆ ಕರ್ನಾಟಕ ಹಾಗೂ ಭಾರತದ ಚರಿತ್ರೆಯ ಉದ್ದಕ್ಕೂ ಒಂದಲ್ಲ ಭಾಗಗಳಲ್ಲಿ ಕಂಡುಬರುತ್ತವೆ. ಅಂದಿನ ಕುಟುಂಬಗಳ ಪ್ರಮುಖ ಕರ್ತವ್ಯ ಮೂಲಭೂತ ಕಾರ್ಯಗಳೆಂದರೆ ಮಕ್ಕಳನ್ನು ಪಡೆಯುವುದು, ಮಕ್ಕಳ ಪಾಲನೆ ಹಾಗೂ ಪೋಷಣೆ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ರಾಜಾಸ್ಥಾನಕ್ಕೆ ಪರಿಚಯಿಸುವುದು, ಕುಟುಂಬ ಸದಸ್ಯರಿಗೆ ಸ್ಥಾನಮಾನವನ್ನು ವರ್ಗಾವಣೆ ಮಾಡುವುದು, ಕುಟುಂಬದ ಸದಸ್ಯರಿಗೆ ಮನರಂಜನೆಯನ್ನು ಒದಗಿಸುವುದು ಹಾಗೂ ಕುಟುಂಬದ ವೃದ್ಧ ಮತ್ತು ಅಶಕ್ತ ರಕ್ತ ಸಂಬಂಧಿಗಳನ್ನು ನೋಡಿಕೊಳ್ಳುವ ಕಾರ್ಯದಲ್ಲಿ ತೊಡಗುತ್ತಿತ್ತೆನ್ನಬಹುದು. ಇದು ಉನ್ನತ ವರ್ಗದವರೆಂದು ಕರೆದುಕೊಳ್ಳುತ್ತಿದ್ದ ಕುಟುಂಬದ ವ್ಯವಸ್ಥೆಯಾಗಿದ್ದರೆ ಶೂದ್ರರ ಕುಟುಂಬ ವ್ಯವಸ್ಥೆಯು ಶೋಚನೀಯವಾಗಿತ್ತು. ಹೆಚ್ಚಿನ ಜನರು ಧಣಿಗಳ ಮನೆಯಲ್ಲಿ ಜೀತಮಾಡಿಯೇ ತಮ್ಮ ಹಾಗೂ ತಮ್ಮ ಮಕ್ಕಳ ಜೀವನವನ್ನು ಮುಗಿಸುತ್ತಿದ್ದರು. ಒಂದರ್ಥದಲ್ಲಿ ಹೇಳುವುದಾದರೆ ಇವರಿಗೆ ತಮ್ಮದೇ ಅದಂತಹ ಸ್ಥಿರವಾದ ಕುಟುಂಬ ಹೆಚ್ಚುಕಾಲ ಇರುತ್ತಿರಲಿಲ್ಲ ಎನ್ನಬಹುದು. ಇದಕ್ಕೆ ಇಂದಿಗೂ ಜೀವಂತವಿರುವ ಅನೇಕ ಸಾಮಾಜಿಕ ಕಟ್ಟುಪಾಡುಗಳೇ ಸಾಕ್ಷಿಯಾಗಿವೆ.

**ಅವಿಭಕ್ತ ಕುಟುಂಬ**

ಹಾಗೆ ನೋಡಿದರೆ ಅವಿಭಕ್ತ ಕುಟುಂಬವು ಭಾರತದ ಒಂದು ಅತ್ಯಂತ ಪ್ರಾಚೀನವಾದ ಮತ್ತು ಸಾರ್ವತ್ರಿಕವಾದ ಸಂಸ್ಥೆ. ಒಂದು ರೀತಿಯಲ್ಲಿ ಭಾರತದಲ್ಲಿ ಜಾತಿಪದ್ಧತಿಯಷ್ಟೇ ಪುರಾತನವಾದದ್ದೆನ್ನಬಹುದು. ಇದು ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಹಾಸುಹೊಕ್ಕಾಗಿ ತನ್ನ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಬಂದಿದೆ. ಈ ರೀತಯ ಕುಟುಂಬವನ್ನು ರಕ್ತ ಸಂಬಂಧದ ಜನರ ಗುಂಪನ್ನು ಹೊಂದಿರುವ ಒಂದು ಜನಸಮೂಹ ಎಂದು ಕರೆಯಬಹುದು. ಏಕೆಂದರೆ ಈ ಕುಟುಂಬಲ್ಲಿ ತಂದೆ ತಾಯಿ ಸೋದರರು ಮತ್ತು ಅವರ ಹೆಂಡತಿ ಮಕ್ಕಳನ್ನು ಒಳಗೊಂಡಿರುವ ಒಂದು ದೊಡ್ಡ ಕುಟುಂಬ ವ್ಯವಸ್ಥೆ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಕುಟುಂಬದ ಒಡೆತನವು ಹಿರಿಯ ಪುರುಷ ಸದಸ್ಯನ ಅಧೀನದಲ್ಲಿರುತ್ತಿತ್ತೆಂದು ಆಧಾರಗಳಿಂದ ತಿಳಿದುಬರುತ್ತದೆ. ಕುಟುಂಬದ ಸದಸ್ಯರೆಲ್ಲರಿಗೂ ಒಂದೇ ಅಡುಗೆ ಮನೆಯನ್ನೊಂದಿದ್ದು ಹಣಕಾಸಿನ ವಿಷಯದಲ್ಲಿ ಒಂದೇ ತೀರ್ಮಾನವನ್ನು ಹೊಂದಿರುತ್ತಿದ್ದರೆಂದು ತಿಳಿದುಬರುತ್ತದೆ. ಈ ಕುಟುಂಬದ ಗಾತ್ರಕ್ಕೆ ಮಿತಿಯಿರುತ್ತಿರಲಿಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ ಇಂತಹ ಕುಟುಂಬಗಳು ಅರರಿಂದ ನಾಲ್ಕು ತಲೆಮಾರಿನವರನ್ನು ಒಳಗೊಂಡಿದ್ದಕ್ಕೆ ನಿದರ್ಶನಗಳು ಸಿಗುತ್ತವೆ.

ಮೇಲೆ ತಿಳಿಸಿರುವ ಅವಿಭಕ್ತ ಕುಟುಂಬದ ಚಿತ್ರಣವು ಸಾಂಪ್ರದಾಯಿಕ ಹಿಂದೂ ಧರ್ಮದಿಂದ ಪ್ರತಿಪಾದಿಸಲ್ಪಟ್ಟಿತ್ತು. ಆದರೆ ಅದರ ನಿಯಮ ಮತ್ತು ಆಚರಣೆಗಳು ಅನೇಕ ರೀತಿಯಲ್ಲಿ ವ್ಯತ್ಯಾಸ ಹೊಂದಿದ್ದವೆಂದು ಕಂಡುಬರುತ್ತದೆ. ವಿಜಯನಗರ ಅರಸರ ಕಾಲದ ಗ್ರಾಮೀಣ ಪ್ರದೇಶಗಳಲ್ಲಿ ಉನ್ನತ ಜಾತಿಗಳು ಈ ಆದರ್ಶಗಳಲ್ಲಿ ನಂಬಿಕೆ ಇಡುವುದರ ಜೊತೆಗೆ ಗತ್ತು ಗಾಂಭೀರ್ಯದಿಂದ ಕಟ್ಟುನಿಟ್ಟಾಗಿ ಅನುಸರಿಸಲು ಮುಂದಾಗುತ್ತಿದ್ದವು. ಮಧ್ಯಮ ವರ್ಗದ ಜನರು ಈ ತತ್ವಗಳಿಗೆ ಹೆಚ್ಚಾಗಿ ಅಂಟಿಕೊಳ್ಳಲಿಲ್ಲವೆಂದೇ ಹೇಳಬಹುದು. ಆದರೆ ಜಾತಿ, ವರ್ಣ ಶ್ರೇಣಿಯ ಮಧ್ಯ ಪ್ರವೇಶವು ಹೆಚ್ಚಾಗಿ ಈ ಆದರ್ಶಗಳನ್ನು ತಳ್ಳಿಹಾಕಿದವು ಹಾಗೂ ಕೆಳವರ್ಗದಲ್ಲಿ ಅವುಗಳ ಸುಳಿವೇ ಮರೆಯಾದವು. ಸಾಮಾನ್ಯವಾಗಿ ಅಂದು ಕೆಲವು ಪ್ರದೇಶಗಳನ್ನು ಹೊರತುಪಡಿಸಿದರೆ ಎಲ್ಲಾ ಭಾಗಗಳಲ್ಲಿಯೂ ಪಿತೃವಂಶೀಯ ಮತ್ತು

ಪಿತೃಸ್ಥಳೀಯ ವಿಭಕ್ತ ಅಥವಾ ಅವಿಭಕ್ತ ಕುಟುಂಬ ಪದ್ಧತಿಯೂ ಕಂಡುಬರುತ್ತಿತ್ತು. ದೊಡ್ಡ ಅವಿಭಕ್ತ ಕುಟುಂಬವು ಆದರ್ಶವಾದುದೆಂದು ನಿರ್ಧರಿಸಿದ್ದಾಗ್ಯೂ ಅನೇಕ ತಲೆಮಾರಿನವರು ಒಂದೇ ಸೂರಿನಲ್ಲಿ ವಾಸಿಸುವ, ಒಂದೇ ಅಡುಗೆ ಮನೆಯಲ್ಲಿ ಊಟ ತಯಾರಿ ಮಾಡುವ ಕುಟುಂಬಗಳನ್ನು ಗೊತ್ತು ಮಾಡುವುದೂ ಸಹ ಕಷ್ಟದಾಯಕವಾದುದಾಗಿದೆ. ವಾಸ್ತವವಾಗಿ ಹಳ್ಳಿಗಳಲ್ಲಿ ಅವಿಭಕ್ತ ಕುಟುಂಬಗಳು ಅಲ್ಲಲ್ಲಿ ಕಂಡುಬಂದರೂ ಅವು ಚಿಕ್ಕ ಘಟಕಗಳಾಗಿ ತಂದೆ ತಾಯಿ ಅವರ ಮದುವೆಯಾದ ಗಂಡು ಮಕ್ಕಳು ಮತ್ತು ಅವರ ಮಕ್ಕಳು, ಸೋದರರು ಹಾಗೂ ಅವರ ಪತಿಯರನ್ನು ಒಳಗೊಂಡಿರುತ್ತಿತ್ತು. ಏಕೆಂದರೆ ಸಾಮಾನ್ಯವಾಗಿ ಗಂಡು ಮಕ್ಕಳು ಮದುವೆಯಾದ ಕೆಲವೇ ಕೆಲವು ವರ್ಷಗಳಲ್ಲಿ ತಂದೆ ತಾಯಿಯವರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದುದಕ್ಕೆ ಅಂದಿನ ಜನಪದಿಯ ಆಕರಗಳು ಹೆಚ್ಚಾಗಿ ಬೆಳಕು ಚೆಲ್ಲುತ್ತವೆ.

ಇಂದಿಗೂ ಸಹ ಅವಿಭಕ್ತ ಕುಟುಂಬದಲ್ಲಿನ ಬದಲಾವಣೆಗಳ ಬಗ್ಗೆ ವಿವಿಧ ಭಿನ್ನಾಭಿಪ್ರಾಯಗಳಿವೆ. ಕೆಲವು ಇತಿಹಾಸಕಾರರು ಅವಿಭಕ್ತ ಕುಟುಂಬದಲ್ಲಿ ಕೆಲವು ಅನಿವಾರ್ಯ ಬದಲಾವಣೆಗಳನ್ನು ಗುರುತಿಸಿದ್ದಾರೆ. ಜಾತಿ ಪದ್ಧತಿಯಂತೆ ಅವಿಭಕ್ತ ಕುಟುಂಬವು ಸಹ ಹಿಂದೂ ಸಮಾಜದ ವಿಶಿಷ್ಟ ಲಕ್ಷಣವಾಗಿದೆ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ. ಆದುದರಿಂದಲೇ ಇದು ಯಾವುದೇ ಪರಿಸ್ಥಿತಿಯಲ್ಲಿಯೂ ದಕ್ಕೆಯನ್ನು ಅನುಭವಿಸದೇ ತಕ್ಕಮಟ್ಟಿಗೆ ಸುರಕ್ಷಿತವಾಗಿಯೇ ಉಳಿದುಕೊಂಡು ಬರುತ್ತಿದೆ. ಒಂದು ವೇಳ ಅವಿಭಕ್ತ ಕುಟುಂಬವು ಸಂಪೂರ್ಣವಾಗಿ ನಶಿಸಿಹೋದದ್ದೇ ಆದರೆ ಹಿಂದೂ ಭಾರತೀಯ ಸಂಸ್ಕೃತಿಗೆ ಮತ್ತು ಸಮಾಜಕ್ಕೆ ಗಂಡಾಂತರ ಉಂಟಾದಂತೆ ಎಂಬ ಹೆದರಿಕೆಯನ್ನು ಅನೇಕ ಸಮಾಜಶಾಸ್ತ್ರಜ್ಞರು ವ್ಯಕ್ತಪಡಿಸುತ್ತಾರೆ.

**ಬಂಧುತ್ವ**

ಕುಟುಂಬ ವ್ಯವಸ್ಥೆಯ ಮಾದರಿಯಲ್ಲಿಯೇ ಬಂಧುತ್ವವು ಸಹ ಸಾಮಾಜಿಕ ರಚನೆಯ ಮೂಲಭೂತ ಮತ್ತು ಪ್ರಾಚೀನ ತಳಹದಿಗಳಲ್ಲೊಂದಾಗಿ ಬೆಳೆದು ಬಂದಿತ್ತು. ೧೫ನೇ ಶತಮಾನದಲ್ಲಿ ಕುಟುಂಬವು ಸಾಮಾಜಿಕ ಸಂಘಟನೆಯ ಮೂಲಭೂತ ಘಟಕವಾಗಿದ್ದರೆ ಬಂಧುತ್ವವು ಅಸಂಘಟನೆಯ ಸೂತ್ರವಾಗಿತ್ತೆನ್ನಬಹುದು. ಮೇಲಿನ ಹೇಳಿಕೆಯಿಂದ ಕಂಡುಬರುವುದೇನೆಂದರೆ ವ್ಯಕ್ತಿ ಮತ್ತು ಕುಟುಂಬಗಳು ಒಟ್ಟಿಗೆ ಬಾಳುವೆ ನಡೆಸಲು ಅನುಕೂಲವಾಗುವ ಒಂದು ವ್ಯವಸ್ಥೆಯನ್ನು ಬಂಧುತ್ವವು ಕಲ್ಪಿಸುತ್ತದೆ ಎಂಬುವುದು. ಬಂಧುತ್ವವು ಗಾತ್ರ ಮತ್ತು ಕಾರ್ಯಕ್ಷೇತ್ರದಲ್ಲಿ ಕುಟುಂಬಕ್ಕಿಂತಲೂ ಮಿಗಿಲಾದದ್ದು. ಕುಟುಂಬವು ಕೇವಲ ಒಂದು ಘಟಕವಾಗಿ ರೂಪಗೊಂಡಿದ್ದರೆ, ಬಂಧುತ್ವವು ಸುಲಭವಾಗಿ ಬಿಡಿಸಿಕೊಳ್ಳಲಾಗದ ಸಂಬಂಧಗಳ ಸಾಕಷ್ಟು ವಿಸ್ತಾರವಾದ ಬಲೆಯಾಗಿರುತ್ತದೆ. ಇತರೆ ಸಾಮಾಜಿಕ ಸಂಬಂಧಗಳಂತೆಯೇ ಬಂಧುತ್ವವೂ ಕೂಡ ಸಮುದಾಯದಲ್ಲಿಯೇ ಏರ್ಪಡುತ್ತಿತ್ತೆನ್ನಬಹುದು. ಈ ರೀತಿಯಲ್ಲಿ ಬಂಧುತ್ವದ ಸಂಬಂಧಗಳು ಮತ್ತು ಸಾಮಾನ್ಯ ಚಟುವಟಿಕೆಗಳು ಪರಸ್ಪರ ಸಂಬಂಧ ಹೊಂದಿದ್ದವು.

ಬಂಧುತ್ವದಲ್ಲಿ ವಿವಿಧ ರೀತಿಯ ಸಮೂಹಗಳಿದ್ದುದ್ದನ್ನು ಗುರುತಿಸಬಹುದು. ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಮುಖವಾಗಿ ಏಕಪಕ್ಷಿಯ ಬಂಧುತ್ವ, ಉಭಯ, ಏಕಬಂಧುತ್ವ, ಸಮಾನ ಬಂಧುತ್ವ ಇನ್ನೂ ಮೊದಲಾದ ಬಂಧುತ್ವದ ರೂಪಗಳಿದ್ದವು ತಂದೆ ಅಥವಾ ತಾಯಿ ಮುಖಾಂತರ ವಂಶವನ್ನು ನಿರ್ಧರಿಸಿದರೆ ಆ ಬಂಧುತ್ವವು ಏಕಪಕ್ಷಿಯ ಆಗಿರುತ್ತಿತ್ತು. ಒಂದು ವೇಳೆ ವಂಶವನ್ನು ತಂದೆ ಮತ್ತು ತಾಯಿಯರಿಬ್ಬರೂ ನಿರ್ಧರಿಸಿದರೆ ಅಂತವನ್ನು ಉಭಯಪಕ್ಷಿಯ ಎಂದು ಕರೆಯಲಾಗುತ್ತಿತ್ತು.

**೩.೨ ಸಂಸಾರ**

ಸಂಸಾರ ಎಂಬ ಪದವೆ ಒಂದು ರೀತಿಯಲ್ಲಿ ಪ್ರತಿಯೊಬ್ಬರಿಗೂ ಜೀವನದಲ್ಲಿ ಸ್ಪರ್ಧೆಯನೊಡ್ಡುವ ರೀತಿಯದ್ದಾಗಿರುತ್ತದೆ. "ಈಸಬೇಕು ಇದ್ದು ಜೈಸಬೇಕು" ಎಂಬ ಮಾತನ್ನು ಪುರಂದರದಾಸರು ಸಂಸಾರದ ಅರ್ಥದಲ್ಲಿಯೇ ಹೇಳಿರುವುದು ಸಮಾಜದಲ್ಲಿ ಬಾಳಬೇಕಾದ ವ್ಯಕ್ತಿಯು ಹೆಜ್ಜೆಹೆಜ್ಜೆಗೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದೇ ರೀತಿಯಲ್ಲಿ ತನ್ನ ಜೀವನದ ಬದುಕಿಗಾಗಿ ಅನೇಕ ಸನ್ನಿವೇಶಗಳನ್ನು, ವ್ಯಕ್ತಿಗಳನ್ನೂ ಮತ್ತಿತರ ವಸ್ತುಗಳನ್ನೂ ಅವಲಂಬಿಸಿ ಬದುಕಬೇಕಾಗುತ್ತದೆ. ಕ್ರಿಯೆಯು ಹುಟ್ಟಿನಿಂದ ಸಾಯುವವರೆವಿಗೂ ನಿರಂತರವಾಗಿ ನಡೆಯುತ್ತಿರುತ್ತದೆ. ಮನುಷ್ಯನ ಜೀವನ ಒಂದು ರೀತಿಯಲ್ಲಿ 'ಚಕ್ರ'ವಾಗಿರುತ್ತದೆ. ಮಗುವಾಗಿರುವಾಗ ತಂದೆ ತಾಯಿಗಳು, ಬೆಳೆಯುತ್ತಾ ಅಣ್ಣತಮ್ಮಂದಿರುಗಳು, ಬಂಧು ಬಳಗಗಳು, ಗೆಳೆಯ ಗೆಳತಿಯರು, ಅನಂತರ

ಸತಿಪತಿಗಳು ಮುಂದೆ ಮಕ್ಕಳು. ಈ ಸಂಬಂಧಗಳನ್ನು ಅದಕ್ಕನುಗುಣವಾಗಿ ಪರಿಸರವನ್ನು ವ್ಯಕ್ತಿ ಅಳವಡಿಸಿಕೊಂಡು ಬದುಕಬೇಕಾಗುತ್ತದೆ. ಈ ದೃಷ್ಟಿಯಿಂದಲೇ ಜೀವನ ಒಂದು ಚಕ್ರವಾಗಿರುತ್ತದೆ ಎಂದು ಹೇಳಿರುವುದು. ಈ ರೀತಿಯ ಜೀವನ ಪದ್ಧತಿಯು ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಉತ್ತಮ ಹಾಗೂ ಮಧ್ಯಮ ಕುಟುಂಬಗಳಲ್ಲಿ ಹೆಚ್ಚಾಗಿತ್ತೆಂದು ಲಿಖಿತ ಹಾಗೂ ಮೌಖಿಕಾಧಾರಗಳಿಂದ ತಿಳಿದುಬರುತ್ತದೆ. ಕೆಳವರ್ಗದಲ್ಲಿ ಈ ವ್ಯವಸ್ಥೆ ಹೆಚ್ಚಾಗಿದ್ದಂತೆ ಕಂಡುಬರುವುದಿಲ್ಲ. ಅಂದಿನ ಸಂಸಾರದಲ್ಲಿ ಅನೇಕ ರೀತಿಯ ಸಮಸ್ಯೆಗಳು ಮನೆಮಾಡಿದ್ದವು. ಇದಕ್ಕೆ ಪ್ರತ್ಯಕ್ಷ ಸಾಕ್ಷಿಯೆಂಬಂತೆ ಪುರಂದರದಾಸರು ಹೇಳಿರುವ "ಈಸಬೇಕು ಇದ್ದು ಜೈಸಬೇಕು ಈ ಹೇಸಿಗೆ ಸಂಸಾರದಲ್ಲಿ" ಎಂಬ ವಾಣಿಯೇ ನಿದರ್ಶನ. ಹಾಗಂತ ಪುರಂದರರು ಸಂಸಾರವನ್ನು ಕೆಟ್ಟದೆಂದೂ ಸಹ ಹೇಳುವುದಿಲ್ಲ, ಬದುಕಬೇಕು, ಸುಖ ಶಾಂತಿಯಿಂದ ಭಗವಂತನನ್ನು ಮರೆಯದೆ ಸಂಸಾರ ಮಾಡಬೇಕು, ಅಹಂಕಾರ ಮಮಕಾರಗಳನ್ನು ಬಿಟ್ಟು ಅನಾಸಕ್ತಿಯಿಂದ ಬದುಕಬೇಕು ಎಂಬುವುದೇ ಅವರು ನೀಡಿರುವ ಹಿತವಚನ, ಅದಕ್ಕಾಗಿಯೇ ಅವರು,

*ಆರು ಹಿತರರು ನಿನಗೆ ಈ ಮೂವರೊಳಗೆ*
*ನಾರಿಯೋ ಧಾರಿಣಿಯೋ ಬಲುಧನದ ಸಿರಿಯೋ*
*ಅನ್ಯರಲ್ಲಿ ಜನಿಸಿದ್ದ ಅಂಗನೆಯು ಕರೆತಂದು*
*ತನ್ನ ಮನೆಗವಳ ಯಜಮಾನಿ ಎನಿಸಿ*
*ಭಿನ್ನವಿಲ್ಲದೆಯರ್ಧ ದೇಹವೆನಿಸುವ ಸತಿಯು*
*ಕಣ್ಣಿನಲ್ಲಿ ನೋಡಲಮ್ಮಳು ಕಾಲವಶದಿ.....*

ಎಂದು ಹೇಳಿದ್ದಾರೆ, ಸಂಸಾರಕ್ಕೆ ಬೇಕಾಗುವ ಪ್ರಮುಖ ನೀತಿ ಉಪದೇಶಗಳು ಮೇಲಿನವುಗಳಾಗಿವೆ. ಇದಕ್ಕಾಗಿಯೇ ಪುರಂದರದಾಸರು ಸಂಸಾರದಲ್ಲಿ ಕಂಡು ಬರುವ ತೊಂದರೆಗಳಿಂದ ಬಳಲುತ್ತಿದ್ದ ಜನರಿಗೆ, ಅವರ ಹುಟ್ಟಿನ ಬಗ್ಗೆ ಮನವರಿಕೆ ಮಾಡಿ ಕೊಡುವ ದೃಷ್ಟಿಯಿಂದ,

*ಮಾನವ ಜನ್ಮ ದೊಡ್ಡದು ಇದ*
*ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ......*

ಎಂದು ಹಿತನುಡಿ ಹೇಳಿರುವುದು, ಮಾನವ ಜೀವಿಯು ವಿವಿಧ ಆಸೆ ಅಮಿಷಗಳಿಗೆ ಒಳಗಾಗುವುದು ಸಹಜವಾದುದ್ದೇ, ಏಕೆಂದರೆ ಈತನಲ್ಲಿ ಕ್ರೂರತನ ಹಾಗೂ ಮಾನವೀಯತೆಗಳೆರಡೂ ಜೊತೆ ಜೊತೆಗೆ ಅಡಕವಾಗಿರುತ್ತದೆ. ಅದ್ದರಿಂದ ಕೆಲವು ಸಮಯದಲ್ಲಿ ಸಂಸಾರದ ಜೀವನದಲ್ಲಿ ಏರುಪೇರಾಗುತ್ತದೆ ಪುರಂದರದಾಸರು ಪಂಥ, ಪಂಗಡಗಳು, ಧಾರ್ಮಿಕ ಅಂಧಶ್ರದ್ಧೆಗಳ ಆಚರಣೆಗಳು ಮತ್ತು ಮೂಢ ನಂಬಿಕೆಗಳನ್ನು ಮೀರಿ ನಿಂತವರಾಗಿದ್ದರು. ಅದಕ್ಕಾಗಿಯೇ ಅವರು ಮಾನವ ಜನ್ಮ ದೊಡ್ಡದು ಅದನ್ನು ಭಗವಂತನ ಧ್ಯಾನದ ಮೂಲಕ ಮುಕ್ತಿಯನ್ನು ಪಡೆಯಲು ಬಳಸಿಕೊಳ್ಳದೆ, ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ ಎಂದು ತಮ್ಮ ಕೀರ್ತನೆಯಲ್ಲಿ ಜನತೆಯನ್ನು ಎಚ್ಚರಿಸಿರುವುದು. ಅವರಿಗೆ ಶ್ರೀಮಂತದ ಬಗ್ಗೆ ತಿರಸ್ಕಾರ ಹೆಣ್ಣಿನ ಬಗ್ಗೆ ಅನುಕಂಪಗಳಿವೆ. ಸಂಸಾರ ಒಂದು ಮಾಯೆಯೆಂದು ಹೇಳಿದ್ದಾರಾದರೂ ಅದು ತ್ಯಾಜ್ಯವೆಂದು ಹೇಳುವುದಿಲ್ಲ. ಅವರ ಪ್ರಕಾರ ಸಂಸಾರವೆಂದರೆ ಕಮಲದೆಲೆಯ ಮೇಲಿನ ನೀರ ಹನಿಯಂತೆ ಅಂಟಿಯೂ ಅಂಟದಂತಿರಬೇಕು ಎಂಬ ಧೃಡ ನಿಲುವನ್ನು ವ್ಯಕ್ತಪಡಿಸುತ್ತಾರೆ. ಅವರ ಒಲವು ನಿಲುವುಗಳನ್ನು ಪರಾಮರ್ಶಿಸಿದಾಗ ದಾಸರು ಅಂದಿನ ಸಾಮಾಜಿಕ ಪರಿಸ್ಥಿಗೆ ಹೇಗೆ ಸ್ಪಂದಿಸುತ್ತಿದ್ದರೆಂಬುದನ್ನು ಮನಗಾಣಬಹುದಾಗಿದೆ. ಮುಖ್ಯವಾಗಿ ಮಧ್ಯಕಾಲೀನ ಸಮಾಜ ಅವರನ್ನು ಹೇಗೆ ರೂಪಿಸಿತು ಎಂಬುವುದನ್ನು ನಾವು ಮನಗಾಣಬೇಕಾಗುತ್ತದೆ.

**೩.೩. ವಿವಾಹ ಹಾಗೂ ನಂತರದ ಜೀವನ ಪದ್ಧತಿ**

(ಜನಪದೀಯ ಆಕರಗಳಲ್ಲಿ ವಿಶ್ಲೇಷಿಸಿರುವ ಹಾಗೆ)

ಅಂದಿನಿಂದ ಇಂದಿನವರೆವಿಗೂ ನಮ್ಮ ಸಾಮಾಜಿಕ ಜೀವನದ ಮುಖ್ಯವಾದ ಘಟ್ಟವೆಂದರೆ ಮದುವೆ. ಒಂದು ದೃಷ್ಟಿಯಲ್ಲಿ ವಿವಾಹವು ಮಾನವನಲ್ಲಿ ಮೃದುತ್ವವನ್ನು ಸಂಸ್ಕಾರಗೊಳಿಸಿ ಸಂಯಮದಿಂದ ಉದಾತ್ತವಾದುದರ ಕಡೆಗೆ ಬದಲಾಯಿಸುವ ಒಂದು ಪವಿತ್ರ ಸಾಧನವೆಂದು ಭಾವಿಸಲಾಗಿದೆ. ಒಂದರ್ಥದಲ್ಲಿ ಇದು ಸತ್ಯವೂ ಕೂಡ ಆಗಿದೆ. ಎಲ್ಲಿಯೂ ಹುಟ್ಟಿ ಬೆಳೆದ ಹೆಣ್ಣು, ಎಂದೂ ಕಂಡರಿಯದ ಪುರುಷನೊಬ್ಬನ ಕೈಹಿಡಿದು ವಿವಾಹವಾಗಿ ಸಂಸಾರವೆಂಬ ಸಾಗರದಲ್ಲಿ ಈಜಲು ಬದ್ಧಳಾಗುತ್ತಾಳೆ. ಅಂದಿನಿಂದ ಅವಳ ಗಂಡನೇ ಅವಳ ಜೀವನದ ಸರ್ವಸ್ವನಾಗುತ್ತಾನೆ. ಅವಳು ಅವನ ಮನ, ಮನೆಯ ಒಡತಿಯಾಗುತ್ತಾಳೆ, ಗೃಹಿಣಿಯಾಗುತ್ತಾಳೆ, ಗಂಡು ಹೆಣ್ಣುಗಳ ಜೀವನದಲ್ಲಿ ಅದೊಂದು ಪರಿವರ್ತನೆಯ ಪವಿತ್ರ ಘಟ್ಟ

ವಿಜಯನಗರದ ಅರಸರ ಕಾಲದಲ್ಲಿ ನಡೆಯುತ್ತಿದ್ದ ವಿವಾಹದ ವರ್ಣನೆಯು **ಅಷ್ಟಾದಶ ವರ್ಣನೆ**ಯಲ್ಲಿ ಒಂದು ಭಾಗವಾಗಿ ವರ್ಣಿತವಾಗಿರುವುದು ಕಂಡುಬರುತ್ತದೆ. ಕಾವ್ಯಗಳಲ್ಲಿ ಹಾಗೂ ದಾಸ ಪದಗಳಲಿಯೂ ಇವುಗಳ ವರ್ಣನೆಯೂ ಕಂಡುಬರುತ್ತದೆ. ಅಂದಿನ ವಿವಾಹ ಪದ್ಧತಿಯ ಹಾಗೂ ವಾಹನದ ವೈಭವದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ **ಚೇರಮಾಂಕ** ಮತ್ತು **ಬೊಮ್ಮರಸ** ಎಂಬ ಕವಿಗಳ ಸಾಹಿತ್ಯ ಇಲ್ಲಿ ಹೆಚ್ಚು ಉಪಕಾರಿಯಾಗುತ್ತವೆ. ಆದರೆ ಈ ಕವಿಗಳು ತಮ್ಮ ಬರವಣಿಗೆಯಲ್ಲಿ ಕೇವಲ ರಾಜಪರಿವಾರದವರ, ಬ್ರಾಹ್ಮಣರ ಹಾಗೂ ಶ್ರೀಮಂತರ ವಿವಾಹ ಸಂದರ್ಭದ ವರ್ಣನೆಯನ್ನು ನೀಡಿರುವುದು ಕಂಡು ಬರುತ್ತದೆ. ಇದಕ್ಕ ನಾವು ಸುಲಭವಾದ ಕಾರಣ ನೀಡುವುದಾದರೆ ನಮ್ಮ ಅಂದಿನ ಕವಿಗಳು, ದಾರ್ಶನಿಕರು, ವಿದೇಶಿ ಪ್ರವಾಸಿಗರು, ತತ್ವಜ್ಞಾನಿಗಳು, ತಾವು ಆರಿಸಿಕೊಂಡು ಸ್ಥಳಗಳು ಹಾಗೂ ವ್ಯಕ್ತಿ ಸಮೂಹಗಳು ರಾಜನ ಆಸ್ಥಾನ, ಪ್ರಮುಖವಾಗಿ ರಾಜರಾಣಿಯರೇ ಆಗಿರುವುದು ಎಂದು ಇತಿಹಾಸದಿಂದ ತಿಳಿದುಬರುತ್ತದೆ.

ಅಂದು ನಡೆಯುತ್ತಿದ್ದ ಮದುವೆಯ ಪದ್ಧತಿಯನ್ನು ಡಾ. ಕೆ.ಶ್ರೀಕಂಠಯ್ಯನವರು ತಮ್ಮ ಕೃತಿಯಲ್ಲಿ ಪ್ರತಿಯೊಂದನ್ನು ಚಾಚೂತಪ್ಪದೆ ವಿಶ್ಲೇಷಿಸಿರುವುದು ಕಂಡು ಬರುತ್ತದೆ. ಮದುವೆ ಎಂದರೆ ಸಾಮಾನ್ಯವಾಗಿ ಸಾಂಪ್ರದಾಯಿಕಾವಾಗಿ ನಡೆಯುವ ಕೆಲವು ಪದ್ಧತಿಗಳು, ಇವುಗಳು: ಸಾಮುದಿಕ ಲಕ್ಷಣಗಳಿಂದ ಕೂಡಿದ ಅನುರೂಪ ಕನ್ಯೆಯ ಅನ್ವೇಷಣೆ ಮತ್ತು ಆಯ್ಕೆ: ಕನ್ಯೆಯ ತಮಗೆ ಒಪ್ಪಿಗೆಯಾಯಿತೆಂದು ನಿಶ್ಚಿತಾರ್ಥ: ಜೋಯಿಸರಿಂದ ಶುಭಲಗ್ನವನ್ನು ನಿಶ್ಚಯಿಸಿ ಲಗ್ನ ಕಟ್ಟಿಸುವುದು ಬಂಧು ಮಿತ್ರರಿಗೆ ಆಹ್ವಾನದೋಲೆಗಳು, ವಿವಾಹ ಮಂಟಪದ ಸಿದ್ಧತೆ; ಅಲಂಕಾರ ಇವುಗಳೆಲ್ಲವೂ ಒಂದು ಘಟ್ಟವಾಗಿದ್ದರೆ, ಮದುವೆಯ ದಿನದಂದು ನಡೆಯುವ ಸಂಪ್ರದಾಯಗಳು ತುಂಬ ಮುಖ್ಯವಾದವೆಂದು ವಿವರಿಸುತ್ತಾರೆ. ಅವುಗಳನ್ನು ಅವರು 'ಮಂಗಳ ವಾದ್ಯಗಳು ಮೊಳಗುತ್ತಿರುವಾಗ ಶೋಭಾನೆಗಳನ್ನು ಹೇಳುತ್ತಾ ಮುತ್ತೈದೆಯರಿಂದ ವಧು ವರರಿಗೆ ಮಂಗಳ ಮಜ್ಜನ; ಸುಮಂಗಲಿಯರು ಮಂಗಳ ದ್ರವ್ಯಗಳನ್ನು ಹಿಡಿದು ಸ್ವಾಗತಿಸುತ್ತಾ ಧಾರೆಯ ಮಂಟಪಕ್ಕೆ ಬರುವುದು; ವಧೂವರರ ಅಲಂಕರಣ, ಕೈಯಲ್ಲಿ ಫಲಪುಷ್ಪಗಳೂ; ವಧುವರುಗಳಿಗೆ ನಾಚಿಕೆ ಬರುವುದು; ಧಾರೆಯ ಮಂಟಪದಲ್ಲಿನ ವಿಧಿವಿಧಾನಗಳು; ಮಂತ್ರ ಪಠಣ; ಮಂಗಳ ವಾದ್ಯಗಳ ಮೊರೆತ; ಜೀರಿಗೆ ಬೆಲ್ಲ ಹಾಕುವುದರಲ್ಲಿ ನಾಮುಂದು ತಾಮುಂದು ಎಂಬ ಪೈಪೋಟಿ; ಒಳ್ಳೆಯ ಮುಹೂರ್ತದಲ್ಲಿ ಧಾರೆ ಎರೆದು ಕೊಡುವುದು; ಹಸೆಯ ಮೇಲೆ ವಧೂವರರ ಸ್ಥಳ ಬದಲಾವಣೆ; ಕರಿಣ ಕಟ್ಟುವುದು; ಮುತ್ತೈದೆಯರಿಂದ ಆರತಿ; ಹೆಸರುಗಳನ್ನು ಹೇಳಿಸುವ ವಿನೋದ; ವಧು - ವರರ ಮೆರವಣಿಗೆ; ಬೀಳ್ಕೊಡುಗೆ ಇತ್ಯಾದಿ ಘಟನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡುಬರುತ್ತದೆ. ಈ ಕೃತಿಯು ವಿಜಯನಗರದ ಸಾಂಸ್ಕೃತಿಕ ಬದುಕಿನ ಮೇಲೆ ಅದರಲ್ಲಿಯೂ ಸಮಾಜದ ಕೆಳಸ್ತರದ ಜನರ ಸಾಂಸ್ಕೃತಿಕ ಅಧ್ಯಯನಕ್ಕೆ ಉಪಯುಕ್ತವಾಗಿದೆ.

ಮದುವೆಯೆಂಬುದು ಗಂಡಿನ ದೃಷ್ಟಿಯಿಂದ ಕೇವಲ ಏನನ್ನೋ ಪಡೆಯುವ ಕ್ರಿಯೆ ಆಗಿತ್ತೆನ್ನಬಹುದು. ತನ್ನ ಪತ್ನಿಯನ್ನು ಕರೆತಂದು ತನ್ನ ಮನೆಯನ್ನು ಸಂತೋಷದಿಂದ ತುಂಬಿಕೊಳ್ಳುತ್ತಾನೆ. ಹೆಣ್ಣಿಗೂ ಅದು ಪಡೆಯುವಿಕೆಯಾಗಿರುತ್ತದೆ ಎನ್ನಬಹುದು. ಏಕೆಂದರೆ ತನ್ನ ಬಾಳಿನ ಸಂಗಾತಿಯನ್ನು ಅವಳು ಪಡೆದುಕೊಂಡಿರುತ್ತಾಳೆ, ಆದರೆ ತನ್ನನ್ನು ಹೆತ್ತು ಹೊತ್ತು ಸಾಕಿ ಸಲಹಿದ ತಂದೆ ತಾಯಿಗಳನ್ನು ಒಡನಾಡಿ ಬೆಳೆದ ಅಣ್ಣ ತಮ್ಮಂದಿರನ್ನು ಅಕ್ಕತಂಗಿಯರನ್ನು ಬಿಟ್ಟು ಬರಬೇಕಾಗುತ್ತದೆ. ಈ ಸನ್ನಿವೇಶವು ಅಂದಿನ ಕಾಲದ ಜನಪದರಲ್ಲಿ ಸೃಷ್ಟಿಯಾದ ಅನೇಕ ಮೌಖಿಕ ಸಾಹಿತ್ಯಕ್ಕೆ ಪ್ರಚೋದನೆ ನೀಡಿತ್ತೆನ್ನಬಹುದು, ಇದನ್ನೆ ನಾವು 'ಜನಪದ ಸಾಹಿತ್ಯ' ಎಂದು ಕರೆಯುವುದು. ಉದಾಹರಣೆಗೆ ಈ ಸಂದರ್ಭದ ನಮ್ಮ ಜನರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಈ ಕೆಳಗಿನ ಅನೇಕ ಸನ್ನಿವೇಶದಲ್ಲಿ, ಸನ್ನಿವೇಶಕ್ಕೆ ತಕ್ಕಂತೆ ಸೃಷ್ಟಿಸಲಾಗಿರುವ ಜನಪದ ಗೀತೆಗಳಲ್ಲಿ ಕಾಣಬಹುದಾಗಿದೆ.

ಮದುವೆಯಾದ ನವ ವಧುವನ್ನು ಗಂಡನ ಮನೆಗೆ ಕಳುಹಿಸುವಾಗ ತಂದೆ ಮಗಳಿಗೆ ಹೇಳಿರುವ ಮಾತು ತುಂಬ ಅರ್ಥಪೂರ್ಣವಾಗಿದೆ.

*ಹೆಣ್ಣು ಮಕ್ಕಳ ಕಲುವಿನ ಕಣ್ಣೀಗಿ ನೀರ್ತಂದು*
*ಸಣ್ಣ ಸಲ್ಲೆದಲೆ ಮುಸುಗ್ಹಾಕಿ | ಹಡೆದಪ್ಪ*
*ಹೆಣ್ಣು ಸಾಕೆಂದ ಜಲುಮಾಕೆ ||*

ತಂದೆಯ ದುಃಖವೇ ಒಂದು ರೀತಿಯ ಸ್ವರೂಪದ್ದಾಗಿದ್ದರೆ ಇನ್ನೂ ತಾಯಿಯ ದುಃಖಕ್ಕೆ ಎಡೆಯೇ ಇರುವುದಿಲ್ಲವೆನ್ನಬಹುದು. ತಾಯಿಯು ಈ ಸಮಯದಲ್ಲಿ

*ಒಂಬತ್ತು ತಿಂಗಳು ನಿನ್ನ ತುಂಬಿಕೊಂಡು ತಿರಗೇನ*
*ಹಂಬಲಿಸಿ ನಿನ್ನ ಹಡೆದೇನು | ಚಿತ್ತಾರದ*
*ಗೊಂಬಿ ನಿನನೊಪ್ಪಿಸಿ ಕೊಡಲ್ ಹ್ಯಾಂಗ ||*

*ಹರಿಯಾಗೆದ್ ನನ್ಮಗಳು ಹಾಲುಬಾನುಣ್ಣವಳು*
*ತೂಗು ಮಂಚದಾಗ ಮಲಗುವಳು |*
*ನಗುನಗುತ ಮನೆ ಬೆಳಗುವಳು ||*

ಎಂದು ಮಗಳು ತಮ್ಮ ಮನೆಯಲ್ಲಿ ಬೆಳೆದ ರೀತಿ ನೀತಿಗಳನ್ನು ವರ್ಣಿಸಿಕೊಂಡು ತನ್ನ ದುಃಖವನ್ನು ವ್ಯಕ್ತಪಡಿಸುವ ಪರಿ, ಇಂಥ ತಂದೆ - ತಾಯಿಯರ ದುಃಖದ ಸಮಯದಲ್ಲಿ ಮಗಳೇ ಅವರನ್ನು ಸಂತೈಸಿಬೇಕಾಗುವ ಪ್ರಸಂಗವೂ ಬಂದೊದಗಿ ಬಿಡುತ್ತದೆನ್ನಬಹುದು ಉದಾಹರಣೆಗೆ,

*ತಾವರಿಯ ಗಿಡಹುಟ್ಟಿ ದೇವರಿಗೆ ನೆರಳಾದೊ |*
*ನಾಹುಟ್ಟಿ ಮನೆಗೆ ಎರವಾದೆ | ಹಡೆದವ್ವ*
*ನೀಕೊಟ್ಟ ಮನೆಗೆ ಹೆಸರಾದೆ ||*

ಮೇಲಿನ ಈ ಪದಗಳು ನಮ್ಮ ಭವ್ಯ ಸಂಸ್ಕೃತಿಯ ಸಂಕೇತಗಳಾಗಿವೆ ಎನ್ನಬಹುದು. ನೀಕೊಟ್ಟ ಮನೆಗೆ ಹೆಸರಾಗುವಂತೆ ಬಾಳುತ್ತೇನೆ, ನನ್ನನ್ನು ನಗುನಗುತ ಕಳುಹಿಸು ಎಂತಲೂ ಹೇಳುವುದರ ಜೊತೆಗೆ ಅಂದು ನಮ್ಮ ಜನಪದರು ಕಂಡುಕೊಂಡಿದ್ದ ಆದರ್ಶದ ಬದುಕು ಇಂದಿಗೂ ಆದರ್ಶಪ್ರಯವಾಗಿದೆ. ಮಗಳ ಈ ಮಾತಿಗೆ ತಾಯಿ ನೀಡುವ ಉತ್ತರ ಎಂಥ ಗಾಂಭೀರ್ಯವಾಗಿದೆ ಎಂದರೆ,

*ಆಲಕ್ಕೆ ಹೂವಿಲ್ಲ, ಸಾಲಕ್ಕೆ ಕೊನೆಯಿಲ್ಲ*
*ಜಾಲಿಯ ಮರವು ನೆರಳಲ್ಲ | ಮಗಳೆ*
*ತಾಯಿಯ ಮನೆಯು ಸ್ಥಿರವಲ್ಲ ||*

ಎಂದು ಹೇಳಿ ತನ್ನಲ್ಲಿಯೇ ಧೈರ್ಯ ತಂದುಕೊಂಡು ಮಗಳು ಗಂಡನ ಮನೆಯಲ್ಲಿ ಹೇಗೆ ಬಾಳಬೇಕೆಂಬುದನ್ನು ಹಾಗೂ ಗುರುಹಿರಿಯರಿಗೆ, ಅತ್ತೆ ಮಾವಂದಿರಿಗೆ, ಭಾವ ಮೈದುನರೊಂದಿಗೆ ಹೇಗೆ ವರ್ತಿಸಬೇಕೆಂಬುದರ ಮಾಹಿತಿಯನ್ನು ಸರಳವಾದ ಮಾತಿನಲ್ಲಿ ಹೇಳಿರುವುದು ಕಂಡುಬರುತ್ತದೆ.

*ಅತ್ತೆ ಮಾವರಿಗಂಜಿ, ಸುತ್ತೇಳು ನರಗಂಜಿ*
*ಮತ್ತೆ ಆಳುವ ದೊರೆಗಂಜಿ | ನನ ಮಗಳೇ |*

*ಅತ್ತಿ ಮನೊಯೊಳಗೆ ಬಾಳವ್ವ |*
*ನೆರೆಮನೆ ಸಿರಿದೇವಿ ನೀನಾಗು ಮಗಳೆ |*
*ಮನಿಯಾಗ ಭೇದ ಬಗಿಬ್ಯಾಡ | ಕಂದವ್ವ*
*ತುಂಬಿದ ಮನಿಯನ್ನು ಒಡಿಬ್ಯಾಡ ||*
*ಬಾಳುವೆ ಮಾಡಿದರೆ ಬಾ ತಂಗಿ ಅಂದಾರು*
*ಬಾಳುವೆಗೆಟ್ಟು ಮತಿಗೆಟ್ಟು | ಬಾಳಿದರೆ*
*ಹೆತ್ತವರ ಕುಲಕೆ ಹಗೆಯಾದೆ ||*

ಎಂಬುವ ಮಹತ್ವದ ಹಿತವಚವನ್ನು ತಾಯಿ ಮಗಳಿಗೆ ಹೇಳಿರುವುದು ಇಂದಿನ ಆಧುನಿಕ ಕಾಲದ ಕುಟುಂಬಗಳಿಗೆ, ಸಂಸಾರಗಳಿಗೆ ಹೆಚ್ಚಿನ ರೀತಿಯಲ್ಲಿ ಆದರ್ಶದಾಯಕವಾಗಿರುತ್ತದೆ. ಆದರೆ ಇಂದು ಇಂತಹ ಅಮೂಲ್ಯವಾದ ಹಿತನುಡಿಗಳನ್ನು ಗಂಡು ಹೆಣ್ಣುಗಳಿಬ್ಬರೂ ಮರೆಯುತ್ತಿರುವುದು ಕಂಡು ಬರುತ್ತಿವೆ. ತಾಯಿ ಮುಂದುವರೆದು ಮಗಳಿಗೆ ಹೇಳುವ ಮಾತಿದು

*ಅತ್ತೆ ಮಾವರ ಪಾದ, ತಂದೆ ತಾಯಿರ ಪಾದ |*
*ಮತ್ತೆ ಗಂಡನ ಶ್ರೀಪಾದ | ನೆನೆದರೆ*
*ಬೆನ್ನ ಹಿಂದೈತಿ ಕೈಲಾಸ ||*
*ಕನ್ನಡಿ ಕೈತಪ್ಪಿ ಹನ್ನೆರಡು ಚೂರಾಗಿ*
*ಹೆಣ್ಣೀನ ಮನವು ಎರಡಾಗಿ ದಾಳಿಂಬ್ರು*
*ಹಣ್ಣದರೇನು ಫಲವಿಲ್ಲ*
*ಮಾತ್ಗಂಟಿ ಮಗಳಲ್ಲ, ತಾಟ್ಗಿತ್ತಿ ಸೊಸೆಯಲ್ಲ |*
*ತುಪ್ಪರಿಯ ಚೆಕ್ಕೆ ಒಲೆಗಲ್ಲ ತವರೀಗೆ*
*ಮಾತ ತಂದೋಳು ಮಗಳೆಲ್ಲ ||*

ಈ ಮಾತುಗಳೂ ಸಹ ಇಂದಿನ ಮುಂದಿನ ನಮ್ಮ ಸೌಹಾರ್ದತೆ ಪ್ರೀತಿಯ, ಹಿರಿಯ - ಕಿರಿಯ ಎಂಬ ಸಂಕೇತದ ಅಂಶವಾಗಿದೆ. ಈ ಜನಪದದ ಸಾಲುಗಳಲ್ಲಿ ಪ್ರತಿಯೊಂದು ಪದವೂ ಸಹ ಹೆಣ್ಣು ಇಂದು (ಇದನ್ನು ಗಂಡಿಗೂ ಹೋಲಿಸಿಕೊಳ್ಳಬಹುದು) ಹೇಗೆ ಬಾಳಿ ಬದುಕಬೇಕು ಎಂಬ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪ್ರತೀಕವಾಗಿ ಮೂಡುಬಂದಿವೆ.

## ೩. ಸಾಮಾಜಿಕ ಸ್ಥಿತಿಗತಿಗಳು (೧)

ನಮ್ಮ ಸಂಸ್ಕೃತಿಯಲ್ಲಿ ತಂದೆ ತಾಯಿಯರಿಗಿಂತಲೂ ತನ್ನ ಕರುಳು ಬಳ್ಳಿಯ ಸಹೋದರ - ಸಹೋದರಿಯರ ಅಕ್ಕರೆಯ ಮಾತುಗಳು ಇಲ್ಲಿ ಪ್ರಸ್ತುತವೆನ್ನಿಸುತ್ತವೆ. ಅಕ್ಕ ಮದುವೆಯಾಗಿ ಗಂಡನ ಮನೆಗೆ ಹೋಗುವಾಗ ತಮ್ಮನಾದವನು ಆ ಸಂದರ್ಭವನ್ನು,

*ಒಮ್ಮನ ಮದ್ದಿಗೆ ಬೆಂಕಿ ಒಮ್ಮೆಲೆ ಕೊಟ್ಟಾಂಗ |*
*ತಮ್ಮನ ಹೊಟ್ಟೆ ತಳಮಳಿಸಿ | ಅಕ್ಕ ನನಗೆ*
*ರಮಿಸಿ ಹಣ್ಣು ಕೊಡುತ್ತಿದ್ದೊ ||*

ಎಂದು ತಾನು ಹಾಗೂ ಅಕ್ಕ ದಿನ ಕಳೆಯುತ್ತಿದ್ದ ಕ್ಷಣವನ್ನು ನೆನೆಸಿಕೊಂಡು ದುಃಖಿಸಿರುವುದು ಕಂಡುಬರುತ್ತದೆ. ಇಷ್ಟೆಲ್ಲಾ ಆದರೂ ಮದುವೆಯಾದ ಮೇಲೆ ಹೆಣ್ಣು ಗಂಡನ ಮನೆಗೆ ಹೋಗಲೇಬೇಕು, ಇದಕ್ಕಾಗಿ ತಾಯಿ ತನ್ನಲ್ಲಿಯೇ ಧೈರ್ಯ ತಂದುಕೊಂಡು ಮಗಳೀಗೆ ಒಳ್ಳೆಯದಾಗಲೆಂದು ದೇವರಲ್ಲಿ,

*ಗಂಡು ಮಕ್ಕಳ ಒಂಬತ್ತು ಕೊಡು ಸ್ವಾಮಿ*
*ಬಂಡೀಯ ಮುಂದೆ ಕಳಸಕ್ಕೆ ಒಪ್ಪುವಂಥ*
*ಒಬ್ಬ ಹೆಣ್ಣು ಮಗಳ ಕೊಡು ದೇವ.....*

ಎಂದು ಪ್ರಾರ್ಥಿಸಿಕೊಂಡು ಮಗಳನ್ನು ಗಂಡನ ಮನೆಗೆ ಕಳುಹಿಸುವ ಸಂದರ್ಭ ಬರುತ್ತದೆ. ತಾಯಿಗೆ ಮಗಳು ಹೋದ ಕೆಲವು ದಿನಗಳವರೆಗೆ ತನ್ನ ಮನೆ ಹಾಗೂ ಮನದಲ್ಲಿ ಶೂನ್ಯ ಅವರಿಸಿಕೊಂಡಂತೆ ಕಾಣಿಸಿಕೊಳ್ಳುತ್ತದೆ. ಅವಳು ಮನೆಯಲ್ಲಿ ಇದ್ದಾಗ ಆಡುತ್ತಿದ್ದ ಆಟ, ಲವಲವಿಕೆ ಮುಂತಾದವುಗಳನ್ನು ನೆನೆಸಿಕೊಂಡು ದುಃಖಿಸುತ್ತಾಳೆ. ಇತ್ತ ಗಂಡನ ಮನೆಗೆ ಹೋದ ಮಗಳೂ ಸಹ ಅಲ್ಲಿನ ಹೊಸ ಜೀವನವನ್ನು ಆರಂಭಿಸಿದ ನಂತರವೂ ತವರು ಮನೆಯನ್ನು ನೆನೆಸಿಕೊಳ್ಳುತ್ತಾ ಬದುಕುವ ಸನ್ನಿವೇಶದಲ್ಲಿ ಈ ಕೆಳಗಿನ ಸುಂದರ ಗೀತೆಯ ಸೃಷ್ಟಿಯಾಗಿರುತ್ತದೆನ್ನಬಹುದು.

*ತಾಯಿ ಕಾಣದ ಜೀವ ತಾವೂರಿ ಬಾವೂರಿ*
*ಭಾಳ ಬಿಸಿಲಾನ ಅವರೀಯ | ಹೂವಿನಾಂಗ*
*ಬಾಡತೇತಿ ತಾಯಿ ಕರೆದೊಯ್ಯ ||*

*ಮಳೆಬಿಟ್ಟರೂ ಮರದ ಹನಿ ಬಿಡದು ಹಡೆದವ್ವ*
*ನೀ ಬಿಟ್ಟರೂ ನಿನ್ನ ಮನಿ ಬಿಡದು ಹಡೆದವ್ವ*
*ನಿನ್ನಾಸೆ ನನಗೆ ಬಿಡದಲ್ಲೆ*

*ತಂದಿಯ ನೆನೆದರೆ ತಂಗೂಳು ಬಿಸಿಯಾಯ್ತು*
*ಗಂಗಾದೇವಿ ನನ್ನ ಹಡೆದವ್ವ | ನೆನೆದರೆ*
*ಮಾಸಿದ ತಲೆಯ ಮಡಿಯಾಯ್ತು*

ಎನ್ನುವ ಮಾತುಗಳು ಅವಳ ತವರು ಹಂಬಲವನ್ನು ಹಾಗೂ ತನ್ನ ತವರು ಮನೆಯ ಬಿಡಲಾರದ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ನಿಜಕ್ಕೂ ಈ ಮಾತುಗಳಲ್ಲಿ ಮನುಷ್ಯ ಜೀವಿಯ ಮಾನವೀಯತೆಯ ಅಮೂಲ್ಯ ಲಕ್ಷಣಗಳು ಎದ್ದುಕಾಣುತ್ತವೆ.

ಇಂದಂತೂ ವರದಕ್ಷಿಣೆ ಎಂಬುದು ಒಂದು ಸಾಮಾಜಿಕ ಪಿಡುಗಾಗಿ ಪರಿವರ್ತಿಸಿದೆ ಆದರೆ ನೂರಾರು ವರ್ಷಗಳ ನಮ್ಮ ಇತಿಹಾಸವನ್ನು ಗಮನಿಸಿದರೆ ಅದೊಂದು ಪಿಡುಗಾಗಿರದೆ ನಮ್ಮ ಸಂಸ್ಕೃತಿಯ ಒಂದು ಭಾಗವಾಹಿತ್ತೆಂದು ಕಂಡುಬರುತ್ತದೆ. ಪ್ರತಿಯಿಂದ ಸಾಕಿಸಲುಹಿದ ಮಗಳು ತವರುಮನೆಯಿಂಸ ಮದುವೆಯಾಗಿ ಗಂಡನಮನೆಗೆ ಹೋಗುವಾಗ ಅವಳಿಗೆ ತವರಿನ ಕಾಣಿಕೆಯಾಗಿ ತಮ್ಮಲ್ಲಿರುವ ಹಸು, ಎಮ್ಮೆ, ಕುರಿ ಆಡುಗಳನ್ನೂ ಅಥವಾ ಚಿನ್ನಾಭರಣಗಳನ್ನು ನೀಡುತ್ತಿದ್ದುದ್ದಕ್ಕೆ ಅನೇಕ ಆದಾರಗಳಿಂದ ಇದಕ್ಕೆ ನಿದರ್ಶನವೆಂಬಂತೆ.

*ತೊಟ್ಟಿಲ ಹೊತುಕೊಂಡು, ತೌರ್ ಬಣ್ಣ ಉಡುಕೊಂಡು*
*ಅಪ್ಪ ಕೊಟ್ಟೆಮ್ಮ ಹೊಡಕೊಂಡು | ತವರೂರ*
*ತಿಟ್ಟತ್ತಿ ತಿರುಗಿ ನೋಡ್ಯಾಳ*

ಎಂಬುವ ಜಾನಪದರ ಸಾಲುಗಳು ಇಲ್ಲಿ ಮಾದರಿಯಾಗಿವೆ. ಈ ಮೇಲಿನ ಸಾಲುಗಳು ವರದಕ್ಷಿಣೆಯ ಅಂಶವನ್ನು ಸೂಚಿಸಿದರೂ ಸಹ ಒಂದರ್ಥದಲಿ ಪ್ರೀತಿಯ ಸಂಕೇತವಾಗಿ ಗೋಚರಿಸುತ್ತದೆಯೇ ವಿನಃ ಕೆಟ್ಟ ಪಿಡುಗಾಗಿ ಗೋಚರಿಸುವುದಿಲ್ಲ. ತಂಗಿಯನ್ನು ತವರೂರಿಗೆ ಕರೆತರುವಾಗ ತಂಗಿಯ ಅಣ್ಣನಿಗೆ ಹೇಳುವ ಮಾತು ಇಲ್ಲಿ ಚಾರಿತ್ರಿಕವಾಗಿದೆ.

*ತವರೂರ ಹಾದೀಲಿ ತೆಗೆಸಣ್ಣ ಬಾವಿಯ |*
*ಅಕ್ಕ ತಂಗೇರು ತಿರುಗಾಡೂ | ದಾರೀಲಿ*
*ತೆಗೆಸಣ್ಣ ಕಲ್ಯಾಣದ ಕೊಳಗಳ |*

ಅಕ್ಕ ತಂಗಿಯರು ತಿರುಗಾಡುವ ಈ ದಾರಿಯಲ್ಲಿ ಬಾವಿ, ಕೊಳ, ಕೆರೆಗಳನ್ನು ನಿರ್ಮಿಸಬೇಕೆಂಬ ಬಯಕೆಯನ್ನು ತನ್ನ ಅಣ್ಣನಿಗೆ ತಂಗಿ ವ್ಯಕ್ತಪಡಿಸುತ್ತಾಳೆ. ಇಂತಹ ಅಮೂಲ್ಯ ಸಲಹೆಯನ್ನು ಪ್ರೀತಿಯಿಂದ ನೀಡಿದ ತಂಗಿ ಮತ್ತೆ ತನ್ನ ತವರೂರಿನಲ್ಲಿ ತಾಯಿ ಮರಣ ಹೊಂದಿ, ಅಣ್ಣಂದಿರುಗಳು ಮದುವೆಯಾಗಿ ಊರಿನಲ್ಲಿ ಅತ್ತಿಗೆಯರು ಮನೆ ಒಡೆಯರಾಗಿದ್ದಾಗ ತಂಗಿ ತನ್ನ ತವರಿನ ಬಗ್ಗೆ ಹಾಡುವ ಮಾತುಗಳು ಗಮನಾರ್ಹವಾಗಿವೆ.

*ತಾಯಿಲ್ಲ ತವರೀಗೆ ಹೋಗಬಾರದು ಹೆಣ್ಣು*
*ನೀರಿಲ್ಲ ಕೆರೆಗೆ ಕುರಿ ಬಂದು | ಹೋದಾಗ*
*ಆಗ ನೋಡದರ ಬಳಲಿಕೆ*

*ತಾಯಿದ್ರೆ ತವರೂರು ನೀರಿದ್ರೆ ಹೆಗ್ಗೆರೆ |*
*ಆನೆಯಿದ್ರರಸು ದೊರೆತನ | ತಾಯವ್ವ*
*ನೀನಿದ್ರೆ ಲೇಸು ತವರ್ಮನಿ*

*ಯಾರು ಇದ್ದರು ತನ್ನ ತಾಯವ್ವನ್ಹೋಲರ |*
*ಸಾವಿರಕೊಳಿ ಒಲಿಯಾಗ | ಇದ್ದರ*
*ಜೋತಿ ನೀನ್ಯಾರು ಹೋಲ್ಯಾರ*

ಎಂದು ತಾಯಿಯ ಅಮರವಾದ ಪ್ರೇಮವನ್ನು ಕೊಂಡಾಡಿರುವುದು ಕಂಡುಬರುತ್ತದೆ. ಒಬ್ಬ ವ್ಯಕ್ತಿಗೆ ಅದರಲ್ಲಿಯೂ ಮಗಳಿಗೆ ಬೇರೆ ಯಾರೋ ಏನೆಲ್ಲಾ ಪ್ರೀತಿ ತೋರಿಸಿದರೂ ಅದು ತಾಯಿಯ ಪ್ರೀತಿಗೆ ಸರಿಸಮನಾದ ಪ್ರೀತಿಯಾಗಲಾರದು ಎಂದು ತಾಯಿಗೆ ನಮ್ಮ ಸಂಸ್ಕೃತಿಯು ನೀಡಿರುವ ವಿಶಿಷ್ಠ ಸ್ಥಾನವನ್ನು ವ್ಯಕ್ತಪಡಿಸುತ್ತಾಳೆ.

ತಂದೆ ತಾಯಿ ಹಾಗೂ ತೌರುಮನೆಯ ಪ್ರೀತಿಯ ಒಂದು ರೀತಿಯದಾದರೆ ತನ್ನ ಕರುಳು ಬಳ್ಳಿಗಳೊಂದಿಗಿನ (ಅಣ್ಣ, ತಮ್ಮ, ಅಕ್ಕ, ತಂಗಿ) ಸಂಬಂಧವನ್ನು ಕುರಿತಂತೆ ಅನೇಕ ವಿಶಿಷ್ಟ ಪದಗಳು ನಮ್ಮ ಜಾನಪದರಲ್ಲಿ ಹರಿದಾಡಿರುವುದಕ್ಕೆ ಈ ಕೆಳಗಿನ ಸಾಲುಗಳು ಸಾಕ್ಷಿಯಾಗಿವೆ. ಹೆಣ್ಣೂ ಎಂದಿದ್ದಿರೂ ಮದುವೆಯಾಗಿ ಗಂಡನ ಮನೆಗೆ ಹೋಗುವವಳು, ಗಂಡನ ಮನೆಯಲ್ಲಿ ಅವಳಿಗೆ ಏನಾದರೂ ತೋಂದರೆ ಸಂಭವಿಸಿದರೆ ಅಥವಾ ಇನ್ನ್ಯಾವುದೇ ಅಹಿತಕರ ಸನ್ನಿವೇಶಗಳಲ್ಲಿ ಹೆಣ್ಣು ಕಷ್ಟಕ್ಕೆ ಸಿಲುಕಿದಾಗ ಅವಳಾಡುವ ಮಾತು ಗಮನಾರ್ಹ.

*ಹೆಣ್ಣಿನ ಜನುಮಕೆ ಅಣ್ಣ ತಮ್ಮರು ಬೇಕು |*
*ಬೆನ್ನ ಕಟ್ಟುವರು ಸಭೆಯೊಳಗೆ | ಸಾವಿರ*
*ಹೊನ್ನು ಕಟ್ಟುವರು ಗುಡಿಯೊಳಗೆ*

ಮನೆಯ ಹಿಂದಿನ ಮಾವು ನೆನೆದರೆ ಘಮ್ಮೆಂದು ನೆನೆದಂಗೆ ಬಂದ ನನ್ನ ಅಣ್ಣ

*ಬಾಳೀಯ ಗೊನಿಹಾಂಗ ತೋಳ ತಿರುವೂತ ||*
*ಸರದಾರ ಬರುವಾಗ ಸುರಿದಾದ ಮಲ್ಲಿಗಿ |*
*ದೊರೆ ನನ್ನ ತಮ್ಮ ಬರುವಾಗ | ಯಾಲಕ್ಕಿ*
*ಗೊನಿಬಾಗಿ ಹಾಲ ಸುರಿದಾವ |*

ಈ ಮೇಲಿನ ಪದಗಳು ಗಂಡನ ಮನೆಯಲ್ಲಿರುವ ಹೆಣ್ಣು ತನ್ನ ಅಣ್ಣ ತಮ್ಮಂದಿರು ತನ್ನ ಮನೆಗೆ ಬಂದಾಗ ತನಗಾದ ಸಂತೋಷವನ್ನು ವ್ಯಕ್ತಪಡಿಸುವ ರೀತಿಯದು. ಈ ಮೇಲಿನ ಸಾಲುಗಳು ಎಷ್ಟು ಸುಂದರವಾಗಿ ಮೂಡಿ ಬಂದಿದೆ ಎಂದರೆ ಇದಕ್ಕೆ ನಮ್ಮ ಯಾವ ಸಾಹಿತ್ಯವೂ ಸಾಟಿಯಾಗಲಾರದೆನೋ ಎಂದೆನ್ನಬಹುದು.

ತನ್ನ ಅಣ್ಣ ತಮ್ಮಂದಿರ ಮೇಲೆ ವ್ಯಕ್ತಪಡಿಸಿದ ರೀತಿಯಲ್ಲಿ ಹೆಮ್ಮೆಯಿಂದ ವ್ಯಕ್ತಪಡಿಸಿದ ತಂಗಿ, ಮುಂದೆ ತಾನು ತನ್ನ ತವರಿಗೆ ಹೋದಾಗ ತಾಯಿ ಇಲ್ಲದ ತವರು ಹಾಗೂ ತವರಿಗೆ ಮನೆಯ ಒಡತಿಯರಾಗಿ ಬಂದಿದ್ದ ಅತ್ತಿಗೆಯರ ಮಾರ್ಮಿಕ ಮಾತುಗಳನ್ನು ಗಮನಿಸಿ, ಮನನೊಂದು

*ಅಣ್ಣನ ಹೆಂಡಿತಿ ಕಣ್ಣಿಗೆ ಒಳ್ಳೆವಳು*
*ಸುಣ್ಣದ ನೀರ ಒಲಿಮುಂದ | ಇಟುಕೊಂಡು*
*ಎಮ್ಮೆ ಹಾಲೆಂದು ಬಡಿಸ್ಯಾಳು ||*

*ಹಡೆದಮ್ಮ ಇದ್ದಾಗ ನಡುಮನಿ ನನಗಿತ್ತು |*
*ಕಡಗದ ಕೈಯ್ಯ ಸೂಸಿ ಬಂದು | ನಡೆದಾಗ*
*ತುದಿಗಟ್ಟಿ ನನಗೆ ಎರವಾಯ್ತು ||*

ಎನ್ನುವ ತಾಯಿ ತಂದೆಯರಿದ್ದಾಗಿನ ತನ್ನ ತವರು ಮನೆಗೂ, ನಂತರದ ತನ್ನ ಮನೆಯ ಅನುಭವವನ್ನು ದುಃಖಕರವಾಗಿ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಷ್ಟಾದರೂ ಇವಳು ತವರಿನ ಮಮಕಾರವನ್ನು ಮರೆಯಲಾರಳು, ತನ್ನ ಅತ್ತಿಗೆಯರಿಂದ ಎಷ್ಟೇ ತೊಂದರೆಯಾದರೂ ತನ್ನ ತವರಿನ ಕುಡಿ ಚಿರಾಯುವಾಗಲೆಂದು ಅವಳಾಡಿರುವ ಮಾತುಗಳು ಜನಪದೀಯವಾದ ನುಡಿಮುತ್ತುಗಳೆನ್ನಬಹುದು.

*ಹಾಳುಂಡ ತವರಿಗೆ ಏನೆಂದು ಹರಸಾಲಿ*
*ಹೊಳೆದಂಡೇಲಿರುವ ಕರಕೀಯ | ಕುಡಿಹಾಂಗ*
*ಹಬ್ಬಲಿ ಅವರ ಸರಬಳ್ಳಿ.*

ಎಂದು ತನ್ನ ತವರುಮನೆಯನ್ನೆ ಅರಸುತ್ತಾಳೆ, ಇದಕ್ಕಾಗಿಯೇ ಏನೋ ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ವಿಶಿಷ್ಟ ಸ್ಥಾನಮಾನ ನೀಡಿರುವುದು. ಇಂದಿಗೂ ನಾವು ನಮ್ಮ ದೇಶವನ್ನು ಮಾತೃಭೂಮಿ ಎನ್ನುತ್ತೇವೆ. ಮಾತೃಭಾಷೆ, ಭೂಮಿತಾಯಿ ಇತ್ಯಾದಿ ಪದಗಳಿಂದ ಕರೆಯುತ್ತೇವೆ. ಈ ಪದಗಳನ್ನು ಉಚ್ಚರಿಸುವಾಗಲೇ ಪ್ರತಿಯೊಬ್ಬರಲ್ಲಿಯೂ ಸ್ವಾಭಿಮಾನದ ಗೌರವ ಕಂಡುಬರುವುದು ಸ್ವಾಭಾವಿಕವೇ 'ಸಂಸ್ಕೃತಿ' ಎಂಬ ಶಬ್ದದ ಅರ್ಥವೇ ಒಂದು ರೀತಿಯಲ್ಲಿ ಧರ್ಮ, ದೇವರು, ಸತ್ಯ, ಮೋಕ್ಷ ಇತ್ಯಾದಿ ಶಬ್ದಗಳ ವಿಶಾಲತೆಯನ್ನು ಸೂಚಿಸುತ್ತದೆ. ಇದನ್ನು ಬಿಟ್ಟು 'ಸಂಸ್ಕೃತಿ' ಎಂಬ ಶಬ್ದಕ್ಕೆ ಇದುವರೆವಿಗೂ ಸರಿಯಾಗಿ ಯಾರು ಅರ್ಥ ನೀಡಿರುವುದು ಕಂಡುಬರುವುದಿಲ್ಲ. ಈ ದೃಷ್ಟಿಯಿಂದ ಸಭ್ಯತೆ, ನಾಗರಿಕತೆ, ವಿನಯಶೀಲತೆ, ಗುಣಗ್ರಾಹಕತೆ, ಕೃತಜ್ಞತೆ, ರಸಿಕತೆ, ವಿಚಾರಪರತೆ, ಕರ್ತವ್ಯ ದಕ್ಷತೆ,

ಸತ್ಯಶೀಲತೆ, ನಾಡಿನ ಊರಿನ ಅಭಿಮಾನ ಇತ್ಯಾದಿ ಸದ್ಗುಣಗಳನ್ನು ತನ್ನ ಮಡಿಲಿನಲ್ಲಿ ಸೃಷ್ಟಿಸಿಕೊಂಡಿರುವ ಮೇಲಿನ ಜನಪದ ಹಾಡುಗಳು ಅಂದಿನಿಂದ ಇಂದಿನ ವಾಸ್ತವಿಕ ಬದುಕಿನವರೆವಿಗೂ ಮಾದರಿಯಾಗಿವೆ. ಇವುಗಳನ್ನೆ ನಮ್ಮ ಶ್ರೀಮಂತ ಸಂಸ್ಕೃತಿ ಎನ್ನಬಹುದಾಗಿದೆ.

ಅಂದಿನಿಂದ ಇಂದಿನವರೆವಿಗೂ ನಮ್ಮ ಸಂಸ್ಕೃತಿಯ ಒಂದು ಪ್ರಮುಖ ಭಾಗವಾಗಿರುವುದು ಸತಿಪತಿಗಳು, ವಿಜಯನಗರದ ಕಾಲದಲ್ಲಿನ ಅನೇಕ ಚಾರಿತ್ರಿಕ ಆಧಾರಗಳಲ್ಲಿ (ಉದಾಹರಣೆಗೆ, ಶಾಸನಗಳಲ್ಲಿ, ಸಾಹಿತ್ಯ ಗ್ರಂಥಗಳಲ್ಲಿ) ವರ್ಣರಂಜಿತವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದಾಗಿದೆ. ಈ ಹಂತದಲ್ಲಿ ಜನಪದರ ಹಾಡುಗಳು ಹೆಚ್ಚಿನ ಬೆಳಕನ್ನು ನೀಡುತ್ತವೆ. ಈ ಹಿಂದೆ ಹೆಣ್ಣು ವಿವಾಹದ ಸಮಯ, ವಿವಾಹದನಂತರದ ತಂದೆ ತಾಯಿಯರ ನುಡಿಮುತ್ತಿಗಳಲ್ಲಿ ನಮ್ಮ ಸಂಸ್ಕೃತಿಯನ್ನು ನೋಡಿದೆವು. ಮದುವೆಯಾದ ಹೆಣ್ಣು ತನ್ನ ಗಂಡನ ಮನೆಗೆ ಬಂದಾಗ ತನ್ನ ಹುಟ್ಟಿನ ಪರಿಸರವನ್ನು ಮರೆತು ಹೊಸ ಹೊಸ ಜನರ, ಅವರ ಭಾವನೆಗಳ, ಹೊಸ ಪರಿಸರಕ್ಕೆ ಹೊಂದಿಕೊಂಡು ಮದುವೆಯೆಂಬುವುದು ಹೆಣ್ಣಿನ ದುಃಖಕ್ಕಾಗಿ ಮಾಡಿದ ಸಂಕೋಲೆಯಲ್ಲ ಎಂಬ ಮಾತನ್ನು ನಿಜ ಮಾಡುವಂತಾಗುತ್ತಾಳೆ. ತನ್ನ ಜೀವನದ ಸಾರ್ಥಕತೆಗಾಗಿ, ಗಂಡು ಹೆಣ್ಣುಗಳು ತಮ್ಮ ಜೀವನದ ಹರಕೆಯನ್ನು ಪರಸ್ಪರ ತುಂಬಿಕೊಳ್ಳುವುದಕ್ಕಾಗಿ, ಸಮಾಜವು ಕೈಗೊಂಡ ಒಂದು ಪವಿತ್ರ ವ್ಯವಸ್ಥೆಯೇ ಈ ಮದುವೆ ಎಂದು ಮನವರಿಕೆ ಮಾಡಿಕೊಳ್ಳುತ್ತಾಳೆ. ಇಂಥ ಸಮಯದಲ್ಲಿ ಸೃಷ್ಟಿಸಿಕೊಂಡಿರುವ ಜನಪದ ಪದಗಳು ಒಂದರ್ಥದಲ್ಲಿ ಜೀವನದ ಸಾರ್ಥಕತೆ, ರಸಿಕತೆಯಿಂದ ಕೂಡಿ ಮಾನವ ಸಂಸ್ಕೃತಿಯನ್ನೇ ಶ್ರೀಮಂತಗೊಳಿಸಿವೆ. ಉದಾಹರಣೆಗೆ, ಗಂಡ ಹೆಂಡಿರ ನಡುವೆ ಜಗಳ ಬರುವುದು ಸಹಜವೇ, ಆದರೆ ಇಂಥಹ ಜಗಳಕ್ಕೆ ಸಮಾಧಾನಕರವಾದ ಉತ್ತರ ನೀಡಿರುವುದು ಈ ಕೆಳಗಿನ ಸಾಲುಗಳಿಂದ ಗಮನಿಸಬಹುದು.

*ಗಂಡ ಹೆಂಡಿರ ಜಗಳ ಗಂಧತೀಡಿದಾಂಗ*
*ನಿಂಗಕ್ಕೆ ನೀರು ಎರೆಧಾಂಗ | ಹಿರೆಹೊಳೆಯ*
*ಗಂಗವ್ವ ಸಾರಿ ಹರಿದಾಂಗ ||*

ಈ ಜನಪದದ ಸಾಲುಗಳು ಗಂಡ ಹೆಂಡತಿಯರಿಬ್ಬರೂ ಪರಸ್ಪರ ಒಬ್ಬರನೊಬ್ಬರು ಅರ್ಥಮಾಡಿಕೊಳ್ಳಲು ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗುತ್ತವೆ. ಇಷ್ಟಾದರೂ ಒಮ್ಮೊಮ್ಮೆ ಗಂಡ ಕೋಪಗೊಳ್ಳುವುದುಂಟು. ಇಂತಹ ಸಮಯದಲ್ಲಿ ತಾಳ್ಮೆಗೆ ಹೆಸರಾದ ಹೆಂಡತಿಯೇ ತಗ್ಗಿ ನಡೆದು ಅವನ ಕೋಪಕ್ಕೆ ಈ ಕೆಳಗಿನ ರೀತಿಯಲ್ಲಿ ಮುದ್ದು ನೀಡಬಯಸುತ್ತಾಳೆ.

*ಮಡದೀನ ಬಡಿದಾನು, ಮನದಾಗ ಮರುಗ್ಯಾನು |*
*ಒಳಗ್ಹೋಗಿ ಕಾಲ ಹಿಡಿದಾನು | ಕೇಳ್ಯಾನು*
*ನಾಹೆಚ್ಚೊ ನಿನ್ನ ತವರ್ಹೆಚ್ಚೊ ||*

ಎಂಬ ಅರ್ಥ ಗಾಂಭೀರ್ಯವಾದ ಹೆಣ್ಣು ಗಂಡುಗಳ ಅಂತರಂಗದ ಸಂಬಂಧವನ್ನು ಸೂಚಿಸುತ್ತದೆ. ಗಂಡ ಹೆಂಡತಿಯರ ನಡುವೆ ನಡೆಯುವ ಒಂದು ದೊಡ್ಡ ಕಥೆಯೇ ಈ ಚಿಕ್ಕ ಸಾಲುಗಳಲ್ಲಿ ಸೇರಿಕೊಂಡಿದೆ ಎನ್ನಬಹುದು. ಸತಿಪತಿಗಳ ಪ್ರಣಯದ ಒಂದು ಸುಂದರ ಚಿತ್ರಣವನ್ನು ನಮ್ಮ ಜನಪದರು ತುಂಬ ಸೊಗಸಾಗಿ ರಚಿಕೆಯ ಪದಗಳಿಂದ ವರ್ಣಿಸಿರುವುದಕ್ಕೆ ಬಡತನವಿಲ್ಲ. ಆದರ್ಶ ಮಡದಿಯು ತನ್ನ ಗಂಡನೇ ಜೀವನದ ಸರ್ವಸ್ವವೆಂದು ತಿಳಿದು ಅವನಿಂದ ತನ್ನ ಜೀವನ ಹಸನಾಗಲೆಂದೆ ತನ್ನಲ್ಲಿಯೇ ಹೇಳಿಕೊಳ್ಳುವ ಸುಂದರ ಜನಪದ ಸಾಲುಗಳು ಮಹತ್ವವೆನ್ನಿಸುತ್ತವೆ. ಉದಾಹರಣೆಗೆ,

*ಕಾಣದೆ ಇರಲಾರೆ ಕನ್ನಡಿ ಮುಖದವರ |*
*ಕಾಮನಿಗಿಂತ ಚಲುವರ | ಚೆನ್ನಿಗರ |*
*ಕಾಣದರಗಳಿಗೆ ಇರಲಾರೆ ||*

*ಎಲ್ಲೆಲ್ಲಿ ನೋಡಿದರೆ ನಲ್ಲನಂಥವರಿಲ್ಲ |*
*ಹಲ್ಲು ನೋಡಿದರೆ ಹವಳವು | ನಲ್ಲನ*
*ಸೊಲ್ಲು ಕೇಳಿದರೆ ಸಮಾಧಾನ ||*

*ಹೇಸಗೆಯ ಬದುಕಿಗೆ ಆಸೆಯ ಮಾಡಲಿಲ್ಲ |*
*ರೇಸಿಮೆಯ ನುಡುವ ನನ್ನ ದೊರೆ | ರಾಯರ*
*ಆಸೆ ಮಾಡೇನು ಅನುಗಾಲ ||*

*ಕೂಲಿ ಮಾಡಿದರೇನು, ಕೋರೆ ಹೊತ್ತರೇನು*
*ನಮಗ ನಮರಾಯ ಬಡವೇನ | ಬಂಗಾರ*
*ಮಾಲು ಇದ್ದಾಂಗ ಮನೆಯಾಗ*

ಎನ್ನುವ ಮಾತುಗಳು ಆಕೆಯ ಸುಂದರ ಸುಮಧುರ ದಾಂಪತ್ಯ ಜೀವನದ ಪ್ರತಿಬಿಂಬಗಳಲ್ಲದೆ ಮತ್ತೇನು? ನಮ್ಮ ಸಂಸ್ಕೃತಿಯಲ್ಲಿ ಎಂದೋ ಜನರು ಸಂಪತ್ತಿಗೆ ಆಸೆ ಪಟ್ಟವರಲ್ಲ. ಅದರ ಬದಲಿಗೆ ಒಲಿದ ಹೆಣ್ಣಿಗೆ ಪುರುಷನೆ ಇಂದ್ರ, ಚಂದ್ರ, ಸರ್ವಸ್ವವನ್ನಾಗಿ ಕಾಣಿಸುವುದಾಗಿರುತ್ತದೆ. ಜಾತ್ರೆಗೆ ಅಥವಾ ನೆಂಟರ ಮನೆಗೆ ಹೋದ ತನ್ನ ಗಂಡನನ್ನು ನೆನೆದು ಅವಳಾಡುವ ಪದಗಳೇ ಇಲ್ಲಿನ ಸಂಸ್ಕೃತಿಗೆ ಸಾಕ್ಷಿಯಂತಿವೆ.

*ಯಾಲಕ್ಕಿ ಕಾಯ ಸುಲಿದು ಯಾವ ಅಡಗಿ ಮಾಡಲಿ |*
*ಊರಿಗ್ಹೋಗಾರ ರಾಯರು | ಬಾರದೆ*
*ಯಾವಡಗಿ ಮಾಡಿ ಫಲವೇನು ||*

ಎಂದು ತನ್ನ ಗಂಡನಿಲ್ಲದ ಮನೆ ಅವಳಿಗೆ ಕತ್ತಲಾಗಿ ಕಂಡಿರುವುದು ನಮ್ಮ ಸಂಸ್ಕೃತಿಗೆ ಜೀವತುಂಬುತ್ತದೆ. ಈ ವಿಷಯದಲ್ಲಿ ಕೇವಲ ಹೆಂಡತಿ ಮಾತ್ರ ಈ ರೀತಿಯ ವಿರಹವೇದನೆಯನ್ನು ಅನುಭವಿಸುವುದಿಲ್ಲ. ಹೆಂಡತಿಯು ತವರು ಮನೆಗೆ ಹೋಗಿದ್ದಾಗ ಗಂಡನಾದವನು ತಾನು ಅನುಭವಿಸುವ ಕಷ್ಟವನ್ನು ವ್ಯಕ್ತಪಡಿಸುವ ರೀತಿಯೇ ಬೇರೆಯಾಗಿರುತ್ತದೆ. ಉದಾಹರಣೆಗೆ :

*ಅಡಗೀಯ ಮನೆಯಾಗ ಮಡದೀಯ ಸುಳಿವಿಲ್ಲ |*
*ಅಡಗಿ ಬಾಯಿಗೆ ರುಚಿಯಿಲ್ಲ | ಹಡೆದವ್ವ*
*ಮಡದಿ ತವರಿಗೆ ಹೋಗ್ಯಾಳ ||*

ಎಂದು ತನ್ನ ತಾಯಿಯ ಅಡುಗೆಯೇ ಅವನಿಗೆ ರುಚಿಸಿದಂತೆ ಭಾಸವಾಗುತ್ತದೆ. ಮದುವೆಯಾಗುವ ಸಮಯ, ಮದುವೆಯ ಸಮಯ, ಮದುವೆಯ ನಂತರದ ಜೀವನ ಹಾಗೂ ಗಂಡ ಹೆಂಡಿರ ಸುಮಧುರ ಸಂಬಂಧದ ಬಗ್ಗೆ ಹುಟ್ಟಿರುವ ಜನಪದಗಳಲ್ಲದೆ ಮದುವೆಯೇ ಆಗದೆ ಇರುವ ಯುವಕ ಯುವತಿಯರಲ್ಲಿ ಮೋಹಕವಾದ ಸನ್ನಿವೇಶಗಳನ್ನು ಸೃಷ್ಟಿಸುವ ಜನಪದ ಗೀತೆಗಳನ್ನು ಕಾಣಬಹುದಾಗಿದೆ. ಇವುಗಳು ಹೆಚ್ಚಾಗಿ ಸ್ವಾರಸ್ಯವು ಹಾಗೂ ರಸಿಕತೆಯಿಂದ ಕೂಡಿರುವುದೂ ಆಗಿರುತ್ತವೆ. ಸಾಮಾನ್ಯವಾಗಿ ಹಿಂದೆ ಮದುವೆಗೆ ಬಂದ ಹೆಣ್ಣು ಗಂಡುಗಳು ಅನೇಕ ಸಂದರ್ಭಗಳಲ್ಲಿ ಸಂಧಿಸುವ ಅವಕಾಶ ಹಳ್ಳಿಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಿತ್ತು. (ಇದರಿಂದ ಇಂದೇನೋ ಹೊರತಾಗಿಲ್ಲ.) ಅವರಲ್ಲಿ ಪರಸ್ಪರ ಮದುವೆಯಾಗುವವರಿರಬಹುದು. ಆಗುವ ನಿರೀಕ್ಷೆಯವರಿರಬಹುದು ಅಥವಾ ಮೇಲಿನವೆರಡೂ ಇಲ್ಲದಿರಬಹುದು. ಇಂತಹ ಸನ್ನಿವೇಶದಲ್ಲಿ ತಮ್ಮದೆ ಮಿತಿಯೊಳಗೆ ಸರಸ ಸಲ್ಲಾಪಗಳನ್ನು ಸೂಚಿಸುವುದರ ಜೊತೆಗೆ ಒಮದು ಸಾಮಾಜಿಕ ಬದುಕಿಗೆ, ರೀತಿ ನೀತಿಗಳಿಗೆ ಒಳಪಟ್ಟು ಮೌಲ್ಯಯುತ ಜನಪದ ಗೀತೆಗಳು ಸೃಷ್ಟಿಗೊಂಡು ಇಂದಿನ ಆಧುನಿಕ ರಸಿಕ ಸಾಹಿತ್ಯವುನಾಚುವಂತೆ ಮಾಡಿವೆ. ಉದಾಹರಣೆಗೆ,

*ನೀರಿಗೆ ಹೋಗೋಳೆ, ನೀಲದುಂಗುರದವಳೆ*
*ವೈಯ್ಯಾರಿ ಸಣ್ಣ ದನಿಯವಳೇ | ಮಾವನ ಮಗಳೆ*
*ವೈಯ್ಯಾರ ಬಿಟ್ಟು ತೆರಹೇಳೆ*

ಎಂದು ಬಾವಿ ನೀರಿಗೆ ಹೋಗುತ್ತಿರುವವಳನ್ನು ನಿಲ್ಲಿಸಿಕೊಂಡು ರೇಗಿಸುತ್ತಾನೆ. ಅಷ್ಟೇ ಅಲ್ಲದೆ ಆಕೆಯನ್ನು ತಾನೇ ಮದುವೆಯಾಗುವುದೆಂಬ ಧೈರ್ಯದಿಂದ ಅವಳ ಸೆರಗನ್ನು ಹಿಡಿಯುತ್ತಾನೆ. ಅದಕ್ಕೆ ಅವಳ ವೈಯಾರದ ನಾಚಿಕೆ ಹಾಗೂ ಮನಸಿಲ್ಲದ ಮುನಿಸಿನಿಂದ ಸಿಡಿದು ನಿಂತು

*ಸೀರೆ ಸೆರಗ ಬಿಡೋ*
*ಸೀರೆ ಸೆರಗ ಬಿಡೋ ನನಗೆಣೆಯ*
*ಮೂರ ಬೀದಿ ಜನರು ನೋಡ್ಯಾರು ||*

ಎಂದು ಹೇಳಿ ವೈಯಾರದಿಂದ ಮುಂದೆ ಹೋಗಲು ಯತ್ನಿಸಿದರೆ ಅವನು ಸುಲಭವಾಗಿ ಅವಳ ಸೆರಗ ಬಿಡಲಾರದೆ ಅವಳ ಸೌಂದರ್ಯವನ್ನು ಹೊಗಳುವುದರ ಮೂಲಕ ಆಕೆಯ ಮನಸ್ಸನ್ನು ಒಲಿಸಿಕೊಳ್ಳಲು ಬಯಸುವ ರೀತಿ ಎಂದರೆ,

*ಮಾವನ ಮಗಳೇ ಕೋಗಿಲೆ ದನಿಯೋಳೆ*
*ತಾವರೆ ಮೊಗ್ಗಿನ ಮೊಲೆಯೋಳೆ | ಮಾವನ ಮಗಳೆ*
*ಬಾಯಾರಿ ಬಂದೇ ನೀರ್ ಕೊಡೆ ||*

ಎಂದು ಅರ್ಥವತ್ತಾದ ತನ್ನ ಬಯಕೆಯನ್ನು ಸೂಚಿಸುತ್ತಾನೆ. ಇಂತಹ ಸನ್ನಿವೇಶದಲ್ಲಿ ಪದ್ಯದ ಸಾಲುಗಳು ಕಾಮ ಪ್ರೇಮಗಳ ಸಮ್ಮಿಳನದ ವಾಸ್ತವ ದೃಷ್ಟಿಯಿರುವುದು ಕಂಡು ಬರುತ್ತದೆ. ಮನುಷ್ಯನು ಸಹಜ ಪ್ರವೃತ್ತಿಗಳನ್ನು ಅರಿತು ಅನುಸರಿಸಿ ಆ ಮೂಲಕ ಅವುಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಅಂದಿನ ಜನಪದರು ತಮ್ಮ ಸಂಸ್ಕೃತಿಯಲ್ಲಿ ಬೆಸೆದುಕೊಂಡಿದ್ದರೆನ್ನಬಹುದು.

ನಮ್ಮ ಜನಪದರು ಸಂಸಾರದ ಸರಸ ವಿರಸಗಳನ್ನು ಹೇಳುವಾಗ 'ಸಂಗಾತಿ ಹೆಣ್ಣು ಜಂಬು ನೇರಳೆ ಹಣ್ಣು' 'ಮುಖಭಾವ ಮಿಂಚು ಹೊಳೆದಂತೆ' 'ಮೈಬಣ್ಣ ನಿಂಬೆ ಹಣ್ಣಂತೆ' ಎಂದು ತನ್ನೆಲ್ಲಾ ರಸಿಕತೆಯ ಭಾವನೆಯನ್ನು ವ್ಯಕ್ತಪಡಿಸುವುದು ಕಂಡು ಬಂದರೆ, ಮುಂದುವರೆದು ಅವಳ ಸೀರೆಯ ನೆರಿಗೆಯನ್ನು ಬೀಸಣಿಗೆಗೂ, ಗುಲಗಂಜಿಗೂ ಜಡೆಯನ್ನು ಜಾಲದ ಹೂವಿಗೂ, ನಾಗರ ತೆಕ್ಕೆಗೂ, ಬಳಕುವ ಬಾಲೆಯನ್ನು ನಲಿದಾಡುವ ನವಿಲಿಗೂ ಹೋಲಿಸಿ ಅವರ ರಸಿಕ ಸಂಸ್ಕೃತಿ ಮೆರೆದಿರುವುದಕ್ಕೆ ಇಂದಿಗೂ ಅವು ನಿದರ್ಶನವಾಗಿವೆ. ಶತಶತಮಾನಗಳಿಂದಲೂ ನಮ್ಮ ಜನಪದರ ಮಾದರಿಯಲ್ಲಿಯೇ ಮುಂದುವರೆದ ನಾವು ಕೆಲವು ಬದಲಾವಣೆಗಳೊಂದಿಗೆ ಈ ಜಾಡಿನಲ್ಲಿಯೇ ಮುಂದುವರಿದಿರುವುದಕ್ಕೆ ಅಂದಿನ ಭದ್ರವಾದ ಬುನಾದಿಯೇ ಕಾರಣವಾಗಿದೆ.

**೩.೪. ಜಾತಿ ವ್ಯವಸ್ಥೆ**

ಭವ್ಯ - ಸುಂದರ - ವೈಭವದ ಸಾಮ್ರಾಜ್ಯವೆಂದು ಇತಿಹಾಸಕಾರರಿಂದ ಕರೆಸಿಕೊಂಡ ವಿಜಯನಗರ ಸಾಮ್ರಾಜ್ಯದ ನಿಜವಾದ ಭವ್ಯತೆ ಸುಂದರತೆಯ ಹಾಗೂ ಅದರ ಉಜ್ವಲವಾದ ಸಂಸ್ಕೃತಿಯನ್ನು ನಿರ್ದಿಷ್ಟವಾಗಿ ಅರ್ಥ ಮಾಡಿಕೊಳ್ಳಲು ಅಂದಿನ ಕಾಲದಲ್ಲಿದ್ದ ಜಾತಿ ವ್ಯವಸ್ಥೆ ಹಾಗೂ ಅದರ ವಿವಿಧ ಸ್ತರಗಳ ಅಧ್ಯಯನವು ಅತ್ಯಾವಶ್ಯಕ್ವೆನ್ನಿಸುತ್ತದೆ. ವಿಜಯನಗರದಲ್ಲಲ್ಲದೆ ಭರತ ಖಂಡದಲ್ಲಿಯೇ ಜಾತಿಯು ಸಮಾಜದ ಮೂಲಭೂತ ಹಾಗೂ ವಿಶಿಷ್ಟವಾದ ಸಂಸ್ಥೆಯಾಗಿ ಬೆಳೆದುಬಂದಿದೆ ಎಂದರೆ ತಪ್ಪಾಗದು. ಏಕೆಂದರೆ ಭಾರತದ ಜಾತಿ ವ್ಯವಸ್ಥೆಯನ್ನು ಹೋಲುವ ಕೆಲವು ಪದ್ಧತಿಗಳಂತೂ ಪ್ರಪಂಚದ ಇತರೆ ಭಾಗಗಳಲ್ಲಿ ಹೆಚ್ಚಾಗಿ ಕಂಡು ಬರುವುದೇ ಇಲ್ಲ. (ಜಪಾನ್,

ಇಂಡೋಚೈನ, ಇಂಡೋ ನೇಷ್ಯ, ಬಲೋಚಿಸ್ಥಾನ ಮುಂತಾದವುಗಳಲ್ಲಿ ಅಲ್ಪ ಪ್ರಮಾಣದಲ್ಲಿ ಕಾಣಬಹುದು)ವಿಜಯನಗರ ಸಾಮ್ರಾಜ್ಯದಲ್ಲಿ ಜಾತಿಯು ಸಾಮ್ರಾಜ್ಯದ ಹಾಗೂ ಸಮಾಜದ ವಿಶಿಷ್ಟ ಸಂಸ್ಥೆಯಾಗಿತ್ತೆಂದು ಹೇಳಿದರೆ ತಪ್ಪಾಗಲಾರದು.

ಜಾತಿ ಪದ್ಧತಿಯು ವಿಜಯನಗರ ಸಾಮ್ರಾಜ್ಯದಾದ್ಯಂತ ಸಾಮಾಜಿಕ ಸಂಘಟನೆಯ ಎಲ್ಲಾ ಮೂಲಗಳಲ್ಲಿಯೂ ತನ್ನದೆ ಆದ ರೀತಿಯಲ್ಲಿ ಆಕ್ರಮಿಸಿಕೊಂಡಿತು. (ಇಂದು ಅಂದಿಗಿಂತಲೂ ಹೆಚ್ಚಾಗಿಯೇ ಆಕ್ರಮಿಸಿಕೊಳ್ಳುತ್ತಿದೆ) ಅಂದಿನ ಇತಿಹಾಸಕ್ಕೆ ಸಂಬಂಧಿಸಿದ ಏನೆಲ್ಲಾ ದಾಖಲೆಗಳು ದೊರಕಿಸಿದರೂ ಸಹ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಯಿಂದ ಪ್ರಭಾವಿತವಾಗಿರದ ಅಂಶಗಳು ವಿರಳವೆಂದೇ ಹೇಳಬಹುದು. ಜನರು ಆಚರಿಸಿಕೊಂಡು ಬರುತ್ತಿದ್ದ ಸಂಪ್ರದಾಯಗಳು, ಹಬ್ಬ, ಹರಿದಿನ, ಜಾತ್ರೆ, ಉತ್ಸವ ಮುಂತಾದವುಗಳು ಹೇಗೆ ತಮ್ಮ ಜೀವನದಲ್ಲಿ ಮಹತ್ವದ ಸ್ಥಾನವನ್ನು ಹೊಂದಿವೆಯೋ ಹಾಗೆಯೇ ಸಾಮಾಜಿಕ ವ್ಯವಸ್ಥೆಯ ಆದಿ ಮತ್ತು ಅಂತ್ಯ ಎಲ್ಲವೂ ಕೂಡ ಜಾತಿಯೇ ಆಗಿತ್ತೆಂದರೆ ಉತ್ಪ್ರೇಕ್ಷೆಯೆನಿಸಲಾರದೇನೋ. ಇದು ಒಂದು ರೀತಿಯಲ್ಲಿ ಹಿಂದೂ ಧರ್ಮದ ಹಕ್ಕನ್ನು ನಿರ್ಧರಿಸುತ್ತದೆನ್ನಬಹುದು. ಒಬ್ಬ ಹಿಂದೂ ಧರ್ಮಿಯನು ಜನನದಿಂದ ಮರಣದವರೆಗೂ ಮತ್ತು ಅದರಾಚೆಯೂ ಕೂಡ ಜಾತಿಯ ಆಧಾರದಲ್ಲಿಯೇ ಬದುಕುವಂತಾಗಿದೆ. ಹೀಗಾಗಿ ಅಂದು ಜಾತಿಯೇ ಎಲ್ಲವನ್ನು ನಿರ್ಧರಿಸುತ್ತಿತ್ತು. ಉದಾಹರಣೆಗೆ : **ಒಬ್ಬ ವ್ಯಕ್ತಿ ಯಾರನ್ನು ಮದುವೆಯಾಗಬೇಕು, ಹೇಗೆ ಮದುವೆಯಾಗಬೇಕು, ಎಲ್ಲಿ ವಾಸಿಸಬೇಕು, ಹೇಗೆ ಬದುಕಬೇಕು, ಏನನ್ನು ತಿನ್ನಬೇಕು, ಹೇಗೆ ತಿನ್ನಬೇಕು, ಎಲ್ಲಿ ಕೆಲಸ ಮಾಡಬೇಕು, ಹೇಗೆ ಕೆಲಸ ಮಾಡಬೇಕು, ಎಲ್ಲಿ ಹಾಗೂ ಹೇಗೆ ಅವನು ಸಾಯಬಹುದು, ಅವನನ್ನು ಎಲ್ಲಿ ಶವಸಂಸ್ಕಾರ ಮಾಡಬೇಕು, ಹೇಗೆ ಮಾಡಬೇಕು ಹಾಗೂ ಇನ್ನೂ ಮುಂದುವರೆದು ಸಾವಿನ ನಂತರ ಅವನಿಗೆ ಏನಾಗುತ್ತದೆ ಎನ್ನುವ ಪ್ರತಿಯೊಂದು ವಿಷಯವೂ ಕೂಡ ಜಾತಿಯಿಂದಲೇ ನಿರ್ಣಯವಾಗುತ್ತಿತ್ತು.** ಸಂಕ್ಷಿಪ್ತವಾಗಿ ಹೇಳುವುದಾದರೆ ವಿಜಯನಗರದರಸರ ಕಾಲದಲ್ಲಿ ಜಾತಿಯೇ ಅಂದಿನ ಜೀವನದ ಎಲ್ಲ ಅಂಶಗಳನ್ನು ನಿರ್ಧರಿಸುತ್ತಿತ್ತೆನ್ನಬಹುದು.

ಈ ಕೆಟ್ಟ ಸಾಮಾಜಿಕ ಪಿಡುಗನ್ನು ನಿರ್ಮೂಲನೆ ಮಾಡಲು ವಿಜಯನಗರದ ಅರಸರ ಕಾಲದಲ್ಲಿಯೇ ಅಲ್ಲದೆ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ನಡೆದ ಕೆಲವು ಪ್ರಯತ್ನಗಳನ್ನು ಇಲ್ಲಿ ಉದಾಹರಣೆಯಾಗಿ ನೀಡಬಹುದು, ಜಾತಿ ಪದ್ಧತಿಯ ವಿರುದ್ಧ ಯುದ್ಧವನ್ನೇ ಸಾರಿದವನೆಂದರೆ ಪ್ರಾಚೀನ ಧಾರ್ಮಿಕ ಹಾಗೂ ಸಾಂಸ್ಕೃತಿಕ ನಾಯಕರಲ್ಲಿ (ಕ್ರಿ.ಪೂ.ದಲ್ಲಿಯೇ) ಗೌತಮ ಬುದ್ಧನು ಮೊದಲಿಗ, ಈ ಮಹಾನ್ ವ್ಯಕ್ತಿಯ ಧರ್ಮ ಹಾಗೂ ತತ್ವ ಬೋಧನೆಯು ಈತನ ಜೀವಿತ ಕಾಲದಲ್ಲಿ ಜಾತಿಪದ್ಧತಿಯ ವಿರುದ್ಧ ಕೈಗೊಂಡ ನಿರ್ಣಯಗಳಿಂದ ದೇಶದಲ್ಲಿ ಇನ್ನೇನು ಜಾತಿ ಎಂಬ ಪದವೆ ಸಂಪೂರ್ಣವಾಗಿ ಕಣ್ಮರೆಯಾಗುತ್ತದೆಯೇನೋ ಎಂಬುವಷ್ಟರ ಭ್ರಮೆಯನ್ನು ಉಂಟುಮಾಡಿತು. ಆದರೆ ಅವನ ನಂತರದ ಘಟನೆಗಳು ಈ ಅಭಿಪ್ರಾಯವನ್ನು ಖಚಿತಪಡಿಸುವಲ್ಲಿ ವಿಫಲವಾದವು ಪ್ರಾರಂಭದ ಸಮಾಜ ಸುಧಾರಕರ ಉತ್ಸಾಹ ಕಳೆಗುಂದಿ, ಜಾತಿ ಪದ್ಧತಿಯು ನಿಧಾನವಾಗಿ ತಾನಾಗಿಯೇ ಪುನಃ ಪ್ರತಿಸ್ಥಾಪಿಸಲ್ಪಟ್ಟಿತು. ಇಂಥ ಸಮಯದಲ್ಲಿ ಜಾತಿಯು ತನ್ನ ವಿವಿಧ ಮುಖವನ್ನೊತ್ತ ಕವಲುಗಳನ್ನು ಹೊಸ ಧರ್ಮದಲ್ಲಿ ತೋರಿಸಿತು. ಆ ಹೊಸ ಧರ್ಮದ ಹಿಂಬಾಲಕರಲ್ಲಿ ಹಾಗೂ ಅದರದೇ ಆದ ಚೌಕಟ್ಟಿನೊಳಗೆ ವಿವಿಧ ಜಾತಿ ಗುಂಪುಗಳಾಗಿ ಛಿದ್ರಛಿದ್ರವಾಗಿ ವಿಂಗಡಿಸಲ್ಪಟ್ಟಿತು.

ಬುದ್ಧನ ನಂತರ ಭಾರತದ ಇತರ ಭಾಗಗಳಲ್ಲಿ ಅನೇಕ ಮಹಾನ್ ವ್ಯಕ್ತಿಗಳು ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು. ಉದಾಹರಣೆಗೆ ಹೇಳುವುದಾದರೆ ಮಹಾರಾಷ್ಟ್ರದಲ್ಲಿ ಸಂತಜ್ಞಾನೇಶ್ವರ ಹಾಗೂ ನಾಮದೇವ, ಗುಜರಾತಿನಲ್ಲಿ ನರ್ಸಿಮೆಹ್ತಾ, ಬಂಗಾಳದಲ್ಲಿ ಚೈತನ್ಯ ಮಹಾಪ್ರಭು, ಉತ್ತರ ಪ್ರದೇಶದಲ್ಲಿ ಮಹಾತ್ಮ ಕಬೀರ, ಅಂದ್ರದಲ್ಲಿ ವಲ್ಲಭಚಾರ್ಯರುಗಳಾದರೆ ಕನ್ನಡ ನಾಡಿನಲ್ಲಿ ಬಸವೇಶ್ವರ ಮತ್ತು ಅಕ್ಕಮಹಾದೇವಿಯರುಗಳು ಜಾತಿರಹಿತ ಸಮಾಜವನ್ನು ಸ್ಥಾಪಿಸಲು ಪ್ರಯತ್ನಿಸಿ ಕ್ರಾಂತಿ ನಡೆಸಿರುವುದ ನಮಗೆಲ್ಲ ತಿಳಿದಿರುವ ವಿಷಯವೆ. ಆದರೆ ಅವರ ಕ್ರಾಂತಿ, ಪ್ರಯತ್ನಗಳೆಲ್ಲವೂ ಕೂಡ ಇಂದಿಗೆ ಹೋಲಿಸಿ ನೋಡಿದರೆ ಸಂಪೂರ್ಣ ವ್ಯರ್ಥವಾಗಿ ಶೂನ್ಯರೂಪದಲ್ಲಿ ಕಾಣಿಸುತ್ತದೆ.

## ೩. ಸಾಮಾಜಿಕ ಸ್ಥಿತಿಗತಿಗಳು (೩)

ವಿಜಯನಗರದ ಅರಸರ ಕಾಲದಲ್ಲಿಯೂ ಜಾತಿ ಜಾತಿಗಳ ಅರಿವು ಮೂಡಿಸಲು, ಜಾತಿ ನಿರ್ಮೂಲನ ಮಾಡಲು ದಾಸರುಗಳು ತಮ್ಮ ಕೀರ್ತನೆಗಳ ಮೂಲಕ, ಸರ್ವಜ್ಞನು ತನ್ನ ವಚನದ ಮೂಲಕ ಪ್ರಯತ್ನಿಸಿರುವುದು ಕಂಡುಬರುತ್ತದೆ. ಆದರೆ ಅವರ ಪ್ರಯತ್ನಗಳೂ ಸಹ ಬಲವಾಗಿ ಭೂಮಿಗೆ ನಾಟಿರುವ ಜಾತಿಯ ಬೇರನ್ನು ಸಡಿಲಗೊಳಿಸುವಲ್ಲಿ ಫಲಕಾರಿಯಾಗಲಿಲ್ಲ ಎನ್ನಬಹುದು. ಏಕೆಂದರೆ ಅವರ ಜಾತಿ ನಿರ್ಮೂಲನದ ಕರೆಗಳು ಕೇವಲ ಸಾಮ್ರಾಜ್ಯದ ರಾಜಧಾನಿ ಹಾಗೂ ಪ್ರಮುಖ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿತ್ತೆನ್ನಬಹುದು. ಅಂದು ಜಾತಿಯತೆಯ ತಪ್ಪು ಕಲ್ಪನೆಯನ್ನು ಜನರಲ್ಲಿ ತಿಳಿಸಲು ಕನಕದಾಸರ ಕೀರ್ತನೆಗಳು ಹೆಚ್ಚು ಸಹಕಾರಿಯಾಗಿದೆ. ಅವರ 'ರಾಮಧಾನ್ಯ ಚರಿತ್ರೆ'ಯು ಈ ದೃಷ್ಟಿಯಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ ಅಂದು ಸಾಧು, ಸನ್ಯಾಸಿ, ದಾಸ, ಜಂಗಮ ಮುಂತಾದ ವೇಷಗಳ ಮೂಲಕ ಸಾಮ್ರಾಜ್ಯದಲ್ಲಿ ನಡೆಯುತ್ತಿರುವ ಕಪಟವಂಚನೆ ಅವ್ಯವಹಾರಗಳಿಗೆ ಲೆಕ್ಕವೇ ಇಲ್ಲವೆಂದು ತಾವೇ ಕಣ್ಣಾರೆ ಕಂಡು ಖಂಡಿಸಿದ್ದಾರೆ. ಇದಕ್ಕೆ ಅವರು "ಜಪವ ಮಾಡಿದರೇನು, ತಪವ ಮಾಡಿದರೇನು, ಕಪಟಗುಣ ವಿಪರೀತ ಕಲುಷವಿದ್ದವರು" ಎಂದು ನೇರವಾಗಿಯೇ ಪ್ರಶ್ನಿಸುತ್ತಾರೆ. ಇನ್ನೂ ಮುಂದುವರೆದು 'ನೇಮವಿಲ್ಲದ ಹೋಮವೇತಕಯ್ಯ' ಎಂದು ಕೇಳುತ್ತಾರೆ. ಇಡೀ ಮನುಕುಲವನ್ನು ಸಮದೃಷ್ಟಿಯಿಂದ ಕಾಣುವ ಕನಕದಾಸರಿಗೆ ಮಹಮ್ಮದೀಯರಾಗಲಿ, ಲಿಂಗವಂತರಾಗಲೀ, ಬ್ರಾಹ್ಮಣರಾಗಲಿ ಬೇರೆಯಾಗಿ ಕಾಣುವುದಿಲ್ಲ ಅದಕ್ಕೆ ಅವರು ಹೇಳಿರುವ ಕೀರ್ತನೆ ಎಂದರೆ,

*ಅಲ್ಲಾ ಖುದಾ ಎಂಬ ಅರ್ಥವನು ಅರಿಯದೆ |*
*ಮುಲ್ಲಾ ಶಾಸ್ತ್ರ ನೆಲೆಯ ಮುನ್ನರಿಯದೆ*
*ಕಳ್ಳ ಕೂಗನೆ ಕೂಗಿ ಬೊಗಳಿ ಬಾಯ್ದೆರೆವಂತ |*
*ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ*

*ಲಿಂಗಾಂಗದೊಳಗಿರುವ ಅನುಭವ ತಿಳಿಯದೆ |*
*ಲಿಂಗಲಿಂಗದ ನೆಲೆಯ ಗುರುತರಿಯದೆ*
*ಜಂಗಮ ಸಥಾವರದ ಹೊಲಬನರಿಯದೆ*
*ಇಂಥ ಭಂಗಿ ಮುಕ್ಕುಗಳೆಲ್ಲ ಲಿಂಗವಂತರಹುದೆ*

ಎಂದು ಮಹಮ್ಮದೀಯರಿಗೆ ಹಾಗೂ ಲಿಂಗವಂತರಿಗೆ ಪ್ರಶ್ನೆ ಮಾಡಿದ್ದಾರೆ. ಅಂದಿನ ಸಮಾಜದಲ್ಲಿ ಇದ್ದ ಬ್ರಾಹ್ಮಣರು, ಚೆನಿವಾರರು, ಕಂಚುಗಾರರು, ತಾಮ್ರ ಮತ್ತು ಹಿತ್ತಾಳೆ ಕೆಲಸ ಮಾಡುವವರು, ಬಡಗಿಗಳು, ಕಮ್ಮಾರರು, ಕಲ್ಲುಕುಟುಕರು, ಚಿನ್ನ ಬೆಳ್ಳಿ ಕೆಲಸ ಮಾಡುವ ಅಕ್ಕಸಾಲಿಗರು, ಹೊಲೆಯರು, ಮಾದಿಗರು, ಜಾಡಮಾಲಿಗಳು ಕೊಚ್ಚ, ಕೊರಮರು, ಇನ್ನೂ ಮುಂದುವರೆದು ಹೆಣ್ಣು - ಗಂಡು ಸಣ್ಣವ ದೊಡ್ಡವ, ಸಿರಿವಂತ - ಬಡವ, ಉನ್ನತ ಜಾತಿ ಎಂದು ಹೇಳಿಕೊಳ್ಳುವವ - ಕೆಳಜಾತಿಯವನೆಂದು ಕರೆಸಿಕೊಳ್ಳುವವ, ಕವಿಗಳು - ವಿಜ್ಞಾನಿಗಳು, ಸನ್ಯಾಸಿ - ಬಿಕನಾಸಿ, ದೊರೆ - ಪರೆ, ಪುರೋಹಿತ ಪಾದ್ರಿ ಇವರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವುದನ್ನು ಗಮನಿಸಿ "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂಬ ಒಂದೇ ಒಂದು ಪಲ್ಲವಿಯಲ್ಲಿ ನಿರೂಪಿಸುತ್ತಾರೆ. ಕೆಲಸಕ್ಕೆ ಪ್ರಮುಖ ಆಧ್ಯತೆ ನೀಡಿದ ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಕರೆದರೆ ಕನಕದಾಸರು ಕಾಯಕವನ್ನು ಕೈಗೊಳ್ಳದೆ ಸೋಂಬೇರಿಯಾಗಿ ಇರುವ ಗಂಡನ್ನು "ಕರ್ಮವಿಲ್ಲದ ಗಂಡು ಕರಿಯ ಒನಕೆಯ ತುಂಡು" ಎಂದು ತಮ್ಮ ಮಾತಿನಲ್ಲಿ ಅಭಿವ್ಯಕ್ತಿಗೊಳಿಸಿದ್ದಾರೆ. ಹಾಗೆಯೇ ಮನುಜರಿಗೆ ನೀಡಿದ ಪ್ರಮುಖ ಸಂದೇಶವೆಂದರೆ "ತಾನು ತನ್ನನರಿಯದಿರೆ ಜಗತ್ತಿನಲ್ಲಿ ಪ್ರೌಢನಾಗಲಾರ"ನೆಂಬ ಮಾತನ್ನು ಹೇಳಿ ಮಾನವನಿಗೆ ಜ್ಞಾನದ ಜಗತ್ತಿಗೆ ಕೊಂಡೊಯ್ಯುವ ಪ್ರಯತ್ನ ಮಾಡಿದ್ದಾರೆ. ವಿಜಯನಗರದ ಸಾಮ್ರಾಜ್ಯದಲ್ಲಿಯೇ ಇದ್ದು ಅಲ್ಲಿ ನೇರವಾಗಿ ಕಂಡು ಕೇಳಿದ ಜಾತಿ ವ್ಯವಸ್ಥೆ ಹಾಗೂ ಕುಲಗಳ ನಡುವಿನ ಅಂತರವನ್ನು ಗಮನಿಸಿ ಅವರಾಡಿದ ಕೀರ್ತನೆ ಇಂದಿಗೂ ಮುಂದೆಯೂ ಸಹ ಪ್ರಸ್ತುತವೆನ್ನಿಸಿಕೊಳ್ಳುತ್ತದೆ. ಕುಲವನು ಕುರಿತು ಕನಕದಾಸರು ಹಾಡಿದ ಮಾತೆಂದರೆ,

*ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ*
*ಕುಲದ ನೆಲೆಯನೇನಾದರೂ ಬಲ್ಲಿರಾ ||*

*ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ*
*ಅಟ್ಟು ಉಣ್ಣದ ವಸ್ತುಗಳಿಲ್ಲ*
*ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು*
*ನೆಟ್ಟನೆ ಸರ್ವಜ್ಞಾನ ನೆನೆಕಂಡ್ಯ ಮನುಜ ||*

*ಜಲವೆ ಸಕಲ ಕುಲಕ್ಕೆ ತಾಯಲ್ಲವೆ*
*ಜಲದ ಕುಲವನೇನಾದರೂ ಬಲ್ಲಿರಾ*
*ಜಲದ ಬೊಬ್ಬುಳಿಯಂತೆ ಸ್ಥಿರದಲ್ಲವೀದೇಹ*
*ನೆಲೆಯನರಿತು ನೀ ನೆನೆಕಂಡ್ಯ ಮನುಜ ||*

*ಹರಿಯೇ ಸರ್ವೋತ್ತಮ ಹರಿಯೆ ಸರ್ವೇಶ್ವರ*
*ಹರಿಮಯವೆಲ್ಲವೆನುತ ತಿಳಿದು*
*ಸಿರಿಕಾಗಿನೆಲೆಯಾಗಿ ಕೇಶವರಾಯನ*
*ಚರಣ ಕಮಲದ ಕೀರ್ತಿಸುವನೆ ಕುಲಜ ||*

ಎಂದು ಮನ ಮುಟ್ಟುವಂತೆ ವ್ಯಕ್ತಪಡಿಸಿದ್ದಾರೆ. ಜಾತಿ ಜಾತಿ, ಕುಲ ಕುಲ ಎಂದು ಹೇಳುತ್ತಾ ಪರಸ್ಪರ ಕಚ್ಚಾಡುವ ಮನುಷ್ಯರನ್ನು ಈ ಪದ್ಯದಲ್ಲಿ ತರಾಟೆಗೆ ತೆಗೆದು ಕೊಂಡಿದ್ದಾರೆ. ಹಾಗೆಯೇ ಅದಕ್ಕೆ ಸಂಬಂಧಿಸಿದಂತೆಯೇ ಅತ್ಯಂತ ಉಪಯುಕ್ತವಾದ, ಸುಲಭವಾದ ಹಾಗೂ ಪರಿಚಯವಿರುವ ಉದಾಹರಣೆಗಳ ಮೂಲಕ ಜಾತಿಯ ಅಸ್ತಿತ್ವವನ್ನೆ ಅಲ್ಲಗಳೆದು ನೀರಗುಳ್ಳೆಯಂತೆ ಕ್ಷಣಿಕವಾದ ಈ ದೇಹವನ್ನು ನೆಚ್ಚದೆ ಭಗವಂತನನ್ನು ನೆನೆಯಬೇಕು ಎಂಬ ಸಂದೇಶವನ್ನು ಸಾಸಿದ್ದಾರೆ. ಉನ್ನತ ಜಾತಿಯವರೆಂದು ಹೇಳಿಕೊಂಡು ಮಾಡಬಾರದ ಕೆಟ್ಟಕೆಲಸಗಳನ್ನು ಮಾಡಿ ಕೊನೆಗೆ ದೇವರಿಗೆ ಮೋರೆ ಹೋಗಿ ಏನೆಲ್ಲ ಯಜ್ಞ ಯಾಗಾದಿಗಳನ್ನು ಮಾಡುವವರಿಗೆ ಕನಕದಾಸರು ನೀಡಿರುವ ಚಾಟಿಯ ಏಟೆಂದರೆ

*ಕೇಶವನೊಲುಮೆಯು ಆಗುವತನಕ ಹರಿ*
*ದಾಸರೊಳಿರುತಿರು ಹೇ ಮನುಜ*
*ಕ್ಲೇಶ ಪಾಶಂಕಗಳ ಹರಿದು ವಿಲಾಸದಿ*
*ಶ್ರೀಶನ ಸುತಿಗಳ ಪೊಗಲುತ ಮನದೊಳು ||*

*ಮೋಸದಿ ಜೀವರ ಘಾಸಿ ಮಾಡಿದ ಪಾಪ*
*ಕಾಸಿಗೆ ಹೋದರೆ ಹೋದೀತೆ*
*ಶ್ರೀಶನ ಭಕುತರ ದೋಷಿಸಿದಾ ಫಲ*
*ಕಾಸು ಕೊಟ್ಟರೆ ಬಿಟ್ಟೀತೆ*
*ಬಾಷೆಯ ಕೊಟ್ಟು ನಿರಾಶೆ ಮಾಡಿದಾ ಫಲ*
*ಕ್ಲೇಶವಗೊಳಿಸದೆ ಇದ್ದೀತೆ*
*ಭೂ ಸುಸ್ವರ ಹ್ರಾಸನಾಡಿದ ಫಲ*
*ಏಸೇಸು ಜನುಮಕು ಬಿಟ್ಟೀತೆ ||*

*ಜೇನನ ವಶದೊಳು ನಾನಾ ದ್ರವ್ಯವಿದೆ*
*ದಾನ ಧರ್ಮಕೆ ಮನಸಾದೀತೆ*
*ಹೀನ ಮನುಜನಿಗೆ ಜ್ಞಾನದ ಬೋಧಿಸೆ*
*ಹೀನ ವಿಷಯವೆಳಿದ್ದೋದೀತೆ*
*ಮಾನಿನಿ ಮನಸು ನಿಧಾನವಿರದಿರೆ*
*ಮಾನಭಿಮಾನಗಳುಳಿದೀತೆ*
*ಭಾನು ಪ್ರಕಾಶನ ಭಜನೆಯ ಮಾಡದ*
*ಹೀನಗೆ ಮುಕುತಿಯು ದೊರಕೀತೆ*

*ಸತ್ಯಧರ್ಮಗಳ ನಿತ್ಯವು ಬೋಧಿಸೆ*
*ತೊತ್ತಿನ ಮನಸಿಗೆ ಸೊಗದೀತೆ*
*ತತ್ವದ ಅರ್ಥ ವಿಚಿತ್ರದಿ ಪೇಳಲು*
*ಕತ್ತೆಯ ಚಿತ್ತಕೆ ಹತ್ತೀತೆ*
*ಪುತ್ಥಲಿ ಬೊಂಬೆಯ ಚಿತ್ರದಿ ಬರೆದರೆ*
*ಮುತ್ತನು ಕೊಟ್ಟರೆ ನುಡಿದೀತೆ*
*ಕತ್ತುರಿ ತಲಕವನೊತ್ತಿ ಪನಿಯೊಳಡೆ*
*ಅರ್ತಿಯು ತೀರದೆ ಇದ್ದೀತೆ ||*

*ನ್ಯಾಯವ ಬಿಟ್ಟನ್ಯಾಯವ ಪೇಳುವ*
*ನಾಯಿಗೆ ನರಕವು ತಪ್ಪೀತೆ*
*ತಾಯಿ ತಂದೆಗಳ ಬಲು ನೋಯಿಸಿದ*
*ನ್ಯಾಯಿಗೆ ಮುಕುತಿಯು ದೊರಕೀತೆ*
*ಬಾಯಿ ಕೊಬ್ಬ ಬ್ಯುವ ಮನುಜಗೆ*
*ಘಾಯವು ಆಗದೆ ಬಿಟ್ಟೀತೆ*
*ಮಾಯವಾದಗಳ ಬೋಧಿಪ ಮನುಜಗೆ*
*ಹೇಯ ನರಕವು ತಪ್ಪೀತೆ*
*ಸಾಧು ಸಜ್ಜನರು ನೋಯಿಸಿದ ಮಾಯಾ*
*ವಾದಿಗೆ ನರಕವು ತಪ್ಪೀತೆ*
*ಬಾಧಿಸಿ ಬಡವರ ಅರ್ಥವನೋಯ್ವಗೆ*
*ವ್ಯಾಧಿಯು ಕಾಡದೆ ಬಿಟ್ಟೀತೆ*
*ಭೇದವೆಣಿಸಿ ಬಲು ಕ್ಷುದ್ರವ ಕಲಿತರೆ*
*ಮೋದವೆ ಎಂದಿಗು ಆದೀತೆ*
*ಕದ್ದು ಒಡಲ ಪೊರೆಯುವ ಮನೆಯೊಳ*
*ಗಿದ್ದದ್ದು ಹೋಗದೆ ಉಳಿದೀತೆ*

ಎಂಬ ಕೀರ್ತನೆಯಿಂದ ತಮ್ಮ ತಮ್ಮ ಅನಿಷ್ಟಗಳ ಬಗ್ಗೆ ಅವರಿಗೆ ಬೆಳಕನ್ನು ಹರಿಸಲು ಪ್ರಯತ್ನಿಸಿದ್ದಾರೆ. ೧೦ನೇ ಶತಮಾನದಲ್ಲಿ ದಯಾನಂದ ಸರಸ್ವತಿಯವರು ನೀಡಿದ ಹೇಳಿಕೆ ಎಂದರೆ "ವೇದಗಳಿಗೆ ಹಿಂದಿರುಗಿ" ಎಂದು ಇಲಿ ವೇದವೆಂದರೆ 'ಜ್ಞಾನ' ಎಂದರ್ಥ,

ಅಂದರೆ ಜ್ಞಾನದ ಕಡೆಗೆ ಹಿಂದಿರುಗಿರಿ ಎಂದು ಸಾರಿದೆ, ಇದೇ ಅರ್ಥವನ್ನು ಕನಕದಾಸರು ಅಂದೇ ಸಾಮಾನು ಜನತೆಗೂ ತಿಳಿಯುವ ಹಾಗೆ ತಿಳಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ನಾನು, ನನ್ನ ಜಾತಿ, ತನ್ನ ಮನೆತನದ ಗೌರವದ ಬಗ್ಗೆ ಪ್ರಶ್ನಿಸುತ್ತಿದ್ದಂತವರಿಗೆ

*ನಾನು ನೀನು ಎನ್ನದಿರೊ ಹೀನ ಮಾನವ*
*'ಜ್ಞಾನದಿಂದ ನಿನ್ನ ನೀನೆ ತಿಳಿದು ನೋಡಲೊ*
*ಹೊನ್ನು ಹೆಣ್ಣು ಮಣ್ಣು ಮೂರು ನಿನ್ನದೇನಲೊ*
*ಅನ್ನದಿಂದ ಬಂದ ಕಾಮ ನಿನ್ನದೇನೆಲೊ*
*ಕರ್ಣದಿಂದ ಬಂದ ಘೋಷ ನಿನ್ನದೇನೆಲೊ*
*ನಿನ್ನ ಒಟ್ಟು ಪೋಪದೇಹ ನಿನ್ನದೇನೆಲೊ*

*ಹಲವು ಜನ್ಮದಿಂದ ಬಂದಿರುವೆ ನೀನೆಲೂ*
*ಮಗದ ಗರ್ಭದಿಂದ ಬಂದಿರುವೆ ನೀನೆಲೂ*
*ಜಲದ ದಾರಿಯಲ್ಲಿ ಬಂದಿರುವೆ ನೀನೆಲೂ*
*ಕುಲವು ಜಾತಿ ಗೋತ್ರವುಳ್ಳವನು ನೀನೆಲೂ* |

ಎಂದು ಮೋಹ, ಮಮಕಾರಗಳಿಂದ ಮೆರೆಯುತ್ತಿದ್ದ ಉನ್ನತ ಜಾತಿಯವರಿಗೆ ಸೂಕ್ಷ್ಮವಾಗಿ ಹೇಳಿದ್ದಾರೆ. ಅವರು ಇಂಥವರಿಗೆ "ನಾನು ನೀನು ಎನ್ನದಿರೋ ಹೀನ ಮಾನವ, ಜ್ಞಾನದಿಂದ ನಿನ್ನ ನೀನೇ ತಿಳಿದು ನೋಡಲೊ ಪ್ರಾಣಿ" ಎಂದು ಹೇಳಿರುವುದು ಅವರ ಅನುಭವದ ಮಾತೆ ವಿನಃ ಕೇವಲ ತಾರ್ಕಿಕವಾದ ಸಿದ್ಧಾಂತಗಳಲ್ಲವೆನ್ನಬಹುದು. ಮನುಷ್ಯ ತನ್ನ ಜೀವನದ ಸುಳ ದುಃಖ ಸಿರಿವಂತಿಕೆ, ಬಡತನಗಳಿಗೆ, ಮೇಲು, ಕೀಳುಗಳೆಂಬ ಭೇದಭಾವಗಳಿಗೆ ತಾನೇ ಹೊಣೆ, ತಾನು ಮಾಡಿದ ಪುಣ್ಯ ಪಾಪಗಳ ಫಲಕ್ಕೆ ಇತರರನ್ನು ಹೊಣೆ ಮಾಡುವುದು ತಪ್ಪು. ಅದನ್ನು ನಿವಾರಿಸಿಕೊಳ್ಳಲು ಕಂಡ ಕಂಡ ದೈವಗಳಿಗೆ ವಿಶೇಷ ಪೂಜೆಮಾಡಿ ಮೊರೆ ಹೋಗುವುದು ತಪ್ಪು. ತಮ್ಮ ಕಾರ್ಯಗಳೇ ಅವರವರ ಹಣೆಬರಹವನ್ನು ಬರೆಯುತ್ತವೆ. ಅದ್ದರಿಂದ ದೇವರನ್ನು ನಂಬಿ ಸತ್ಯ, ನ್ಯಾಯ, ಧರ್ಮದ (ಒಟ್ಟಾರೆ ಸಾಕ್ಷಾತ್ಕಾರ) ಹಾದಿಯಲ್ಲಿ ನಡೆಯಬೇಕೆಂದು "ತನ್ನ ಪ್ರಾಪ್ತಿಯ ಫಲದ ತಾನರಿಯದೆ ಅನ್ಯರಿಗೆ ಆಡುವುದು ಅವಗುಣವು ಮರುಳೆ" ಎಂಬ ಕೀರ್ತನೆಯಲ್ಲಿ ವಿವರಿಸಿದ್ದಾರೆ.

ವ್ಯಕ್ತಿಯು ತನ್ನ ಸುತ್ತಲಿನ ಪರಿಸರದಿಂದ ಬೇರೆಯಾಗಿ ಬದುಕಲು ಸಾಧ್ಯವಿಲ್ಲ. ಅದರಲ್ಲಿಯೂ ಸೂಕ್ಷ್ಮವಾದ ಸಂವೇದನೆಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿರುವವನಂತೂ ಸಮಾಜದ ಎಲ್ಲ ವ್ಯವಹಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡು ತನ್ನ ತೀಕ್ಷ್ಣ ಅವಲೋಕನ ಮತ್ತು ಧೀಮಂತತೆಯಿಂದ ಅದರ ಆಗುಹೋಗುಗಳನ್ನು ಗಮನಿಸಿ, ತನ್ನ ಬದುಕಿನ ಅರ್ಥವನ್ನು ಸಮಾಜದ ಅರ್ಥವನ್ನು ಹೆಚ್ಚಿಸಿ ಸ್ಥಿರ ಸ್ಮರಣೀಯವಾಗಿ ಉಳಿಯುತ್ತಾನೆ. ಅಂತವರ ಗುಂಪಿಗೆ ಅಂದಿನ ಕಾಲದವರಾದ ಕನಕ, ಪುರಂದರ ವ್ಯಾಸರಾಯರನ್ನು ಸೇರಿಸಬಹುದಾಗಿದೆ. ಅಂದಿನ ಸಮಾಜದಲ್ಲಿದ್ದ ಬೂಟಾಟಿಕೆಯನ್ನು ಅಲ್ಲಗೆಳೆಯಲು ಹರಿದಾಸರು ಹೇಳಿರುವ ಮಾತೆಂದರೆ

*ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ* |
*ಮಡಿ ಮಾಡುವ ಬಗೆ ಬೇರುಂಟು*
*ಹಸಿವಾಯಿತು ದೇವರ ತೊಳೆ ಎಂಬರು*
*ಹಸನಾಗಿ ಮನಮುಟ್ಟಿ ಪೂಜೆಯ ಮಾಡರು*

ಈ ಮೇಲಿನ ಸಾಲಿನಲ್ಲಿ ಅಂದಿನ ಸಮಾಜದಲ್ಲೂ ಇದ್ದ ಅಡಂಬರದ ಭಕ್ತಿಯನ್ನು ಸೂಚಿಸಿದ್ದಾರೆ. ಈ ಮೇಲಿನ ಸಾಲುಗಳು ಅಂದಿಗಿಂತ ಇಂದಿಗೂ ಹೆಚ್ಚಿನ ಅನ್ವಯಿಸುತ್ತದೆ ಎಂದರೆ ತಪ್ಪಾಗಲಾರದು.

ಧಾರ್ಮಿಕ ಗ್ರಂಥಗಳ ದೃಷ್ಟಿಯಲ್ಲಿ, ಆ ಗ್ರಂಥವು ಸೂಚಿಸುವ ದೇವರ ದೃಷ್ಟಿಯಲ್ಲಿ ಹುಟ್ಟಿದವರೆಲ್ಲರೂ ಈ ಭೂಮಿಯ ಮೇಲೆ ಒಂದೇ, ಆದರೂ ಇತಿಹಾಸದ ಪುಟಗಳು ಮಾತ್ರ ನಮಗೆ ಎಲ್ಲಿಯೂ ವರ್ಗರಹಿತವಾದ ಸಮಾಜ ಒಂದಿತ್ತು ಎಂದು ಹೇಳಿದ ಪ್ರಕರಣವಂತೂ ದೊರೆಯುವುದಿಲ್ಲ. ವಿಜಯನಗರಸ ಚರಿತ್ರೆಯನ್ನು ಗಮನಿಸುವುದಾದರೆ ನಮ್ಮ ಚರಿತ್ರೆಗಾರರು ಬರೆಯಲು, ಸೇರಿಸಲು ಇನ್ನಿಲ್ಲದಷ್ಟು ಹೊಗಳಿ ಬರೆದಿರುವುದು ಕಂಡು ಬರುತ್ತದೆ. ಓಂದು ದೃಷ್ಟಿಯಲ್ಲಿ ಅವರು ಹೊಗಳಿರುವುದು ಸರಿಯೇ ಆದರೆ ಸಾಮಾಜಿಕ ಜೀವನದ ಬಗ್ಗೆ ಸಾಮಾನ್ಯ ಜನರ ಸ್ಥಿತಿಗತಿಯ ಬಗ್ಗೆ ಆ ಜನರು ಅನುಭವಿಸುತ್ತಿದ್ದ ಜೀವನದ ಬಗ್ಗೆ ಗಮನಹರಿಸಿದರೆ ನಿಜಕ್ಕೂ ಆ ಹೊಗಳಿಕೆ ಬೇಕೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ "ನಡೆವುದೊಂದೇ ಭುಮಿ ಕುಡಿವುದೊಂದೇ ನೀರು ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ನಡುವೆ ಎತ್ತಣದು ಸರ್ವಜ್ಞ" ಎಂಬ ಸುಂದರ ವಚನದ ಜನ್ಮ ಭೂಮಿಯಾದ ಈ ನಾಡಿನಲ್ಲಿ ಇದು ನಡೆಯಿತೇ? ಹಾಗಾದರೆ ದೇವ ಪುರುಷರೆಂದರೆ ಯಾರು? ದೇವರ ವರದಿಂದ ಹುಟ್ಟಿದ ಜಾತಿ ಎಂದರೆ ಯಾವುದು? ಪ್ರಪಂಚದಲ್ಲಿ ಉತ್ತಮರು – ಅಧಮರುಗಳೆಂದರೆ ಯಾರು ಎಂಬ ಪ್ರಶ್ನೆ ಪ್ರತಿಯೊಬ್ಬರಲ್ಲಿಯೂ ಮೂಡುತ್ತದೆ. ಇದಕ್ಕೆ ಅಂದೇ ಸರ್ವಜ್ಞ ಮಹಾಋಷಿಯ ಉತ್ತಮರು ಎಂಬುವರು ಸತ್ಯದಲಿ ನಡೆದಿಹರು. ಉತ್ತಮ ವರ್ಣಗಳೆ ಉತ್ತಮರು ಎನ್ನಬೇಡ, ಮತ್ತೆ ತನ್ನಂತೆ ಬಗೆವರೆಲ್ಲರನ್ನು ಉತ್ತಮರು ಎನ್ನುವ ಎಂದು ಸೂಕ್ತವಾದ ವಿಚಾರವನ್ನು ಹೇಳಿರುವುದು ಕಂಡುಬರುತ್ತದೆ. ಮಧ್ಯಯುಗದ ಜನಜೀವನವನ್ನು ಈ ಜಾತಿಪದ್ಧತಿಯು ಹೇಗೆ ಹದಗೆಡಿಸಿತ್ತು, ಅಸ್ಪೃಶ್ಯತೆಯ ಹೆಸರಿನಲ್ಲಿ ಉನ್ನತ ವರ್ಗದವರು ಹೇಗೆ ಸುಲಿಗೆ ಮಾಡುತ್ತಿದ್ದರು ಎಂಬುದನ್ನು ಅಂದಿನ ಸಮಾಜದ ಪ್ರತ್ಯಕ್ಷದರ್ಶಿಗಳಾದ ಕನಕ, ಪುರಂದರ, ಸರ್ವಜ್ಞರು ನೀಡಿರುವ ಕೀರ್ತನೆ ಹಾಗೂ ವಚನಗಳಿಂದ ಸವಿವರವಾಗಿ ತಿಳಿಯಬಹುದಾಗಿದೆ.

ಸಮಾಜದಲ್ಲಿ ಹೊಲೆಯ, ಮಾದಿಗ ಎಂಬ ಜಾತಿಗಳು ಅತ್ಯಂತ ಕೆಳಮಟ್ಟದ ಜಾತಿಗಳಾಗಿದ್ದವು. ಇವರುಗಳು ಪ್ರತಿಯೊಂದು ಊರಿನಲ್ಲಿಯೂ (ಗ್ರಾಮದ ದಕ್ಷಿಣ ದಿಕ್ಕಿನಲ್ಲಿಯೇ ವಾಸಿಸುತ್ತಿದ್ದರು. ಏಕೆಂದರೆ ನಾಲ್ಕು ದಿಕ್ಕುಗಳಲ್ಲಿ ದಕ್ಷಿಣ ದಿಕ್ಕು ಅಮಂಗಳವಾದದ್ದೆಂದು ಶಾಸ್ತ್ರಗಳು ತಿಳಿಸುತ್ತವೆ.) ಊರಿನ ಹೊರಗೆ ಒಟ್ಟಾಗಿ ವಾಸಮಾಡುತ್ತಿದ್ದರು. ಆ ಜಾಗವನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತೆಂದು ಸಾಹಿತ್ಯಾಧಾರಗಳಿಂದಲೂ, ಶಾಸನಗಳಿಂದಲೂ ತಿಳಿಯಬಹುದಾಗಿದೆ. ಅನೇಕ ಶಾಸನಗಳಲ್ಲಿ ಹೊಲಯ, ಮಾದಿಗ ಎಂಬ ಜಾತಿ ಸೂಚಕಗಳನ್ನು ಸೂಚಿಸುವ ಹೆಸರುಗಳಿರುವುದು ಕಂಡುಬರುತ್ತದೆ (ಉದಾಹರಣೆಗೆ ಹೊಲೆಯರ ಹುಳ್ಳ, ಮಾದಿಗರ ಕಂಪ ಮುಂತಾದವು) . ಹಾಗೆಯೇ ಮಾತಂಗಿಯನ್ನು ಕವಿಗಳು "ಮಾದಿಗಿತ್ತಿ" ಎಂದು ಕರೆದಿದ್ದಾರೆ. ಇಂದಿನ ಸ್ವಾತಂತ್ರ್ಯ ಭಾರತವು ಎಷ್ಟೆಲ್ಲ ಬದಲಾವಣೆಗಳನ್ನು ಕಾಣೂತ್ತಿದ್ದರೂ ಸಹ ಜಾತಿವ್ಯವಸ್ಥೆಯಲ್ಲಿ (ಆಚರಿಸುವಲ್ಲಿ) ಹೆಚ್ಚಿನ ಬದಲಾವಣೆ ಕಾಣುತ್ತಿದೆ ಎನ್ನಬಹುದು. ಏನೆಲ್ಲ ಕಾನೂನುಗಳಾಗಿದ್ದರೂ ಸಹ ಇಂದಿಗೂ ಪ್ರತಿಯೊಂದು ಹಳ್ಳಿಗಳಲ್ಲಿಯೂ ಹೊಲಗೇರಿ ಎಂಬುವುದು ಊರಿನಿಂದ ಆಚೆ ಇರುವುದು ಕಂಡುಬರುತ್ತದೆ. ಇಂದೇ ಈ ಸ್ಥಿತಿ ಇರುವಾಗ ಇನ್ನೂ ಅಂದಿನ ಸ್ಥಿತಿಯನ್ನು ಊಹಿಸಲು ಸಾಧ್ಯವೆನ್ನಬಹುದಲ್ಲವೆ? ವಿಜಯನಗರದ ಕಾಲದಲ್ಲಿ ಹೊಲೇರಿ ಹಟ್ಟಿ, ಮಾದಿಗರ ಹಟ್ಟಿಗಳೆಂದು ಕರೆಯುವ ಕೇರಿಗಳಿದ್ದವೆಂದು ಅನೇಕ ಶಾಸನಗಳು ತಿಳಿಸುತ್ತವೆ. (ಉದಾ. ೧೨೦೫ರ ಶಾಸನ ಹಾಗೂ ೧೨೩೦ರ ಶಾಸನಗಳು ಈ ಹೊಲೆಯ ಹಾಗೂ ಮಾದಿಗರ ಮೇಲೆ ತೆರಿಗೆ ವಿಧಿಸಿದ ಬಗ್ಗೆ ಬೆಳಕು ಚೆಲ್ಲುತ್ತವೆ).

"ಊರು ಅಂದ ಮೇಲೆ ಹೊಲಗೇರಿ ಇರಲೇಬೇಕು". "ಊರು ಹೊಲಗೇರಿ ಒಂದು ಮಾಡಿಬಿಟ್ಟ" ಎನ್ನುವ ಇಂದಿಗೂ ಪ್ರಚಲಿತವಾಗಿರುವ ನಾಣ್ಣುಡಿಗಳು ಇದಕ್ಕೆ ನಿದರ್ಶನವಾಗಿವೆ. ಅಂದಿನ ಕಾಲದಲ್ಲಿ ಈ ಹೊಲೆಯ ಮತ್ತು ಮಾದಿಗರುಗಳನ್ನು ಪಶುಗಳಿಗಿಂತಲೂ ಹೀನಾಯವಾಗಿ ನೋಡಿಕೊಳ್ಳಲಾಗುತ್ತಿತ್ತು. ಇದಕ್ಕೆ ನಿದರ್ಶನವೆಂದರೆ ಕನಕದಾಸರು ತಮ್ಮ "ರಾಮಧಾನ್ಯ ಚರಿತೆ"ಯಲ್ಲಿ ಇದನ್ನೆ ಪ್ರಸ್ತಾಪಿಸಿರುವುದು. ಈ ಕೀರ್ತನೆಯಲ್ಲಿ ಬರುವ ರಾಗಿ ಮತ್ತು ಭತ್ತದ ಪಾತ್ರವನ್ನು ಅಸ್ಪೃಶ್ಯ ಮತ್ತು ಬ್ರಾಹ್ಮಣರ ಪ್ರಜ್ಞೆಗಳಿಗೆ ಸಂಕೇತವಾಗಿ ತೆಗೆದುಕೊಳ್ಳಬಹುದಾಗಿದೆ. ಅಸ್ಪೃಶ್ಯರಲ್ಲಿಯೂ ಮಾನವೀಯತೆ ಇದೆ. ಬದುಕುತ್ತಿರುವ ಪರಿಸರ ಹಾಗೂ ಅಜ್ಞಾನರಾಗಿರುವುದೇ ಅವರ ಹೀನ ಬದುಕಿಗೆ ಕಾರಣವೇ ಹೊರತು ಅವರಿಗೂ ಮಾನವೀಯತೆ ಇದೆ. ಉತ್ತಮ ಜೀವನ ನಡೆಸಲು ಅವರೂ ಅರ್ಹರು ಎಂಬುದನ್ನು ಸಾಂಕೇತಿಕವಾಗಿ ಈ ಕೃತಿ ತೋರಿಸುತ್ತದೆ. ಕ್ರಿ.ಶ ಹದಿನಾರನೆಯ ಶತಮಾನದಲ್ಲೇ ಇದ್ದ ಈ ಶೂದ್ರ ಬ್ರಾಹ್ಮಣ ಪ್ರಜ್ಞೆಯು ನಮ್ಮಲ್ಲಿ ಇಂದು ಬೇರೆ ಬೇರೆ ರೂಪಗಳನ್ನು ಪಡೆದು ವ್ಯಾಪ್ತವಾಗಿ ಬೆಳೆದಿರುವುದರಿಂದ ರಾಮಧಾನ್ಯ ಚರಿತ್ರೆಯ ದೃಷ್ಟಿ ನಮಗೆ ಪದೇಪದೇ ಬೇಕಾಗುತ್ತಲೇ ಇರುತ್ತದೆ.

ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಶ್ರೀಮಂತರು ಅಥವಾ ಮೇಲು ವರ್ಗದವರರೆಂದು ಹೇಳಿಕೊಳ್ಳುತ್ತಿದ್ದವರನ್ನು ಬಿಟ್ಟರೆ ಮಧ್ಯಮ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಇವರುಗಳು ಹೆಚ್ಚಿನ ಪಾಳು ವ್ಯಾಪಾರಗಳಾಗಿದ್ದಲ್ಲದೆ ಸಾಮಾನ್ಯ ಜನರಿಗಿಂತ ಸ್ವಲ್ಪ ಉತ್ತಮ ಜೀವನ ನಡೆಸುತ್ತಿದ್ದರೆನ್ನಬಹುದು.

ವಿದೇಶಿ ಪ್ರವಾಸಿಗರಾದ ಬಾರ್ಬೋಸ, ನ್ಯೂನಿಜಾ, ಪಾಯೇಸ್, ಅಬ್ದುಲ್, ರಜಾಕ್, ನಿಕೋಲೂಕಾಂಟಿ, ಮುಂತಾದವರುಗಳು ವಿಜಯನಗರ ಸಾಮ್ರಾಜ್ಯವನ್ನು ಮುಕ್ತಕಂಠದಿಂದ ಹೊಗಳಿರುವುದು ಸತ್ಯಾಂಶ ಕೂಡ, ಆದರೆ ಅವರ ಬರವಣಿಗೆಯಿಂದ ಕಂಡುಬರುವುದು ಕೇವಲ ಶ್ರೀಮಂತ ವರ್ಗದವರ ಬದುಕುವ ಶೈಲಿ ಮಾತರವೇ ಹೊರತು ಸಾಮಾನ್ಯ ಜನರ ಜೀವನ ಕಂಡುಬರುವುದಿಲ್ಲ.

ಭಿಕ್ಷೆ ಬೇಡುವುದು ಸಾಮ್ರಾಜ್ಯದಲ್ಲಿ ಹೆಚ್ಚಾಗಿದ್ದಿತು. ಹಸಿವು ಹೆಚ್ಚಾದಾಗ ಜನರು ಅನೇಕ ಮಾರ್ಗಗಳನ್ನು ಹುಡುಕುತ್ತಿದ್ದರು. ಅದರಲ್ಲಿ ಭಿಕ್ಷೆ ಬೇಡಿ ತಿನ್ನುವುದೂ ಒಂದು ಹಸಿವಿಗೆ ಭಿಕ್ಷವುಂಟು, ತೃಷೆಗೆ ಹಳ್ಳದಲ್ಲಿ ಸುಚಿತ್ತವಾದ ಅಗ್ಘವಣಿಯುಂಟು. ಕಟ್ಟ ಕೊಂಬೊಡೆ ತಿಪ್ಪೆಯ ಮೇಲೆ ಅರಿವೆಯುಂಟು, ಶಯನಕ್ಕೆ ಹಾಳು ದೇಗುಲವುಂಟು, ಎನ್ನುವುದಾಗಲಿ, ಇಂದಿಗೂ ಪ್ರಚಲಿತವಾಗಿರುವ "ಕೇರಿ ಮನೆ ಊಟ ಮಾರಿಗುಡಿ ನಿದ್ರೆ" ಎನ್ನುವ ನಾಡು - ನುಡಿಯಾಗಲಿ ಭಿಕ್ಷಾಟನೆಯನ್ನು ವ್ಯಕ್ತಪಡಿಸುವ ಸ್ಪಷ್ಟ ಚಿತ್ರಗಳೆನ್ನಬಹುದು. ಕನಕದಾಸರು ತಮ್ಮ "ನಳಚರಿತ್ರೆ"ಯಲ್ಲಿ ಹಬ್ಬ, ಜಾತ್ರೆ, ಸಂತೆ ಹಾಗೂ ಯಾತ್ರಾಸ್ಥಳಗಳಲ್ಲಿ ಇಂದಿಗೂ ನಾವು ನೋಡುವ ಭಿಕ್ಷಾಟನೆಯ ರೀತಿಯಲ್ಲೆ ಅಂದಿನ ಸ್ಥಿತಿಯನ್ನು ಸ್ವಾರಸ್ಯಕರವಾಗಿ ವರ್ಣಿಸಿದ್ದಾರೆ. ಬಡತನಕ್ಕೆ ಭಿಕ್ಷೆ ಬೇಡುವುದು ಒಂದು ದಾರಿಯಾದರೆ ನೆಂಟರಿಷ್ಟರ ಮನೆಬಾಗಿಲಿಗೆ ಹೋಗಿ ಸಾಲ ಕೇಳುವುದು ಇನ್ನೊಂದು ಮಾರ್ಗ, ಮನುಷ್ಯರಿಗೆ ಕಷ್ಟ ಬಂದಾಗ ಬಂಧುಗಳ ಬಳಿಗೆ ಹೋದರೆ ಅವರು ಯಾವ ರೀತಿಯಲ್ಲಿ ಬಂದವರ ಜೊತೆ ನಡೆದುಕೊಳ್ಳುತ್ತಾರೆ ಎಂಬುವರ ಬಗೆಗೆ ಅನುಭಾವಿಗಳ ಅನುಭವ ಅಪಾರವಾಗಿದೆ. ಉದಾ: "ನಗುವಾಗ ಎಲ್ಲಾ ನಂಟರು: ಅಳುವಾಗ ಯಾರೂ ಇಲ್ಲ" ಎಂಬುವುದಾಗಲಿ, "ಬಿಡದೆ ಬಾಂಧವರೊಡನೆ ಕಡಿದಾಡುವುದಕ್ಕಿಂತ ಅಡವಿಯೊಳಗಜ್ಞಾತ ವಾಸವೇ ಲೇಸು" ಎಂಬುವುದು "ಹಸಿದು ನೆಂಟರ ಮನೆಗೆ ಉಣಲಿಕ್ಕೆ ಹೋದರೆ ಕಸಿವರಿತು ಬಡಿಸುವವರ ಕಾಣೆ" ಮುಂತಾದ ಪದಗಳ ಸೃಷ್ಟಿಗೆ ಆ ಸನ್ನಿವೇಶ ಕಾರಣವಾಗಿರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ನಾವು ಗುಲಾಮಗಿರಿಯ (ದಾಸ್ಯಜೀವನ) ಪದ್ಧತಿಯನ್ನು ಕಾಣಬಹುದಾಗಿತ್ತೆನ್ನಬಹುದು. ಕನಕದಾಸರು ತಮ್ಮ ರಾಮನಾಥ ಚರಿತೆದಲ್ಲಿ ಮನುಷ್ಯರ ಮಾರಾಟದ ವಿಚಾರವನ್ನು ಗುರುತಿಸುತ್ತಾರೆ. ಇಂದಿಗೂ ಸಹ ಪ್ರತಿಷ್ಟಿತ ಮೈಸೂರು ನಗರದಲ್ಲಿಯೇ ಈ ಗುಲಾಮಗಿರಿ ಕಂಡುಬಂದಿರುವುದರಿಂದ (ಮಾನವರನ್ನು ಸರಪಳಿಯ ಬಂಧನದಲ್ಲಿರಿಸಿ ಆಯುಷ್ಯವಿಡೀ ಅವರಿಂದ ದುಡಿಸಿಕೊಳ್ಳುವ ಪದ್ಧತಿಯನ್ನು ಇಂದಿಗೂ ಆಚರಿಸುತ್ತಿದ್ದ ಹಂಗರಹಳ್ಳಿ ಕಲ್ಲುಗಣಿ ಪ್ರದೇಶದ ಜೀತದಾಳುಗಳನ್ನು ನೆನೆಸಿಕೊಂಡು) ಅಂದಿನ ವಿಜಯನಗರದ ಅರಸರ ಕಾಲದಲ್ಲಿ ಇದು ಸರ್ವೆ ಸಾಮಾನ್ಯವಾಗಿತ್ತೆನ್ನಬಹುದು. ತಂದೆ ತಾಯಿಯರು ಹಸಿವಿನ ಬವಣೆಯನ್ನು ತಾಳಲಾರದೆ ತಮ್ಮ ಮಕ್ಕಳನ್ನು ಮಾರಿರುವುದು ರಾಮನಾಥ ಚರಿತೆಯಲ್ಲಿ ಕಂಡುಬರುತ್ತದೆ. (ಇಂದೋನೋ ಇದರಿಂದ ಮುಕ್ತವಾಗಿಲ್ಲ ಗುಲ್ಬರ್ಗಾ ಜಿಲ್ಲೆ ಕೊಂಚಾವರರಿನ ಲಂಬಾನೀ ತಾಂಡಗಳಲ್ಲಿ ನಡೆದ ಹೆಣ್ಣು ಶಿಶುಗಳ ಮಾರಾಟ ಇವಕ್ಕೆ ಜ್ವಲಂತ ನಿದರ್ಶನ).

**ನರಬಲಿ**

ನಮ್ಮ ಮೂಢನಂಬಿಕೆಗಳಿಗೆ ಕೊನೆಯಿಲ್ಲ. ಪ್ರಪಂಚವು ತಾಂತ್ರಿಕವಾಗಿ, ಶೈಕ್ಷಣಿಕವಾಗಿ ಎಷ್ಟೇ ಅಭಿವೃದ್ಧಿ ಹೊಂದುತ್ತಿದ್ದರೂ ಸಹ ಇಂದಿಗೂ ಅಜ್ಞಾನಕ್ಕೆ ಕೊನೆಯಿಲ್ಲ. ನಮ್ಮ ಮೂಡನಂಬಿಕೆಗಳಿಗೆ ಹೆಚ್ಚಿನ ಗಮನ ಕೊಟ್ಟು ನರಬಲಿ ನಡೆಸುತ್ತಿದ್ದೇವೆ, (ಉದಾಹರಣೆಗೆ ಇತ್ತೀಚೆಗೆ ಬೀದರ್ ಜಿಲ್ಲೆಯಲ್ಲಿ ನಡೆದ ಮಗುವಿನ ಕೊಲೆ ಹಾಗೂ ಮಂಡ್ಯ ಜಿಲ್ಲ ಮದ್ದೂರು ತಾಲ್ಲೂಕಿನ ಹಳ್ಳಿಯಲ್ಲಿ ಇಬ್ಬರು ಸ್ವ ಇಚ್ಚೆಯಿಂದ ಸಜೀವವಾಗಿ ಅಗ್ನಿಗಾಹುತಿಯಾದುದನ್ನು ನೆನೆಯಬಹುದು) ಇನ್ನೂ ಮಧ್ಯಕಾಲೀನ ಭಾರತದಲ್ಲಿ ಊಹಿಸಲೂ ಸಾಧ್ಯವಾಗದ ರೀತಿಯಲ್ಲಿ ನರಬಲಿ ನಡೆದಿರುವುದಕ್ಕೆ ಅನೇಕ ವೀರಗಲ್ಲುಗಳು, ಶಾಸನಗಳು, ಸಾಹಿತ್ಯ ಕೃತಿಗಳು ಆಧಾರವಾಗಿವೆ. ಬಡತನದಿಂದಾಗಿ ಹೆತ್ತ ಮಕ್ಕಳನ್ನು ಮಾರುತ್ತಿದ್ದ ಬಡವರಿದ್ದ ಪ್ರಸಂಗ ಒಂದಾದರೆ, ಕೊಳ್ಳುವ ಶ್ರೀಮಂತರ ಉದ್ದೇಶ ಇನ್ನೊಂದು ರೂಪವಾಗಿರುತ್ತಿತ್ತು. "ಸಮ್ಯಕ್ತ್ವ

ಕೌಮುದಿ"ಯಲ್ಲಿ ಕಂಡುಬರುವ ಹಾಗೆ ಕೋಟೆಗೆ ಹಾಗೂ ಕೆರೆಗಳಿಗೆ ನರಬಲಿಕೊಡಲು ಮಕ್ಕಳನ್ನು ಕೊಳ್ಳುವ ಸಂದರ್ಭವನ್ನು ವಿವರಿಸುತ್ತದೆ. ಮನುಷ್ಯರನ್ನು ಕೊಂಡುಕೊಂಡಂತೆ ಪ್ರಾಣಿಗಳನ್ನು ಕೊಂಡುಕೊಳ್ಳುತ್ತಿದ್ದರು.

ನರಬಲಿಯನ್ನು ಹಾಗೂ ಪಶುಬಲಿಗಳನ್ನು ಜನರು ನಾನಾ ಕಾರಣಗಳಾಗಿ ಕೊಡುತ್ತಿದ್ದರೆಂದು ಸಾಹಿತ್ಯ ಕೃತಿಗಳು ತಿಳಿಸುತ್ತವೆ. ಗರಡಿ ಪೂಜಾ ಸಂದರ್ಭದಲ್ಲಿ ಪಶುಬಲಿಕೊಟ್ಟು ಚಂಡಿ ಪೂಜೆ ಮಾಡಿದರೆ, ಹೂತಿಟ್ಟ ನಿಧಿಯನ್ನು ತೆಗೆಸುವಾಗಲೂ ಬಲಿಸಮೇತ ಪೂಜೆ ನಡೆಸುತ್ತಿದ್ದುದ್ದು ಕಂಡುಬರುತ್ತದೆ. ಇದೊಂದು ಇಂದಿನ ಸಮಾಜಕ್ಕೂ ಬಂದೊದಗಿರುವ ದುರಂತವೇ ಸರಿ.

## ೩. ಸಾಮಾಜಿಕ ಸ್ಥಿತಿಗತಿಗಳು (೪)

**೪.೫. ದೇವದಾಸಿಯರು ಮತ್ತು ವೇಶ್ಯೆಯರು**

ವೇಶ್ಯಾವಾಟಿಕೆಯು ವಿಜಯನಗರದಲ್ಲಿ ಒಂದು ರಾಜಪೋಷಿತವಾದ ವೃತ್ತಿಯಾಗಿದ್ದಿತ್ತು ಎಂದು ಹೇಳುವುದಕ್ಕೆ ಅನೇಕ ಆಧಾರಗಳು ದೊರಕುತ್ತವೆ. ಪುರುಷನೊಂದಿಗೆ ಸ್ತ್ರೀಯೊಬ್ಬಳು ತಾತ್ಕಾಲಿಕವಾಗಿ ಮಾಡಿಕೊಳ್ಳುವ ಲೈಂಗಿಕ ಒಪ್ಪಂದವೇ ವೇಶ್ಯಾವೃತ್ತಿ. ಇದನ್ನು ಸಮಾಜದಲ್ಲಿ ಆಕ್ರಮ ಲೈಂಗಿಕ ಸಂಬಂಧವೆಂತಲೂ ಭಾವಿಸಲಾಗುತ್ತದೆ. ಪ್ರತಿಯೊಂದು ಸಮಾಜವೂ ಸಹ ಇದನ್ನು ಕೆಟ್ಟದೆಂದು ಹೇಳುತ್ತಲೆ ತಮ್ಮ ತಮ್ಮ ವ್ಯವಸ್ಥೆಯಲ್ಲಿ ಮಾರ್ಪಾಟು ಮಾಡಿಕೊಂಡೆ ಬರುತ್ತಲಿವೆ. ವಿಜಯನಗರದ ಕಾಲದಲ್ಲಿಯೇ ಅಲ್ಲದೆ ನಮ್ಮ ಪ್ರಾಚೀನ ಭಾರತದ ಚರಿತ್ರೆಯನ್ನು ಗಮನಿಸುವುದಾದರೂ ರಾಜರ ಆಸ್ಥಾನದಲ್ಲಿಯೇ ಎಲ್ಲಾ ವೃತ್ತಿಗಳಿಗಿಂತಲೂ ಸ್ವಾಭಾವಿಕ ವೃತ್ತಿಯಾಗಿ ಬೆಳೆದುಬಂದಿರುವುದು ಕಂಡುಬರುತ್ತದೆ. ವಿಜಯನಗರದಲ್ಲಿ ವೇಶ್ಯಾಪದ್ಧತಿಯು ಆಳವಾಗಿ ಬೇರೂರಲು ಅನೇಕ ಕಾರಣಗಳನ್ನು ಕೊಡಬಹುದು, ಪ್ರಮುಖವಾಗಿ

ಅ. ಬಡತನ
ಆ. ಅಜ್ಞಾನ
ಇ. ಆಸ್ಥಾನದ ನೃತ್ಯಗಾರ್ತಿಯರು ಹಾಗೆ ವೇಶ್ಯಾವೃತ್ತಿ
ಈ. ಯುದ್ಧದ ಸಂದರ್ಭದಲ್ಲಿ ವೇಶ್ಯಯರಿಗೂ ಕನ್ಯೆಯರಿಗೂ ಸ್ಥಾನಮಾನ
ಉ. ಬದುಕಲು ಬೇರೆ ಮಾರ್ಗವಿಲ್ಲದೆ ವೇಶ್ಯಾವೃತ್ತ ಕೈಗೊಂಡಿದ್ದು.

ವಿದೇಶಿ ಪ್ರವಾಸಿಗನಾದ ಬಾಬೋಸಾನು "ಕೆಲವು ಶ್ರೀಮಂತ ವೇಶ್ಯೆಯರು ಬಡತನದ ಬೇಗೆಯಲ್ಲಿರುವ ಪೋಷಕರನ್ನು ತಮ್ಮ ಹೆಣ್ಣು ಮಕ್ಕಳನ್ನು ವೇಶ್ಯವೃತ್ತಿಗೆ ಕಳುಹಿಸಲು ಒತ್ತಾಯಿಸುತ್ತಾರೆ. ಇ. ಸಂದರ್ಭದಲ್ಲಿ ತಮ್ಮ ತಮ್ಮ ಮಕ್ಕಳ ಮಾರಾಟ ಅಥವಾ ವೃತ್ತಿ ಪರಿಣಿತಿಗಾಗಿ ಅಂಥವರ ಹತ್ತಿರ ಕಳುಹಿಸುತ್ತಾರೆ" ಎಂದು ಬರೆದಿರುವನು.

ಗಂಡ ಸತ್ತ ನಂತರ ಹೆಂಡಿತಿಯು ಗಂಡನ ಚಿತೆಯಲ್ಲಿಯೇ ಜೀವಂತವಾಗಿ ಬಿದ್ದು ಸಾಯುವುದನ್ನು "ಸತಿಸಹಗಮನ" ಎಂದು ಕರೆಯುವುದು, ಇಂಥ ಸಂದರ್ಭದಲ್ಲಿ ಹೆಂಡತಿಯು ಸಹಗಮನ ಮಾಡದೆ ಉಳಿದುಕೊಂಡರೆ ಅಂಥವಳನ್ನು ಅಗೌರವದಿಂದ ಕಾಣಲಾಗುತ್ತಿತ್ತು. ಅವರ ತಲೆಯನ್ನು ಬೋಳಿಸಿ ಮನೆತನಕ್ಕೆ ಅಮಂಗಳವೆಂದು ಬಗೆದು ಹೊರಗೆ ಕಳುಹಿಸುವುದು, ಕೊನೆಗೆ ದಿಕ್ಕಿಲ್ಲದೆ ಅವಳು ದೇವಾಲಯವೊಂದರಲ್ಲಿ ದೇವದಾಸಿಯಾಗಿ ನಂತರ ವೇಶ್ಯಾವೃತ್ತಿಯಲ್ಲಿ ತೊಡಗುವುದಾಗಿ ಬಾರ್ಬೋಸಾನು ಹೇಳಿದ್ದಾನೆ.

ವಿಜಯನಗರದ ಅರಸರು ಯುದ್ಧ ಸಂದರ್ಭದಲ್ಲಿಯೂ ಸೈನಿಕ ಶಿಬಿರಗಳಲ್ಲಿ ವೇಶ್ಯೆಯರಿಗೂ, ಕನ್ಯೆಯರಿಗೂ ಪ್ರಮುಖ ಸ್ಥಾನ ಕಲ್ಪಿಸಿ ಕೊಡುತ್ತಿದ್ದರು. ಯುದ್ಧದ ಸಮಯದಲ್ಲಿ ಸೈನಿಕರು ಕೇಳುತ್ತಿದ್ದದು ಹೆಚ್ಚಿನ ಸಂಬಳವನ್ನಲ್ಲ ಬದಲಿಗೆ ಮದುವೆಯಾಗದ ಹುಡುಗಿಯರನ್ನು. ಇವರು ಯುದ್ಧ ಮಾಡದಿದ್ದರೂ ಸಹ ಅವರನ್ನು ಯುದ್ಧದಲ್ಲಿ ವೀರಾವೇಶದಿಂದ ಹೋರಾಡುವಂತೆ ಮಾಡುತ್ತಾರೆ. ಈ ಯುವತಿಯರ

ಮೇಲಿನ ಆಸೆಗಾಗಿ ಬೇರೆ, ಸಾಮಂತ ರಾಜ್ಯಗಳಿಂದಲೂ ಶ್ರೀಮಂತರು, ಸರದಾರರು ಬಂದು ರಾಜನ ಸೈನ್ಯವನ್ನು ಸೇರಿಕೊಳ್ಳುತ್ತಿದ್ದರು. ಪ್ರತಿಯೊಬ್ಬರೂ ಏಳೆಂಟು ಮುದ್ದು ಯುವತಿಯರನ್ನು ತಮ್ಮ ಸೇವೆಗೆ ಸೇರಿಸಿಕೊಂಡಿರುತ್ತಾರೆ. ಇವರಿಗೆ ರಾಜನ ಬೊಕ್ಕಸದಿಂದ ಸಂಬಳ ದೊರೆಯುತ್ತದೆ…. ಎಂಬ ಬಾರ್ಬೋಸನ ಹೇಳಿಕೆಯು ಯುದ್ಧಗಳು ಕೂಡ ವಿಜಯನಗರದಲ್ಲಿ ವೇಶ್ಯಾವೃತ್ತಿಯ ವೃದ್ಧಿಗೆ ಮೂಲಕಾರಣವಾಗಿತ್ತೆಂಬುದನ್ನು ಸೂಚಿಸುತ್ತದೆ.

ಮದುವೆಯಾಗದ ಇಂತಹ ಯುವತಿಯರು ಯುದ್ಧರಂಗದಿಂದ ಬದುಕಿ ಬಂದರೆ ಅವರು ಮುಂದೆ ಅನುಸರಿಸಬೇಕಾಗಿದ್ದದ್ದು ವೇಶ್ಯಾವೃತ್ತಿಯೊಂದನ್ನೇ, ಯೋಧರು, ಸರದಾರರು, ಶ್ರೀಮಂತರುಗಳು ಸೈನ್ಯದಲ್ಲಿ ಬಂದು ಸೇರಿಕೊಳ್ಳುತ್ತಿದ್ದುದ್ದು ಯುವತಿಯರಿಗಾಗಿಯೇ ಹೊರತು ಹೋರಾಡುವುದಕ್ಕಲ್ಲ. ಈ ಸಮಯದಲ್ಲಿ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ವಿಜಯನಗರದ ಸೈನಿಕರಲ್ಲಿಯೇ ಯುವತಿಯರಿಗಾಗಿ ಅಂತಃಕಲಹ ಉಂಟಾಗಿ ಸಾಮ್ರಾಜ್ಯದ ಐಕ್ಯತೆಗೆ ಭಂಗ ತಂದುಕೊಂಡ ಸಂದರ್ಭಗಳು ಅನೇಕವಿದೆ. ವಿಜಯನಗರದ ಪತನಕ್ಕೆ ಇದೊಂದು ಕಾರಣವೆಂದೂ ಅಭಿಪ್ರಾಯ ಪಡಲಾಗಿದೆ.

ವಿಜಯನಗರದ ಸಾಹಿತ್ಯ ಕೃತಿಗಳಲ್ಲಿ ವೇಶ್ಯೆಯರ ಬಗೆಗೆ ವಿಸ್ತಾರವಾದ ವರ್ಣನೆಗಳು ದೊರೆಯುತ್ತವೆ. ರಾಜಸಭೆಯು ಶೋಭಿಸಬೇಕಾದರೆ ಅದರಲ್ಲಿ ಇರಬೇಕಾದ ನಾನಾ ವೃತ್ತಿಯ ಜನರುಗಳಲ್ಲಿ ಪ್ರಮುಖರಾದವರೆಂದರೆ ವೇಶ್ಯೆಯರು ಎಂದು ಸೋಮನಾಥ ಕವಿ ಹೇಳಿರುವುದು ಕಂಡುಬರುತ್ತದೆ. ಏಕೆಂದರೆ ವೇಶ್ಯೆಯರನ್ನು ಶುಭ ಶಕುನದ ಚಿಹ್ನೆಗಳಲ್ಲಿ ಒಂದೆಂದು ನಂಬಲಾಗಿತ್ತೆಂದು ಇದೇ ಕವಿ ವಿವರಿಸುತ್ತಾನೆ. ವೇಶ್ಯಾ ವೃತ್ತಿಯ ಆರಂಭದ ಬಗ್ಗೆ ಡಾ. ಎನ್. ಸರಸ್ವತಿಯವರು ತಮ್ಮ “The Position of women during the vijayangar period” ಎಂಬ ಕೃತಿಯಲ್ಲಿ ವೇಶ್ಯಾವೃತ್ತಿಯನ್ನು ಆರಂಭಿಸುವ ಮುನ್ನ ಆ ಸಮುದಾಯವು “ಮುದ್ರಾದಿಕೋತ್ಸವಂ” (Showing the mirror) ಎಂಬ ಧಾರ್ಮಿಕ ಆಚರಣೆಯೊಂದನ್ನು ನಡೆಸುತ್ತದೆ. ಚೈತ್ರ ಮಾಸದ ಪೂರ್ಣಿಮೆಯ ದಿನವೆಂದು ಜರುಗುವ ಈ ಕಾರ್ಯಕ್ರಮಕ್ಕೆ ಸಮುದಾಯದ ಸದಸ್ಯರೆಲ್ಲರನ್ನೂ ಆಮಂತ್ರಿಸಲಾಗುತ್ತದೆ. ತಂದೆಯು ತನ್ನ ಮಗಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಅವಳ ಮುಖವನ್ನು ಕನ್ನಡಿಯಲ್ಲಿ ನೋಡುತ್ತಾನೆ. ಏಕೆಂದರೆ ಕನ್ನಡಿಯನ್ನು ಅವರು ಮಹಾಲಕ್ಷ್ಮೀ ಎಂದು ಭಾವಿಸುತ್ತಾರೆ. ನಂತರ ಆಶೀರ್ವದಿಸುತ್ತಾನೆ. ಪ್ರೌಢರಾದ ನಂತರ ವೇಶ್ಯಾವೃತ್ತಿಗಿಳಿಯುವ ಎಲ್ಲಾ ಕನ್ಯೆಯರಿಗೂ ಇದು ಅನ್ವಯಿಸುತ್ತಿತ್ತು ಎಂದು ಬರೆದಿರುವುದು ಕಂಡುಬರುತ್ತದೆ. ಇಂದಿಗೂ ಸಹ ಹಂಪಿಯ ಸುತ್ತಮುತ್ತಲ ಪರಿಸರದಲ್ಲಿ ಗೌಪ್ಯವಾಗಿ ನಡೆದು ಬರುತ್ತಿರುವುದನ್ನು ಕಾಣಬಹುದಾಗಿದೆ.

ವಿಜಯನಗರದ ರಾಜಧಾನಿ ವಿದ್ಯಾರಣ್ಯದಲ್ಲಿದ್ದ ಪ್ರಸಿದ್ಧ ಪೇಟೆಗಳಲ್ಲಿ ಅಚ್ಯುತ ಪೇಟೆಯೂ ಒಂದು. ಅದನ್ನು ‘ಸೂಳೆ ಬಜಾರ್’ ಎಂತಲೇ ಕರೆಯಲಾಗುತ್ತಿತ್ತು. ಆದರೆ ಈ ಬಗೆಯ ಅಭಿಪ್ರಾಯದಲ್ಲಿ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿರುವುದು ಕಂಡುಬರುತ್ತದೆ. ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು ತಮ್ಮ ಬರವಣಿಗೆಯಲ್ಲಿ ನೀಡಿರುವ ವಿವರಣೆಗಳು ಐಷಾರಾಮದ ಜೀವನ ನಡೆಸುತ್ತಿದ್ದ ವೇಶ್ಯೆಯರ ಬದುಕನ್ನು ಮಾತ್ರ. ಆದರೆ ರಾಜಧಾನಿಯ ಪರಿಸರವನ್ನು ಕಂಡ ಸಮಕಾಲೀನ ಕವಿಗಳು ತಮ್ಮ ಕೃತಿಗಳಲ್ಲಿ, ವೇಶ್ಯೆಯರ ಸ್ಥಿತಿಗತಿ, ಸ್ವಭಾವ ಹಾಗೂ ಅವರ ಪರಿಸರವನ್ನು ಭಿನ್ನಭಿನ್ನವಾಗಿ ಹೇಳಿರುವುದು ಕಂಡುಬರುತ್ತದೆ. ಉದಾಹರಣೆಗೆ: ಚೆನ್ನ ಬಸವ ಪುರಾಣದಲ್ಲಿ ವೇಶ್ಯೆಯನ್ನು ಸುಳ್ಳಿನಂಗಡಿ, ಮತ್ಸರದ ಮನೆ, ಮೋಸ ಕಪಟಗಳ ವಾಸಸ್ಥಾನ, ಆಸೆಯ ಆಶ್ರಯ, ಅತೀ ಆಸೆಯ ಅಂಗಡಿ, ಸ್ವಾರ್ಥಿಗಳು ನಡೆಸುವ ಮಂದಿರ, ಜಗಳಗಳು ನಡೆಯುವ ಕೇಂದ್ರಸ್ಥಾನ, ನೆಪಗಳ ನೆಲೆ, ಹೊಸ ಹೊಸ ರೀತಿಯ ಚತುರತೆಯ ಚಾವಡಿ, ಮೋಸಗಳ ಮೂಲಸ್ಥಾನ, ಅಸಾಧ್ಯವಾದ ಸಾಮರ್ಥ್ಯದ ಮನೆಯಾಗಿದ್ದಿತ್ತು ಎಂದು ಹೇಳಿರುವುದು ಕಂಡುಬರುತ್ತದೆ. ಒಂದರ್ಥದಲ್ಲಿ ಇದು ಸತ್ಯವೇ. ಅಂದು ವೇಶ್ಯೆಯರ ಸಹವಾಸ ಮಾಡಿದವರ ಬದುಕನ್ನು ಸೂಚಿಸುವ ಜಾನಪದ ಹಾಡುಗಳು ನಿಜಕ್ಕೂ ಇಂದಿಗೂ ಸಹ ಮನುಷ್ಯನ ಬದುಕಿಗೆ ನಿದರ್ಶನವೆನ್ನಬಹುದು. ಉದಾಹರಣೆಗೆ,

*ತುಂಬಿಟ್ಟುಗುಪ್ಪುಂಟೆ ತವರಿಗೆ ಮುಪ್ಪುಂಟೆ*
*ದೊಂಬನಾ ಮನೆಗೆ ಕದವುಂಟೆ... ಅಣ್ಣಯ್ಯ*
*ಸೂಳೇಯ ನಂಬಿದವಗುಂಟೆ ಸಂಸಾರ ….೧*

*ಮಂಜು ಮರಾಳಲ್ಲಿ ಮರಳು ಸಕ್ಕರೆಯಲ್ಲಿ*
*ಮಡಗಿದ್ದ ಸೂಳೆ ಸ್ಥಿರವಲ್ಲ....ಅಣ್ಣಯ್ಯ*
*ಮನೆಗೆ ತಂದಿರಿಸು ಮಡದಿಯ*

*ಸೂಳೇಯ ಮನೆಯಲ್ಲಿ ಸೂರೆಲ್ಲಿ ಮಲ್ಲೀಗೆ*
*ಜಾಣ ನಾ ಹೋಗಿ ಮಲಗೂವೆ....ಮಂಚದ್ಮೇಲೆ*
*ತಾಳೆ ಹೂವಿನ ತಲೆದಿಂಬು*

*ಎಲ್ಲಿಗೆ ಹೋಗಿದ್ದೆ ಯಾವ್ಹೂವ್ ಮುಡಿದಿದ್ದೆ*
*ಯಾರ ತೋಳಲ್ಲಿ ಒರಗಿದ್ದೆ....ಕಂದಯ್ಯ*
*ವಲ್ಲಿ ಸೆರಗೆಲ್ಲಾ ಪರಿಮಾಳ*

*ಕಾಕಾನ ಕೋಟೆಯ ನೀಟ್ಗಾತಿ ಬಂದವಳೆ*
*ಜಾತ್ರೇಲಿ ಗಂಡ್ಸ ಸುಳಿವಿಲ್ಲ. ಅವಳೊಡನೆ*
*ಸೂಳೇರಿ ಬೀದಿ ಮೆರೆದಾನೋ*

ಎಂಬುವ ಜನಪದವು ಅನುಭವದ ಹಾಗೂ ಸನ್ನಿವೇಶದ ಒತ್ತಡಗಳಿಂದ ಸೃಷ್ಟಿಯಾಗಿವೆ. ಇವು ಇಂದಿಗೂ ಪ್ರಸ್ತುತವಾಗಿವೆ.

ಅಂದಿನ ಶ್ರೀಮಂತ ವೇಶ್ಯೆಯರು ತಮ್ಮ ಮನೆಗಳಲ್ಲಿ ವೀಣೆ, ಕೊಳಲು, ಸಂಗೀತ ಲಹರಿಯನ್ನು ಸೃಷ್ಟಿಸುತ್ತಿದ್ದರು. ಕರ್ಪೂರದ ದೀಪಗಳು, ಸುಗಂಧ ಧೂಪಗಳು, ಸಂಗೀತ ಧಾರೆಗಳೆಂಬ ಬಂಧನಗಳು ಯಾವ ಪುರುಷನನ್ನು ಮನೆಯಿಂದ ಆಚೆ ಹೋಗುವ ಹಾಗೆ ಮಾಡುತ್ತಿರಲಿಲ್ಲ. ವಿಜಯಗರದ ವೇಶ್ಯೆಯರು ಶಿಕ್ಷಣ ಪಡೆಯುವ ಹಕ್ಕುಳ್ಳವರಾಗಿದ್ದರು. ಸ್ವತಃ ಅರಸರೇ ವೃತ್ತಿಪರ ಶಿಕ್ಷಣ ನೀಡಲು ದತ್ತಿಗಳನ್ನು ನೀಡುತ್ತಿದ್ದುದ್ದಕ್ಕೆ ಅನೇಕ ಸಾಕ್ಷಿಗಳಿವೆ. ನವರಾತ್ರಿಯ ಸಮಯದಲ್ಲಿ ವೇಶ್ಯೆಯರ ಕುಸ್ತಿಗಳೂ ನಡೆಯುತ್ತಿದ್ದವೆಂದು ಅಬ್ದುಲ್ ರಜಾಕ್ ತಿಳಿಸಿದ್ದಾನೆ.

ವಿಜಯನಗರದ ರಾಜಕೀಯ ರಂಗದಲ್ಲಿಯೂ ವೇಶ್ಯೆಯರು ತಮ್ಮನ್ನು ಉನ್ನತ ಮಟ್ಟದಲ್ಲಿ ಗುರುತಿಸಿಕೊಂಡಿದ್ದರೆಂಬುವುದು ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ವೇಶ್ಯಾವೃತ್ತಿಯೇ ರಾಜರಕ್ಷಿತವಾಗಿತ್ತು ಎನ್ನಬಹುದು. ಸ್ವಾತಂತ್ರ್ಯವಾಗಿದ್ದ ವೇಶ್ಯೆಯರು ತಮ್ಮದೇ ಒಂದು ವರ್ಗವೆಂದು ಗುರುತಿಸಿಕೊಳ್ಳುತ್ತಿದ್ದರು. (ಅಂದರೆ ದೇವದಾಸಿಯರಲ್ಲ ದವರು) ಇವರುಗಳು ಅರಸರ, ಸರದಾರರ, ಶ್ರೀಮಂತರ ಆಶ್ರಮವನ್ನು ಪಡೆದಿದ್ದರು. ಈ ವರ್ಗದಲ್ಲಿಯೇ ಕೆಲವರು ಅರಸರಿಗೆ ಮತ್ತು ಸರದಾರರಿಗೆ ಸೂಳೆಯರಾಗಿದ್ದರು. ಪ್ರಖ್ಯಾತ ದೊರೆ ಎನ್ನಿಸಿಕೊಂಡಿರುವ ಕೃಷ್ಣದೇವರಾಯನ ಪಟ್ಟದ ರಾಣಿಯರಲ್ಲಿ ಚಿನ್ನಾದೇವಿ ಒಬ್ಬ ವೇಶ್ಯೆ ಎಂಬುವುದು ಇಲ್ಲಿ ಮುಖ್ಯವಾಗಿ ಗೋಚರಿಸುತ್ತದೆ. ಇದರಿಂದಾಗಿ ವೇಶ್ಯೆಯರಿಗೆ ಅಪಾರ ಗೌರವವಿತ್ತು. ಅರಸರು ತಮ್ಮ ಸಾಮರ್ಥ್ಯದ ಪ್ರದರ್ಶನದ ನೆಪದಲ್ಲಿ ಭವ್ಯವಾಗಿ ಆಚರಿಸುತ್ತಿದ್ದ. ದಸರೆಯ ಹಬ್ಬಗಳಲ್ಲಿ ರಾಜರು ಹೊಸನಗರದಿಂದ ರಾಜಧಾನಿಯವರೆಗೆ ಹಬ್ಬವನ್ನು ಆಚರಿಸುತ್ತಾನೆ. ಆಗ ರಾಜ್ಯದ ಎಲ್ಲಾ ಭಾಗಗಳಿಂದ ದೇವದಾಸಿಯರು, ದಳವಾಯಿಗಳೂ, ಸಾಮಂತರೂ ತಮ್ಮ ಪರಿವಾರದ ಸಮೇತ ಬರುತ್ತಾರೆ" ಎಂದು ಪೇಸ್ ಹೇಳಿದ್ದಾನೆ.

ವೇಶ್ಯೆಯರಿಂದ ತೆರಿಗೆ ಪಡೆದು ರಾಜ್ಯದ ವೆಚ್ಚಕ್ಕೆ ಬಳಸುತ್ತಿದ್ದುದ್ದು ನಮ್ಮ ಭವ್ಯ ಚರಿತ್ರೆಯ ದುರಂತಗಳಲ್ಲೊಂದು. ವೇಶ್ಯೆಯರು ನೀಡುತ್ತಿದ್ದ ತೆರಿಗೆಯ ರೀತಿನೀತಿಯನ್ನು ಅಬ್ದುಲ್ ರಜಾಕ್ ಈ ರೀತಿ ವಿವರಿಸುತ್ತಾನೆ. "ವಿಜಯನಗರದ ಏಳು ಕೋಟೆಗಳಲ್ಲಿ ಈ ರೀತಿಯ ಅನೇಕ ವೇಶ್ಯಾಗೃಹಗಳಿದ್ದವು. ಈ ವೇಶ್ಯಾಗೃಹಗಳ ಮೇಲೆ ಹಾಕಿದ ತೆರಿಗೆಯಿಂದ ಬೊಕ್ಕಸಕ್ಕೆ ಹನ್ನೆರಡು ಸಾವಿರ ಫನ

ಆದಾಯ ಬರುತ್ತಿತ್ತು. ಈ ಹಣದಿಂದ ಸೈನಿಕರಿಗೆ ಸಂಬಳವಾಗಿ ಕೊಡುತ್ತಿದ್ದರು" ಎಂದು ಹೇಳಿರುವುದು ವೇಶ್ಯೆಯರ ಆದಾಯವನ್ನು ಸೂಚಿಸುತ್ತದೆ ಹಾಗೂ ವಿಜಯನಗರದಲ್ಲಿ ಈ ವೃತ್ತಿಯ ಸ್ಥಾನಮಾನವನ್ನು ತಿಳಿಸುತ್ತದೆ.

**೩.೬. ಸತಿ ಪದ್ಧತಿ**

ವಿಜಯನಗರದ ಕಾಲದಲ್ಲಿ ಸತಿ ಸಹಗಮನ ಪದ್ಧತಿಯು ವ್ಯಾಪಕವಾಗಿ ಕಂಡುಬರುತ್ತದೆ. ಈ ಪದ್ಧತಿಯು ವಿಜಯನಗರದ ಅಥವಾ ಭಾರತದಲ್ಲಿಯೇ ಅಲ್ಲದೆ ಈಜಿಪ್ಟ್, ಗ್ರೀಕ್, ಚೀನಾ, ಸಿರಿಯಾ ಮುಂತಾದ ದೇಶಗಳಲ್ಲಿಯೂ ಆಚರಣೆಯಲ್ಲಿದ್ದದ್ದು ಕಂಡುಬರುತ್ತದೆ. ಅಂದಿನ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕೇವಲ ಉಪಭೋಗದ ವಸ್ತುವನ್ನಾಗಿಸಿಕೊಂಡಿರುವುದರ ಪ್ರತೀಕವಾಗಿ ಇದು ಗೋಚರಿಸುತ್ತದೆ. ಸತಿಯ ಸಹಗಮನವಾಗುತ್ತಿದ್ದದ್ದು ಎರಡು ರೀತಿಯಲ್ಲಿ

**ಅ. ಸಹಗಮನ :** ಅಂದರೆ ಗಂಡ ಸತ್ತರೆ ಅವನ ಜೊತೆಯಲ್ಲಿಯೇ ಜೀವಂತವಾಗಿ ಚಿತೆಗೆ ಅಥವಾ ಹೂಳುವುದಾದರೆ ಜೀವಂತವಾಗಿ ಸಮಾಧಿ ಮಾಡಿಸಿಕೊಳ್ಳುವುದು ಇದಕ್ಕೆ ಸಹಗಮನ ಎಂದು ಕರೆಯಲಾಗಿದೆ.

**ಆ. ಅನುಗಮನ :** ಗಂಡನು ಎಲ್ಲೋ ದೂರದಲ್ಲಿ ಸತ್ತರೆ, ಅದು ಯುದ್ಧ ರಂಗದಲ್ಲಾಗಬಹುದು ಅಥವಾ ಬೇಟೆಯಾಡುವ ಸಮಯದಲ್ಲಿ ಮರಣಹೊಂದಿದರೆ ಗಂಡನನ್ನು ನೆನೆದುಕೊಂಡು ಬೆಂಕಿಯಲ್ಲಿ ಜೀವ ಅರ್ಪಣೆ ಮಾಡಿಕೊಳ್ಳುವ ಕ್ರಿಯೆಗೆ ಅನುಗಮನ ಎಂತಲೂ ಕರೆಯಲಾಗುತ್ತಿತ್ತು.

ವಿಜಯನಗರ ಸಾಮ್ರಾಜ್ಯದಾದ್ಯಂತ ಇದಕ್ಕೆ ಸಂಬಂಧಿಸಿದ ಅನೇಕ ಶಿಲ್ಪಗಳು, ಶಾಸನಗಳು ದೊರಕುತ್ತವೆ. ಸತಿ ಸಹಗಮನವು ಬೆಂಕಿಗೆ ಹಾರಿ ಜೀವ ಬಿಡುವ ರೂಪ ಒಂದಾದರೆ, ಜೀವಂತವಾಗಿ ಸಮಾಧಿ ಮಾಡಿಸಿಕೊಳ್ಳುವುದು ಮತ್ತೊಂದಾಗಿತ್ತು. ಕೆಲವು ಕಡೆ ನೀರಿಗೆ ಹಾರುವುದು ಹಾಗೂ ಎತ್ತರದ ಪ್ರದೇಶಗಳಿಂದ ಕಮರಿಗಳಿಗೆ ಹಾರಿ ಜೀವ ಬಿಡುವ ಪದ್ಧತಿಯೂ ಇತ್ತೆಂದು ತಿಳಿದುಬರುತ್ತದೆ.

ವಿಜಯನಗರದಲ್ಲಿ ಆಚರಣೆಯಲ್ಲಿದ್ದ ಸತಿ ಪದ್ಧತಿಯ ಕುರಿತು ವಿಪುಲವಾಗಿ ದೇಶೀಯ ಮತ್ತು ವಿದೇಶಿಯ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಈ ಅನಿಷ್ಟ ಪದ್ಧತಿಯ ಉಗಮ ಮತ್ತು ಬೆಳವಣಿಗೆಗಳಿಗೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಕಾರಣಗಳನ್ನೇ ಇದ್ದರೂ ಸಹ ವಿಜಯನಗರದಲ್ಲಿ ಇದೊಂದು ಸಾಮಾಜಿಕ ಮೌಢ್ಯ ವಿಧಿಯಾಗಿದ್ದಿತ್ತೆನ್ನಬಹುದು. ಕನ್ನಡದ ಧ್ವಜಪತಾಕೆಯನ್ನು ಜಗತ್ತಿಗೆ ಸಾರಿದ ಸಾಮ್ರಾಜ್ಯವೆಂದು, ಕನ್ನಡದ ನಾಡಿನ ಚರಿತ್ರೆಯನ್ನು ಶ್ರೀಮಂತಗೊಳಿಸಿದ ರಾಜಮಹಾರಾಜರ ತಾಣವೆಂದು ಹೆಸರು ಪಡೆದಿರುವ ವಿಜಯನಗರ ಸಾಮ್ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಸಂಘಟನೆಗಳು ನಡೆದಿರುವುದು ಕಂಡುಬರುತ್ತದೆ. ಹಿಂದೂ ಧರ್ಮದ ರಕ್ಷಣೆಯ ಹೆಸರಿನಲ್ಲಿಯೇ ದಕ್ಷಿಣ ಭಾರತದಲ್ಲಿ ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯದ ಆಳುವ ವರ್ಗದ ಅತಿಯಾದ ಪ್ರೋತ್ಸಾಹವೇ ಈ ಜೀವ ವಿರೋಧಿ ಆಚರಣೆಗೆ ಕಾರಣವೆನ್ನಬಹುದಾಗಿದೆ. ಈ ಕೆಟ್ಟ ಪದ್ಧತಿಯ ಆಚರಣೆಯ ವಿಧಿ ವಿಧಾನಗಳನ್ನು ಅಂದು ವಿಜಯನಗರಕ್ಕೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು ಸ್ವತಃ ವೀಕ್ಷಿಸಿ ತಮ್ಮ ಬೆಳವಣಿಗೆಗಳಲ್ಲಿ ದಾಖಲಿಸಿದ್ದಾರೆ. ಸಾಮ್ರಾಜ್ಯದ ಹಳ್ಳಿ, ಗ್ರಾಮಗಳಲ್ಲಿ ನಡೆಯುತ್ತಿದ್ದ ಭೀಕರ ಸ್ವರೂಪದ ಸತಿ ಪದ್ಧತಿಯನ್ನು ತಿಳಿಯಲು ವಿದೇಶೀಯರ ಬರವಣಿಗೆಗಿಂತಲೂ ಸಮಕಾಲೀನ ದೇಶೀಯ ಸಾಹಿತಿಗಳ ಸಾಹಿತ್ಯವು ಹೆಚ್ಚಿನ ರೀತಿಯಲ್ಲಿ ನೆರವಾಗುತ್ತವೆ.

ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಸತಿಗೆ ಸಿದ್ಧವಾಗುತ್ತಿದ್ದ ರೀತಿ ಹಾಗೂ ಸತಿ ನಡೆಯುವಾಗಿನ ಸನ್ನಿವೇಶವನ್ನು ಹೆಚ್.ಎಲ್. ನಾಗೇಗೌಡರು ತಮ್ಮ ಪ್ರವಾಸಿ ಕಂಡ ಇಂಡಿಯಾ ಸಂಪುಟ ೨ರಲ್ಲಿ ಬಾರ್ಬೋಸಾನ ಹೇಳಿಕೆಯನ್ನು ತಿಳಿಸಿದ್ದಾರೆ. ಅದರ ಪ್ರಕಾರ ನೋಡುವುದಾದರೆ, ನಾನಿದ್ದ ಏಳು ತಿಂಗಳುಗಳ ಕಾಲದಲ್ಲಿ ಇಲ್ಲಿನ ಸಮಾಜದಲ್ಲಿ ನಡೆಯುತ್ತಿದ್ದ ಅನೇಕ ವಿಚಿತ್ರ ಹಾಗೂ ಅಮಾನುಷ ಕೃತ್ಯಗಳನ್ನು ಕಂಡೆ, ಗಣ್ಯರಾದ ಗಂಡಸರಾಗಲಿ, ಹೆಂಗಸರಾಗಲಿ ಸತ್ತರೆ ಇವರು ಸುಡುತ್ತಾಳೆ, ಗಂಡ ಸತ್ತ ಮೇಲೆ ಹೆಂಡತಿ ಒಂದು ಅಥವಾ ಮೂರು ತಿಂಗಳೂಗಳ ನಂತರ ಚಿತೆಯಲ್ಲಿ ಬೀಳುವುದಕ್ಕೆ ಸಿದ್ಧಳಾಗುತ್ತಾಳೆ. ನಿರ್ದಿಷ್ಟವಾದ ದಿನದಂದು ಬಹಳ ಹೊತ್ತಿಗೆ ಮುಂಚೆ ಎದ್ದು ಕುದುರೆಯ ಮೇಲೋ ಅಥವಾ ಎಂಟು ಜನ ಹೊತ್ತ ಪಲ್ಲಕ್ಕಿಯ ಮೇಲೋ ಕುಳಿತು ಚಿತೆಯು ಸಿದ್ಧವಾಗಿರುವ ಸ್ಥಳಕ್ಕೆ

ಹೊರಡುತ್ತಾಳೆ. ಆಕೆ ಮದುವೆಗೆ ಸಿದ್ಧವಾಗಿರುವ ವಧುವಿನಂತೆ ಅಲಂಕಾರ ಮಾಡಿಕೊಂಡಿರುತ್ತಾಳೆ. ತಲೆಯ ಕೂದಲನ್ನು ಇಳಿ ಬಿಟ್ಟಿರುತ್ತಾಳೆ. ತನ್ನ ಯೋಗ್ಯತೆ ಗನುಸಾರವಾಗಿಯೇ ಒಡವೆ ವಸ್ತ್ರಗಳನ್ನು ಹಾಕಿಕೊಂಡಿರುತ್ತಾಳೆ, ಊರನ್ನು ಆಳುವ ಅರಸನ, ಪಾಳೆಯಗಾರನ ಅಪ್ಪಣೆಯನ್ನು ಪಡೆದು, ಅರಿಶಿನದ ಸೀರೆಯನ್ನುಟ್ಟು, ಆಭರಣಗಳನ್ನು ತೊಟ್ಟು ಪರಿಪರಿಯಾದ ಪುಷ್ಪಗಳಿಂದ ಅಲಂಕರಿಸಿಕೊಂಡು ಅವಳನ್ನು ಊರಿನ ಸುತ್ತೆಲ್ಲಾ ಮೆರವಣಿಗೆ ಮಾಡಲಾಗುತ್ತಿತ್ತು. ವೆನೀಸ್‌ನಲ್ಲಿ ಮದುವೆಗೆ ಹೊರಟ ಹೆಣ್ಣಿನ ಮೆರವಣಿಗೆಯಂತೆ, ಅವಳ ಎಡಗೈಯಲ್ಲಿ ಅವಳು "ನಾನು ನನ್ನ ನಲ್ಲನೊಡನೆ ಚಿರನಿದ್ರೆ ಮಾಡಲು ಹೋಗುತ್ತಿರುವೆ" ಎಂದು ಹಾಡುತ್ತಾ ಹಾಡುತ್ತಾ ಮುಂದುವರಿಯುತ್ತಾಳೆ. ಮೆರವಣಿಗೆಯಲ್ಲಿ ಆಕೆಯ ನೆಂಟರಿಷ್ಟರು, ಬಮಧು ಬಳಗದವರೆಲ್ಲರೂ ಭಾಗವಹಿಸುತ್ತಾರೆ ಎಂದು ಸಂಪೂರ್ಣ ಚಿತ್ರಣವನ್ನು ನೀಡಿದ್ದಾನೆ.

ಬಾರ್ಬೋಸಾನು ಇನ್ನೂ ಮುಂದುವರಿದು ಸತಿಯು ನಡೆಯುತ್ತಿದ್ದ ಅಂತಿಮ ಕ್ಷಣಗಳನ್ನು ಸಹ ಸಂಕ್ಷಿಪ್ತವಾಗಿ ವಿವರಿಸಿದ್ದಾನೆ. ಸಾಮಾನ್ಯವಾಗಿ ಸತಿ ಆಚರಣೆಯು ನದಿಯ ದಡದಲ್ಲಿ ನಡೆಯುತ್ತಿತ್ತು. ಬೆಳಿಗ್ಗೆ ಸತಿಗೆ ಆಹುತಿಯಾಗುವವಳನ್ನು ಮೆರವಣಿಗೆಯಲ್ಲಿ ಕರೆದೊಯ್ದು ಮಧ್ಯಾಹ್ನದ ವೇಳೆಗೆ ನದಿಯ ದಡ ಸೇರುತ್ತಾರೆ. ಅಲ್ಲಿ ಚಿತೆಗೆ ಅಗತ್ಯವಾಗಿ ಬೇಕಾಗಿರುವ ಕಟ್ಟಿಗೆ, ಎಣ್ಣೆ ಮುಂತಾದವುಗಳೆಲ್ಲವೂ ಸಿದ್ಧವಾಗಿರುತ್ತಿದ್ದವು. ಈ ಅನಿಷ್ಟ ಪದ್ಧತಿಯನ್ನು ನೋಡಲು ಬಂದವರೆಲ್ಲರಿಗೂ ಊಟದ ವ್ಯವಸ್ಥೆಯು ತುಂಬ ವಿಜೃಂಭಣೆಯಿಂದಲೇ ನಡೆದಿರುತ್ತದೆ. ಚಿತೆಗೆ ಸಿದ್ಧಳಾಗಿರುವ ವಿಧವೆಯೂ ಸಹ ಎಲ್ಲರ ಜೊತೆಯಲ್ಲಿಯೇ ಸಂತೋಷದಿಂದ ಊಟ ಮಾಡಿ, ಸವಲ್ಪ ಹೊತ್ತು ಕಾಲ ಕಳೆಯುತ್ತಾಳೆ. ಒಂದು ವರ್ಗವು ಚಿತೆಯನ್ನು ಸಿದ್ಧಮಾಡುತ್ತದೆ. (ಸಾಮಾನ್ಯವಾಗಿ ಹೊಲೆಯರು ಹಾಗೂ ಮಾದಿಗರು ಈ ಕಾರ್ಯವನ್ನು ನಿರ್ವಹಿಸುತ್ತಿದ್ದರೆಂದು ಕಂಡುಬರುತ್ತದೆ) ವಿಧವೆಯು ತನ್ನ ಗಂಡನ ಹತ್ತಿರದ ಸಂಬಂಧಿಯೊಬ್ಬನ ಕೈಹಿಡಿದು ನದಿಯ ಬಳಿಗೆ ಹೋಗುತ್ತಾಳೆ. ತನ್ನ ವಸ್ತುಗಳನ್ನೆಲ್ಲಾ ಕಳಚಿ ತಂದೆತಾಯಿಯರಿಗೆ ಕೊಟ್ಟು ನದಿಯಲ್ಲಿ ಸ್ನಾನಮಾಡಿ ಹದಿನಾಲ್ಕು ಮೊಳದ ಅರಿಶಿಣ ಬಟ್ಟೆಯನ್ನು ಉಟ್ಟುಕೊಳ್ಳುತ್ತಾಳೆ. ಮತ್ತೆ ಗಂಡನ ಕಡೆಯವರ ಕೈ ಹಿಡಿದು ಚಿತೆಯ ಬಳಿ ಇರುವ ವೇದಿಕೆಯ ಮೇಲೆ ನಿಂತು ಮಕ್ಕಳಿಗೆ, ನೆಂಟರಿಷ್ಟರಿಗೆ ಬುದ್ಧಿ ಮಾತನಾಡುತ್ತಾಳೆ. ನಂತರ ಸತಿಯಾಗುವ ಬಗ್ಗೆ ಮಾತನಾಡಿ, ಸತಿಗೆ ಸಿದ್ಧಳಾಗುತ್ತಾಳೆ. ಒಬ್ಬರು ಅವಳ ತಲೆಯ ಮೇಲೆ ಒಂದು ಗಡಿಗೆ ಎಣ್ಣೆಯನ್ನು ಸುರಿಯುತ್ತಾರೆ. ಬರಿದಾದ ಗಡಿಗೆಯನ್ನು ಬೆಂಕಿಗೆ ಬಿಸಾಡುತ್ತಾರೆ. ಹಾಗೆ ಬಿಸಾಡಿದ ಕೂಡಲೇ ವಿಧವೆಯು ಚಿತೆಗೆ ಹಾರಿ ಆತ್ಮ ಹಾಗೂ ದೇಹಗಳನ್ನು ಸಹನ ಮಾಡಿಕೊಳ್ಳುತ್ತಾಳೆ. ನೆರೆದವರೆಲ್ಲರೂ ಜೋರಾಗಿ ಬೊಬ್ಬೆ ಹಾಕುತ್ತಾರೆ. ಏಕೆಂದರೆ ಚಿತೆಗೆ ಹಾರಿದ ವಿಧವೆಯು ದಾಯುವ ತನಕ ಅವಳೂ ಸಹ ಕಿರಾಚಾಡುವುದು ಸಹಜ. ಅವಳ ಕೂಗು ನೆರೆದಿರುವವರಿಗೆ ಕೇಳಿಸದಿರಲಿ ಎಂದು ಇವರು ಜೋರಾಗಿ ಬೊಬ್ಬೆ ಹಾಕುತ್ತಿದ್ದರು ಎಂದು ವಿವರಿಸಿದ್ದಾರೆ. ಇದೆ ಹೀನ ಸಂಸ್ಕೃತಿಯಾಗಿತ್ತು?

ಕೇವಲ ಆಳುವ ವರ್ಗಕ್ಕಷ್ಟೆ ಈ ಪದ್ಧತಿಯು ಸೀಮಿತವಾಗಿರದೆ. ಇತರ ವರ್ಗಗಳೂ ಸಹ ಪರಿಸರದ ಪ್ರಭಾವದಿಂದಾಗಿ ಆ ಆಚರಣೆಗೆ ಒಳಗಾಗಿದ್ದವೆಂಬುವುದ ಕಂಡು ಬರುತ್ತದೆ. ಬ್ರಾಹ್ಮಣ ವರ್ಗದ ಸ್ತ್ರೀಯರು ಸತಿ ಹೋಗುವುದನ್ನು ಅವರ ಶಾಸ್ತ್ರಗಳು ನಿಷೇಧಿಸಿವೆಯಾದರೂ ಕ್ರಮೇಣ ಅನೇಕ ಪ್ರಭಾವಗಳಿಂದ ಸತಿ ಪದ್ಧತಿಯು ಇವರಲ್ಲಿಯೂ ಆಚರಣೆಗೆ ಬಂದಿರುವುದು ಕಂಡುಬರುತ್ತದೆ. ವಿಜಯನಗರದ ರಾಜಧಾನಿಯಲ್ಲಿ ಬ್ರಾಹ್ಮಣ ಸ್ತ್ರೀಯರು ಸತಿ ಹೋಗುತ್ತಿದ್ದರೆಂಬುದನ್ನು ಕುರಿತು ಇಟಲಿಯ ನಿಕಿಲೂಕೊಂಟಿ ತನ್ನ ವರದಿಯಲ್ಲಿ ವಿವರಿಸಿದ್ದಾನೆ. ಹಾಗೆಯೇ ಜೈನ ಧರ್ಮದ ಅನುಯಾಯಿಗಳು ಸತಿ ಪದ್ಧತಿಯನ್ನು ಸಾಮ್ರಾಜ್ಯದ ಇತರೆ ಕಡೆಗಳಲ್ಲಿ ಆಚರಿಸುತ್ತಿದ್ದು ಸಮಕಾಲೀನ ಶಾಸನಗಳಿಂದ ತಿಳಿದುಬರುವುದಾದರೂ ರಾಜಧಾನಿಯಲ್ಲಿದ್ದ ಜೈನರು ಸತಿ ಆಚರಿಸಿದ ಬಗ್ಗೆ ಮಾಹಿತಿ ದೊರೆಯುವುದಿಲ್ಲ.

ವಿಜಯನಗರದ ಅರಸರುಗಳು ಭಾರತದ ಇನ್ನಾವುದೇ ಸಂಸ್ಥಾನದ ರಾಜರುಗಳಿಗಿಂತಲೂ ಹೆಚ್ಚಿನ ಬಲಾಢ್ಯನಾಗಿದ್ದೆರೆ ಸಾಮಾನ್ಯವಾಗಿ ಪ್ರತಿಯೊಬ್ಬ ರಾಜನು ಹನ್ನೆರಡು ಸಾವಿರ ಹೆಂಡತಿಯರನ್ನು ಹೊಂದಿರುತ್ತಿದ್ದನೆಂದೂ ಇವರಲ್ಲಿ ನಾಲ್ಕು ಸಾವಿರ ಜನ ಇವನು ಹೋದೆಡೆಯಲ್ಲೆಲ್ಲಾ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರೆಂದು ಇವರಿಗಿಂತಲೂ ಹೆಚ್ಚು ರೂಪವತಿಯರಾದ ನಾಲ್ಕು ಸಾವಿರ ಹೆಂಡತಿಯರು, ಕುದುರೆಯ ಮೇಲೆ ಸವಾರಿ ಮಾಡುತ್ತಾ ಹೋಗುತ್ತಿದ್ದರೆಂದೂ ಹಾಗೆಯೇ ಇವರುಗಳಲ್ಲಿ ಸುಮಾರು ಎರಡು ಸಾವಿರ ಹೆಂಡತಿಯರು ರಾಜನು ಸತ್ತಾಗ ತಮ್ಮ ಆತ್ಮಸಂತೋಷದಿಂದ ಚಿತೆಯೊಳಗೆ ಬಿದ್ದು ಪ್ರಾಣತ್ಯಾಗ ಮಾಡುತ್ತೇವೆಂಬ ವಾಗ್ದಾನ ಮಾಡಿ

ರಾಜನ ಕೈಹಿಡಿಯುತ್ತಿದ್ದರೆಂದು ಬಾರ್ಬೋಸಾ ವಿವರಿಸಿದ್ದಾನೆ. ಇಷ್ಟೇ ಅಲ್ಲದೆ ಅವನು ಮುಂದುವರೆದು ಬರೆಯುತ್ತಾ : "ರಾಜ ಸತ್ತರೆ ಅಂತಃಪುರದ ಸುಮಾರು ನಾನೂರು ಐನೂರು ಸ್ತ್ರೀಯರು ಅವನೊಡನೆ ಚಿತೆಯಲ್ಲಿ ಬೀಳುತ್ತಾರೆ. ಇದಕ್ಕಾಗಿಯೇ ಚಿತಾಗ್ನಿಯನ್ನು ತುಂಬ ದೊಡ್ಡದಾಗಿ ಮಾಡಿರುತ್ತಾರೆ. ಶ್ರೀಗಂಧ, ತೇಗ, ಹೊನ್ನೆ ಮುಂತಾದ ಮರಗಳ, ಎಣ್ಣೆ, ತುಪ್ಪವನ್ನು ಹೇರಳವಾಗಿ ಶೇಖರಿಸುತ್ತಾರೆ. ಈ ಚಿಂತೆಯಲ್ಲಿ ಬೀಳುವುದಕ್ಕಾಗಿ ನಾಮುಂದು ತಾಮುಂದು ಎಂದು ನುಗ್ಗಿ ಬರುತ್ತಾರೆ. ಇದೊಂದು ಅಪೂರ್ವವಾದ ದೃಶ್ಯ" ಎಂದು ಅಂದಿನ ರಾಜಾಸ್ಥಾನದಲ್ಲಿ ಇದ್ದ ಸತಿ ಪದ್ಧತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ.

ಮೇಲಿನ ಎಲ್ಲ ಉಲ್ಲೇಖಗಳು ಭವ್ಯ ಸಾಮ್ರಾಜ್ಯವೆಂದೆನ್ನಿಸಿಕೊಂಡಿರುವ ವಿಜಯ ನಗರದಲ್ಲಿ ಮನೆಮಾಡಿಕೊಂಡಿದ್ದ ಅನಿಷ್ಟತೆಯನ್ನು ಸೂಚಿಸುತ್ತದೆ. ಧರ್ಮ ಸಂಸ್ಕೃತಿಗೆ ಹಾಗೂ ಅದರ ರಕ್ಷಣೆಗೆ ಬದ್ಧರಾಗಿದ್ದ ಆಡಳಿತಗಾರರುಗಳು ಇಂತಹ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡದೆ, ತಾವೇ ಪ್ರೋತ್ಸಾಹಿಸಿಕೊಂಡು ಬಂದಿರುವುದು ಖೇದ ತರುವ ವಿಷಯವೇ, ೧೦ನೇ ಶತಮಾನದ ಪ್ರಾರಂಭದಲ್ಲಿ ಬಂಗಾಳದ ರಾಜಾರಾಮ್ ಮೋಹನ್ ರಾಯ್ ರವರು "ಬ್ರಹ್ಮ ಸಮಾಜ"ವನ್ನು ಸ್ಥಾಪಿಸಿಕೊಂಡು ಈ ಅನಿಷ್ಟಪದ್ಧತಿಯ ವಿರುದ್ಧ ಹೋರಾಡಲು ಪ್ರಯತ್ನಿಸಿ ತಮ್ಮ ಜೀವಿತದ ಕೊನೆಯವರೆಗೆ ಹೋರಾಡಿದರೆ ಅವರ ಹೋರಾಟಕ್ಕೆ ಅಂದಿನ ಬ್ರಿಟಿಷ್ ಗೌವರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಗ್ ಹೆಚ್ಚಿನ ಪ್ರೋತ್ಸಾಹ ನೀಡಿರುವುದು ಸಹ ಇಂದು ಇತಿಹಾಸವಾಗಿದೆ. ಇಂದಿಗೂ ಸಹ ಇಂತಹ ಅನಿಷ್ಟ ಪದ್ಧತಿಯು ಆಚರಿಸುತ್ತಿರುವುದನ್ನು ಪತ್ರಿಕೆಯಲ್ಲಿ ನೋಡಿದ್ದೇವೆ. ಈ ಕೆಟ್ಟ ಆಚರಣಾ ಸಂಸ್ಕೃತಿಯು ಹಿಂದೂ ಸಂಸ್ಕೃತಿಯನ್ನು ಉಳಿಸಲು ಉದಯಿಸಿದ ಸಾಮ್ರಾಜ್ಯವೆಂದು ಕೆಲವು ಮೂಲಭೂತ ಇತಿಹಾಸಕಾರರರಿಂದ ಕರೆಸಿಕೊಂಡ ವಿಜಯನಗರದಲ್ಲಿ ಹೆಚ್ಚಾಗಿ ಬೇರೂರಿತು.

**೩.೭. ಮಹಿಳೆಯರ ಸ್ಥಾನಮಾನಗಳು**

ವಿಜಯನಗರದ ಇತಿಹಾಸದ ಬಗ್ಗೆ ವಿಶಿಷ್ಟ ರೀತಿಯ ಬೆಳಕು ಚೆಲ್ಲಲು ಇಂದು ನಮ್ಮ ಮುಂದೆ ಅನೇಕ ಸಾಹಿತ್ಯಾಧಾರಗಳು ಹಾಗೂ ದೇವಾಲಯಗಳು ತೆರೆದ ಪುಸ್ತಕದಂತೆ ಕಂಗೊಳಿಸುತ್ತಿವೆ. ಅವುಗಳ ಸಹಾಯದಿಂದ ಅಂದಿನ ಕಾಲದಲ್ಲಿ ಸ್ತ್ರೀಯರ ಸ್ಥಾನ ಹಾಗೂ ಅವರು ಅಸ್ಥಾನದಲ್ಲಿ ಹಾಗು ಸಮಾಜದಲ್ಲಿ ಬದುಕುತ್ತಿದ್ದ ಸ್ಥಿತಿಗತಿಯ ಬಗ್ಗೆ ತಿಳಿಯಲು ಸಹಕಾರಿಯಾಗಿವೆ ಎನ್ನಬಹುದು. ಮೇಲಿನ ಆಧಾರಗಳಿಂದ ಮಹಿಳೆಯರು ರಾಜಕೀಯ, ಆರ್ಥಿಕ ಹಾಗೂ ಆಡಳಿತ ವಿಷಯಗಳಲ್ಲಿಯೂ ಪ್ರಮುಖ ಸ್ಥಾನ ಪಡೆದಿದ್ದರೆಂದು ಕಂಡುಬರುತ್ತದೆ. ಆದರೆ ಮೇಲಿನ ಹೇಳಿಕೆಯು ಸಾಮ್ರಾಜ್ಯದ ಕೇವಲ ಶೇ. ೩ರಷ್ಟು ಮಹಿಳೆಯರಿಗೆ ಮಾತ್ರ ಸಂಬಂಧಪಟ್ಟದ್ದು. ಮಿಕ್ಕ ಮಹಿಳೆಯರು ಹಲವಾರು ರೀತಿಯ ಸಾಮಾಜಿಕ ಸಂಕೋಲೆಗೆ ಬಲಿಯಾಗಿ ಬದುಕುತ್ತಿದ್ದರು.

ಕರ್ನಾಟಕದ ಪ್ರಾಚೀನ ಇತಿಹಾಸವನ್ನು ಗಮನಿಸಿದರೆ ಅದು ಗಂಗರ ಕಾಲದಿಂದ ರಾಷ್ಟ್ರಕೂಟ, ಚಾಲುಕ್ಯ, ಹೊಯ್ಸಳ, ಇಕ್ಕೇರಿ ಅರಸರು, ಮೈಸೂರು, ಒಡೆಯರವರೆಗೂ ಸಹ ಮಹಿಳೆಯರು ಪ್ರಮುಖ ಪಾತ್ರವಹಿಸಿರುವುದು ಕಂಡುಬರುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ರಾಜರ ಅನುಪಸ್ಥಿತಿಯಲ್ಲಿ ರಾಣಿಯರೇ ಆಳ್ವಿಕೆ ನಡೆಸಿರುವುದಕ್ಕೆ ಅನೇಕ ಆಧಾರಗಳಿವೆ, ಕೃಷ್ಣದೇವರಾಯನು ತನ್ನ ರಾಣಿಯಾದ ಜಗನ್ ಮೋಹಿನಿಗೆ ಆಂಧ್ರಪ್ರದೇಶದ ಉಸ್ತುವಾರಿಯನ್ನು ವಹಿಸಿದ್ದದ್ದು ಕಂಡುಬರುತ್ತದೆ. ಅಂದಿನ ಕಾಲದ ಮಹಿಳೆಯರು ಗೃಹಿಣಿಯರಾಗಿ, ಯುದ್ಧದ ಸಮಯದಲ್ಲಿ ಹೋರಾಟಗಾರ್ತಿಯರಾಗಿ, ವ್ಯಾಪಾರಗಾರರಾಗಿ, ಕುಸ್ತಿ ಮಾಡುವವಳಾಗಿ, ಕವಯತ್ರಿಯರಾಗಿ, ಸಾಹಿತಿಗಳಾಗಿ ಹಾಗೂ ಗವರ್ನರ್ ಗಳಾಗಿ ಆಡಳಿತಾಧಿಕಾರಿಗಳಾಗಿ, ರಾಣಿಯರ ಸಖಿಯರಾಗಿ, ಕೃಷಿಕರಾಗಿ, ಸಂಸಾರದ ಭಾರ ಹೊರುವವರಾಗಿ, ವೇಶ್ಯೆಯಾಗಿ ಕಂಗೊಳಿಸಿರುವುದು ಕಂಡುಬರುತ್ತದೆ.

**ಗೃಹಿಣಿಯಾಗಿ :** ಮದುವೆಯಾದ ಹೆಣ್ಣು ಮಕ್ಕಳು ಸೌಭಾಗ್ಯ ಸೂಚಕವಾಗಿ ಅನೇಕ ಚಿಹ್ನೆಗಳನ್ನು ಧರಿಸುತ್ತಿದ್ದರು. ಈಗಲೂ ಧರಿಸುತ್ತಾದೆ. ಆದರೆ ಆ ಚಿಹ್ನೆಗಳು ಯಾವುವು ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಅವುಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ತಾಳಿ (ಮಂಗಳ ಸೂತ್ರ), ಬಳೆ, ಓಲೆ, ಮೂಗುತಿ, ಕಾಲುಂಗರ, ಅರಿಶಿನ, ಕುಂಕುಮ, ಹೂವು, ಕಾಡಿಗೆ ಇವು ಸಾಮಾನ್ಯವಾಗಿ ಸೌಭಾಗ್ಯ ಸೂಚಕಗಳು, ಮೇಲಿನ ಸೌಭಾಗ್ಯದ ಲಕ್ಷಣಗಳಲ್ಲಿ ಐದನ್ನೂ

ವಿಶೇಷವಾಗಿ ಹೆಚ್ಚಾಗಿ ಹೆಸರಿಸಿರುವುದು ಕಂಡುಬರುತ್ತದೆ. ಕೆಲವರ ಪ್ರಕಾರ ಅರಿಶಿಣ, ಕುಂಕುಮ, ಸಿಂಧೂರ (ಬೈತಲೆಗೆ ಹಚ್ಚುವ ಕೆಂಪು ಪುಡಿ) ಕಾಡಿಗೆ ಮತ್ತು ಮಂಗಳ ಸೂತ್ರ ಇವೇ ಆ ಐದು. ಇನ್ನೊಂದು ಪಟ್ಟಿಯ ಪ್ರಕಾರ ಮಂಗಳಸೂತ್ರ ಅರಿಶಿನ, ಕುಂಕುಮ, ಬಳೆ, ಓಲೆ ಇವೇ ಆ ಐದುಗಳಾಗಿವೆ. ('ಐದೆ' ಎಂದರೆ ಈ ಐದು ಲಕ್ಷಣವಿರುವವಳು ಎಂಬ ಅರ್ತ ಸೂಚಿಸುತ್ತದೆ. ಎಂದು ಡಾ. ಚಿದಾನಂದಮೂರ್ತಿಯವರು ತಮ್ಮ 'ಹೆಣ್ಣು ಸೌಭಾಗ್ಯದ ಲಕ್ಷಣಗಳು" ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ).

ಮೇಲಿನದರ ಪ್ರಕಾರ ಮುತ್ತೈದೆಯರಿಗೆ ವಿಶೇಷವಾದ ಪವಿತ್ರ ಸ್ಥಾನಮಾನಗಳಿದ್ದವೆಂದು ಗಮನಿಸಬಹುದು. ಸಾಮಾನ್ಯವಾಗಿ ಮದುವೆ, ಉಪನಯನ ಮುಂತಾದ ಶುಭಕಾರ್ಯಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಇಲ್ಲಿನ ಮಹಿಳೆಯರು ಸುಂದರವಾಗಿ ಅಲಂಕರಿಸಿಕೊಳ್ಳುತ್ತಿದ್ದರೆಂದು ವಿದೇಶಿ ಪ್ರವಾಸಿಗರಾದ ಪಾಯಸ್ ಹೇಳಿದ್ದಾರೆ. ಹೆಂಗಸರುಗಳು, ದೇವಗಿರಿ, ಹೊಲಿ, ಮಗರಿ ಹಾಗೂ ಕಾಡಿಗೆ ನೀರಿನ ಸೀರೆಗಳನ್ನು ಹೆಚ್ಚಾಗಿ ಇಷ್ಟಪಡುತ್ತಿದ್ದರು. ಪಾಯಿಸ್ ಇನ್ನು ಮುಂದುವರೆದು ಅಂದಿನ ಸ್ತ್ರೀಯರು ತುಂಬ ಸುಂದರಿಯರಾಗಿದ್ದರು, ಒಬ್ಬಳಿಗೂ ಒಂದು ಗುಂಜಿಯ ಕೊಬ್ಬಾಗಲಿ, ಬೊಜ್ಜು ಆಗಲಿ ಇರಲಿಲ್ಲ. ಸೀರೆಯಂಥ ಸರ್ವೆ ಸಾಧಾರಣವಾದ ಉಡುಗೆಯನ್ನು ಎಷ್ಟು ಕಲಾತ್ಮಕವಾಗಿ ಧರಿಸಬಹುದೆಂಬುದನ್ನು ಇವರಿಂದ ನೋಡಿ ಕಲಿಯಬೇಕು ಎಂದು ಹೇಳಿರುವುದಲ್ಲದೆ, ಅಂದಿನ ಕಾಲದಲ್ಲಿಯೇ ರವಿಕೆ, ಕಂಚುಳಿಕೆ, ಕುಪ್ಪಸಗಳಾಗಲಿ, ಅಂಗದಟ್ಟಿ ಅಥವಾ ಅಂಗವಟ್ಟವೆಂದು ಕರೆಯಲ್ಪಡುತ್ತಿದ್ದ ಪೆಟಿಕೋಟ್ ಅಥವಾ ಲಂಗವಾಗಲಿ ಅಂದು ಸಾಕಷ್ಟು ಪರಿಚಯವಿದ್ದವೆನ್ನಬಹುದು. ಸೀರೆಯ ನೀರಿಗೆಗಳನ್ನು ಪಾದಗಳವರೆಗೆ ಇಳಿಬಿಟ್ಟು. ಅವು ಹೊತ್ತ ನಕ್ಷೆ, ಕುಸುರಿಯ ಕೆಲಸಗಳು ಸುಂದರವಾಗಿ ಗೋಚರಿಸುವಂತೆ ಉಡುತ್ತಿದ್ದರು ಎಂದು ಪೇಸ್ ವರ್ಣಿಸಿದ್ದಾನೆ.

ಗೃಹಿಣಿಯರು ತಾವು ಧರಿಸುತ್ತಿದ್ದ ಉಡುಪು ಹಾಗೂ ಆಭರಣಗಳಿಗಾಗಿ ಈ ಹಾಡು ಸೃಷ್ಟಿಗೊಂಡಿರುವುದೇನೋ ಎನ್ನಬಹುದು.

*ಹಳ್ಳದಲ್ಲಿ ಮೈ ತೊಳೆದು ಒಳ್ಳೆಯಾ ಮಡಿಯುಟ್ಟಾ* |
*ಮೆಲ್ಲನೆ ಶಿವ ಪೂಜೆಗಣಿ ಮಾಡುತ* ||
*ಕಳ್ಳತನದಲ್ಲಿ ಹೋಗಿ ಶಿವಗೆ ಹೆಂಡಿತಿಯಾದ* |
*ಗುಳ್ಳದಾ ಗೌರಿಗಾರತಿ ಯೆತ್ತಿರೇ* ||
*ಜಯಮಂಗಳಂ ನಿತ್ಯ ಶುಭಮಂಗಳಂ*

*ನಂದಿಬಟ್ಟಲ ಹೂವು ದುಂಡು ಮಲ್ಲಿಗೆ ದಂಡೆ* |
*ಚಂದ್ರಮನ ಬೈತಲೆಗೆ ಮುತ್ತು ತುಂಬಿ* ||

ಈ ಮೇಲಿನ ಜನಪದ ಗೀತೆಯು ಅಂದಿನ ಗೃಹಿಣಿಯ ಜೀವನಕ್ಕೆ ನಿದರ್ಶನವಾಗಿದೆ ಎನ್ನಬಹುದಾಗಿದೆ.

**ಯುದ್ಧದಲ್ಲಿ ಹೋರಾಟಗಾರ್ತಿಯಾಗಿ ಮಹಿಳೆ :** ಹಿಂದೆ ವೇಶ್ಯಾವಾಟಿಕೆಯಲ್ಲಿ ಇದರ ಬಗ್ಗೆ ಚರ್ಚಿಸಲಾಗಿದೆ. ಯುದ್ಧದಲ್ಲಿ ರಾಜರ ಜೊತೆ ಹಾಗೂ ಸೈನಿಕರು ಯುದ್ಧದಲ್ಲಿ ಲವಲವಿಕೆಯಾಗಿರಲೆಂದು ಸುಂದರವಾದ ಹುಡುಗಿಯರನ್ನು ಕರೆದುಕೊಂಡು ಹೋಗುತ್ತಿದ್ದುದು ಸಾಮಾನ್ಯವಾಗಿದ್ದಿತ್ತು. ಯುದ್ಧದ ಸಮಯದಲ್ಲಿ ಸಾಮಂತ ರಾಜರುಗಳು, ಪಾಳೆಗಾರರುಗಳು ಯುದ್ಧಕ್ಕಿಂತಲೂ ಪ್ರಮುಖವಾಗಿ ಆ ಸಮಯದಲ್ಲಿ ಯುದ್ಧರಂಗಕ್ಕೆ ಬರುವ ಸುಂದರಿಯರನ್ನು ಅನುಭವಿಸುವುದಕ್ಕಾಗಿಯೇ ಬರುತ್ತಿದ್ದರೆಂದು ಅನೇಕ ದೇಶೀ ಹಾಗೂ ವಿದೇಶೀ ಸಾಹಿತ್ಯದಿಂದ ತಿಳಿದುಬರುತ್ತದೆ. ಇಷ್ಟೇ ಅಲ್ಲದೆ ಮಹಿಳೆಯರೂ ಸಹ ಕತ್ತಿ ಹಿಡಿದು ಯುದ್ಧ ಮಾಡುತ್ತಿದ್ದರೆಂದು ಇಂದಿಗೂ ದೇವಾಲಯಗಳ ಮೇಲೆ ಚಿತ್ರಿತವಾಗಿರುವ ಚಿತ್ರಗಳಿಂದ ತಿಳಿಯಬಹುದು.

**ವ್ಯಾಪಾರಿಯಾಗಿ :** ವಿಜಯನಗರದ ಆಳ್ವಿಕೆಯಲ್ಲಿ ಮಹಿಳೆಯರು ಪ್ರಮುಖ ವ್ಯಾಪಾರಗಾರ್ತಿಯರಾಗಿದ್ದರು. ರಾಜಧಾನಿಯಲ್ಲಿ ಸೂಳೆ ಬಜಾರ್ ಎಂದು ಕರೆಸಿಕೊಳ್ಳುವ ವ್ಯಾಪಾರಿ ಕೇಂದ್ರದಲ್ಲಿ ಮಹಿಳೆಯರೇ ವ್ಯಾಪಾರದ ಕೇಂದ್ರಗಳಾಗಿದ್ದರು. ಸಂತೆ, ಜಾತ್ರೆಗಳಲ್ಲಿಯೂ

ಇವರೆ ಹೆಚ್ಚಾಗಿ ವ್ಯಾಪಾರದಲ್ಲಿ ತೊಡಗುತ್ತಿದ್ದರು. ತರಕಾರಿ, ಸಾಂಬರು ಪದಾರ್ಥಗಳು, ಹಣ್ಣು - ಹಂಪಲುಗಳು, ಚಿನ್ನ, ಬೆಳ್ಳಿ, ಬಟ್ಟೆ, ಹೆಣ್ಣಿನ ಶೃಂಗಾರದ ವಸ್ತುಗಳು ಮಹಿಳೆಯರಿಂದ ವ್ಯಾಪಾರವಾಗುತ್ತಿದ್ದ ವಸ್ತುಗಳಾಗಿದ್ದವು.

**ಕುಸ್ತಿ ಮಾಡುವವಳಾಗಿ :** ಮಹಾನವಮಿ ಹಬ್ಬವು ವಿಜಯನಗರದ ಅರಸರ ಕಾಲದಲ್ಲಿ ನಾಡಹಬ್ಬವಾಗಿ ಕಂಗೊಳಿಸಿತ್ತು. ಇದನ್ನು ದಸರಾ ಹಬ್ಬ ಎಂತಲೂ ಕರೆಯುತ್ತಾರೆ. ಇಂತಹ ಹಬ್ಬದ ದಿನ ರಾಜಧಾನಿಯಲ್ಲಿನ ಮಹಾನವಮಿ ದಿಬ್ಬದ ಮುಂದೆ ಮಹಿಳೆಯರಿಂದ ಕುಸ್ತಿಯ ಸ್ಪರ್ಧೆಯನ್ನು ಏರ್ಪಡಿಸಲಾಗುತ್ತಿತ್ತೆಂದು ಶಾಸನಗಳಲ್ಲಿ ಕಂಡುಬರುತ್ತದೆ. ಸ್ವತಃ ಮಹಾರಾಜರೇ ಈ ಸ್ಪರ್ಧೆಯನ್ನು ವೀಕ್ಷಿಸಿ ಗೆದ್ದವರಿಗೆ ಬಿರುದು ಬಾವಲಿಗಳನ್ನು ಕೊಡುವುದು ಸಾಮಾನ್ಯವಾಗಿದ್ದಿತ್ತು.

**ಕವಯತ್ರಿಯಾಗಿ :** ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಮಹಿಳೆಯರೂ ಸಹ ವಿದ್ಯಾವಂತರಾಗಿ ಅಂದು ಸಂಸ್ಕೃತಿ ಹಾಗೂ ಕನ್ನಡ, ತೆಲುಗು ಭಾಷೆಯಲ್ಲಿ ಪಾಂಡಿತ್ಯ ಇವಳು ಅಂದು ರಚಿಸಿದ "ಮಧುರ ವಿಜಯಂ" ಅಥವಾ "ವೀರ ಕಂಪಣ್ಣರಾಯ ಚರಿತ" ಎಂಬ ಸಂಸ್ಕೃತ ಗ್ರಂಥವು ವಿಜಯನಗರದ ಅಂದಿನ ಇತಿಹಾಸ ತಿಳಿಯಲು ಹೆಚ್ಚಿನ ಸಹಕಾರವಾಗಿದೆ ಎನ್ನಬಹುದು. ಅಸ್ಥಾನದ ಅನೇಕ ರಾಣಿಯರು ವಿದ್ಯಾವಂತರಾಗಿದ್ದರೆಂದು ವಿದೇಶೀ ಪ್ರವಾಸಿಗರು ತಿಳಿಸುತ್ತಾರೆ.

**ಸಾಮಾನ್ಯ ಮಹಿಳೆಯರ ಸ್ಥಿತಿ :** ಮೇಲೆ ಹೇಳಿದವುಗಳೆಲ್ಲ ರಾಜ ಪರಿವಾರದ ಸ್ತ್ರೀಯರ ಜೀವನವನ್ನು ಸೂಚಿಸುವುದಾದರೆ ಸಾಮಾನ್ಯ ಜನತೆಯ ಬದುಕು ಚಿಂತಾಜನಕವಾಗಿತ್ತು. ತಿನ್ನಲು ಅನ್ನವಿಲ್ಲದೆ, ಉಡಲು ಬಟ್ಟೆ ಇಲ್ಲದೆ ಭೂಮಿಯ ಮೇಲೆ ಹುಟ್ಟುವುದೇ ಪಾಪದ ಅಥವಾ ಕರ್ಮದ ಕಾಲವಾಗಿತ್ತೆನ್ನಬಹುದು (ಇದು ಸ್ವಲ್ಪ ಬದಲಾವಣೆಗಳೊಂದಿಗೆ ಇಂದಿಗೂ ಸಹನ ಇದೇ ಸ್ಥಿತಿ ಇದೆ) ಜೀವನಕ್ಕೆ ಆಧಾರವಾಗಿ ವ್ಯವಸಾಯವನ್ನೆ ನಂಬಿದ್ದರು. ಮಳೆ ಬಿದ್ದರೆ ಮಾತ್ರ ಬೆಳೆ, ಇಲ್ಲದಿದ್ದರೆ ಸಾವೇ ಗತಿಯಾಗಿತ್ತು. ಹೆಚ್ಚಿನ ಮಹಿಳೆಯರು (ಸುಮಾರು ೮೦) ಆರೋಗ್ಯಹೀನರಾಗಿದ್ದರು. ಅವರು ತಲೆಯ ಕೂದಲನ್ನು ಬಾಚಿಕೊಳ್ಳದೆ ತರಗೆಲೆಗಳಂತೆ ಬಿಟ್ಟುಕೊಳ್ಳುತ್ತಿದ್ದರು. ಮೈಗೆ ಪ್ರಾಣಿಗಳ ಚರ್ಮವನ್ನು ಸುತ್ತಿಕೊಳ್ಳುತ್ತಿದ್ದರು. ಗಂಡಸರು ಸೊಂಟಕ್ಕೆ ಮಾತ್ರ ಒಂದು ಚಿಕ್ಕ ಬಟ್ಟೆ ಅಥವಾ ಮರದ ತೊಗಟೆಗಳಿಂದ ಮುಚ್ಚಿಕೊಳ್ಳುತ್ತಿದ್ದರೆಂದು ಬಾರ್ಬೋಸ ಹೇಳಿದ್ದಾನೆ. ಜನ ಸಾಮಾನ್ಯರ ಸ್ಥಿತಿಗತಿ ಅಂದು ಶೋಚನೀಯ ಸ್ಥಿತಿಯಲ್ಲಿತ್ತು ಎಂದು ಪ್ರತ್ಯೇಕವಾಗಿ ಹೇಳುವುದು ಔಚಿತ್ಯವೆನಿಸುತ್ತದೆ. ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಹೆಚ್ಚಿನ ಪ್ರಮಾಣದಲ್ಲಿ ಮರಣ ಹೊಂದುತ್ತಿದ್ದರೆಂದು ಕಂಡುಬರುತ್ತದೆ.

ಬಹುಪತ್ನಿತ್ವ ಪದ್ಧತಿಯು ಹೆಚ್ಚಾಗಿತ್ತು. ಈ ಪದ್ಧತಿಯು ಕೇವಲ ರಾಜರಲ್ಲಿ ಅಥವಾ ಶ್ರೀಮಂತರುಗಳಲ್ಲಿ ಮಾತ್ರವಲ್ಲದೆ ಸಾಮಾನ್ಯ ಜನತೆಯಲ್ಲಿಯೂ ವಿರಳವಾಗಿ ಇದ್ದಿತೆಂದು ಕಂಡುಬರುತ್ತದೆ. ಪುರಂದರದಾಸರು ಇದನ್ನು ಕಂಡೇ ಏನೋ "ಇಬ್ಬರ್ಹೆಂಡಿರ ಸುಖವ ಇಂದು ಕಂಡೆನಯ್ಯ" ಎಂದು ಹಾಡಿರುವುದು. ಈ ಒಂದು ಸಾಲಿನಿಂದಲೇ ಇಬ್ಬರೆಂಡತಿಯರನ್ನು ಕಟ್ಟಿಕೊಂಡವರು ಸಂಸಾರದಲ್ಲಿ ಅನುಭವಿಸುತ್ತಿದ್ದ ನೋವಿನ ಸುಖವನ್ನು ಸುಂದರವಾಗಿ ಚಿತ್ರಿಸಿದೆ ಎನ್ನಬಹುದು. ಆದರೆ ಅದು ವಿರಸವಾಗಿ ಪರಿವರ್ತನೆಯಾಗುವ ಸನ್ನಿವೇಶಕ್ಕೆ ದಾಸರು "ಇವಳಿಂದ ಫಲವಿಲ್ಲ ಅವಳಿಂದ ಸುಖವಿಲ್ಲ. ಇವರಿಬ್ಬರ ಸಂಗವಭಿಮಾನ ಭಂಗ" ಎಂದು ವ್ಯಂಗ್ಯವಾಗಿ ಹಾಡಿರುವುದನ್ನಬಹುದು.

ವಿಜಯನಗರದಲ್ಲಿ ವಿಧವೆಯರನ್ನು ಹಾಗೂ ಬಂಜೆ (ಮಕ್ಕಳಾಗದವರನ್ನು) ಯಾರನ್ನು ತುಂಬ ಕೀಳಾಗಿ ನೋಡಿಕೊಳ್ಳಲಾಗುತ್ತಿತ್ತು. ಅಂದು ಅಸ್ಪೃಶ್ಯತೆಯು ಯಾವ ಪ್ರಮಾಣದಲ್ಲಿ ಬೇರು ಬಿಟ್ಟಿತೋ ಅಷ್ಟೇ ಪ್ರಮಾಣದಲ್ಲಿ ಈ ಮಹಿಳೆಯರನ್ನು ಶೋಷಣೆ ಮಾಡಲಾಗುತ್ತಿತ್ತು. ಗಂಡ ಸತ್ತಮೇಲೆ ವಿಧವೆಯು ಅಗ್ನಿಗೆ ಆಹುತಿಯಾಗದೆ ಅಥವಾ ಸಹಗಮನ ಮಾಡಿಕೊಳ್ಳದೆ ಬದುಕುವುದಿದ್ದರೆ ಅವಳು ಪ್ರಾಣಿಗಳಿಗಿಂತಲೂ (ನಾಯಿಗಿಂತಲೂ) ಹೀನಾಯವಾದ ಬದುಕನ್ನು ನಡೆಸಬೇಕಿತ್ತು. ಸಮಾಜದ ಯಾವುದೇ ಶುಭಕಾರ್ಯಗಳಲ್ಲಿ ಅಶುಭಕಾರ್ಯಗಳಲ್ಲಿ ಭಾಗವಹಿಸುವಂತಿರಲಿಲ್ಲ. ಒಂದು ರೀತಿಯಲ್ಲಿ ಗೃಹ ಬಂಧನದಲ್ಲಿರಬೇಕಾಗಿತ್ತು. ಆದರೆ ಗೃಹದಲ್ಲಿಯೂ ಅನೇಕ ಕಟ್ಟುನಿಟ್ಟುಗಳು ಇದ್ದವು. ಬೆಳಿಗ್ಗೆ ಎದ್ದ ತಕ್ಷಣ ಇವಳ ಮುಖ ನೋಡಿದರೆ, ಕೆಲಸಕ್ಕೆ ಹೊರಗಡೆ ಹೋಗುವಾಗ ಇವಳು ಎದುರಿಗೆ ಬಂದರೆ ಅಪಶಕುನವೆಂದು ನಂಬಿ ಇವಳನ್ನು ಜೀವಂತ ಶವವಾಗಿ ಪರಿವರ್ತನೆ ಮಾಡಲಾಗಿತ್ತು. ಇನ್ನೂ ಬಂಜೆಯ

ಬಾಳಂತೂ ಬರಗಾಲದ ಭೀಕರತೆಯನ್ನು ತೋರಿಸುತ್ತಿತ್ತೆನ್ನಬಹುದು. ಇಂತಹ ಸಮಯದಲ್ಲಿ ವಿಧವೆ ಹಾಗೂ ಬಂಜೆಯರು ಕುರಿತು ಜಾನಪದರು ಹೇಳಿರುವ ಮಾತೆಂದರೆ

*"ಬಂಜೆ ಬೇನೆಯರಿಯಳು ಮಲತಾಯಿ ಮದ್ದ ಬಲ್ಲಳೆ?" ಹೊಟ್ಟೇಲಿ*
*ಸುತರಿಲ್ಲೆಂದೊರಲ್ಲು ಹುಟ್ಟು ಬಂಜೆಗೆ ಫಲವಾದೀತೆ, "ಸಲೆ ಬಂಜೆ*
*ಯೊಬ ಸತಿ ನಿಜಪುರುಷ ಸಂಗದೊಳು ಫಲಕಾಲಮಿರ್ದೊಡೇನಿಲ್ಲದಿ*
*ರ್ದೊದಮೇನು ಫಲವಾದುದುಂಟೆ?" "ಪತ್ತೆ ಬಲೆಯ ಅವಂದದಿಂ*
*ಬಂಜೆ ಬೇನೆಯ ಅರಿವಳೆ" 'ದತ್ತು ಪುತ್ರನಿಗೇತಕ್ಕೆ ಪಿತೃಭಕ್ತಿ'*

ಎಂದು ಅಂದಿನ ಸಮಾಜದಲ್ಲಿ ಸೃಷ್ಟಿಸಿದ್ದ ನಾಡನುಡಿಗಳನ್ನು ಗಮನಿಸಬಹುದು. ಆದರೆ ಸೋಮೇಶ್ವರ ಕವಿಯು ಸ್ವಲ್ಪ ಮುಂದುವರಿಸು ಬರೆಯುತ್ತಾ ಒಳ್ಳೆಯ ಕುಲದಲ್ಲಿ ಹುಟ್ಟಿ ವಿವೇಕವುಳ್ಳವಳೂ, ಗುಣವತಿಯೂ ಆದ ಸ್ತ್ರೀಯು ಬಂಜೆಯಾಗಿದ್ದರೂ, ಆಕೆಯನು ಯಾರೂ ಬಂಜೆಯೆಂದು ನಿಂದಿಸುವುದಿಲ್ಲ. ವ್ರತಾಚರಣೆಗಳಿಗೆ ಹಾಗೂ ಎಲ್ಲಾ ಶುಭ ಕಾರ್ಯಗಳಿಗೂ ಸಹ ಅವಳು ಹಾಜರಿರುತ್ತಾಳೆ ಎಂದು ಹೇಳಿ ಬಂಜೆಯ ಬಗ್ಗೆ ಬೆಳೆದಿದ್ದು ಕೆಟ್ಟ ಅಭಿಪ್ರಾಯಕ್ಕೆ ಅನುಕಂಪ ಸೂಚಿಸುವ ಮಾತನಾಡಿದ್ದಾನೆ.

ಒಟ್ಟಾರೆ ಹೇಳುವುದಾದರೆ ವಿಜಯನಗರದರಸರ ಕಾಲದಲ್ಲಿ ಮಹಿಳೆಯರು ಎಷ್ಟೇ ಉನ್ನತ ಸ್ಥಾನಮಾನವನ್ನು ಪಡೆದಿದ್ದರೂ ಸಹ ಅವರು ಕೊನೆಯಲ್ಲಿ ಕೇವಲ ಒಂದು ಭೋಗದ ವಸ್ತುವಾಗಿಯೇ ಕಂಗೊಳಿಸುತ್ತಾರೆ. ರಾಜಧಾನಿಯಲ್ಲಿಯೇ ಆಗಲಿ, ಅಸ್ಥಾನದ ಉಪರಾಣಿಯರ ಜೀವನವೇ ಇರಲಿ, ಯುದ್ಧದಲ್ಲಿ ಹೋರಾಡುವ ಮಹಿಳೆಯ ಪಾತ್ರವಿರಲಿ ಅಥವಾ ವ್ಯಾಪಾರ ಕೈಗೊಂಡ ಮಹಿಳೆಯೇ ಅದರೂ ಸಹ ಪುರುಷನ ವಕ್ರ ದೃಷ್ಟಿಗೆ ಬಲಿಯಾಗುವುದು ಸಹಜವಾಗಿದ್ದಿತ್ತು.

**ತಾಯಿತನದ ಜೀವನ :** ಮಹಿಳೆಯರು ಬಸುರಿಯರಾಗಿದ್ದಾಗ ಬಯಕೆ, ಬೇನೆ, ಶಿಶು ಜನನ ಮುಂತಾದ ವಿಷಯಗಳ ಕುರಿತು ನಮ್ಮ ಸಾಹಿತಿಗಳು ಹಾಗೂ ಜನಪದರು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡುಬರುತ್ತದೆ. ಮಗು ಜನಿಸಿದಾಗ ತಾಯಿಗೆ ಆಗುವ ಆನಂದ ವರ್ಣಿಸಲು ಸಾಧ್ಯವೆನ್ನಬಹುದು. ಇದಕ್ಕಾಗಿಯೇ ಏನೋ ಸೋಮನಾಥ ಹೇಳಿರುವುದು ಉತ್ಸವಗಳಲೆಲ್ಲ ಪುತ್ರೋತ್ಸವವೇ ಶ್ರೇಷ್ಠ ಎಂದು ಈ ಮಾತು ಎಷ್ಟು ನಿಜವಾದದ್ದು ಎಂದರೆ ಇಂದಿಗೂ ಮಕ್ಕಳು ಜನಿಸಿದಾಗ ಮನೆಯಲ್ಲಿ ಆ ಉತ್ಸವದ ಆನಂದವನ್ನು ನೋಡುತ್ತೇವೆ. ಏನೋ ಆನಂದ, ಮುಖದಲ್ಲಿ ನಗೆಯ ಕಳೆ, ಏನೋ ಪಡೆದೆ ಎಂಬ ಭಾವನೆಯಲ್ಲಿ ತೇಲುವ ಹಾಗೆ ಮಾಡುತ್ತದೆ. ಮಗು ಜನಿಸಿದ ಮೇಲೆ ಅದು ಹೇಗೇ ಇರಲಿ ತಾಯಿಗೆ ಮುದ್ದಾದುದ್ದೆ. ಇದಕ್ಕಾಗಿಯೇ "ಹೆತ್ತವರಿಗೆ ಹೆಗ್ಗಣ ಕೂಡ ಮುದ್ದು" ಎಂಬ ಗಾದೆ ಹುಟ್ಟಿರುವುದು.

ವಿಜಯನಗರದ ಅರಸರ ಕಾಲದಲ್ಲಿ ರಾಜಧಾನಿ ಹಾಗೂ ಸಾಮ್ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ಇಂದು ಹೆರಿಗೆ ಅಸ್ಪತ್ರೆಗಳಿರುವ ಹಾಗೆ **ಸೂತಿಕಾಗೃಹ**ಗಳಿದ್ದವು (ಹೆರಿಗೆಯ ಮನೆಯನ್ನು ಸೂತಿಕಾಗೃಹವೆಂದೂ ಕರೆಯಲಾಗುತ್ತಿತ್ತು) ಹೆರಿಗೆ ಮಾಡಿಸುವವಳನ್ನು ಸೂಲಗಿತ್ತಿಯೆಂದೂ ಕರೆಯುವ ವಾಡಿಕೆಯಾಗಿತ್ತು. ಇಂದಿಗೂ ಸಹ ಈ ಪದಗಳ ಬಳಕೆ ಇರುವುದು ಕಂಡುಬರುತ್ತದೆ. ಆದರೆ ಇವಳ ಸೌಲಭ್ಯ ಪ್ರತಿಯೊಬ್ಬರಿಗೂ ಸಾಧ್ಯವಿರಲಿಲ್ಲ. ಸಾಮಾನ್ಯ ಜನರಿಗಂತೂ ಇವಳು ಕೇವಲ ಕನಸಿನ ಕನ್ಯೆಯಾಗಿದ್ದಳು ಎಂದು ಹೇಳಿದರೆ ತಪ್ಪಾಗದು. ಕೇವಲ ಶ್ರೀಮಂತರು, ರಾಜಪರಿವಾರದವರಿಗೆ ಮಾತ್ರ ಈ ಸೂಲಗಿತ್ತಿಯರ ಸೌಲಭ್ಯ ದೊರಕುತ್ತಿತ್ತು. ಇದಕ್ಕಾಗಿಯೇ "ಸದಗರದ ನಾರಿಯರು ಹಡೆಯುವಾಗ ಸೂಲಗಿತ್ತಿ" ಎಂಬ ದಾಸರ ಪದ ಅವರ ಬೇಡಿಕೆ ಹಾಗು ಜೀವನ ಮಟ್ಟವನ್ನು ಸೂಚಿಸುತ್ತದೆ. ಹಣವಂತರು ಹಾಗೂ ಉತ್ತಮ ಜಾತಿ ಎಂದು ತಾವೇ ಕರೆದುಕೊಂಡಿದ್ದ ಜನಾಂಗಕ್ಕೆ ಮಾತ್ರ ದೊರಕುತ್ತಿದ್ದ ಸೂಲಗಿತ್ತಿಯರು ರಾಜಧಾನಿಯಲ್ಲಿ ವಿಶೇಷ ಮಹತ್ವ ಪಡೆದಿದ್ದ ಮಹಿಳೆಯರಾಗಿದ್ದರು.

ಹಳ್ಳಿಯ ಬಡ ಕುಟುಂಬವೊಂದರ ಶಿಶು ಜನನದ ಚಿತ್ರವನ್ನು ವಿದೇಶೀ ಪ್ರವಾಸಿಗನು ನೀಡಿರುವ ಮಾಹಿತಿಯ ಆಧಾರದ ಮೇಲೆ ಗಮನಿಸುವುದಾದರೆ ಅದು ಇಂದಿಗೂ ನಗ್ನ ಚಿತ್ರವೆನ್ನಿಸುತ್ತದೆ. ಅವನ ಪ್ರಕಾರ ಆಗತಾನೆ ಜನ್ಮವಿತ್ತ ಆ ಮಗುವನ್ನು ನಗ್ನವಾಗಿಯೇ

ಒಂದು ಎಲೆಯ ಮೇಲೆ ಮಲಗಿಸಿದ್ದರು ಎಂಬುದಾಗಿ ಹೇಳಿರುವುದು ಕಂಡುಬರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಹಳ್ಳಿಗಳಲ್ಲಿ ಜನರ ಮುಖ್ಯ ಕಸುಬು ಕೃಷಿ. ವ್ಯವಸಾಯವೇ ಅವರ ಉಸಿರು, ಬದುಕು, ವ್ಯವಸಾಯಕ್ಕೆ ಉಪಯೋಗಿಸುವ ಉಪಕರಣಗಳು ಅವರಿಗೆ ದೇವಸಂಭೂತವಾದವು. ವರ್ಷವರ್ಷ ಬರುವ ಯುಗಾದಿ, ದೀಪಾವಳಿ, ಸಂಕ್ರಾತಿ, ಗೌರಿಹಬ್ಬಗಳೆಂದು ಇವುಗಳಿಗೆ ವಿಶೇಷ ಪೂಜೆ ಇದ್ದೆ ಇರುತ್ತದೆ. ಅದ್ದರಿಂದ ಮನೆಯಲ್ಲಿ ಹೆಂಗಸರು ಬಳಸುವುದು ಹೆಚ್ಚಾಗಿ ಮೊರ, ಭತ್ತ, ಜೋಳ, ಗೋಧಿಯನ್ನು ಬೆಳೆದಾದ ಮೇಲೆ ಅದನ್ನು ಹಸನುಮಾಡಲು ಕೊಂಗ ಎಂಬ ಒಂದು ಸಾಧನವನ್ನು ಬಳಸುತ್ತಾರೆ. (ಧಾನ್ಯವನ್ನು ತುಂಬಿಕೊಂಡು ಗಾಳಿಗೆ ಮೇಲಿನಿಂದ ಬಿಡಲು ಬಳಸುವ ಸಾಧನ) ಹಳ್ಳಿಯಲ್ಲಿ ಇಂದುಗೂ ಈ ಮೇಲಿನ ಮೊರ ಹಾಗೂ ಕೊಂಗಗಳಿಗೆ ಯಾವ ಯಾವ ಸ್ಥಾನ ನೀಡಿದ್ದಾರೆ ಎಂದರೆ ಹೆಣ್ಣು ಮಗು ಜನಿಸಿದರೆ ಮೊದಲು ಮೊರದಲ್ಲಿ ಹಾಕುವುದು (ಮೊರ ಕೇವಲ ಮನೆಯಲ್ಲಿಯೇ ಇರುವ ಸಾಧನ.) ಅದೇ ಗದ್ದೆಯಲ್ಲಿ ವ್ಯವಸಾಯ ಮಾಡಲು ಬಳಸುವ ಕೊಂಗ ಗಂಡಿನ ಸಂಕೇತ, ಅದ್ದರಿಂದ ಗಂಡು ಮಗು ಜನಿಸಿದರೆ ಕೊಂಗದೊಳಗೆ ಮೊದಲು ಮಲಗಿಸಿ ನಂತರ ಬೇರೆ ಕಡೆಗೆ ವರ್ಗಾಯಿಸಿಕೊಳ್ಳುವುದು ಇಂದಿಗೂ ಬೆಳೆದು ಬರುತ್ತಿರುವ ರೂಢಿ. ಇದು ಇಂದಿನದಲ್ಲ ಇದಕ್ಕೆ ಶತಶತಮಾನದಷ್ಟು ಹಿರಿದಾದ ಇತಿಹಾಸವಿರುತ್ತದೆ ಎನ್ನಬಹುದು. ಕನಕದಾಸರು ಅರಮನೆಯಲ್ಲಿಯೂ ಪುತ್ರೋತ್ಸವವಾದ ವಿಚಾರವನ್ನು ವರ್ಣಿಸುವ ಸಂದರ್ಬದಲ್ಲಿ ಮಗುವನ್ನು ಮೊರದಲ್ಲಿ ಮಲಗಿಸಿ ಪೂಜೆ ವಿಧಿ ವಿಧಾನವನ್ನು ಆಚರಿಸಿದ ವಿಚಾರವನ್ನು ಹೇಳಿರುವುದು ಕಂಡುಬರುತ್ತದೆ.

ಮಗು ಜನಿಸಿದ ಮೇಲೆ ಒಂದು ರೀತಿಯ ಸಂಭ್ರಮವಾದರೆ ಮಗುವಿಗೆ ನಾಮಕರಣ, ಇದರ ಸಂಬಂಧವಾಗಿ ಧಾನ, ಹವನ, ಹೋಮಗಳನ್ನು ಕೈಗೊಳ್ಳುವುದು ಹಾಗೆಯೇ ಹನ್ನೊಂದನೆಯ ದಿನ ಮಗುವನ್ನು ತೊಟ್ಟಿಲಲ್ಲಿ ಹಾಕುವುದು (ತೊಟ್ಟಿಲು ಶಾಸ್ತ್ರ) ಮುಂತಾದ ಸಂಪ್ರದಾಯಗಳು ತುಂಬ ವಿಜ್ರಂಭಣೆಯಿಂದ ನಡೆದುಕೊಂಡು ಅಂದಿನಿಂದ ಇಂದಿನವರೆಗೂ ಬರುತ್ತಿವೆ ಎನ್ನಬಹುದು. ಕನಕಾಸರ 'ಮೋಹನತರಂಗಿಣಿ'ಯು ಈ ವಯಭವದ ವರ್ಣನೆಯನ್ನು ವರ್ಣಿಸುವ ಕೈಗನ್ನಡಿ ಎಂದು ಇತಿಹಾಸಹಾರರು ಹೇಳಿರುವುದು ಇಲ್ಲಿ ಸತ್ಯವೆನ್ನಿಸುತ್ತದೆ. ಏಕೆಂದರೆ ಇಲ್ಲಿ ಅಂದಿನ ಕಾಲದಲ್ಲಿನ ಜನನ ಸಂದರ್ಭದಲ್ಲಿ ತೊಟ್ಟಿಲಿಕ್ಕುವ ಒಂದು ಸುಂದರ ಚಿತ್ರವನ್ನು ಈ ರೀತಿ ನೀಡುತ್ತಾರೆ "ಸಿರಿ ಮುಡಿಯ ಮುತ್ತೈದೆವೆಂಗಳು ಹಿಡಿಯಕ್ಕು ತಳೆದು ಮುತ್ತಿನಾರತಿ ಎತ್ತಿ, ತೊಟ್ಟಿಲನು ಪೂಜಿಸಿ ತರಳನತುಂಬಿ, ಸದ್ವಿಧಿಯಿಂದ ಮಂದಿರದ ಮೇಲೆ ಹಲಗೆಯ ಕೊಂಡಿಗೆ ಸರಪಳಿಯನ್ನು ತೊಡಚಿ ಹೆಸರನಿಕ್ಕಿ ಜೋಗುಳ ಹಾಡಿ ಕಂದನನ್ನು ತೂಗಿದರು" ಎಂದು ವರ್ಣಿಸಿ ಮಗುವಿನ ಹಣೆಗೆ ಕಪ್ಪಿನ ಬೊಟ್ಟನ್ನು ಬಾಣಂತಿಯ ಕಣ್ಣಿಗೆ ಕಾಡಿಗೆಯನ್ನು ಹಚ್ಚಿದರು ಎಂದು ವರ್ಣಿಸಿದ್ದಾರೆ. ಇದೇ ಪದ್ಧತಿಯು ಚಾಚೂ ತಪ್ಪದೇ ಇಂದಿಗೂ ನಡೆದುಕೊಂಡು ಬರುತ್ತಿದೆ. ಇನ್ನೂ ದಾಸರಲ್ಲೆಲ್ಲ ಶ್ರೇಷ್ಟ ದಾಸರೆನ್ನಿಸಿಕೊಂಡಿರುವ ಕರ್ನಾಟಕದ ಸಂಗೀತ ಪಿತಾಮಹ ಪುರಂದರದಾಸರು ಅಂದು ಬಾಣಂತಿಯರ ವೇಷಭೂಷಣಗಳು, ನೋವು ನಲಿವುಗಳನ್ನು ಕುರಿತು ಕೊಡುವ ಸುಂದರ ಚಿತ್ರ ಇಂದಿಗೂ ಎಲ್ಲ ಮನೆಗಳಲ್ಲಿಯೂ ಸಾಮಾನ್ಯವಾಗಿ ಕಾಣುವ ಬಾಣಂತಿಯರ ವಾಸ್ತವ ಚಿತ್ರಣವೆನ್ನಬಹುದ. "ಹಿಂಗದ ಮೊಲೆ ಹಾಲಿನ ಬವಣೆ, ಖಾರಕಷಾಯಗಳೆ ಒಪ್ಪೊತ್ತಿನ ಆಹಾರ, ಚಂದದ ಒಡವೆ ವಸ್ತುಗಳಿಲ್ಲ, ಮೈಯೆಲ್ಲ ಬಡವಾಗಿದೆ. ಕಟ್ಟದ ಮುಂಡೆ, ಬಾಚದ ಕೂದಲು, ಪಣೆಯೊಳಿಟ್ಟು ಸಾಧು, ತೊಟ್ಟ ಕುಪ್ಪಸವೆಲ್ಲ ಗುಷ್ಟ ಎಣ್ಣೆ ಮಂಕು ಮುಟ್ಟಬೇಡ ಎನ್ನ ಸಿರಿ ಪುರಂದರ" ಎಂದು ವಾಸ್ತವತೆಯನ್ನು ಎಳೆಎಳೆಯಾಗಿ ತೆಗೆದಿಟ್ಟಿದ್ದಾರೆ.

ಮಗು ಗಂಡಾಗಲಿ, ಹೆಣ್ಣಾಗಲಿ ಅದಕ್ಕೆ ವಿವಿಧ ರೀತಿಯ ಹೂವು ಹಾಗೂ ಅಲಂಕಾರಿಕ ದ್ರವ್ಯಗಳಿಂದ ಅಲಂಕರಿಸುವುದೇ ಒಂದು ಸಂಭ್ರಮ ತಲೆಬಾಚಿ ಹೂಮುಡಿಸುವುದು. ಹಣೆಗೆ ಹಾಗೂ ಕೆನ್ನೆಗೆ ತಿಲಕವನ್ನಿಡುವುದು ವಾಡಿಕೆ. ಮಕ್ಕಳಿಗೆ ಅಭರಣಗಳನ್ನು ಹಾಕದಿದ್ದರೆ ತಾಯಿಗೆಲ್ಲಿ ಸಮಾಧಾನವಾಗುತ್ತದೆ. ಇದು ಇಂದಿಗೂ ವಾಸ್ತವ ಇದು ಅಂದು, ಇಂದು ಮುಂದೆಯೂ ಇರುವುದೇ ಆದರೆ ಅಂದು ಈ ಮೇಲೆ ವಿವರಿಸಿದ ಆಚಾರ ವಿಚಾರಗಳು ಎಲ್ಲಾ ವರ್ಗದವರ, ಎಲ್ಲಾ ಜನರ ಆಚರಣೆಯಾಗಿತ್ತೆಂಬುದನ್ನು ಒಪ್ಪುವುದು ಕಷ್ಟಕರವಾಗುತ್ತದೆ. ಏಕೆಂದರೆ ಇಂದು ಸ್ವಾತಂತ್ರ್ಯ ಭಾರತವೆಂದು ಎಲ್ಲರೂ ಒಂದೇ ಒಂದು ಸಂವಿಧಾನದ ಚೌಕಟ್ಟಿನೊಳಗೆ ಕೆಲಸ ನಿರ್ವಹಿಸುತ್ತಿದ್ದರೂ ಸಹ ಅನ್ಯಾಯ ಅಸಮಾನತೆಯಿಂದ ಕೂಡಿದ ಇಂದಿನ ಭಾರತದಲ್ಲಿ ಕೆಲವೇ ಕೆಲವು ಜನ ಸಂಪತ್ತು ಸಮೃದ್ದಿಯಲ್ಲಿ ಹೊರಳಾಡುತ್ತಿರುವಾಗ ಬಹುಸಂಖ್ಯಾತ ಜನಕೋಟಿ ತಿನ್ನಲು ಒಪ್ಪೊತ್ತಿನ ಕೂಳಿಗೂ ದಿಲ್ಲಿಲ್ಲದೆ ನಳ್ಗಳುತ್ತಿದ್ದಾರೆ. ಇಂಥ ಸ್ಥಿತಿಯಲ್ಲಿ ಇಂದಿನ ಭಾರತವೇ ಇರಬೇಕಾದರೆ ಇನ್ನೂ ನಮ್ಮ ಚರಿತ್ರೆಯ ಪುಟಗಳಲ್ಲಿ ಇವರ ಛಾಯೆ ಹೇಗಿರಬೇಕು. ಮಧ್ಯಕಾಲೀನ ಚರಿತ್ರೆಯ

ಸಂಸ್ಕೃತಿಯನ್ನು ಅಧ್ಯಯನ ಮಾಡತೊಡಗಿದಾಗ ಇವರ ಸ್ಥಿತಿಗತಿಯನ್ನು ಅರಿತಾಗ ನಮ್ಮ ನಾಳಿನ ಸಂಸ್ಥಾನಗಳನ್ನು ಒಂದು ಸಾಮ್ರಾಜ್ಯವೆಂದು ಕರೆಯಲಾಗುತ್ತದೆಯೇ?

ಸ್ವಾತಂತ್ರ್ಯದ ಐವತ್ತು ವರ್ಷಗಳ ನಂತರವೂ ಕೋಟ್ಯಾಂತರ ಜನರು ಬಡತನ, ಅನಕ್ಷರತೆ, ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಕೋಟಿಕೋಟಿ ಜನರು ಕನಿಷ್ಠ ಸಾಮಾಜಿಕ ಸೇವಾಸೌಲಭ್ಯಗಳಿಂದಲೂ ವಂಚಿತರಾಗಿದ್ದಾರೆ. ೧೯೯೩ - ೯೪ರಲ್ಲಿನ ಸ್ವತಃ ಸರ್ಕಾರದ ಲೆಕ್ಕಾಚಾರದ ಪ್ರಕಾರವೇ ಮೂವತ್ತೆರಡು ಕೋಟಿಗಿಂತಲೂ ಹೆಚ್ಚಿನ ಭಾರತೀಯರು ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಆದರೆ ಸರ್ಕಾರದಿಂದ ನಿರ್ಧರಿಸಲ್ಪಟ್ಟಿರುವ ಈ ಬಡತನದ ರೇಖೆಯು ಗಮನಾರ್ಹವಾದದ್ದೇ. ಯಾಕೆಂದರೆ ಈ ಬಡತನದ ರೇಖೆಯ ತುಸು ಮೇಲೆ ಬದುಕುತ್ತಿರುವವರೂ ಅಂಥ ಹೇಳಿಕೊಳ್ಳುವ ಘನತೆ ಗೌರವದ ಬಾಳ್ವೆಯೇನೂ ನಡೆಸುತ್ತಿಲ್ಲವೆಂದು ಹೇಳಬಹುದು.

## ೩. ಸಾಮಾಜಿಕ ಸ್ಥಿತಿಗತಿಗಳು (೫)

**೩.೮. ದಸರಾ, ಹಬ್ಬಗಳು, ಜಾತ್ರಗಳು, ಸಂತೆಗಳು ಹಾಗೂ ರಥೋತ್ಸವ**

ವಿಜಯನಗರದ ಅರಸರ ಕಾಲದಲ್ಲಿ ದಸರಾ ಮಹೋತ್ಸವದ ಬಗ್ಗೆ, ಹಬ್ಬ ಹರಿದಿನಗಳು, ಜಾತ್ರೆ, ಸಂತೆ, ತೀರ್ಥಯಾತ್ರೆಗಳಿಗೆ ಸಂಬಂಧಿಸಿದಂತೆ ಅನೇಕ ಆಧಾರಗಳು ಸಿಗುತ್ತವೆ. ಈ ವೈಭವವನ್ನು ಅರಿಯಲು ನಮಗೆ ವಿದೇಶಿಯರ ಬರವಣಿಗೆಗಳು ಅತ್ಯಂತ ಹೆಚ್ಚಿನ ರೀತಿಯ ಪ್ರಯೋಜನವಾಗುತ್ತದೆ. ಅಂದಿನ ರಾಜಸಭೆಗಳ ವೈಭವ, ಘನತೆ, ಗಾಂಭೀರ್ಯ, ಶಿಷ್ಟಾಚಾರ, ಸಭ್ಯತೆ ಮುಂತಾದವುಗಳನ್ನು ಕುರಿತ ವಿಸ್ತಾರವಾದ ವರ್ಣನೆಗಳು ಇವುಗಳಿಂದ ತಿಳಿದು ಬರುತ್ತದೆ. ಕರ್ನಾಟಕದ ಇತಿಹಾಸದಲ್ಲಿಯೇ ವಿಜಯನಗರದ ಅರಸರ ವೈಭವವಂತೂ ಮನೆಮಾತಾಗಿದೆ.

**ನವರಾತ್ರಿ ಹಬ್ಬ (ದಸರಾ ಮಹೋತ್ಸವ):** ದಸರಾ ಅಥವಾ ನವರಾತ್ರಿ ಹಬ್ಬವು ಹಿಂದೂ ಧರ್ಮದ ರೀತಿನೀತಿಗಳಲ್ಲಿ ಆಚರಿಸಲ್ಪಡುತ್ತಿತ್ತೆಂದು ಕಂಡುಬರುತ್ತದೆ. ಸಾಮಾನ್ಯವಾಗಿ ಇದು ಅಕ್ಟೋಬರ್ ತಿಂಗಳಿನಲ್ಲಿ ನಡೆಯುತ್ತಿತ್ತು. ಕೆಲವು ಸಮಯದಲ್ಲಿ ಸೆಪ್ಟಂಬರ್ ತಿಂಗಳಿನ ಕೊನೆಗೆ ಬಂದು ಬಿಡುತ್ತಿದ್ದೂ ಉಂಟು. ನವರಾತ್ರಿಯ ಹಬ್ಬದಂದು ವಿಜಯನಗರದಲ್ಲಿ ನಡೆಯುತ್ತಿದ್ದ ಉತ್ಸವ ಕಾರ್ಯಕ್ರಮಗಳನ್ನು ಈ ರೀತಿ ವಿವರಿಸಬಹುದು. ವಿದೇಶಿಯರಾದ ಅಬ್ದುಲ್ ರಜಾಕ್, ಪಾಯೇಸ್, ನ್ಯೂನಿಜ್ ರವರುಗಳು ಕಣ್ಣಾರೆ ನೋಡಿ ಕೊಡುವ ವಿಸ್ತಾರವಾದ ಮಹಾನವಮಿಯ ವರ್ಣನೆ ಸುಳ್ಳು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಆದರೆ ವೈಭವವನ್ನು ದೇಶೀಯ ಸಾಹಿತಿಗಳೂ ಸಹ ಮುಕ್ತಕಂಠದಿಂದ ಹೊಗಳಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದಲೇ ಅಂದಿನ ಕಾಲವನ್ನು 'ವಿಜಯನಗರ ಯುಗವು ಉತ್ಸವ ಸಮಾರಂಭಗಳ ಯುಗ" ಎಂದು ಕರೆದಿರುವುದು ಔಚಿತ್ಯಪೂರ್ಣವೆನ್ನಿಸಿದೆ.

ವಿಜಯನಗರದಲ್ಲಿ ನವರಾತ್ರಿ ಹಬ್ಬದ ಸಮಯದಲ್ಲಿ ಮೊದಲಿಗ ರಾಜರು ವೈಭವದಿಂದ ರಾಜಸಭೆಗಳನ್ನು ನಡೆಸುತ್ತಿದ್ದರು. ಇದನ್ನು ನೋಡಿರುವ ವಿದೇಶಿಯರುಗಳು ಮುಕ್ತ ಕಂಠದಿಂದ ಹೊಗಳಿರುವುದು ಕಂಡುಬರುತ್ತದೆ. ಅ ವೈಭವವನ್ನು ನೋಡಿ ಒಬ್ಬೊಬ್ಬರು "ನನ್ನ ಕಿವಿಗಳು ಕೇಳಿಲ್ಲ ಕಣ್ಣುಗಳು ನೋಡಿಲ್ಲಃ ಎಂದು ಬಣ್ಣಿಸಿದರೆ ಮತ್ತೊಬ್ಬ "ಜಗತ್ತಿನಲ್ಲಿ ಇದಕ್ಕೆ ಸರಿಸಮಾನಾದ ಸುಂದರ ಪಟ್ಟಣ ಬೇರೊಂದಿಲ್ಲ ಎಂದು ಹೇಳಿ" ನಮ್ಮ ಆನಂದ ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

ರಾಜಧಾನಿಯಲ್ಲಿ ವೈಭವದಿಂದ ನಡೆಯುತ್ತಿದ್ದ ನವರಾತ್ರಿ ಹಬ್ಬದ ಉತ್ಸವದ ಕೇಂದ್ರಬಿಂದು ದಿಬ್ಬ, ವಿಜಯನಗರದ ಅರಸರು ಈ ಹಬ್ಬವನ್ನು ರಾಷ್ಟ್ರೀಯ ಉತ್ಸವವಾಗಿ ಆಚರಿಸುತ್ತಿದ್ದರು. ಈ ಹಬ್ಬದ ಆಚರಣೆಯು ಒಟ್ಟು ಹತ್ತು ದಿನಗಳ ಕಾಲ ನಡೆಯುತ್ತಿತ್ತು. ಹಬ್ಬದ ಪ್ರಯುಕ್ತ ಅನೇಕ ಸಮಾರಂಭಗಳನ್ನು ಏರ್ಪಡಿಸಲಾಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ ಕ್ರೀಡೆಗಳು ಮತ್ತು ಮನೋರಂಜನೆ. ಕುಸ್ತಿ ಅಂದಿನ ಜನಪ್ರಿಯ ಕ್ರೀಡೆಯಾಗಿದ್ದಿತ್ತು. ಮಹಿಳೆಯರ ಕುಸ್ತಿಯ ಅತ್ಯಂತ ಜನಪ್ರಿಯವಾಗಿದ್ದಿತ್ತು. ಕತ್ತಿವರಸೆ, ದೊಣ್ಣೆವರಸೆ, ಲಗಾರಿ ಕುಣಿತ, ಡೋಲು ಕುಣಿತ, ಭರತನಾಟ್ಯ, ಸಂಗೀತ, ಮುಂತಾದ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು

ಜರುಗುತ್ತಿದ್ದವು. ವರ್ಷವೆಲ್ಲ ತಯಾರಾಗಿದ್ದ ಅಭಿಲಾಷಿಗಳು ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಲು ನವರಾತ್ರಿ ಹಬ್ಬವನ್ನು ಎದುರುನೋಡುತ್ತಿದ್ದರು. ಮಹಾನವಮಿ ದಿಬ್ಬವನ್ನು ಕೃಷ್ಣದೇವರಾಯನು ಒರಿಸ್ಸಾದ ಮೇಲೆ ವಿಜಯ ಸಂಪಾದಿಸಿದ ನೆನಪಿಗಾಗಿ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈ ದಿಬ್ಬದ ಮೇಲೆ ಒಂದು ಭವ್ಯವಾದ ಮೇಲಂತಸ್ತಿನ ಕಟ್ಟಡ ಇದ್ದಿರಬಹುದೆಂದು ಕಂಡುಬರುತ್ತದೆ. ಆದರೆ ಈಗ ಅದು ಸಂಪೂರ್ಣವಾಗಿ ನಾಶವಾಗಿದೆ. ಈ ದಿಬ್ಬದ ತಳಪಾಯದ ಗೋಡೆಗಳ ಮೇಲೆ ಬೇಟೆ, ನೃತ್ಯ ಕೋಲಾಟ ಮತ್ತು ನಿತ್ಯ ಜೀವನದ ಅಮೂಲ್ಯ ದೃಶ್ಯಗಳು ಮನಮೋಹಕವಾಗಿ ಕಂಗೊಳಿಸುತ್ತಿವೆ. ಈ ದಿಬ್ಬದ ಮೇಲೆಯೇ ನಡೆಯುತ್ತಿದ್ದ ಮಹಾನವಮಿ ಹಬ್ಬವು ಕೇವಲ ಹಿಂದೂ ಧರ್ಮದವರ ಹಬ್ಬ ಮಾತ್ರವಾಗಿದ್ದರೂ ಸಹ ಅದಕ್ಕೆ ರಾಜಕೀಯದ ಕಳೆ ಬಂದಿತ್ತು. ನಮ್ಮ ಭುಮಿ, ನಮ್ಮ ಭಾಷೆ ನಮ್ಮ ನದಿ, ನಮ್ಮ ಸಂಪತ್ತು ಎನ್ನುವ ಮನೋಭಾವನೆಯು ಈ ಹಬ್ಬಗಳಲ್ಲಿ ಕಂಡುಬರುತ್ತಿತ್ತೆನ್ನಬಹುದು. ಈ ಹಬ್ಬದ ವೈಭವದ ಬಗ್ಗೆ ಕವಿಯು ಕೊಡುವ ಒಂದು ಚಿತ್ರವನ್ನು ನೀಡುವುದಾದರೆ ಈ ನರಲೋಕಕಚ್ಚರಿಯೆನ್ನುವಂತೆ ಮಂತ್ರಿಯು ಮಹಾನವಮಿ ಉತ್ಸವವನ್ನು ನಡೆಸಿದನು. ರಾತ್ರಿಯಲ್ಲಿ ನಡೆದ ಆ ರಾಜಸಭೆಯ ವೈಭವವನ್ನು ಹೇಗೆ ವರ್ಣಿಸಲಿ ಎಂದು ತಾನೇ ಅಚ್ಚರಿಪಡುತ್ತಾನೆ. ದೊರೆ ಧರಿಸಿದ್ದ ರತ್ನದ ಕಿರೀಟ ಕಾರಿರುಳನ್ನು ಹಗಲು ಮಾಡುವಂತಿತ್ತು. ರಾಜಾಧಿರಾಜರು, ಸಚಿವರು, ಕವಿಗಮಕಿಗಳೂ ವರನಾರಿಯರು ರಾಜೇಂದ್ರನ ಸುತ್ತ ನೆರೆದಿದ್ದರು. ಮುಂದೆ ದೃಷ್ಟಿ ಹರಿಯುವವರೆವಿಗೂ ರಾಜಪರಿವಾದವರು ನಿಂತಿರುತ್ತಿದ್ದರು. ವೇಶ್ಯೆಯರಿಗೆ ವಿಶೇಷವಾದ ಆಹ್ವಾನವಿದ್ದಿತ್ತು. ಈ ಸುಂದರ ನಗರದ ಹನ್ನೆರಡುಗಾವುದ ವಿಸ್ತಾರವೂ ಪಂಜಿನ ಬೆಳಕು ಥಾಳಿಸಿತ್ತು. ಮುಂದೆ ಅನೇಕ ವಿಧವಾದ ದೈಹಿಕ ಕಲಾಪ್ರದರ್ಶನಗಳಾದವು ಸಿಂಗರಿಸಿಕೊಂಡಿದ್ದ ಸುಂದರಿಯರು ಬಂದು ರಾಜನಿಗೆ ರತ್ನದಾರತಿಯೆನ್ನತ್ತಿದ್ದರು. ಆನೆ ಕುದುರೆಗಳಿಂದ ಪ್ರದರ್ಶನಗಳಾದವು. ಕರಿಗಳೆಲ್ಲವೂ (ಆನೆಗಳೆಲ್ಲವೂ) ತಮ್ಮ ಸೊಂಡಿಲನೆತ್ತಿ ಶ್ರೀಕಂಠದಿಂದ ಸೇಸೆಯ ಸೋಸಿ ಸ್ವರದೋರಿ ಬಲಗಾಲದಂತಹ ಮೇಲಿಟ್ಟು ಶಿರಬಾಗಿದವು. ಚಕ್ರವರ್ತಿಗೆ ಮುಂದೆ ಉರಿಚೇಗಳು ಬಾಣ ಪರಿಪರಿಯ ಪುಷ್ಪ ಬಾಣಗಳ ಪ್ರದರ್ಶನಗಾಳಗುತ್ತಿದ್ದವು. ಆ ಒಂಬತ್ತು ದಿನಗಳಲ್ಲಿ ದಿನವೂ ಒಂದೊಂದು ವೈವಿಧ್ಯವಿರುತ್ತಿತ್ತು. ಹೀಗೆ ಶಾಂತಿಯಿಂದ ದಾನಗಳಿಂದ, ತ್ಯಾಗ ಭೋಗಾಂತರಾಳದ ಲೀಲೆಯಿಂದ ಮಂತ್ರಿಯು ಹೇಳಿದಂತೆ ರಾಜನು ಉತ್ಸವವನ್ನು ನಡೆಸಿದನೆಂದೂ ವಿವರವಾಗಿ ವಿವರಿಸಿರುವುದು ಕಂಡು ಬರುತ್ತದೆ. ಇದರಿಂದ ವಿಜಯನಗರದ ಕಾಲದ ದಸರಾ ಹಬ್ಬದ ಸಂಪೂರ್ಣ ಚಿತ್ರಣ ದೊರಕಿ ಅಂದಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದೆ.

**ಜಾತ್ರೆ ಮತ್ತು ರಥೋತ್ಸವ :** ವಿಜಯನಗರದ ಅಸರ ಕಾಲದಲ್ಲಿ ಜಾತ್ರೆಗಳು ಶ್ರೀಮಂತರ, ಮಧ್ಯಮ ವರ್ಗದವರ ಅದಕ್ಕಿಂತಲೂ ಸಮಾಜದಿಂದ ಕಡೆಗಣಿಸಲ್ಪಟ್ಟ ಹಿಂದುಳಿದ ವರ್ಗದವರಿಗೆ ಅವರವರ ಅಂತಸ್ತಿಗೆ ತಕ್ಕಂತೆ ಅವರದೆ ಆದ ರೂಪದಲ್ಲಿ ಪ್ರಯೋಜನವಾಗುತ್ತಿತ್ತು. ಜಾತ್ರೆ ಎಂದರೆ ಯಾವುದಾದರೂ ದೇವತೆಯ ರಥೋತ್ಸವ ಮತ್ತಿತರ ಸಾಮಾಜಿಕ, ಸಾಂಸ್ಕೃತಿಕ ವ್ಯಾಪಾರ ನಡೆಯುವ ಸ್ಥಳ ಎಂದು ಹೇಳಬಹುದು. ಅಥವಾ ದೇವತೆಯ ಉತ್ಸವದಲ್ಲಿ ಸೇರುವ ಜನರ ಗುಂಪು (The multitude of people gathering for the above purpose; the crowds at such a festival) ಎಂದು ಒಂದೇ ವಾಕ್ಯದಲ್ಲಿ ಹೇಳಬಹುದು. ಪ್ರಾಚೀನ ಕಾಲದಿಂದಲೂ ಜನರು ನಂಬಿಕೊಂಡು ಬಂದಿದ್ದ ದೇವ ದೇವತೆಗಳನ್ನು ಭಯ ಭಕ್ತಿಯಿಂದ ಸಾಮೂಹಿಕವಾಗಿ ಪೂಜಿಸಿ ಪ್ರಾರ್ಥಿಸುವ, ಸಂಭ್ರಮದ ಒಂದು ಜನಸಮೂಹವೇ ಜಾತ್ರೆ ಎಂದು ಕರೆಸಿಕೊಳ್ಳುತ್ತದೆ. ಒಂದು ಸಮಾಜದೊಂದಿಗೆ ಶತಮಾನಗಳಿಂದಲೂ ಒಂದಾಗಿ ಬದುಕು ಸಾಗಿಸುತ್ತಾ ಬಂದಿರುವ ಮಾನವನು ತನ್ನ ವೈಯಕ್ತಿಕ ಮತ್ತು ಲೌಕಿಕ ಜೀವನದ ಹಿತರಕ್ಷಣೆಗಾಗಿಯೂ ಹಾಗೂ ತನ್ನ ಜೀವನಕ್ಕೆ ಆಧಾರವಾಗಿ ಅವಲಂಭಿಸಿರುವ (ಕೃಷಿಗೆ ಸಂಬಂಧಿಸಿದ ಹಾಗೂ ತನ್ನ ಬದುಕಿಗೆ) ಮೂಕಪ್ರಾಣಿಗಳ ಸುಖಕ್ಕಾಗಿಯೂ ಯಾವುದೇ ರೀತಿಯ ರೋಗರುಜಿನಗಳು ಬಾರದಂತೆ, ಮಳೆ ಬೆಳೆ ಸರಿಯಾಗಿ ಕಾಲಕಾಲಕ್ಕೆ ಬಂದು ಬರಗಾಲದ ಬವಣೆಯನ್ನು ನೀಗಿಸಿಕೊಳ್ಳಲೆಂದು ಪ್ರಾರ್ಥಿಸುವ ಉದ್ದೇಶವು ಈ ಜಾತ್ರೆಗಳದಾಗಿತ್ತೆನ್ನಬಹುದು. ಮೇಲಿನವುಗಳನ್ನು ದಯಪಾಲಿಸಿದರೆ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಲು ಒಂದೆಡೆ ಸೇರುವ ಹಾಗೂ ತಾವು ಇವುಗಳು ಕಾರ್ಯಗತವಾದರೆ ದೇವರಿಗೆ ಹರಕೆ ಹೊತ್ತುದನ್ನು ಕಾರ್ಯರೂಪದಲ್ಲಿ ತರುವ ಆಚರಣೆಯೇ ಅಥವಾ ಸನ್ನಿವೇಶವೇ ಜಾತ್ರೆಯಾಗಿ ವಿಜೃಂಭಿಸುತ್ತದೆ.

ವಿಜಯನಗರದ ಅರಸರ ಆಳ್ವಿಕೆಯ ಕಾಲದಲ್ಲಿ ಸಾಮ್ರಾಜ್ಯದಾದ್ಯಂತ ದೊಡ್ಡ ಹಾಗೂ ಚಿಕ್ಕ ಗಾತ್ರದ ನೂರಾರು ಜಾತ್ರೆಗಳು ನಡೆಯುತ್ತಿದ್ದವೆಂದು ಕಂಡುಬರುತ್ತದೆ. ಇದಕ್ಕೆ ವಿಪುಲವಾಗಿ ಶಾಸನಗಳು, ಸಮಾರಕಗಳು, ಸಾಹಿತ್ಯಾಧಾರಗಳು ಹಾಗೂ ಜಾನಪದ ಸಾಹಿತ್ಯ ಆಕಾರಗಳು ಪ್ರಮುಖವಾದ ಮಾಹಿತಿ ತಿಳಿಸುತ್ತವೆ. ಕವಿಗಳು, ಸಂತರು, ದಾಸರು, ವಿದೇಶಿ ಪ್ರವಾಸಿಗರು ಕಣ್ಣಾರೆ ಕಂಡಿದ್ದನ್ನು ತಮ್ಮ ತಮ್ಮ ಬರವಣಿಗೆಯಲ್ಲಿ ಬರೆದಿಟ್ಟಿದ್ದಾರೆ. ವಿಜಯನಗರದ ಕಾಲದ ಜಾತ್ರೆಗಳು ತಮ್ಮದೇ ಆದ ಪ್ರಾದೇಶಿಕ ವೈಶಿಷ್ಟ್ಯಗಳಿಂದ ಕೂಡಿದ್ದವೆನ್ನಬಹುದು.

ಯಾವುದೇ ಜಾತ್ರೆಯು ಅಂದು ನಡೆಯಬೇಕಾದರೆ (ಈ ಸಂಪ್ರದಾಯವು ಇಂದಿಗೂ ಸಹ ಚಾಚೂತಪ್ಪದೆ ಪ್ರದೇಶದಿಂದ ಬೇರೆ ಬೇರೆ ರೂಪಗಳಲ್ಲಿ ನಡೆದುಕೊಂಡು ಬರಿತ್ತಿದೆ) ಮೊದಲು ಆ ಊರಿನ ದ್ಯಾಮವ್ವನಿಗೆ ಅಥವಾ ಮಾರಮ್ಮನಿಗೆ ಉಡಿ ತುಂಬುವರು. (ಕರ್ಕಲ್ ಹಾಕುವುದು ಅಂದರೆ. ಕೆಮ್ಮು ಬರುವಷ್ಟರ ಮಟ್ಟಿಗೆ ಮೆಣಸಿನ ಕಾಯಿಯನ್ನು ಸುಡುವುದು) ನಂತರ ಗ್ರಾಮದ ಯಜಮಾನರೆಲ್ಲರೂ ಸೇರಿ ಸುತ್ತಲಿನ ಗ್ರಾಮದವರೊಡನೆ ಚರ್ಚಿಸಿ ಜಾತ್ರೆಯ ದಿನವನ್ನು ನಿರ್ಧರಿಸಿ ಡಂಗೂರ ಹೊಡೆಸುತ್ತಿದ್ದರು. ಹಬ್ಬ ಶುರುವಾಯಿತೆಂದು ಹೇಳಿಕೊಳ್ಳುವುದಕ್ಕೆ ವಾರಬಿಡುವುದು ಎಂದು ಕರೆಯುತ್ತಿದ್ದರು. ನದಿ ಅಥವಾ ಕೆರೆಗಳಿಂದ ಗ್ರಾಮದೇವತೆಯು ಸ್ನಾನ ಮಾಡಿ ವಿಧಿವಿಧಾನಗಳೊಂದಿಗೆ ಗ್ರಾಮದೊಳಗೆ ಬಂದರೆ ಅದು ಮತ್ತೆ ರಥದಲ್ಲಿ ಕುಳಿತು ತನ್ನ ಗ್ರಾಮವನ್ನು ಸುತ್ತುವವರೆವಿಗೂ ಜನರು ಒಂದಲ್ಲಾ. ಒಂದು ರೀತಿಯಲ್ಲಿ ಉಪವಾಸ, ಅರೆನಿದ್ರೆ, ಲೈಂಗಿಕ ಕ್ರಿಯೆಯನ್ನು ತ್ಯಜಿಸುವುದು, ಮಾಂಸಹಾರಿಗಳಾಗಿದ್ದರೆ ಅದನ್ನು ತ್ಯಜಿಸುವುದು ಕಂಡು ಬರುತ್ತಿತ್ತು. ಇದನ್ನೆ ಅವರು ವಾರಬಿಡುವುದು ಎಂದು ಕರೆದುಕೊಂಡಿದ್ದಾರೆ. ಈ ವಾರದಲ್ಲಿ ಜನರು ಜಾತ್ರೆಯ ಸಿದ್ಧತೆಯಲ್ಲಿ ತೊಡಗುತ್ತಿದ್ದರು. ದೇವ ದೇವತೆಗಳನ್ನು ಪಲ್ಲಕ್ಕಿಯಲ್ಲಿ ಹಾಗೂ ತೇರಿನಲ್ಲಿ ಕೂರಿಸಿ ಜಾತ್ರೆ ಮಾಡುವ ಪರಿಪಾಠ ಇದ್ದಿತ್ತು. ಪ್ರಭಾವಿ ದೇವರುಗಳ ಜಾತ್ರೆಗಳು ಪ್ರಭಾವಿ ಜನರ ಪ್ರೀತೆಗೆ ಪಾತ್ರವಾಗಿ ಹೆಚ್ಚಿನ ಹಣ ಸಂಗ್ರಹವಾದ್ದರಿಂದ ತೇರಿನ ಜಾತ್ರೆಗಳಾಗಿಯೂ ಪರಿವರ್ತನೆಯಾಗಿ ಜರುಗುತ್ತ ಬಂದಿರುತ್ತವೆ. ಹಂಪಿಯ ವಿರೂಪಾಕ್ಷ ರಥೋತ್ಸವವು, ನಂಜನಗೂಡಿನ ನಂಜುಂಡೇಶ್ವರಸ್ವಾಮಿ ರಥೋತ್ಸವ, ಕುಮಾರರಾಮ ರಥೋತ್ಸವ, ಎಲ್ಲಮ್ಮನ ರಥೋತ್ಸವ, ಗಳಮ್ಮನ ರಥೋತ್ಸವ, ಮೈಲಾರ ಲಿಂಗನ ರಥೋತ್ಸವ ಹೀಗೆ ನೂರಾರು ಪ್ರಮುಖವಾದವುಗಳನ್ನು ಗುರುತಿಸುತ್ತಾ ಸಾಗಬಹುದು. ವಿಜಯನಗರಸ ಅರಸರ ಆಳ್ವಿಕೆಯ ಕಾಲದಲ್ಲಿ ಹೆಣ್ಣು ದೇವರ ಜಾತ್ರೆಗಳು ಹೆಚ್ಚಾಗಿ ನಡೆಯುತ್ತಿತ್ತೆಂದು ಕಂಡು ಬರುತ್ತದೆ. ಇಂಥವರಲ್ಲಿ ಪ್ರಮುಖವಾಗಿ ಹೆಸರಿಸಬಹುದಾದುವೆಂದರೆ ಗೋಳ್ಯಾದ ಲಕ್ಕಮ್ಮ, ಪುತ್ತರಗಿ ಭಾಗಮ್ಮ, ಖನಗಾವಿ ಕನ್ನವ್ವ, ಗುಂಜಿ ಮಹುಲಿದೇವಿ, ಕಕೇರಿ ಭೀಷ್ಟವ್ವ, ಚಿಂಚಲಿ ಮಾಯವ್ವ, ಗೋಲಗೇರಿ ದುರ್ಗಮ್ಮ, ಪಡಗಾನೂರು ಮಾರಿಲಕ್ಕಮ್ಮ, ಅರೋಲಿ ಹೂಲಿಗೆಮ್ಮ, ಸೊಂತ ಚೆದಮ್ಮ, ಚಿಂಚೋಳಿ ಬಾಗಮ್ಮ, ಸನ್ನತಿ ಚೆನ್ನಮ್ಮ, ಮಾಸಾಳಿ ಚೌಡಮ್ಮ, ಮುನಿರಾಬಾದ್ ಹುಲಿಗೆಮ್ಮ, ಬಗದೂರಿ ಎಲ್ಲಮ್ಮ, ಗಾಳಮ್ಮನ ಗುಡಿ ಗಾಳಮ್ಮ, ಅಲ್ಲದೆ ಪ್ರತಿಯೊಂದು ಗ್ರಮದಲ್ಲಿಯೂ ಗ್ರಾಮದೇವತೆಯಾಗಿ ಕಂಗೊಳಿಸುವ ದೇವತೆಗಳಾದ ಸೋಸಲೆ ಹೊನ್ನದೇವಿ, ಬನ್ನೂರು ಹೇಮಾದ್ರ, ಮೂಗೂರು ತಿಬ್ಬದೇವಿ, ಸವದತ್ತಿ ಎಲ್ಲಮ್ಮ, ಕಲಮಾಲಿಯ ಎಲ್ಲಮ್ಮ, ಚಂದ್ರಗುತ್ತಿಯ ರೇಣುಕಾದೇವಿಯ ಜಾತ್ರೆ ಮುಂತಾದವು ಹೆಣ್ಣು ದೇವತೆಗಳ ಒಂದಿಲ್ಲೊಂದು ಹೆಸರಿನಿಂದ ಇಂದೂ ಸಹ ನಡೆದುಕೊಂಡು ಬರುತ್ತಲಿವೆ. ಇದಕ್ಕೆ ಅಂದು ನಮ್ಮಲ್ಲಿ ಇವುಗಳ ಮೇಲೆ ಆಳವಾಗಿ ಬೇರುಬಿಟ್ಟಿರುವ ಸಂಸ್ಕೃತಿಯೇ ಕಾರಣ.

ಅಂದು ಜಾತ್ರೆಗಳು ಪ್ರಾರಂಭವಾಗುವ ಸಂದರ್ಭದಲ್ಲಿ ತಮ್ಮ ಗ್ರಾಮದ ದೇವರ ಗುಡಿಗಳಲ್ಲಿ ಸ್ವಚ್ಛಗೊಳಿಸಿ, ದೇವಾಲಯವನ್ನು ಸುಣ್ಣ ಬಣ್ಣಗಳಿಂದ ಅಲಂಕರಿಸಿ, ದೇವರಿಗೆ ಹೊಸಬಟ್ಟೆ, ಆಭರಣ ತೊಡಿಸಿ, ತರತರದ ನೈವೇದ್ಯ ಅರ್ಪಿಸಿ ಸಂತೋಷದಿಂದ ಅದನ್ನು ವೈಯಕ್ತಿಕ ಹರಕೆಗಳ ಜೊತೆಗೆ ಸಾಮೂಹಿಕವಾಗಿ (ಜನರೆಲ್ಲರ ಪರವಾಗಿ) ಕೇಳುವ ಹರಕೆಗಳನ್ನು ದೇವರಿಗೆ ತೀರಿಸಲು ಶುರುಮಾಡುತ್ತಾರೆ. ಇಂತಹ ಸಮಯದಲ್ಲಿ ಅನ್ನ ದಸೋಹದ (ಹಳೆ ಮೈಸೂರು ಪ್ರದೇಶದಲ್ಲಿ ಪರ ಮಾಡುವುದು ಎಂದು ಕರೆಯುತ್ತಾರೆ) ಪವಿತ್ರ ಕಾರ್ಯಗಳು ಜಾತ್ರೆ ನಡೆಯುವ ಅಷ್ಟೂ ದಿನವೂ ನಡೆಸಲು ಏರ್ಪಾಡಾಗಿರುತ್ತಿದ್ದವು, ಸಾಂಸ್ಕೃತಿಕ ಕಾರ್ಯಕ್ರಮಗಳಾದ ಕುಸ್ತಿ, ಕೋಲಾಟ, ಜನಪದ ನೃತ್ಯ, ಜನಪದ ಗೀತೆಗಳ ಹಾಡುಗಾರಿಕೆಯ ಮೇಳ, ಭಕ್ತಿ ಪುರಾಣ ಕಥೆಗಳ ಮೇಳ, ನಾಟಕ ಮುಂತಾದ ಸಾಂಸ್ಕೃತಿಕ ಪ್ರದರ್ಶನಕ್ಕೆ ಸಿಕ್ಕ ವೇದಿಕೆಗೆ ತಯಾರು ಮಾಡಿಕೊಳ್ಳುತ್ತಿದ್ದರು.

ಅಂತೆಯೇ ಏನೆಲ್ಲಾ ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಚರಣೆಗಳಿಗೆ ಆಧ್ಯತೆ ನೀಡಿದರೂ ಸಹ ಅದರ ಜೊತೆಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ದೇವರ ಹೆಸರೇಳಿ ಮೂಕಪ್ರಾಣಿಗಳನ್ನು ಬಲಿಕೊಡುವ ದುಷ್ಟ ಸಂಪ್ರದಾಯವು ಕಠೋರ ರೀತಿಯದಾಗಿತ್ತೆನ್ನಬಹುದು. ಕೋಳಿ, ಕುರಿ, ಹೋತ, ಎಮ್ಮೆ, ಕೋಣ, ಹೋರಿ ಮುಂತಾದ ಪ್ರಾಣಿಗಳು ಇಂತಹ ಹಿಂಸೆಗೆ ಬಲಿ ಬೀಳುತ್ತಿದ್ದವು. ಸಾಮಾನ್ಯವಾಗಿ ಕಾಲರ, ಪ್ಲೇಗು ರೋಗಗಳನ್ನು ತಡೆಯುವುದೆಂದು ಜನರು ನಂಬಿದ್ದ ಮಾರಮ್ಮ, ಭೀಷ್ಟವ್ವ, ಮಾಯವ್ವ, ಲಕ್ಕವ್ವ ದ್ಯಾಮವ್ವ, ಗಾಳೆಮ್ಮ (ಇವುಗಳೆಲ್ಲವೂ ದುಷ್ಟಶಕ್ತಿಯ ವಿರುದ್ಧ ಹೋರಾಡಿದ ದುರ್ಗಿಯ ರೂಪಗಳೆಂದು ಪ್ರತೀತಿ) ದೇವಿ ಜಾತ್ರೆಗಳಲ್ಲಿ ಇಂತಹ ಪದ್ಧತಿಗಳು ಹೆಚ್ಚಾಗಿ ಕಂಡು ಬರುತ್ತಿದ್ದವೆಂದು ಹೇಳಬಹುದು. ಬೀದಿಯಲ್ಲಿ ಇವುಗಳ ಬಲಿಗೆ ಸತ್ತು ಬಿದ್ದಿದ್ದನ್ನು ವಿದೇಶಿ ಪ್ರವಾಸಿಗರು ವಿವರಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಈ ಮೇಲೆ ಉಲ್ಲೇಖಿಸಿದ ದೇವತೆಗಳೆಲ್ಲವೂ ಸಮಾಜದಲ್ಲಿ ಹಿಂದುಳಿದ ವರ್ಗದವರ (ದಲಿತರ) ಆರಾಧ್ಯ ದೇವತೆಗಳೆ, ಅಷ್ಟೆ ಅಲ್ಲದೆ ಇಂದು ಸಮಾಜದ ಕೆಟ್ಟ ಸಂಪ್ರದಾಯವಾಗಿರುವ ದೇವದಾಸಿ ಪದ್ಧತಿಯನ್ನು ಈ ದೇವತೆಗಳ ಜಾತ್ರೆಯಲ್ಲಿ ಬಿಡುವುದು ಹಾಗೂ ಬೆತ್ತಲೆ ಸೇವೆಯ ಕೆಟ್ಟ ಅನಿಷ್ಟ ಸಂಪ್ರದಾಯಗಳು ಅಂದು ಹೇಳಲು ಸಾಧ್ಯವಾದ ರೀತಿಯಲ್ಲಿ ಇದ್ದಿತ್ತೆನ್ನಬಹುದು. ಇಂದು ಏನೆಲ್ಲ ಕಾನೂನು ಕಟ್ಟಳೆಗಳನ್ನು ನಿರ್ಮಿಸಿದ್ದರೂ ಸಹ ಮೇಲಿನವು ಈಗಲೂ ಇರುವುದು ಕಂಡುಬರುತ್ತದೆ. ಹೆಣ್ಣು ದೇವರ ಜಾತ್ರೆಗಳಂತೆ ಗಂಡು ದೇವರ ಜಾತ್ರೆಗಳೂ ಅಷ್ಟೇ ಪ್ರಸಿದ್ಧಿ ಪಡೆದಿರುತ್ತಿದ್ದವು. ಇಂದು ಪೌರಾಣಿಕ ವ್ಯಕ್ತಿಗಳಾಗಿ ಕಂಗೊಳಿಸುವ ವೀರಭದ್ರ ದೇವ ಜಾತ್ರೆಗಳಿಗಂತೂ ಲೆಕ್ಕವೇ ಇಲ್ಲವೆನ್ನಬಹುದು. ಹುಮನಾಬಾದ್, ಕಾರಡಚಿ, ಶಹಪೂರ, ಗೊಡಚಿ, ಯಡೂರ, ಹಲಕಟ್ಟಿ, ನಗನೂರು, ಚಿಣಮಗೇರಿ, ಹೆಬ್ಬಾಳ ಮೊದಲಾದ ಗ್ರಾಮಗಳ ವೀರಭದ್ರ ದೇವರು ಅತ್ಯಂತ ಪ್ರಮುಖ ಸ್ಥಾನಗಳೆಂದು ಹೆಸರು ಪಡೆದಿದ್ದು. ವಿಜೃಂಭಣೆಯಿಂದ ಜಾತ್ರೆಗಳನ್ನು ನೆರವೇರಿಸಿಕೊಂಡು ಬರುತ್ತಿದ್ದರು.

ಜಾತ್ರೆಯ ವಿವಿಧ ಕಾರ್ಯಕ್ರಮಗಳು ಮುಗಿದ ಮೇಲೆ ಕೊನೆಯ ಹಂತವೆಂದರೆ ದೇವರ ಮೆರವಣಿಗೆ ಅದ್ಯತೆ ನೀಡುವುದು. ಅಂದರೆ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಇಲ್ಲದೆ ತೇರಿನಲ್ಲಿ ಇಟ್ಟು ದೇವಾಲಯದ ರಥಬೀದಿಯಲ್ಲಿ ಎಳೆಯುವುದು ತೀರಿಗೆ ರಥ ಎಂದೂ ಕರೆಯುತ್ತಿದ್ದರು. ಪಲ್ಲಕ್ಕಿಯಲ್ಲಿಯೂ ದೇವರ ಮೂರ್ತಿಯನ್ನು ಇಟ್ಟು, ಹೆಗಲ ಮೇಲೆ ಹೊತ್ತುಕೊಂಡು ದೇವರ ಬೀದಿಯ ಸುತ್ತಾ ಸುತ್ತುವುದು ವಾಡಿಕೆಯಾಗಿತ್ತು. ರಥವನ್ನು ಹಗ್ಗಗಳಿಂದ, ಕಬ್ಬಿಣದ ಸರಪಳಿಗಳಿಂದ ನೂರಾರು ಜನಸೇರಿ ಎಳೆಯುವ ವಾಡಿಕೆ ಇದ್ದಿತ್ತು. (ಸಾಮಾನ್ಯವಾಗಿ ರಥ ಎಳೆಯುವುದು ಭಾರವಾದ ಅಥವಾ ಶಕ್ತಿಯನ್ನು ವ್ಯಕ್ತಪಡಿಸುವ ಕೆಲಸವಾದುದರಿಂದ ಇದನ್ನು ಎಳೆಯುವ ಕೆಲಸ ಮಾತ್ರ ಅನಾದಿ ಕಾಲದಿಂದಲೂ ದಲಿತರ ಪಾಲಿಗೆ ಪ್ರಾಪ್ತವಾಗಿದ್ದಿತು. ಆದರೆ ದಲಿತರು ತಮಗೆ ಪ್ರಾಪ್ತವಾಗಿರುವ ಈ ಕೆಲಸದ ಬಗ್ಗೆ ಹೆಮ್ಮೆ ಪಟ್ಟುಕೊಂಡು ತಮ್ಮದೇ ಜಾನಪದವನ್ನು ಸೃಷ್ಟಿಸಿಕೊಂಡು ಆನಂದ ಪಡುವುದು ಉಂಟು, ಆದರೆ ಇದರ ಮೂಲ ಉದ್ದೇಶವೇ ಬೇರೆಯದಾಗಿತ್ತೆನ್ನಬಹುದು). ಅಂದು ತೇರನ್ನು ಅಧ್ಯಾತ್ಮಿಕವಾದ ಸಂಕೇತಕ್ಕೆ ಹೋಲಿಸುತ್ತಿದ್ದರು. ತೇರು ದೇಹಕ್ಕೆ ಪ್ರತೀಕವಾಗಿತ್ತು.

ಜಾತ್ರೆಯಲ್ಲಿ ಒಂದು ಕಡೆ ಉತ್ಸವ ಮೂರ್ತಿಯ ಮೆರವಣಿಗೆ ನಡೆಯುತ್ತಿದ್ದರೆ. ಇನ್ನೊಂದು ಕಡೆ ದೇವರಿಗೆ ಹರಕೆ ತೀರಿಸುವ, ಉರುಳುಸೇವೆ, ಬೆತ್ತಲೆಸೇವೆ, ದೇವದಾಸಿಯನ್ನು ಬಿಡುವುದು, ಸಿಡಿ ಆಡುವುದು, ಅಗ್ನಿ ತುಳಿಯುವುದು, ಶಸ್ತ್ರ ಹಾಕಿಕೊಳ್ಳುವ ವಾದ್ಯ ಓಲಗ ನುಡಿಸುವ, ಕಾಯಿ - ಕರ್ಪೂರಗಳ ನೈವೇದ್ಯ ಅರ್ಪಿಸುವ, ಮುಡುಪು ಇಡುವ, ಹುಂಡಿ ಹಾಕುವ ಮೊದಲಾದ ಕಾರ್ಯಕ್ರಮಗಳು ತಿಳಿದೋ ತಿಳಿಯದೆಯೋ ಸಂಪ್ರದಾಯಕ್ಕೆ ಜೋತುಬಿದ್ದು ಸಾಗುತ್ತಲೇ ಇರುತ್ತಿದ್ದವು.

ಜಾತ್ರೆಗೆ ಕೇವಲ ಧಾರ್ಮಿಕ ಭಾವವೇ ಮೂಲಕಾರಣವಾದರೂ ಸಹ ಇದಕ್ಕೆ ಸಾಂಸ್ಕೃತಿಕ ಬದುಕಿನ ಹಿನ್ನೆಲೆಯೂ ಅಪಾರವಾಗಿರುವುದು ಕಂಡುಬರುತ್ತದೆ. ಏಕೆಂದರೆ ಜಾತ್ರೆಯ ನೆಪದಿಂದ ಜನರೆಲ್ಲರೂ ಒಂದೆಡೆ ಸೇರುತ್ತಾರೆ. ಜನರಿಗೆ ಪ್ರಾಪಂಚಿಕರಿಗೆ ಬೇಕು ಬೇಕಾದ ವಸ್ತುಗಳ ಮಾರಾಟ ಮಳಿಗೆಗಳು ಸಿದ್ಧವಾಗಿ ಖರೀದಿ ಭರಾಟೆಗಳು ನಡೆಯುತ್ತವೆ. ಕಲಾಕಾರರು ತಮ್ಮ ಕಲಾ ಪ್ರದರ್ಶನಕ್ಕಾಗಿಯೂ, ಕೃಷಿಗೆ ಹಾಗೂ ಮನೆಯ ಬಳಕೆಯ ವಸ್ತುಗಳನ್ನು ಖರೀದಿಗಾಗಿ ಬಹು ದೂರದೂರದ ಜನರೂ ಬಂದು ಸೇರುವರು. ಇದರಲ್ಲಿ ಪ್ರಮುಖವಾದವುಗಳೆಂದರೆ ದನಗಳ ಜಾತ್ರೆಗಳು, ಜಾತ್ರೆಗೆ ಸೇರಿದ ಜನಜಂಗುಳಿಯನ್ನು ಕಂಡು "ಸಿದ್ದೇಶ್ವರ ಪುರಾಣ"ದಲ್ಲಿ ಈ ರೀತಿ ವರ್ಣಿಸಲಾಗಿದೆ. "ಗುಡಿಗಳೊಳು ಗೋಪುರಗಳೊಳ ಪುರದ ಬಿದಿಯಂಗಡಿಗಳೊಳು

ಮಠಗಳೊಗಾರವೆ ಗಳೊಳೆ ಕೆರೆಯ ತಡಿಗಳೊಳಗಡೆಯಲ್ಲ ಎಂಬಂತೆ ಬೀಡುಗಳ ಬಿಟ್ಟು ಪರಿಸೆಯ ಮನುಜರು, ಸಡಗರಗೊಂಡು ರಿಂಗಣ ಗುಣಿವು ಕಾಡುತ್ತ, ಬಿಡದೆ ಪಾಡುತ್ತಾ ಮೊಪ್ಪಿದುದು ಹರಿಸವೆನಿಪ್ಪ ಕಡಲೊಳಾಳುತ್ತೆ ಸಿದ್ದೇಂದ್ರ; ಸಿದ್ದೇಂದ್ರ ಎಂದೆನುತೊಸೆದು ಕೀರ್ತಿಸುತ್ತ" ಎಂದು ಜಾತ್ರೆಯ ವರ್ಣನೆಯನ್ನು ಮಾಡಿರುವುದು ಕಂಡುಬರುತ್ತದೆ.

ರೈತರು ತಮ್ಮ ವ್ಯವಸಾಯದ ಬೆನ್ನಲುಬಾದ ದನಗಳನ್ನು ಅತ್ಯಂತ ಪೂಜ್ಯ ಕಾಣುತ್ತಿದ್ದರು. ಇದಕ್ಕಾಗಿಯೇ ವೃಷಭಕ್ಕೆ ದೇವಾನುದೇವತೆಗಳನ್ನು ರಕ್ಷಿಸುವ ಸಂಕೇತವಾಗಿ ಪುರಾಣದಲ್ಲಿ, ಸೃಷ್ಟಿಸಿ ವಿಶಿಷ್ಟ ಸ್ಥಾನ ನೀಡಿರುವುದು ಕಂಡು ಬರುತ್ತದೆ. ಸಾಮಾನ್ಯವಾಗಿ ಇಂದಿಗೂ ಸಹ ಗ್ರಾಮೀಣ ಪ್ರದೇಶದಲ್ಲಿ ಸೋಮವಾರದಂದು 'ಬಸವನ ದಿನ' ಎಂದು ಪರಿಗಣಿಸಿ ಅಂದು ಹೆಗಲಿಗೆ ನೇಗಿಲನ್ನು ಏರಿಸುವುದು ಕಂಡು ಬರುವುದಿಲ್ಲ. ಇದಕ್ಕಾಗಿಯೇ ಬಸವನ ಹಬ್ಬವೆಂದು ಅಂದು 'ಕಾರಹುಣ್ಣಿಮೆ' ಎಂಬ ಹಬ್ಬವನ್ನು ಆಚರಿಸುತ್ತಿದ್ದು ಕಂಡು ಬರುತ್ತದೆ. ಇದರ ಸುಂದರ ವರ್ಣನೆಯನ್ನು ಕೆ. ಶ್ರೀಕಂಠಯ್ಯನವರು ವಿಸ್ತಾರವಾಗಿ ವಿವರಿಸಿದ್ದಾರೆ.

ಜಾತ್ರೆಯ ಕೊನೆಯ ಹಂತವೇ ತೇರು ಎಳೆಯುವುದು, ಜಾತ್ರೆಯು ತನ್ನ ವೈಭವದ ತುತ್ತತುದಿಯನ್ನು ಮುಟ್ಟಿದ್ದು ತೇರನ್ನು ಎಳೆಯುವ ಸಂದರ್ಭದಲ್ಲಿಯೇ, ವಿಜಯನಗರದ ಕಾಲದಲ್ಲಿ ನಡೆಯುತ್ತಿದ್ದ ಧಾರ್ಮಿಕ ಹಬ್ಬಗಳು ಮತ್ತು ವಿನೋದಗಳು ಒಂದು ವಿವರಣಾತ್ಮಕ ಚಿತ್ರವನ್ನು ವಿದೇಶಿ ಪ್ರವಾಸಿಗರು ಒದಗಿಸಿರುವರು, ಅವರು ಹೇಳುವ ವೈಭವದ ಉತ್ಸವಗಳಲ್ಲಿ ರಥೋತ್ಸವಗಳು ಒಂದು, ಸಾಮಾನ್ಯವಾಗಿ ಇಂದಿಗೂ ಸಹ ನಾಣ್ಣುಡಿಯಾಗಿರುವ "ತೇರ್ ಅರಿದಮ್ಯಾಲೆ ಜಾತ್ರೆ ಅಳಿಯಿತು" ಎನ್ನುವ ಪದವೆ ತೇರಿಗೆ ಮುಂಚೆ ಈ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿದ್ದವೆಂಬುದನ್ನು ಸೂಚಿಸುತ್ತದೆ.

**೩.೯. ಸಂಗೀತ ಮತ್ತು ನಾಟ್ಯ**

"ಶಿಲ್ಪವು ಹೇಗೆ ರೂಪಬ್ರಹ್ಮನ ಸ್ವರೂಪವೇ ಹಾಗೆಯೇ ಸಂಗೀತವು ನಾದಬ್ರಹ್ಮನ ಸ್ವರೂಪವಾಗಿರುತ್ತದೆ" ಎಂಬ ಕವಿವಾಣಿಯು ವಿಜಯನಗರದರಸರ ಕಾಲದಲ್ಲಿ ಸತ್ಯವಾಗಿತ್ತು. ಹಿಂದಿನ ಸಂಗೀತ, ನಾಟ್ಯಗಳು ವಿಜಯನಗರದ ಸಾಮ್ರಾಜ್ಯಕ್ಕೆ ಅಲ್ಲದೆ ದೇಶವಿದೇಶಗಳಲ್ಲಿಯೂ ತನ್ನ ಕಂಪನ್ನು ಚೆಲ್ಲಿ ಅದರ ವೈಭವವನ್ನು ಸಾರಿದೆ. ತಾಯಿಯ ಹಾಲು ಮಕ್ಕಳಿಗೆ ಹೇಗೆ ಅವಶ್ಯಕವೋ ಹಾಗೆಯೇ ಶಿಲ್ಪ, ನಾಟ್ಯ, ಸಂಗೀತ, ಸಾಹಿತ್ಯಗಳು ಸುಸಂಸ್ಕೃತ ಮಾನವನಿಗೆ ಅವಶ್ಯಕವೆಂದು ಹೇಳಿದರೆ ತಪ್ಪಾಗದು. ಇದರಿಂದ ಮನಸ್ಸಿಗೆ ಶಾಂತಿ, ಆನಂದ ದೊರಕುವುದರಲ್ಲಿ ಸಂದೇಹವಿಲ್ಲ. ಇತ್ತೀಚೆಗೆ ವೈದ್ಯಕೀಯ ಸಂಶೋಧನೆಯು ಉತ್ತಮ ಸಂಗೀತವು ರಕ್ತದ ಒತ್ತಡ, ಹೃದಯಾಘಾತ, ಮಧುಮೇಹ, ಮುಂತಾದ ರೋಗಗಳಿಗೆ ಪ್ರಮುಖ ಮದ್ದೆಂದು ಹೇಳಿರುವುದು ಕಂಡು ಬರುತ್ತದೆ.

**ಸಂಗೀತ :** ವಿಜಯನಗರದ ಅರಸರು ಸಂಗೀತಕ್ಕೆ ಹಾಗೂ ನಾಟ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಪ್ರಾರಂಭದಲ್ಲಿ ಇಮ್ಮಡಿ ದೇವರಾಯನ ಕಾಲದಲ್ಲಿ ಚತುರ ಕಲ್ಲಿನಾಥನಿಗೆ (ಇವನಿಗೆ ಕಲಿಮಾತ್ಯ, ಕೊಲ್ಲಿರಸನೆಂಬ ಹೆಸರುಗಳೂ ಇದ್ದವು) ಕೊಡಲಾಗಿದ್ದ ಹೆಚ್ಚಿನ ಪ್ರೋತ್ಸಾಹದಿಂದಾಗಿ ಸಂಗೀತಕ್ಕೆ (ಕ್ರಿ.ಶ. ೧೪೯೦ರಲ್ಲಿ) ಒಂದು ವಿಶಿಷ್ಟ ರೀತಿಯ ಟೀಕೆಯು ಬಂದಿತ್ತೆಂದು ಹೇಳಬಹುದು. ಅನಂತರ ಈ ಟೀಕೆಯೇ ಹೊಸ ವಿಧಾನವನ್ನು ಪಡೆದು ಹೊಸ ಹೊಸ ರಾಗಗಳಾಗಿ ಹೊರಹೊಮ್ಮಿ ತಮ್ಮದೇ ಆದ ವಿಧಾನದಲ್ಲಿ ವಿವಿಧ ವರ್ಗಗಳಿಗೆ ಸೇರಿಸಲಾಗಿ ಮೇಳ ಪದ್ಧತಿಯು ಹುಟ್ಟಿಕೊಂಡಿತ್ತೆಂದು ತಿಳಿದುಬರುತ್ತದೆ. ಇದೆ ಅಂದಿನಿಂದ ಇಂದಿನವರೆಗೂ ನಾವು ಕಾಣುತ್ತಿರುವ ಮಂಟೇಸ್ವಾಮಿ, ಮಹದೇಶ್ವರ, ಕುಮಾರರಾಮ, ಎಲ್ಲಮ್ಮ, ಹುಲಿಗೆಮ್ಮನವರುಗಳ ಬಗ್ಗೆ ಹುಟ್ಟಿಕೊಂಡ ಮೇಳಗೀತ ಪದ್ಧತಿ, ಚತುರ ಕಲ್ಲಿನಾಥನಿಗಿಂತ ಹಿಂದೆ ಈ ಪದ್ಧತಿಯು ಇರಲಿಲ್ಲವೆಂದೇನೋ ಹೇಳಲಾಗದು. ಆದರೆ ಅದು ಒಂದು ಸಮರೂಪವಾಗಿ ಹೊರಹೊಮ್ಮಿದ್ದು ಇವನ ನಂತರ ಎನ್ನಬಹುದು. ಅದೋ ವಿಜಯನಗರದ ಅರಸರ ಕಾಲದಲ್ಲಿ ಎಂಬುವುದು ಔಚಿತ್ಯ. ಒಂದು ರೀತಿಯಲ್ಲಿ ಮೇಳ ಪದ್ಧತಿಯಿಂದಲೇ ರಾಗಗಳ ಆಕೃತಿಯನ್ನು ಸೃಷ್ಟಿಸಲಾಗಿದೆ ಎಂದೂ ಸಹ ಹೇಳಬಹುದು.

ಅಂದಿನ ಕಾಲದ ಸಂಗೀತ ಹಾಗೂ ನಾಟ್ಯಗಳನ್ನು ಪುಂಡರೀಕ ವಿಠಲರು ರಚಿಸಿರುವ 'ಸದ್ರಾಗೆ ಚಂದ್ರೋದಯ', 'ರಾಗಮಂಜರಿ' ರಾಗಮಾಲೆ' ನಟನ ನಿರ್ಣಯ' ಎಂಬ ಗ್ರಂಥಗಳಿಂದ ತಿಳಿಯಬಹುದಾಗಿದೆ, ಪುಂಡರೀಕರು ಕಲ್ಲಿನಾಥನ ಸೂತ್ರಗಳನ್ನು ಅನುಸರಿಸಿಕೊಂಡೇ ಮೇಳಗೀತೆಗಳನ್ನು ಪ್ರಸ್ಥಾಪಿಸಿರುವುದು ಕಂಡುಬರುತ್ತದೆ. ಇವರುಗಳಿಗೆ ವಿಜಯನಗರದಲ್ಲಿ ಯಾವುದೇ ರೀತಿಯ

ಗೌರವವೂ, ಸ್ಥಾನಮಾನವೂ ಇರಲಿಲ್ಲ. ಏಕೆಂದರೆ ಇವರು ಮೇಳಶಾಸ್ತ್ರಕ್ಕೆ ಒಲವು ತೋರಿಸಿದ್ದುದು ತಪ್ಪಾಗಿದ್ದಿತು. ಅಂದು ಮೇಳ ಶಾಸ್ತ್ರವು ಬ್ರಾಹ್ಮಣೇತರರ ಸಾಂಸ್ಕೃತಿಕ ಮೇಳವಾಗಿದ್ದು ಕಂಡು ಬರುತ್ತದೆ.

ವಿಜಯನಗರದಲ್ಲಿ ನೃತ್ಯ ಸಹಿತವಾದ ಸಂಗೀತಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದ್ದಿತು. ಕಾರಣವೆಂದರೆ ಈ ಎರಡು ಸಂಗಮವಾಗಿರುವ ಸಂಗೀತವು ಭಕ್ತಿಮಾರ್ಗದಿಂದ ಮುಕ್ತಿಗೆ ಕರೆದೊಯ್ಯುತ್ತದೆ ಎಂಬ ಭಾವನೆಯು ಅವರಲ್ಲಿ ಮನೆಮಾಡಿತ್ತೆನ್ನಬಹುದು. ಸಂಗೀತದ ಅಡಿಪಾಯಗಳಾಗಿರುವ ಸಪ್ತಸ್ವರಗಳಾದ ಸ - ರಿ - ಗ - ಮ - ಪ - ದ - ನಿಗಳು ಆಧ್ಯಾತ್ಮಿಕ ರೀತಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವುದು ಕಂಡುಬರುತ್ತದೆ. ಸಂಗೀತಶಾಸ್ತ್ರದಲ್ಲಿ ಇವುಗಳ ಅರ್ಥವನ್ನು ಈ ಕೆಳಕಂಡಂತೆ ವಿಶ್ಲೇಷಿಸಿರುವುದು ಕಾಣಬಹುದು.

**ಸ:ತ್ರಿಗುಣಾತ್ಮಿಕೆ** : ತ್ರಿಕುಂತಲಿಸಹಿತೆ, ಹತ್ತು ಕೋಟಿ ಮಿಂಚುಗಳ ಪ್ರಕಾಶವುಳ್ಳವಳು, ಪಂಚಭೂತಸ್ವರೂಪಿಣಿ, ಶ್ವೇರವರ್ಣೆ, ಶ್ವೇತಾಂಬರಧಾರಿಣಿ, ರಕ್ತ ನಯನೆ, ಶ್ವವೇತಚಂದ ನಾನುಲಿಪ್ತೆ, ಮುತ್ತಿನಹಾರವನ್ನು ಧರಿಸಿರುವವಳು, ಪ್ರಶಾಂತವದನೆ, ಸತ್ಯದ್ವರೂಪಿಣಿ ಎಂಬರ್ಥವನೂ……,

**ರಿ : ದ್ವಿಕುಂಡಲೀಸಹಿತೆ** : ಕೆಂಪುಮಿಂಚಿನ ವರ್ಣದವಳು, ಪಂಚಭೂತ ಸ್ವರೂಪಿಣಿ, ಲೋಲಜಹ್ವೆ, ಭಯಂಕರರೂಪಿಣಿ, ರಕ್ತಾಂಬರಧಾರಿಣಿ, ರಕ್ತ ಪುಷ್ಪ ಭೂಷಣಾಂಬರಧಾರಿಣಿ ಅಶ್ವ ಸಿದ್ದಿನಾಯಕೆ, ಬ್ರಹ್ಮ ಸ್ವರೂಪಿಣಿ ಎಂಬರ್ಥವನೂ……….

**ಗ : ನಿರ್ಗುಣಾತ್ಮಿಕೆ** : ನಿರ್ಮಲವಾದ ಉದಯಸೂರ್ಯನು ಪ್ರಕಾಶವುಳ್ಳವಳು, ಚೈತನ್ಯ ಸ್ವರೂಪಿಣಿ, ದಾಳಿಂಬೆಯ ಹೂವಿನ ಬಣ್ಣದವಳು, ರಕ್ತವಸ್ತ್ರಾಭರಣಧಾರಿಣೀ, ಬ್ರಹ್ಮಸ್ವರೂಪಿಣಿ ಎಂಬರ್ಥವನೂ………

**ಮ: ಪ್ರಾತಃಕಾಲದ ಸೂರ್ಯನ ಪ್ರಕಾಶವುಳ್ಳವಳು** : ನೀಲವರ್ಣೆ, ದಶಭುಜಾದ್ವಿನಿತೆ, ಭಯಂಕರವಾದ ಬಲವಾದ ಆಕಾರವುಳ್ಳವಳು, ಧರ್ಮಾರ್ಥಕಾಮಮೋಕ್ಷಪ್ರದೆ ಎಂಬರ್ಥವನೂ…….

**ಪ : ವಿವಿಧ ವರ್ಣಧಾರಿಣಿ** : ದ್ವಿಭುಜೆ, ಪದ್ಮಾಕ್ಷಿ, ರಕ್ತಚಂದನ ಚರ್ಚಿತೆ, ಪದ್ಮಮಾಲಿನಿ, ನವರತ್ನ ಶೋಭಿತೆ, ಪ್ರಶಾಂತೆ

**ದ: ಸತ್ಯರೂಪಿಣಿ** : ಶಕ್ತಿತ್ರಯನ್ವಿತೆ, ಹಳದಿಯ ಮಿಂಚಿನ ಕಾಂತಿಯುಳ್ಳವಳು, ಮನೋಹರೆ, ನಿತ್ಯಮಂಗಳೆ……

**ನಿ : ಹತ್ತು ಕೋಟಿ ಮಿಂಚಿನ ಪ್ರಕಾಶವುಳ್ಳವಳು** : ಚಾರುಲೋಚನೆ, ಲೋಲಜಿಹ್ವೆ, ಚತುರ್ಬಾಹು ಸಮನ್ವಿತೆ, ಸುಗಂಧಾನುಲಿಪ್ತೆ, ನಿತ್ಯಾಮಂಗಲದಾಯಿನಿ

ಎಂದು ಆಧ್ಯಾತ್ಮಿಕ ಮಾದರಿಯಲ್ಲಿ ಸಂಗೀತ ಶಾಸ್ತ್ರವು ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಗೆ ವಿಜಯನಗರದ ಅರಸರು ಹೆಚ್ಚಿನ ಭಕ್ತಿಭಾವಗಳಿಂದ ನಡೆದುಕೊಂಡು ಬಂದಿರುವುದು ಕಂಡುಬರುತ್ತದೆ. ಕರ್ನಾಟಕ ಸಂಗೀತ ಪಿತಾಮಹನೆಂದು ಕರೆಸಿಕೊಂಡಿರುವ ಪುರಂದರದಾಸರು ವಿಜಯನಗರವು ಉತ್ತುಂಗವು ಶಿಖರದಲ್ಲಿದ್ದಾಗ ಇದ್ದು. ಹೊಸ ಹೊಸ ಸಂಗೀತಗಳನ್ನು ಸೃಷ್ಟಿಸಿ, ಕೀರ್ತನೆಗಳ ಮೂಲಕ ಹಾಗೂ ಕೃತಿಗಳ ಮೂಲಕ ಅವುಗಳನ್ನು ಇಂದಿಗೂ ನಮಗೆ ಬಳುವಳಿಗಳಾಗಿ ಬಿಟ್ಟು ಹೋಗಿದ್ದಾರೆ. ನೂರಾರು ವರ್ಷಗಳು ಕಳೆದಿದ್ದರೂ ಸಹ ಅಂದು ಅವರು ಸೃಷ್ಟಿಸಿರುವ ಸಂಗೀತಗಳು ಇಂದಿಗೂ ಜೀವಂತವಾಗಿವೆ.

**ನಾಟ್ಯ :** ವಿಜಯನಗರದ ಅರಸರು ಸಂಗೀತ ಮತ್ತು ನಾಟ್ಯಗಳೆರಡರಲ್ಲಿಯೂ ಪಾಂಡಿತ್ಯವನ್ನು ಪಡೆದಿದ್ದರು. ಅಸ್ಥಾನದಲ್ಲಿ ಸಂಗೀತಗಾರ್ತಿಯರು ಹಾಗೂ ನೃತ್ಯಗಾರ್ತಿಯರು ತುಂಬಿತುಳುಕುತ್ತಿದ್ದರೆಂದು ವಿದೇಶಿ ಪ್ರವಾಸಿಗರು ಹೇಳಿರುವುದು ಗಮಣಾರ್ಹವಾಗಿದೆ. ಕೃಷ್ಣದೇವರಾಯನು ನಾಟ್ಯ ಸಂಗೀತಗಳೆರಡನ್ನೂ ರಾಘವೇಂದ್ರತೀರ್ಥರ ಪೂರ್ವಿಕನಾದ ಕೃಷ್ಣನಿಂದ ಅಭ್ಯಸಿಸಿದನೆಂದು ಸಾಹಿತ್ಯವು ತಿಳಿಸುತ್ತದೆ. ಅವನೇ ರಚಿಸಿರುವ ಸಂಸ್ಕೃತ ಗ್ರಂಥವಾಗಿರುವ **ಜಾಂಬುವತೀಕಲ್ಯಾಣ** ಸಂಗೀತ ಹಾಗೂ

ನಾಟ್ಯದ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. **ಸಂಗೀತ ಸೂರ್ಯೋದಯದ** ಕರ್ತೃವಾದ ಬಂಧಂ ಲಕ್ಷ್ಮೀನಾರಾಯಣರಿಂದ ಸಂಗೀತ ಕಲೆಯನ್ನು ಅಭ್ಯಾಸಮಾಡಿದನೆಂದು ತಿಳಿದುಬರುತ್ತದೆ.

ಸಂಗೀತ ಮತ್ತು ನೃತ್ಯದಲ್ಲಿ ಅಂದು ಮೊದಲ ಸ್ಥಾನವೆಂದರೆ ದೇವದಾಸಿಯರದಾಗಿತ್ತು. ಅಂದಿನ ಕಾಲದಲ್ಲಿ ದೇವದಾಸಿಯರೆಂದರೆ ಸೂಳೆಯರಲ್ಲ ಎಂಬುವುದು ಗಮನಿಸಬೇಕಾದ ಅಂಶ. ಒಳ್ಳೆಯ ವಂಶಕ್ಕೆ ಸೇರಿದ ಗುಣವಂತರೂ ಶೀಲವಂತರೂ ತಮ್ಮ ತಮ್ಮ ಹೆಣ್ಣು ಮಕ್ಕಳನ್ನು ದೇವರ ಸೇವೆಗೆಂದು ನೇಮಿಸುತ್ತಿದ್ದರು. ಅವರ ಮುಖ್ಯ ಕೆಲಸವೆಂದರೆ ದೇವಮಂದಿರ ಹಾಗೂ ದೇವರ ಉತ್ಸವಗಳಲ್ಲಿ ವರ್ತಿಸುವುದು ಹಾಗೂ ಹಾಡುವುದಾಗಿತ್ತೆಂದು ಹೇಳಬಹುದು. (ರಾಜರ ಆಸ್ಥಾನದಲ್ಲಿ ಇದ್ದ ದೇವದಾಸಿಯರಿಗೆ ಮಾತ್ರ ಈ ಗೌರವವಿದ್ದಿತ್ತು). ಬಾರ್ಬೋಸಾ ಇವರ ಬಗ್ಗೆ ಉಲ್ಲೇಖಿಸುತ್ತಾ ಗೃಹಸ್ಥರು ತಮ್ಮ ಹತ್ತು ವರ್ಷದ ಹೆಣ್ಣುಮಕ್ಕಳನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರಿಗೆ ಸಮರ್ಪಿಸಿದ ಮೇಲೆ ಆ ಕನ್ಯೆಯರಿಗೆ ಸಮಾಜದಲ್ಲಿ ಮದುವೆಯಾದವರಿಗೆ (ಮುತ್ತೈದೆಯರಿಗೆ) ಸಲ್ಲುತ್ತಿದ್ದ ಗೌರವಗಳು ಸಲ್ಲುತ್ತಿದ್ದವು. ಅವರು ದೇವದಾಸಿಯರಾಗಿ ಜನರ ಗೌರವಕ್ಕೆ ಪಾತ್ರರಾಗುತ್ತಿದ್ದರು. ಅವರಿಗೆ ಒಳ್ಳೆಯ ವಾಸಸ್ಥಳಗಳು ದೊರಕುತ್ತಿದ್ದವು. ರಾಣಿಯರ ಅಂತಃಪುರಗಳಿಗೆ ಹೋಗುವುದಕ್ಕೂ ಅಲ್ಲಿರುವುದಕ್ಕೂ ಅವರೊಡನೆ ಸ್ನೇಹವನ್ನು ಬೆಳೆಸಿ ತಾಂಬೂಲವನ್ನು ಸೇವಿಸುವುದಕ್ಕೂ ಅರ್ಹತೆಯನ್ನು ಪಡೆಯುತ್ತಿದ್ದರು. ಮಹಾನವಮಿ ಉತ್ಸವದಲ್ಲಿ ಅವರು ಇಷ್ಟಪಡುವ ಅರ್ಹತೆಯನ್ನು ಪಡೆಯುತ್ತಿದ್ದರು. ಮಹಾನವಮಿ ಉತ್ಸವದಲ್ಲಿ ಅವರು ಇಷ್ಟಪಡುವ ಮೆಟ್ಟಿಲುಗಳನ್ನು ಹತ್ತಿಕೊಂಡು ವೈಭವವನ್ನು ನೋಡುವ ಅವಕಾಶವನ್ನು ಕೃಷ್ಣದೇವರಾಯನು ಅವರಿಗೆ ಕೊಟ್ಟಿದ್ದನು ಎಂದು ವಿದೇಶಿಯರ ಸಾಹಿತ್ಯ ಆಧಾರಗಳಿಂದ ತಿಳಿದುಬರುತ್ತದೆ.

ಸಂಗೀತ ಹಾಗೂ ನಾಟ್ಯಗಾರರು ವಿಧವಿಧವಾದ ಉಡುಪುಗಳನ್ನು ಧರಿಸುತ್ತಿದ್ದರೆಂಬುವುದು ಹಜಾರ ರಾಮಸ್ವಾಮಿ ದೇವಸ್ಥಾನ ಹಾಗೂ ಮಹಾನವಮಿ ದಿಬ್ಬದ ಮೇಲು ಗೋಡೆಗಳ ಮೇಲೆ ಕೆತ್ತಿರುವ ಕೆತ್ತನೆಯಿಂದ ತಿಳಿಯಬಹುದಾಗಿದೆ. ಕೆಲವರು ಕಚ್ಚೆ - ಪೈಜಾಮಗಳೂ, ಜುಬ್ಬ - ತಲೆಗೆ ದಪ್ಪನೆಯ ಪೇಟ ಇದ್ದವೆಂದೂ ಕಂಡುಬರುತ್ತದೆ. ಮಹಿಳೆಯರಿಗೆ ಲಂಗ ಹಾಗೂ ಉತ್ತರೀಯಗಳೂ ಇರುವುದ ಕಂಡುಬರುತ್ತದೆ. (ಉತ್ತರೀಯಾ ಎಂದರೆ ಅನೇಕ ಸುಳಿಗಳನ್ನು ಒಂದಾಗಿ ಹೊಂದಿರುವ ಸೀರೆಯ ನೆರೆ ಇರುವ ವಸ್ತ್ರ) ಕೆಲವರು ಹೆಚ್ಚಿನ ಪ್ರಮಾಣದಲ್ಲಿ ಒಡವೆಗಳನ್ನು ಧರಿಸುತ್ತಿದ್ದರು ಎನ್ನುವುದು ದೇವಾಲಯದಲ್ಲಿನ ಉಬ್ಬುಶಿಲ್ಪಗಳಿಂದ ತಿಳಿದುಬರುತ್ತದೆ. ಕೆಲವು ನರ್ತಕಿಯರು ಲಂಗಗಳನ್ನು ಮಾತ್ರ ಧರಿಸುತ್ತಿದ್ದದ್ದು ಕಂಡುಬಂದರೆ, ಇನ್ನೂ ಕೆಲವರು ಪೂರ್ಣನಗ್ನರಾಗಿಯೇ ನೃತ್ಯ ಮಾಡುತ್ತಿರುವಂತೆ ಚಿತ್ರಿಸಲಾಗಿದೆ. ಈ ವಿಧವಾದ ನರ್ತಕಿಯರಿಂದ ಭರತನಾಟ್ಯವನ್ನು ಶ್ರೀಮಂತಗೊಳಿಸಲಾಯಿತು. ಮಹಾನವಮಿ ಉತ್ಸವಗಳು, ರಥೋತ್ಸವಗಳು, ದೇವಸ್ಥಾನದಲ್ಲಿ ಪ್ರತಿ ಶನಿವಾರ ನಡೆಯುತ್ತಿದ್ದ ಉತ್ಸವಗಳಲ್ಲಿಯೂ ಇವರು ತಪ್ಪದೆ ನರ್ತಿಸಬೇಕಾಗಿತ್ತು. ಇದಕ್ಕೆ ರಾಜಾಜ್ಞೆಯಾಗಿದ್ದಿತ್ತೆಂದು ಕಂಡುಬರುತ್ತದೆ. ಕನ್ನಡ ವಿಶ್ವವಿದ್ಯಾಲಯದ ಪ್ರಸಾರಂಗವು ಪ್ರಕಟಿಸಿರುವ “ಹಂಪಿ ಶಾಸನ” ಸಂಪುಟದಲ್ಲಿರುವ ೮೮ನೇ ಶಾಸನವನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಆದರೆ ಶೂದ್ರರು ಹಾಗೂ ಪಂಚಮರು ನಾಟ್ಯ ಹಾಗೂ ಸಂಗೀತ ಕಲಿಯಬಾರದೆಂದು ಸಹ ರಾಜಾಜ್ಞೆಯಾಗಿದ್ದಿತ್ತು. ಪೇಯಸರು ಅಂದಿನ ನಾಟ್ಯದ ಬಗ್ಗೆ ರಾಣಿಯರು ಎಷ್ಟು ತಲ್ಲೀನರಾಗಿದ್ದರಂಬುದನ್ನು ವಿವರಿಸುತ್ತಾ ರಾಣಿವಾಸದವರೂ ಸಹ ಬಹಿರಂಗವಾಗಿಯೇ ಮನರಂಜನೆಗಾಗಿ ನಾಟ್ಯವಾಡುತ್ತಿದ್ದರೆಂದು ಅವರಿಗೆ ತಕ್ಕ ಶಿಕ್ಷಣವೂ ದೊರಕುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಅವರಿಗೆ ಶಿಕ್ಷಣ ಶಾಲೆಯೂ ಇದ್ದು ಅಲ್ಲಿ ಅವರ ತಪ್ಪುಗಳನ್ನು ತಿದ್ದಿಕೊಳ್ಳಲು ಚಿತ್ರಗಳ ಸಹಾಯವೂ ಇದ್ದಿತ್ತೆಂದು ಹೇಳಿದ್ದಾನೆ. ಇದು ಅಂದು ರಾಣಿಯರು ಸಂಗೀತ ಮತ್ತು ನೃತ್ಯಕ್ಕೆ ನೀಡಿದ ಆಸಕ್ತಿಯನ್ನು ಸೂಚಿಸುತ್ತದೆ.

**೩.೧೦. ಶಿಕ್ಷಣ ಮತ್ತು ತಂತ್ರಜ್ಞಾನ**

ದಿವಂಗತ ಹಯವದನರಾಯರು ಮೈಸೂರು ಗೆಜೆಟಿಯರ್ ಸಂಪುಟ ನಾಲ್ಕರಲ್ಲಿ ಹಿಂದಿನ ಕಾಲದ ಶಿಕ್ಷಣ ಪದ್ಧತಿಯನ್ನು ಅವಲೋಕಿಸುತ್ತಾ ಸಾರ್ವಜನಿಕ ಶಿಕ್ಷಣವನ್ನು ಹಿಂದೆಂದೂ ಸರ್ಕಾರದ ಕರ್ತವ್ಯವೆಂದು ಪರಿಗಣಿಸಿದ ಹಾಗೆ ಎಲ್ಲೂ ಕಾಣುವುದಿಲ್ಲ ಎಂದು ಹೇಳಿದ್ದಾರೆ. ಈ ಮಾತಿಗೆ ವಿಜಯನಗರದ ಸಾಮ್ರಾಜ್ಯವು ಹೊರತಾಗಿರಲಿಲ್ಲ ಎಂದು ಹೇಳಬಹುದು. ವಿಜಯನಗರದರಸರು

ವಿದ್ವತ್ತನ್ನು ಮತ್ತು ಶಿಕ್ಷಣದ ಪ್ರಸಾರವನ್ನು ಪ್ರೋತ್ಸಾಹಿಸಿದಕ್ಕೆ ಕಾರಣವೆಂದರೆ ಸ್ವತಃ ಅವರೇ ವಿದ್ಯಾವಂತರಾಗಿದ್ದರು ಎನ್ನುವುದು ಒಂದು ರೀತಿಯದಾದರೆ. ಮತ್ತೊಂದು ಕಡೆ ಅವರೆ ಮೂಲ ಸಂಪ್ರದಾಯಗಳಿಗೆ ಮನಸೋತು ಸಾರ್ವಜನಿಕ ಶಿಕ್ಷಣವನ್ನು ಸಂಪೂರ್ಣವಾಗಿ ಬದಿಗೊತ್ತಿದ್ದರು ಎಂದು ಹೇಳಬಹುದು. ರಾಜಕುಮಾರರ ವಿದ್ಯಾಭ್ಯಾಸದಿಂದ ಮುಂದುವರಿದ ಈ ಪರಂಪರೆಯು ನಂತರದ ವಿಜಯನಗರದ ಅರಸರೂ ಸಹ ಅನುಸರಿಸಿಕೊಂಡು ಬಂದರು. ಎಷ್ಟೋ ವೇಳೆ ರಾಜರೇ ಈ ಬಗ್ಗೆ ತನ್ನ ಉತ್ತರಾಧಿಕಾರಿಯಾಗುವವರಿಗೆ ತಿಳುವಳಿಕೆ ಕೊಟ್ಟಿದ್ದೂ ಕಂಡುಬರುತ್ತದೆ.

ವಿಜಯನಗರದ ಕಾಲದ ಶಿಕ್ಷಣವು ವಿಚಾರವನ್ನು ನಾವು ಬಹಳ ಮಟ್ಟಿಗೆ ಶಾಸನಗಳಿಂದ ಸಂಗ್ರಹಿಸಬಹುದಾಗಿದೆ. ಇವುಗಳಲ್ಲಿ ಕೆಲವಂತೂ ಸ್ವಾರಸ್ಯಪೂರ್ಣವಾದ ವಿವರಗಳನ್ನು ಒದಗಿಸುತ್ತವೆ. ಅಷ್ಟೆ ಅಲ್ಲದೆ ಅಂದಿನ ಕಾಲದ ಸಮಕಾಲೀನ ಸಾಹಿತ್ಯವು ಈ ವಿಚಾರವಾಗಿ ಹೆಚ್ಚಿನ ಬೆಳಕನ್ನು ಚೆಲ್ಲುತ್ತದಲ್ಲದೆ ಈ ಶಿಕ್ಷಣದ ಚಟುವಟಿಕೆಗಳು ಅಂದು ಕೆಲವೇ ವರ್ಗಗಳ ಬೌದ್ಧಿಕ. ನೈತಿಕ ಹಾಗೂ ಸಾಂಸ್ಕೃತಿಕ ವಿಷಯಗಳ ಮೇಲೆ ಗಮನಹರಿಸಲು ನಿಜವಾದ ಆಧಾರವಾಗಿರುತ್ತಿದ್ದವು. ಇವುಗಳ ಆಧಾರದ ಮೇಲೆಯೇ ಅಂದಿನ ಸಾಮ್ರಾಜ್ಯದ ಅಡಿಗಲ್ಲು ಇದ್ದಿತೆಂದು ಹೇಳಬಹುದಾಗಿದೆ.

**ಪ್ರಾಥಮಿಕ ಶಿಕ್ಷಣ**

ಅಂದಿನ ಕಾಲದಲ್ಲಿ ಶಿಕ್ಷಣಕ್ಕೆ 'ಬಾಲಬೋದೆ' ಎಂದು ಹೆಸರಿದ್ದಿತ್ತೆನ್ನಬಹುದು. ಕನಕದಾಸರು ತಮ್ಮ ಮೋಹನತರಂಗಿಣಿ'ಯಲ್ಲಿ ಕಸೆ ಅಂಗಿ ತೊಟ್ಟು ಕೈಯಲ್ಲಿ ಬೆತ್ತ ಹಿಡಿದು ಔಷಧಿಗಳನ್ನು ರಚಿಸುವುದರಲ್ಲಿ ನಿಪುಣರಾದ, ಪ್ರಾಥಮಿಕ ಶಾಲೆಯ ಉಪಾಧ್ಯಾಯರ ಚಿತ್ರವೂ, ಅಂದಿನ ಮಕ್ಕಳ ಪುಸ್ತಕಗಳ ವರ್ಣ ಚಿತ್ರಗಳಿಂದ ಕೂಡಿದ್ದವೆಂಬ ಸಂಗತಿಯೂ ದೊರೆಯುತ್ತದೆ. ಪ್ರಾಥಮಿಕ ಹಂತದಲ್ಲಿ ಮಕ್ಕಳು ಮಣ್ಣಿನ ಅಥವಾ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡುವುದನ್ನು ಕಲಿತರು ಎಂಬುವುದು ತಿಳಿದಿರುವ ವಿಷಯವೇ, ಇವುಗಳಿಗೆ 'ಧೂಳಾಕ್ಷರ' ಎಂದು ಕರೆಯುತ್ತಿದ್ದರು. ವಿದೇಶಿ ಪ್ರವಾಸಿಗರೊಬ್ಬರ ಪ್ರಕಾರ ಪಾಠಶಾಲೆಯೊಂದರಲ್ಲಿ ಉಪಾಧ್ಯಾಯರಿಂದ ಕಲಿತ ಪಾಠವನ್ನು ಮರೆಯದೆ ನೆನಪಿನಲ್ಲಿಟ್ಟುಕೊಳ್ಳಲು, ವಿದ್ಯಾರ್ಥಿಗಳು ಬಾಯಿಪಾಠಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಪುನರಾವರ್ತನೆ ಮಾಡುತ್ತಿದ್ದರು. ನಿದರ್ಶನಕ್ಕೆ 'ಒಂದೊಂದ್ದೆ ಒಂದು' ಎಂಬಂತೆ ಪುನರಾವರ್ತನೆಯನ್ನು ಕೇಳುತ್ತಲೆ ಉಳಿದ ಹುಡುಗರು, ಅದನ್ನೆ ಬಾಯಿಯಲ್ಲಿ ಹೇಳುತ್ತಾ ಎದುರಿಗೆ ಮರಳಿನ ಮೇಲೆ ಅದೇ ಪ್ರಕಾರ ಬರೆಯುತ್ತಿದ್ದರು. ಹೀಗೆ ಪ್ರಾಥಮಿಕ ಪಾಠ ಸಾಗುತ್ತಿದ್ದಿತು ಎಂದು ಹೇಳಿ ಅಂದಿನ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಮೆಚ್ಚಿಕೊಂಡಿದ್ದಾನೆ. ವಿದ್ಯಾರ್ಥಿಗಳಿಗೆ ಕಾಗದವನ್ನಾಗಲಿ ಅಥವಾ ಮಸಿಯನ್ನಾಗಲಿ ವ್ಯರ್ಥಮಾಡಿಸದೆ ಓದುಬರಹವನ್ನು ಕಲಿಯುವ ಈ ವಿಧಾನ ನಿಜವಾಗಿಯೂ ಅತ್ಯಂತ ಸುಲಭವಾದದ್ದೆ ಆಗಿತ್ತು.

ಇನ್ನೊಂದು ಭಾಗದಲ್ಲಿ ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕಾದ ಕೃತಿಗಳೆಂದರೆ ಜೈಮಿನಿ ಭಾರತ, ವಿದುರನೀತಿ, ಅಮರಕೋಶ, ಪಂಚತಂತ್ರ, ಸೋಮೇಶ್ವರಶತಕ ಹಾಗೂ ಕೆಲವು ವಿದ್ಯಾರ್ಥಿಗಳು ಸಂವತ್ಸರಗಳ, ನಕ್ಷತ್ರಗಳ, ದಿಕ್ಸೂಚಿಯ ವಿವರಗಳನ್ನು ದೇವರ ಮಹಿಮಾ ವಿಶೇಷಗಳನ್ನು ಸುತ್ತಿಸುವ ಹಲವು ಬಗೆಯ ಹಾಡುಗಳನ್ನು ಕಲಿಯುತ್ತಿದ್ದರು.

ವಿಜಯನಗರದ ಅರಸರು ಶಿಕ್ಷಣಕ್ಕೆ ಎಷ್ಟರ ಮಟ್ಟಿನ ಪ್ರಾಮುಖ್ಯತೆ ನೀಡಿದ್ದರೆಂಬುವುದಕ್ಕೆ ಇಂದಿಗೂ ಕಂಡುಬರುವ ಅಗ್ರಹಾರಗಳು, ದೇವಾಲಯಗಳು ಹಾಗೂ ಮಠಗಳೇ ನಿದರ್ಶನವಾಗಿವೆ. ಪ್ರಾಥಮಿಕ ಹಂತದಲ್ಲಿ ಓದು ಬರಹ ಕೇವಲ ಗಣಿತವನ್ನು ಮಾತ್ರ ಕಲಿಯುವುದಾಗಿದ್ದರೂ ನಮ್ಮಲ್ಲಿ ಇರುವ ನಾಣ್ಣುಡಿ ತಾಯಿಯೇ ಮಗುವಿಗೆ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ ಎಂಬ ಮಾತಿಗೆ ನಿದರ್ಶನವೆಂಬಂತೆ ಮೊದಲನೆ ದೇವರಾಯನ ಮಂತ್ರಿಯಾದ ಲಕ್ಷ್ಮೀಧರನಿಗೆ ಅವನ ತಾಯಿ ದಿನವೂ ಹಾಲೆರೆಯುವಾಗ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯವನ್ನು ಕಟ್ಟಿಸು, ಸೆರೆಯಲ್ಲಿ ಸಿಕ್ಕಿದ ಅನಾಥರನ್ನು ಬಿಡಿಸು, ಮಿತ್ರರಿಗೆ ಆಶ್ರಯನಾಗು, ನಂಬಿದವರಿಗೆ ನೆಲೆಯಾಗು ನಂತರ ಸುಖಶಾಂತಿಯಿಂದ ರಾಜನಾಗಿ ರಾಜ್ಯಭಾರ ಮಾಡು ಎಂದು ಹೇಳುತ್ತಾ ಬೆಳೆಯಿಸಿದಳಂತೆ (ಆಧಾರ S.I.I. IV.No.267, P.62).

ಮೇಲಿನ ತಾಯಿಯ ಮಾತು ಅಂದಿನ ರಾಜನಾಗುವವನ ಕರ್ತವ್ಯ ಹಾಗೂ ಸಾಮಾನ್ಯ ಜನರ ಮೇಲೆ ಇದ್ದ ಮಮಕಾರವನ್ನು ಸೂಚಿಸುತ್ತದೆ. ಇದನ್ನೇ ತಾಯಿ ಸಂಸ್ಕೃತಿ ಎಂದು ಕರೆಯುವುದಲ್ಲವೆ.

ಮಧ್ಯಕಾಲೀನ ಕರ್ನಾಟಕದಲ್ಲಿ ಪ್ರಮುಖ ವಿದ್ಯಾಕೇಂದ್ರಗಳು ಅಗ್ರಹಾರಗಳು, ಮಠಗಳು, ದೇವಸ್ಥಾನಗಳು, ಬ್ರಹ್ಮಪುರುಗಳೂ ಮತ್ತು ಘಟಿಕಾ ಸ್ಥಾನಗಳು, ಇವುಗಳಲ್ಲಿ ವಿಜಯನಗರದ ಅರಸರ ಕಾಲದಲ್ಲಿ ಅಗ್ರಹಾರಗಳು, ಮಠಗಳೂ, ಶೈಕ್ಷಣಿಕ ಕ್ಷೇತ್ರದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದವೆಂದು ಕಂಡುಬರುತ್ತದೆ. ವಿಜಯನಗರದ ನಂತರ ಈ ವಿದ್ಯಾ ಕೇಂದ್ರಗಳ ಘನತೆಯು ಕುಗ್ಗುವಂತೆ ಮಾಡಿದ ಅನೇಕ ಘಟನೆಗಳು ನಡೆದಿರುವುದು ಕಂಡು ಬರುತ್ತದೆ ಅಂದಿನ ಕಾಲದ ಮಠದ ಶಿಕ್ಷಣವು ಕೇವಲ ಒಂದು ಮತ ಧರ್ಮ್ದ ಅಚಾರ್ಯಧೋರಣೆಯ ಪೀಠಗಳಾಗಿದ್ದವು. ಇಂಥಹ ಶಿಕ್ಷಣದ ಸುತ್ತ ಮಠಗಳು ತಮ್ಮ ಬಹು ಬಗೆಯ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದವು.

ಅಂದಿನ ಕಾಲದ ಶಿಕ್ಷಣ ಪದ್ಧತಿಯ ಪ್ರಗತಿಯ ಬಗ್ಗೆ ಕುರಿತು ಸೋಮೇಶ್ವರ ಶತಕವು ಹೇಳುವುದರ ರೀತಿಯಲ್ಲಿಯೇ ರಾಜರ ಸಭೆಯು ಕವಿಗಳು, ಗಾಯಕ್ರು ಪೌರಾಣಿಕರು, ಹಾಸ್ಯಗಾರರು, ಚಿರಿತ್ರಾಕಾರರು, ಸೋತಿಷಿಗಳು, ಚತುರ ವಾಗ್ಮಿಗಳು ಮತ್ತು ಯುದ್ಧಕಲಾ ನಿಪುಣರುಗಳಿಂದ ತುಂಬಿ ಶೋಭಿಸುತ್ತದೆ ಎಂದು ಹೇಳಿರುವುದರಲ್ಲಿಯೇ ಊಹಿಸಬಹುದಾಗಿದೆ. ಸೋಮೇಶ್ವರ ಶತಕದ ಪ್ರಕಾರ ಶಿಕ್ಷಣವನ್ನು ಯಾವುದರಿಂದ ಕಲಿಯಬೇಕು ಎಂದು ಹೇಳಿರುವುದು ಅತ್ಯಂತ ಮಹತ್ವವಾದದ್ದಾಗಿದೆ. ಇದರ ಪ್ರಕಾರ ಅ. ಕೆಲವನ್ನು ಬಲ್ಲವರಿಂದ ಕಲಿಯಬೇಕು, ಆ. ಕೆಲವನ್ನು ಶಾಸ್ತ್ರಗಳಿಂದ ಕಲಿಯಬೇಕು, ಇ. ಕೆಲವನ್ನು ಇತರರ ಕೃತಿಗಳಿಂದ ಅರಿಯಬೇಕು ಈ. ಕೆಲವನ್ನು ತನ್ನ ಬುದ್ಧಿಶಕ್ತಿಯಿಂದ ತಿಳಿಯಬೇಕು ಉ. ಕಡೆಯದಾಗಿ ಕೆಲವನ್ನು ಸಜ್ಜನಸಂಗದಿಂದ ಅರಿಯಬೇಕು. ಈ ರೀತಿನೀತಿಯಲ್ಲಿ ಶಿಕ್ಷಣ ಪಡೆದರೆ ಮಾತ್ರ ಮನುಷ್ಯನು ಹಲವು ಹಳ್ಳ, ತೊರೆ, ನದಿಗಳು ಸೇರಿ ಸಮುದ್ರವಾಗುವ ಹಾಗೆ ಸರ್ವಜ್ಞನಾಗುತ್ತಾನೆ ಎಂದು ಹೇಳಬಹುದಾಗಿದೆ.

**ಜನಸಾಮಾನ್ಯರ ಶಿಕ್ಷಣ :** ಮೇಲೆ ವಿವರಿಸಲಾದ ಶಿಕ್ಷಣಕ್ಷೇತ್ರ, ಶಿಕ್ಷಣ ನೀಡುತ್ತಿದ್ದ ಸ್ಥಳಗಳು ಪ್ರಮುಖವಾಗಿ ಶಿಕ್ಷಣ ಎಂಬ ಪದದ ಅರ್ಥವೇ ಕೆಲವರಿಗೆ ಮಾತ್ರ ಮೀಸಲಾಗಿದ್ದಿತ್ತು. ಶಿಕ್ಷಣ ಜನಸಾಮಾನ್ಯರಿಗೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಂದು ಭೀಕರ ಚಂಡಮಾರುತದ ಹಾಗೆ ಹಾಸುಹೊಕ್ಕಾಗಿದ್ದ ಜಾತಿ ವ್ಯವಸ್ಥೆಯು ತನ್ನದೆ ಅದಂತಹ ಮೌಢ್ಯದ ವ್ಯವಸ್ಥೆಯಲ್ಲಿ ಮುಳುಗಿಸುವಂತೆ ಮಾಡಿತು. ಬ್ರಾಹ್ಮಣರು ವಿದ್ಯೆ ಎಂಬುವುದು ತಮಗೆ ಮಾತ್ರವೆಂದು ಹೇಳಿ ವೇದ ಉಪನಿಷತ್‌ಗಳನ್ನು ಹೇಳಿಕೊಂಡು ರಾಜಾಶ್ರಯದಲ್ಲಿ ಉತ್ತಮ ಜೀವನ ನಡೆಸಿದರೆ, ತಾವೇ ಸೃಷ್ಟಿಸಿದ ಶೂದ್ರರು ಹಾಗೂ ಪಂಚಮರು ಹುಟ್ಟಿರುವುದರ ಬಗ್ಗೆ ಹಲವಾರು ಅಧರ್ಮ ನೀತಿಯನ್ನು ತಿಳಿಸಿ ಅವರನ್ನು ಪ್ರಾಣಿಗಳಿಗಿಂತಲೂ ಹೀನವಾದ ಜೀವನ ನಡೆಸುವಂತೆ ಮಾಡಿದ್ದರೆನ್ನಬಹುದು. ಈ ಗುಂಪಿನಲ್ಲಿ ಯಾರಾದರೂ ಶಿಕ್ಷಣ ಪಡೆಯಲು, ಅದರಲ್ಲಿಯೂ ಸಂಸ್ಕೃತ ಕಲಿಯಲು ಬಯಸಿದರೆ ಆ ವ್ಯಕ್ತಿಗೆ ಕಾಯಿಸಿದ ಕಬ್ಬಿಣದ ಸಲಾಕೆಯಿಂದ ಕಿವಿಗಳಿಗೆ ಎರಕ ಹೊಯ್ಯುವುದು. ನಾಲಗೆ ಕತ್ತರಿಸುವುದು, ಗಡಿಪಾರು ಮಾಡುವುದು ಅಥವಾ ಮರಣದಂಡನೆಗೆ ಒಳಪಡಿಸುವ ಅನಿಷ್ಟ ಪದ್ಧತಿಗಳು ಇದ್ದವು. ಅಂದಿನ ಶಿಕ್ಷಣವು ಕೇವಲ ರಾಜ ಹಾಗೂ ರಾಜಾಶ್ರಯದ ಶ್ರೀಮಂತರು, ಬ್ರಾಹ್ಮಣರುಗಳಿಗೆ ಮಾತ್ರ ಮೀಸಲಾಗಿದ್ದಿತು. ಬೇರೆ ಯಾರೂ ಶಿಕ್ಷಣ ಪಡೆಯುವಂತೆ ನಿಷೇಧ ವಿಧಿಸಲಾಗಿತ್ತು. ಸಾಮಾನ್ಯ ಜನತೆಯ ಜೀವನದ ಸೌಕರ್ಯಗಳನ್ನು ಯಾವ ದೃಷ್ಟಿಯಿಂದಲೂ ಉತ್ತಮವಾಗಿ ನಿರೂಪಿಸಲು ಸ್ವಲ್ಪವೂ ಗಮನಕೊಡದ, ಕೇವಲ ಅನಿಷ್ಟ ಪದ್ಧತಿಗಳ ತಳಹದಿಯ ಮೇಲೆ ಆಳ್ವಿಕೆ ನಡೆಸಿದ ರಾಜ್ಯಾಡಳಿತವನ್ನು ಸುಭಿಕ್ಷವಾದ ಆಳ್ವಿಕೆಯ ಸಾಮ್ರಾಜ್ಯ, ಸುಭೀಕ್ಷೆಯ ಕಾಲ ಎಂದೆಲ್ಲಾ ಹೇಳುವುದರಲ್ಲಿ ಅರ್ಥವೆಲ್ಲಿದೆ?

***

## ೪. ಆಡಳಿತ ಪದ್ಧತಿ

“ಯಾಥಾ ರಾಜಾ ತಥಾ ಪ್ರಜಾ” ಎಂಬ ಹಿರಿಯ ನಾಣ್ಣುಡಿ ಎಷ್ಟೇ ಹಳೆಯದಾದರೂ ಅದು ಎಲ್ಲ ಕಾಲಕ್ಕೂ ಅನ್ವಯಿಸುವ ಮಾತೆ. ಸುಮಾರು ಮೂರು ಶತಮಾನಗಳ ಕಾಲ ಭವ್ಯವಾಗಿ ಬಾಳಿ ಬೆಳಗಿದ, ಕರ್ನಾಟಕದ ಇತಿಹಾಸದಲ್ಲಿ ಒಂದು ಚಿರಂತನ ಸ್ಥಾನವನ್ನು ಗಳಿಸಿರುವ ವಿಜಯನಗರ ಸಾಮ್ರಾಜ್ಯದಲ್ಲಿ ಅದರ ಶ್ರೇಯೋಭಿವೃದ್ಧಿಗಾಗಿ, ಸಾಮ್ರಾಜ್ಯದ ಅಭಿವೃದ್ಧಿಗಾಗಿ ಮೆರೆದ ಪಾಜರ ಪಾತ್ರ ಹಿರಿದಾದುದು. ವಿಜಯನಗರ ಸಾಮ್ರಾಜ್ಯದ ಸಮಗ್ರ ಚರಿತ್ರೆಯನ್ನು ಅದರ ಜವಾಬ್ದಾರಿಯನ್ನು ಹೊತ್ತಿದ್ದ ರಾಜ ಮಹಾರಾಜರು ಶ್ರದ್ಧೆಯಿಂದ ಕಾರ್ಯರೂಪಕ್ಕೆ ತಂದಿದ್ದುದರಿಂದ ಹಾಗೂ ತಮ್ಮ ಘನವಾದ ಧ್ಯೆಯೋದ್ದೇಶಗಳ ಸಾಧನೆಯನ್ನು ಸಾಧ್ಯವಾದಷ್ಟು ಉತ್ತಮ ರೀತಿಯಿಂದ ನೆರವೇರಿಸಿದ್ದರಿಂದ ಭಾರತದ ಚರಿತ್ರೆಯಲ್ಲಿಯೇ ಪ್ರಮುಖ ಸ್ಥಾನಗಳಿಸಿತ್ತೆನ್ನಬಹುದು. ಪ್ರಜಾಪಾಲನೆಯಲ್ಲಿ ವಿಜಯನಗರದ ಅರಸರ ದೃಷ್ಟಿಕೋನ ಹೇಗಿತ್ತು ಎಂಬುದಕ್ಕೆ ಟಿ.ವಿ. ಮಹಾಲಿಂಗರವರು ಅರಸರೂ ಅದೇ ನೀತಿಯನ್ನು ಅನುಸರಿಸಿಕೊಂಡು ಬಂದರೆಂದು ಹೇಳಿದ್ದಾರೆ.

ರಾಜಪ್ರಭುತ್ವದ ವಿಚಾರದಲ್ಲಿ ಅರಸರು ನಡೆದುಕೊಂಡ ರೀತಿ, ಹಿಂದೂ ಧರ್ಮಶಾಸ್ತ್ರಕಾರರು ಹೇಳಿರುವ (ಬ್ರಾಹ್ಮಣರು) ಸಂಪ್ರದಾಯಗಳನ್ನು ಅವರು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದರು. ರಾಜ, ಮಂತ್ರಿ ಆಡಳಿತ ವರ್ಗ ಮುಂತಾದವರ ಬಗ್ಗೆ ಸಾಮಾನ್ಯ ಜನರ ಅಭಿಪ್ರಾಯ ಯಾವುದಾಗಿತ್ತು ಎಂಬ ವಿಷಯ ಕುರಿತು ಸಮಕಾಲಿನ ಕವಿಗಳು, ವಿದೇಶಿ ಪ್ರವಾಸಿಗರು ಅಲ್ಲಲ್ಲಿ ಸಂಕ್ಷಿಪ್ತವಾಗಿ ಹೇಳಿದ್ದಾರೆ. ಈ ಸಂಬಂಧ ಸಮಕಾಲೀನ ಕವಿಯು ವಿಜಯನಗರದರಸರಲ್ಲೆ ಪ್ರಖ್ಯಾತನಾದ ಕೃಷ್ಣದೇವರಾಯನು ಬರೆದಿರುವನೆಂದು ಹೇಳಲಾಗುವ ‘ಆಮುಕ್ತ ಮೌಲ್ಯದ’ ಹೆಚ್ಚು ಉಪಯುಕ್ತವಾಗಿದೆ. ವಾಸ್ತುಶಾಸ್ತ್ರವಾಗಿರುವ ಶುಕ್ರನೀತಿಯೂ ರಾಜನ ಜವಾಬ್ದಾರಿಯು ಎಷ್ಟು ದೊಡ್ಡದು, ರಾಜತ್ವದಲ್ಲಿ ಎಂತಹ ಗಹನವಾದ ತತ್ವಗಳು ಅಡಗಿದೆ, ರಾಜನು ಹೇಗೆ ಒಂದು ಯುಗದ ನಿರ್ಮಾಪಕನಾಗಿ ರಾಜ್ಯದ ಎಲ್ಲ ಆಗು - ಹೋಗುಗಳಿಗೂ ಸೂತ್ರಧಾರನಂತಿದ್ದಾನೆ ಎಂಬ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತದೆ. ಒಬ್ಬ ರಾಜ ಎಂದೆಂದಿಗೂ ಆದರ್ಶವ್ಯಕ್ತಿಯಾಗಿರಬೇಕು. ಅವನು ತನ್ನ ನಡೆನುಡಿಗಳೆರಡರಲ್ಲಿಯೂ ಶುದ್ಧನಾಗಿ ಇತರರಿಗೆ ಆದರ್ಶಪ್ರಾಯನಾಗಿರಬೇಕು. ಅಂತಹ ಸಂದರ್ಭದಲ್ಲಿ ಮಾತ್ರ ಸಾಮ್ರಾಜ್ಯದ ಜನತೆಯು ಅವನ ಮಾತಿಗೆ ಬೆಲೆ ಕೊಡುವರು, ಹಾಗಿಲ್ಲದಿದ್ದರೆ ಜನರೇ ಅವನನ್ನು ಅನೀತಿವಂತನೆಂದು ಜರಿಯುತ್ತಾರೆ. ಈ ವಿಚಾರ ಕುರಿತು ಸೋಮನಾಥ ಕವಿಯು ತನ್ನ ಅಕೃತ ಚರಿತ್ರೆ’ ಎಂಬ ಷಟ್ಪದಿಯಲ್ಲಿ ಬರೆದಿರುವ ಕಾವ್ಯದಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾನೆ. ಪ್ರಜಾಪಾಲನೆಯೇ ರಾಜರ ಮುಖ್ಯ ಗುರಿಯಾಗಿರಬೇಕೆಂದು (ಪ್ರಜೆಯಂ ಪಾಳಿಸ ಬಲ್ಲೊಡಾ ತನರಸಂ) ಕೃಷ್ಣದೇವರಾಯನು ‘ಆಮುಕ್ತಮೌಲ್ಯದ’ ತಿಳಿಸುತ್ತಾನೆ.

ವಿಜಯನಗರ ಸಾಮ್ರಾಜ್ಯವು ಕನ್ನಡ ನಾಡಿನಲ್ಲಿ ಸತ್ಯದ ಬಲ ಮತ್ತು ಬೆಲೆಯನ್ನು ಮೊದಲಿನಿಂದಲೂ ಮೈಗೂಡಿಸಿಕೊಂಡಿತ್ತೆಂದು ಹೇಳಬಹುದು. ಮಹಾಕವಿಯಾದ ರಾಘವಾಂಕನು ತನ್ನ ಕೃತಿಯಾದ ಹರಿಶ್ಚಂದ್ರ ಕಾವ್ಯದಲ್ಲಿ ‘ಹರನೆಂಬುದೇ ಸತ್ಯ; ಸತ್ಯವೆಂಬುದೇ ಹರನು’ (God is truth; Truth is god) ಎಂದು ಸುಮಾರು ಎಂಟು ನೂರು ವರ್ಷಗಳ ಹಿಂದೆಯೇ ಹೇಳಿರುವುದು; ಭಕ್ತಿಭಂಡಾರಿ ಬಸವಣ್ಣನವರು “ಸತ್ಯ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ” ಎಂದು ಹೇಳಿ ಸತ್ಯ ಮಿಥ್ಯೆಗಳ ವ್ಯತ್ಯಾಸವನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಹಾಗೆಯೇ ನಮ್ಮ ಕನ್ನಡ ನಾಡಿನಲ್ಲಿ ಎಲ್ಲರಿಗೂ ಪ್ರಿಯವಾದ ಹಾಗೆಯೇ ಮುಂದೆಯೂ ಆದರ್ಶಪ್ರಿಯವಾಗುವ ಗೋವಿನ ಕಥೆಯಲ್ಲಿ ಸತ್ಯದ ಹಿರಿಮೆಯು ಕಂಡುಬರುತ್ತದೆ. ಉದಾಹರಣೆಗೆ, ಹುಲಿಯ ಬಾಯಿಗೆ ತುತ್ತಾಗಲು ಸಿದ್ಧವಾಗಿದ್ದ ಗೋವು ಅದರಲ್ಲಿಯೂ ಇಲ್ಲಿ ಕನ್ನಡನಾಡಿನ ಗೋವು ಎಂದು ಹೇಳಿದರೆ ಅತಿಶಯವಾಗಲಾರದೇನೋ, ಇಲ್ಲಿ ಗೋವು ತನ್ನ ಕರುವಿಗೆ ಈ ರೀತಿ ಹೇಳುತ್ತದೆ.

*ಸತ್ಯವೆಂಬುದೆ ತಾಯಿ ತಂದೆ* ||
*ಸತ್ಯವೆಂಬುದೆ ಬಂಧು ಬಳಗವು* ||
*ಸತ್ಯವಾಕ್ಯಕೆ ತಪ್ಪಿ ನಡೆದರೆ* ||
*ಮೆಚ್ಚನಾ ಜಗದೀಶನು* ||

ಈ ಗೋವಿನ ಕಥೆಯು ಸತ್ಯ ಕೇವಲ ಮಾನವ ಜಾತಿಗೇ ಮಾತ್ರವಲ್ಲ. ಪ್ರಾಣಿಗಳಿಗೂ ಅಗತ್ಯ ಎಂಬ ಘನವಾದ ತತ್ವವನ್ನು ಬೋಧಿಸುತ್ತದೆ. ಏಕೆ ಈ ವಿಷಯ ಪ್ರಸ್ತಾಪವಾಯಿತೆಂದರೆ ವಿಜಯನಗರದ ರಾಜ, ಮಹಾರಾಜರು ಕೇವಲ ತಮ್ಮ ರಾಜ ಪರಿವಾರದವರಿಗೆ ಹಾಗು ಉನ್ನತ ವರ್ಗದವರಿಗೆ ಪ್ರತ್ಯೇಕ ಕಾನೂನುಗಳನ್ನು ಬಳಸದೆ ಸರ್ವ ಸದಸ್ಯರಿಗೂ ಏಕರೀತಿಯ ಕಾನೂನು, ಶಿಕ್ಷೆಯನ್ನು ಜಾರಿಗೆ ತಂದಿದ್ದು, ಸರ್ವ ಧರ್ಮವನ್ನು ಸಮನ್ವಯವಾಗಿ ಕಂಡಿದ್ದು ಹಾಗೂ ಸತ್ಯ - ಧರ್ಮದ ಆಧಾರದ ಮೇಲೆ ಆಳ್ವಿಕೆ ನಡೆಸಿರುವುದಕ್ಕೆ ನಿದರ್ಶನವಾಗಿ ನೀಡಲಾಗಿದೆ. ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿಯಲ್ಲಿ ರಾಜ, ಮಹಾರಾಜರ ಪಾತ್ರವು ಜನತೆಯ ಮೇಲೆ ವಿಶಿಷ್ಟವಾದ ಪಾತ್ರ ಸಾರವಾದ ಸತ್ಯವನ್ನು ಪ್ರಮುಖವಾಗಿ ಆಶ್ರಯಿಸಬೇಕಾದದ್ದು ಅಗತ್ಯವಲ್ಲವೆ? ಸಾಮ್ರಾಜ್ಯದ ಜೊತೆಯಲ್ಲಿಯೇ ಅಹಿಂಸೆ, ಕಾರ್ಯಶ್ರದ್ಧೆ, ಸನೇಹಪರತೆ, ಅನುಕಂಪ, ಸಹೃದಯಭಾವ ಪರೋಪಕಾರಿ ಬುದ್ಧಿ ಮೊದಲಾದ ಸದ್ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಆಳ್ವಿಕೆ ನಡೆಸಿದರೆನ್ನಬಹುದು. ಇಂತಹ ಉದಾತ್ತ ಗುಣಗಳನ್ನು ಸಾಮ್ರಾಜ್ಯಕ್ಕೆ ಬೋಧಿಸುವ ಸಲುವಾಗಿಯೋ ಏನೋ ಎಂಬಂತೆ ರಾಜಧಾನಿಯ ತುಂಬೆಲ್ಲ ಹೊತೆಗೆ ಸಾಮ್ರಾಜ್ಯದಾದ್ಯಂತ ತಮ್ಮದೆ ಶೈಲಿಯಲ್ಲಿ ಬೃಹತ್ ದೇವಾಲಯಗಳನ್ನು ನಿರ್ಮಿಸಿ ಇಂದಿನ ಪೀಳಿಗೆಗೆ ಅದರ್ಶರಾಗಿದ್ದಾರೆ. ಅವರ ಉದ್ದೇಶ, ಉಪದೇಶಗಳನ್ನು ಸ್ಮರಿಸಿಕೊಂಡು ಆಚರಿಸುವುದು ಸಮಾಜ ಜೀವನದ ಪ್ರಗತಿಯ ದೃಷ್ಟಿಯಿಂದ, ಸಂಸ್ಕೃತಿಯ ಉಳಿವಿನ ದೃಷ್ಟಿಯಿಂದ ಅತ್ಯವಶ್ಯಕವಾಗಿದೆ.

ವಿಶಾಲವಾದ ಭರತಖಂಡದಲ್ಲಿ ನಮ್ಮ ರಾಜ್ಯವು ಅತ್ಯಂತ ಪ್ರಾಚೀನವಾದುದೆನಿಸಿದೆ. ಈ ನಾಡಿನಲ್ಲಿ ವೇದಪೂರ್ವ ಕಾಲದಿಂದಲೂ ಒಂದು ಉನ್ನತವಾದ ಸಂಸ್ಕೃತಿಯು ಬೆಳೆದು ಬಂದಿದೆಯೆಂಬುದು ಹಂಪಿ, ಆನೆಗುಂದಿ, ಸನ್ನತಿ, ತಿರುಮಕೂಡಲ ನರಸೀಪುರ, ಹೆಮ್ಮಿಗೆ, ಮೊದಲಾದ ಭೂ ಸಂಶೋಧನೆಗಳಿಂದ ಸ್ಪಷ್ಟಗೊಂಡಿದೆ. ಈ ನಾಡಿನಲ್ಲಿ ಮೊದಲು ದ್ರಾವಿಡರಿದ್ದರೆಂದೂ ಅನಂತರ ಆರ್ಯರು ಬಂದು ತಮ್ಮ ಪ್ರಭಾವ ಬೀರಿದರೆಂದೂ ಕಾಲಕ್ರಮದಂತೆ ಈ ಎರಡು ಬಣದವರೂ ತುಂಗೆ - ಭದ್ರೆಯಂತೆ, ಕಾವೇರಿ - ಕಪಿಲೆಯಂತೆ ಬೆರೆತು ಇಂದಿನ ಕನ್ನಡನಾಡಿನ ಸಂಸ್ಕೃತಿ ಉದಯಿಸಿತೆಂದೂ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಂದಿನ ಕರ್ನಾಟಕ ಸಂಸ್ಕೃತಿಯಲ್ಲಿ ಅದರಲ್ಲಿಯೂ ಕರ್ನಾಟಕದ ಹಿಂದೂ ಸಂಸ್ಕೃತಿಯಲ್ಲಿ ಭಕ್ತಿಪಂಥ, ತತ್ವಜ್ಞಾನಿಗಳ ಪ್ರಭಾವ, ಬೌದ್ಧ ಧರ್ಮದ ಪ್ರಭಾವ, ಜೈನರ ಅಹಿಂಸಾಧರ್ಮ, ವಚನಕಾರರ ಪ್ರಭಾವ, ಪವಾಡ ಪುರುಷರ ಪ್ರಭಾವಗಳೆಲ್ಲವೂ ಒಟ್ಟುಗೂಡಿಕೊಂಡಿರುವುದು ಕಂಡು ಬರುತ್ತದೆ. ಬೀದರ್ ನಿಂದ ಚಾಮರಾಜನಗರದವರೆವಿಗೂ ಲಕ್ಷಗಟ್ಟಲೇ ಸನಾತನ ಧರ್ಮದ ಅನುಯಾಯಿಗಳನ್ನು ನಾವಿಂದು ಕಾಣುತ್ತಿರುವುದು ಹಾಗೂ ಏಕ ಪ್ರಕಾರವಾದ ಕರ್ನಾಟಕ ಸಂಸ್ಕೃತಿಯನ್ನು ಬೀದರ್ ಕೋಟೆಯಿಂದ ಹಿಡಿದು ಮೈಸೂರು ಕೋಟೆಯವರೆವಿಗೂ ಇರುವ ಪುಣ್ಯಕ್ಷೇತ್ರಗಳಲ್ಲಿ ಒಂದೇ ವಿಧವಾದ ದೇವರ ಪೂಜಾದಿಗಳನ್ನು ನೋಡಬಹುದಾಗಿದೆ. ಈ ದೃಷ್ಟಿಯಿಂದ ಇಲ್ಲಿ ಸಂಸ್ಕೃತಿಯನ್ನು ಉಪಸಂಸ್ಕೃತಿ ಹಾಗೂ ಬಹುಸಂಸ್ಕೃತಿ ಎಂದು ವಿಭಾಗಿಸಿರುವುದು ಸರಿಯಾದ ಕ್ರಮವಲ್ಲವೆಂದು ಹೇಳಬಹುದು. ಸಂಸ್ಕೃತಿಯು ಸಾವಿರಾರು ವರ್ಷಗಳಿಂದ ಒಂದೇ ಪ್ರಕಾರವಾಗಿ ನಡೆದುಕೊಂಡು, ಆಚರಿಸಿಕೊಂಡು ಬರುತ್ತಿರುವುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವ ಸಂಗತಿಯಾಗಿದೆ ಎಂದೇ ಹೇಳಬಹುದು. ವಿವಾಹ, ನಾಮಕರಣ, ಉಪನಯನ, ಜಾತಿವ್ಯವಸ್ಥೆ ಮೊದಲಾದ ವಿಧಿ - ವಿಧಾನಗಳಲ್ಲಿಯೂ ಇವೇ ಪ್ರಕಾರದ ಆಚರಣೆಗಳನ್ನು ನಾವು ಇಂದಿಗೂ ಹೆಚ್ಚು ಹೆಚ್ಚಾಗಿಯೇ ನೋಡುತ್ತಿದ್ದೇವೆ. ಇವುಗಳೆಲ್ಲವೂ ನಮ್ಮ ಸನಾತನ ಸಂಸ್ಕೃತಿಯ ಪ್ರಭಾವವೆನ್ನಬಹುದೇನೊ?

ಹಿಂದಿನ ಕಾಲದಿಂದಲೂ ತಂದೆ, ತಾಯಿ, ಗುರು ಮತ್ತು ಅತಿಥಿಗಳಿಗೆ ಹೆಚ್ಚಿನ ಮನ್ನಣೆಯನ್ನು ಕೊಡುವ ಸಂಪ್ರದಾಯ ನಮ್ಮ ಸಮಾಜದಲ್ಲಿದೆ. ಇದಕ್ಕೆ ಮೂಲ ಕಾರಣವೆಂದರೆ “ಮಾತೃ ದೇವೋಭವ, ಪಿತೃ ದೇವೋಭವ, ಅತಿಥಿ ದೇವೋಭವ ಎಂಬುವ ವೇದವಾಕ್ಯವೆನ್ನಬಹುದು. ಇದೇ ವೇದಗಳಲ್ಲಿಯೇ ‘ಸತ್ಯಂವದ ಧರ್ಮಂಚರ’ ಎಂಬು ಮಾತುಗಳೂ ಸಹ ಇವೆ. ಸತ್ಯವನ್ನು ಹೇಳು, ಧರ್ಮವನ್ನು ಮಾಡು ಎಂದು ಇದರ ಅರ್ಥ. ಇದೇ ಅರ್ಥವನ್ನು ರಾಮಾಯಣ, ಮಹಾಭಾರತಗಳು ಸಾರುತ್ತದೆ. ಇವೆಲ್ಲವೂ ನಮ್ಮ ಸಂಸ್ಕೃತಿಯ, ಸಮಾಜದ ಜೀವನದ ಪರಿಶುದ್ಧತೆಗಾಗಿಯೇ ಉದಯಿಸಿದೆ ಅನ್ನಬಹುದು. ಈ ಆಧಾರದ ಮೇಲೆ ನಮ್ಮ ನಾಡಿನ ಸಾವಿರಾರು ವರ್ಷಗಳ ಚರಿತ್ರೆಯಿಂದ ನಾವು ನಮ್ಮ ಸಂಸ್ಕೃತಿಯ ಪ್ರಭಾವವನ್ನು ಹಲವಾರು ಸನ್ನಿವೇಶಗಳಲ್ಲಿ ಅರಿಯಬಹುದಾಗಿದೆ.

ಮೇಲಿನವೆಲ್ಲವೂ ಪ್ರಾಚೀನ ರಾಜಕೀಯದಲ್ಲಿ ಕಂಡುಬರುವ ನಿರಂತರ ಕ್ರಿಯೆಗಳೆ. ಆದರೆ ರಾಜಕೀಯದ ಅಸ್ಥಿರತೆ, ಕಚ್ಚಾಟಗಳು ಮತ್ತು ಕಾಲಕಾಲಕ್ಕೆ ಬದಲಾವಣೆಗೊಳ್ಳುವುದಕ್ಕೆ ಅನುಗುಣವಾಗಿ ಜನಜೀವನವೂ ಬದಲಾಗುತ್ತಿರುತ್ತದೆ. ಯಾವ ರಾಜನೇ ಅಧಿಕಾರಕ್ಕೆ ಬರಲಿ,

ಯಾವ ವಂಶವೇ ಪದಚ್ಯುತವಾಗಲಿ (ಇಂದಿನ ಮಟ್ಟಿಗೆ ಯಾವ ಪಕ್ಷದ ನೇತೃತ್ವದ ಸರ್ಕಾರವೇ ಆಳ್ವಿಕೆಗೆ ಬರಲಿ, ಅಥವಾ ಸರ್ವಾಧಿಕಾರಿ ಪದ್ಧತಿಯೇ ಜಾರಿಗೆ ಬರಲಿ) ಜನ ಜೀವನ ನಿರಂತರ ಪ್ರವಾಹದೋಪಾದಿಯಲ್ಲಿ ಒಂದೇ ರೀತಿ ವಿಕಾಸಗೊಳ್ಳಬೇಕಾದುದು ಅವಶ್ಯಕವಾಗಿದೆ. ಅದಕ್ಕೆ ತಕ್ಕ ಮಾರ್ಗವನ್ನು ವಿಜಯನಗರದ ಅರಸರು ಪ್ರಾರಂಭದಿಂದಲೇ ಕಂಡುಕೊಂಡಿದ್ದರೆಂದು ಹೇಳಬಹುದು. ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ಹೇಳುವ ಹಾಗೆ "ಪ್ರಬಲನಾದ, ಧರ್ಮಿಷ್ಟನಾದ, ಸುಸಂಸ್ಕೃತನಾದ ರಾಜ ಬಂದಾಗ ಅದರ ಫಲವಾಗಿ ಪ್ರಜೆಗಳ ಜೀವನ ಹೆಚ್ಚು ನೆಮ್ಮದಿಯಿಂದ ಕೂಡಿ ಕಲಾತ್ಮಕವಾದ ಅನುಭವವನ್ನು ಸವಿಯಲು ಸಾಧ್ಯವಾಗುವುದು ನಿಜ. ದುರ್ಬಲ ರಾಜ್ಯಗಳು ಶತ್ರುಗಳು ದಾಳಿಗೆ ಈಡುವಾಗ, ಪ್ರಜೆಗಳು ದುಃಖಿತರಾಗುತ್ತಿದ್ದದನ್ನೂ ಇಲ್ಲವೆನ್ನುವಂತಿಲ್ಲ. ಆದರೆ ಜನಜೀವನದ ಸಾಮಾನ್ಯ ರೂಪ, ಅವರ ಬಾಳಿನ ಶ್ರದ್ಧೆ ನಂಬಿಕೆ, ಬೆಳವಣಿಗೆ ಶಕ್ತಿಗಳು ರಾಜನನ್ನೂ ರಾಜವಂಶವನ್ನು ಪ್ರಧಾನವಾಗಿ ಅವಲಂಬಿಸಿರಲಿಲ್ಲ. ಅದರ ಬದಲು ಆಗ ತಾತ್ವಿಕವಾದ ಸಂಸ್ಕೃತಿಯ ತಳಹದಿಯ ಮೇಲೆ ಅವು ರೂಪಿತವಾಗಿದ್ದುವು. ಅದ್ದರಿಂದಲೇ ರಾಜರ ಏಳು - ಬೀಳುಗಳ ನಿರಂತರ ಹೋರಾಟವು ಮಧ್ಯ ಯುಗದಲ್ಲಿನ ಜನಜೀವನ, ಸಧೃಡವಾದ ತಳಹದಿಯ ಮೇಲೆ ಬೆಳೆದು ಬಂದಿತು" ಎಂದು ಸ್ಪಷ್ಟವಾಗಿ ಹೇಳಿದ್ದಾರೆ ಒದು ಸರಿಯೂ ಕೂಡ.

**೪.೧. ಕೇಂದ್ರ ಹಾಗೂ ಸ್ಥಳೀಯ ಆಡಳಿತ**

ಸಾಮ್ರಾಜ್ಯದಲ್ಲಿ ಏನೆಲ್ಲ ಪದ್ಧತಿಗಳಿದ್ದರೂ ಸಹ ಅತ್ಯುತ್ತಮವಾದ ಅಂಶಗಳನ್ನೆಲ್ಲಾ ಅಳವಡಿಸಿಕೊಂಡು ಒಳ್ಳೆಯ ವಿಜಯನಗರದರಸರು ಪ್ರಯತ್ನಿಸಿರುವುದು ಕಂಡುಬರುತ್ತದೆ. ಪ್ರಾಚೀನ ಗ್ರಂಥಗಳಲ್ಲಿ ಅದರಲ್ಲಿಯೂ ವೇದಗಳಲ್ಲಿ ಸಾರಿರುವ ಹಾಗೆ ದೇಶಕ್ಕೆ ಅಥವಾ ಸಾಮ್ರಾಜ್ಯಕ್ಕೆ ಸುವ್ಯವಸ್ಥಿತವಾದ ಆಡಳಿತ ನೀಡಲು ಬೇಕಾಗಿರುವ ಮುಖ್ಯ ಅಂಶಗಳು ಏಳು, ಅವುಗಳೆಂದರೆ ರಾಜ, ಅಮಾತ್ಯ, ಜನಪದ ದುರ್ಗ, ಕೋಶ, ದಂಡ (ಸೈನ್ಯ) ಮತ್ತು ಮಿತ್ರ. ಈ ಏಳು ಅಂಶಗಳಲ್ಲಿಯೂ ವಿಜಯನಗರವು ಅಗ್ರಸ್ಥಾನದಲ್ಲಿದ್ದಿತ್ತೆನ್ನಬಹುದು. ಹರಿಹರ, ಬುಕ್ಕ, ೨ನೇ ದೇವರಾಯ, ಕೃಷ್ಣದೇವರಾಯ ಇವರೇ ಮೊದಲಾದ ರಾಜಮಹಾರಾಜರುಗಳ ಕಾಲದಲ್ಲಿ ಸಾಮ್ರಾಜ್ಯದ ಅಡಳಿತ ವ್ಯವಸ್ಥೆಯು ಅತ್ಯುನ್ನತ ಮಟ್ಟವನ್ನೇರಿತು, ಆಡಳಿತ ನಿರ್ವಹಣೆಯಲ್ಲಿ ರಾಜನಿಗೆ ಸಹಾಯಕವಾಗಲು ಅನೇಕ ಸಂಸ್ಥೆಗಳು ಹುಟ್ಟಿಕೊಂಡಿದ್ದವು, ಇವುಗಳಿಗೆ ನಾಡು, ಮಹಾಜನ, ವ್ಯಾಪಾರೀ ಸಂಸ್ಥೆಗಳು, ಕೈಗಾರಿಕಾ ಸಂಘಗಳು, ಮುಂತಾದವುಗಳನ್ನು ಉದಾಹರಣೆಯಾಗಿ ನೀಡಬಹುದಾಗಿದೆ. ಇವುಗಳೆಲ್ಲವುಗಳಿಗಿಂತಲೂ ಮುಖ್ಯವಾಗಿ ಮಂತ್ರಿ ಮಂಡಲಿಯನ್ನೊಳಗೊಂಡ ರಾಜಸಭೆ, ಕೇವಲ ಮಂತ್ರಿ ಮಂಡಲದಿಂದ ಕೂಡಿದ ಸಭೆ ಒಂದು ಹಾಗೂ ಮಂತ್ರಿಗಳನ್ನು ಒಳಗೊಂಡ ಇತರ ಪ್ರಾಂತ್ಯದ ಅಧಿಕಾರಿಗಳನ್ನು ಮತ್ತು ಪ್ರಮುಖರನ್ನು ಒಳಗೊಂಡ ದೊಡ್ಡ ಪರಿಷತ್ತು ಇನ್ನೊಂದಿತ್ತೆಂದು ಕಂಡುಬರುತ್ತದೆ. ಇದರಲ್ಲಿ ಧರ್ಮಗುರುಗಳು ಮುಖ್ಯ ಪಂಡಿತರು, ಕವಿಗಳು, ಕಲಾವಿದರುಗಳೂ ಸಹ ರಾಜಸಭೆಯಲ್ಲಿ (ದೊಡ್ಡ ಸಭೆ)ರುತ್ತಿದ್ದರು. ಪ್ರಮುಖ ನಿರ್ಣಯಗಳ ನಿರ್ಧಾರವು ಚಿಕ್ಕ ಸಭೆಯಾಗಿದ್ದ 'ಮಂತ್ರಿ ಮಂಡಲ'ದಲ್ಲಿ ನಡೆಯುತ್ತಿದ್ದವು. ವಿಜಯನಗರದರಸರ ಕಾಲದಲ್ಲಿ ಮಹಾರಾಜರ ಹತ್ತಿರದ ಸಂಬಂಧಿಗಳೂ ಅಸ್ಥಾನದಲ್ಲಿ ಮಂತ್ರಿಗಳಾಗಿರುತ್ತಿದ್ದು ಕಂಡುಬರುತ್ತದೆ. ವಿಜಯನಗರದ ಕಾಲದಲ್ಲಿ ರಾಷ್ಟ್ರಕೂಟರ ಕಾಲದಲ್ಲಿದ್ದಂತೆಯೇ ಪುರೋಹಿತನ ಪಾತ್ರವು ಮಂತ್ರಿ ಮಂಡಲಗಳಲ್ಲಿ ಪ್ರಧಾನವಾಗಿದ್ದಂತೆ ಕಂಡುಬರುವುದಿಲ್ಲ. ಅವರ ವ್ಯಾಪ್ತಿಯು ಕೇವಲ ಧಾರ್ಮಿಕ ವಿಧಿವಿಧಾನಗಳಿಗೆ ಮಾತ್ರ ಮೀಸಲಿರುವುದು ಕಂಡುಬರುತ್ತದೆ.

ರಾಜನಿಗೆ ಬೇಕಾಗಿರುವವರೆಗೂ ಮಂತ್ರಿ ಅಧಿಕಾರದಲ್ಲಿರುತ್ತಿದ್ದ. ಏಕೆಂದರೆ ರಾಜನ ವ್ಯಕ್ತಿತ್ವದ ಅಧಿಕಾರವೇ ಕೊನೆಯ ನಿರ್ಣಾಯಕ ಅಂಶ, ಈ ದೃಷ್ಟಿಯಲ್ಲಿ ರಾಜ ಮನಸ್ಸು ಮಾಡಿದರೆ ಮಂತ್ರಿಗಳನ್ನು ಮಂತ್ರಿ ಪದವಿಯ ಜೊತೆಗೆ ಪ್ರಾಂತ್ಯಗಳ ಸಾಮಂತ ರಾಜರನ್ನಾಗಿಯೂ ನೇಮಿಸುತ್ತಿದ್ದುದು ಉಂಟು. ಉದಾಹರಣೆಗೆ ಎರಡನೇ ದೇವರಾಯನ ಮಹಾಮಂತ್ರಿಯಾದ ಲಕ್ಕಣ ದಂಡೇಶನು ಒಂದು ಪ್ರಾಂತ್ಯದ ಮುಖ್ಯ ಅಧಿಕಾರಿಯೂ ಆಗಿದ್ದನು, ಪ್ರಧಾನಿ ಉಪಪ್ರಧಾನಿ, ಮಹಾಪ್ರಧಾನಿ, ಶಿರಪ್ರಧಾನಿ, ಸರ್ವಶಿರ ಪ್ರಧಾನಿ ಮೊದಲಾದ ಹೆಸರುಗಳು ಅನೇಕ ಶಾಸನಗಳಲ್ಲಿ ಸಿಕ್ಕುತ್ತವೆ. ಇವು ಮಂತ್ರಿಗಳಲ್ಲಿ ಅನೇಕ ಶ್ರೇಣಿಗಳಿದ್ದವೆಂಬುದನ್ನು ಸೂಚಿಸುತ್ತದೆ. ದಂಡನಾಯಕ ಎಂಬ ಹುದ್ದೆಯು ಸೈನ್ಯದ ನಾಯಕ ಮತ್ತು ಆಡಳಿತದ ಮುಖ್ಯಾಧಿಕಾರಿ ಎಂಬ ಎರಡು ಅರ್ಥವನ್ನು ಸೂಚಿಸುತ್ತದೆ. ಇದು ಅತ್ಯಂತ ಪ್ರಾಚೀನ ಕಾಲದಿಂದಲೂ ಚಾಲ್ತಿಯಲ್ಲಿರುವುದು ಕಂಡು ಬರುತ್ತದೆ ಯುದ್ಧ ನಿರ್ವಹಣೆ ಶಾಂತಿ ಸ್ಥಾಪನೆ, ರಾಜ್ಯಾಡಳಿತ, ಅರಮನೆಯ ವ್ಯವಸ್ಥೆಯಲ್ಲಿ ಇವನ ಪಾತ್ರ ಪ್ರಮುಖವಾಗಿರುತ್ತಿತ್ತೆಂದು ಹೇಳಬಹುದು.

ಆಡಳಿತದ ದೃಷ್ಟಿಯಿಂದ ಸಾಮ್ರಾಜ್ಯದಲ್ಲಿ ಈ ಕೆಳಕಂಡ ವಿಭಾಗಗಳನ್ನು ಮಾಡಿಕೊಂಡಿದ್ದು ಕಂಡುಬರುತ್ತದೆ. ಇದು ಅನಿವಾರ್ಯವೂ ಆಗಿತ್ತು. ಅವುಗಳೆಂದರೆ ನಾಡು, ವಿಷಯ, ರಾಷ್ಟ್ರ, ಕಂಪಣ, ಗ್ರಾಮ, ಹಳ್ಳಿ ಮೊದಲಾದ ವಿಭಾಗಗಳು ಪ್ರಾಚೀನ ಕರ್ನಾಟಕದಲ್ಲಿಯೇ (ಗಂಗರು, ಕದಂಬರಿಗಿಂತ ಹಿಂದೆಯೇ) ಅಸ್ತಿತ್ವಕ್ಕೆ ಬಂದಿದ್ದವೆಂದು ತೋರುತ್ತದೆ. ಮುಂದೆ ರಾಷ್ಟ್ರಕೂಟರ ಕಾಲದಲ್ಲಿ ಇವುಗಳ ವಿಭಾಗ ಕ್ರಮವು ವ್ಯತ್ಯಾಸಗೊಂಡಿತು. ರಾಷ್ಟ್ರಕೂಟರ ದಶ ಶಾಸನಗಳು ಸಾಮಾನ್ಯವಾಗಿ ರಾಷ್ಟ್ರಪತಿ, ವಿಷಯಪರೆ, ಗ್ರಾಮಕೂಟಗಳ ಅಧಿಕಾರಿಗಳನ್ನು ಕ್ರಮಬದ್ಧವಾಗಿಯೇ ಸೂಚಿಸುತ್ತವೆ. ಅದ್ದರಿಂದ ಇಲ್ಲಿ 'ರಾಷ್ಟ್ರ' ಎಂಬುವುದೇ ಅತಿದೊಡ್ಡ ವಿಭಾಗವಾಗಿದ್ದಿತ್ತೆಂದು ಸ್ಪಷ್ಟಪಡುತ್ತದೆ. 'ವಿಷಯ' ಎಂಬುದು ರಾಷ್ಟ್ರ ಎಂಬುದರ ಒಂದು ಒಳವಿಭಾಗ, ವಿಷಯದ ನಂತರ ಬರುತ್ತಿದ್ದ ವಿಭಾಗವೆಂದರೆ 'ಭುಕ್ತಿ' ಭುಕ್ತಿಯ ಆಳ್ವಿಕೆ ನೋಡಿಕೊಳ್ಳುತ್ತಿದ್ದ ಅಧಿಕಾರಿಯನ್ನು ಭೋಗಾಪತಿ ಅಥವಾ ಭೋಗಿಕ ಎಂದು ಕರೆಯಲಾಗುತ್ತಿತ್ತು, ಭುಕ್ತಿಯು ೧೦೦ ರಿಂದ ೫೦೦ ಹಳ್ಳಿಗಳನ್ನೊಳಗೊಂಡಿದ್ದ ವಿಭಾಗವಾಗಿದ್ದಿತು. ಭುಕ್ತಿಯಲ್ಲಿರುವ ಹಳ್ಳಿಗಳಲ್ಲಿ ಅನೇಕ ವಿಭಾಗಗಳಿರುತ್ತಿದ್ದುವು ಪ್ರಮುಖವಾದ ಒಂದು ಹಳ್ಳಿ ಅದರ ಸುತ್ತ ಅದಕ್ಕೆ ಸೇರಿದಂತೆ ಕೆಲವು ಹಳ್ಳಿಗಳ ಗುಂಪುಗಳು ವಿಭಾಗಿಸಿಕೊಂಡಿದ್ದವು.

ಸಾಮ್ರಾಜ್ಯದ ವಿಭಾಗಗಳಲ್ಲಿಯೇ ಅತಿ ಚಿಕ್ಕ ಮೂಲ ಘಟಕವೆಂದರೆ ಹಳ್ಳಿ ಅಥವಾ ಗ್ರಾಮ. ಪ್ರತಿಯೊಂದು ಹಳ್ಳಿಯು ಒಬ್ಬೊಬ್ಬ ಗ್ರಾಮದ ಮುಖಂಡನ ಆಡಳಿತಕ್ಕೊಳಪಟ್ಟಿರುತ್ತಿತ್ತು. ಇವನನ್ನು ಗ್ರಾಮಕಕಟ, ಗಾವುಂಡ, ಗೌಡ ಮುಂತಾದ ಹೆಸರುಗಳಿಂದ ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಈ ಹುದ್ದೆಯು ಅಂಶ ಪಾರಂಪರ್ಯವಾಗಿಯೇ ಬರುತ್ತಿತ್ತು. ಈತನು ಒಂದು ಕಡೆ ಸರ್ಕಾರದ ಅಧಿಕಾರಿಯಾಗಿ ಗ್ರಾಮೀಣ ಪ್ರದೇಶದಲ್ಲಿ ತೆರಿಗೆ ವಸೂಲಿಮಾಡಿ ಸರ್ಕಾರಕ್ಕೆ ಸಲ್ಲಿಸುತ್ತಿದ್ದ. ಅದೇ ರೀತಿ ಜನರ ಪ್ರತಿನಿಧಿಯಾಗಿ ಗ್ರಾಮದಲ್ಲಿ ಶಾಂತಿ ಸುಭಿಕ್ಷೆಯನ್ನು ಕಾಪಾಡುವ ಕೆಲಸವನ್ನು ನಿರ್ವಹಿಸುತ್ತಿದ್ದ, ಆದರೆ ಇವನ ದರ್ಪ ಆಳ್ವಿಕೆಯು ಸಾಮಾನ್ಯ ಜನರಿಗೆ ನೋವನ್ನುಂಟು ಮಾಡುತ್ತಿದ್ದಿದ್ದಕ್ಕೆ ಅನೇಕ ಆಧಾರಗಳಿವೆ. ಇವನು ಸರ್ಕಾರಕ್ಕೆ ಸಲ್ಲಿಸುವ ಸೇವೆಗೆ ಪ್ರತಿಫಲವಾಗಿ ಸರ್ಕಾರವು ಈತನಿಗೆ ಜಮೀನಿನ ರೂಪದಲ್ಲಿ ಅಥವಾ ಧಾನ್ಯದ ಉತ್ಪತ್ತಿಯ ರೂಪದಲ್ಲಿ ಪ್ರತಿಫಲ ನೀಡುತ್ತಿತ್ತು. ಗೌಡನಿಗೆ ಸಹಾಯಕವಾಗಿ ಲೆಕ್ಕ ಪತ್ರಗಳನ್ನಿಡುವ ಕರಣಿಕನೊಬ್ಬನು ಇರುತ್ತಿದ್ದನು.

ಬೃಹತ್ ಸಾಮ್ರಾಜ್ಯವನ್ನು ನೋಡಿಕೊಳ್ಳಲು ಸುಸಜ್ಜಿತವಾದ ಕಾವಲು ಪಡೆ ಎರಡು ರೀತಿಯಲ್ಲಿ ಬೆಳೆದುಬಂದಿತು. ಅದರಲ್ಲಿ ಒಂದನೆಯದು ಸರ್ಕಾರವೇ ವ್ಯವಸ್ಥೆಗೊಳಿಸಿದುದು; ಇನ್ನೊಂದು ಜನರೇ ತಮ್ಮ ರಕ್ಷಣೆಗಾಗಿ ಸ್ವಯಂಪ್ರೇರಿತರಾಗಿ ನಿರ್ಮಿಸಿಕೊಂಡುದುದು. ಇವರು ಸಾಮ್ರಾಜ್ಯವನ್ನು ಶಾಂತಿ ಮತ್ತು ಕಾನೂನು ಪಾಲನೆ, ಅಪರಾಧಿಗಳನ್ನು ಪತ್ತೆ ಹಚ್ಚುವುದು ಮೊದಲಾದ ಕಾರ್ಯಗಳಲ್ಲಿ ನೆರವಾಗುತ್ತಿದ್ದರೆಂದು ತಿಳಿದು ಬರುತ್ತದೆ. ರಾಜಧಾನಿ ಹಂಪಿ (ವಿಜಯನಗರ)ಯನ್ನು ಕೆಲವು ವಿಭಾಗಗಳಾಗಿ ವಿಂಗಡಿಸಿ ಒಂದೊಂದು ವಿಭಾಗಕ್ಕೂ ಕಾವಲು ಪಡೆಯ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಕಾವಲು ಪಡೆಯ ಕಾರ್ಯ ವೈಖರಿ ಹಾಗೂ ಅವರ ವಿಧಿವಿಧಾನಗಳ ಕುರಿತು ವಿದೇಶಿ ಪ್ರವಾಸಿಗರಾದ ನೂಯಿಜ್ (Nuiz) ಸಂಕ್ಷಿಪ್ತವಾಗಿ ಹೇಳುತ್ತಾನೆ. ನ್ಯಾಯ ತೀರ್ಮಾನದಲ್ಲಿ ಕಟ್ಟಕಡೆಯ ಮಾತು ರಾಜನದೇ ಅವನೇ ಸರ್ವೋಚ್ಛ ನ್ಯಾಯಾಧಿಕಾರಿಯಾಗಿದ್ದನು. ರಾಜನು ಆದಷ್ಟು ಮಟ್ಟಿಗೆ ಕಾನೂನಿನ ಚೌಕಟ್ಟಿನಲ್ಲಿಯೇ ಕಾರ್ಯಗತಗೊಳಿಸುವವನಾಗಿದ್ದನೇ ಹೊರತು, ತಾನೇ ಕಾನೂನು ಸೃಷ್ಟಿಸುವವನಾಗಿರಲಿಲ್ಲವೆಂದು ಹೇಳಬಹುದು. ಕಾನೂನುಗಳನ್ನು ತುಂಬ ಕಟ್ಟುನಿಟ್ಟಾದ ರೀತಿಯಲ್ಲಿ ಕಾರ್ಯ ರೂಪಕ್ಕೆ ತರುತ್ತಿದ್ದರು. ಅವನ್ನು ಮೀರಿದವರಿಗೆ ಕಠಿಣವಾದ ಶಿಕ್ಷೆ ವಿಧಿಸುವುದಕ್ಕೂ ಹಿಂದೆ ಮುಂದೆ ನೋಡುತ್ತಿರಲಿಲ್ಲ. ಹಳ್ಳಿಗಳಲ್ಲಿ ಗ್ರಾಮಸಭೆಗಳೇ ನ್ಯಾಯ ನಿರ್ವಹಣೆಯ ಅಧಿಕಾರವನ್ನು ನಿರ್ವಹಿಸುತ್ತಿರಲಿಲ್ಲ. ರಾಜನಿಂದ ನಿಯಮಿತವಾದ ಅಧಿಕಾರಿಯೊಬ್ಬನು ಇವುಗಳ ನ್ಯಾಯ ತೀರ್ಮಾನದ ಕ್ರಮಗಳನ್ನು ಪರಿಶೀಲಿಸುತ್ತಿದ್ದನ್ನೆಂಬುದಕ್ಕೆ ವಿಜಯನಗರದ ಶಾಸನಗಳಲ್ಲಿ ಸಾಕ್ಷಿಗಳು ದೊರಕುತ್ತದೆ. ರಾಜ್ಯಾಧಿಕಾರಿಗಳೂ, ಸಾಮಂತರ ಬಹುಮಟ್ಟಿಗೆ ಸ್ವಾತಂತ್ರವಾಗಿಯೇ ತಮ್ಮ ವಿಭಾಗದಲ್ಲಿ ತಾವೇ ನ್ಯಾಯ ತೀರ್ಮಾನ ಮಾಡುತ್ತಿದ್ದರು.

### ೪.೨. ಸೈನ್ಯ ವ್ಯವಸ್ಥೆ ಮತ್ತು ಅವರ ಸ್ಥಿತಿಗತಿ

ವಿಜಯನಗರ ಸಾಮ್ರಾಜ್ಯವು ತನ್ನ ವೈಭವದ ತುತ್ತತುದಿಯನ್ನು ಮುಟ್ಟಬೇಕಾದರೆ ಪ್ರಮುಖವಾಗಿ ಪರಿಗಣಿಸಬೇಕಾದ ಅಂಶವೆಂದರೆ ಸೈನ್ಯದ ವ್ಯವಸ್ಥೆ, ಸುಭದ್ರವಾದ ಸಾಮ್ರಾಜ್ಯದ ಸ್ಥಾಪನೆಗೆ ಸೈನ್ಯವೇ ತಳಹದಿ, ಅದರಲ್ಲಿಯೂ ತನ್ನ ನೆರೆಹೊರೆಯವರು ಪರಸ್ಪರ

ಹೋರಾಟವನ್ನೇ ರೂಢಿ ಮಾಡಿಕೊಂಡಿದ್ದರಿಂದ ಹಾಗೂ ಅಂದಿನ ರಾಜಕೀಯ ಸನ್ನಿವೇಶಗಳಂತೂ ಸೈನ್ಯವು ಪ್ರಬಲವಾಗಿ ನಿರ್ಮಿತವಾಗುವುದು ಅನಿವಾರ್ಯವಾಗಿತ್ತೆನ್ನಬಹುದು. ಶಕ್ತಿಯುತವಾಗಿ ಕನ್ನಡ ನಾಡನ್ನಾಳಿದ ವಿಜಯನಗರದಲ್ಲಿ ಸೈನ್ಯ ಸಂಪತ್ತು ಅಗಾಧವಾಗಿಯೇ ಬೆಳೆದಿತ್ತು. ಸದಾ ಹೊಂಚು ಹಾಕುತ್ತಿದ್ದ ಮಹಮ್ಮದೀಯರನ್ನು ಹಿಂದೆ ತಳ್ಳಿ, ಸುಭದ್ರವಾದ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಇವರ ಪಾತ್ರ ಹಿರಿದಾದದ್ದು. ಬಿಕ್ಕನ ಸೈನ್ಯದಲ್ಲಿ ೩೦,೦೦೦ ಕುದುರೆಗಳು, ೩.೦೦೦ ಆನೆಗಳು, ೧ ಲಕ್ಷ ಕಾಲಾಳುಗಳು ಇದ್ದವೆಂದು ಫೆರಿಷ್ತಾ ಹೇಳುತ್ತಾನೆ. ಅಬ್ದುಲ್ ರಜಾಕ್ ನು ಬಂದಿದ್ದ ಕಾಲದಲ್ಲಿ ಮೇಲಿನವುಗಳಿಗೆ ಎರಡರಷ್ಟು ಬೆಳೆದಿತ್ತೆಂದು ಅವನು ನೀಡಿರುವ ಅಂಕಿಅಂಶಗಳಿಂದ ಕಂಡುಬರುತ್ತದೆ. ಪಡಯಿಸ್ ಕೂಡ ವಿಜಯನಗರದ ಸೈನ್ಯಶಕ್ತಿಯನ್ನು ಸಂಪೂರ್ಣವಾಗಿ ವರ್ಣಿಸಿದ್ದಾರೆ. ನೂಯಿಜ್ ನು ಕೃಷ್ಣದೇವರಾಯ ಮಹಮ್ಮದೀಯ ಸುಲ್ತಾನನನ್ನು ಎದುರಿಸಲು ಹೋಗಿದ್ದ ಸೈನ್ಯದ ವಿವರಣೆಯನ್ನು ಈ ರೀತಿ ಲೆಕ್ಕ ಹೇಳುತ್ತಾನೆ. ೧೨೦೦ ಆನೆಗಳು, ೬೦,೦೦೦ ಕುದುರೆಗಳು, ಐದು ಲಕ್ಷ ಕಾಲಾಳುಗಳು ಇದ್ದವೆಂದು ವರ್ಣಿಸುತ್ತಾನೆ. ವಿಜಯನಗರದ ಅರಸರು ಸೈನ್ಯವನ್ನು ಅರಿಸಿಕೊಳ್ಳುವಾಗ ಎರಡು ವಿಧಾನಗಳನ್ನು ಅನುಸರಿಸುತ್ತಿದ್ದರು. ಒಂದನೆಯದು: ಸರ್ಕಾರವೇ ನೇರವಾಗಿ ಸೈನಿಕರನ್ನು ಅರಿಸಿಕೊಳ್ಳುವುದು, ಮತ್ತೊಂದು ಆಶ್ರಿತರಾಗಿದ್ದ (ಸಾಮಂತ) ರಾಜರ ಮೂಲಕ ಸೈನಿಕರನ್ನು ಆಯ್ಕೆ ಮಾಡಿ ಬಂದವರನ್ನು ನೇಮಿಸಿಕೊಳ್ಳುವುದು, ಸೈನ್ಯದ ಆಯ್ಕೆಯಲ್ಲಿ ತುಂಬ ಎಚ್ಚರಿಕೆ ವಹಿಸಲಾಗುತ್ತಿತ್ತು. ಇಂದಿನಂತೆಯೇ ಅಂದೂ ಸಹ ಎತ್ತರ, ದೇಹದಾರ್ಢ್ಯತೆ ಮೊದಲಾದುದನ್ನು ಮುಖ್ಯವಾಗಿ ಗಮನಿಸಿಯೇ ಎಲ್ಲದರಲ್ಲಿಯೂ ನಿರಿಕ್ಷಿತ ಮಟ್ಟವನ್ನು ಮುಟ್ಟಿದರೆ ಮಾತ್ರ ಸೈನ್ಯಕ್ಕೆ ಸೇರಿಸಿಕೊಳ್ಳಲಾಗುತ್ತಿತ್ತು. ಅನಂತರ ಸೈನಿಕರಿಗೆ ಯುದ್ಧದ ತರಭೇತಿಯ ಶಿಕ್ಷಣ ನೀಡಿ ಯಾವ ಕ್ಷಣದಲ್ಲಿಯಾದರೂ ಸಂಭವಿಸುತ್ತಿದ್ದ ಯುದ್ಧಕ್ಕೆ ಸೈನ್ಯವು ಸದಾ ಸಿದ್ಧವಾಗುರುವಂತೆ ವ್ಯವಸ್ಥೆಗೊಳಿಸಿಕೊಳ್ಳುತ್ತಿತ್ತು.

ಯುದ್ಧದ ಸಮಯದಲ್ಲಿ ಸೈನ್ಯವನ್ನು ಅನೇಕ ವಿಭಾಗಗಳಾಗಿ ವಿಂಗಡಿಸಿಕೊಳ್ಳಲಾಗುತ್ತಿತ್ತು. ಪ್ರತಿಯೊಂದು ವಿಭಾಗದಲ್ಲಿಯೂ ಸೇವಾಧಿಪತಿಗಳೇ ಮುಖ್ಯಸ್ಥರಾಗಿ, ಇತರ ಅಧಿಕಾರಿಗಳೂ ಇರುತ್ತಿದ್ದರು. ರಾಜರೇ ಮುಂದೆ ನಿಂತು ಸೈನ್ಯವನ್ನು ಹುರಿದುಂಬಿಸಿ ಶತ್ರುಗಳನ್ನು ವಶಪಡಿಸಿಕೊಳ್ಳುತ್ತಿದ್ದರು. ಏಕೆಂದರೆ ಅಂದಿನ ಯುದ್ಧ ತಂತ್ರಗಳಲ್ಲಿ ಕೋಟೆಗಳು ಬಹು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದವು. ಶಾಸನಗಳಲ್ಲಿ ಕನ್ನಡ ಸಾಹಿತ್ಯದ ಗ್ರಂಥಗಳಲ್ಲಿ ಜನಪದ ಗೀತೆಗಳಲ್ಲಿ ಈ ಕೋಟೆ ಕಾಳಗದ ವರ್ಣನೆಗಳು ಹೆಚ್ಚು ಹೆಚ್ಚಾಗಿ ಕಂಡುಬರುತ್ತದೆ. ಸೈನ್ಯವು ಯುದ್ಧಕ್ಕೆ ಹೊರಟಾಗ ಅವರ ಜೊತೆಗೆ ಪ್ರಮುಖ ಅವಶ್ಯಕತೆಗಳನ್ನು ಪೂರೈಸಲು ಒಂದು ದೊಡ್ಡ ವ್ಯವಸ್ಥೆಯೇ ಸಿದ್ಧವಾಗಿರುತ್ತಿತ್ತು. ವ್ಯಾಪಾರಿಗಳು, ಆಡುಗೆಯವರು, ಅಗಸರು, ಇತರ ಕೂಲಿಕಾರರು, ಮನೋರಂಜನೆಗಾಗಿ, ಗಾಯಕರು, ವಾದಕರು, ವೈದ್ಯರು, ಖೋಜಾಗಳು, ವೇಶ್ಯೆಯರು, ಎಲ್ಲರೂ ಯುದ್ಧಕ್ಕೆ ಹೋಗುವ ರೀತಿಯಲ್ಲಿಯೇ ಏರ್ಪಾಡಾಗಿರುತ್ತಿದ್ದರು.

ಸೈನಿಕರು ಯುದ್ಧದಲ್ಲಿ ತಾವು ತೋರಿದ ಪರಾಕ್ರಮ, ವಿರಾವೇಶಗಳಿಗೆ ಮಹಾರಾಜರು ಕೊಡುತ್ತಿದ್ದ ಬಿರುದುಗಳನ್ನು 'ರಾಮನಾಥ ಚರಿತೆ'ದಲ್ಲಿ ನೋಡಬಹುದು. ನಂಜುಂಡ ಕವಿಯು ಈ ವರ್ಣನೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾನೆ, ಡಾ. ಕೆ. ಶ್ರೀಕಂಠಯ್ಯನವರು ತಮ್ಮ ಮಹತ್ವದ ಕೃತಿಯಾದ 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ' ಚಿತ್ರ ಎಂಬುವುದರಲ್ಲಿ ನಂಜುಂಡ ಕವಿಯು ಈ ಬಿರುದುಗಳ ಹಾಗೂ ಶೌರ್ಯ ಪರಾಕ್ರಮಗಳ ಕುರಿತು ಹೇಳಿರುವ ಮಾತನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾರೆ, ಅದನ್ನೆ ಇಲ್ಲಿ ತಿಳಿಸುವುದು ಅವಶ್ಯವೆನ್ನಿಸುತ್ತದೆ.

"ಪಾಯದ ಧಾರೆಂದುಗಡಿಸಿಕೊಂಬ ರಾಯದುರ್ಗದ ರಾಮದೇವ (೧೧ - ೭೭); ಕನಕ ದಂಡದ ಸತ್ತಿಗೆಯ ಕೆಳಗೊಪ್ಪುವ ಪಿನಗುಂಡಿಯ ಕೆಂಪರಾಜ (೧೧ - ೭೯); ಕುಪಿತ ಕುಮಾರರ ಗಂಡನೆನಿಸಿಕೊಂಡ ಕೂಪಣದ ತಿಮ್ಮ ರಾಜನ ಮಗ (೧೧ - ೮೦); ಮೇದಿನಿಯೊಳು ಬಿರುದುಳ್ಳ ಗಂಡನೆಂದೋದಿಸಿ ಕೊಂಬ ಅದವಾನಿಯ ನರಹರಿ (೧೧ - ೮೨); ಎತ್ತಿದ ಕಳುಹಿನ ಹಳವಿಗೆಯ ಗುತ್ತಿಯ ಕಾಚಯ್ಯ (೧೧ - ೮೩) ತುಳುಗಿನ ಸಬಳದ ಸಂದಣಿಯೊಳಗುವ ಮೆಳ್ಳೆವ ತೋಳ್ಳೆಗಲ್ಲ ಜಾಯಿ ಜಕ್ಕೆಯ ಬೊಮ್ಮ (೧೧ - ೮೪); ಕೂಟದ ರಿಪುಗಳ ಗಂಡನೆಂಬೀ ಕೊಂಡಾಟದ ಭಟಕಾಟಣ್ಣ (೧೧ - ೮೭) ಹಿರಿಯುಬ್ಬಣ್ಣದ ಜಡಿಪುರ ಕುದುರೆಯ ಮೇಲೆ ಹರುಷದಿಂಬಹ ಮಾಯಿದೇವನು ಕಂಪಿಲಭೂವರನ ಮೋಹನ ರಾವುತ (೧೧ - ೯೦) ಖಂಡೆಯವೆಸೆದು ಕಯ್ಯೊಳು ಕುದುರೆಯ ತುಂಡುತುಂಡಾಗಿ ಮಗುಚುತ ಒಪ್ಪ ಸಾಯಿದೇವ (೧೧ - ೯೧); ಬೆಳ್ಳಿ ಮಕ್ಕರೆಯ ತೇಜಿಯವನಿವಡಿಳ್ಳಿಯ ಖಾನರ ಗಂಡನೆಂಬ ಬಿರುದುಳ್ಳ ಕೊಳ್ಳಿಯ ನಾಗವನ್ನು (೧೧ - ೨೯); ಕಂಡು ಧಾಳಿಯ ನೊಡೆಯಗೆ ಸುದ್ದಿ ವೇಳ್ವರ ಗಂಡನೆನಿಸಿಕೊಂಬ ಗಿಂಡಿಯಲಕ್ಕ (೧೧ - ೯೩)

ಮೇಲೆ ಕಾಣಿಸಿರುವ ವೀರ ಪುರುಷರ ಪಟ್ಟಿಯಲ್ಲಿ ನಂಜುಂಡ ಕವಿಯು ಮತ್ತೆ ಮತ್ತೆ ಅನೇಕ ಸಂದರ್ಭಗಳಲ್ಲಿ ಕೊಳ್ಳಿಯ ನಾಗದೇವ, ಗಿಂಡಿಯಲಕ್ಕ, ಕಾಳಂಡಿಯ ಕಂಪ, ಅಕ್ಕಸಾಲೆಯ ಚಿಕ್ಕ, ದೇವಿಸೆಟ್ಟಿಯಲಿಂಗ, ಬಲ್ಲುಗರವರುಗಳ ಹೆಸರನ್ನು ಹೇಳಿ, ಕಡೆಯ ಸಾಲಿನಲ್ಲಿ ಅವರು ಮರಣ ಹೊಂದಿದ ಸನ್ನಿವೇಶವನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ರಾಮನಾಥ ಚರಿತವು ವಿಜಯನಗರದ ಕಾಲಕ್ಕೆ ಸೇರಿದ ಕೆಲವು ಸಾಮಾಜಿಕ ಘಟನೆಗಳನ್ನು ತಿಳಿಯಲು ಅಮೂಲ್ಯ ಗ್ರಂಥವಾಗಿದೆ ಎನ್ನಬಹುದು.

ಸೈನಿಕರು ಬಣ್ಣಬಣ್ಣದಿಂದ ಕೂಡಿದ ಸೊಗಸಾದ ಶ್ರೀಮಂತ ಉಡುಪನ್ನು ಧರಿಸುತ್ತಿದ್ದರೆಂದು ಪಾಯೇಸನು ಹೇಳಿಕೊಂಡಿದ್ದಾನೆ. ಆದರೆ ಇದು ರಾಜಧಾನಿಯಲ್ಲಿ ರಾಜರಿಂದ ಸೇನಾ ವೀಕ್ಷಣೆಯ ಸಂದರ್ಭದ ಸನ್ನಿವೇಶದ ವರ್ಣನೆಯಾಗಿದೆ. ಏಕೆಂದರೆ ಮತ್ತೊಬ್ಬ ವಿದೇಶಿ ಯಾತ್ರಿಕನಾದ ನ್ಯೂನಿಜ್ ನು ಕೃಷ್ಣದೇವರಾಯನು ರಾಯಚೂರಿನ ಮೇಲೆ ದಂಡೆತ್ತಿ ಹೋದಾಗ, ಸಮರ ಸೈನಿಕರ ಉಡುಗೆ ತೊಡುಗೆಯ ಸಂಪೂರ್ಣ ಚಿತ್ರವನ್ನು ತೆರೆದಿಡುತ್ತಾನೆ. ಇಲ್ಲಿ ಅವನು ಕೇವಲ ಸೈನಿಕರು ಯುದ್ಧಕ್ಕೆ ಬಳಸುತ್ತಿದ್ದ ಆಯುಧಗಳ ಕುರಿತು ವರ್ಣಿಸಿರುವುದೇ ಹೊರತು ಅವರು ಉಡುಗೆ - ತೊಡುಗೆಯ ಬಗ್ಗೆ ಚರ್ಚಿಸಿರುವುದು ಕಂಡುಬರುವುದಿಲ್ಲ. ಸಾಮಾನ್ಯ ಸೈನಿಕರು ರಣರಂಗದಲ್ಲಿ ಉಪಯೋಗಿಸುತ್ತಿದ್ದ ಬಟ್ಟೆಗಳು ತುಂಬ ಸಾಧಾರಣವಾಗಿದ್ದವು. ಅನೇಕರಿಗೆ ಏನೂ ಇಲ್ಲದೆ ಇದ್ದ ಸಂದರ್ಭಗಳೂ ಇದ್ದವು. ಈ ದೃಷ್ಟಿಯಿಂದಲೋ ಏನೋ ಈ ಸಂದರ್ಭಕ್ಕೆ ತಕ್ಕಂತೆ ಇರುವ ಅನೇಕ ಆಧಾರಗಳಲ್ಲಿಯೂ ಸಹ ಸೈನಿಕರ ಉಡುಗೆಯ ಬಗ್ಗೆ ಹೆಚ್ಚಿನ ಪ್ರಾಸ್ತಾಪ ಕಂಡುಬರುವುದಿಲ್ಲ. ಕೇವಲ ಅವರು ಯುದ್ಧದಲ್ಲಿ ಬಳಸುತ್ತಿದ್ದ ವಸ್ತುಗಳ ಬಗ್ಗೆ ಹೆಚ್ಚಿನ ಗಮನ ಹರಿಸಿದಂತೆ ಕಂಡುಬರುತ್ತದೆ.

ವಿಜಯನಗರದರಸರ ಕಾಲದಲ್ಲಿ ಸೈನಿಕರು ಯುದ್ಧಗಳಲ್ಲಿ ಬಳಸುತ್ತಿದ್ದ ಆಯುಧಗಳು ವಿವಿಧ ರೀತಿಯವಾಗಿದ್ದವು. ಇವುಗಳ ವರ್ಣನೆಯನ್ನು ಮಧುರಾವಿಜಯಂ' ಹಾಗೂ 'ಸಾಳ್ವಭ್ಯುದಯಮ್' ಎಂಬ ಸಂಸ್ಕೃತ ಗ್ರಂಥಗಳಿಂದ ತಿಳಿಯಬಹುದಾಗಿದೆ. ಈ ಕಾವ್ಯಗಳು ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಆಯುಧಗಳು ಕುರಿತು ಕಾವ್ಯಗಳು ಶಸ್ತ್ರ (ಬಾಕು - ಕತ್ತಿ), ಶರಾಸನ (ಬಿಲ್ಲು), ಅಸಿ (ಕತ್ತಿ), ಕರ್ಪಣ (ಒಂದು ರೀತಿಯ ಸಣ್ಣ ಕತ್ತಿ), ಭರ್ಚಿ (ಈಟಿ), ಕಠಾರಿ ಕಾಸ್ತ್ರಮ್ (ಒಂದು ರೀತಿಯ ಬಾಣ), ಕಾರ್ಮುಂಕಂ (ಬಿಲ್ಲು) ಪ್ರಾಸ (ಕ್ಷಿಪಣಿ) ಮುಂತಾದ ಆಯುಧಗಳ ಹೆಸರನ್ನು ತಿಳಿಸುತ್ತವೆ. ಶತ್ರುಗಳ ಬಾಣದಿಂದ ರಕ್ಷಿಸಿಕೊಳ್ಳು ಸೈನಿಕರು ರಕ್ಷ ಕವಚಗಳನ್ನು ಉಪಯೋಗಿಸುತ್ತಿದ್ದರು ಎಂದು ವರ್ಣಿಸಿರುವುದು ಕಂಡುಬರುತ್ತದೆ. ವಿಜಯನಗರದ ಕಾಲದ ಯುದ್ಧಗಳಲ್ಲಿ ಬಳಸುತ್ತಿದ್ದ ಆಯುಧಗಳು ಅದರಲ್ಲಿಯೂ ಬಿಲ್ಲು ಬಾಣ, ಕತ್ತಿ, ಭರ್ಚಿಗಳು ಪ್ರಾಚೀನ ಭಾರತದಲ್ಲಿಯೂ ಬಳಕೆಯಲ್ಲಿದ್ದವೆಂದು ಆಧಾರಗಳು ಸೂಚಿಸುತ್ತವೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಅಂದು ನಡೆಯುತ್ತಿದ್ದ ಯುದ್ಧಗಳಲ್ಲಿ ಎರಡು ಭಾಗಗಳಾಗಿ ವಿಂಗಡಿಸಬಹುದು ಒಂದನೆಯದು **ಕೋಟೆ ಕಾಳಗ**, ಎರಡನೆಯದಾಗಿ ಬಯಲು ಯುದ್ಧ ಈ ಎರಡು ಯುದ್ಧಗಳಲ್ಲಿ ಭಾಗವಹಿಸಲು ಸೈನಿಕರು ಪ್ರತ್ಯೇಕ ಆಯುಧಗಳನ್ನು ಬಳಸಬೇಕಾಗಿದ್ದಿತು. ಬಯಲು ಯುದ್ಧದಲ್ಲಿ ಬಳಸುವ ಆಯುಧಗಳು ಕೋಟೆ ಕಾಳಗಕ್ಕೆ ಉಪಯೋಗವಾಗುತ್ತಿರಲಿಲ್ಲ ಎಂಬುದು ಕಂಡುಬರುತ್ತದೆ. ಕೋಟೆ ಕಾಳಗಕ್ಕೆ ಬಿಲ್ಲು, ಬಾಣ ಹಾಗೂ ಕೈಯಿಂದಲೇ ಈಟಿಗಳನ್ನು ರಭಸದಿಂದ ಎಸೆಯುವ ಶಕ್ತಿಯುತ ಸೈನಿಕರು ಬೇಕಾಗಿರುತ್ತಿದ್ದರು. ನಾಡಿನ ಹಿರಿಯ ಸಾಹಿತಿಯರಾದ ಬೆಟಗೇರಿ ಕೃಷ್ಣಶರ್ಮರು ಕತ್ತಿಗಿರುವ ಬೇರೆ ಬೇರೆ ಹೆಸರುಗಳನ್ನು ಈ ರೀತಿ ತಿಳಿಸುತ್ತಾರೆ ಕೈಗೆತ್ತಿ, ಖಂಡೆಯ, ಸೊರಡಯ ಕತ್ತಿ, ಬಾಳಗತ್ತಿ, ಕರಾಚೂರಿ, ಸುರಗಿ, ಕೈಸುರಗಿ, ಬಾಕು, ಕೊಂಬುಗತ್ತಿ (ಆನೆಯ ಕೋರೆಗಳಿಗೆ ಕಟ್ಟುವ ಕತ್ತಿ) ಎಂದು ಒಂಬತ್ತು ಹೆಸರುಗಳನ್ನು ಸೂಚಿಸುತ್ತಾರೆ. ಇದರಿಂದ ಕತ್ತಿಯ ಅನೇಕ ರೂಪಗಳನ್ನು ಗಮನಿಸಬಹುದಾಗಿದೆ.

ಯುದ್ಧದಲ್ಲಿ ಸೈನಿಕರು ತಮ್ಮನ್ನು ಹಗೂ ತಾವು ಹೊಂದಿರುವ ಆನೆ, ಕುದುರೆಗಳನ್ನು ಆಯುಧಗಳು ಹಾಗೂ ವಿವಿಧ ರೀತಿಯ ಅಪಾಯಗಳಿಂದ ಸಂರಕ್ಷಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿಯೇ ದೇಹದ ಬೇರೆ ಬೇರೆ ಭಾಗಗಳಿಗೆ ಅನುಗುಣವಾಗಿ ನಾನಾ ರೀತಿಯ ಸಂರಕ್ಷಕ ಸಾಧನಗಳನ್ನು ಉಪಯೋಗಿಸುತ್ತಿದ್ದದ್ದು ಕಂಡುಬರುತ್ತದೆ. ಅವುಗಳನ್ನು ಬೆಟಗೇರಿಯವರು ಈ ರೀತಿ ವಿವರಿಸುತ್ತಾರೆ. "ಹರಿಗೆ ತಲೆವರಿಗೆ, ಮೈಜೋಡು (ಕವಚ), ಕುಪ್ಪಸ, ಸೀಸಕ, ತೋಳ ಪಾವುಡ" ಎಂದು ವಿವಿಧ ಹೆಸರುಗಳನ್ನು ತಿಳಿಸುತ್ತಾರೆ.

ವಿಜಯನಗರದ ಕಾಲದಲ್ಲಿ ಮತ್ತೊಂದು ಪ್ರಮುಖ ಯುದ್ಧದ ದಳವೆಂದರೆ ಅಶ್ವದಳ, ಅಶ್ವದಳದ ಮುಖಂಡರನ್ನು 'ಅಶ್ವಪತಿ' ಎಂದು ಕರೆಯುತ್ತಿದ್ದರು. ವಿಜಯನಗರದ ಅರಸರು ಗೆದ್ದ ಅನೇಕ ಯುದ್ಧಗಳಿಗೆ ಈ ಅಶ್ವಪಡೆಯೇ ಮೂಲ ಕಾರಣವೆನ್ನಬಹುದು,

ಕೃಷ್ಣದೇವರಾಯನೇ ಸ್ವತಃ ಅಮುಕ್ತಮಾಲ್ಯದ'ದಲ್ಲಿ ಈ ವಿಷಯ ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಇಂದು ಸ್ವಾತಂತ್ರ್ಯ ಭಾರತದಲ್ಲಿ ದೇಶದ ರಕ್ಷಣೆಗಾಗಿ ಸೈನ್ಯವನ್ನು ಬಲಪಡಿಸುವುದಕ್ಕೆ ನಮ್ಮ ರಾಷ್ಟ್ರದ ಆದಾಯದಲ್ಲಿ ಶೇ. ೫೦ರಷ್ಟು ಹಣವನ್ನು ಮೀಸಲಿಡುತ್ತಿರುವ ಹಾಗೆಯೇ ವಿಜಯನಗರದರಸರ ಕಾಲದಲ್ಲಿಯೂ ಸಹ ಸಾಮ್ರಾಜ್ಯದ ಆಧಾಯದಲ್ಲಿ ಶೇ. ೫೦ರಷ್ಟು ಸೈನಿಕ ವ್ಯವಸ್ಥೆಗೆ ಮೀಸಲಿರಿಸಲಾಗಿತ್ತು. ಅದರಲ್ಲಿಯೂ ಕುದುರೆಗಳ ಮೇಲೆ ಮಾಡುವ ಖರ್ಚು ಹೆಚ್ಚಿನದಾಗಿರುತ್ತಿತ್ತೆಂದು ತಿಳಿದುಬರುತ್ತದೆ. ಕುದುರೆಗಳನ್ನು ಅರೇಬಿಯ, ಪಾರಸೀಕ, ಕಾಂಬೋಜ ಮುಂತಾದ ದೇಶಗಳಿಂದ ಅಮದು ಮಾಡಿಕೊಳ್ಳಲಾಗುತ್ತಿತ್ತು. ಸಮಕಾಲೀನ ಸಾಹಿತ್ಯ ಕೃತಿಗಳಿಂದ ಹಾಗೂ ದೇವಾಲಯಗಳ ಮೇಲೆ ಕೆತ್ತಿಸಿರುವ ಉಬ್ಬು ಶಿಲ್ಪಗಳಿಂದ ಯುದ್ಧಕ್ಕೆ ಹೊರಟ ಕುದುರೆ ಸವಾರರು ಧರಿಸಿದ್ಧ ಉಡಿಗೆ ತೊಡಿಗೆಗಳು, ಅಶ್ವಗಳನ್ನು ಸಮರಕ್ಕೆ ಸಿದ್ದಗೊಳಿಸುತ್ತಿದ್ದ ರೀತಿ, ನೀತಿಗಳು, ರಣರಂಗದಲ್ಲಿ ಅವರುಗಳ ಹೋರಾಟಗಳ ಬಗ್ಗೆ ನೈಜ ಚಿತ್ರಣವನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಪ್ರಾಣಿಗಳಲ್ಲಿಯೇ ಪ್ರತಿಷ್ಠಿತ ಪ್ರಾಣಿಯಾದ ಆನೆಗೆ ಸೈನ್ಯದಲ್ಲಿ ಹಿಂದಿನ ಕಾಲದಿಂದಲೂ ಮುಖ್ಯಸ್ಥಾನ ದೊರೆಕಿದೆ. ಇನ್ನೊಂದರ್ಥದಲ್ಲಿ ಯುದ್ಧಗಳಲ್ಲಿ ಆನೆಗಳನ್ನು ಬಳಸಿದವರಲ್ಲಿ ಭಾರತೀಯರೇ ಮೊದಲಿಗರೆಂದು ವಿದ್ವಾಂಸರುಗಳು ಅಭಿಪ್ರಾಯಪಡುತ್ತಾರೆ. ಇದು ಸತ್ಯವೆಂದೆ ಹೇಳಬಹುದು. ವಿಜಯನಗರದರಸರು ಆನೆಗಳನ್ನು ಅನೇಕ ರೀತಿಯಲ್ಲಿ ಉಪಯೋಗಿಸುತ್ತಿದ್ದರು. ಕೇವಲ ಯುದ್ಧಗಳಿಗೇ ಅಲ್ಲದೆ ಆನೆ ಹಾಗೂ ಕುದುರೆಗಳು ರಾಜ ವೈಭವದ ಸಂಕೇತಗಳಾಗಿಯೂ ಮೆರೆಯುತ್ತಿದ್ದವು. ಹಬ್ಬ (ದಸರ ಹಬ್ಬ) ಜಾತ್ರೆ ರಾಜಪರಿವಾರದವರ ವಿವಾಹ ಸಂದರ್ಭ, ದೇವತಾ ಕಾರ್ಯಗಳ ಸಂದರ್ಭಗಳಲ್ಲಿ ಇವುಗಳ ಪಾತ್ರ ಅಮೂಲ್ಯವಾಗಿತ್ತು. ಇಂಥಹ ಸಂದರ್ಭದಲ್ಲಿ ಆನೆಗಳಿಗೆ ಅಲಂಕರಿಸುತ್ತಿದ್ದ ಚಿತ್ರಗಳನ್ನು ಪಾಯೇಸನು ಸಂಕ್ಷಿಪ್ತವಾಗಿ ವರ್ಣಿಸಿರುವುದು ಕಂಡುಬರುತ್ತದೆ. ಯುದ್ಧದಲ್ಲಿ ಆನೆಗಳ ಪಾತ್ರ ಹಿರಿದಾಗಿತ್ತು. ಕೋಟೆಗಳ ಬೃಹದಾಕಾರದ ದ್ವಾರಗಳನ್ನು ನೂಕಲು, ಬೃಹತ್ ಮರಗಳು ರಸ್ತೆಯಲ್ಲಿ ಅಡ್ಡಬಿದ್ದು ತೊಂದರೆಯಾದರೆ ಮುಕ್ತಗೊಳಿಸಲು ಇವುಗಳ ಥಾತ್ರ ಬಹುಮುಖ್ಯವಾಗಿದ್ದಿತ್ತು. ವಿಜಯನಗರದ ನಿರ್ಣಾಯಕ ಯುದ್ಧವಾದ ರಕ್ಕಸತಂಗಡಿ ಯುದ್ಧದಲ್ಲಿ ೮೦ ವರ್ಷದ ಹರೆಯದ ರಾಮರಾಯನು ಆನೆಯ ಮೇಲೆ ಪಲ್ಲಕ್ಕಿಯನ್ನು ಇರಿಸಿ ತಾನು ಕುಳಿತ ಎರಡು ಕಡೆಯಲ್ಲಿಯೂ ಚಿನ್ನ, ಬೆಳ್ಳಿ, ವಜ್ರಗಳನ್ನು ತುಂಬಿಕೊಂಡು ಯುದ್ಧದಲ್ಲಿ ಶೌರ್ಯ, ಪೌರುಷ ಮೆರೆದ ಸೈನಿಕರಿಗೆ ಅಲ್ಲಿಯೇ ಬಹುಮಾನ ಕೊಡಲು ೧೮ ವರ್ಷದ ಪ್ರಾಯದ ಯುವಕನಂತೆ ಕಂಗೊಳಿಸಿಕೊಂಡು ಬರುತ್ತಿದ್ದನೆಂದು ವರ್ಣಿಸಿರುವುದು ಕಂಡುಬರುತ್ತದೆ. ಧಾರ್ಮಿಕ ಕಾರ್ಯಗಳಿಗೆ ಆನೆಯ ಪಾತ್ರ ಬಹು ಮುಖ್ಯವಾಗಿದ್ದಿತ್ತೆನ್ನಬಹುದು. ಪ್ರನನ್ನ ವೆಂಕಟದಾಸರು ಆನೆಯನ್ನು ಕೃಷ್ಣನಿಗೆ ಸಂಕೇತವಾಗಿಟ್ಟುಕೊಂಡು,

*ಆನೆ ಬಂತಾನೆ ಬಂತಾನೆ ಬಂತಮ್ಮ*
*ದಾನವಕದಳಿಯ ಕಾನನ ಮುರಿವ*
*ಉಂಗುರಗೊರಳ ನೀಲಾಗಚಲ್ವಾನೆ*
*ಕಂಗಳಿಹೊಳಿವ ವ್ಯಘ್ರಾಂಗುಳಿಯಾನೆ*
*ಬಂಗಾರದಣುಘಂಟೆ ಶೃಂಗಾರದಾನೆ*
*ಮಂಗಳತಿಲಕನ ರಂಗನೆಂಬಾನೆ.*

ಎಂದು ಸ್ವಾರಸ್ಯಕವಾಗಿ ನಿರೂಪಿಸಿರುವುದಕ್ಕೆ ಮತ್ತೊಬ್ಬ ದಾಸರಾದ ವಾದಿರಾಜರು

*ಕುದುರೆ ಬಂದಿದೆ ವಾದಿರಾಜಗೊಲಿದು*
*ಬಂದು ಸ್ವಾದಿಪುರದಲ್ಲಿ ನಿಂದು*
*ಮುಂಗಾಲು ಕೆದರಿ ಕುಣಿವ ಕುದುರೆ*
*ಹಿಂಗಾಲಲಸುರರ ಬಡಿವ ಕುದುರೆ*

*ರಂಗನೆಂದರೆ ಸಲಹೋ ಕುದುರೆ*
*ತುಂಗಹಯವದನ ಕುದುರೆ*

ಎಂದು ಕುದುರೆಗೆ ಹೋಲಿಸಿಕೊಂಡು ಹೇಳಿರುವುದು ಅರ್ಥಪೂರ್ಣವಾಗಿದೆ. ಅಂದರೆ ಈ ಮೇಲಿನ ಎರಡು ಹಾಡುಗಳಿಂದ ಅಂದಿನ ಕಾಲದಲ್ಲಿ ಆನೆ ಹಾಗೂ ಕುದುರೆಗಳು ಕೇವಲ ಯುದ್ಧಕ್ಕೆ ಮಾತ್ರವಲ್ಲದೆ ಧಾರ್ಮಿಕ ವಿಧಿವಿಧಾನಗಳಲ್ಲಿ ಅವುಗಳ ಪಾತ್ರ ಎಷ್ಟರ ಮಟ್ಟಿಗೆ ಬೆಳೆದಿತ್ತೆಂಬುದನ್ನು ತೋರಿಸುತ್ತದೆ. ಆನೆಗಳನ್ನು ಸಮರಕ್ಕೆ ಸಿದ್ಧಗೊಳಿಸಿದ ರೀತಿಗಳನ್ನು ಗದುಗಿನ ಭಾರತವು "ಕಡಿಯಣವದಾನೆಗಳ ಮೋರೆಗ ತೊಡಿಸಿದರು, ದಂತಿಗಳ ಹೆಗಲಲಿ ನಿಡುನೊಗನ ಕಟ್ಟಿದರು, ಕಿವಿಯಲ್ಲಿ ಕೀಲುಗಳ ಸರಿಸಿ ಜಡಿವಗುಳವನು ಹಾಯ್ಕಿ ಬೀಸಿದರೊಡನೆ ಹಕ್ಕರಿಕೆ ಜೋಡಿಸಲಡಸಿಗಾಲಿಯ ಬಿಗಿದು ಗಜಬಜಿಸಿ" ಎಂದು ವರ್ಣಿಸಿರುವುದು ಕಂಡು ಬರುತ್ತದೆ.

ಒಂಟೆಗಳು ವಿಜಯನಗರದರಸರ ಸೈನ್ಯಬಲದ ಒಂದು ಭಾಗವಾಗಿತ್ತೆಂದೂ ಆಧಾರಗಳಿಂದ ತಿಳಿದುಬರುತ್ತದೆ. ಹಜಾರ ರಾಮದೇವಾಲಯದ ಹೊರಗೋಡೆಯ ಉಬ್ಬು ಚಿತ್ರಗಳು ಹಾಗೂ ಮಹಾನವಮಿ ದಿಬ್ಬದ ಮೇಲಿರುವ ಒಂಟೆಯು ಸಮರಕ್ಕೆ ಹೊರಡುತ್ತಿರುವ ಚಿತ್ರಗಳಿಂದ ಇದನ್ನು ಗಮನಿಸಬಹುದು. ಆದರೆ ಇವುಗಳ ವರ್ಣನೆಯು ಸಾಹಿತ್ಯದಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಅಂದು ಇವುಗಳನ್ನು ಹೆಚ್ಚಾಗಿ ರಾಜಧಾನಿಯ ಬೀದಿಗಳಲ್ಲಿ ಸರಕುಗಳನ್ನು ಸಾಗಿಸಲು ಉಪಯೋಗಿಸುತ್ತಿದ್ದರೆಂದು ಕಂಡುಬರುತ್ತದೆ. ನಂಜುಂಡ ಕವಿಯ ರಾಮನಾಥ ಚರಿತೆಯಲ್ಲಿ ಮಾತ್ರ ಈ ರೀತಿಯ ಒಂಟೆಯ ಚಿತ್ರಣ ಕಂಡುಬರುತ್ತದೆ.

**೪.೩. ಲಾಂಛನ**

ವಿಜಯನಗರದರಸರ ರಾಜಲಾಂಛನವು ಅಥವಾ ರಾಜಚಿಹ್ನೆ ವರಾಹ. ಇದು ಪುರಾಣದಲ್ಲಿ ಬರುವ ಮಹಾವಿಷ್ಣುವಿನ ಮೂರನೆಯ ಅವರಾರವೆಂದು ನಂಬಲಾಗಿದೆ. ತನ್ನ ದುಷ್ಕೃತ್ಯಗಳಿಂದ ಭೂಲೋಕದ ಜನರನ್ನು ದುಃಖದ ಸಮುದ್ರದಲ್ಲಿ ಮುಳುಗಿಸಿ ಪ್ರಜಾಪೀಡಿತನಾಗಿದ್ದ ಹಿರಣ್ಯಾಕ್ಷನನ್ನು ಸಂಹರಿಸಲು ವಿಷ್ಣುವು ವರಾಹಾವತಾರವೆನ್ನಿತ್ತಿ ಬಂದನು, ರಾಕ್ಷಸನಾದ ಹಿರಣ್ಯಾಕ್ಷನನ್ನು ಕೊಂದು ಲೋಕಕ್ಕೆ ಸುಖ ಶಾಂತಿಯನ್ನು ತಂದು ಕೊಟ್ಟನೆಂದು ಪುರಾಣವು ಹೇಳುತ್ತದೆ. ಅದೇ ರೀತಿಯಲ್ಲಿ ಉತ್ತರದ ಕಡೆಯಿಂದ ದಕ್ಷಿಣ ಭಾರತದ ಕಡೆಗೆ ಸಾಗರೋಪಾದಿಯಾಗಿ ಹರಿದು ಬರುತ್ತಿದ್ದ ಮುಸ್ಲಿಂರ ದಾಳಿಯನ್ನು ತಡೆದು ನಮ್ಮ ಸಂಸ್ಕೃತಿಯನ್ನು ರಕ್ಷಿಸಲು, ಪೋಷಿಸಿ ಬೆಳಸಲು ನಿರ್ಮಿತವಾದ ವಿಜಯನಗರ ಸಾಮ್ರಾಜ್ಯವು ಅನ್ಯ ಧರ್ಮಿಯರ ಧಾಳಿಯನ್ನು ಸಂಹಾರ ಮಾಡುವ ದೃಷ್ಟಿಯಿಂದ ವರಾಹ ಲಾಂಛನವನ್ನು ಹೊಂದಿರಬಹುದೆಂದು ಹೇಳಬಹುದಾಗಿದೆ.

***

## ೫. ಆರ್ಥಿಕ ಜೀವನ (೧)

ವಿಜಯನಗರ ಸಾಮ್ರಾಜ್ಯವು ಮುಖ್ಯವಾಗಿ ವ್ಯವಸಾಯಿಕ ಸಾಮ್ರಾಜ್ಯವಾಗಿತ್ತು. ಹಳ್ಳಿಗಳೇ ಇಲ್ಲಿಯ ಐಶ್ವರ್ಯದ ಪ್ರಮುಖ ಆಧಾರಗಳಾಗಿದ್ದವು, ರೈತನೇ ಹಳ್ಳಿಗಳ ಹಾಗೂ ಸಾಮ್ರಾಜ್ಯದ ತಳಹದಿಯಾಗಿದ್ದನೆಂದು ಹೇಳಬಹುದು. ಅವನ ಸಂಪತ್ತೇ ದೇಶದ ಸಂಪತ್ತು, ಅವನ ಭಾಗ್ಯವೇ ದೇಶದ ಭಾಗ್ಯ ರೈತರ ಉದ್ಧಾರವೇ ದೇಶೋದ್ಧಾರ ಎಂದು ನಂಬಿ ರೈತನಲ್ಲಿ ಸುಖ, ಸಂಪತ್ತು, ಸಮೃದ್ಧಿಯಾಗಿದ್ದರೆ ದೇಶದಲ್ಲಿ ನೆಲವೂ, ಬಲವೂ, ಸಂಪತ್ತೂ ನದಿಯಂತೆ ಲೀಲಾಜಾಲವಾಗಿ ಹರಿಯುತ್ತದೆ ಎಂದು ನಂಬಿದವರಾಗಿದ್ದರು.

ಇದನ್ನು ಗಮನಿಸಿದರೆ ಅಂದು ರೈತರು ಅಂದರೆ ಕೃಷಿಯನ್ನೇ ಅವಲಂಬಿಸಿಕೊಂಡಿದ್ದವರಿಗೆ, ಸಾಮ್ರಾಜ್ಯದಲ್ಲಿ ಉತ್ತಮ ಸ್ಥಾನಮಾನವಿದ್ದಿತ್ತೆಂದು ಕಂಡುಬರುತ್ತದೆ.

ಅಂದಿನ ಕೃಷಿಯು ಮಳೆಯೊಂದಿಗೆ ಜೂಜಾಟವಾಡುವುದರಲ್ಲಿಯೇ ಕಾಲ ಕಳೆಯುತ್ತಿದ್ದಿತ್ತು. ಅಂದಿನ ರೈತರು ಸಾಮ್ರಾಜ್ಯದ ಅಡಿಗಲ್ಲುಗಳಾಗಿದ್ದರೂ ಸಹ ಅವರು ಅನುಸರಿಸುತ್ತಿದ್ದ ವ್ಯವಸಾಯದ ರೀತಿಗಳು ಉತ್ತಮವಾಗಿಲ್ಲದ ಕಾರಣ ಹೆಚ್ಚು ಹೆಚ್ಚು ಫಸಲನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅವರಲ್ಲಿ ಅಸಕ್ತಿ, ಅಜ್ಞಾನ, ಕೆಳಮಟ್ಟದ ಶ್ರದ್ಧೆ ಹೆಚ್ಚುತ್ತಿದ್ದಿ, ಏಕಾಗ್ರತೆ, ಜಾಗರೂಕತೆ, ಪ್ರಾಮಾಣಿಕತೆಗಳು ಮಾಯವಾಗಿದ್ದವೆಂದು ಹೇಳಬಹುದು. ಇದಕ್ಕೆಲ್ಲ ಪ್ರಮುಖ ಕಾರಣವೆಂದರೆ ಬಡತನ ಹಾಗೂ ಅಜ್ಞಾನಗಳನ್ನು ಉದಾಹರಣೆಯಾಗಿ ನೀಡಬಹುದು. ಇಂದಿಗೂ ನಮ್ಮ ಹಳ್ಳಿಗಳಲ್ಲಿ ಪ್ರಚಲಿತವಾಗಿರುವ ಗಾದೆ “ಅಪ್ಪ ಹಾಕಿದ ಆಲದ ಮರಕ್ಕೆ ನೇತಾಕಿಕೊಂಡು ಸಾಯುವುದು” ಎಂಬ ಪದವು ವಿಶಾಲವಾದ ಅರ್ಥವನ್ನು ಕೊಡುತ್ತದೆ. ಇದೊಂದು ಕೃಷಿಗೆ ಸಂಬಂಧಿಸಿದ ಗಾದೆಯಾಗಿದ್ದು ಕೃಷಿ ಭೂಮಿಯಲ್ಲಿ ಬೇರೆ ಬೇರೆ ಬೆಳೆಯನ್ನು ಬೆಳೆಯದೆ ಒಂದೇ ರೀತಿಯ ಫಸಲನ್ನು ಬೆಳೆಯುತ್ತಿದ್ದರೆ ಮೇಲಿನ ಗಾದೆಯು ತಟ್ಟನೆ ಬಂದುಬಿಡುತ್ತದೆ. ಅಂದರೆ ವಿಜಯನಗರದ ರೈತರು ಸಾಮಾನ್ಯವಾಗಿ ಒಂದೇ ರೀತಿಯ ಬೆಳೆಯನ್ನು ಪ್ರತಿವರ್ಷವೂ ಬೆಲೆಯುತ್ತಿದ್ದರೆಂದು ಕೆಲವು ಆಧಾರಗಳಿಂದಲೂ ತಿಳಿಯಬಹುದು.

ವಿದೇಶಿಯರಾದ ಬಾರ್ಬೋಸಾ, ಪಾಯಸ್, ನ್ಯೂನಿಜ್ ರವರು ವಿಜಯನಗರ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲೆಲ್ಲಾ ಸಂಚರಿಸಿ ಕೃಷಿ ಭೂಮಿ, ಭೂಮಿಯ ಫಲವತ್ತತೆ, ಬೆಳೆಗಳು ಹಾಗೂ ಸಾಕುಪ್ರಾಣಿಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡುತ್ತಾರೆ. ಇವರುಗಳ ಪ್ರಕಾರ ಸಾಮ್ರಾಜ್ಯವು ತನ್ನ ಪಶ್ಚಿಮದ ಕಡೆಯಿದ್ದ ಕರಾವಳಿ ಪ್ರದೇಶವನ್ನು ಅತ್ಯಂತ ಫಲವತ್ತಾದ ಭೂಮಿ ಎಂತಲೂ ಪರಿಗಣಿಸಿ ಅಲ್ಲಿ ಉತ್ತಮವಾದ ಭತ್ತವನ್ನು ಬೆಳೆದು, ಅಕ್ಕಿಯನ್ನು ಮಲಭಾರ್ ಮತ್ತು ಅರ್ಮ್ಜ್‌ಗಳಿಗೆ ರಫ್ತು ಮಾಡುತ್ತಿದ್ದರೆಂದು ಹೇಳಿದ್ದಾರೆ. ಪಾಯಸನು ಭಟ್ಕಳದಿಂದ ವಿಜಯನಗರದವರೆಗಿನ ಮಾರ್ಗವನ್ನು ಹಾಗೂ ಮಧ್ಯ ಕರ್ನಾಟಕದ ಕೃಷಿ ಭೂಮಿಯನ್ನು ವರ್ಣಿಸಿ ಉದ್ದಕ್ಕೂ ಫಲವತ್ತಾದ ಕೃಷಿಭೂಮಿಯನ್ನು ಹೊಂದಿತ್ತೆಂದು ಹೇಳುತ್ತಾನೆ, ಹತ್ತಿ, ಗೋಧಿ, ಭತ್ತಗಳನ್ನು ಹೆಚ್ಚಾಗಿ ಈ ಪ್ರದೇಶದಲ್ಲಿ ಬೆಳೆಯುತ್ತಿದ್ದರೆಂದು ತಿಳಿಸುತ್ತಾನೆ. ಈಗಿನ ಧಾರವಾಡ ಜಿಲ್ಲೆಯಲ್ಲಿರುವ ಬಂಕಾಪುರ ಮತ್ತು ಸುತ್ತಮುತ್ತಲಿನ ಪ್ರದೇಶವು ವಿಜಯನಗರದ ಕಾಲದಲ್ಲಿ ಕೃಷಿಯ ಬೀಜೋತ್ಪಾದನಾ ಹಾಗೂ ಪಶುಸಂಗೋಪನ ಕ್ಷೇತ್ರಗಳಿಂದ ಸಮೃದ್ಧಿಯಾಗಿತ್ತೆಂದು ನ್ಯೂನಿಜ್ ಹೇಳುತ್ತಾನೆ. ಅಂದಿನ ಕಾಲದಲ್ಲಿಯೂ ಕೃಷಿಯೇ ಪ್ರಜೆಗಳ ಪ್ರಮುಖ ವೃತ್ತಿಯಾಗಿತ್ತೆಂಬವುದಕ್ಕೆ ಸಾಕ್ಷಿಯಾಗಿ ಈ ಜನಪದ ಗೀತೆಯು ನಿದರ್ಶನವಾಗಿದೆ.

*ಏಳುತಾಲೆ ಎದ್ದು ಯಾರಾರ ನೆನಯಾಲಿ*
*ಎಳ್ಳು ಜೀರಿಗೆ ಬೆಳೆಯೋಳಾ? ಭೂಮಿತಾಯಿ*
*ಎದ್ದೊಂದು ಗಳಿಗೆ ನೆನೆದೇನು……*

ಎನ್ನುವ ಪದವಾಗಲಿ ಅಥವಾ ದೇವರಿಗೆ ಹರಕೆ ಮಾಡಿಕೊಳ್ಳುವ ಸನ್ನಿವೇಶವನ್ನು ಅರ್ಥಯಿಸುವ,

*ಮೂಡಲ ಮುತ್ತಯ್ಯ ನೋಡಯ್ಯ ಬಡತಾನ*
*ಮೂಡಲಲ್ಲಿ ರಾಗಿ ಮೆಳೆಯುದ್ದ ಬೆಳೆದರೆ*
*ಮಾಡೂವೆ ನಿನಗೆ ಹರಿಸೇವ..........*

ಇದಕ್ಕೆ ಸಾಕ್ಷಿ ಎಂಬಂತೆ ಇಂದಿಗೂ ಸಹ ರೈತನು ಮುಂಜಾನೆ ಎದ್ದೊಡನೆ ಭೂಮಿಯನ್ನು, ತನ್ನ ಹಿರಿಯ ತಾಯಿ ಎಂದು ನಂಬಿರುವ ನೆಲವನ್ನು ನೆನೆಯುತ್ತಾನೆ. ಅಂದು ಸಾಮಾನ್ಯ ಜನರಿಗೆ ಇದಕ್ಕಿಂತ ಘನವಾದ ಕೆಲಸ ಬೇರೆ ಇರಲಿಲ್ಲವೆಂದೇ ಹೇಳಬಹುದು.

**೫.೧. ಕೃಷಿ**

ವಿಜಯನಗರದ ಕಾಲದ ರೈತರಿಗೆ ಕಾಲಕಾಲಕ್ಕೆ ಬದಲಾಗುವ ಋತು ಆಧಾರಿತ ವ್ಯವಸಾಯದ ವಿಭಜನೆಯನ್ನು ಉತ್ತಮ ರೀತಿಯಲ್ಲಿಯೇ ಅನುಸರಿಸಿಕೊಂಡಿದ್ದರು. ಆ ಕಾಲದ ಶಾಸನಗಳು ಕಾರ್ತಿಕ ಮತ್ತು ವೈಶಾಖದ ಬೆಳೆಗಳನ್ನು ಉಲ್ಲೇಖಿಸುತ್ತವೆ. ಕಾರ್ತಿಕ ಬೆಳೆಯು ಸಾಮಾನ್ಯವಾಗಿ ನವೆಂಬರ್ ನಿಂದ ಜನವರಿ ಅವಧಿಯದಾಗಿರುತ್ತಿತ್ತು. ವೈಶಾಖದ ಬೆಳೆಯು ಏಪ್ರಿಲ್ ಮೇ ತಿಂಗಳಿನಲ್ಲಿ ಕೊಯಲಿಗೆ ಬರುತ್ತಿತ್ತು. ಗ್ರಾಮೀಣ ಪ್ರದೇಶದ ಜನರು ಇವುಗಳು ಕಾರ್ ಪಸಲು ಹಾಗೂ ಹೈನ್ ಫಸಲು ಎಂಬ ಪದಗಳಿಂದ ಕರೆಯುತ್ತಿದ್ದದ್ದು ಕಂಡುಬರುತ್ತದೆ. ಮೇಲಿನ ರೀತಿಯಲ್ಲಿ ಅಂದಿನ ಕೃಷಿಯು ೧. ಜೂನ್ ನಿಂದ ಅಕ್ಟೋಬರ್ ವರೆಗೆ ನೈಋತ್ಯ ಮುಂಗಾರು ಮಳೆಗೆ ಹೊಂದಿಕೊಳ್ಳುವ ಅವಧಿ ೨. ಜನವರಿ ಫೆಬ್ರವರಿ ತಿಂಗಳ ಚಳಿ ಹವೆಯ ಫಸಲು ಎಂದು ವಿಭಾಗಿಸಿಕೊಂಡು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು.

ಕಣಿವೆಯ ಕೆಳಭಾಗದಲ್ಲಿದ್ದ ನದಿಗಳು ಹಾಗೂ ಕಾಲುವೆಗಳ ಮೂಲಕ ನೀರನ್ನು ಪಡೆಯುತ್ತಿದ್ದ ಜಮೀನುಗಳಿಗೆ ಬೈಲುಭೂಮಿ ಅಥವಾ ಗದ್ದೆ ಸೀಮೆ ಎಂದೂ ಸಂಪೂರ್ಣ ಮಳೆಯನ್ನು ಅವಲಂಭಿಸಿರುವ ಭೂಮಿಯನ್ನು ಹೊಲಗಾಡು ಅಥವಾ ಮಳೆಗಾಡು ಎಂದು ಕರೆಯುತ್ತಿದ್ದರು. ಅಂದಿನ ರಾಜರುಗಳು ನೀರಾವರಿಗೆ ಹೆಚ್ಚಿನ ಅದ್ಯತೆ ನೀಡಿದ್ದರು. ಕೃಷಿಯ ಅಭಿವೃದ್ಧಿಗೆ ನೀರಾವರಿ ಸೌಕರ್ಯವು ಅತಿ ಮುಖ್ಯವಾದದು, ಇದರಿಂದ ಭೂಮಿಯ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೆ ಹೆಚ್ಚಿನ ಅವಕಾಶವಾಗುವುದಲ್ಲದೆ ವ್ಯವಸಾಯಕ್ಕೆ ಅರ್ಹವಾದ ಬಂಜರು ಭೂಮಿಯನ್ನು ಕೃಷಿಮಾಡಿ ಉತ್ತಮ ಬೆಳೆಯನ್ನು ಬೆಳೆಯಬಹುದೆಂದು ವಿಜಯನಗರದ ಅರಸರು ನೀರಾವರಿಗೆ ಹಾಗೂ ಅದರ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿ ನಾಡಿನಾದ್ಯಂತ ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸಿ ಜನರು ಸ್ವಾಲಂಬಿಗಳಾಗಲು ಶ್ರಮಿಸಿದರು.

ನೀರಾವರಿ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿದ್ದ ಭೂಮಿಯಲ್ಲಿ ಭತ್ತ, ಕಬ್ಬು, ಗೋಧಿ, ಜೋಳ, ಹೋಗೆಸೊಪ್ಪು, ಹತ್ತಿ ದ್ವದಳ ಕಾಳೂಗಳು, ಮುಂತಾದವು ಬೆಳೆಯಲಾಗುತ್ತಿದ್ದರೆ ಮಳೆಯೊಡನೆ ಜೂಜಾಟವಾಡುತ್ತಿದ್ದ ಹೊಲದಲ್ಲಿ ಹುಣಸೇಹಣ್ಣು, ಬೇಳೆಕಾಳು (ತೊಗರಿ), ತೆಂಗು, ಖರ್ಜೂರ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ ಅಡಿಕೆ ಮತ್ತು ಮೆಣಸು, ಹಣ್ಣಿನ ಗಿಡಗಳು, ಮುಸುಕಿನ ಜೋಳ ಮುಂತಾದವನ್ನು ಬೆಳೆಯಲಾಗುತ್ತಿದ್ದಿತು. ನೀರಾವರಿಗೆ ಹೆಚ್ಚಾಗಿ ಕೆರೆಗಳೇ ಆಶ್ರಯವಾಗಿದ್ದವು. ತೊಟಗಾರಿಕೆ ಬೆಳೆಯೂ ಸಹ ಹೆಚ್ಚಿನ ರೀತಿಯಲ್ಲಿ ಕಂಡು ಬರುತ್ತದೆ. ತೆಂಗು, ಅಡಿಕೆ, ಗೋಡಂಬಿ, ಮೆಣಸು, ಬಾಳೆ ಹಾಗೂ ಎಲ್ಲಾ ರೀತಿಯ ಹಣ್ಣುಗಳೂ ಸಹ ತೋಟಗಾರಿಕೆಯಲ್ಲಿ ಬೆಳೆಯಲಾಗುತ್ತಿತ್ತು. ಮಳೆ ಆಶ್ರಿತ ಪ್ರದೇಶದಲ್ಲಿಯೇ ಮಳೆಯ ಕಾಲದಲ್ಲಿ ಬಿತ್ತನೆ ಮಾಡಿ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಹೆಸರುಕಾಳು, ಅಲಸಂದೆ, ಹುರುಳಿಕಾಳು, ಕಡ್ಲೆಕಾಳು, ಅವರೇಕಾಳು ಮುಂತಾದ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಕೆರೆಗಳು ಮತ್ತು ಕಾಲುವೆಗಳ ಕೆಳಗಡೆ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದರು. ಏಕೆಂದರೆ ನೀರು ಸುಲಭವಾಗಿ ಸಿಗುವುದರಿಂದ ಇಲ್ಲಿ ೩.೦೦೦ದಿಂದ ೪೦೦೦ರಷ್ಟು ಉತ್ತಮ ಜಾತಿಯ ಮರ, ಗಿಡ, ಫಸಲನ್ನು ಬೆಳೆಯುತ್ತಿದ್ದರೆಂದು ಶಾಸನವು ತಿಳಿಸುತ್ತದೆ.

ವಿಜಯನಗರದ ಕಾಲದ ಬೆಳೆಗಳನ್ನು ಒಂದು ಶಾಸನವು (ಎ.ಕೆ. ೧೨. ಎಂ.ಎಲ್, ೨೦, ಅದೇ ಟಿ, ಎಂ, ೪ಲ, ಎಂ.ಎ.ಆರ್, ೧೯೨೩ - ಪು ೧೨೨) ಈ ಕೆಳಗಿನ ರೀತಿಯಲ್ಲಿ ವಿವರಿಸುತ್ತದೆ.

೧. ದ್ವಿದಳ ಧಾನ್ಯಗಳು : ಅವರೆ, ಉದ್ದು, ಗೋಧಿ, ಹೆಸರು, ಹುರುಳಿ, ಕಡ್ಲೆಕಾಳು, ಅಲಸಂದೆ.

೨. ಸಾಂಬಾರ ವಸ್ತುಗಳು : ಮೆಣಸು, ಅಡಕೆ, ಸಾಸುವೆ, ಮೆಂತ್ಯ, ಜೀರೆಗೆ, ಸಬ್ಬಸಿಗೆ, ಧನಿಯ ಮತ್ತು ಅರಿಸಿನ.

೩. ತೋಟದ ಬೆಳೆ : ತೆಂಗು, ಹಣ್ಣು ಹಂಪಲುಗಳು, ತರಕಾರಿಗಳು

೪. ನೀರಾವರಿ ಬೆಳೆ : ಭತ್ತ, ರಾಗಿ, ಜೋಳ, ಗೋಧಿ, ನವಣೆ, ಮುಸುಕಿನ ಜೋಳ, ಹತ್ತಿ, ಸೆಣಬು, ದನಕರುಗಳಿಗೆ ಹುಲ್ಲು ಎಂದು ಸಂಕ್ಷಿಪ್ತವಾಗಿ ವಿವರಿಸಿರುವುದು ಕಂಡು ಬರುತ್ತದೆ. ಕಬ್ಬಿನ ಉತ್ಪನ್ನಗಳಾದ ಸಕ್ಕರೆ ಮತ್ತು ಬೆಲ್ಲ ಹೇರಳವಾಗಿ ಉತ್ಪಾದನೆಯಾಗುತ್ತಿದ್ದು. ಸಾಮ್ರಾಜ್ಯವು ಈ ವಸ್ತುಗಳ ಉತ್ಪಾದನೆಯಲ್ಲಿ ಸ್ವಯಂಪೂರ್ಣವಾಗಿತ್ತೆಂದು ಫಾಹಿಮಾನ್ ಹೇಳುತ್ತಾನೆ. ಬಾರ್ಬೋಸನ ಪ್ರಕಾರ

ಸಾಮ್ರಾಜ್ಯದಲ್ಲಿ ತಯಾರಾಗುತ್ತಿದ್ದ ಸಕ್ಕರೆಯು ಹುಡಿಯಾಗಿರುತ್ತಿತ್ತೆಂದು ಹೇಳಿದ್ದಾನೆ. ಮತ್ತೊಬ್ಬ ಪ್ರವಾಸಿಯಾದ ವರ್ತಮೊ ಭಟ್ಕಳದಲ್ಲಿ ಸಕ್ಕರೆಯು ಹೇರಳವಾಗಿದ್ದುದ್ದನ್ನು ನೋಡಿದನು ಮತ್ತು ನಮ್ಮಲ್ಲಿ ಅದನ್ನು ಗಟ್ಟಿಗೊಳಿಸಲಾಗಿತ್ತು ಎಂದು ಹೇಳಿದ್ದಾನೆ. ಕಬ್ಬನ್ನು ಗದ್ದೆಯಲ್ಲಿಯೂ ಅಥವಾ ಹೆಚ್ಚಾಗಿ ನೀರು ಲಭ್ಯವಿರುವ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಗಾಣಗಳಿಂದ ಕಬ್ಬಿನ ರಸ ತೆಗೆಯಲಾಗುತ್ತಿತ್ತು. ತೆಂಗಿನ ಕಾಯಿ ಹಾಗೂ ಅದರ ಉತ್ಪನ್ನಗಳಾದ ಎಣ್ಣೆ, ಎಳೆನೀರು, ನಾರುಗಳ ವರ್ಣನೆಯು ಶಾಸನಗಳಿಂದ ತಿಳಿದುಬರುತ್ತದೆ. ತೆಂಗಿನ ಎಣ್ಣೆಯನ್ನು ಸಹ ಗಾಣಗಳಿಂದ ತೆಗೆಯಲಾಗುತ್ತಿತ್ತು. ಗಾಣಗಳನ್ನು ಮರದಿಂದ ಅಥವಾ ಕಲ್ಲಿನಿಂದ ಮಾಡಿ ಜೋಡಿ ಎತ್ತುಗಳ ಸಹಾಯದಿಂದ ಅದನ್ನು ತಿರುಗಿಸಿ ಅರೆದು ಉತ್ಪಾದಿಸುತ್ತಿದ್ದರು.

ಅಂದಿನ ಕಾಲದ ಸಾಹಿತ್ಯಾಧಾರಗಳು ಮೇಲೆ ಸೂಚಿಸುರುವ ಬೆಳೆಗಳ ವರ್ಣನೆಯನ್ನು ಕೊಡುತ್ತದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ 'ರಾಮಧಾನ್ಯ ಚರಿತ್ರೆ' ಇಲ್ಲಿ ಎಲ್ಲಾ ಧಾನ್ಯಗಳ ವರ್ಣನೆಯು ಇದ್ದರೂ ಸಹ ರಾಗಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಸಾಮ್ರಾಜ್ಯದಲ್ಲಿ ಕೆರೆ, ನೆಲೆಗಳು ಹಾಗೂ ಬಾವಿಗಳನ್ನು ನಿರ್ಮಿಸುವುದರ ಹೆಚ್ಚಿನ ಜವಾಬ್ದಾರಿಯನ್ನು ದೇವಾಲಯಗಳಿಗೆ, ಗ್ರಾಮಸಭೆಗಳು ಹಾಗೂ ಖಾಸಗಿ ವ್ಯಕ್ತಿಗಳಿಗೂ ವಹಿಸಿಕೊಡಲಾಗುತ್ತಿತ್ತು. ಅದಕ್ಕೆ ಅವರು ಈ ಕೆಲಸವನ್ನು ಧರ್ಮಕಾರ್ಯವೆಂದು ಪರಿಗಣಿಸಬೇಕಾಗಿದ್ದಿತ್ತು. ನೀರಾವರಿ ಕೃಷಿಯಿಂದ ಸರ್ಕಾರಕ್ಕೆ ಆಧಾಯ ಅಧಿಕವಾಗಿ ಬರುತ್ತಲಿತ್ತೆಂದು ಹೇಳಬಹುದು. ಕೆರೆ, ನಾಲೆ ಹಾಗೂ ಬಾವಿಗಳನ್ನು ನಿರ್ಮಿಸುವ ಜವಾಬ್ದಾರಿಯನ್ನು ದೇವಾಲಯ ಹಾಗೂ ಶ್ರೀಮಂತರುಗಳಿಗೆ ವಹಿಸುತ್ತಿದ್ದುದರಿಂದ ಜವರುಗಳು ಸಾಮಾನ್ಯ ಜನತೆಯ ಹೆಚ್ಚಿನ ಶ್ರಮವನ್ನು ಇದಕ್ಕೆ ಬಳಸಿಕೊಳ್ಳುತ್ತಿದ್ದರು. ಇಂತಹ ಸಮಯದಲ್ಲಿ ಸಾಮಾನ್ಯರ ಜೀವನ ಚಿಂತಾಜನಕವಾಗಿರುತ್ತೆತ್ತೆಂದು ಹೇಳಬಹುದು. ಕೆರೆ ನಿರ್ಮಿಸುವ ಅಥವಾ ಕೆರೆಯನ್ನು ನೋಡಿಕೊಳ್ಳುತ್ತಿದ್ದವರಿಗೆ ತೆರಿಗೆ ಹಾಗೂ ಇನ್ನಿತರ ಸನ್ನಿವೇಶದಲ್ಲಿ ಸಂಪೂರ್ಣ ವಿನಾಯಿತಿ ಇದ್ದಿತ್ತು. ಆದರೆ ಶ್ರಮಿಕರನ್ನು ಬಲಾತ್ಕರದಿಂದ ದುಡಿಸಿಕೊಂಡು ಇದನ್ನು ಅವರು ದೇವರಿಗೆ ಸಲ್ಲಿಸಿದ ಸೇವೆ ಅಥವಾ ದಾನವೆಂದು ಪರಿಗಣಿಸಿ ಅವರ ಬೆವರಿನ ಹನಿಗಳ ಮೇಲೆ ಮಹಲುಗಳನ್ನು ನಿರ್ಮಿಸುತ್ತಿದ್ದರು. ಇದಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಸಿಗುತ್ತದೆ. ಇವುಗಳನ್ನು 'ಕಡ್ಡಾಯ ಮತ್ತು ಬಿಟ್ಟಿ" ಎಂದು ಶಾಸನಗಳಲ್ಲಿ ಕರೆಯಲಾಗಿದೆ.

ಕೆರೆಗಳನ್ನು ಕಾಲಕಾಲಕ್ಕೆ ದುರಸ್ತಿಮಾಡಿಸಲಾಗುತ್ತಿತ್ತು. ದುರಸ್ತಿ ಎಂದರೆ ಸಾಮಾನ್ಯವಾಗಿ ಹೂಳು ತೆಗೆಯುವುದು, ಏರಿಗಳಲ್ಲಿ ಬಿರುಕು ಉಂಟಾದರೆ ಸರಿಪಡಿಸುವುದು, ಕೆರೆಯ ಕೊಳವೆಯಲ್ಲಿ ದೋಷವಿದ್ದರೆ ಸರಿಪಡಿಸುವುದು. ಇವು ಕೆರೆಗೆ ತೊಂದರೆ ನೀಡುತ್ತವೆ. ಅದ್ದರಿಂದ ಕಾಲಕಾಲಕ್ಕೆ ಇವನ್ನು ಸರಿಪಡಿಸಲು ವಿಶೇಷ ಹಣವನ್ನು ಮೀಸಲಿಡಲಾಗುತ್ತಿತ್ತು. ಪ್ರತಿವರ್ಷವೂ ಕೆರೆಯಿಂದ ಹೊಲಸನ್ನು ತೆಗೆದು ಸ್ವಚ್ಛಗೊಳಿಸುವ ವ್ಯಕ್ತಿಗಳಿಗೆ ಭೂಮಿಯನ್ನು ಕೊಡುಗೆಯಾಗಿ ನೀಡಲಾಗುತ್ತಿತ್ತು. ನೀರಾವರಿಯ ಹಕ್ಕುಗಳ ಕುರಿತು ಹಳ್ಳಿಹಳ್ಳಿಗಳ ನಡುವೆ ವಿರಸವುಂಟಾದರೆ ಪಂಚಾಯಿತಿಯ ಮೂಲಕ ಅದನ್ನು ಪರಿಹರಿಸಲಾಗುತ್ತಿತ್ತು. ಹಂಪಿ ಹಾಗು ಅದರ ಸುತ್ತಗಲಕ್ಕೂ ಸಾವಿರಾರು ಕೆರೆಗಳು ವಿಜಯನಗರದ ಅರಸರ ಕಾಲದವೆಂದು ಶಾಸನಗಳಿಂಥ ಕಂಡು ಬರುವುದರಿಂದ ರಾಜರು ನೀರಾವರಿಗೆ ಯಾವ ರೀತಿಯ ಪ್ರೋತ್ಸಾಹ ನೀಡುತ್ತಿದ್ದರೆಂಬುವುದು ಕಂಡುಬರುತ್ತದೆ. ಕೆರೆಯ ಉಪಯೋಗ ಕೇವಲ ವ್ಯವಸಾಯಕ್ಕಾಗಿಯೇ ಮೀಸಲಾಗಿರಲಿಲ್ಲ. ಮನುಷ್ಯನ ಬದುಕಿಗೆ ಪ್ರಮುಖವಾದ ಒಂದು ಅಂಗವಾಗಿದ್ದತ್ತೆನ್ನಬಹುದು. ವಿಜಯನಗರದ ಅರಸರ ರಾಣಿಯರೂ ಅವರ ಹೆಸರಿನಲ್ಲಿ ಕೆರೆಗಳನ್ನು ನಿರ್ಮೀಸಿರುವುದು ಕಂಡುಬರುತ್ತದೆ. ಕೇಷ್ಣದೇವರಾಯನನ್ನು ತನ್ನ ಆಮುಕ್ತಮೌಲ್ಯದಲ್ಲಿ "ರಾಜನು ಕೆರೆಗಳನ್ನು ನಿರ್ಮಿಸಿ, ನಾಲೆಗಳನ್ನು ತೋಡಿಸಿ, ನೀರಾವರಿ ಸೌಲಭ್ಯವನ್ನು ಸಾಮಾನ್ಯ ಜನತೆಗೂ ಒದಗಿಸಬೇಕು" ಎಂದು ಹೇಳುತ್ತಾನೆ. ಕರ್ನಾಟಕದಲ್ಲಿ ಬೇರೆ ಬೇರೆ ಭಾಗಗಳಲ್ಲಿ ಕಂಡುಬರುವ ಅನೇಕ ನೀರಾವರಿ ಕಾರ್ಯಗಳನ್ನು ಅವನ ಕಾಲದಲ್ಲಿ ಮಾಡಿಸಿದನೆಂಬುದಕ್ಕೆ ಆಧಾರಗಳಿವೆ.

ಮೇಲಿನ ರೀತಿಯಲ್ಲಿ ನೀರಾವರಿ ವ್ಯವಸ್ಥೆಯು ಇದ್ದರೂ ಮೂಲ ಮಳೆಯೇ ಆಗಿರುತ್ತಿತ್ತು. ಮಳೆಯು ಸಕಾಲಕ್ಕೆ ಬಾರದಿದ್ದರೆ ಸಾಮ್ರಾಜ್ಯದಲ್ಲಿ ಕ್ಷಾಮ, ಬರಗಾಲ, ನೆರೆ, ಬೆಳೆಯ ವಿಫಲತೆ, ಪ್ಲೇಗು ಮೊದಲಾದ ಪರಿಸ್ಥಿತಿ ಹಾಗೂ ರೋಗಗಳು ಬಂದು ಬರಡಿಸಿಲಿ ಬಡಿಯುವ ಹಾಗೆ ಬಡಿಯುತ್ತಿದ್ದವು, ಕೆರೆಯು ಎರಡೊ ಮೂರೋ ಸಾರಿ ಒಡೆದು ಹೋದರೆ ಬ್ರಾಹ್ಮಣರು ದೇವರ ಪೂಜೆ ಮಾಡಿ ಕೆರೆಗೆ ಮನುಷ್ಯ ಅಥವಾ ಪ್ರಾಣಿ ಬಲಿ ಕೊಡಲು ಹೇಳುತ್ತಿದ್ದರು. (ಮನುಷ್ಯರಾದರೆ ಮುತ್ತೈದೆಯಾಗಿರುವ ಹೆಂಗಸೇ ಆಗಬೇಕಿತ್ತು) ಅದರಂತೆ ನಡೆಸಲಾಗುತ್ತಿತ್ತೆಂದು ಪೇಸ್ ಹೇಳಿರುತ್ತಾನೆ. ನರಬಲಿಗೆ ಅಸ್ಪೃಶ್ಯರನ್ನು ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ಶ್ರೀಮಂತ ಸಾಮ್ರಾಜ್ಯವೆಂದು ಹೇಳಿಕೊಳ್ಳುತ್ತಿದ್ದ ವಿಜಯನಗರ ಸಾಮ್ರಾಜ್ಯದಲ್ಲಿ ಅಸ್ಪೃಶ್ಯರ ಸ್ಥಿತಿ ಚಿಂತಾಜನಕವಾಗಿತ್ತು.

ಕೃಷಿಯು ಅಂದು ಭೂಮಾಲಿಕರ ಸ್ವತ್ತಾಗಿದ್ದಿತ್ತು. ಭೂಮಿಯಲ್ಲಿ ಕೆಲಸಮಾಡಲು ಕೂಲಿಕೆಲಸಗಾರರನ್ನು, ಜೀತದಾಳುಗಳನ್ನು ನೇಮಿಸಿಕೊಳ್ಳಲಾಗುತ್ತಿದ್ದಿತು. ಕೂಲಿ ಕೆಲಸಗಾರರು ಸಾಮಾನ್ಯವಾಗಿ ಶೂದ್ರ ಜಾತಿಗಳಿಗೆ ಸೇರಿದವರಾಗಿದ್ದರು. ಶಾಸನಗಳಲ್ಲಿ ಇವರನ್ನು ಸ್ಪಷ್ಟವಾಗಿ ಹೊಲೆಯಲು ಮತ್ತು ಮುಲದ್ದು ಎಂದು ಕರೆದಿರುವುದು ಕಂಡು ಬರುತ್ತದೆ. ಇವರೆಲ್ಲರೂ ಸಹ ಅಸ್ಪೃಶ್ಯ ಜಾತಿಗೆ ಸೇರಿದವರಾಗಿರುತ್ತಿದ್ದರು. ಅಂದು ಇವರನ್ನು ಚಂಡಾಲರು, ಸಂಭೋಳಿಗಳು ಹಾಗೂ ಪಂಚಮರೆಂದು ಹೆಚ್ಚಾಗಿ ಕರೆಯಲಾಗುತ್ತಿತ್ತು.

**ಕೃಷಿಯಲ್ಲಿನ ಜಾತಿಗಳು**

ಶಾಸನಗಳಲ್ಲಿ ಕಂಡುಬರುವಂತೆ ಶೂದ್ರರು, ಗೌಡರು ಅಥವಾ ಒಕ್ಕಲಿಗರು ಕೊಲೆಯರು, ಮಾದಿಗರು, ಮೇಲು ಮತ್ತು ಕೆಳಜಾತಿಗಳೆಂಬ ಉಪವಿಧಾನಗಳು ಹಲವಿದ್ದವು. ಇವರೆಲ್ಲರ ಪ್ರಧಾನ ವೃತ್ತಿಯೇ ಕೃಷಿಯಾಗಿದ್ದಿತ್ತು. ಒಕ್ಕಲಿಗರು ಅಥವಾ ಗೌಡರು ನೆಲವನ್ನು ಉಳುಮೆ ಮಾಡಿಸುವವರಾಗಿದ್ದರು. ಅಂದಿನ ಕೃಷಿಯು ಇವರ ಆರ್ಥಿಕ ವ್ಯವಸ್ಥೆಯ ಮೇಲೆ ನಿಂತಿತ್ತೆಂದು ಹೇಳಬಹುದು. ಹೊಲೆಯರು ಕೃಷಿ ಕಾರ್ಮಿಕರಲ್ಲಿ ಪ್ರಮುಖರಾದವರಾಗಿದ್ದರು. ಇವರು ಹುಟ್ಟು ಸಾವುಗಳೆರಡೂ ಮಣ್ಣಿನೊಂದಿಗೆ ನಿಕಟ ಸಂಪರ್ಕ ಹೊಂದಿತ್ತು.

**ಭೂಕಂದಾಯ**

ವಿಜಯನಗರ ಸಾಮ್ರಾಜ್ಯದ ಭೂಕಂದಾಯ ವ್ಯವಸ್ಥೆಯಲ್ಲೂ ಎರಡು ರೀತಿಯ ಪದ್ಧತಿಗಳಿದ್ದವು. ಅ. ಕಂದಾಯ ನಿಗದಿ, ಆ. ಕಂದಾಯ ವಸೂಲಿ. ಭೂಕಂದಾಯ ನಿಗದಿಯ ಯಾವುದೇ ಪದ್ಧತಿಯಲ್ಲಿ ಮೊದಲನೆಯ ತತ್ವವನ್ನು ಕೃಷಿಕನು ಕೊಡಬೇಕಾಗಿದ್ದ ತೆರಿಗೆಯನ್ನು ಮುಖ್ಯವಾಗಿ ಮಣ್ಣಿನ ವರ್ಗ ಮತ್ತು ಬೇಸಾಯದ ಪರಿಸ್ಥಿತಿಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸಲಾಗುತ್ತಿತ್ತು. ಇದಕ್ಕಾಗಿಯೇ ಬೇಸಾಯದ ಭೂಮಿಯನ್ನು ಈ ಕೆಳಕಂಡಂತೆ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿತ್ತು.

ಅ. ಕಡಾರಂಬ (ಒಣಬೇಸಾಯ)
ಆ. ನೀರಾರಂಬ (ಗದ್ದೆ ಬೇಸಾಯ)
ಇ. ತೋಟಾರಂಬ (ತೋಟದ ಬೇಸಾಯ)
ಈ. ಕುಮರಿ (ಸ್ಥಳವನ್ನು ವರ್ಗಾಯಿಸುವ ಬೇಸಾಯ)

ಶಾಸನಗಳಲ್ಲಿ ಇವುಗಳನ್ನು ಬೇರೆ ಬೇರೆಯಾಗಿ ಉಲ್ಲೇಖಿಸಿರುವುದರಿಂದ ಅವಕ್ಕೆ ಬೇರೆ ಬೇರೆ ದರಗಳಲ್ಲಿ ಕಂದಾಯ ನಿಗದಿ ಮಾಡಲಾಗುತ್ತಿತ್ತೆಂದು ಕಂಡುಬರುತ್ತದೆ. ರೈತರು ಉತ್ಪಾದಿಸಿದ ೧/೬ ಭಾಗವನ್ನು ತೆರಿಗೆಯಾಗಿ ಕೊಡಬೇಕಾಗಿತ್ತು. ವಿದೇಶಿಯರು ತಮ್ಮ ಬರವಣಿಗೆಯಲ್ಲಿ ಹೇಳೀರುವ ವರ್ಣನೆಯು ವಿಜಯನಗರದಲ್ಲಿ ಇದ್ದದ್ದೆ ಆಗಿದ್ದರೆ ಮೇಲಿನ ತೆರಿಗೆಯ ಪ್ರಮಾಣವು ಸುಳ್ಳೆಂದು ಹೇಳಬಹುದು. ತೆರಿಗೆಯನ್ನು ದರ, ಸುಂಕಣಿ ಎಂದೂ ಕರೆಯಲಾಗುತ್ತಿತ್ತು. ಗ್ರಾಮದ ರೈತರು ಮತ್ತು ಇತರ ನಿವಾಸಿಗಳು ತಮ್ಮ ಮನೆಗಳ ಮೇಲೆ ತೆರಿಗೆ ಕೊಡಬೇಕಾಗಿತ್ತು. ಅದನ್ನು ಹೊದಕೆ ಅಥವಾ ಹೊದಿಸಿದ ಮಾಡು, ಬಿದರ ಮತ್ತು ಮಹೆವನ ಎಂದು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದರು. ಅಂದಿನ ಕಾಲದಲ್ಲಿ ರೈತರ ಜೀವನಾಡಿಯೇ ಆಗಿದ್ದ ನೇಗಿಲು, ಎತ್ತುಗಳು, ಬಂಡಿಗಳು, ಬಿತ್ತನೆ ಬೀಜಗಳೆಲ್ಲವೂ ತೆರಿಗೆಯಿಂದ ಮುಕ್ತವಾಗಿರುತ್ತಿರಲಿಲ್ಲ. ದನಗಳನ್ನು ಮೇಯಿಸುವ ಹುಲ್ಲುಗಾವಲು ಪ್ರದೇಶಕ್ಕೂ ತೆರಿಗೆ ಕೊಡಬೇಕಾಗಿದ್ದಿತ್ತೆಂದು ಆಧಾರಗಳಿಂದ ತಿಳಿದುಬರುತ್ತದೆ.

**೫.೨. ವಿಜಯನಗರ ಕಾಲದಲ್ಲಿ ತೂಕ ಮತ್ತು ಆಳತೆ**

ತೂಕ ಮತ್ತು ಆಳತೆಗಳೆರಡೂ ಸಹ ಒಂದೇ ಅರ್ಥವನ್ನು ಸೂಚಿಸುವಂತಿದೆ. ಬೆಳೆಗಳನ್ನು ರೈತರು ಬೆಳೆದಾದ ಮೇಲೆ ಫಸಲನ್ನು ಅಳತೆ ಮಾಡುವುದು ಒಂದು ಪ್ರಮುಖವಾದ ಕೆಲಸವೆ. ಈ ಇಳುವರಿಯ ಆಧಾರದ ಮೇಲೆಯೇ ಭೂಮಿಯ ಫಲವತ್ತತೆಯನ್ನು ಗುರುತಿಸಲಾಗುತ್ತಿತ್ತು ಹಾಗೂ ಗದ್ದೆಗಳ ವಿಸ್ತಾರವನ್ನು ಸೂಚಿಸಲೂ ಸಹ ಸಾಧನಗಳಾಗಿದ್ದವು. ವಿಜಯನಗರದ ಕಾಲದಲ್ಲಿ

ಪ್ರಮುಖವಾಗಿ ಬಳಕೆಯಲ್ಲಿದ್ದ ಅಳತೆ ಮತ್ತು ತೂಕದ ವ್ಯವಸ್ಥೆಯನ್ನು ಸಾಮಾನ್ಯ ಜನತೆಯಿಂದ ಪ್ರಾರಂಭವಾಗಿ ರಾಜಾಸ್ಥಾನದ ವರೆಗೆ ಏಕರೀತಿಯಲ್ಲಿತ್ತು. ಅಂದು ಕಂಡುಬರುತ್ತಿದ್ದ ಅಳತೆಯ ವಿಧಾನಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

ಅವುಗಳೆಂದರೆ ಅರ್ಕಾಲು (ಒಂದು ಪಾವಿನ ಅರ್ಧಭಾಗ), ಅಗ್ರ (ದಾನ ಕೊಡುವಾಗ ನೀಡುವ ಆಹಾರದ ಒಂದು ಅಳತೆ), ಅಗ್ರ (ಒಂದು ಪಲ್ಲದ ತೂಕ), ಅಚ್ಚ (ಎಂಬತ್ತು ಗುಲಗಂಜಿಯ ತೂಕ), ಅಟವಿ (ಅರ್ಧ ಸೇರಿನ ಅಳತೆ), ಅಡ್ಡಿ (ಧಾನ್ಯಗಳಲ್ಲಿ ಅಳೇಯುವ ಮಾಪನ) ಅಡ್ಡಿ ಅಡ್ಡಿಡಿ ಹದಿಣಾರು ಸೇರುಗಳ ಮಾಪನ), ಇಕ್ಕಳ (ಕಾಳು ತುಂಬಿದ ಎರಡು ಚೀಲಗಳ ಮಾಪನ), ಅಳ್ಳೊಟ್ಟೆ (ಒಬ್ಬ ವ್ಯಕ್ತಿಯು ಹೊರಬಹುದಾದಷ್ಟು ಅಳತೆಯ ಚೀಲ), ಐಗಳ (ಕಾಳು ತುಂಬಿದ ಐದು ಕೊಳಗಗಳ ಮಾಪನ), ಕಂಡಗ (ಇಪ್ಪತ್ತು ಕೊಳಗ ಧಾನ್ಯದ ಮಾಪನ), ಕಂಡಿ (ಹತ್ತು ಮಣದ ಅಳತೆ) ಕಮ್ಮಿ (ಭೂಮಿಯನ್ನು ಅಳತೆ ಮಾಡುವ ಒಂದು ಪ್ರಮಾಣ), ಕವಳಿಗೆ (ವೀಳೆದೆಲೆ ಲೆಕ್ಕ ಹಾಕಲು ಬಳಸುತ್ತಿದ್ದ ಮಾಪನ), ಕಳರುಗಣೆಗ (ಭೂಮಿಯನ್ನು ಅಳೆಯಲು ಬಳಸುತ್ತಿದ್ದ ಒಂದು ಅಳತೆಯ ಕೋಲು) ಕಾಡಿ (ಭತ್ತದ ಅಳತೆಯ ಪ್ರಮಾಣ), ಕುಂಟೆ (ಒಂದು ಎಕರೆ ಜಮೀನಿನ ನಲವತ್ತನೇ ಒಂದು ಭಾಗ), ಕುಳ (ನಾಲ್ಕು ಬಳ್ಳಗಳ ಒಂದು ಅಳತೆ), ತೊಂಬ (ಸುಮಾರು ಇಪ್ಪತ್ತು ಚೀಲ ಕಾಳು ಹಿಡಿಯುವ ಬಿದಿರಿನಿಂದ ತಯಾರಿಸಿದ ಅಳತೆಯ ಪ್ರಮಾಣ), ಕೈ (ನೂರು ವೀಳೆದೆಲೆಗಳ ಕಟ್ಟು), ಕೊಟ್ಟ (ಇಪ್ಪತೊಂದು ಕೊಳಗ), ಕೊರೆ (ಅರ್ಧ ತುಂಬಿದ ದವಸದ ಚೀಲ ಅಥವಾ ಬಿದಿರಿನ ವಸ್ತುಗಳು), ಕೊಳಗ (ಧಾನ್ಯವನ್ನು ಅಳಯುವ ಒಂದು ಪ್ರಮಾಣದ ಸಾಧನ), ಗಜ (ಭೂಮಿಯನ್ನು ಅಳೆಯುವಾಗ ಬಳಸುವ ಅಳತೆ ಪದ್ಧತಿ), ಗಳಿಗೆ (ಧಾನ್ಯ ಸಂಗ್ರಹಿಸಲು ಈಚಲು ಬರಲಿನಿಂದ ತಯಾರಿಸಿದ್ದ ಒಂದು ಸಾಧನ), ಗಾತ್ರ (ಒಂದು ಸಾವಿರ ವೀಳೆದೆಲೆಯ ಕಟ್ಟು), ಗುಲಿಕಲ್ಲು (ಜಮೀನುಗಳನ್ನು ಅಳತೆ ಮಾಡಿ ಎಲ್ಲೆಯನ್ನು ಸೂಚಿಸಲು ನೆಡುತ್ತಿದ್ದ ಕಲ್ಲು) ಗುಮ್ಮಿ (ಏಳರಿಂದ ಎಂಟು ಚೀಲ ಧಾನ್ಯ ಸಂಗ್ರಹಿಸಿತ್ತಿದ್ದ ಮರದ ಪಾತ್ರ),ಬಿಟ್ಟಿ (ಒಂದು ನೂರು ವೀಳೆದೆಲೆಯ ಕಟ್ಟು), ಚಾರಿ (ಅಳತೆಯ ಗಡಿಗೆ) ಚೆಂಚಾಳು (ವಸ್ತುಗಳನ್ನು ತೂಕ ಮಾಡಲು ಬಳಸುತ್ತಿದ್ದ ತಕ್ಕಡಿ), ಚೇರಿ (ನೀರಾವರಿ ಭೂಮಿಯನ್ನು ಅಳೆಯಲು ಬಳಸುತ್ತಿದ್ದ ಅಳತೆಯ ಮಾಪನ), ತೂಗೇಕೋಲು (ದವಸ ಧಾನ್ಯಗಳನ್ನು ತೂಕ ಮಾಡಲು ಬಳಸುತ್ತಿದ್ದ ತಕ್ಕಡಿ), ನಗ (ಹತ್ತಿಯ ಗಾತ್ರವನ್ನು ಅಳೆಯುವ ಒಂದು ಮಾನದಂಡ), ಪಡ್ಲ (ರಾಶಿಯ ಗಾತ್ರವನ್ನು ಹೇಳಲು ಬಳಸುವ ಮಾಪನ), ಪತ್ತಾರಿ (ತೆರಿಗೆ ಹಣವನ್ನು ಪಡೆಯುವವನು ಹಾಗೂ ಸಾರ್ವಜನಿಕ ದವಸಗಳನ್ನು ಅಳತೆ ಮಾಡುವವನು), ಪಲ್ಲ (ನೂರು ಸೇರು ಅಳತೆಯ ಪ್ರಮಾಣ), ಪಾವು (ಅಲತೆಯ ಸೇರಿನ ನಾಲ್ಕನೆಯ ಒಂದು ಭಾಗ) ಅರೆ ಪಾವು (ಸೇರಿನ ಎಂಟನೆಯ ಒಂದು ಭಾಗ), ಬಕ್ಕ (ನಲವತ್ತೆಂಟು ಸೇರಿನ ಅಳತೆಯ ಪ್ರಮಾಣ), ಬಳ್ಳ (ಎರಡು ಸೇರು ಅಳತೆ), ಮಣ (ತೂಕದ ಒಂದು ಪ್ರಮಾಣ ಸಾಮಾನ್ಯವಾಗಿ ಕಟ್ಟಿಗೆ ತೂಗಲು ಈ ಪದ ಬಳಸುತ್ತಿದ್ದರು), ಮಕ್ಕರಿ (ಹತ್ತು ಹನ್ನೆರಡು ಸೇರು ಹಿಡಿಸುವಷ್ಟು ದೊಡ್ಡದಾದ ಬಿದಿರಿನ ಪುಟ್ಟಿ), ಮಾನ (ಎಣ್ಣೆಯನ್ನು ಅಳೆಯುತ್ತಿದ್ದ ಅಳತೆಯ ಮಾಪನ), ಮಾರು (ಮನುಷ್ಯ ತನ್ನ ಎರಡು ಕೈಗಳನ್ನು ಚಾಚಿದಾಗ ಅವನ ಎರಡು ಕೈ ಬೆರಳುಗಳವರೆಗಿನ ಅಂತರ, ಇದನ್ನು ಹೂವಿನ ವ್ಯಾಪಾರಿಗಳು ಹೆಚ್ಚಾಗಿ ಬಳಸುತ್ತಿದ್ದರು), ಮೊಳ (ಮೊಣಕೈ ಗಂಟಿನಿಂದ ನಡುಬೆರಳಿನ ತುದಿಯವರೆಗಿನ ಅಳತೆ), ಲಿಂಗಮುದ್ರೆ ಕಲ್ಲು (ಹೊಲದ ಸೀಮೆಯನ್ನು ಗುರುತಿಸಲು ನೆಡುತ್ತಿದ್ದ ಕಲ್ಲು), ಸೇರು (ಕೊಳಗದ ನಾಲ್ಕನೇ ಒಂದು ಭಾಗ), ಸೊಲ್ಗೆ (ಅರ್ಧಸೇರಿನ ಅಳತೆ), ಹೆಡಿಗೆ (ಬಿದಿರಿನಿಂದ ಹೆಣೆದ ಅಳತೆಯ ಸಾಧನ).

ವ್ಯಾಪಾರ ವ್ಯವಹಾರಗಳನ್ನು ಕುರಿತು ವಿಚಾರ ಮಾಡುವಾಗಲಂತೂ ಸಾಧನ ಸಲಕರಣೆಗಳಾದ ತೂಕ ಅಳತೆ ಹಾಗೂ ಮಾನಗಳ ಅರ್ಥ ತಿಳಿಯುವುದು ಅತ್ಯಂತ ಅವಶ್ಯಕವೆನ್ನಿಸುತ್ತದೆ. ವಿಜಯನಗರದ ಕಾಲದಲ್ಲಿ ಸಾಮಾನ್ಯವಾಗಿ ನಾಣ್ಯಗಳನ್ನು ತೂಕಕ್ಕಾಗಿ ಉಪಯೋಗಿಸುತ್ತಿದದ್ದುದು ಉಂಟು. ಮೇಲಿನ ರೀತಿಯಲ್ಲಿ ನಮ್ಮ ಸಂಸ್ಕೃತಿಯಲ್ಲಿ ಬಹುಪ್ರಾಚೀನ ಕಾಲದಿಂದಲೂ ತೂಕ ಅಳತೆಯ ಸಾಧನಗಳ ಬಳಕೆಯಲ್ಲಿ ಇದ್ದವೆನ್ನುವುದರ ಜೊತೆಗೆ ಇಂದಿಗೂ ಉಳಿದುಕೊಂಡಿವೆ. ವಿಜಯನಗರದ ಕಾಲದ ಈ ತೂಕ ಅಳತೆಯನ್ನು ತಿಳಿಯಲು "ಪ್ರೌಢರಾಯನ ಕಾವ್ಯ" ತುಂಬ ಉಪಯುಕ್ತವಾಗಿದೆ. ಮೇಲೆ ಸೂಚಿಸಿರುವ ಅಳತೆಯ ಮಾಪನವು ನಮ್ಮಲ್ಲಿ ಮೆಟ್ರಿಕ್ ಪದ್ಧತಿಯು ಬಳಕೆಯಲ್ಲಿ ಬರುವವರೆಗೂ ರೂಢಿಯಲ್ಲಿದ್ದವು. ಈಗ ಅವುಗಳ ಬಳಕೆ ಕಡಿಮೆಯಾಗಿದೆ ಎನ್ನಬಹುದು. ಅಂದಿನ ಕಾಲದ ಅಳತೆಯ ಸಾಧನಗಳ ವಿವರವನ್ನು ಮೇಲೆ ವಿವರಿಸಿರುವ ಅಳತೆಯ ಸಾಧನಗಳ ಕುರಿತು ಡಾ. ಸಾಲೆತೊರೆಯವರು ಪಾರಿಭಾಷಿಕ ಸೂಚಿಯಲ್ಲಿ ಅಳತೆಯ ಮಾಪನಗಳನ್ನು ವಿವರಿಸಿದರೆ ರಾಜ್ಯಾದಿತ್ಯನು ಬೇರೆ ಬೇರೆ ಅಳತೆ ಮತ್ತು ತೂಕಗಳ ಪಟ್ಟಿಯನ್ನು ತನ್ನ "ವ್ಯವಹಾರಗಣಿತ"ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿತ್ತಾನೆ.

ಇತ್ತೀಚಿನ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಭಿವೃದ್ಧಿ ವಿಭಾಗವು 'ಕೃಷಿ ಪದ ಕೋಶ' ಎಂಬುವ ಮಹತ್ವದ ಯೋಜನೆಯನ್ನು ಕೈಗೊಂಡು ಡಾ. ಕೆ.ವಿ ನಾರಾಯಣರವರ ಸಂಪಾದಕತ್ವದಲ್ಲಿ ಹೊರತಂದಿರುವ ಕೃತಿಯಲ್ಲಿ ಮೇಲಿನ ಅಳತೆಯ ವಿಧಾನಗಳು ಮರೆಯಾಗುತ್ತಿರುವ ಸಂದರ್ಭದಲ್ಲಿ ಈ ಪದಕೋಶವು ಪ್ರಮುಖ ಇತಿಹಾಸ ಗ್ರಂಥವಾಗುವುದರಲ್ಲಿ ಎರಡು ಮಾತಿಲ್ಲ.

**೫.೩. ಕೃಷಿಯ ಉಪಕರಣಗಳು**

ವಿಜಯನಗರದ ಜನರು ತಾವು ಜೀವನದ ಆಧಾರವನ್ನಾಗಿ ನಂಬಿದ್ದ ಕೃಷಿಯನ್ನು ಕೈಗೊಳ್ಳಲು ವಿಧವಿಧವಾದ ಉಪಕರಣಗಳನ್ನು ಬಳಸುತ್ತಿದ್ದರು. ಈ ಉಪಕರಣಗಳನ್ನು ಮನುಷ್ಯನು ತನ್ನ ಕೈಗಳ ಮುಂದುವರಿಕೆಯಾಗಿ ನಿರ್ಮಿಸಿಕೊಂಡವು ಎಂದು ಕರೆಯಬಹುದು. ಕೃಷಿಯ ತಂತ್ರಜ್ಞಾನದ ಮುಖ್ಯ ನೆಲೆಗಳು ಈ ಉಪಕರಣಗಳ ವಿನ್ಯಾಸದಲ್ಲಿ ಸಿದ್ಧಗೊಳಿಸುವ ವಸ್ತುಗಳ ಬಳಕೆಯಲ್ಲಿ ಮೊದಲು ಕಂಡುಬಂದಿತ್ತೆಂದೂ ನಂತರ ಕುಯ್ಯುವ ಚಿಕ್ಕ ಕುಡುಗೋಲಿನಿಂದ ಹಿಡಿದು ಹಲವಾರು ಸಂಕೀರ್ಣ ಅಂಶಗಳಿರುವ ನೇಗಿಲು, ಗಾಡಿ (ಬಂಡಿ)ಗಳವರೆಗೆ ವ್ಯಾಪಿಸಿಕೊಂಡಿವೆ. ವಿಜಯನಗರದ ಜನರು ದಿನನಿತ್ಯದ ಬಳಕೆಗೆ ಬಳಸುತ್ತಿದ್ದ ಹಾಗೂ ವ್ಯವಸಾಯಕ್ಕೆ ಉಪಯೋಗಿಸುತ್ತಿದ್ದ ಉಪಕರಣಗಳು ಕೆಳಕಂಡವುಗಳೆಂದು ತಿಳಿಯಬಹುದಾಗಿದೆ. ಇವುಗಳನ್ನು ತಿಳಿಯಲು ಶಾಸನಗಳು ಪ್ರಮುಖ ಆಧಾರಗಳಾಗಿವೆ. ನಂತರ ದೇಶೀ ಹಾಗೂ ವಿದೇಶೀ ಸಾಹಿತ್ಯಗಳು ನೆರವಾಗುತ್ತವೆ. ಅಂದು ಬಳಕೆಯಲ್ಲಿದ್ದ ವಸ್ತುಗಳು ಇಂದಿಗೂ ನಮ್ಮ ಹಳ್ಳಿಗಳಲ್ಲಿ ಕಾಣಬಹುದು (ಇಂದು ಆಧುನಿಕ ಕೃಷಿ ಪದ್ಧತಿಯಿಂದಾಗಿ ಇವು ನಷ್ಟವಾಗುತ್ತಿವೆ). ವಿಜಯನಗರಕ್ಕಿಂತಲೂ ಹಿಂದೆಯೇ ಈ ಉಪಕರಣಗಳಿದ್ದವೆಂದು ಕುಮಾರ ವಾಲ್ಮೀಕಿಯಲ್ಲಿ ಕಂಡು ಬರುತ್ತದೆ. ಕನಕದಾಸರು ತಮ್ಮದೊಂದು ಕೀರ್ತನೆಯಲ್ಲಿ "ಹೃದಯ ಹೊಲವನು ಮಾಡಿ, ತನುವ ನೇಗಿಲ ಮಾಡಿ...., ಎರಡೆತ್ತಿ ಹೂಡಿ....., ಮಿಣಿಯ ಕಣ್ಣಿ ಹಗ್ಗವ ಮಾಡಿ, ಧಾನ್ಯವ ನೋಡಿ ಬಿತ್ತರಯ್ಯ....." ಎಂಬ ಸಾಲುಗಳು ಅಂದಿನ ಉಪಕರಣಗಳ ಬಗ್ಗೆ ಬೆಳಕನ್ನು ಚೆಲ್ಲುತ್ತದೆ.

ಅಂದಿನ ಪ್ರಮುಖ ಕೃಷಿ ಉಪಕರಣಗಳೆಂದರೆ ಕುಂಟೆ (ಫಸಲಿನ ಮಧ್ಯೆ ಇರುವ ಕಳೆಯನ್ನು ತೆಗೆಯುವ ಉಪಕರಣ. ಇದರಲ್ಲಿ ಐದ್ಗೇಣಿನ ಗುಂಟೆ, ಕಿರಿಗುಂಟೆ, ಕೈಗುಂಟೆ, ತಲೆಗುಂಟೆ, ಬಾರುಗಂಟೆ ಎಂದು ಕರೆಸಿಕೊಳ್ಳುತ್ತಿದ್ದ ವಿವಿಧ ರೀತಿಯ ಕುಂಟೆಗಳಿದ್ದವು) ಕುಡ (ಕುಂಟೆಗೆ ಜೋಡಿಸುವ ಕಬ್ಬಿಣದ ಪಟ್ಟಿ), ಕುಡುಗೋಲು (ಬಾಗಿದ, ಒಳ ಅಂಚಿನಲ್ಲಿ ಹರಿತವುಳ್ಳ ಕತ್ತಿ), ಕುದ್ರಕೆಳಿ (ನೇಗಿಲ ಉದ್ದ ಪಟ್ಟಿ ಮತ್ತು ನೇಗಿಲನ್ನು ಜೋಡಿಸುವ ಕೀಲು), ಕುಪ್ಪೆಚಕ್ಕೆ (ಹುಲ್ಲಿನ ಮೆದೆಯನ್ನು ತಟ್ಟುವುದಕ್ಕೆ ಬಳಸುವ ಮರದ ಸಾಧನ), ಕುಮ್ಮು (ಎತ್ತಿನ ಗಾಡಿಯ ಚಕ್ರದ ಮಧ್ಯಭಾಗದಲ್ಲಿರುವ ಗುಂಭ), ಕುರಡಿ (ಕೊಡಲಿ), ಕುರಪಿ (ಕಸ ಕೀಳಲು ಬಳಸುತ್ತಿದ್ದ ಚಿಕ್ಕ ಕತ್ತಿ), ಕುರ್ಗೊಂಬು (ಗೊಬ್ಬರ ತುಂಬಿಡುತ್ತಿದ್ದ ಒಂದು ಸಾಧನ). ಕೈತಲೆ (ತೆಂಗಿನ ಮರ ಹತ್ತುವವನು ಕೈಗಳಿಗೆ ಹಾಕಿಕೊಳ್ಳುತ್ತಿದ್ದ ಒಂದು ಸಾಧನ), ಕೊಂಗ್ಲಿ (ತೆಂಗಿನಕಾಯಿ ಕೀಳಲು ಬಳಸುವ ಉಪಕರಣಕ್ಕೆ ಜೋಡಿಸುವ ಕಬ್ಬಿಣದ ತುದಿ), ಕೊಂಗ್ಲಿಕಟ್ಗೆ (ಕಣದಲ್ಲಿ ತೆನೆ ತಿರುವಿ ಹಾಕಲು ಬಳಸುವ ಸಾಧನ), ಕೊಟ್ಟ (ದನಗಳಿಗೆ ಔಷಧಿ ಕುಡಿಸಲು ಬಳಸುತ್ತಿದ್ದ ಸಾಧನ) ಕೊಡ್ಡ (ನೆಲಸಮ ಮಾಡಲು ಬಳಸುವ ಹಲಗೆ), ಕೊಡ್ಲಿ (ಸೌಧೆ ಸೀಳುವುದಕ್ಕೆ ಬಳಸುವ ಕಬ್ಬಿಣದ ಸಾಧನ ಇದನ್ನು ಕೊಡ್ಲಿ, ಗೊಡ್ಲಿ, ಕ್ವಡ್ಲಿ, ಚಿಕ್ಕದಾದುದಕ್ಕೆ ಪಿಚ್ಗೊಡ್ಲಿ, ಬಾಯಿಕೊಡ್ಲಿ, ಕೈಕೊಡಲಿ ಎಂದು ಅದರ ಆಕಾರಕ್ಕೆ ಅನುಗುಣವಾಗಿ ಕರೆಯುತ್ತಿದ್ದರು), ಅರ್ಗತ್ತಿ (ಬಿದಿರಿನಿಂದ ನಿರ್ಮಿಸಿದ್ದ ತೊಲೆ), ಅಟ್ಣೆ (ಬೆಳೆಯನ್ನು ಕಾಪಾಡಲು ಬೆಳೆಯ ಮಧ್ಯೆ ಹಾಕಿಕೊಳ್ಳುತ್ತಿದ್ದ ಮಂಚ), ಅಡ್ಡೆ (ನೀರು ಹಾಗೂ ಇನ್ನಿತರ ವಸ್ತುಗಳನ್ನು ತರಲು ಬಳಸುತ್ತಿದ್ದ ಉಪಕರಣ), ಅರ (ಕುಡುಗೋಲು ಮತ್ತಿತರ ವಸ್ತುಗಳನ್ನು ಮಸೆಯಲು ಬಳಸುವ ಉಪಕರಣ), ಉತ್ತರಾಣಿ ಕಟ್ಗೆ (ಕಣದಲ್ಲಿ ಧಾನ್ಯವನ್ನು ಸ್ವಚ್ಚ ಮಾಡಲು ಬಳಸುತ್ತಿದ್ದ ಕಡ್ಡಿ), ಉದ್ದಿಗಿ (ಕುಂಟೆ ಎಳೆಯಲು ಸಹಾಯಕವಾಗುವಂತೆ ಕುಂಟೆಗೆ ಜೋಡಿಸಿರುವ ಉದ್ದನೆಯ ಬೊಂಬಿನ ಕಟ್ಟಿಗೆ), ಉಪ್ಪಮಣೆ (ಭತ್ತದ ರಾಶಿ ಮಾಡಲು ಬಳಸುತ್ತಿದ್ದ ಸಾಧನ), ಉರ್ಗಪತ್ತಿ (ವೀಳೆಸೆಲೆಗಳನ್ನು ಬಳ್ಳಿಯಿಂದ ಬೇರ್ಪಡಿಸಲು ಉಪಯೋಗಿಸುತ್ತಿದ್ದ ಸಾಧನ), ಉಳಿ (ಕಳೆತೆಗೆಯುವ ಸಾಧನ), ಉಳ್ಳ (ಹಂದಿಯನ್ನು ಹಿಡಿಯಲು ಬಳಸುವ ಸಾಧನ), ಎಣೆ (ಭತ್ತದ ಹುಲ್ಲು ತುಳಿಸಿ ಹುಲ್ಲನ್ನು ಮುರುಯಲು ಹಸುಗಳಿಂದ ಜೋಡಿಸಲ್ಪಟ್ಟ ಒಂದು ಸನ್ನಿವೇಶ), ಏಣಿ (ಎತ್ತರದ ಭಾಗಕ್ಕೆ ಹತ್ತಲು ಬಿದಿರಿನಿಂದ ನಿರ್ಮಿಸಿಕೊಂಡ ಸಾಧನ), ಏತ (ಬಾವಿಯಿಂದ ನೀರನ್ನು ಮೇಲೆತ್ತುವ ಸಾಧನ) ಒನ್ಕೆ (ತೆನೆ ಬಡಿಯಲು ಹಾಗೂ ಭತ್ತ ರಾಗಿಗಳನ್ನು ಕುಟ್ಟಿ ಹಸನು ಮಾಡಲು ಬಳಸುತ್ತಿದ್ದ ಪ್ರಮುಖ ಸಾಧನ), ಕವಣೆ (ಕಲ್ಲನ್ನು ಇಟ್ಟು ತಿರುಗಿಸಿ ಬೀಸಿ ಹೊಡೆಯುವುದಕ್ಕಾಗಿ ಮಾಡಿಕೊಂಡಿದ್ದ ಸಾಧನ), ಕೊಪ್ಪರಿಗೆ (ಮಣ್ಣೇರಿಸಲು ಬಳಸುತ್ತಿದ್ದ ಒಂದು ಉಪಕರಣ), ಕೊಂಬ (ಧಾನ್ಯ ಸಂಗ್ರಹಿಸಲು ಬಳಸುವ ಸಾಧನ), ಕೊಳಗ (ಧಾನ್ಯ ಶೇಖರಿಸಲು ಬಳಸುವ ಕಡಾಯಿ

ಪಾತ್ರೆ), ಕೊರೆ (ಹಾರೆ), ಕೊರಂಗೆ (ತಾಳೆ ಮರದ ನೀರು ಹಾಯಿಸುವ ಒಂದು ಸಾಧನ), ಕೊಳ್ವೆ (ಬೆಂಕಿ ಊದಲು ಉಪಯೋಗಿಸುವ ಉದ್ದನೆಯ ಕಬ್ಬಿಣದ ಕೊಳವೆ), ಗಡೆ (ಬಾವಿಯ ರಾಟೆ, ಗಾಲಿ), ಗಡಾರಿ (ಗಟ್ಟಿ ನೆಲವನ್ನು ಅಗೆಯಲು ಬಳಸುವ ಉಪಕರಣವೆಂದು ಹೇಳಬಹುದು), ಗರಗಸ (ಮರ ಕೊಯ್ಯುಲು ಬಳಸುತ್ತಿದ್ದ ಹಲ್ಲುಗಳುಳ್ಳ ಒಂದು ಬಗೆಯ ಆಯುಧ), ಗಾಣ (ಎಣ್ಣೆಯನ್ನು ಅಥವಾ ರಸವನ್ನು ತೆಗೆಯುವ ಸಾಧನ), ಗಾದಿಗೆ (ಈರುಳ್ಳೀ ಸಂಗ್ರಹಣೆಗಾಗಿ ಮಾಡುವ ಗೂಡಾಗಿದ್ದಿತ್ತು), ಗಾಡಿ (ಅಂದಿನ ಕಾಲದ ಸಾರಿಗೆಯ ಪ್ರಮುಖ ಮಾರ್ಗ ಹಾಗೂ ಕೃಷಿಯ ಸಾಧನಗಳಲ್ಲಿ ಪ್ರಮುಖವಾದ ಸಾಧನ, ಇದನ್ನು ಎತ್ತು, ಕೋಣಗಳನ್ನು ಕಟ್ಟಿಕೊಂಡು ಎಳೆಸುತ್ತಿದ್ದರು), ಗುದ್ದಲಿ (ನೆಲ ಅಗೆಯಲು ಬಳಸುವ ಉಪಕರಣ, ಗುದ್ದಲಿ, ಕೋಲ್ಗುದ್ಲಿ, ಕೈಗುದ್ಲಿ, ದೊಡ್ಡಗುದ್ಲಿ, ಬಾಯ್ಗುದ್ಲಿ, ಶಿಗುದ್ಲು ಎಂದು ತನ್ನ ಆಕಾರಕ್ಕೆ ಹಾಗೂ ಉಪಯೋಗಕ್ಕೆ ತಕ್ಕಂತೆ ವಿವಿಧ ಹೆಸರುಗಳಿಂದ ಕರೆಯಲಾಗಿದ್ದ ಒಂದು ಕೃಷಿ ಸಾಧನ), ಗುಮ್ಮಿ (ಗುಡಾಣ ಅಥವಾ ಧಾನ್ಯ ತುಂಬಿಡಲು ಬಳಸುವ ಉಪಕರಣ), ಚನಾ (ಕಲ್ಲು ಒಡೆಯಲು ಬಳಸುವ ಸಾಧನ), ಜಿಗ್ಗೆ (ಮೊಳೆ), ದೋಟಿ (ಎತ್ತರದ ಮರಗಳಿಂದ ಕಾಯಿ, ಹಣ್ಣು, ಸೊಪ್ಪನ್ನು ಕೊಯ್ಯಲು ಉಪಯೋಗಿಸುತ್ತಿದ್ದ ಸಾಧನ), ನೇಗಿಲು (ನೆಲವನ್ನು ಊಳಲು ಬಳಸುತ್ತಿದ್ದ ಪ್ರಮುಖ ಸಾಧನ, ನೇಗ್ಲ, ನೇಗ್ಳ, ನೇಗಿಲ ಕಟ್ಟಿಗೆ, ನೇಗ್ಲ ತೋಟಿ, ನೇಗ್ಲಾಮಣಿ, ನೇಗ್ಲಾಮೊನೆ ಎಂದು ಏನೆಲ್ಲ ಹೆಸರುಗಳಿಂದ ಕರೆದರೂ ಅದರೊಳಗೆ ಅದನ್ನು ಸಿದ್ಧಪಡಿಸಲು ಬೇಕಾಗುವ ಪ್ರತಿಯೊಂದು ವಸ್ತುಗಳಿಗೂ ವಿವಿಧ ಹೆಸರುಗಳಿರುತ್ತವೆ), ಬಲೆ (ಕಾಡು ಪ್ರಾಣಿಗಳನ್ನು ಹಿಡಿಯಲು ಉಪಯೋಗಿಸುತ್ತಿದ್ದ ಬಲೆ), ಬಾಚಿ(ನೇಗಿಲು, ಗಾಡಿ ಮತ್ತಿತರ ಮಂದ ವಸ್ತುಗಳನ್ನು ತಯಾರಿಸಲು ಬಳಸುವ ಸಾಧನ), ಮೆರೆ (ಹುಲ್ಲನ್ನು ಸರಸಲು ಬಳಸುವ ಉಪಕರಣ), ಮಟ್ಟಗೋಲು (ಹೆಂಟೆಯನ್ನು ಬಡಿಯಲು ಬಳಸುವ ಉಪಕರಣ), ಮೇಟಿ (ಕಣದ ಮಧ್ಯೆನೆಡುವ ಕಂಬ), ಮೊರ (ಧಾನ್ಯಗಳನ್ನು ತೂರಲು ಹಾಗೂ ಮನೆಯಲ್ಲಿ ಬಳಸುವ ಬಿದಿರು), ಕೊಂಗ (ಇದು ಧಾನ್ಯವನ್ನು ತೂರಲು ಹೆಚ್ಚಾಗಿ ಬಳಸುತ್ತಿದ್ದ ಒಂದು ಸಾಧನ), ಶಿಂಬೆ (ಬುಟ್ಟಿ ಪಾತ್ರೆ ಮುಂತಾದವುಗಳ ತಳಕ್ಕೆ ಇಡುವ ಬಿದಿರಿನ ಅಥವಾ ಬಟ್ಟೆಯ ಸುರುಳಿ), ಹಗ್ಗ (ನೂಲಿನಿಂದ ಹೊಸೆದು ತಯಾರಿಸಿದ ಹುರಿ).

ಮೇಲಿನ ಎಲ್ಲಾ ಕೃಷಿಗೆ ಅವಶ್ಯಕವಾದ ಉಪಕರಣಗಳು ಅಂದಿನ ಸಂಸ್ಕೃತಿಯಲ್ಲಿ ಸೇರಿಹೋಗಿದ್ದವು. ಅಂದಿನ ಮಣ್ಣಿನ ಮಕ್ಕಳಿಗೆ ಈ ಉಪಕರಣಗಳು ಪ್ರಮುಖ ಆಧಾರವಾಗಿದ್ದವೆಂದು ಹೇಳಬಹುದು. ಈ ಉಪಕರಣಗಳನ್ನು ರಾಷ್ಟ್ರೀಯ ಹಬ್ಬಗಳಾಗಿದ್ದ ಮಹಾನವಮಿ, ದೀಪಾವಳಿ, ಯುಗಾದಿ ಹಬ್ಬಗಳಂದು ತೊಳೆದು ಪೂಜಿಸುವ ಪರಿಪಾಠ ಇದ್ದಿತು. ಇಂದಿಗೂ ಸಹ ಹಳ್ಳಿಯಲ್ಲಿ ಈ ಸಂಸ್ಕೃತಿಯನ್ನು ಗಮನಿಸಬಹುದಾಗಿದೆ.

## ೫. ಆರ್ಥಿಕ ಜೀವನ (೧)

### ನಾಣ್ಯ ವ್ಯವಸ್ಥೆ

ಮಾನವನು ಪ್ರಾಚೀನ ಕಾಲದಲ್ಲಿ ವ್ಯಾಪಾರವನ್ನು ಸಾಟಿ ವಿನಿಮಯ ಪದ್ಧತಿಯನ್ನು ಅನುಸರಿಸಿ ಮಾಡುತ್ತಿದ್ದನು. ಒಂದು ವಸ್ತುವಿಗೆ ಮತ್ತೊಂದು ಸರಿಸಮನಾದ ವಸ್ತುವನ್ನು ನೀಡಿ ವ್ಯವಹಾರ ಮುಂದುವರಿಸುತ್ತಿದ್ದನು. ನಂತರ ಇವನ ಸಂಸ್ಕೃತಿಯಲ್ಲಿ ಪ್ರಧಾನ ಪಾತ್ರ ವಹಿಸಿದ್ದೆಂದರೆ ನಾಣ್ಯವ್ಯವಸ್ಥೆ. ಇವುಗಳು ಮಾನವನ ಸಂಸ್ಕೃತಿಯ ಅಧ್ಯಯನದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇದರಲ್ಲಿಯೂ ವಿಜಯನಗರದ ನಾಣ್ಯಚರಿತ್ರೆಯು ಕರ್ನಾಟಕದ ಇತಿಹಾಸದಲ್ಲಿಯೇ ಮುಖ್ಯವಾದ ಸ್ಥಾನಹೊಂದಿದೆ.

ವಿಜಯನಗರ ಸಾಮ್ರಾಜ್ಯವ ದಖನ್ನಿನ ಸಮಸ್ತ ಪ್ರಾಚೀನ ಸಾಮ್ರಾಜ್ಯಗಳ ಪರಂಪರೆಯನ್ನು ಪ್ರತಿನಿಧಿಸುವಂತಿತ್ತು. ವಿಜಯನಗರದ ರಾಜ್ಯ ಲಾಂಛನವು ಪರಾಹವಾಗಿದ್ದರೂ ನಾಣ್ಯಗಳ ಮೇಲೆ ಹನುಮಾನ್, ಗರುಡ ಮತ್ತು ಆನೆಗಳ ಲಾಂಛನವನ್ನು ಮುದ್ರಿಸಿ ಚಲಾವಣೆಗೆ ತಂದಿದ್ದದು ಕಂಡುಬರುತ್ತದೆ. ಒಂದನೇ ಹರಿಹರನ ಕಾಲದ ನಾಣ್ಯಗಳ ಮೇಲೆ ಗರುಡ, ಹನುಮಾನ್‌ಗಳ ಚಿತ್ರಗಳಿರುವುದಲ್ಲದೆ ಕನ್ನಡ ಹಾಗೂ ದೇವನಾಗರಿ ಲಿಪಿಯಲ್ಲಿ ಶ್ರೀ ವೀರ ಹರಿಹರ' ಎಂಬ ಅಂಕಿತವೂ ಕಂಡು ಬರುತ್ತದೆ. ಮೊದಲನೆ ಬುಕ್ಕನ ಕಾಲದ ನಾಣ್ಯಗಳ ಮೇಲೆ 'ಶ್ರೀ ವೀರ ಬುಕ್ಕರಾಯ' ಶ್ರೀ ವೀರ ಭೂಪತಿ ರಾಯ' ಎಂಬ ಲಿಖಿತವಿದೆ. ಎರಡನೇ ಹರಿಹರನ ಕಾಲದ ಚಿನ್ನದ ಅರ್ಥವರಹಗಳು, ೧೬ - ೪ ಗ್ರೇಯ್ನ್ ತೂಕವಾಗಿದೆ, ನಾಣ್ಯದ ಮೇಲ್ಮುಖದಲ್ಲಿ ಶಿವ, ಪಾರ್ವತಿ, ಲಕ್ಷ್ಮೀ, ನಾರಾಯಣ, ಸರಸ್ವತೀ, ಬ್ರಹ್ಮ ಮತ್ತು ಲಕ್ಷ್ಮೀ -

ನರಸಿಂಹ, ಇವರ ಚಿತ್ರಗಳಿರುವುದು ಕಂಡುಬರುತ್ತದೆ. ಇದರ ಇನ್ನೊಂದು ಮುಖದ ಮೇಲೆ 'ಶ್ರೀ ಪ್ರತಾಪ ಹರಿಹರ' ಎಂದು ನಾಗರಿ ಲಿಪಿಯಲ್ಲಿ ಕೆತ್ತಲಾಗಿರುವುದು ಕಂಡುಬರುತ್ತದೆ. ತಾಮ್ರದ ನಾಣ್ಯವು ೮/೧ ವರಹವು ತೂಕದಲ್ಲಿ ೬ ಗ್ರೆಯ್ನ್ ಇದ್ದು ಅದರ ಮೇಲೆ ನಂದಿಶೂಲಗಳ ಚಿತ್ರವಿದ್ದು, ಪ್ರತಾಪ ಹರಿಹರ' ಎಂಬ ಅಂಕಿತವಿದೆ. ಒಂದನೆಯ ದೇವರಾಯನ ಕಾಲದ ಚಿನ್ನದ ವರಹಗಳು ೫೨೩ ಗ್ರೆಯ್ನ್ ತೂಕವಾಗಿದೆ. ಅವುಗಳ ಮೇಲೆ ಹಿಂದೂ ಧರ್ಮದ ದೇವತೆಗಳಾದ ವಿಷ್ಣು - ಲಕ್ಷ್ಮೀ ಚಿತ್ರಗಳು ಮತ್ತು ನಾಗರಿ ಲಿಪಿಯಲ್ಲಿ ಶ್ರೀ ಪ್ರತಾಪ ದೇವರಾಯ ಎಂಬ ಅಂಕಿತ ಇರುವುದು ಕಂಡುಬರುತ್ತದೆ.

ಎರಡನೆ ದೇವರಾಯನ ಕಾಲದಲ್ಲಿ ಸಾಮ್ರಾಜ್ಯಕ್ಕೆ ಭೇಟಿ ನೀಡಿದ್ದ ಅಬ್ದುಲ್ ರಜಾಕ್ ನು ಈ ಸಾಮ್ರಾಜ್ಯದಲ್ಲಿ ಮೂರು ತರಹದ ನಾಣ್ಯಗಳಿವೆ ಎಂದು ವಿವರಿಸಿದ್ದಾನೆ. ಚಿನ್ನ, ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು (ಪಗೋಡಾ, ಕಾರ ಮತ್ತು ಜಿತಲ್) ಚಲಾವಣೆಯಲಿದ್ದವೆಂದು ಹೇಳುತ್ತಾನೆ. ರಜಾಕ್ ಇನ್ನೂ ಮುಂದುವರೆದು ನಾಣ್ಯಗಳನ್ನು ತಯಾರಿಸಲು ಚಿನ್ನ, ಬೆಳ್ಳಿ, ತಾಮ್ರವನ್ನು ಒಟ್ಟಿಗೆ ಬೆರೆಸಿ ತಯಾರಿಸುತ್ತಿದ್ದರೆಂದೂ ಹೇಳುತ್ತಾನೆ. ಸಾಹಿತ್ಯ, ಕೃತಿಗಳಲ್ಲಿ ಗದ್ಯಾಣ, ಪಣ, ಹಾಗ, ವೀಸ, ಅಡ್ಡದುಡ್ಡು ಮೊದಲಾದ ನಾಣ್ಯಗಳ ಹೆಸರುಗಳು ಕಂಡುಬರುತ್ತವೆ.

ಸಾಳುವರ ಕಾಲದ ನಾಣ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರಕುವುದಿಲ್ಲ ಕೃಷ್ಣದೇವರಾಯನ ಕಾಲದ ಚಿನ್ನದ ವರಹಗಳು ೫೨ ಗ್ರ್ಯೆನ್ ತೂಕವಿದ್ದು ನಂದಿ ದುರ್ಗಾ, ವರಾಹ, ಶಂಖ ಮತ್ತು ಚಕ್ರಗಳ ಚಿತ್ರಗಳನ್ನು ಮುದ್ರಿಸಲಾಗುತ್ತಿತ್ತೆಂದು ಕಂಡು ಬರುತ್ತದೆ. ನಾಗರಿ ಲಿಪಿಯಲ್ಲಿ "ಶ್ರೀ ಪ್ರತಾಪಕೃಷ್ಣರಾಯ" ಎಂಬ ಲಿಖಿತವನ್ನು ಹೊಂದಿರುವುದಲ್ಲದೆ, ಅರ್ಧ ಮತ್ತು ಕಾಲುವರಹಗಳ ಮೇಲೆ ಬಾಲಕೃಷ್ಣನ ಚಿತ್ರವಿದೆ. ಚಿನ್ನದ ನಾಣ್ಯಗಳ ಕುರಿತು ಸಾಹಿತ್ಯ ಕೃತಿಗಳಲ್ಲೂ ಪ್ರಸ್ತಾಪ ಮಾಡಿರುವುದು ಕಂಡುಬರುತ್ತದೆ. ರಾಜಧಾನಿಯ ಮಾರುಕಟ್ಟೆಗಳಲ್ಲಿ ನಡೆಯುತ್ತಿದ್ದ ವ್ಯಾಪಾರದ ವಿಧಿ ವಿಧಾನಗಳನ್ನು ವರ್ಣಿಸುವ ಸಂದರ್ಭದಲ್ಲಿ ಕನಕದಾಸರು "ಚಪ್ಪನ್ನ ದೇಶದ ನಾಣೆಯಂಗಳ ನೋಟ ತಪ್ಪದ ಚಪಲ ಸೆಟ್ಟಿಗಳು ಬಪ್ಪವಡೆದು ಕುಳಿತಿರ್ದರು ಹಣ ಹೊನ್ನಕುಪ್ಪೆಯ ಮುಂದಿಟ್ಟುಕೊಂಡು" ಎಂಬ ಮಾತಿನ ಅರ್ಥವನ್ನು ಇಲ್ಲಿ ಸ್ಮರಿಸುವುದಾದರೆ ವಿದೇಶಿ ಪ್ರವಾಸಿಗರುಗಳು ಹಾಗೂ ದೇಶಿಯ ಆಧಾರಗಳು ತಿಳಿಸುವ ಹಾಗೆ ಹಣದ ಹೊನ್ನರಾಶಿಯನ್ನು ಸುರಿದುಕೊಂಡು ಮಾರುಕಟ್ಟೆಗಳಲ್ಲಿ ವ್ಯಾಪಾರಿಗಳು ಕುಳಿತ್ತಿದ್ದರೆಂದು ಅಂದಿನ ಚಿನ್ನದ ನಾಣ್ಯಗಳ ಚಲಾವಣೆಯು ಯಾವ ಪ್ರಮಾಣದಲ್ಲಿತ್ತೆಂಬುದನ್ನು ಊಹಿಸಬಹುದಾಗಿದೆ.

**೫.೪. ಸಾಂಪ್ರದಾಯಿಕ ಕೈಗಾರಿಕೆಗಳು ಮತ್ತು ಬೃಹತ್ ಕೈಗಾರಿಕೆಗಳು**

ವಿಜಯನಗರದ ಕಾಲದಲ್ಲಿನ ಕೈಗಾರಿಕೆಗಳ ಬೆಳವಣಿಗೆಯ ಪರ್ವ ಕಾಲವೆಂದರೆ ತಪ್ಪಾಗಲಾರದು, ಕನ್ನಡಿಗರ ಹೃದಯದಂತ್ತಿದ್ದ ಈ ಸಾಮ್ರಾಜ್ಯವು ಸಾಮಾಜಿಕ, ಸಾಂಪ್ರದಾಯಿಕ ಬದುಕಿನಿಂದ ಎಲ್ಲಾ ರಂಗಗಳಲ್ಲೂ ಉತ್ತಮ ರೀತಿಯಲ್ಲಿಯೇ ಸಾಗಿ ಹೊಸ ಹೊಸ ವಸ್ತುಗಳನ್ನು ಉತ್ಪಾದಿಸುವ ಪ್ರಯತ್ನದ ಕಾಲವಾಗಿತ್ತು. ಪೋರ್ಚುಗೀಸರ ನಿಕಟ ಸಂಪರ್ಕವೂ ಈ ಕಾಲದಲ್ಲಿ ಉಂಟಾಯಿತು. ವಿಜಯನಗರದ ಕೈಗಾರಿಕೆಗಳು ಮಾನವ ಸಂಸ್ಕೃತಿಯ ಹಾಗೂ ವಾಣಿಜ್ಯ ವ್ಯಾಪಾರಗಳ ಅನೇಕ ಬದಲಾವಣೆಗಳಿಗೆ ಅಂದಿನಿಂದಲೇ ಎಡೆಮಾಡಿಕೊಟ್ಟಿತ್ತೆಂದು ಹೇಳಬಹುದಾಗಿದೆ.

ಭೂಕಂದಾಯದ ನಂತರ ಸಾಮ್ರಾಜ್ಯದಲ್ಲಿ ಬೊಕ್ಕಸಕ್ಕೆ ಎರಡು ಆಕರಗಳಿಂದ ಹೆಚ್ಚಿನ ಆದಾಯ ಬರುತ್ತಿತ್ತು. ಅ. **ಗೃಹ ಕೈಗಾರಿಕೆ ಮತ್ತು ಕೈಕಸಬುಗಳ ಮೇಲೆ ಹಾಕುತ್ತಿದ್ದ ತೆರಿಗೆ, ಆ. ವ್ಯಾಪಾರ ನಾಣ್ಯಗಳ ಮೇಲೆ ಹಾಕುತ್ತಿದ್ದ ತೆರಿಗೆ ಹಾಗೂ ಆಮದು ರಫ್ತು ಸುಂಕ.** ಮೇಲಿನದನ್ನು ಗಮನಿಸಿದರೆ ವಿಜಯನಗರ ಸಾಮ್ರಾಜ್ಯವು ಕೃಷಿಯ ಜೊತೆಗೆ ಕೈಗಾರಿಕೆ ಹಾಗೂ ವ್ಯಾಪಾರವನ್ನು ಎಷ್ಟರ ಮಟ್ಟಿಗೆ ಅವಲಂಬಿತವಾಗಿತ್ತೆಂಬುದನ್ನು ತಿಳಿಸುತ್ತದೆ. ಈ ವಿಷಯ ಕುರಿತು ಅಧ್ಯಯನ ಮಾಡಲು ಎಂದಿನಂತೆಯೇ ದೇಶೀ ಹಾಗು ವಿದೇಶಿಯರ ಸಾಹಿತ್ಯ ಹಾಗೂ ಅಪಾರವಾಗಿರುವ ಶಾಸನಗಳು, ಸ್ಮಾರಕಗಳು ವಿಪುಲವಾಗಿ ದೊರಕುತ್ತವೆ.

ಯಾವುದೇ ಕೈಗಾರಿಕೆಯ ಬೆಳವಣಿಗೆಯಾಗಬೇಕಾದರೆ ಪ್ರಮುಖವಾಗಿ ಕಚ್ಚಾ ವಸ್ತುಗಳು ಅತ್ಯಗತ್ಯ. ಈ ದೃಷ್ಟಿಯಲ್ಲಿ ಸಾಮ್ರಾಜ್ಯದ ಕೈಗಾರಿಕೆಗಳು ಬೆಳೆಯಲು ಸಹಾಯಕವಾಗುವ ಹೆಚ್ಚು ಕಡಿಮೆ ಎಲ್ಲಾ ಉತ್ಪನ್ನಗಳು ದೊರೆಯುತ್ತಿದ್ದವು ಎಂದು ಕಂಡುಬರುತ್ತದೆ.

ಪ್ರತಿವರ್ಷವೂ ಸಾಮ್ರಾಜ್ಯದಲ್ಲಿ ಸಾಕಷ್ಟು ಮೌಲ್ಯದ ಕೃಷಿ ಮೂಲದ ಕಚ್ಚಾ ವಸ್ತುಗಳು ಉತ್ಪನ್ನವಾಗುತ್ತಿದ್ದವು. ಇವುಗಳಲ್ಲಿ ಮುಖ್ಯವಾದವುಗಳೆಂದರೆ ಹತ್ತಿ, ಎಣ್ಣೆ ಬೀಜಗಳು, ಹಿಪ್ಪುನೇರಳೆ, ಕಬ್ಬುಗಳಾಗಿದ್ದವೆಂದು ಕಂಡುಬರುತ್ತದೆ. ಇವುಗಳಲ್ಲಿ ಹತ್ತಿ, ಉಣ್ಣೆ ರೇಷ್ಮೆ ಮತ್ತು ಇತರ ದಾರಗಳು ಬಟ್ಟೆ ತಯಾರಿಸುವ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳಾಗಿದ್ದವು. ಹೆಚ್ಚು ಮೌಲ್ಯವುಳ್ಳ ಅರಣ್ಯದ ಉತ್ಪನ್ನಗಳೂ ಸಹ ದೊರೆಯುತ್ತಿದ್ದವು. ಮೈಸೂರು ಪ್ರಾಂತ್ಯದ ಶ್ರೀಗಂಧ ವಿಶ್ವವಿಖ್ಯಾತವಾಗಿದ್ದವು. ಚರ್ಮವನ್ನು ಹದಮಾಡುವ ತೊಗಟೆಯನ್ನು ಕಾಡಿನಿಂದಲೇ ತರುತ್ತಿದ್ದರು. ಅಂಟು, ಸೀಗೆ, ಬೊಂಬುಗಳು ಕಾಡಿನ ಉತ್ಪನ್ನಗಳಾಗಿದ್ದ, ಕೈಗಾರಿಕೆ ಹಾಗೂ ವ್ಯಾಪಾರಗಳಲ್ಲಿ ಪ್ರಮುಖವಾದ ಸ್ಥಾನವನ್ನು ಹೊಂದಿದ್ದವೆಂದು ಹೇಳಬಹುದು, ಸಾಮ್ರಾಜ್ಯದಾದ್ಯಂತ ಅದರಲ್ಲಿಯೂ ರಾಜಧಾನಿಯ ಸುತ್ತಮುತ್ತಲು ಹೆಚ್ಚಿನ ಕಬ್ಬಿಣದ ಅದಿರು ದೊರೆಯುವ ನಿಕ್ಷೇಪವನ್ನು ಪತ್ತೆ ಹಚ್ಚಿ ಇವುಗಳ ತಯಾರಿಕೆಯ ಕೈಗಾರಿಕೆಗಳೂ ಅಭಿವೃದ್ಧಿ ಹೊಂದಿದ್ದವೆಂದು ಆಧಾರಗಳು ತಿಳಿಸುತ್ತವೆ.

ಸಾಮ್ರಾಜ್ಯದ ಪ್ರಮುಖ ಕೈಗಾರಿಕೆ ಎಂದರೆ ಕೈಮಗ್ಗದಿಂದ ಬಟ್ಟೆ ತಯಾರಿಸುವುದೇ ಆಗಿತ್ತು. ಇದನ್ನು ಬಿಟ್ಟರೆ ರೇಷ್ಮೇ ದಾರದ ಉತ್ಪನ್ನ, ಲೋಹದ ವಸ್ತುಗಳ ತಯಾರಿಕೆ ಮಡಿಕೆ ಕುಡಿಕೆ ತಯಾರಿಕೆ, ಬಡಗಿ ಕೆಲಸ, ಚರ್ಮ, ಹದ ಮಾಡುವ ಕೈಗಾರಿಕೆ, ಬೆಲ್ಲದ ತಯಾರಿಕೆ, ಎಣ್ಣೆ ತಯಾರಿಕೆ, ಉಪ್ಪನ್ನು ತಯಾರಿಸುವುದು ಮೊದಲಾದವುಗಳು ಸಾಮ್ರಾಜ್ಯದ ಎಲ್ಲಾ ಕಡೆ ಸಾಮಾನ್ಯವಾಗಿ ಹರಡಿಕೊಂಡಿದ್ದ ಕರಕುಶಲ ಕಸುಬುಗಳಾಗಿದ್ದವು. ಇವುಗಳಲ್ಲಿ ಅನೇಕ ಸಣ್ಣ ಪುಟ್ಟ ಕೈಗಾರಿಕೆಗಳೂ ಸಹ ಜೀವನದ ಪ್ರಮುಖ ದ್ರವ್ಯಗಳ ತಯಾರಿಕೆ, ಕರಕುಶಲ ಕಲೆಗಳು ಪ್ರಸಿದ್ಧವಾಗಿದ್ದವು.

ಅಂದು ಕೃಷಿಯನ್ನು ಬಿಟ್ಟರೆ ಕೈಮಗ್ಗದಿಂದ ಬಟ್ಟೆಯನ್ನು ತಯಾರಿಸುವುದು ಪ್ರಮುಖ ಕೈಗಾರಿಕೆಯಾಗಿದ್ದು, ಇದೊಂದು ಪ್ರಾಚೀನ ಕಾಲದ ಉದ್ಯೋಗವೆನ್ನಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ಈ ಕೈಗಾರಿಕೆಯಲ್ಲಿ ತೊಡಗಿರುತ್ತಿದ್ದರು. ಚರಕಕ್ಕೆ ದಾರ ಸಿದ್ಧವಾಗುವುದಕ್ಕಿಂತ ಮುಂಚೆ ಹತ್ತಿಯನ್ನು ಶುದ್ಧಗೊಳಿಸುವ ಮತ್ತು ಬೀಜ ತೆಗೆಯುವ ಕೆಲಸ ನಡೆಯಬೇಕಿತ್ತು. ಇದಕ್ಕೋಸ್ಕರ 'ಧುನ್' (ಬಿಲ್ಲಿನಾಕಾರದ ಸಾಧನ) ಎನ್ನುವ ಒಂದು ಸಾಧನವನ್ನು ಬಳಸುತ್ತಿದ್ದರು. ಅರಳೆಯನ್ನು ಶುದ್ಧಗೊಳಿಸಿದ ನಂತರ ಅವುಗಳನ್ನು ಕೈಗಾತ್ರದ ಉಂಡೆಗಳನ್ನಾಗಿ ಮಾಡಿಕೊಂಡು ನಂತರ ಚರಕಕ್ಕೆ ಸಿದ್ಧವಾಗುತ್ತಿದ್ದರು. ಕೈಮಗ್ಗಗಳಿಂದ ತಯಾರಾದ ಬಟ್ಟೆಗಳನ್ನು ಸೀರೆ, ಕಿರಿಗೆ, ಕಣ ಎಂದು ಕರೆಯುತ್ತಿದ್ದರು, ಇವುಗಳು ಸ್ತ್ರೀಯರು ಧರಿಸುವ ಬಟ್ಟೆಗಳಾಗಿದ್ದವು.

ವಿದೇಶಿ ಸಾಹಿತಿಗಳು ಅಂದಿನ ಬಟ್ಟೆ ಕೈಗಾರಿಕೆಯ ಬಗ್ಗೆ ಹೇಳುವ ಮಾತೆಂದರೆ ಸಾಮ್ರಾಜ್ಯದಲ್ಲಿ ನೇಕಾರರು ತಯಾರಿಸಿ ಅವುಗಳನ್ನು ಸಂತೆ ಹಾಗು ಜಾತ್ರೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಉತ್ತಮ ಮಟ್ಟದ ನಯವಾದ ಬಟ್ಟೆಗಳನ್ನು ವ್ಯಾಪಾರಿಗಳು ಸಂತೆಗಳಲ್ಲೆ ಕೊಂಡುಕೊಂಡು ರಫ್ತು ಮಾಡುತ್ತಿದ್ದರು. ಬಟ್ಟೆಯನ್ನು ತಯಾರಿಸಲು ಬೇಕಾದ ದಾರವನ್ನು ಖರೀದಿಸಲು ವರ್ತಕರು ನೇಕಾರರಿಗೆ ಮಂಗಡ ಹಣವನ್ನು ಕೊಡುತ್ತಿದ್ದರು" ಎಂದು ಸುದೀರ್ಘವಾಗಿ ವಿವರಿಸಿರುವುದು ಅಂದಿನ ಕೈಮಗ್ಗದ ಅಭಿವೃದ್ಧಿಯನ್ನು ಸೂಚಿಸುತ್ತದೆ. ಅಂದು ಹತ್ತಿಯನ್ನು ಹೆಚ್ಚಾಗಿ ರಾಯಚೂರು ಮತ್ತು ಬಳ್ಳಾರಿಯನ್ನು ಬೆಳೆಯಲಾಗುತ್ತಿತ್ತು.

**ಉಣ್ಣೆ ಬಟ್ಟೆ ತಯಾರಿಕೆ :** ವಿಜಯನಗರದ ಅರಸರ ಕಾಲದಲ್ಲಿ ಉಣ್ಣೆ ತಯಾರಿಕೆಯು ಒಂದು ಪ್ರಧಾನ ಉದ್ದಿಮೆಯಾಗಿತ್ತು, ಸಾಮ್ರಾಜ್ಯದ ಎಲ್ಲಾ ಕೇಂದ್ರಗಳಲ್ಲಿಯೂ ಈ ಉದ್ದಿಮೆಗಳು ಇದ್ದು ಕಂಡುಬರುತ್ತದೆ. ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಕೋಲಾರ ವಿಭಾಗಗಳು ಹೆಚ್ಚಾಗಿ ಉಣ್ಣೆ ತಯಾರಿಸುವ ಕೇಂದ್ರಗಳಾಗಿದ್ದವು. ವರ್ಷಕ್ಕೆ ಎರಡು ಬಾರಿ ಕುರಿಯಿಂದ ಉಣ್ಣೆಯನ್ನು ಕತ್ತರಿಸುತ್ತಿದ್ದರು. ಚಳಿಗಾಲಕ್ಕೆ ಕೀಳುವ ಉಣ್ಣೆಗೆ "ಮಗೆಕೊಣ್ಣೆ" ಎಂದು ಮಳೆಗಾಲಕ್ಕೆ ಮುಂಚೆ ಕೀಳುವ ಉಣ್ಣೆಗೆ "ಕೆರೆಕೊಣ್ಣೆ" ಎಂತಲೂ ಕರೆಯಲಾಗುತ್ತಿದ್ದಿತು. ಉಣ್ಣೆ ಕೀಳುವುದಕ್ಕಿಂತ ಮುಂಚೆ ಕುರಿಯನ್ನು ಚೆನ್ನಾಗಿ ಉಜ್ಜಿ, ತೊಳೆಯುತ್ತಿದ್ದರು. ಕತ್ತರಿಸಿದ ಉಣ್ಣೆಯನ್ನು ಕೈ ಬೆರಳುಗಳಿಂದ ಬಿಡಿಸಿ ಅನಂತರ ಬಡಿದು ಬಿಸಿಲಿನಲ್ಲಿ ಹರಡುತ್ತಿದ್ದರು. ನಂತರ ಹೆಣೆಯಲು ಅನುಕೂಲವಾಗುವಂತೆ ಸಣ್ಣ ಸಣ್ಣ ಕೈ ಉಂಡೆಗಳನ್ನಾಗಿ ಮಾಡುತ್ತಿದ್ದರು. ಈ ಕೆಲಸಗಳನ್ನೆಲ್ಲಾ ಸಾಮಾನ್ಯವಾಗಿ ಸ್ತ್ರೀಯರು ಹೆಚ್ಚಾಗಿ ಮಾಡುತ್ತಿದ್ದರೆನ್ನಬಹುದು. ಉಣ್ಣೆಯಿಂದ ತಯಾರಿಸಿದ್ದ ವಸ್ತುಗಳಲ್ಲಿ ಕಂಬಳಿಗಳು ಮುಖ್ಯವಾಗಿದ್ದವು. ಮೈಸೂರು, ಮಂಡ್ಯ, ಹುಣಸೂರು, ಕೊಪ್ಪಳ, ಬಳ್ಳಾರಿ, ಸಿಂಧನೂರು,

ಸಿರಗುಪ್ಪ ರಾಯಚೂರು ಕಂಬಳಿಗಳನ್ನು ತಯಾರಿಸುವ ಕೇಂದ್ರಗಳಾಗಿದ್ದವು. ಅಂದಿನ ಕಾಲದಲ್ಲಿ ಜನಸಾಮಾನ್ಯರ ಪ್ರಮುಖವಾದ ವಸ್ತ್ರ ಇದಾಗಿತ್ತೆನ್ನಬಹುದು.

**ಲೋಹ ವಸ್ತುಗಳ ಕುಶಲ ಕೈಗಾರಿಕೆ :** ಸಾಮ್ರಾಜ್ಯದ ಮತ್ತೊಂದು ಪ್ರಸಿದ್ಧವಾದ ಲೋಹ, ಮರ ಮತ್ತು ಶಿಲ್ಪ ವಸ್ತುಗಳ ತಯಾರಿಕೆಯ ವಿಚಾರವನ್ನು ಪರಿಶೀಲಿಸುವುದಾದರೆ, ಅಂದು ಬಟ್ಟೆ ತಯಾರಿಸುವ ಕೈಗಾರಿಕೆಗಳನ್ನು ಬಿಟ್ಟರೆ ಇದು ಎರಡನೆಯ ಪ್ರಧಾನ ಸ್ಥಾನವನ್ನು ಹೊಂದಿತ್ತೆಂದು ಹೇಳಬಹುದು. ಸಾಮ್ರಾಜ್ಯದ ಪ್ರತಿಯೊಂದು ದೊಡ್ಡ ಗ್ರಾಮ ಹಾಗೂ ಪಟ್ಟಣಗಳಲ್ಲಿಯೂ ಸ್ಥಳೀಯರೇ ಆಗಿದ್ದ ಚಿನಿವಾರರು ಮತ್ತು ಕಮ್ಮಾರರು ಇರುತ್ತಿದ್ದರು. ಎಷ್ಟು ಜನ ಈ ಕೈಗಾರಿಕೆಗಳಲ್ಲಿ ನಿರತರಾಗಿದ್ದರು ಮತ್ತು ಇವರು ತಯಾರಿಸುತ್ತಿದ್ದ ವಸ್ತುಗಳ ಒಟ್ಟು ಮೌಲ್ಯವೆಷ್ಟು ಎಂಬ ಬಗೆಗೆ ಖಚಿತವಾಗಿ ಹೇಳಲು ಸಾಧ್ಯವಾಗದು. ಹೆಚ್ಚಾಗಿ ಕುಶಲ ಕರ್ಮಿಗಳು ಚಿನ್ನ ಮತ್ತು ಬೆಳ್ಳಿಯನ್ನು ಅಭರಣಗಳ ತಯಾರಿಕೆಯಲ್ಲಿ ಬಳಸುತ್ತಿದ್ದರು. ಅಂದು ಸಮಾಜದ ಎಲ್ಲ ವರ್ಗಗಳಿಂದಲೂ ಚಿನ್ನ, ಬೆಳ್ಳಿ ಆಭರಣಗಳಿಗೆ ಅಪಾರವಾದ ಬೇಡಿಕೆ ಇದ್ದದ್ದು ತಿಳಿದಿರುವ ವಿಷಯವೆ. ಇಂದು ಇದು ಕಡಿಮೆಯಾಗಿಲ್ಲವೆಂದೇ ಹೇಳಬಹುದು. ಪೇಟೆಗಳಲ್ಲಿಯೂ ಚಿನ್ನ ಮತ್ತು ಬೆಳ್ಳಿ ಗಟ್ಟಿಗಳ ಕ್ರಮಬದ್ಧ ವ್ಯಾಪಾರವಿದ್ದಿತು. ಗ್ರಾಮೀಣ ಪ್ರದೇಶದಲ್ಲಿ ಚಿನಿವಾರರ ಬಗೆಗೆ ಗ್ರಾಹಕರಿಗೆ ಸಂಶಯ ಪ್ರವೃತ್ತಿ ಬೆಳೆದಿತ್ತು. ಇಂತಹ ಸಂಶಯವು ಅಂದು ಸೃಷ್ಟಿಸುವ ಗಾದೆ "ಅಕ್ಕನ ಚಿನ್ನವನ್ನೂ ಅಕ್ಕಸಾಲಿಗ ಬಿಡನು" ಎನ್ನುವ ರೂಪ ಪಡೆದು ತನ್ನ ಸಂಶಯವನ್ನು ವ್ಯಕ್ತಪಡಿಸುತ್ತದೆ.

ಚಿನಿವಾರರು ಸಾಮಾನ್ಯವಾಗಿ ಬಡವರಾಗಿರುತ್ತಿದ್ದರು. ಬಹುಶಃ ಅವರ ದಾರಿದ್ರ್ಯದ ಸ್ಥಿತಿಯಿಂದಾಗಿ ಗಿರಾಕಿಗಳಿಗೆ ಅವರ ಬಗ್ಗೆ ಸಂಶಯ ಪ್ರವೃತ್ತಿ ಮೂಡಲು ಕಾರಣವಾಗಿರಬಹುದೇನೋ, ಚಿನ್ನವನ್ನು ಕರಗಿಸಲು ಸುತ್ತಿಗೆ, ಊದು ಕೊಳವೆ, ಚಿಮುಟ ಮತ್ತು ಮುದ್ರೆಗಳು, ಚಿನ್ನ ಕರಿಗಿಸಲು ಮೂಸೆ, ಕತ್ತರಿ, ತಕ್ಕಡಿ, ಬ್ರಷ್ ಮೊದಲಾದ ಉಪಕರಣಗಳನ್ನು ಉಪಯೋಗಿಸುತ್ತಿದ್ದರು. ಅಂದು ತಯಾರಾಗುತ್ತಿದ್ದ ಚಿನ್ನ ಹಾಗೂ ಬೆಳ್ಳಿಯ ಆಭರಣಗಳ ಹೆಸರುಗಳೆಂದರೆ,

ಅ. ರಾಗಟೆ - ಉರುಟಾದ ಆಭರಣ - ಸ್ತ್ರೀಯರು ತಲೆಯಲ್ಲಿ ಧರಿಸುತ್ತಿದ್ದರು
ಆ. ಕ್ಯಾದಿಗೆ - ಆರ್ಧಚಂದ್ರಾಕಾರದ್ದು - ತಲೆಯ ಹಿಂದೆ ಧರಿಸುತ್ತಿದ್ದರು
ಇ. ಜೆಡಿಬಿಲ್ಲೆ - ಚಿಕ್ಕ ಪ್ರಮಾಣದ ಜಡೆಯಲ್ಲಿ ಧರಿಸುತ್ತಿದ್ದರು
ಈ. ಚೌರಿಕುಪ್ಪ - ಅಲಂಕೃತವಾದ ತಲೆ ಪಿನ್ನುಗಳು.
ಉ. ಓಲೆ - ಕಿವಿ ಆಭರಣ.
ಊ. ಬಾವಲಿ - ಕಿವಿ ಆಭರಣ.
ಋ. ಅಡ್ಡಿಕೆ - ಕತ್ತಿನಸರ.
ೠ. ಕಂಕಣ - ಬಳೆಗಳು
ಎ. ಪದಕ - ಹಣೆಯ ಮೇಲೆ ಧರಿಸುವ ಆಭರಣ
ಏ. ವಂಕಿ - ತೋಳು ತಾಯಿತಿ, ಬಂದು, ಮೊಣಕೈ ಮೇಲೆ ಧರಿಸುತ್ತಿದ್ದ ಆಭರಣ.
ಐ. ಬಾಭು ಬಂದಿ - ತೋಳಿನ ಆಭರಣ.
ಒ. ಡಾಬು - ಸೊಂಟಕ್ಕೆ ಧರಿಸುತ್ತಿದ್ದ ಆಭರಣ.
ಓ. ಕಾಲುಗೆಜ್ಜೆ - ಕಾಲಿಗೆ ಹಾಕಿಕೊಳ್ಳುತ್ತಿದ್ದ ಆಭರಣ.
ಔ. ಪಿಲ್ಲಿ - ಬೆಳ್ಳಿಯ ಕಾಲುಂಗರ
ಅಂ. ಉಡಿದಾರ - ಪುರುಷರು ಸೊಂಟಕ್ಕೆ ಹಾಕಿಕೊಳ್ಳುವ ಬೆಳ್ಳಿ ಹಾಗೂ ಚಿನ್ನದ ಆಭರಣ

ಅಃ. ತಾಯಿತ - ಬೆಳ್ಳಿಯ ಸಣ್ಣ ಪೆಟ್ಟಿಗೆ ಕತ್ತು ಅಥವಾ ಸೊಂಟಕ್ಕೆ ಹಾಕಿಕೊಳ್ಳುತ್ತಿದ್ದ ಆಭರಣಗಳೆಂದು ತಿಳಿಯಬಹುದು. ಅಂದಿನ ಕಾಲದ ಸಾಹಿತ್ಯದಲ್ಲಿ ಹಾಗೂ ಶಾಸನಗಳಲ್ಲಿ ಹಂಪಿಯ ದೇವಾಲಯಗಳಲ್ಲಿರುವ ಶಿಲ್ಪಿಗಳಲ್ಲಿ ಇವುಗಳನ್ನೆಲ್ಲ ನೋಡಬಹುದಾಗಿದೆ. ಮೇಲಿನ ಎಲ್ಲ

ಆಭರಣಗಳನ್ನು ಒಬ್ಬ ಸ್ತ್ರೀಯರು ಹೊಂದಿರುವ ಶಿಲ್ಪಗಳು ಹಂಪಿಯ ಹಜಾರರಾಮ ದೇವಾಲಯದ ಗೋಡೆಯ ಮೇಲಿನ ಉಬ್ಬು ಚಿತ್ರಗಳಲ್ಲಿ ಕಾಣಬಹುದಾಗಿದೆ.

**ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ :** ವಿಜಯನಗರದ ರಾಜಧಾನಿಯ ಸುತ್ತಮುತ್ತ ಕಬ್ಬಿಣದ ಅದಿರು ಸಿಗುತ್ತಿತ್ತು. ಅಂದಿನ ಎಲ್ಲಾ ಬೇಡಿಕೆಗಳನ್ನು ಪೂರೈಸಲು ಇದು ಸಾಕಾಗುವಷ್ಟಿತ್ತೆನ್ನಬಹುದು. ಹಿಂದಿನಿಂದಲೂ ಕಬ್ಬಿಣದ ಅದಿರನ್ನು ಕರಗಿಸಿ ಕಬ್ಬಿಣ ತಯಾರಿಸುವ ಕೈಗಾರಿಕೆಗಳು ಸ್ಥಾಪನೆಯಾಗಿದ್ದವು. ಇದಕ್ಕಾಗಿಯೇ ಸ್ಥಳೀಯರಲ್ಲಿ ಸ್ಥಳೀಯವಾದ ಪದ್ಧತಿಯು ರೂಪುಗೊಂಡಿತ್ತು. ಈ ವೃತ್ತಿಯಲ್ಲಿ ತೊಡಗಿಸಿಕೊಂಡವರನ್ನು ಕಮ್ಮಾರರೆನ್ನುತ್ತಿದ್ದರು.

ಪ್ರತಿಯೊಂದು ಹಳ್ಳಿಯಲ್ಲಿಯೂ ಒಬ್ಬ ಕಮ್ಮಾರನಿರುತ್ತಿದ್ದ. ಇವನು ಸಾಮಾನ್ಯವಾಗಿ ತನ್ನ ಮನೆಯಲ್ಲಿ ಅಥವಾ ಮನೆಯ ಹತ್ತಿರವೇ ಕಬ್ಬಿಣದ ಕೆಲಸವನ್ನು ನಿರ್ವಹಿಸುತ್ತಿದ್ದ. ಹೆಚ್ಚಾಗಿ ಕಮ್ಮಾರರು ಕೃಷಿಯ ಉತ್ಪನ್ನಗಳಾಗಿದ್ದ ನೇಗಿಲು, ಕುಡುಗೋಲು, ಕೊಡಲಿ ಮತ್ತು ಗಾಡಿಯ ಉಪಕರಣಗಳನ್ನು ಸಿದ್ಧಪಡಿಸುತ್ತಿದ್ದರು. ಅದೇ ರೀತಿ ಗೃಹೋಪಯೋಗಿ ವಸ್ತುಗಳಾದ ಬಾಣಲೆ, ಸೌಟುಗಳು, ಕೊಡಗಳು, ಪಾತ್ರೆಗಳನ್ನು ತಯಾರಿಸುತ್ತಿದ್ದರು. ಸಾಮಾನ್ಯವಾಗಿ ಹಿತ್ತಾಳೆ ಮತ್ತು ತಾಮ್ರವನ್ನು ಅಡಿಗೆ ಪಾತ್ರೆಗಳನ್ನು ಮತ್ತು ಕುಡಿಯುವ ನೀರಿನ ಪಾತ್ರೆಗಳನ್ನು ತಯಾರಿಸಲು ಉಪಯೋಗಿಸುತ್ತಿದ್ದರು. ಈ ಲೋಹಗಳನ್ನು ಬಳಸಿ ವಸ್ತುಗಳನ್ನು ತಯಾರಿಸುವ ಕುಶಲ ಕರ್ಮಿಗಳನ್ನು ಹಾಗೂ ಮನೆಯಲ್ಲಿ ಉಪಯೋಗಿಸುವ ಜನರುಗಳನ್ನು ಶ್ರೀಮಂತರೆಂದು ಕರೆಯುತ್ತಿದ್ದರು. ಸಾಮಾನ್ಯ ಜನರು ಪ್ರತಿಯೊಂದಕ್ಕೂ ಮಣ್ಣಿನ ಕುಡಿಕೆ ಇನ್ನಿತರ ವಸ್ತುಗಳನ್ನೇ ಬಳಸುತ್ತಿದ್ದದ್ದು ಕಂಡುಬರುತ್ತದೆ.

**ಮರಗೆಲಸ :** ಮರಗೆಲಸ ಮಾಡುವವರನ್ನು ಬಡಿಗಿಗಳೆಂದು ಕರೆಯಲಾಗುತ್ತಿದ್ದಿತು. ಇವರು ಕೃಷಿಗೆ ಅವಶ್ಯಕವಾದ ರೈತರ ಜೀವನಕ್ಕೆ ಆಧಾರವಾದ ವಸ್ತುಗಳನ್ನೆ ತಯಾರಿಸುತ್ತಿದ್ದರು. ಇದರ ಜೊತೆಗೆ ಕಟ್ಟಡಗಳ ರಚನೆಗೆ ಬೇಕಾಗುವ ಸಾಮಗ್ರಿಗಳು, ಅರಮನೆ, ಗುರುಮನೆಗೆ ಸುಂದರವಾದ ಕೆತ್ತನೆಯ ಮರಗೆಲಸವನ್ನು ಒದಗಿಸುತ್ತಿದ್ದರು. ಎತ್ತಿನಗಾಡಿಗಳ ತಯಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸುತ್ತಿದ್ದರು. ನೇಗಿಲು, ಗುದ್ದಿಗಳ ತೈಯಾರಿಕೆಯಲ್ಲಿ ಇವರ ಪ್ರಮುಖ ಕೆಲಸಗಳಾಗಿದ್ದವು.

ಮರಗೆಲಸದ ಕುಸುರಿ ಕೆಲಸಕ್ಕೆ ಹೆಚ್ಚಿನ ಮಹತ್ವ ನೀಡಲಾಗಿತ್ತು. ಮೈಸೂರು ಪ್ರಾಂತ್ಯದಲ್ಲಿ ಹೇರಳವಾಗಿ ಸಿಗುತ್ತಿದ್ದ ಶ್ರೀಗಂಧದ ಮರದಲ್ಲಿ ಸುಂದರವಾದ ದೇವಾನುದೇವತೆಯರ ಕೆತ್ತನೆ ನಡೆಯುತ್ತಿತ್ತು. ಮರದಲ್ಲಿಯೇ ಅನೇಕ ಪ್ರಾಣಿ, ಪಕ್ಷಿಗಳ ಚಿತ್ರವನ್ನು ಕೆತ್ತಿರುವುದು ಕಂಡುಬರುತ್ತದೆ. ಒಟ್ಟಾಗಿ ನೋಡಿದರೆ ಇಂತಹ ವಸ್ತುಗಳಲ್ಲಿ ಒಂದು ರೀತಿಯ ಸಮನ್ವಯ ಸಮಂಜಸತೆ ಮತ್ತು ಉಲ್ಲಾಸಕರ ಸೌಂದರ್ಯಪ್ರಜ್ಞೆ ಎದ್ದು ಕಾಣುತ್ತದೆ.

**ಎಣ್ಣೆ ತಯಾರಿಕೆ :** ವಿಜಯನಗರ ಸಾಮ್ರಾಜ್ಯದ ಪೂರ್ವದಿಂದಲೂ ಎಣ್ಣೆ ಬೀಜಗಳಿಂದ ಎಣ್ಣೆ ತಯಾರಿಸುವ ಕೈಗಾರಿಕೆಯು ಕಂಡುಬರುತ್ತದೆ. ಆದರೆ ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಈ ಕಾರ್ಯವು ಪ್ರಮುಖ ಕಸುಬುಗಳಲ್ಲಿ ಒಂದಾಗಿದ್ದಿತು. ಸಾಮಾನ್ಯವಾಗಿ ಸಾಮ್ರಾಜ್ಯದಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ಹೋಬಳೀ ಕೇಂದ್ರಗಳಲ್ಲಿಯೂ ಈ ಎಣ್ಣೆ ಕೈಗಾರಿಕೆಗಳು ಇರುತ್ತಿದ್ದವು. ಈ ಕಾರ್ಯದಲ್ಲಿ ನಿರತರಾಗಿದ್ದವರನ್ನು ಗಾಣಿಗರೆಂದು ಕರೆಯಲಾಗುತ್ತಿತ್ತು. ಅಂದು ಅವರನ್ನು ಅವರು ಉತ್ಪಾದಿಸುವ ಮಾದರಿ ಹಾಗೂ ಬಳಸುವ ಸಾಧನೆಗಳಿಗೆ ಅನುಗುಣವಾಗಿ ಬೇರೆ ಬೇರೆ ಹೆಸರುಗಳಿಂದಲೂ ಕರೆಯಲಾಗುತ್ತಿತ್ತೆಂದು ಸಾಹಿತ್ಯದಲ್ಲಿ ಕಂಡುಬರುತ್ತದೆ. ಉದಾಹರಣೆಗೆ : **ಹೆಗ್ಗಾಣಿಗಳು** – ಎರಡು ಎತ್ತುಗಳನ್ನು ಕಲಿನ ಗಾಣಕ್ಕೆ ಕಟ್ಟಿ ಎಣ್ಣೆ ತೆಗೆಯುವವರನ್ನು ಹೆಗ್ಗಾಣಿಗರೆಂದು ಕರೆಯುತ್ತಿದ್ದರು. ಆದರೆ ಮರದ ಗಾಣದಲ್ಲಿ ಎಣ್ಣೆ ತೆಗೆಯುವವರನ್ನು ಕಿರುಗಾಣಿಗರೆಂದು ಕರೆಯುಲಾಗುತ್ತಿತ್ತು. ಒಂದು ಎತ್ತನ್ನು ಬಳಸಿ ಎಣ್ಣೆ ತೆಗೆಯುವವರನ್ನು ಒಂಟೆತ್ತು ಗಾಣಿಗರೆಂದು ಕರೆಯುತ್ತಿದ್ದರು. ಒಟ್ಟಾಗಿ ಇವರನ್ನೆಲ್ಲಾ ಜ್ಯೋತಿಪಣ ಅಥವಾ ಜೋತಿ ನಗರ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಅಂದರೆ ಬೆಳಕನ್ನು ನೀಡುವ ಬಂದವರೆಂದು ಅರ್ಥ

ಗಾಣಗಳನ್ನು ೧. ಮರಗಾಣ, ೨. ಕಲ್ಲುಗಾಣಗಳೆಂದು ವರ್ಗೀಕರಿಸಿಕೊಳ್ಳಲಾಗಿತ್ತು. ಇವುಗಳಲ್ಲಿ ಹುಚ್ಚೆಳ್ಳು, ಹುಲ್ಲೆಳ್ಳು, ಅರಳು ಕೊಬ್ಬರಿ ಹಿಪ್ಪೆ ಮತ್ತು ಹೊಂಗೆಯಿಂದ ಎಣ್ಣೆಯನ್ನು ತೆಗೆಯುತ್ತಿದ್ದರು. ಸರ್ಕಾರವು ಇವರ ಮೇಲೆಯೂ ತೆರೆಗೆ ಹಾಕಿ ವಸೂಲು ಮಾಡುತ್ತಿತ್ತು.

**ಕಬ್ಬು ಮತ್ತು ಬೆಲ್ಲ ತಯಾರಿಕೆ :** ಕಬ್ಬನ್ನು ನೀರಾವರಿಯ ವ್ಯವಸ್ಥೆ ಇದ್ದ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ಸಾಮಾನ್ಯವಾಗಿ ಸಾಮ್ರಾಜ್ಯದಾದ್ಯಂತ ಕಂಡುಬರುವ ಕೆರೆಗಳ ಆಶ್ರಯಿತ ನೀರಾವರಿ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿತ್ತು. ಕಬ್ಬಿನಿಂದ ಬೆಲ್ಲ, ಸಕ್ಕರೆಯನ್ನು ತಯಾರಿಸುತ್ತಿದ್ದರು. ಇವುಗಳನ್ನು ತಯಾರಿಸುವ ಸ್ಥಳವನ್ನು "ಆಲೆಮನೆ" ಎಂದು ಕರೆಯಲಾಗುತ್ತಿತ್ತು. ಇದು ತುಂಬ ಕಷ್ಟದ ಕೆಲಸವಾಗಿತ್ತು. ಸಾಮಾನ್ಯವಾಗಿ ಊರಿನ ಗೌಡರು ಹಾಗೂ ಶ್ರೀಮಂತರು ಈ ಕೆಲಸದಲ್ಲಿ ನಿರತರಾಗಿರುತ್ತಿದ್ದರು. ಆಲೆಮನೆಯಲ್ಲಿ ಕೂಲಿ ಮಾಡುವವರೆಲ್ಲರೂ ಅಸ್ಪೃಶ್ಯರಾಗಿರುತ್ತಿದ್ದರು.

**ಉಪ್ಪಾರರು :** ಉಪ್ಪು ನಮ್ಮ ಆಹಾರ ವ್ಯವಸ್ಥೆಯು ರುಚಿಯಾಗಿರಲು ಬಳಸುವ ಒಂದು ಪ್ರಮುಖವಾದ ವಸ್ತು. 'ಲವಣವಿಲ್ಲದ ಊಟ ಊಟವೇ ಅಲ್ಲ', ಉಪ್ಪು ತಿಂದ ಮನೆಗೆ ಎರಡು ಬಗೆಯಬೇಡ' ಅಥವಾ 'ಉಪ್ಪಿನ ಋಣ ತೀರಿಸಬೇಕು' ಎಂಬ ನಾಣ್ಣುಡಿಯಂತೆ ಉಪ್ಪಿಗೆ ಸಮಾಜದಲ್ಲಿ ಪ್ರಥಮ ಸ್ಥಾನವಿತ್ತು. ವಿಜಯನಗರದಲ್ಲಿಯೂ ಸಮುದ್ರ ಪ್ರದೇಶದಲ್ಲಿ ಹಾಗೂ ಒಳಪ್ರದೇಶದಲ್ಲಿಯೂ ಒಪ್ಪನ್ನು ತಯಾರಿಸಲಾಗುತ್ತಿತ್ತು. ಇವರ ಇತರ ಹೆಸರುಗಳೆಂದರೆ ಮೇಲು ಸಕ್ಕರೆಯವರು, ಸಾಗರ ವಂಶದವರು, ಕೆರೆ ಬಂದಿಯವರು. ಎಂದು ಗುರ್ತಿಸಿಕೊಳ್ಳುತ್ತಿದ್ದರು. ಇವರು ತಮ್ಮ ಹೆಸರುಗಳೊಂದಿಗೆ ಶೆಟ್ಟಿ, ಗೌಡ, ಅಪ್ಪ, ಅಯ್ಯ, ಅಣ್ಣ ಎಂದು ಸೇರಿಸಿಕೊಳ್ಳುತ್ತಿದ್ದರು ಎಂದು ಉಪ್ಪನ್ನು ತಯಾರಿಸುವುದೇ ಇವರ ಪ್ರಮುಖ ಕಸುಬಾಗಿತ್ತು. ವಿಜಯನಗರದ ಕಾಲದಲ್ಲಿ ಉಪ್ಪಿನ ತಯಾರಕರ ಮೇಲೆ ಸ್ಥಳದಿಂದ ಸ್ಥಳಕ್ಕೆ ಬೇರೆ ಬೇರೆ ರೀತಿಯಲ್ಲಿ ತೆರಿಗೆ ವಿಧಿಸಲಾಗುತ್ತಿತ್ತು.

**ಮೋಚಿಗಳು :** ಚರ್ಮದ ವಸ್ತುಗಳನ್ನು ತಯಾರಿಸುವವರನ್ನು ಮೋಚಿಗಳೆಂದು ಕರೆಯಲಾಗುತ್ತಿತ್ತು. ವಿಜಯನಗರದ ಅರಸರ ಕಾಲದಲ್ಲಿ ಚರ್ಮದ ಬಳಕೆಯು ಹೆಚ್ಚಾಗಿತ್ತೆಂದು ಹೇಳಬಹುದು. ಮೋಚಿಗಳು ಮುಖ್ಯವಾಗಿ ಚಪ್ಪಲಿ ಹೊಲಿಯುವುದನ್ನು ಕಸುಬಾಗೊ ಮಾಡಿಕೊಂಡಿದ್ದರು. ಇದರ ಜೊತೆಗೆ ಇತರ ಸಣ್ಣ ಪುಟ್ಟ ಕೃಷಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಿದ್ದರು. ಚಪ್ಪಲಿಯ ಜೊತೆಗೆ ಕುದುರೆಗೆ ಬೇಕಾದ ಜೀನಿಗಳು, ಚಾವಟಿ, ಚರ್ಮದ ಹಗ್ಗ, ಚೀಲಗಳು, ಗೃಹ ಬಳಕೆಯ ವಸ್ತುಗಳು ಹಾಗು ಸಂಗೀತ ಅವಶ್ಯಕ ವಸ್ತುಗಳನ್ನು ತಯಾರಿಸುತ್ತಿದ್ದರು. ಚರ್ಮವನ್ನು ಮೋಚಿಗಳೇ ಹದಮಾಡಿ ಕೊಳ್ಳುತ್ತಿದ್ದರು.

**ಮೇದರು :** ಇವರುಗಳು ಬಿದಿರಿನಿಂದ ಬುಟ್ಟಿಗಳನ್ನು, ಚಾಪೆಗಳನ್ನು ತಯಾರಿಸುತ್ತಿದ್ದರು. ಇದೊಂದು ಪ್ರಮುಖ ಗುಡಿಕೈಗಾರಿಕೆಯಾಗಿತ್ತು. ಈ ಕೆಲಸದಲ್ಲಿ ತೊಡಗಿದ್ದವರನ್ನು ಮೇದರೆಂದು ಕರೆಯಲಾಗುತ್ತಿತ್ತು. ತಯಾರಿಸಿದ ವಸ್ತುಗಳನ್ನು ಅವರೆ ಮಾರುತ್ತಿದ್ದರು. ಸಂತೆಗಳಲ್ಲಿಯೇ ಅಲ್ಲದೆ ಹಳ್ಳಿಹಳ್ಳಿಗಳಿಗೆ ತಾವೇ ಕೊಂಡೊಯ್ದು ಮಾರಾಟ ಮಾಡುತ್ತಿದ್ದರೆಂದು ಕಂಡುಬರುತ್ತದೆ. ಇವರನ್ನು ಒದೊಂದು ಪ್ರದೇಶದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತಿತ್ತು. ಉದಾ : ಗವರಿಗರು, ಗೌರಿಮಕ್ಕಳು, ಗಂಗೆ ಮಕ್ಕಳು ಎಂದು ಕರೆಸಿಕೊಳ್ಳುತ್ತಿದ್ದರು. ಬೆತ್ತವನ್ನು ಸೀಳಿ ಚೆಕ್ಕೆಗಳನ್ನಾಗಿ ಮಾಡಿಕೊಂಡು ಬುಟ್ಟಿ, ಚಾಪೆ, ಮೊರ, ಕೊಂಗ, ತೊಂಬ ಮುಂತಾದ ಕೃಷಿಗೆ ಅವಶ್ಯವಾದ ವಸ್ತುಗಳನ್ನು ತಯಾರಿಸುತ್ತಿದ್ದರು.

**ಮಡಿಕೆ ತಯಾರಿಕೆ**

ವಿಜಯನಗರದ ಕಾಲದಲ್ಲಿ ಕುಂಬಾರರು ಪ್ರಮುಖರಾಗಿದ್ದರು. ಹೆಚ್ಚು ಕಡಿಮೆ ಎಂದರೆ ಪ್ರತಿಯೊಂದು ಗ್ರಾಮದಲ್ಲಿಯೂ ಒಬ್ಬ ಕುಂಬಾರನಿರುತ್ತಿದ್ದನೆಂದು ಹೇಳಬಹುದು. ಈ ಕೈಗಾರಿಕೆಯು ಸ್ಥಳೀಯವಾಗಿ ಹೆಚ್ಚು ಪ್ರವರ್ಧಮಾನಕ್ಕೆ ಬರಲು ಪ್ರಮುಖ ಕಾರಣವೆಂದರೆ, ಮಣ್ಣಿನಿಂದ ತಯಾರಾದ ಮಡಿಕೆ, ಕುಡಿಕೆ, ಅರಿವಿಗಳು ಒಡೆದುಹೋಗುವ ಸಂದರ್ಭ ಹೆಚ್ಚಾಗಿದ್ದು ಹಾಗೂ ದೂರದ ಮಾರುಕಟ್ಟೆಗಳಿಗೆ ಕೊಂಡೊಯ್ಯಲು ಸರಿಯಾದ ಸಾರಿಗೆ ವ್ಯವಸ್ಥೆ ಇಲ್ಲದಿರುವುದಾಗಿದ್ದಿತ್ತು. ಮಣ್ಣಿನಿಂದ ಪದಾರ್ಥಗಳನ್ನು ತಯಾರಿಸಲು ಕುಂಬಾರರು ಚಕ್ರ, ಕಲ್ಲು ಮತ್ತು ಕೋಲನ್ನು ಬಳಸುತ್ತಿದ್ದರು. ಇವರು ಈ ವಸ್ತುಗಳನ್ನು ತಯಾರಿಸಲು ಅಗತ್ಯವಾದ ಮಣ್ಣಿಗಾಗಿ ಕೆರೆಗಳು, ನದಿಗಳು, ಊಟದ ಪಾತ್ರೆ, ಎಲೆ, ಹೂವಿನ ಕುಂಡ, ಬಾನಿ, ಹೊಗೆಬತ್ತಿಸೇದುವ ಪೈಪು ಹಾಗೂ ಗೌರಿ ಗಣೇಶರ ಪ್ರತಿಮೆಗಳನ್ನು ತಯಾರಿಸುತ್ತಿದ್ದರು. ಪ್ರಮುಖವಾಗಿ ಮನೆಯ ಮೇಲೆ ಛಾವಣಿಗೆ ಹೊದಿಸಲು ನಾಡ ಹೆಂಚುಗಳನ್ನು ತಯಾರಿಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಧಾನ್ಯವನ್ನು ಶೇಖರಿಸಿಕೊಳ್ಳಲು ದೊಡ್ಡ ದೊಡ್ಡ ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದರು. ಇವುಗಳನ್ನು ಗುಡಾಣಗಳೆಂದು ಕರೆಯಲಾಗುತ್ತಿತ್ತು.

ಹೀಗೆ ಸಾಮ್ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯು ತನ್ನದೆ ಆದ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿಕೊಂಡು ಬಂದುದ್ದನ್ನು ಒಂದರ್ಥದಲ್ಲಿ ಹಿತವೆನ್ನಬಹುದು.

* * *

# ೬. ಸಾಹಿತ್ಯ

ವಿಜಯನಗರದ ಅರಸರ ಆಳ್ವಿಕೆಯಲ್ಲಿ ದೇಶವು ಸುವ್ಯವಸ್ಥಿತವೂ ಸುಭದ್ರವೂ ಆಗಿದ್ದು ಧರ್ಮ - ಸಂಸ್ಕೃತಿ - ಕಲೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಸಾರ್ವತ್ರಿಕ ಉತ್ತೇಜನ ದೊರೆಯಿತು. ಇದರಿಂದಾಗಿಯೇ ಇಂದಿಗೂ ಸಹ ವಿಜಯನಗರದ ವೈಭವವು ಅದರ ಸಾಂಸ್ಕೃತಿಕ ಪರಂಪರೆಯಲ್ಲಿ ಅಜರಾಮರವಾಗಿ ಉಳಿದಿದೆ. ಆಗಿನ ಕಾಲದ ಸಾಹಿತ್ಯ ಕೃತಿಗಳಲ್ಲಿ ಈ ಭವ್ಯ ಪರಂಪರೆಯ ವಿಕಸನ ಕಾಣಬಹುದಾಗಿದೆ. ಹಿಂದೂ ಸಂಸ್ಕೃತಿಯ ಪುನಶ್ಚೇತನಕ್ಕಾಗಿ ಉದಿಸಿದ ಸಾಮ್ರಾಜ್ಯದ ಇತಿಹಾಸ ಹಾಗೂ ಅದರ ಸಂಸ್ಕೃತಿಯ ಅಧ್ಯಯನಕ್ಕೆ ಸಹಜವಾಗಿಯೇ ಸಂಸ್ಕೃತ, ಕನ್ನಡ, ತೆಲುಗು, ಕೈಫಿಯತ್ತು ಮತ್ತು ಬಖೈರುಗಳು, ತೆಲುಗು ಸಾಹಿತ್ಯಾಧಾರಗಳ ಜೊತೆಗೆ ವಿದೇಶಿಯರ ಬರವಣಿಗೆಗಳು ಇತಿಹಾಸದ ನಿರ್ಮಾಣಕ್ಕೆ ಸಹಕಾರಿಯಾಗಿವೆ.

**೬.೧. ಸಂಸ್ಕೃತ ಸಾಹಿತ್ಯ**

ಈ ಸಾಮ್ರಾಜ್ಯದಲ್ಲಿ ಸಂಸ್ಕೃತ ಸಾಹಿತ್ಯ ಗ್ರಂಥರಚನೆಗೆ ಹೆಚ್ಚಾಗಿ ಅದ್ಯತೆ ನೀಡಲಾಗಿತ್ತು. ಐತಿಹಾಸಿಕ ಘಟನೆಗಳಿಗೆ ಸಮಕಾಲೀನವಾದ ಈ ಸೃಜನಾತ್ಮಕ ಕೃತಿಗಳು ಅಂದಿನ ಪರಿಸ್ಥಿತಿಯ ಮೇಲೆ ಬೆಳಕು ಚೆಲ್ಲುವುದರಿಂದ ಇತಿಹಾಸಕಾರನಿಗೆ ಮಹತ್ವಪೂರ್ಣವಾದ ದಾಖಲೆಯಾಗಿ ಪರಿಣಿಮಿಸಿದೆ. ಪಿ.ಬಿ. ದೇಸಾಯಿಯವರು ಹೇಳುವಂತೆ "ಸಾಹಿತ್ಯ ಕೃತಿಗಳಲ್ಲಿ ಅಡಗಿರುವ ಚರಿತ್ರೆಯ ತುಣಕುಗಳು ಎಷ್ಟೋ ಬಾರಿ ಕವಿಯ ಕಲ್ಪನೆ ಗರಿಗೆದರ ಉತ್ಪ್ರೇಕ್ಷೆ ತುಂಬಿ ತುಳಕಿದಾಗ ಎಲ್ಲೋ ಅಡಗಿ ಹೋಗುತ್ತವೆ. ಅದನ್ನು ಜಾಣತನದಿಂದ ಪರಿಶೀಲಿಸಿ ಇತಿಹಾಸಕಾರ ಸತ್ಯವನ್ನು ಹೊರತರುವ ಪ್ರಯತ್ನ ಮಾಡಬೇಕಾಗಿದೆ. ಸಾಹಿತ್ಯದ ಅಡಿಗಲ್ಲಂತೂ ಸತ್ಯ ಸಂಗತಿಗಳಾದುದರಿಂದ ಕಲ್ಪನೆಯ ಬಣ್ಣದ ಪದರುಗಳನ್ನು ಸರಿಸಿ ಸತ್ಯದ ಪ್ರಕಾಶಕ್ಕೆ ಇತಿಹಾಸಕಾರ ಶ್ರಮಿಸಬೇಕಾಗಿದೆ. ಈ ರೀತಿಯ ಪ್ರಕಾಶಕ್ಕೆ ಸಂಸ್ಕೃತ ಸಾಹಿತ್ಯಾಧಾರಗಳು ಅಮೂಲ್ಯವಾದ ವಸ್ತುಗಳಾಗಿವೆ" ಎನ್ನಬಹುದು.

**ಮಧುರಾವಿಜಯಂ (ವೀರಕಂಪಣರಾಯ ಚರಿತಂ)* :** ರಾಣಿ ಗಂಗಾದೇವಿಯ 'ಮಧುರಾವಿಜಯಂ' ಐತಿಹಾಸಿಕ ಪ್ರಾಮುಖ್ಯತೆಯುಳ್ಳ ಅತ್ಯಾಮೂಲ್ಯವಾದ ಗ್ರಂಥ ಮುಸಲ್ಮಾನರ ದಾಳಿಯಿಂದ ನಲುಗಿದ ದಕ್ಷಿಣ ಭಾರತದ ಜನತೆ ಕೆಲವೇ ದಶಕಗಳಲ್ಲಿ ಚೇತರಿಸಿಕೊಂಡು ಸಾಂಸ್ಕೃತಿಕ ಪ್ರಗತಿಯೆಡೆ ಮುನ್ನಡೆದ ಕುರುವಾಗಿ ಉಳಿದು ಬಂದಿದೆ ಈ ಕಾವ್ಯ. ಸುಸಂಸ್ಕೃತ ರಾಜ ಕುಟುಂಬಗಳಲ್ಲಾದರೂ ಸ್ತ್ರೀ ವಿದ್ಯಾಭ್ಯಾಸ ಪ್ರಗತಿ ಸಾಧಿಸತ್ತು ಎಂಬುವುದಕ್ಕೆ ಸಾಕ್ಷಿಯಾಗಿ ಗಂಗಾದೇವಿಯವರು ಗೋಚರಿಸುತ್ತಾರೆ. ಏಕಂದರೆ ಮಧುರಾವಿಜಯಂ ಗಂಗಾದೇವಿಯ ವಿದ್ಯಾ ನೈಪುಣ್ಯಕ್ಕೆ ಪ್ರತಿಭೆಯ ಮೆರಗಿನಿಂದ ಸಂಸ್ಕೃತದ ಉತ್ಕೃಷ್ಠ ಕಾವ್ಯವಾಗಿ ಉಳಿದಿದೆ. ಈ ಕಾವ್ಯದ ಹೊರ ಮೈಯಲ್ಲಿ ಇತಿಹಾಸದ ತಿರುಳಿದೆ. ಮೊಟ್ಟ ಮೊದಲ ಬಾರಿಗೆ ಭಾರತದ ಚರಿತ್ರೆಯಲ್ಲಿಯೇ ಒಂದು ಐತಿಹಾಸಿಕ ಘಟನೆ ಕಾವ್ಯದ ವಸ್ತುವಾಗಿ ಪರಿಣಮಿಸಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ಈ ವಿಶಿಷ್ಟತೆಯೇ ವಿಜಯನಗರ ಕಾಲದ ಚರಿತ್ರೆಯನ್ನು ರಚಿಸುವವರಿಗೆ ಅದರಲ್ಲಿಯೂ ಸಂಸ್ಕೃತಿ ಅಧ್ಯಯನ ಮಾಡುವವರಿಗೆ ಪ್ರಮುಖ ಆಧಾರವಾಗಿರುತ್ತದೆ ಎಂದು ಹೇಳಬಹುದು.

ಈ ಮಹಾಕಾವ್ಯವು ಪ್ರಮುಖವಾಗಿ ವಿಜಯನಗರ ಸಾಮ್ರಾಜ್ಯದ ಉದಯ ಕಾಲದಲ್ಲಿನ ದಕ್ಷಿಣ ದೇಶದ ರಾಜಕೀಯ ಪರಿಸ್ಥಿತಿಯ ಮೇಲೆ ಬೆಳಕು ಬೀರುತ್ತದೆ. ಯುವರಾಜ ವೀರ ಕಂಪಣ್ಣನು ದಕ್ಷಿಣದಲ್ಲಿ ದಂಡಯಾತ್ರೆ ಕೈಗೊಂಡು ದಿಗ್ವಿಜಯ ಸಾಧಿಸಿ ಆ ರಾಜ್ಯವನ್ನು ವಿಜಯನಗರದ ಸಾಂಸ್ಕೃತಿಕವಾದ ಆಡಳಿತಕ್ಕೆ ಒಳಪಡಿಸಿದೆ ಸಾಹಸಮಯ ಕಥೆಯನ್ನು ಇದು ತನ್ನ ಪ್ರಮುಖ ಕಥಾವಸ್ತುವನ್ನಾಗಿಸಿಕೊಂಡಿದೆ.

ಅಮರಾವತಿಯಂತೆ ಶೋಭಾಯಮಾನವಾದ ವಿಜಯನಗರಸ ರಾಜಧಾನಿಯಲ್ಲಿ ಹರಿಹರನ ತಮ್ಮ ಬುಕ್ಕದೊರೆ ಆಳ್ವಿಕೆ ನಡೆಸುತ್ತಿದ್ದನು. ಅವನ ಮಗ ಕುಮಾರ ವೀರ ಕಂಪಣ್ಣನು ತಂದೆಯ ಅಪ್ಪಣೆಯ ಮೇರೆಗೆ ರಾಜಗಂಭೀರ ರಾಜ್ಯದ ಚಂಪರಾಯನ ಮೇಲೆ ದಂಡೆತ್ತಿ ದಂಗೆಯಡಗಿಸಲು ಹೋಗುತ್ತಾನೆ. ಯುದ್ಧದಲ್ಲಿ ಚಂಪನು ಸಾಯಲು ಸುಪ್ರಸಿದ್ಧ ಕಂಚಿಯು ಕುಮಾರ ಕಂಪಣ್ಣನ ವಶವಾಗುತ್ತದೆ. ಅನಂತರ ಮಧುರೆಯ ಸುಲ್ತಾನರ ಕ್ರೂರಕೃತ್ಯಗಳನ್ನು ಕೇಳಿ ಕೋಲಗೊಂಡು ಮಧುರೆಗೆ ಧಾವಿಸಿ ಸುಲ್ತಾನನನ್ನು ಸೋಲಿಸಿ ಸದೆಬಡಿಯುತ್ತಾನೆ (ಸುಲ್ತಾನನು ಯುದ್ಧ ರಂಗದಲ್ಲಿಯೇ ಮೃತ್ಯುವಶನಾಗುತ್ತಾನೆ) ಎಂಬ ವಿಷಯವು ತಿಳಿದುಬರುತ್ತದೆ. ಇದರ ಜೊತೆಗೆ ವಿಜಯ ನಗರದ ಪ್ರಭುತ್ವ ಸ್ಥಾಪನೆ ದಕ್ಷಿಣ ಭಾರತದ ಸಾಂಸ್ಕೃತಿಕವಾದ ಬೆಂಬಲದಿಂದಾಯಿತು. ಮುಸಲ್ಮಾನರ ಕ್ರೌರ್ಯದಿಂದ ದಿಕ್ಕೆಟ್ಟಿದ್ದ ರಾಜ್ಯಗಳು ಸುಲ್ತಾನರ ಅವನತಿಗೆ ಬೆಂಬಲ ಸೂಚಿಸಿ ವಿಜಯನಗರದ ಜೋತೆಗೂಡಿದವು ಇದರಿಂದಾಗಿ ದಕ್ಷಿಣ ಭಾರತದಲ್ಲಿಯೇ ಒಂದು ರೀತಿಯ ಸಾಂಸ್ಕೃತಿಕ ಏಕತೆಯುಂಟಾಯಿತು. 'ಮಧುರಾವಿಜಯಂ' ಈ ಸಾಂಸ್ಕೃತಿಕ ಏಕತೆಯನ್ನು ರೂಪಿಸುವ ಒಂದು ಐತಿಹಾಸಿಕ ಗ್ರಂಥ

**ಪ್ರಪನ್ನಾಮೃತಂ :** ಅನಂತಾರ್ಯನೆಂಬ ಕವಿಯು ಬರೆದ "ಪ್ರಪನ್ನಾಮೃತ' ಎಂಬ ಕೃತಿಯು ಸಹ ಕುಮಾರ ವೀರಕಂಪಣ್ಣ ಮತ್ತು ಮಧುರೆಯ ಸುಲ್ತಾನನ ನಡುವಿನ ಯುದ್ಧವನ್ನು ತಿಳಿಸುತ್ತದೆ. ಇದರ ಕಥಾವಸ್ತು ಅತ್ಯಂತ ಕುತೂಹಲಕಾರಿಯಾಗಿರುವುದು ತಿಳಿದುಬರುತ್ತದೆ. ಅಂದರೆ ಮುಸಲ್ಮಾನರ ಕ್ರೌರ್ಯದಿಂದ ಬೇಸತ್ತು ವೇದಾಂತ ದೇಶಿಕ ಎಂಬ ಪ್ರಮುಖ ಶ್ರೀ ವೈಷ್ಣವ ಸಂತ ಶ್ರೀರಂಗದ ರಂಗನಾಥಸ್ವಾಮಿಯ ವಿಗ್ರಹವನ್ನು ತೆಗೆದುಕೊಂಡು ಕಣ್ಮರೆಯಾಗುತ್ತಾನೆ. ಕುಮಾರ ಕಂಪಣ್ಣ ದಂಡನಾಯಕ ಗೋಪಣ್ಣನಿಗೆ ಈ ವಿಷಯ ತಿಳಿಸಲು ಕೋಪಗೊಂಡ ಗೋಪಣ್ಣನು ಮಧುರೆಯ ಸುಲ್ತಾನನ ವಿರುದ್ಧ ಯುದ್ಧದಲ್ಲಿ ತೊಡಗುತ್ತಾನೆ. ಯುದ್ಧದಲ್ಲಿ ಸುಲ್ತಾನನು ಮರಣಹೊಂದಿ ಶ್ರೀರಂಗನಾಥ ಸ್ವಾಮಿ ವಿಗ್ರಹ ಪುನಃ ಪ್ರತಿಷ್ಠಾನಗೊಳ್ಳುತ್ತದೆ. ವೇದಾಂತ ದೇಶಿಕವು ಹಿಂದಿರುಗಿ ಶ್ರೀರಂಗಕ್ಕೆ ಬರುತ್ತದೆ. ಈ ಮೇಲಿನ ಸಾರಾಂಶವನ್ನು ಸಂಕ್ಷಿಪ್ತವಾಗಿ ಪ್ರಪನ್ನಾವೃತಂ ತಿಳಿಯಬಯಸುತ್ತದೆ.

**ವರದಾಂಬಿಕಾ ಪರಿಣಯಂ :** ತಿರುಮಲಾಂಭ ರಚಿಸಿರುವ 'ವರದಾಂಬಿಕಾ ಪರಿಣಯಂ' ಸಂಸ್ಕೃತ ಭಾಷೆಯಲ್ಲಿ ಅದರಲ್ಲೂ ಪ್ರಮುಖವಾಗಿ ಚಂಪೂ ಶೈಲಿಯಲ್ಲಿದೆ. ನಮ್ಮ ಹಿಂದೂ ಸಮಾಜದಲ್ಲಿ ಸವತಿಯನ್ನು ಕಂಡರೆ ಕೈಕೈ ಹಿಸುಕುವ ಹೆಂಡತಿಯರು ಇಲ್ಲಿ ಸವತಿಯ ಮತ್ಸರ್ಯವಿಲ್ಲದೆ ಒಬ್ಬ ರಾಣಿ ತನ್ನ ಪತಿಯ ಮತ್ತೊಂದು ವಿವಾಹದ ವರ್ಣನೆಯನ್ನು ಮಾಡಿರುವುದು ಈ ಕಾವ್ಯದ ಪ್ರಮುಖ ವೈಶಿಷ್ಟ್ಯವಾಗಿದೆ. ಅದರಲ್ಲೂ ಮಹಿಳಾ ಪ್ರತಿಭಾ ಸಾಮರ್ಥ್ಯಕ್ಕೆ ಇದು ಮತ್ತೊಂದು ಉದಾಹರಣೆ ಎನ್ನಬಹುದು.

ಸುಸಂಸ್ಕೃತಿಯ ಇತಿಹಾಸ ರಚಿಸುವವನಿಗೆ ಈ ಗ್ರಂಥವು ಅಮೂಲ್ಯ ಸಂಗತಿಗಳನ್ನು ನೀಡುತ್ತದೆ. ಈ ಗ್ರಂಥ ಆರಂಭದಲ್ಲಿ ಅಚ್ಯುತರಾಯನ ಪೂರ್ವಜರ ವಂಶಾವಳಿಯ ವರ್ಣಿತವಾಗಿದೆ. ಚಂದ್ರವಂಶದಲ್ಲಿ ತಿಮ್ಮ ಭೂಪದೇವಕಿಯರಿಗೆ ಈಶ್ವರನೆಂಬ ಕುಮಾರ ಜನಿಸಿದನು. ಅವನಿಗೆ ನರಸನೆಂಬ ಶಕ್ತಿ ಸಂಭೂತ ಮಗ ಹುಟ್ಟಿದನು. ಈ ನರಸನೇ ಅಚ್ಚುತನ ತಂದೆ, ನರಸನ ಖ್ಯಾತಿಯ ವರ್ಣನೆ ಇದರಲ್ಲಿ ಸಂಪೂರ್ಣವಾಗಿ ದೊರೆಯುತ್ತದೆ. ನರಸನು ಮೊದಲು ಪೂರ್ವದಿಕ್ಕಿನಲ್ಲಿ ದಂಡಯಾತ್ರೆ ಆರಂಭಿಸಿ ಶತ್ರುಗಳನ್ನು ನಿಗ್ರಹಿಸಿ ದಕ್ಷಿಣ ದಿಕ್ಕಿನಲ್ಲಿ ಸಮುದ್ರದ ತೀರಗಳೆಡೆ ನಡೆದನು. ತೊಂಡೈಮಂಡಲವನ್ನು ದಾಟಿ ಚೋಳರ ರಾಜ್ಯವನ್ನು ಮುತ್ತಿದನು. ಚೋಳರಾಜನು ಮಂತ್ರಗಳ ಆದೇಶಮೀರಿ ಸಂಧಾನಕ್ಕೆ ಒಪ್ಪದೆ ಯುದ್ಧಕ್ಕೆ ತೊಡಗಿದನು. ಕಾವೇರಿ ನದಿಯ ದಕ್ಷಿಣದಲ್ಲಿ ನಡೆದ ತೀವ್ರ ಕಾಳಗದಲ್ಲಿ ಚೋಳರಾಜನು ಸೆರೆ ಸಿಕ್ಕಿದನು. ನರಸನು ಮಧುರಾ ನಗರಿಯ ದೊರೆಯಿಂದ ಕಪ್ಪಕಾಣಿಕೆ ಸ್ವೀಕರಿಸಿ ರಾಮೇಶ್ವರಕ್ಕೆ ಹೋದನು. ಅಲ್ಲಿ ದೇವರಿಗೆ ಅನೇಕ ಕಾಣಿಕೆಗಳನ್ನು ಅರ್ಪಿಸಿ ನಂತರ ಶ್ರೀರಂಗಪಟ್ಟಣದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಪ್ರವಾಹದಿಂದ ತುಂಬಿ ಹರಿಯುತ್ತಿದ್ದ ಕಾವೇರಿ ನದಿಗೆ ಬಲಮುರಿ ಎಂಬಲ್ಲಿ ಒಂಧು ಸಣ್ಣ ಅಣೆಕಟ್ಟು ಕಟ್ಟಿಸಿದನು.

ನಂತರ ತುಮಕೂರು ಮತ್ತು ತರಸಂಗಿ ಕೋಟೆಗಳನ್ನು ಗೆದ್ದು ಗೋಕರ್ಣದಲ್ಲಿ ತುಳಾ ಪುರುಷಯಜ್ಞ ಮಾಡಿ ಕಾಣಿಕೆಯನ್ನು ನೀಡಿದನು. ನಂತರ ಮಾನವ ದುರ್ಗದ ಸುಲ್ತಾನನ್ನು ಸೋಲಿಸಿ ವಿಜಯನಗರಕ್ಕೆ ಹಿಂದಿರುಗಿದನು. ಸೂರ್ಯವಂಶದ ಓಬಯೊಂಬಳೆಯೊಡನೆ ವಿವಾಹವಾಗಿ ಅಚ್ಚುತನೆಂಬ ಮಗನನ್ನು ಪಡೆದನು. ಕವಯತ್ರಿಯು ಅಚ್ಯುತನ ಬಾಲ್ಯದ ವರ್ಣನೆಯನ್ನು ಸಹ ಮಾಡಿ ನಂತರ ವರದಾಂಬಿಕೆಯೊಡನೆ ವಿವಾಹವಾದದ್ದನ್ನು ಸಹ ಸೊಗಸಾಗಿ ವರ್ಣಿಸಿರುತ್ತಾಳೆ. ಅವರ ಮಗ ಚಿನ್ನವೆಂಕಟಾದ್ರಿಯು ಯುವರಾಜನಾಗಲು

ತಿರುಮಲಾಂಬ ಅಚ್ಚುತ, ವರದಾಂಬಿಕೆ ಹಾಗೂ ಯುವರಾಜ ವೆಂಕಟಾದ್ರಿಗೆ ಒಳತಾಗಲಿ ಎಂದು ಪ್ರಾರ್ಥಿಸಿ ತನ್ನ ಗ್ರಂಥವನ್ನು ಮುಗಿಸಿರುವುದು ಕಂಡುಬರುತ್ತದೆ.

**ಸಾಳುವಾಭ್ಯುದಯಂ:** ರಾಜನಾಥ ಡಿಂಡಿಮನ ಈ ಕಾವ್ಯ ಸಾಳುವ ನರಸಿಂಹನ ಪ್ರತಾಪಗಳನ್ನು ಹೆಗ್ಗಳಿಕೆಯಿಂದ ವರ್ಣಿಸಿದೆ. ಅಂದರೆ ಆತನ ವಂಶಾವಳಿಯನ್ನು ಸಂಕ್ಷಿಪ್ತವಾಗಿ ನೀಡುತ್ತದೆ. ಈ ಗ್ರಂಥದಲ್ಲಿ ನರಸಿಂಹನ ಕಳಿಂಗ ಯುದ್ಧದ ವರ್ಣನೆಯು ಕಂಡುಬರುತ್ತದೆ. ನಂತರ ದಕ್ಷಿಣದ ಕಡೆ ಬರಲು ಚೋಳ ದೊರೆ ತಲೆ ಮರೆಸಿಕೊಳ್ಳುತ್ತಾನೆ. ನರಸಿಂಹ ರಾಮೇಶ್ವರದವರೆಗೆ ಹೋಗಿ ಕಪ್ಪ ಕಾಣಿಕೆಗಳನ್ನು ಸ್ವೀಕರಿಸಿ ಹಿಂದಿರುಗುತ್ತಾನೆ. ಈ ಸಂದರ್ಭದಲ್ಲಿಯೇ ಶ್ರೀಲಂಕಾ ದೊರೆಯು ಇವನೊಡನೆ ಸಂಧಾನ ಮಾಡಲು ಇಚ್ಚೆ ಪಡುತ್ತಾನೆಂದು ಈ ಗ್ರಂಥವು ತಿಳಿಸುತ್ತದೆ. ನಂತರ ಪೆನುಗೊಂಡೆಯಲ್ಲಿ ಮುಸ್ಲೀಂರ ವಿರುದ್ಧ ಜಯಗಳಿಸಿದನೆಂದು ಈ ಕೃತಿಯು ತಿಳಿಸುತ್ತದೆ. ಈ ಕಾವ್ಯದುದ್ದಕ್ಕೂ ರಾಜನ ಪ್ರತಾಪದ ವರ್ಣನೆಯು ಉತ್ಪ್ರೇಕ್ಷೆಯಿಂದ ಕೂಡಿರುವುದಾಗಿದೆ ಎಂದರೆ ತಪ್ಪಾಗಲಾರದು.

**ಅಚ್ಯುತರಾಯಾಭ್ಯುದಯಂ :** ಈ ಕೃತಿಯು ಅಚ್ಯುತರಾಯನ ವಂಶಾವಳಿಯನ್ನು ನೀಡುತ್ತದೆ. ನರಸಿಂಹ, ಕೃಷ್ಣದೇವರಾಯನ ಪ್ರತಾಪಗಳು ಮೊದಲು ವರ್ಣಿತವಾಗಿ ನಂತರ ಅಚ್ಯುತರಾಯನ ಆಳ್ವಿಕೆಯ ವರ್ಣನೆಯು ಬರುತ್ತದೆ. ಈ ಕಾಲದ ಕುತೂಹಲಕಾರಿ ಸಂಗತಿ ಎಂದರೆ ಅಚ್ಚುತನ ಅಧೀನದಲ್ಲಿದ್ದ ಆಡಳಿತಾಧಿಕಾರಿ ಚಲ್ಲಪ್ಪ ಎಂಬುವನು ದಂಗೆಯೆದ್ದು ಚೇರ ರಾಜನೊಡನೆ ಸೇರಿ ಪಾಂಡ್ಯದೊರೆಯನ್ನು ರಾಜ್ಯಬಿಟ್ಟು ಓಡಿಸುತ್ತಾನೆ. ಇದರಿಂದ ಸಿಟ್ಟಿಗೆದ್ದ ಅಚ್ಯುತರಾಯನು ಪಾಂಡ್ಯದ ಸಹಾಯಕ್ಕೆ ಬಂದು ಚೇರ ರಾಜನನ್ನು ಸೋಲಿಸಿ ಮತ್ತೆ ಪಾಂಡ್ಯ ರಾಜನನ್ನು ಸಿಂಹಾಸನದ ಮೇಲೆ ಕೂರಿಸಿದ ವರ್ಣನೆಯು ಬರುತ್ತದೆ. ಈ ಗ್ರಂಥವು ಅಂದಿನ ಇತಿಹಾಸ ರಚನೆಗೆ ಹೆಚ್ಚಿನ ಸಹಕಾರಿಯಾಗಿದೆ.

**ವಿರೂಪಾಕ್ಷ ವಸಂತೋತ್ಸವ :** ವಿಜಯನಗರ ಸಾಮ್ರಾಜ್ಯದಲ್ಲಿ ವಸಂತೋತ್ಸವಗಳು ಅತ್ಯಂತ ವಿಜೃಂಭಣೆಯಿಂದ ಪ್ರತಿವರ್ಷವೂ ನಡೆಯುತ್ತಿದ್ದವು. ಹಂಪಿಯ ವಿರೂಪಾಕ್ಷನ ರಥೋತ್ಸವದ ವರ್ಣನೆ ಅಹೋಬಲ ಸೂರಿಯ ಈ ಸುಂದರ ಕಾವ್ಯದಲ್ಲಿ ಒಡಮೂಡಿದೆ. ಆ ಕಾಲದ ಸಾಮಾಜಿಕ ಇತಿಹಾಸದ ಪುನರ್ರಚನೆಗೆ ಈ ಗ್ರಂಥವು ಅತ್ಯಂತ ಹೆಚ್ಚಿನ ರೀತಿಯಲ್ಲಿ ಸಹಕಾರಿಯಾಗಿದೆ. ಅದರಲ್ಲಿಯೂ ವಿಜಯನಗರದ ಸಂಸ್ಕೃತಿಯನ್ನು ಈ ಗ್ರಂಥವು ಅತ್ಯಂತ ಹೆಚ್ಚಿನ ರೀತಿಯಲ್ಲಿ ಹೊರಚೆಲ್ಲುತ್ತದೆ. ಆ ಕಾಲದ ಧಾರ್ಮಿಕ ಕ್ರಿಯೆಗಳ ಹಾಗೂ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಈ ಗ್ರಂಥದಲ್ಲಿ ವಿಶೇಷ ಮಾಹಿತಿ ದೊರಕುತ್ತದೆ. ಈ ವಸಂತೋತ್ಸವದಲ್ಲಿ ಪಾಲ್ಗೊಳ್ಳಲು ಸಾಮ್ರಾಜ್ಯದ ನಾನಾ ಮೂಲೆಗಳಿಂದ ಸಾಮಂತರಾಜರು, ದಂಡನಾಯಕರು, ಸೇನಾಪತಿಗಳು, ಕವಿಗಳು, ವಿದ್ವಾಂಸರು ಮುಂತಾದ ಗಣ್ಯವ್ಯಕ್ತಿಗಳು ಬರುತ್ತಿದ್ದರು. ಆ ಸಮಯದಲ್ಲಿಯೇ ರಾಜಸಭೆಗಳು ನಡೆಯುತ್ತಿದ್ದವು ಎಂಬುದನ್ನು ಹಾಗೂ ಅಂದಿನ ಜನಜೀವನ ಹಾಗೂ ರಾಜಕೀಯ ವಿದ್ಯಮಾನಗಳೆರಡೂ ಈ ಗ್ರಂಥದ ಪರಾಮರ್ಶೆಯಿಂದ ತಿಳಿದುಬರುತ್ತದೆ. ಅಷ್ಟೆ ಅಲ್ಲದೆ ವಿಜಯನಗರ, ಪಂಪಾಕ್ಷೇತ್ರ, ತುಂಗಭದ್ರನದಿಯ ಉತ್ಪ್ರೇಕ್ಷಿತ ವರ್ಣನೆಯು ಈ ಗ್ರಂಥದಲ್ಲಿ ಸಂಕ್ಷಿಪ್ತವಾಗಿ ಕಂಡುಬರುತ್ತದೆ.

ಧಾರ್ಮಿಕ ಇತಿಹಾಸದ ಪುನರ್ರಚೆನೆಗೆ ಸಹಾಯಕವಾದ ಗ್ರಂಥ "ವೇದಾಂತ ಪ್ರಕಾಶ" (ಸಯನಾಚಾರ್ಯ ಮತ್ತು ಮಾಧವಾಚಾರ್ಯರವರಿಂದ ರಚಿತವಾಗಿರುವುದು) 'ರಾಜಕಲಾನಿರ್ಣಯ'ವು ಶೃಂಗೇರಿ ಜಗದ್ಗುರುಗಳ ಬಗ್ಗೆ ತಿಳಿಸುತ್ತದೆ. ಬಸವ ಭೂಪಾಳನ 'ಶಿವತತ್ವ ರತ್ನಾಕರ' ಒಂದು ಧಾರ್ಮಿಕ ಗ್ರಂಥವಾದರೂ ಸಾಮಂತರಾದ ಕೆಳದಿ ಅರಸನ ಹಾಗೂ ವಿಜಯನಗರದ ಕೇಂದ್ರ ಸರ್ಕಾರದ ನಡುವಿನ ಸಾಂಸ್ಕೃತಿಕ ಸಂಬಂಧದ ಬಗ್ಗೆ ಬೆಳಕು ಬೀರುತ್ತದೆ. ಕೃಷ್ಣದೇವರಾಯನಿಂದ ರಚಿಸಲ್ಪಟ್ಟಿರುವ "ಜಾಂಬವತೀ ಕಲ್ಯಾಣ'ದಲ್ಲಿ ವಿರೂಪಾಕ್ಷದೇವರ ವಸಂತೋತ್ಸವದ ವರ್ಣನೆಯು ಸಂಪೂರ್ಣವಾಗಿ ಕಂಡುಬರುತ್ತದೆ. ಲಕ್ಷ್ಮಣ ಪಂಡಿತನ 'ವೈದ್ಯಾರಾಜವಲ್ಲಭಂ" ಎಂಬ ಗ್ರಂಥವು ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಮುಖ ಗ್ರಂಥವಾಗಿತ್ತೆಂದು ತಿಳಿದುಬರುತ್ತದೆ.

ಸಂಸ್ಕೃತ ಸಾಹಿತ್ಯಾಧಾರಗಳನ್ನು ಅವಲೋಕಿಸಿದಾಗ ಕಂಡುಬರುವ ಪ್ರಮುಖ ಅಂಶ ಈ ಕೃತಿಗಳು ತಮ್ಮ ಆಶ್ರಯದಾತನಿಗಾಗಿ ನಿರೂಪಿತವಾಗಿವೆ ಇಲ್ಲವೇ ಧಾರ್ಮಿಕ ಗ್ರಂಥಗಳಾಗಿ ಉಳಿದಿದೆ. ಕಾವ್ಯಾತ್ಮಕವಾಗಿ ನಿರೂಪಿತವಾಗಿರುವುದರಿಂದ ಐತಿಹಾಸಿಕ ಸಂಗತಿಗಳನ್ನು ಹೊರತೆಗೆಯುವ ಕೆಲಸ ನಡೆಯಬೇಕಾಗಿದೆ.

### ೬.೨. ಕನ್ನಡ ಸಾಹಿತ್ಯ

ವಿಜಯನಗರ ಸಾಮ್ರಾಜ್ಯ ಇತಿಹಾಸ ರಚನೆಗೆ ನೆರವಾಗಬಲ್ಲ ಕನ್ನಡದ ಬಹಳ ಮುಖ್ಯವಾದ ಗ್ರಂಥವೆಂದರೆ 'ಕುಮಾರರಾಮನ ಕಥೆ' ಇವರ ಕರ್ತೃ ೧೬ನೇ ಶತಮಾನದ ಶೈವ ಕವಿ ನಂಜುಂಡ. ಕ್ರಿ.ಶ. ಸುಮಾರು ೧೫೨೫ರಲ್ಲಿ ಇದರ ರಚನೆಯಾಗಿರಬಹುದೆಂದು ಕವಿ ಚರಿತ್ರೆಕಾರರ ಅಭಿಪ್ರಾಯ. ಈ ಕೃತಿಯ ಕಥಾನಾಯಕ 'ಕುಮಾರರಾಮ' ಕನ್ನಡ ನಾಡಿನ ಜನಪ್ರಿಯ ನಾಯಕರಲ್ಲೊಬ್ಬ, ಪೌರುಷ ಮತ್ತು ಶೌರ್ಯಗಳಿಗೆ ಹೆಸರಾದ ಇವನು ಅತಿ ಚಿಕ್ಕ ವಯಸ್ಸಿನಲ್ಲಿಯೇ ಮಹಮ್ಮದೀಯರ ದಾಳಿಯನ್ನೆದುರಿಸಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ತಳಹದಿ ಹಾಕಿ ಶಿಥಿಲವಾಗುತ್ತಿದ್ದ ಹಿಂದೂ ಧರ್ಮವನ್ನು ಉದ್ಧಾರ ಮಾಡಿದನೆಂದು ವರ್ಣಿಸಲಾಗಿದೆ. ಚಿತ್ತಾಕರ್ಷಕವಾಗಿರುವ ಈ ಕುಮಾರರಾಮನ ಕಥೆಯಲ್ಲಿ ಹಾಸುಹೊಕ್ಕಾಗಿರುವ ಒಂದೆರಡು ಐತಿಹಾಸಿಕ ಎಳೆಗಳನ್ನು ಬಿಡಿಸಲು ಇಂದಿನ ಚರಿತ್ರಾಕಾರು ಪ್ರಯತ್ನಿಸಿದ್ದಾರೆ. ಇಬನ್ ಬಟೂಟ, ನ್ಯೂನಿಜ್, ಬರ್ನಿ, ಪೆರಿಸ್ತಾ ಮತ್ತು ಇಸಾಮಿ ಮೊದಲಾದವರ ಉಲ್ಲೇಖಗಳಲ್ಲಿ ಕಮ್ಮಟದುರ್ಘದ ದುರಂತ ವೃತ್ತಾಂತದ ಕಥೆ ಅಲ್ಪಸಲ್ಪ ತಿಳಿದುಬರುತ್ತದೆ. ಕುಮಾರರಾಮನನ್ನು ಕುರಿತು ಅನೇಕ ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಘಡ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮೊದಲಾದ ಕಡೆ ದೊರಕಿವೆ. ಉತ್ತರದಿಂದ ಮಹಮದ್ ಬಿನ್ ತೋಘಲಕನ ವಿರುದ್ಧ ದಂಗೆಯೆದ್ದ ಬಹಾವುದ್ದೀನ್ ಬಿಸ್ ತೋಘಲಕನ ವಿರುದ್ದ ದಂಗೆಯೆದ್ದ ಬಹಾವುದ್ದೀನ್ ಗರ್ಷಸ್ಪ್ ಎಂಬಾತ ಕಂಪಿಲ ರಾಯನಲ್ಲಿ ಆಶ್ರಯ ಪಡೆದಿದ್ದನೆಂದೂ, ದೆಹಲಿಯಿಂದ ಬಂದ ಕಂಪಿಲನನ್ನು ಸೈನ್ಯ ಹತಮಾಡಿತೆಂದೂ, ದೆಹಲಿಯಿಂದ ಬಂದ ಕಂಪಿಲನನ್ನು ಸೈನ್ಯ ಹತಮಾಡಿ ಕೆಲವರನ್ನು ಸೆರೆಹಿಡಿದು ದೆಹಲಿಗೆ ಒಯ್ಯಲಾಯಿತೆಂದು ಅವರಲ್ಲಿ ಜೀವಸಹಿತ ಉಳಿದ ಒಬ್ಬೊಬ್ಬರೇ ಮುಂದೆ ವಿಜಯನಗರದ ಸ್ಥಾಪನೆಗೆ ಕಾರಣರಾದರೆಂದು ಈ ಕೃತಿಯು ಸಾರುತ್ತದೆ. ಆದರೆ ಈ ಗ್ರಂಥ ಸುಮಾರು ೨೦೦ ವರ್ಷಗಳ ನಂತರ ರಚಿತವಾಗಿರುವುದರಿಂದ ಇದರಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಗ್ರಂಥದ ವಿಷಯ ನಿರೂಪಣೆಯಲ್ಲಿ ದೋಷಗಳಿದ್ದರೂ ಸಹ ಇದು ಮುಖ್ಯವಾದ ಐತಿಹಾಸಿಕ ಅಂಶಗಳನ್ನು ಒಳಗೊಂಡಿದೆ ಎಂದು ಹೇಳಬಹುದು.

ಕವಿ ಲಿಂಗಣ್ಣ ತನ್ನ ಕನ್ನಡ ಚಂಪೂ ಕಾವ್ಯವಾಗಿರುವ "ಕೆಳದಿ ನೃಪವಿಜಯಂ" ನಲ್ಲಿ ಹೀಗೆ ವರ್ಣಿಸಿದ್ದಾನೆ. ಆಕಸ್ಮಿಕವಾಗಿ ದೊರೆತ ನಿಕ್ಷೇಪದಿಂದ ಪ್ರಬಲನಾದ ಕೃಷಿಕಾರ ಚೌಡಪ್ಪಗೌಡ ೧೬ನೇ ಶತಮಾನದ ಅದಿಯಲ್ಲಿ ವಿಜಯನಗರ ಸಾಮ್ರಾಟದ ಅಪ್ಪಣೆ ಮೇರೆಗೆ ಕೆಳದಿಯೇ ಮೊದಲಾದ ಎಂಟು ಸಂಸ್ಥಾನಗಳ ನಾಯಕತ್ವವನ್ನು ವಹಿಸಿಕೊಂಡಾಗ ಕೆಳದಿ ಅವರ ರಾಜಧಾನಿಯಾಯಿತು. ಆತ ಚೌಡಪ್ಪ ನಾಯಕನೆನಿಸಿಕೊಂಡು ಕೆಳದಿಯಲ್ಲಿ ರಾಜೋಚಿತವಾದ ಅರಮನೆಯನ್ನು ಭದ್ರತೆಯ ಸಲುವಾಗಿ ಹುಡೆ, ಕಾಯ್ದು, ಕಟ್ಟಳೆಗಳನ್ನು ನಿರ್ಮಿಸಿ ೧೫೦೦ರಲ್ಲಿ ಕೆಳದಿ ಪುರದರಮನೆಯಲ್ಲಿ ಪಟ್ಟಕಟ್ಟಿಕೊಂಡನೆಂದು ಲಿಂಗಣ್ಣ ಕವಿ ಹೇಳಿಕೊಂಡಿದ್ದಾನೆ. ವಿಜಯನಗರ ಸಾಮ್ರಾಜ್ಯದ ಮೂಲಕ್ಕೆ ಸಂಬಂಧಿಸಿದಂತೆ ಈ ಗ್ರಂಥವು "ವಿದ್ಯಾರಣ್ಯ ಕಾಲಜ್ಞಾನ"ದ ರೀತಿಯಲ್ಲಿಯೇ ಹಲವು ಘಟನೆಗಳನ್ನು ವಿವರಿಸುತ್ತದೆ. ಕಳದಿ ನೃಪವಿಜಯಂ ಕೂಡ ವಿಜಯನಗರ ಸ್ಥಾಪನೆಯಾದ ೪೦೦ ವರ್ಷಗಳ ನಂತರ ರಚಿತವಾದ ಗ್ರಂಥ ಅದ್ದರಿಂದ ಇದರಲ್ಲಿರುವುದೆಲ್ಲವನ್ನು ಸತ್ಯವೆಂದು ಹೇಳಲು ಸಾಧ್ಯವಾಗುವುದಿಲ್ಲ

ಚಿಕ್ಕದೇವರಾಜ "ವಂಶಾವಳಿ"ಯು ಕೂಡ ವಿಜಯನಗರಕ್ಕೆ ಸಂಬಂದಿಸಿದ ಕೆಲವು ಘಟನೆಗಳನ್ನು ವಿವರಿಸುತ್ತದೆ. ಈ ಗ್ರಂಥದ ರಚನೆಕಾರ ತಿರುಮಲ ಆರ್ಯ. ಇದು ಮೈಸೂರು ಅರಸರ ಇತಿಹಾಸಕ್ಕೆ ಸಂಬಂದಿಸಿದ್ದು. ಈ ಗ್ರಂಥದ ಪ್ರಾರಂಭದಲ್ಲಿ ಮೈಸೂರಿನ ಅರಸರಿಗೂ ಮತ್ತು ವಿಜಯನಗರಕ್ಕೂ ಇದ್ದ ಸಂಬಂಧವನ್ನು ವಿವರಿಸುತ್ತದೆ. ಕ್ರಿ.ಶ. ೧೪೨೮ರಲ್ಲಿದ್ದ ಲಕ್ಕಣ್ಣದಂಡೇಶನು "ಶಿವತತ್ವ ಚಿಂತಾಮಣಿ' ಎಂಬ ೨೦೦ಕ್ಕೂ ಹೆಚ್ಚು ಪದ್ಯಗಳುಳ್ಳ ಬೃಹತ್ ಕಾವ್ಯ ಬರೆದು ತನ್ನ ಪ್ರತಿಭೆಯನ್ನು ವ್ಯಕ್ತಪಡಿಸಿದನು. ರಂ.ಶ್ರೀ.ಮುಗಳಿ ಅವರು ಬರೆದಿರುವಂತೆ... ಶಿವತತ್ವ ಚಿಂತಾಮಣಿಯಲ್ಲಿ ನಿತ್ಯಾನಿತ್ಯ ವಸ್ತು ವಿವರಣೆ, ಸಕಲ ನಿಷ್ಠಲ ವಿಚಾರ, ಶಿವನ ೨೫ ಲೀಲೆಗಳು, ಭವನಕೋಶ ಶಿವಕೋಶ ವರ್ಣನೆ, ಶಿವನಂದೀಶ ಸಂವಾದ, ಬಸವ ಚರಿತ, ಗಣಪ್ರಶಂಸೆ ಮುಂತಾದ ವಿಚಾರಗಳಿವೆ. ಒಟ್ಟಿನಲ್ಲಿ ಅಂದಿನ ಧಾರ್ಮಿಕ ನೀತಿಯ ಮೇಲೆ ಈ ಕರತಿ ಬೆಳಕು ಚೆಲ್ಲುತ್ತದೆ.

ವಿಜಯನಗರ ಸಾಮ್ರಾಟರು ಅಧಿಕ ಸಂಖ್ಯೆಯಲ್ಲಿ ಕನ್ನಡದ ಕವಿಗಳಿಗೆ ಆಶ್ರಯ ನೀಡಿದ್ದರು. ಗದುಗಿನ ನಾರಾಯಣಪ್ಪ, ಮಲ್ಲಿಕಾರ್ಜುನ, ಚಂದ್ರಕವಿ, ಚಾಮರಸ, ಭೀಮಕವಿ, ದೇವರಾಜ, ನರಹರಿ ಮೊದಲಾದವರು ಸಹಸ್ರ ಸಂಖ್ಯೆಯಲ್ಲಿ ಕಥೆ, ಕಾವ್ಯಗಳನ್ನು ಬರೆದು ಪ್ರಸಿದ್ಧರಾಗಿದ್ದಾರೆ. ಈ ಎಲ್ಲ ಕೃತಿಗಳೂ ಒಮದಲ್ಲಾ ಒಂದು ವಿಷಯದ ಮೇಲೆ ಬೆಳಕು ಚೆಲ್ಲುತ್ತವೆ.

**ದಾಸ ಸಾಹಿತ್ಯ :** ಕನ್ನಡ ಸಾಹಿತ್ಯಕ್ಕೆ ಹೊಂದಿಕೊಂಡಂತೆ ವಿಜಯನಗರ ದೊರೆಗಳ ಆಳ್ವಿಕೆಯ ಕಾಲವು ದಾಸ ಸಾಹಿತ್ಯದ ವಸಂತಕಾಲವಾಗಿತ್ತು. ಪುರಂದರ ಮತ್ತು ಕನಕದಾಸರ ಕಾಲವಂತೂ ಅಂದಿನ ದಾಸಸಾಹಿತ್ಯದ ಸುವರ್ಣಯುಗ, ಧಾರ್ಮಿಕಕ್ಷೋಭೆ, ಸಾಮಾಜಿಕ ಅಶಾಂತಿ, ಪರಸ್ಪರ ವೈಷಮ್ಯ ಮುಂತಾದವನ್ನೆಲ್ಲಾ ಗಮನಿಸಿ ತಮ್ಮ ಅಪೂರ್ವ ಕವಿತಾಶಕ್ತಿಯಿಂದ ಅಂದಿನ ಸಮಾಜದ ಗುಣದೋಷಗಳನ್ನು ಚಿತ್ರಿಸಿದ್ದಾರೆ. ದಾಸರಲ್ಲಿ ಶ್ರೀಪಾದರಾಯರು, ಗೋಪಾಲದಾಸರು, ವಾದಿರಾಜರು, ವಿಜಯದಾಸರು, ವ್ಯಾಸರಾಯರು, ಪುರಂದರದಾಸರು ಮತ್ತು ಕನಕದಾಸರು ಮುಖ್ಯರಾದವರು ಇವರ ನಂತರವೂ ಸಹ ದಾಸಸಾಹಿತ್ಯ ಮುಂದುವರಿದುಕೊಂಡು ಬಂದಿತು.

ಸೋಸಲೆಯ ಶ್ರೀವ್ಯಾಸರಾಯರ ನ್ಯಾಯಾವೃತ, ತರ್ಕ ಪಾಂಡವಗಳೆಂಬ ಶ್ರೇಷ್ಠ ಕೀರ್ತನೆಗಳು ಅಂದಿನ ಸಾಮಾಜಿಕ ಜನಜೀವನದ ಪ್ರಮುಖ ಅಂಶಗಳನ್ನು ತಿಳಿಸಲು ನೆರವಾಗಬಲ್ಲದಾಗಿದೆ. ಪುರಂದರದಾಸರ ಕೀರ್ತನೆಗಳಲ್ಲಿ ಅಂದಿನ ಸಮಾಜದಲ್ಲಿನ ಆಚಾರ ವಿಚಾರಗಳು ಮೂಡನಂಬಿಕೆಗಳನ್ನು ಸಾಮಾನ್ಯವಾಗಿ ಗ್ರಹಿಸಬಹುದು. ಪುರಂದರು ಸಾಮಾಜದ ವಿಮರ್ಶೆಯನ್ನು ಮಾಡುತ್ತಾ ಜನರ ಕಪಟ, ನಾಸ್ತಿಕತೆ, ಅನೀತಿ, ಡಾಂಭಿಕತೆಗಳ ಕಟು ವಿಮರ್ಶೆಯೊಡನೆ ಚಿರಂತನ ಮೌಲ್ಯಗಳ ಮತ್ತು ಭಕ್ತಿಯ ಉಪದೇಶ ಮಾಡಿದ್ದಾರೆ. ಲೋಕದ ಜನತೆಯನ್ನು ತಿದ್ದುವಾಗ ನಗೆಯನ್ನು ಒಂದು ಸಾಧನವನ್ನಾಗಿ ಬಳಸಿಕೊಂಡಿದ್ದಾರೆ. "ನಗೆಯು ಬರುತಿದೆ ನನಗೆ ನಗೆಯು ಬರುತಿದೆ, ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದ ಕಂಡು" ಎಂದು ಹಾಡಿದ್ದಾರೆ. ಸಮಾಜದ ವಿಮರ್ಶೆಯ ಗೀತೆಗಳಲ್ಲಿ "ತನುವ ನೀರೊಳಗಿದ್ದು ಫಲವೇನು" "ಬೇವು ಬೆಲ್ಲದೊಡಲೇನು ಫಲ" "ಮಡಿ ಮಡಿ ಎಂದು ಅಡಿಗಡಿಗೆ ಹಾರುವರು" "ಮಲವತೊಳೆಯಬಲ್ಲರಲ್ಲದೆ ಮನವ ತೊಳೆಯಬಲ್ಲರೆ" ಇವುಗಳನ್ನು ಗಮನಿಸಿದರೆ ಮನುಷ್ಯನ ಸ್ವಭಾವಗಳ ವೈವಿಧ್ಯಮಯವಾದ ಜೀವನದ ಪರಿಚಯ ಮತ್ತು ಸಮಾಜ ಜೀವನದಲ್ಲಿಯ ಸಾಮಾನ್ಯ ಅಧೋಗತಿಯ ನಿಚ್ಚಳ ಅರಿವು ಉಂಟಾಗುತ್ತದೆ.

ದಾಸರು ತಮ್ಮ ಸಾಹಿತ್ಯದಲ್ಲಿ ಕಂಡ ಕೆಲವು ಕೆಟ್ಟ ಭಾವನೆಗಳನ್ನು ಟೀಕಿಸಿ ಮತಧರ್ಮದ ವಿಚಾರದಲ್ಲಿ ಮೇಲು, ಕೀಳೆಂಬ ಭಾವನೆಯನ್ನು ತಿರಸ್ಕರಿಸಿದರು. ಕುಲದ ಮೇಲೆ ಯಾರು ಹೋಗಬಾರದು "ಅವಕುಲವಾದರೇನು, ಅವನಾದರೇನು" ಕುಲವಿಲ್ಲ ಜ್ಞಾನಿಗೆ ಎಂದು ಹೇಳಿದ್ದಲ್ಲದೆ ಕುಲದ ಮೇಲುಕೀಳು ಬರುವುದು ಹುಟ್ಟಿನಿಂದಲ್ಲ ಆಚರಣೆಯಿಂದ ಎಂದು ಹೇಳುತ್ತಾ "ಹೊಲೆಯ ಹೊರಗಿನವನೆ ಊರೊಳಗಿಲ್ಲವೆ" ಎಂದು ಹಾಸ್ಯಮಾಡಿದ್ದಾರೆ. ದಾಸರು ಮೈಲಿಗೆ ಮುಂತಾದ ಆಚಾರಗಳನ್ನು ಅಲ್ಲಗಳೆದದ್ದು ಅನೇಕರಿಗೆ ಕೋಪ ತಂದಿತು. ಅವರ ಟೀಕೆಯನ್ನು ಶಾಂತವಾಗಿಯೇ ಸ್ವೀಕರಿಸುತ್ತಾ "ನಿಂದಕರಿರಬೇಕು. ಹಂದಿಯಿದ್ದರೆ ಕೇರಿ ಹ್ಯಾಗೆಶುದ್ಧಿಯೋ ಹಾಗೆ" ಎಂದು ಹಾಡಿದ್ದಾರೆ.

ದಾಸರು ಭಕ್ತಿಯ ಆಚರಣೆಯನ್ನು ವ್ಯಾಪಾರಕ್ಕೆ ಹೊಲಿಸುತ್ತಾ "ನಾಲಿಗೆಯೆಂಬ ಎತ್ತನ್ನು ಗಾಡಿಗೆ ಕಟ್ಟಿ ದೇಹಿ ಎಂಬ ಒಂದು ಗೋಣಿಯಲ್ಲಿ ರಾಮನಾಮವೆಂಬ ಸರಕನ್ನು ತುಂಬಿಕೊಂಡು ವ್ಯಾಪಾರ ಮಾಡಬೇಕು. ಹೀಗೆ ಪಯಣ ಮಾಡುವಾಗ ಇಂದ್ರಿಯಗಳೆಂಬ ಸುಂಕದನು ಅಡ್ಡಬಂದರೆ ಮುಕುಂದ ಮುದ್ರೆಯನ್ನು ತೋರಿಸಿ ಅದನ್ನು ಓಡಿಸಬೇಕು" ಎಂದು ಹೇಳಿದ್ದಾರೆ.

ಹೀಗೆ ಪುರಂದರ ದಾಸರು ತಮ್ಮ ಯಾವುದೇ ಗೀತೆಯಲ್ಲಿಯೂ ಸಹ ಅದು ಅಂದಿನ ಸಾಮಾಜಿಕ ಜೀವನದ ಮೇಲೆ ಬೆಳಕು ಚೆಲ್ಲುವಂತೆ ಮಾಡಿದ್ದಾರೆ. "ಈಸಬೇಕು ಇದ್ದು ಜೈಸಬೇಕು" ಮಾನವ ಜನ್ಮ ದೊಡ್ಡದು ಇದು ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ" ಎಂದ ಆಶಾದಾಯಕ ನುಡಿ ನೀಡಿ ಸಾರ್ಥಕ ಜೀವನಕ್ಕೆ ಮೆರಗು ನೀಡಿದ್ದಾರೆ. ಅವರ ಗೀತೆಗಳು ಕರ್ನಾಟಕ ಸಂಗೀತದಲ್ಲಿ ಶ್ರೇಷ್ಠತೆಯನ್ನು ಗಳಿಸಿವೆ. ಸಂಗೀತವನ್ನು ಜನಸಾಮಾನ್ಯರ ಜೀವನದ ಅಮೂಲ್ಯ ಭಾಗವನ್ನಾಗಿ ಮಾಡಿದವರು ಪುರಂದರರೇ. ಆದುದರಿಂದಲೇ ಅವರನ್ನು "ಕರ್ನಾಟಕ ಸಂಗೀತ ಪಿತಾಮಹ"ನೆಂದು ಪರಿಗಣಿಸಲಾಗಿದೆ.

ಅಪಾರ ಜ್ಞಾನವನ್ನು ಹೊಂದಿದ ಕನಕದಾಸರು ಪುರಂದರದಾಸರಂತೆ ಹಲವಾರು ಕೀರ್ತನೆಗಳನ್ನು ರಚಿಸಿ, ಭಕ್ತಿ ವೈರಾಗ್ಯಗಳ ಪ್ರತಿಪಾದನೆ ಮಾಡಿರುವುದಲ್ಲದೆ ಜನರ ದಿನನಿತ್ಯದ ಅಂಕುಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದರು. ಇವರ "ಮೋಹನ ತರಂಗಣಿ", "ನಳಚರಿತ್ರೆ" "ರಾಮಧಾನ್ಯಚರಿತ್ರೆ" "ಹರಿಭಕ್ತಸಾರ" ಎಂಬ ಗ್ರಂಥಗಳು ಪ್ರಸಿದ್ಧವಾಗಿವೆ. ಇವರು ರಚಿಸಿದ "ಮಗನಿಂದ ಗತಿ ಉಂಟೇ" "ಸಂಸಾರ ಸಾಗರವನ್ನುತ್ತರಿಸುವಡೆ" "ಕುಲಕುಲವೆನ್ನುತಿಹರು" "ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ" ಇವುಗಳು ವಿಜಯನಗರ ಕಾಲದ ಸಮಾಜದಲ್ಲಿದ್ದ ಮೂಡನಂಬಿಕೆಗಳು, ಆಚಾರ, ವಿಚಾರಗಳನ್ನು ವ್ಯಕ್ತಪಡಿಸುತ್ತವೆ. "ಮೋಹನ ತರಂಗಿಣಿ"ಯು ಹಿಂದೂ ಧಾರ್ಮಿಕ ಗ್ರಂತವಾಗಿರದೆ ವಿಜಯನಗರವನ್ನು ಪರೋಕ್ಷವಾಗಿ ವರ್ಣಿಸಿದ್ದಾರೆ. ಅಲ್ಲಿದ್ದ ಅಗ್ರಹಾರಗಳು, ತೋಟಗಳು, ಕೆರೆಗಳು, ಪೇಟೆಗಳು, ಬೀದಿಗಳು, ವರ್ತಕರ ಅಂಗಡಿಗಳು, ಮೊದಲಾದವು ಇಲ್ಲಿ ವರ್ಣಿಸಲ್ಪಟ್ಟಿವೆ. ಕನ್ನಡ ಸಾಹಿತ್ಯದಲ್ಲಿಯೆ ಅಪೂರ್ವ ಕೃತಿ ಎನಿಸಿರುವ ಕನಕದಾಸರ ರಾಮಧಾನ್ಯ ಚರಿತ್ರೆ" ಅವರ ಸಾಮಾಜಿಕ ಪ್ರಜ್ಞೆ ಮತ್ತು ವಿಮರ್ಶಗಳಿಂದ ಕೂಡಿದೆ. ಅಂದಿನ ಸಮಾಜದ ಬಡವ ಬಲ್ಲಿದ, ಮೇಲುಕೀಳು, ಉಚ್ಚ ನೀಚ ಇದರ ನಡುವಿನ ವ್ಯತ್ಯಾಸವನ್ನು ವಿವರಿಸುತ್ತದೆ. ಮತ್ತೊಂದು ಕೃತಿ 'ನಳ ಚರಿತ್ರೆ'ಯಲ್ಲಿ ಅಂದಿನ ಯುದ್ಧ ಪ್ರಿಯ ಜನರ ವೀರ ಜೀವನ ಚರಿತ್ರೆಯನ್ನು ತೋರಿಸಲಾಗಿದೆ. ಈ ಚರಿತ್ರೆಯಲ್ಲಿ ವಿಜಯನಗರದ ಅರಸರು ತಾಳಿಕೋಟೆ ಕದನದಲ್ಲಿ ಸೋತು ಕೆಲಕಾಲ ತೊಂದರೆಗೊಳಗಾಗಿ ಮತ್ತೆ ಅಧಿಕಾರಕ್ಕೆ ಬಂದುದನ್ನು ಸಂಕ್ಷಿಪ್ತವಾಗಿ ಚಿತ್ರಿಸಲಾಗಿದೆ.

ವಿಜಯನಗರದ ಕಾಲವು ಕನ್ನಡ ಸಾಹಿತ್ಯದ ಬೆಳವಣಿಗೆಗೆ ಒಂದು ಪರ್ವಕಾಲ ಇದಕ್ಕೆ ಅನೇಕ ಕವಿಗಳ, ವಿದ್ವಾಂಸರ, ದಾಸಶರಣರ ಪ್ರಯತ್ನಶೀಲತೆ ಮುಖ್ಯ ಕಾರಣವಾಗಿದೆ.

**೬.೩. ತೆಲುಗು ಸಾಹಿತ್ಯ**

ವಿಜಯನಗರದ ಅರಸರು ತೆಲುಗು ವಿದ್ವಾಂಸರಿಗೂ, ಕವಿಗಳು ಪ್ರೋತ್ಸಾಹ ನೀಡುವುದರ ಜೊತೆಗೆ ಕೆಲವರು ತಾವೂ ತೆಲುಗು ಭಾಷೆಯನ್ನು ಬಲ್ಲವರಾಗಿದ್ದು. ಇದರಿಂದಾಗಿ ಹಲವಾರು ತೆಲುಗು ಗ್ರಂಥಗಳು ಇವರ ಕಾಲದಲ್ಲಿ ರಾಜಮಹಾರಾಜರಿಂದ ಪ್ರಾರಂಭವಾಗಿ ತೆಲುಗು ಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕೆಲವು ವಿಜಯನಗರ ಇತಿಹಾಸದ ರಚನೆಗೆ ಬಹುಮುಖ್ಯವಾದ ಆಧಾರಗ್ರಂಥಗಳಾಗಿವೆ. ತೆಲುಗು ಗ್ರಂಥಗಳಲ್ಲಿ ಪ್ರಮುಖವಾದವುಗಳೆಂದರೆ.

ಅ. ಜೈಮಿನಿ ಭಾರತಮು, ಆ. ಹರಿವಿಲಾಸಮು, ಇ. ಪಾರಿಜಾತಪಹರಣಂ, ಈ. ಅಮುಕ್ತಮೌಲ್ಯದ ಉ. ಮುನುಚರಿತ್ರಮು, ಊ. ಲೀಲಾವರಿ ಋ. ಬಾಲಭಾಗವತಂ ೠ. ಲಕ್ಷ್ಮೀವಿಲಾಸಂ ಎ. ರಾಯವಾಚಕಮು, ಏ. ವಸುಚರಿತ್ರಮು, ಐ. ನರಸಬೂ ಪಾಲ್ಯಮು.

ಪಿನವೀರಭದ್ರನಿಂದ ರಚಿತವಾದ ಜೈಮಿನಿ ಭಾರತಮು ಗ್ರಂಥವು ವಿಜಯನಗರದ ಸಾಳುವ ಸಂತತಿಯ ಮೊದಲನೆಯ ದೊರೆಯಾದ ಸಾಳುವ ನರಸಿಂಹನ ಪೂರ್ವಜನಾದ ಸಾಳುವ ಮಗುವಿನ ಬಗ್ಗೆ ಕೆಲವು ಮಾಹಿತಿಯನ್ನು ಒದಗಿಸುತ್ತದೆ. ಬುಕ್ಕನ ಆಳ್ವಿಕೆಯ ಕಾಲದಲ್ಲಿ ಅವನ ಮಂತ್ರಿಯಾದ ಗೋಪಣ್ಣ ಆರ್ಯ ಮತ್ತು ಕಂಪಣ್ಣನ ದಂಡೆಯಾತ್ರೆಯ ಬಗ್ಗೆ ತಿಳಿದುಬರುತ್ತದೆ. ಸಾಳುವ ನರಸಿಂಹನು ಹೊಂದಿದ್ದ ಬಿರುದುಗಳನ್ನು ಮತ್ತು ಅವುಗಳ ಅರ್ಥವನ್ನು ತಿಳಿಸುತ್ತದೆ. ವಲ್ಲಭರಾಯ ರಚಿಸಿರುವ "ಕೃದಾಭಿರಾಯಂ" ಎಂಬ ಗ್ರಂಥವು ತ್ರಿಪುರಾಂತಕನ ಮಗನಾದ ವಲ್ಲಭರಾಯನು ಪೆನುಕೊಂಡದ ರಾಜ್ಯಪಾಲನಾಗಿದ್ದ ಮೂರು ಹಳ್ಳಿಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ದಾಸ್ತಾನು ಮಳಿಗೆಯ ಲೆಕ್ಕಪತ್ರಾಧಿಕಾರಿಯಾಗಿದ್ದನೆಂದು ತಿಳಿಸುತ್ತದೆ.

ಕೊಂಡವೀಡುವಿನ ರೆಡ್ಡಿನಾಯಕನ ಆಸ್ಥಾನದಲ್ಲಿ ಶ್ರೀನಾಥನು "ಹರಿವಿಲಾಸಮು" ಎಂಬ ಗ್ರಂಥವನ್ನು ರಚಿಸಿದ್ದಾನೆ. ಈ ಗ್ರಂಥದಲ್ಲಿ ಸಿಂಹ ವಿಕ್ರಮ ಪಟ್ಟಣ (ನೆಲ್ಲೂರು)ದಲ್ಲಿದ್ದ ಒಬ್ಬ ದೊಡ್ಡ ವ್ಯಾಪಾರಿಯ ಬಗ್ಗೆ ತಿಳಿಸುತ್ತಾ ಈ ವ್ಯಾಪಾರಿಯು ಹೊರದೇಶಗಳೊಡನೆ ಹೇಗೆ ವ್ಯಾಪಾರ ನಡೆಸುತ್ತಿದ್ದನೆಂಬುದನ್ನು ವಿವರಿಸುತ್ತದೆ. ಆಗಿನ ಕಾಲದ ಪ್ರಮುಖ ರಾಜರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸುತ್ತಿದ್ದನೆಂದು ತಿಳಿಸುವಾಗ ವಿಜಯನಗರದ ರಾಜರಿಗೆ ಒದಗಿಸುತ್ತಿದ್ದ ಅಮೂಲ್ಯ ವಸ್ತುಗಳ ಪರಿಚಯ ತಿಳಿಸುತ್ತದೆ. ಈ ಗ್ರಂಥವು ವಿಜಯನಗರವು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ವಸ್ತುಗಳ ಜೊತೆಗೆ ರಫ್ತು ಮಾಡುತ್ತಿದ್ದ ಪದಾರ್ಥಗಳನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ.

“ವರಹ ಪುರಾಣಮು” ತೆಲುಗು ಕಾವ್ಯವು ನಂದಿ ಮಲ್ಲಯ್ಯ ಮತ್ತು ಘಂಟಸಿಂಗಯ್ಯ ಎಂಬ ಇಬ್ಬರು ಕವಿಗಳಿಂದ ರಚಿತವಾಗಿದೆ. ಈ ಕಾವ್ಯವು ಸಾಳ್ವ ನರಸಿಂಹನ ದಳಪತಿ ಯಾದ ನರಸ ನಾಯಕನಿಗೆ ಸಮರ್ಪಿಸಲ್ಪಟ್ಟಿದೆ. ಪ್ರಾರಂಭದಲ್ಲಿ ಈ ಕವಿಗಳು ತಮಗೆ ಆಶ್ರಯ ನೀಡಿದ ಸಾಳುವ ನರಸಿಂಹನ ವಂಶಾವಳಿಯನ್ನು ಮತ್ತು ಅವನ ಸಾಧನೆಗಳನ್ನು ತಿಳಿಸುತ್ತಾರೆ.

“ಪರಿಜಾತಪಹರಣಂ” ಗ್ರಂಥವು ಕೃಷ್ಣದೇವರಾಯನ ಆಸ್ಥಾನದ ಕವಿಯಾಗಿದ್ದ ನಂದಿಯ ತಿಮ್ಮಣ್ಣನಿಂದ ರಚಿತವಾಗಿದ್ದು ಎಂದು ನಂಬಲಾಗಿದೆ. ಇವನು ಪ್ರಾರಂಭದಲ್ಲಿ ಕೃಷ್ಣದೇವರಾಯನ ಕುಟುಂಬದ ಬಗ್ಗೆ ವಿವರಿಸುವುದರ ಜೊತೆಗೆ ಅವನ ದಂಡೆಯಾತ್ರೆಗಳ ಬಗ್ಗೆಯೂ ವಿವರಣೆ ನೀಡಿದ್ದಾನೆ. ಇದು ಸಮಕಾಲೀನ ಗ್ರಂಥವಾದ್ದರಿಂದ ವಿಜಯನಗರ ಚರಿತ್ರೆಯಲ್ಲಿ. ಅದರಲ್ಲಿಯೂ ಕೃಷ್ಣದೇವರಾಯನ ಸಾಧನೆಯ ಬಗ್ಗೆ ಹೆಚ್ಚಿನ ಬೆಳಕನ್ನು ನೀಡುತ್ತದೆ. ಈ ಗ್ರಂಥ ಕರ್ತೃವಿನ ಹೆಸರು ನಂದಿಯ ತಿಮ್ಮಣ್ಣನೋ ಅಥವಾ ಮಂಕು ತಿಮ್ಮಣ್ಣನೋ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಜಿಜ್ಞಾಸೆ ನಡೆದಿದೆ. ಕೃಷ್ಣದೇವರಾಯನು ವಿದ್ವಾಂಸರಿಗೆ ಆಸ್ಥಾನದಲ್ಲಿ ನೀಡಿದ ಗೌರವ, ಸ್ಥಾನಮಾನವನ್ನು ಈ ಗ್ರಂಥವು ಸಂಕ್ಷಿಪ್ತವಾಗಿ ವಿವರಿಸುತ್ತದೆ.

‘ಅಮುಕ್ತಮೌಲ್ಯದ’ವನ್ನು ಕೃಷ್ಣದೇವರಾಯನು ಕಳಿಂಗದ ಮೇಲೆ ದಂಡೆತ್ತಿ ಹೋಗುತ್ತಿರುವಾಗ ವಿಜಯವಾಡದಲ್ಲಿ ಆಂಧ್ರ ಮಧುಸೂದನನನ್ನು ಆರಾಧಿಸಿ ಆ ದಿನ ಏಕಾದಶಿಯಾದ್ದರಿಂದ ಉಪವಾಸವನ್ನು ಕೈಗೊಂಡು ಆ ರಾತ್ರಿ ದೇವರು ಕನಸಿನಲ್ಲಿ ಕಾಣಿಸಿಕೊಂಡು ೧೨ ಮಂದಿ ವೈಷ್ಣವ ಸಂತರಲ್ಲಿ ಒಬ್ಬರಾದ ವಿಷ್ಣುಚಿತ್ತಪರಿಯಾಳ್ವರ ಮಗಳ ಕಥೆಯನ್ನು ರಚಿಸಿ, ವೆಂಕಟೇಶ್ವರನಿಗೆ ಸಮರ್ಪಿಸುವಂತೆ ಅಜ್ಞಾಪಿಸಲಾಯಿತ್ತೆಂದು ಆದ್ದರಿಂದ ಕೃಷ್ಣದೇವರಾಯನು ಈ ಗ್ರಂಥವನ್ನು ರಚಿಸಿದುದಾಗಿಯೂ ಈ ಗ್ರಂಥದಲ್ಲಿಯೇ ತಿಳಿದುಬರುತ್ತದೆ. ಆದರೆ ವಿ. ಪ್ರಭಾಕರ ಶಾಸ್ತ್ರಿಗಾರಲು ಅವರು ಈ ಗ್ರಂಥವನ್ನು ಅಲ್ಲಸಾನಿ ಪೆದ್ದನನು ರಚಿಸಿದನೆಂದು ಅಭಿಪ್ರಾಯಪಟ್ಟಿದ್ದಾರೆ. ತೆನಾಲಿ ರಾಮಕೃಷ್ಣನು ತನ್ನ “ಪಂಡಿತಾರಾಧ್ಯ ಚರಿತಂ”ದಲ್ಲಿ ಅಮುಕ್ತಮೌಲ್ಯವನ್ನು ಪೆದ್ದನನು ರಚಿಸಿದನೆಂದು ತಿಳಿಸಿದ್ದಾನೆ. ಕರ್ತೃ ಯಾರೇ ಆದರೂ ಈ ಗ್ರಂಥವು ಕೃಷ್ಣದೇವರಾಯನ ಕಾಲದ ಐತಿಹಾಸಿಕ ಅಂಶಗಳನ್ನು ಒದಗಿಸುತ್ತದೆ. ಈ ಗ್ರಂಥವು ಕೃಷ್ಣದೇವರಾಯನ ಪ್ರತಿಯೊಂದು ದಂಡೆಯಾತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತದೆ.

“ಮನುಚರಿತ್ರಮು” ಕೃತಿಯನ್ನು ಅಲ್ಲಾಸಾನಿ ಪೆದ್ದಣ್ಣನು ಕೃಷ್ಣದೇವರಾಯನ ಸಾವಿನಿಂದ ದುಃಖತಪ್ತನಾಗಿ ಈ ಸುಂದರ ಕವಿತೆಯನ್ನು ರಚಿಸಿ ಕೃಷ್ಣದೇವರಾಯನಿಗೆ ಸಮರ್ಪಿಸಿದ್ದಾನೆ. ಇವನು “ಆಂಧ್ರ ಕವಿ ಪಿತಾಮಹ” ಎಂಬ ಬಿರುದಿಗೆ ಪಾತ್ರನಾಗಿದ್ದನು. ನಂತರ ಇವನು ಈ ಗ್ರಂಥದಲ್ಲಿ ಗಡಿ ಪ್ರಾಂತ್ಯದ ಮೇಲೆ ನಡೆದ ಧಾಳಿಯನ್ನು ತಿಳಿಸುತ್ತಾನೆ.

‘ಲೀಲಾವತಿ’ ಭಾಸ್ಕರ ಚಾರ್ಯನು ರಚಿಸಿದ ಸಂಸ್ಕೃತ ಗಣಿತ ಗ್ರಂಥವಾದ ಇದನ್ನು ವಲ್ಲಭಚಾರ್ಯ ಅಥವಾ ಕವಿದೇವೇಂದ್ರನು ತೆಲುಗು ಭಾಷೆಗೆ ಭಾಷಾಂತರಿಸಿದ್ದಾನೆ. ಬೊಮ್ಮಲಾಟ ವಿರೂಪಾಕ್ಷ ಮತ್ತು ಅವನ ಮಗ ಬೊಮ್ಮಲಾಟ ಕಾಲನು ಕೃಷ್ಣದೇವರಾಯನ ಆಸ್ಥಾನದ ನಿಷ್ಠಾವಂತ ಸೇವಕರಾಗಿದ್ದರು ಮತ್ತು ಮುಂದೆ ಅಚ್ಯುತರಾಯನಿಗೂ ಸಹ ಸೇವಕರಾಗಿದ್ದರೆಂದು ಈ ಗ್ರಂಥ ತಿಳಿಸುತ್ತದೆ. ಅಷ್ಟೇ ಅಲ್ಲದೆ ಅಚ್ಯುತರಾಯನ ದಾನಧರ್ಮಗಳನ್ನು ಇದು ತಿಳಿಸುತ್ತದೆ. “ಲಕ್ಷ್ಮೀವಿಲಾಸಂ” ಕೃತಿಯನ್ನು ಶ್ರೀರಂಗರಾಯನ ಆಸ್ಥಾನದಲ್ಲಿ ಅಧಿಕಾರಿಯಾಗಿದ್ದ “ರಾಯಸಂ” ವೆಂಕಟಪತಿಯು ರಚಿಸಿರುವನು. “ರಾಯವಾಸಕಮು” ಕೃತಿಯು ಕೃಷ್ಣದೇವರಾಯನ ದಿಗ್ವಿಜಯಗಳ ವಿವರಣೆಯನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ ಈ ಕೃತಿಯು ಕೃಷ್ಣದೇವರಾಯನ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ.

ವಿಜಯನಗರದ ಸಾಮ್ರಾಜ್ಯದ ಇತಿಹಾಸವನ್ನು ತಿಳಿಯಲು ವಿಪುಲವಾದ ಆಧಾರಗಳು ಸತ್ಯವೆಂದು ನಂಬಲು ಸಾಧ್ಯವಾಗುವುದಿಲ್ಲ ಏಕೆಂದರೆ ಆಸ್ಥಾನ ಕವಿಗಳು ತಮಗೆ ಆಶ್ರಯ ನೀಡಿದ ಅರಸರನ್ನು ಹೊಗಳಿ ಬರೆದಿರಬಹುದು. ಆದ್ದರಿಂದ ಯಾವುದೆ ಗ್ರಂಥದಲ್ಲಿಯೂ ನಮಗೆ ಅಲ್ಲಿನ ದೋಷಗಳ ಬಗ್ಗೆ ತಿಳಿಸುವುದೇ ಇಲ್ಲ. ಆದರೂ ಅವುಗಳ ವರ್ಣನೆಯನ್ನು ಸಂಪೂರ್ಣವಾಗಿ ಉತ್ಪ್ರೇಕ್ಷೆ ಎಂದು ತಳ್ಳಿಹಾಕುವಂತೆಯೂ ಇಲ್ಲ. ಏಕೆಂದರೆ ಅವುಗಳಲ್ಲಿ ಕೆಲವು ಐತಿಹಾಸಿಕ ಮಾಹಿತಿಗಳು ದೊರೆಯುತ್ತಿವೆ.

**೬.೪. ವಿದೇಶಿ ಸಾಹಿತ್ಯ**

೧೪ ಮತ್ತು ೧೫ನೇ ಶತಮಾನದಲ್ಲಿ ಭಾರತಕ್ಕೆ ಬಂದ ಅನೇಕ ವಿದೇಶಿ ಪ್ರವಾಸಿಗರು. ವಿಜಯನಗರದ ವೈಭವವನ್ನು ಕಣ್ಣಾರೆ ಕಂಡು ಕೇಳಿ ತಮ್ಮ ಅಭಿಪ್ರಾಯಗಳನ್ನು ಬರವಣಿಗೆಯ ರೂಪದಲ್ಲಿ ಬರೆದಿಟ್ಟು ಹೋಗಿದ್ದಾರೆ. ಈ ಬರವಣಿಗೆಗಳು ವಿಜಯನಗರದ ಇತಿಹಾಸವನ್ನು ರಚಿಸುವುದರಲ್ಲಿ ಸಾಕಷ್ಟು ಸಹಕಾರಿಯಾಗಿದೆ. ಸಮಕಾಲೀನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ನೀಡುತ್ತವೆ.

**ಅ. ನಿಕಾಲೋಕೊಂಟಿ :** ೧೫೨೯ರಲ್ಲಿ ಇಟಲಿಯ ಪ್ರವಾಸಿಗನಾದ ನಿಕಾಲೋಕೊಂಟಿಯು ವಿಜಯನಗರಕ್ಕೆ ಭೇಟಿ ನೀಡಿ ಇಲ್ಲಿನ ಸಂಪತ್ತು, ಆಡಳಿತ, ಸಾಮಾಜಿಕ ಆರ್ಥಿಕ ಸ್ಥಿತಿಗಳ ಬಗ್ಗೆ ವಿವರಣೆ ನೀಡಿದ್ದಾನೆ. ಇವನು ಭೇಟಿ ನೀಡಿದ ಕಾಲದಲ್ಲಿ ೨ನೇ ದೇವರಾಯನು ವಿಜಯನಗರದ ಅರಸನಾಗಿದ್ದು, ನಿಕಾಲೋಕೊಂಟಿ ರಾಜಧಾನಿಯು ೬೦ ಮೈಲಿಗಳಷ್ಟು ಸುತ್ತಳತೆಯಿಂದ ಕೂಡಿ ಕೋಟೆಗಳಿಂದ ಆವೃತವಾಗಿತ್ತೆಂದು ತಿಳಿಸಿದ್ದಾನೆ. ಅಲ್ಲಿ ೯೦,೦೦೦ ಶಾಸ್ತ್ರಸ್ತ್ರ ಪ್ರವೀಣರಿದ್ದು ಬಲಾಢ್ಯನಾದ ಇಲ್ಲಿನ ಸಾಮ್ರಾಟನ ಅಂತಃ ಪುರವು ೧೨,೦೦೦ ಮಂದಿ ವನಿತೆಯರಿಂದ ತುಂಬಿತ್ತು ಎಂದು ಜಿತೆಗೆ ರಾಜ್ಯದಲ್ಲಿ ಪ್ರತಿವರ್ಷ ಮೂರು ದೊಡ್ಡ ಹಬ್ಬಗಳನ್ನು ಜನರು ಆಚರಿಸುತ್ತಿದ್ದರೆಂದು ತಿಳಿಸಿದ್ದಾನೆ.

**ಆ. ಅಬ್ದುಲ್ ರಾಜಾಕ್ :** ಕ್ರಿ.ಶ. ೧೪೪೩ರಲ್ಲಿ ಪರ್ಷಿಯಾದ ರಾಜನಾದ ಹಖ್ ಷಾನ ರಾಯಭಾರಿಯಾಗಿ ವಿಜಯನಗರಕ್ಕೆ ಭೇಟಿ ಕೊಟ್ಟನು. ಇವನು ವಿಜಯನಗರದ ವಿಸ್ತೀರ್ಣ, ವ್ಯಾಪಕತೆ, ಸಂಪತ್ತು ಮತ್ತು ಆಡಳಿತದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾನೆ. ಈತನ ಪ್ರಕಾರ ವಿಜಯನಗರ ಸಾಮ್ರಾಜ್ಯವು ಸಿಂಹಳದಿಂದ ಬಂಗಾಳದ ಗಡಿಯವರೆಗೂ ಹಬ್ಬಿದ್ದು. ಸುಮಾರು ೩೦೦ ಬಂದರುಗಳಿದ್ದು, ೧೧ ಲಕ್ಷ ಸೈನಿಕರಿದ್ದರೆಂದೂ, ವಿಜಯನಗರದ ನಗರವನ್ನು ಕಣ್ಣು ಕಂಡಿಲ್ಲ, ಕಿವಿ ಕೇಳಿಲ್ಲವೆಂದು ತಿಳಿಸಿದ್ದಾನೆ. "ಮಹಾನವಮಿ ಉತ್ಸವ"ವು ಎಷ್ಟು ವಿಜೃಂಭಣೆಯಿಂದ ನಡೆಸಲ್ಪಡುತ್ತಿತ್ತೆಂದು ದೀರ್ಘ ವಿವರಣೆ ನೀಡಿದ್ದಾನೆ. ವ್ಯಾಪಾರ, ವಾಣಿಜ್ಯ, ಆನೆಗಳನ್ನು ಹಿಡಿಯುವ ವಿಧಾನ, ಆಹಾರ, ಉಡುಪುಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತಾನೆ.

**ಇ. ನಿಕಿಟನ್ :** ಈತನು ವಿಜಯನಗರವನ್ನು ಸ್ವತಃ ನೋಡದಿದ್ದಾಗ್ಯೂ ಆ ಸಾಮ್ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿದ್ದಾನೆ. ವಿಜಯನಗರ ಮತ್ತು ಬಹಮನಿ ಸುಲ್ತಾನರ ನಡುವೆ ಆಗಾಗ್ಗೆ ನಡೆಯುತ್ತಿದ್ದ ಕದನಗಳನ್ನು ವರ್ಣಿಸಿದ್ದಾನೆ. ಹಾಗೆಯೇ ಆ ಕಾಲದ ವ್ಯವಸಾಯದ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತಾನೆ.

**ಈ. ದು ಆರ್ತೆಬಾರ್ಬೋಸ :** ಈತನು ಕ್ರಿ.ಶ. ೧೫೦೦ - ೧೫೧೬ರವರೆಗೆ ಭಾರತದಲ್ಲಿದ್ದನು. ಪೋರ್ಚುಗಲ್ಲಿನ ಪ್ರವಾಸಿಯಾದ ಈತನು ವಿಜಯನಗರದ ಶ್ರೀಮಂತಿಕೆಯನ್ನು ಅಮದು, ರಫ್ತು ವ್ಯಾಪಾರವನ್ನು ಸಾಮ್ರಾಜ್ಯದ ಬಂದರುಗಳನ್ನು, ಸಾಮಾಜಿಕ ಪದ್ಧತಿಯನ್ನು ಹಾಗೂ ಭೂಮಿಯ ಫಲವತ್ತತೆಯ ಬಗ್ಗೆ ಹೇಳುತ್ತಾನೆ. ಕೈಗಾರಿಕೆಗಳ ಮೇಲೆ ಹೆಚ್ಚಿನ ಬೆಳಕು ಹರಿಸಿದ್ದಾನೆ.

**ಉ. ಡೊಮಿಂಗೋ ಪಯಸ್ :** ಪೋರ್ಚುಗೀಸ್ ಪ್ರವಾಸಿಯಾದ ಈತನು ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ಬಂದಿದ್ದನು. ವಿಜಯನಗರದ ಜನಸಂಖ್ಯೆಯು ಹೇಳಲು ಸಾಧ್ಯವೆಂದು ಮತ್ತು ತಾನು ನೋಡಿದಷ್ಟೇ ಭಾಗವು ಇಡೀ ರೋಂ ನಗರದಷ್ಟಿತ್ತೆಂದೂ ವಣಿಸಿರುವನು. ಸಾಮ್ರಾಜ್ಯದ ರೋಮ ಪಟ್ಟಣ, ಸಾಮಾಜಿಕ ಸ್ಥಿತಿಯನ್ನು ವಿವರಿಸಿದ್ದಾನೆ. ಕೃಷ್ಣದೇವರಾಯನ ವರ್ಣನೆಯನ್ನು ಸಂಕ್ಷಿಪ್ತವಾಗಿ ಮಾಡಿದ್ದಾನೆ. ಇದನಂತಹ ರಾಜ ಭೂಮಿಯಲ್ಲಿ ಮತ್ತೊಬ್ಬನ್ನಿಲ್ಲ ಎಂದಿದ್ದಾನೆ. ಅಲ್ಲದೆ ಸ್ತ್ರೀಯರ ಸ್ಥಾನಮಾನ, ಬ್ರಾಹ್ಮಣರ ನಡೆನುಡಿ, ಆಹಾರ, ರಕ್ತಬಲಿ, ಗ್ರಾಮಗಳು, ಬಗರಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತಾನೆ.

**ಊ. ಪೆರ್ನಾಂವ್ ನ್ಯೂನಿಜ್ :** ನ್ಯೂನಿಜ್ ನು ಕ್ರಿ.ಶ. ೧೫೩೬ - ೩೭ರಲ್ಲಿ ಅಚ್ಯುತರಾಯನ ಕಾಲದಲ್ಲಿ ವಿಜಯನಗರಕ್ಕೆ ಭೇಟಿ ನೀಡಿದ ಪ್ರವಾಸಿಗ, ಇವನು ಅಚ್ಯುತರಾಯನ ಕಾಲದ ಪರಿಸ್ಥಿತಿ ಹಾಗೂ ಅವನ ಅಪ್ರಮಾಣಿಕತೆಯನ್ನು ಅವನನ್ನು ಕಂಡರೆ ಯಾರಿಗೂ ಗೌರವವಿರಲಿಲ್ಲವೆಂದೂ ಹಾಗೂ ಅವನ ಅನೀತಿ ಮತ್ತು ದಬ್ಬಾಳಿಕೆಗಳನ್ನು ಖಂಡಿಸಿರುವನು. ಇವನ ಗ್ರಂಥದಲ್ಲಿ ರಾಯಚೂರು ನಗರದ ವಿವರಣೆ ತಿಳಿದುಬರುತ್ತದೆ.

ಐತಿಹಾಸಿಕ ಗ್ರಂಥಗಳ ಅಭಾವದಿಂದಾಗಿ ವಿದೇಶಿಯ ಬರವಣಿಗೆಗಳಲ್ಲಿ ದೊರೆಯುವ ಮಾಹಿತಿಯು ಇತಿಹಾಸ ರಚನೆಗೆ ಉಪಯುಕ್ತವಾಗಿದೆ ಎಂದು ಹೇಳಬಹುದು. ಆದರೆ ದೇಶೀಯ ಸಾಹಿತ್ಯ ಆಧಾರದಲ್ಲಿ ಕಂಡುಬರುವಂತೆ ವಿದೇಶಿಯರ ಬರವಣಿಗೆಗಳಲ್ಲಿಯೂ ಸಹ ಅನೇಕ ಪ್ರವಾಸಿಗರು ರಾಜಧಾನಿಗೆ ಸಂಬಂಧಿಸಿದಂತೆ, ರಾಣಿವಾಸಕ್ಕೆ ಸಂಬಂಧಿಸಿದಂತೆ ಬರೆಯುವಾಗ ಬಹು ರಮ್ಯವಾಗಿಯೂ ಉತ್ಪ್ರೇಕ್ಷೆಯಿಂದಲೂ ಚಿತ್ರಿಸಿದ್ದಾರೆ. ಹಳ್ಳಿಗಾಡಿನ ಜನರ ಜೀವನ, ಬಡತನ, ರೋಗರುಜಿನ, ಬರಗಾಲದ ಬಗ್ಗೆ ಮತ್ತು ಅದರ ಕಷ್ಟಗಳನ್ನು ಕುರಿತಾದ ಚಿತ್ರಣವೂ ಸ್ವಲ್ಪವೂ ಲಭ್ಯವಿರುವುದಿಲ್ಲ.

**೬.೫. ಕೈಫಿಯತ್ತು ಮತ್ತು ಬಖೈರುಗಳು**

ಯಾವುದೇ ದೇಶದ ಇತಿಹಾಸವನ್ನು ದೋಷರಹಿತವಾಗಿ, ಲೋಪರಹಿತವಾಗಿ ಸಾಕಷ್ಟು ಪರಿಪೂರ್ಣವಾಗಿ ಬರೆಯಬೇಕಾದರೆ ಅಗ್ನಿ ಪರೀಕ್ಷೆಗೆ ಒಳಪಡಿಸಿದ ಅಥವಾ ಸಮಕಾಲೀನ ಸಾಕ್ಷ್ಯಾಸಾಧನಗಳು ಅವಶ್ಯಕ. ಅದರಂತೆಯೆ ದಾಖಲೆಗಳ ಸಾಲಿನಲ್ಲಿ ಬರುವ ಆಧಾರಗಳಲ್ಲಿ ಈ ಕೈಫಿಯತ್ತು ಮತ್ತು ಬಖೈರುಗಳು ಮುಖ್ಯವಾಗಿವೆ. ಇವುಗಳು ಚರಿತ್ರೆಯನ್ನು ರೂಪಿಸುವ ಬರವಣಿಗೆಯ ಸಂಕಲನ, ಚರಿತ್ರೆಯ ದೃಷ್ಟಿಯಿಂದ ಇಲ್ಲಿನ ವಿಚಾರ ಪ್ರಮಾಣ ಪೂರ್ವಕವಾಗಿ ಇತಿಹಾಸ ಸಂಶೋಧಕರಿಗೆ ಸಹಾಯಕವಾದ ವಿಷಯ ಸಂಗ್ರಹವಾಗುವುದಲ್ಲದೆ ಆಯಾ ಕಾಲದ ಜನಜೀವನವನ್ನು ಸೂಚಿಸುತ್ತದೆ. ಜೊತೆಗೆ ಸಾಮಾನ್ಯ ಜನ ಸರ್ಕಾರದ ನಡವಳಿಕೆಯನ್ನಾಗಲಿ ರಾಜಾಧಿರಾಜರ ವರದಿಯನ್ನಾಗಲಿ ಹೇಗೆ ಬರಹಕ್ಕೆ ಇಳಿಸುತ್ತಿದ್ದರು ಮತ್ತು ಆ ಕನ್ನಡ ಬರಹದ ಶೈಲಿಯ ಸ್ವರೂಪ ಹೇಗಿರುತ್ತಿತ್ತು ಎಂಬುದನ್ನು ಇವು ಪ್ರತಿಬಿಂಬಿಸುತ್ತವೆ.

ಈ ದಾಖಲೆಗಳನ್ನು ಬರೆದವರು ವಿದ್ವಾಂಸರ, ಪಂಡಿತರ ಅಲ್ಲದೆ ಭಾಷಾ ಪ್ರವೀಣರಿಂದ ಪರಿಶೋಧಿಸಲ್ಪಟ್ಟ ಲೇಖನಗಳೂ ಇವಲ್ಲ. ವ್ಯವಹಾರದಲ್ಲಿ ನಿರತವಾದ ರಾಜರನ್ನು ಅವರ ದಿನಚರಿಗಳನ್ನು ಹತ್ತಿರದಿಂದ ಕಂಡ ಸಾಮಾನ್ಯ ಅಧಿಕಾರಿಗಳು ಬರೆದಿರುವಂತಹಗಳಾಗಿವೆ. ಅದ್ದರಿಂದ ಇಲ್ಲಿನ ಭಾಷೆ ಸಾಮಾನ್ಯವಾಗಿ ಆಗಿನ ಕಾಲದಲ್ಲಿ ಆಡುವ ಭಾಷೆಯನ್ನು ಪ್ರತಿಬಿಂಬಿಸುತ್ತದೆ. ಈ ದೃಷ್ಟಿಯಿಂದ ಭಾಷಾಭ್ಯಾಸಿಗಳಿಗೆ ಇದೊಂದು ಅಭ್ಯಾಸದ ವಿಷಯವಾಗಬಹುದು.

**ಕೈಫಿಯತ್ತು ಎಂದರೇನು?** : ಕೈಫಿಯತ್ತು" ಎಂಬ ಪದ ಮೂಲತಃ ಅರೇಬಿಕ್ ಪರ್ಷಿಯನ್ ಭಾಷೆಗೆ ಸೇರಿದುದಾಗಿದೆ. ಮುಸ್ಲಿಂ ರಾಜರ ಆಳ್ವಿಕೆಯ ಕಾರಣದಿಂದ ಅನೇಕ ಅರೇಬಿಕ್ ಮತ್ತು ಪರ್ಷಿಯನ್ ಭಾಷೆಯ ಪದಗಳು ಹಿಂದೂಸ್ತಾನಿಯ ಮೂಲಕ ಕನ್ನಡಕ್ಕೆ ಪ್ರವೇಶಿಸಿವೆ. ಕೈಫಿಯತ್ತು ಎಂದರೆ ಹೇಳಿಕೆ, ವಿವರಣೆ ಎಂಬ ಅರ್ಥ, ಕೈಫಿಯತ್ತು ಎಂಬುದಕ್ಕೆ ಮುಖ್ಯವಾಗಿ ವಿವರಣೆ, ಹೇಳಿಕೆ ಎಂಬ ಅರ್ಥವಿದ್ದರೂ ಅದರ ವ್ಯಾಪ್ತಿ, ಕೈಫೋತ್, ಕೈಪೇತ್ ಎಂಬ ರೂಪಾಂತರಗಳೊಡನೆ ಕೂಡಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಫೇತ್ ಮಾಡಿದನೆಂದರೆ ದಾವೆ, ಇಲ್ಲವೇ ವ್ಯಾಜ್ಯ ಮಾಡಿದ ಎಂಬರ್ಥದಲ್ಲಿ ಪ್ರಯೋಗವಾಗುತ್ತದೆ. ಈ ಎಲ್ಲ ಪದಗಳೂ ಸಾಮಾನ್ಯ ಒಂದೇ ಅರ್ಥದಲ್ಲಿ ಅಂದರೆ ಬರೆದಿಟ್ಟ ದಾಖಲೆಗಳು ಎಂಬಂತೆ ಪ್ರಯೋಗದಲ್ಲಿದ್ದರೂ ಬಖೈರು ಮತ್ತು ನಾಮೆಗಳು ಹೆಚು ಚಾರಿತ್ರಿಕ ಐತಿಹ್ಯಗಳಾಗಿಯೂ, ಕೈಫಿಯತ್ತುಗಳಯ ಚಾರಿತ್ರಿಕಾಂಶ, ಸ್ಥಳಪುರಾಣ, ಜನಜನಿತ ಕಲ್ಪಿತ ವಿಷಯಗಳನ್ನೊಳಗೊಂಡ ಬರಹಗಳಾಗಿಯೂ ಇವೆ. ಇ ಕೈಫಿಯತ್ತುಗಳನ್ನು ಕರ್ನಲ್ ಮೆಕಂಜಿಯವರು ದಕ್ಷಿಣ ಭಾರತದಲ್ಲೆಲ್ಲಾ ಸಂಚಾರ ಮಾಡಿ ೧೦೭೦ ಸ್ಥಳೀಯ ಪತ್ರಾವಳಿ (ಕೈಫಿಯತ್ತು)ಗಳನ್ನು ಸಂಗ್ರಹಿಸಿದ್ದಾರೆ. ಇವುಗಳಲ್ಲಿ ಶೃಂಗೇರಿಮಠದ ಕೈಫಿಯತ್ತು, ಸಂಡೂರಿನ ಕೈಫಿಯತ್ತು, ಬಳ್ಳಾರಿಯ ಕೈಫಿಯತ್ತುಗಳು ಮುಖ್ಯವಾದವು.

ರಾಮರಾಯನ ಬಖೈರು ವಿಜಯನಗರಕ್ಕೆ ಸಂಬಂಧಪಟ್ಟ ಹಾಗೆ ಒಂದು ಉತ್ತಮವಾದ ಸ್ಥಳೀಯ ಪತ್ರಾವಳಿ, ಇದನ್ನು ಬರೆದವರಾರು ಎಮಬುದು ತಿಳಿಯದಿದ್ದರೂ ವಿಜಯನಗರದ ರಾಮರಾಯನ ಸನ್ನಿಧಿಯಲ್ಲೇ ಇದ್ದವನೆಂದು ಹೇಳಬಹುದು. ಈ ಬಖೈರಿನಲ್ಲಿ ಅಂಕಿ - ಅಂಶಗಳ, ಸಾಮಂತರರ, ದಂಡನಾಯಕರ ಹೆಸರುಗಳಿವೆ. ಈ ಬಖೈರಿನ ಮೂಲಕ ಮುಖ್ಯವಾಗಿ ಮೂರು ಸತ್ಯಾಂಶಗಳು ತಿಳಿದುಬರುತ್ತವೆ.

ಅ. ವಿಜಯನಗರದ ರಾಮರಾಯನಿಗೂ, ಬಹಮನಿ ಸುಲ್ತಾನರಿಗೂ ಯುದ್ಧ ನಡೆದದ್ದು 'ತಾಳಿಕೋಟೆ'ಯಲ್ಲಿ ರಕ್ಕಸಗಿ - ತಂಗಡಿ ಅಥವಾ 'ರಾಕ್ಷಸತಂಗಡಿ'ಯಲ್ಲಿ

ಆ. ರಾಮರಾಯನು ರಣರಂಗಕ್ಕೆ ಹೊರಡುವಾಗ ಅವನ ವೃದ್ಧ ಮಾತೆ ಜೀವಿಸಿದ್ದಳು. ರಾಮರಾಯ ಹೋಗಿ ಆಕೆಯ ಕಾಲಿಗೆ ಮಣಿದಾಗ ಆಕೆ ಹರಸಿ, ದೇವರನ್ನು ಪ್ರಾರ್ಥಿಸಿ "ಜಯಿಸಿ ಬಾರಪ್ಪ" ಎಂಬುದಾಗಿ ಹೇಳಿದಳು.

ಇ. ಬಿಜಾಪುರದ ಆದಿಲ್ ಷಹಾನ ಸೇನಾಧಿಪತಿಯಾಗಿದ್ದವನು ರಾಂರಾಯನ ಮಗ ಯುದ್ಧದ ಕಡೆಯ ನಿಮಿಷದಲ್ಲಿ ರಾಮರಾಯ, "ನೀನು ನನ್ನ ಮಗನಾದುದಕ್ಕೆ ನನಗೊಂದು ಉಪಕಾರವನ್ನು ಮಾಡು, ನನ್ನನ್ನು ವೈರಿಯ ಕೈಗೆ ಕೊಟ್ಟು ತಲೆತಗ್ಗಿಸಬೇಡ. ನೀನೆ ನನ್ನನ್ನು ಫಿರಂಗಿಯಿಂದ ಹೊಡೆದು ಕೊಲ್ಲು" ಅಂದ ಮಗ ತಂದೆಯ ಅಪೇಕ್ಷೆಯನ್ನು ಪೂರೈಸಿದ.

ಮೇಲಿನದಿಷ್ಟು ರಾಮರಾಯನ ಬಖೈರ್ ನಲ್ಲಿ ತಿಳಿದು ಬರುತ್ತದೆ. ಇದು ಮುಖ್ಯವಾಗಿ ಯುದ್ಧಕ್ಕೆ ಸಂಬಂಧಿಸಿದ ವಿಷಯಕ್ಕೆ ಮಾತ್ರ ಸೀಮಿತವಾಗಿದೆ. ರಾಕ್ಷಸ - ತಂಗಡಿ ಯುದ್ಧದ ಸಂಪೂರ್ಣ ಮಾಹಿತಿ ಇದರಿಂದ ತಿಳಿಯುತ್ತದೆ. ಕೈಫಿಯತ್ತುಗಳು ಸಾಮಾನ್ಯವಾಗಿ ಸಂಸ್ಥಾನ, ಮಠ, ಸ್ಥಳಗಳ ಬಗ್ಗೆ ಇದ್ದರೆ, ಬಖೈರುಗಳು ಹೆಚ್ಚಾಗಿ ವ್ಯಕ್ತಿಗಳ ಬಗ್ಗೆ ಇರುವುದನ್ನು ನೋಡಬಹುದಾಗಿದೆ.

**೬.೬. ಜನಪದೀಯ ಆಕರಗಳು**

ಇತಿಹಾಸ ಪ್ರಸಿದ್ಧವಾಗಿರುವ ವಿಜಯನಗರ ಹಾಗೂ ಮೈಸೂರು ಸಾಮ್ರಾಜ್ಯಗಳು ಬೇರೆ ಬೇರೆ ಕಾರಣಗಳಿಂದಾಗಿ ಸಾಕಷ್ಟು ಜನಪ್ರಿಯತೆ ಪಡೆದುಕೊಂಡಿದೆ. ಕವಿಗಳಿಗೆ ಇನ್ನೊಂದು ಸುಂದರ ಸೊಬಗಿನ ನಾಡಾಗಿ ಕಂಡರೆ, ಇತಿಹಾಸಕಾರರಿಗೆ ವೈಭವದಿಂದ ಮೆರೆದ ರಾಜಮಹಾರಾಜರ ನಾಡಾಗಿ ಕಂಗೊಳಿಸುತ್ತದೆ. ಹಾಗೆಯೇ. ಪುರುತತ್ವ ಶಾಸ್ತ್ರಜ್ಞರಿಗೆ ಅತಿ ಪ್ರಾಚೀನ ಕಾಲದ ಜನವಸತಿಯ ಕೇಂದ್ರವಾಗಿಯೂ ಆಕರ್ಷಕವಾಗಿದೆ. ಆದರೆ ಇಲ್ಲಿನ ಜನಪದರ ನಾಲಿಗೆಗಳ ಮೇಲೆ ಸೃಷ್ಟಿಯಾಗಿರುವ ಚರಿತ್ರೆಯ ಸೊಬಗನ್ನೂ ತನ್ನೊಳಗೆ ಮೈಗೂಡಿಸಿಕೊಂಡು ಹೊರಹೊಮ್ಮಿದೆ ಎಂದು ಹೇಳಬಹುದಾಗಿದೆ. ಏಕೆಂದರೆ ಸ್ಥಳೀಯ ಚರಿತ್ರೆ ಅಧ್ಯಯನಕ್ಕೆ ಲಿಖಿತ ದಾಖಲೆಗಳಿಗಿಂತಲೂ ಮೌಖಿಕ ದಾಖಲೆಗಳು ಮಹತ್ವವಾದವು ಆಗಿರುತ್ತದೆ. ಅಷ್ಟೇ ಅಲ್ಲದೆ ಸಂಸ್ಕೃತಿಯ ಅಧ್ಯಯನದ ದೃಷ್ಟಿಯಿಂದ ಒಂದು ಪ್ರಮುಖ ಆಕರವಾಗಿದೆ. ಮೌಖಿಕ ಸಾಹಿತ್ಯವು ಮನುಷ್ಯನ ಜೀವನದ ನಾನಾ ಮುಖಗಳ ಪರಿಚಯವಾಗಿರುತ್ತದೆ. ಹೀಗಿದ್ದರೂ ಸಹ ಇಂದಿನ ವಸಾಹತೀಕರಣಕ್ಕೊಳಪಟ್ಟ ವಿದ್ವಾಂಸರು ಜನರ ನಡುವೆ ಇರುವ ಮೌಖಿಕ ರೂಪದ ದಾಖಲೆಗಳನ್ನು ನಿರ್ಲಕ್ಷಿಸಿಕೊಂಡೇ ಬರುತ್ತಿರುವುದು ಕಂಡುಬರುತ್ತದೆ. ಏಕೆಂದರೆ ಜನರು ಏನನ್ನು ನಂಬಿದ್ದಾರೋ ಅದನ್ನು ವಿದ್ವಾಂಸರು ನಂಬುತ್ತಿಲ್ಲ. ಹಾಗಾಗಿಯೇ ವಿದ್ವಾಂಸರು ಏನನ್ನು ಹೇಳುತ್ತಾರೋ ಅದನ್ನು ಜನರು ನಂಬುತ್ತಿಲ್ಲ. ಇಂತಹ ಬಿಕ್ಕಟ್ಟಿನಲ್ಲಿ ಸ್ಥಳೀಯ ಚರಿತ್ರೆಯ ಸಂಶೋಧಕನು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ಈ ಮೌಖಿಕ ಪರಂಪರೆಯ ಸಾಮಗ್ರಿಯನ್ನು ನಿರ್ಲಕ್ಷಿಸಿಕೊಂಡು ಬಂದರೆ ಅನೇಕ ರೀತಿಯ ತೊಂದರೆಯ ಜೊತೆಗೆ ನಷ್ಟವನ್ನು ಎದುರಿಸಬೇಕಾಗುತ್ತದೆ.

ಯಾವುದೇ ಒಂದು ಸಾಮ್ರಾಜ್ಯದಿಂದ ಪ್ರಾರಂಭವಾಗಿ ಸ್ಥಳೀಯ ಸಣ್ಣ ಸಂಸ್ಥಾನದವರೆಗೂ ಸಹ ಅಂದಿನ ಸಂಸ್ಕೃತಿ ಚರಿತ್ರೆಗೆ ಪ್ರಮುಖವಾಗಿ ಮೌಖಿಕ ಆಕರಗಳನ್ನು ಪ್ರಥಮ ಸ್ಥಾನದಲ್ಲಿ ಗುರುತಿದಬಹುದಾಗಿದೆ. ಹಿಂದೆ ಅಕ್ಷರವು ಕೇವಲ ಬ್ರಾಹ್ಮಣರ ಸೊತ್ತಾಗಿದ್ದಿತ್ತು. ಅಲ್ಪಸಲ್ಪ ಪ್ರಮಾಣದಲ್ಲಿ ಕ್ಷತ್ರಿಯ ಹಾಗೂ ಇತರರು ಅಕ್ಷರಜ್ಞಾನವನ್ನು ಹೊಂದಿದ್ದರೂ ಸಹ ಅವರೆಲ್ಲರೂ ಹೆಚ್ಚು ಹೆಚ್ಚು ಕಲಿತಿದ್ದವರಾಗಿದ್ದ ಬ್ರಾಹ್ಮಣರಿಗೆ ತಲೆಬಾಗುತ್ತಿದ್ದರು. ಈ ದಿಸೆಯಲ್ಲಿ ಅಂದು ಹೇರಳವಾಗಿ ದೊರಕುವ ಸಾಹಿತ್ಯಾಧಾರಗಳೆಲ್ಲವೂ ಕೇವಲ ರಾಜ, ಬ್ರಾಹ್ಮಣ ಹಾಗೂ ಇತರೆ ಉನ್ನತವರ್ಗದವರ ಸಂಸ್ಕೃತಿಕ ಹಾಗೂ ಆಳ್ವಿಕೆಯ ಬಗ್ಗೆ ಬರೆಯಲು ಅಕ್ಷರದ ಆಕಾರಗಳನ್ನೆ ಅವಲಂಬಿಸಿಕೊಂಡರೆ ಅ ಇತಿಹಾಸಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಇಂತಹ ಸಮಯದಲ್ಲಿ ಹೆಚ್ಚಾಗಿ ಮೌಖಿಕ ಸಾಹಿತ್ಯದ ಮಹತ್ವ ಎದ್ದು ಕಾಣುತ್ತದೆ. ಇಲ್ಲಿ ಒಂದು ದೃಷ್ಟಿಯಲ್ಲಿ ಸ್ಥಳೀಯ ಚರಿತ್ರೆಕಾರರಿಗೆ ಲಿಖಿತ ಇತಿಹಾಸಕ್ಕಿಂತ ಭಿನ್ನವಾದ ವಿವರಗಳನ್ನು ಮೌಖಿಕ ಸಾಮಗ್ರಿಗಳು ನೀಡುತ್ತವೆ. ಆಳುವವರನ್ನು ಕುರಿತು ಶಾಸನ ಹೇಳುವ ಇತಿಹಾಸ ಮತ್ತು ಅವರನ್ನು ಕುರಿತು ಮೌಖಿಕ ಪರಂಪರೆಯಲ್ಲಿರುವ ಐತಿಹ್ಯಕ್ಕೂ ಹೆಚ್ಚಿನ

ಅಂತರವಿರುತ್ತದೆ. ಇಂತಹ ಸಂದರ್ಭದಲ್ಲಿ ಸಂಶೋಧಕರು ಸಿಲುಕುವ ತೊಂದರೆಯು ಒಂದು ಬಗೆಯದಾಗಿದ್ದರೆ ಈ ತೊಂದರೆಯನ್ನು ಸೂಕ್ತವಾಗಿ ಬಗೆಹರಿಸಿಕೊಳ್ಳುವುದರಲ್ಲಿ ಸತ್ಯವಾದ ಚರಿತ್ರೆ ಅಡಕವಾಗಿರುತ್ತದೆ ಎಂಬುದನ್ನು ಮನಗಾಣಬೇಕಾಗುತ್ತದೆ.

ಸಂಸ್ಕೃತಿಯು ಅಧ್ಯಯನದ ದೃಷ್ಟಿಯಲ್ಲಿ ಮೌಖಿಕ ಸಾಹಿತ್ಯವೂ ಆಯಾ ಪ್ರಾಂತ್ಯದಲ್ಲಿ ಪ್ರಸಿದ್ಧವಾಗಿರುವ ದೇವಾಲಯ, ಗ್ರಾಮದೇವತೆ ಪ್ರಸಿದ್ಧ ಪೌರುಷದ ವ್ಯಕ್ತಿ ಹಳೆಪಟ್ಟಣ, ಪ್ರಮುಖ ಮಠಗಳ ಪವಾಡಪುರುಷರು, ಊರುಗಳೂ, ಪರ್ವತ ನದಿ ಕೆರೆಗಳನ್ನೊಳಗೊಂಡು ಸೃಷ್ಟಿಯಾಗಿರುತ್ತದೆ ಎಂಬುದು ತಿಳಿದಿರುವ ವಿಷಯವೇ ಆಗಿದೆ. ಆದರೆ ಈ ಸಾಹಿತ್ಯವು ಕಾಲದಿಂದ ಕಾಲಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ, ಭಾಷೆಯಿಂದ ಭಾಸೆಗೆ ಬದಲಾವಣೆಯಾಗಿ ಇಂದಿನ ಆಧುನಿಕ ಯುಗದ ಜನರ ಮಧ್ಯೆ ನವೀನ ರೀತಿ ರೂಪ ಪಡೆದುಕೊಂಡಿರುತ್ತದೆ. ಇದು ಭಾಷೆಯಿಂದಲಾದರೂ ಸರಿಯೇ ಅಥವಾ ತಮ್ಮ ಜಾತಿಯ, ಧರ್ಮದ, ಪ್ರದೇಶದ, ಸ್ವಾಭಿಮಾನದ ಪರಿಣಾಮದಿಂದಲಾದರೂ ಸರಿಯೇ ತಾಂತ್ರಿಕ ಸಮಸ್ಯೆಗಳನ್ನು ಸ್ಥಳೀಯ ಚರಿತ್ರೆ ಅಧ್ಯಯನಕಾರರು ಗಮನಿಸಬೇಕಾಗುತ್ತದೆ.

* * *

## ೭. ಶಿಲ್ಪ ಮತ್ತು ಚಿತ್ರಕಲೆ (೧)

ಸಾಮಾನ್ಯವಾಗಿ ಯಾವುದೇ ಹೊಸ ಸಾಮ್ರಾಜ್ಯವಾಗಲಿ ಅಥವಾ ಸಂಸ್ಥಾನವಾಗಲಿ ಸ್ಥಾಪನೆಯಾದ ಮೇಲೆ ಮೊದಲು ಕೈಗೊಳ್ಳುತ್ತಿದ್ದ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ, ಇಲ್ಲವೇ ಆಗಲೇ ಅಸ್ಥಿತ್ವದಲ್ಲಿದ್ದ ದೇವಾಲಯಗಳಿಗೆ ದತ್ತಿಗಳನ್ನು ಕೊಡುವುದು. ಜೀರ್ಣೋದ್ಧಾರ ಮಾಡಿಸುವ ಕಾರ್ಯದಲ್ಲಿ ತೊಡಗುತ್ತಿದ್ದರು. ಏಕೆಂದರೆ ಹೊಸ ಅರಸರಿಗೆ ಇದರಿಂದ ಸಾಮಾನ್ಯ ಜನತೆಯು ಉತ್ತಮ ಬೆಂಬಲ ನೀಡಲೆಂದು ಕೈಗೊಳ್ಳುತ್ತಿದ್ದ ತಂತ್ರವಿರಬಹುದು. ಇದರ ಜೊತೆಗೆ ತಮ್ಮ ರಾಜಕೀಯ ಚಟುವಟಿಕೆಗಳಿಗೆ ಜನ ಸಾಮಾನ್ಯರ ಬೆಂಬಲ ಪಡೆಯಲು ಮಾಡುತ್ತಿದ್ದ ಯುಕ್ತಿಯಾಗಿರಬಹುದು. ಈ ಮೇಲಿನ ತಂತ್ರಕ್ಕೆ ವಿಜಯನಗರದರಸರು ಹೊರತಾಗಿರಲಿಲ್ಲ. ಸಾಮ್ರಾಜ್ಯದ ಪ್ರಾರಂಭದ ವಶದವರಾದ ಸಂಗಮರು ಈ ಮೇಲಿನ ತಂತ್ರ ಹಾಗೂ ಉಪಯೋಗವನ್ನು ಹೆಚ್ಚಿನ ಪ್ರಮಾಣದಲ್ಲಿಯೇ ಪಡೆದರೆನ್ನಬಹುದು. ಮೊದಲಿಗೆ ಇವರು ಈಗಾಗಲೇ ರಾಜ್ಯಾದ್ಯಂತ ವಿಶಾಲವಾಗಿ ತನ್ನದೆಯಾದ ಶೈಲಿಯಲ್ಲಿ ಅವರದೇ ಆದ ಸಂಸ್ಕೃತಿಯ ಧಾರೆ ಹರಿಸಿದ್ದರು. ಇದರಿಂದಾಗಿ ಇವರೆಲ್ಲರಿಗಿಂತಲೂ ಭಿನ್ನವಾದ, ವಿಶೇಷವಾದ ಶೈಲಿಯ ಹುಡುಕಾಟದಲ್ಲಿ ವಿಜಯನಗರದರಸರು ತೊಡಗಿದರು. ಹೊಯ್ಸಳರು ತಮ್ಮ ದೇವಾಲಯಗಳನ್ನು ಒಳಪದ ಕಲ್ಲಿನಿಂದ ನಿರ್ಮಿಸಿದ್ದರು. ಈ ಕಲ್ಲು ಸ್ವಲ್ಪ ಮೃದುವಾದುದರಿಂದ ಸೂಕ್ಷ್ಮ ಕೆತ್ತನೆಗೆ ಹೆಚ್ಚಿನ ಅನುಕೂಲಕರವಾಗಿದ್ದಿತ್ತು. ಅಂದರೆ ಈ ಒಳಪದ ಕಲ್ಲು ದಕ್ಷಿಣ ಕರ್ಣಾಟಕದಲ್ಲಿ ಮಾತ್ರ ಹೇರಳವಾಗಿ ದೊರಕುತ್ತಿತ್ತು. ವಿಜಯನಗರ ರಾಜಧಾನಿಯ ಸುತ್ತಲೂ ಸುಲಭವಾಗಿ ದೊರಕುತ್ತಿದ್ದದ್ದು ಒರಟು ಕಲ್ಲುಗಳು ಅಥವಾ ಬೆಣಚುಕಲ್ಲು ಇದರಿಂದಾಗಿ ಇವರಿಗೆ ಸುಮಾರು ವರ್ಷಗಳು ಯಾವ ತರಹದ ಕಲ್ಲಿನಿಂದ ದೇವಾಲಯಗಳನ್ನು ಕಟ್ಟಿಸಬೇಕೆನ್ನುವ ಪ್ರಶ್ನೆಯನ್ನು ಎದುರಿಸಬೇಕಾಯಿತು. ಕೊನೆಗೆ ದಕ್ಷಿಣ ಕರ್ನಾಟಕದಿಂದ ಬಳಪದ ಕಲ್ಲನ್ನು ಹಂಪಿಯವರೆಗೆ ಸಾಗಿಸುವುದು ಕಷ್ಟಕರವಾದ ಕೆಲವಾದುದರಿಂದ ನೈಸರ್ಗಿಕವಾಗಿಯೇ ತನ್ನ ಸುತ್ತಮುತ್ತಲೇ ಹೇರಳವಾಗಿ ದೊರಕುತ್ತಿದ್ದ ಬೆಣಚು ಕಲ್ಲುಗಳನ್ನೇ ದೇವಾಲಯದ ನಿರ್ಮಾಣದ ಕಾರ್ಯಕ್ಕೆ ಉಪಯೋಗಿಸಲು ನಿರ್ಧರಿಸಲಾಯಿತು. ಈ ನಿರ್ಧಾರದಿಂದಾಗಿಯೇ ಇಂದಿಗೂ ನಾವು ನೋಡುತ್ತಿರುವ ನೋಡಲೇಬೇಕಾದ ಬೃಹತ್ ದೇವಾಲಯಗಳು ಹಂಪಿಯಲ್ಲಿ ನಿರ್ಮಾಣವಾದದ್ದು ಅಂದು ಕಂಗೊಳಿಸಿ ಇಂದಿಗೂ ಅವರ ಕಂಪನ್ನು ಇತಿಹಾಸವನ್ನು ಜ್ಞಾಪಿಸುತ್ತಿರುವುದು.

ಡಾ. ಎಸ್. ರಾಜಶೇಖರ್ ರವರು ಹೇಳುವ ಹಾಗೆ. ವಿಜಯನಗರದರಸರಿಗಿಂತಲೂ ಹಿಂದೆಯೇ ಹಂಪಿಯ ಹೇಮಕೂಟ ಬೆಟ್ಟದ ಮೇಲೆ ಅನೇಕ ಬೆಣಚು ಕಲ್ಲಿನ ದೇವಾಲಯಗಳು ನಿರ್ಮಾಣವಾಗಿದ್ದವು. ಏಕೆಂದರೆ ವಿಜಯನಗರ ಸ್ಥಾಪನೆಯ ಕೆಲವೇ ಕೆಲವು ವರ್ಷಗಳ ಹಿಂದೆಯಷ್ಟೆ ಹೇಮಕೂಟದಲ್ಲಿಯೇ ವೀರ ಕಂಪಿಲರಾಯನು ತ್ರಿಕೂಟ ದೇವಾಲಯವೊಂದನ್ನು ನಿರ್ಮಿಸಿದ್ದನು ಎಂಬುದಕ್ಕೆ ಶಾಸಾನಾಧಾರಗಳಿವೆ ಎಂದು ವಿವರಿಸುತ್ತಾರೆ. ಇದು ಸತ್ಯವೆನ್ನಬಹುದು. ಅವರೇ ಹೇಳುವ ಹಾಗೆ ಪ್ರಾರಂಭದಲ್ಲಿ ವಿಜಯನಗರ ಅರಸರು ಸಾಮ್ರಾಜ್ಯದ ವಿಸ್ತರಣೆಯಲ್ಲಿ ತೊಡಗಬೇಕಾಯಿತು. ಉತ್ತರದಿಂದ ಮುಸಲ್ಮಾನರು, ಸುತ್ತಮುತ್ತಲಿನ ಸಂಸ್ಥಾನಗಳು,

ಪಾಳೇಗಾರರನ್ನು ಸೋಲಿಸುವ ಸಲುವಾಗಿ ಅಪಾರವಾದ ಹಣದ ಅವಶ್ಯಕತೆ ಇದ್ದಿತೆಂದು ಅದ್ದರಿಂದ ಕಡಿಮೆ ಖರ್ಚಿನಲ್ಲಿ ಉತ್ತಮವಾಗಿ ಬಾಳಿಕೆ ಬರುವ ಬೆಣಚುಕಲ್ಲಿನ ದೇವಾಲಯಗಳು, ಹಾಗೂ ಸ್ಮಾರಕಗಳ ನಿರ್ಮಾಣವೇ ಸರಿ ಎಂದು ನಿರ್ಧರಿಸಿ ಸಾಧ್ಯವಾಗಿಸಿದಂತೆ ಕಂಡು ಬರುತ್ತದೆ. ಈ ನಡುವೆ ಕ್ರಿ.ಶ. ೧೩೪೮ರ ತರುವಾಯದಿಂದಲೇ ವಿಜಯನಗರದರಸರು ತಮಿಳು ಪ್ರದೇಶಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರೆಂದು ಹೇಳಬಹುದು. ಕ್ರಿ.ಶ. ೧೩೬೩ರಲ್ಲಿ ವೀರ ಕಂಪಣ್ಣನು ಸಂಭೂವರಾಯ ಅರಸ ರಾಜಾನಾರಾಯಣನನ್ನು ಸೋಲಿಸಿ ಮಧುರೈಯನ್ನು ವಶಪಡಿಸಿಕೊಂಡನು (ಇದರ ಬಗ್ಗೆ ಅವನ ಪತ್ನಿಯೇ ರಚಿಸಿರುವ ಸಂಸ್ಕೃತ ಭಾಷೆಯ ವೀರ ಕಂಪಣ್ಣರಾಯಚರಿತಂ ಮಧುರ ವಿಜಯಂ, ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ). ಇದರಿಂದಾಗಿ ಸುಮಾರು ಕ್ರಿ.ಶ. ೧೩೭೧ರ ಹೊತ್ತಿಗೆ ದಕ್ಷಿಣ ಭಾರತದ ಅದರಲ್ಲಿಯೂ ತಮಿಳು ಪ್ರದೇಶಗಳು ವಿಜಯನಗರದರಸರ ಆಳ್ವಿಕೆಗೆ ಒಳಪಟ್ಟಿತ್ತು. ಅಲ್ಲಿ ಮೊದಲಿಗೆ ತಮಿಳುನಾಡಿನ ಅನೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸುವ ಕಾರ್ಯವನ್ನು ಕೈಗೊಂಡು ಜನರ ಪ್ರೀತಿ ಹಾಗೂ ಸಹಾನೂಭೂತಿಯನ್ನು ಸಂಪಾದಿಸಲು ಪ್ರಾರಂಭಿಸಿದರು. ಹಿಂದೆ ಇದ್ದ ತಮಿಳು ನಾಡಿನ ದೇವಾಲಯಗಳು ಚೋಳರು ಹಾಗೂ ಪಾಂಡ್ಯರಿಂದ ನಿರ್ಮಾಣವಾಗಿದ್ದವು. ಅವು ಸಹ ಬಹುತೇಕ ಬೆಣಚುಕಲ್ಲಿನಿಂದ ನಿರ್ಮಿತವಾಗಿದ್ದವು. ಈ ದೇವಾಲಯಗಳ ಸೌಂದರ್ಯ, ವಿನ್ಯಾಸ ಮತ್ತು ವಿಶಿಷ್ಟ ಶೈಲಿಯಿಂದ ವಿಜಯನಗರದರಸರು, ಸಾಮಂತರು, ದಂಡನಾಯಕರುಗಳು, ಆಕರ್ಷಿತರಾದರು, ಆದರಿಂದಾಗಿಯೇ ವಿಜಯನಗರದ ಅರಸರು ಬೆಣಚುಕಲ್ಲಿನ ದೇವಾಲಯಗಳ ನಿರ್ಮಾಣಕ್ಕೆ ನಿರ್ಧರಿಸಿದಾಗ ಸಹಜವಾಗಿಯೇ ತಮ್ಮ ದೇವಾಲಯಗಳನ್ನು ತಮಿಳು ವಸ್ತುಶೈಲಿ, ಎಂದರೆ ದ್ರಾವಿಡ ಶೈಲಿಯಲ್ಲಿ ಕಟ್ಟಲು ನಿರ್ಧರಿಸಿದರು. ರಾಜಧಾನಿ ಹಂಪಿಯಲ್ಲಿ ಈ ಶೈಲಿಯ ದೇವಾಲಯಗಳನ್ನು ನಿರ್ಮಿಸಲು ತಮಿಳುನಾಡಿನಿಂದಲೇ ಶಿಲ್ಪಿಗಳನ್ನು ಕರೆತಂದಿರಬಹುದೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಮೇಲೆ ತಿಳಿಸಿದಂತೆ ವಿಜಯನಗರದ ಅರಸರ ಕಾಲದಲ್ಲಿಯೇ ಕನ್ನಡನಾಡಿನಲ್ಲಿ ದ್ರಾವಿಡ ಶೈಲಿಯ ದೇವಾಲಯಗಳು ನಿರ್ಮಾಣವಾಗಿರಲಿಲ್ಲ. ಅವರಿಗಿಂತಲೂ ಪೂರ್ವದಲ್ಲಿಯೇ ಅಂದರೆ ಹೊಯ್ಸಳರು, ನೊಳಂಬರು, ಚೋಳರು ಕರ್ನಾಟಕದ ಪ್ರದೇಶಗಳನ್ನು ಆಳುವಾಗ ಮೇಲ್ಕಂಡ ಶೈಲಿಯಲ್ಲಿ ಅನೇಕ ದೇವಾಲಯಗಳನ್ನು ನಿರ್ಮಾಣಗೊಳಿಸಿದ್ದಾರೆ. ಉದಾ. ಕೋಲಾರದ ಕೋಲಾರಮ್ಮ ದೇವಸ್ಥಾನ; ತಲಕಾಡಿನ ಕೀರ್ತಿ ನಾರಾಯಣ ದೇವಾಲಯ (ಕ್ರಿ.ಶ. ೧೧೧೭); ತಲಕಾಡಿನ ಈ ದೇವಾಲಯವೂ ಬೆಣಚುಕಲ್ಲಿನಿಂದಲೇ ನಿರ್ಮಿತವಾಗಿದೆ; ಕಂಬರಹಳ್ಳಿಯ ಪಂಚಕೂಟ ಬಸದಿಗಳು; ಅವನಿಯ ಲಕ್ಷ್ಮಣೇಶ್ವರ, ರಾಮೇಶ್ವರದ ದೇವಾಲಯಗಳು ದ್ರಾವಿಡ ಶೈಲಿಯಲ್ಲಿಯೇ ಇರುವುದು ಕಂಡುಬರುತ್ತದೆ. ಅಷ್ಟೇ ಅಲ್ಲದೆ ಕ್ರಿ.ಶ. ೧೦೩೫ರಲ್ಲಿ ಚೋಳ ಅರಸ ರಾಜೇಂದ್ರ ಚೋಳನ ದಂಡನಾಯಕನೊಬ್ಬನಿಂದ ಜೀರ್ಣೋದ್ಧಾರಗೊಂಡ ಕೋಲಾರದ ಕೋಲಾರಮ್ಮ ದೇವಾಲಯ, ಮಾಲೂರು ಪಟ್ಟಣದಲ್ಲಿರುವ ನಾರಾಯಣ ದೇವಾಲಯ; ತಲಕಾಡಿನ ರಾಜರಾಜೇಶ್ವರಿ ದೇವಾಲಯ; ಮಾರೆಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ ಮತ್ತು ಪುಂಗನೂರಿನ ಗೋಪಿಕೃಷ್ಣ ದೇವಾಲಯ; ತಿಪಟೂರಿನಲ್ಲಿರುವ ರಾಜಾಧಿರಾಜನ ಕಾಲದಲ್ಲಿ ಕಟ್ಟಿರಬಹುದಾದ ಚೋಳೇಶ್ವರ ದೇವಾಲಯ; ಮೊದಲನೆಯ ಕುಲೋತ್ತುಂಗನ ಕಾಲದಲ್ಲಿ ನಿರ್ಮಿಸಿದ್ದ ಕಣ್ಣಂಬಾಡಿಯ ಕಲ್ಲೇಶ್ವರ ದೇವಾಲಯ; ಯಳಂದೂರಿನ ಸೋಮೇಶ್ವರ ದೇವಾಲಯ; ಎಡತೊರೆಯ ಅಕರೀಶ್ವರ ಮತ್ತು ವಿಘ್ನೇಶ್ವರ ದೇವಾಲಯ; ಉತ್ತನೂರಿನ ವರದರಾಜ ದೇವಾಲಯ; ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರ ದೇವಾಲಯ; ಸೋಸಲೆಯ ಹೊನ್ನದೇವಿ ದೇವಾಲಯಗಳೆಲ್ಲವೂ ಸಹ ದ್ರಾವಿಡಶೈಲಿಯ ದೇವಾಲಯಗಳೇ.

ದೇವಾಲಯಗಳ ನಿರ್ಮಾಣದಲ್ಲಿ ನಮ್ಮ ಕರುನಾಡಿನ ಸಂಸ್ಕೃತಿಯು ಹಿಂದಿನ ಕಾಲದಿಂದಲೂ ಅನುಸರಿಸಿಕೊಂಡು ಬಂದಿರುವ ಶೈಲಿಯನ್ನು ಮೂರು ವಿಭಾಗಗಳಾಗಿ ವಿಂಗಡಿಸಬಹುದು.

**೧. ನಾಗರ ಶೈಲಿ :** ಅಂದರೆ ಬುಡದಿಂದ ತುದಿಯವರೆವಿಗೂ ಚೌಕೋನವಾಗಿರುವುದು (ಕೆಳಗಿನಿಂದ ಮೇಲಿನವರೆವಿಗೂ).

**೨. ದ್ರಾವಿಡ ಶೈಲಿ :** 'ಗ್ರೀವ'ದಿಂದ ಮೇಲಕ್ಕೆ ಆರು ಅಥವಾ ಎಂಟು ಮುಖಗಳಿರುವುದು (ಗರ್ಭಗುಡಿಯ ಮೇಲಿನ ಕಟ್ಟಡದಿಂದ)

**೩. ವೇಸರ ಶೈಲಿ :** ದೇವಾಲಯದ ಶೈಲಿಯೇ ವೃತ್ತಾಕಾರವಾಗಿರುವುದು (ಗ್ರೀವ'ದಿಂದ ಮೇಲೆ ವೃತ್ತಾಯತ, ಅರ್ಧವೃತ್ತ, ಗಜಪೃಷ್ಠಿ, ದ್ವಾಶ್ರವೃತ್ತ). ಈ ರೀತಿಯ ಎಲ್ಲಾ ದೇವಾಲಯಗಳನ್ನು ವೇಸರ ಶೈಲಿ ಎಂದು ಕರೆಯುತ್ತಾರೆ.

ಇದರಲ್ಲಿ ವಿಜಯನಗರದ ಅರಸರು ದ್ರಾವಿಡ ಶೈಲಿಯನ್ನು ಅನುಸರಿಸಿಕೊಂಡು ಬೃಹತ್ ದೇವಾಲಯಗಳನ್ನು ನಿಮಿಸಲು ಪ್ರಾರಂಭಿಸಿದರು. ಹಾಗೆಯೇ ಹಿಂದೆ ಇದ್ದ ಹಳೇ ದೇವಾಲಯಗಳ ಜೀರ್ಣೋದ್ಧಾರದ ಕಾರ್ಯವೂ ಸಹ ನಡೆಯಲು ಪ್ರಾರಂಭವಾಯಿತು. ವಿಜಯನಗರದ ಅರಸರು ದೇವಾಲಯಗಳನ್ನು ವಿಶಾಲವಾದ ಜಾಗದಲ್ಲಿ ವಿಸ್ತಾರವಾಗಿ ನಿರ್ಮಿಸುತ್ತಿದ್ದರು. ಕಾರಣವೆಂದರೆ ಅಂದು ಪ್ರತಿಯೊಂದು ಧಾರ್ಮಿಕ ಕಾರ್ಯಚರಣೆಗಳು, ರಾಜ, ಯುವರಾಜರ ಪಟ್ಟಾಭಿಷೇಕಗಳು, ರಾಜ ಪರಿವಾರದವರ ಮದುವೆ, ಸಮಾರಂಭಗಳು, ನಾಡಹಬ್ಬಗಳು, ಸಂಗೀತ, ನಾಟ್ಯ ಪ್ರದರ್ಶನಗಳೆಲ್ಲವೂ ಈ ದೇವಾಲಯಗಳಲ್ಲಿಯೇ ನಡೆಸಲಾಗುತ್ತಿದ್ದುದರಿಂದ ಚಿಕ್ಕದೇವಾಲಯಗಳು ಸಾಲದಾಗುತ್ತಿತ್ತು. ಅದ್ದರಿಂದ ವಿಜಯನಗರದ ಅರಸರು ಬೃಹತ್ ದೇವಾಲಯಗಳನ್ನು ವಿಸ್ತಾರವಾಗಿ ನಿರ್ಮಿಸಲು ಎಡೆಮಾಡಿದರು.

### ೭.೧ ಸಾಂಸ್ಕೃತಿಕ ಶೈಲಿಯ ವಾಸ್ತುಶಿಲ್ಪ

ಶತಮಾನಗಳಿಂದಲೂ ಕರ್ನಾಟಕದಲ್ಲಿಯೇ ಅಲ್ಲದೆ ಭಾರತ ದೇಶದಲ್ಲಿಯೇ ದೇವಾಲಯವು ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆದು ಬಂದಿದೆ. ಏಕೆಂದರೆ ದೇವಾಲಯವೇ ಅಂದು ವಿದ್ಯಾಕೇಂದ್ರ, ಧಾರ್ಮಿಕ ಕೇಂದ್ರ ಸಂಗೀತ ಮುಂತಾದ ಲಲಿತಕಲೆಗಳಿಗೆ ಆಶ್ರಯ ನೀಡುವ ತಾಣವಾಗಿದ್ದಿತು. ಇದಕ್ಕಾಗಿಯೇ ಇವುಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿತ್ತು. ಜೀವನಕ್ಕೆ ಅವಲಂಭಿಸಿರುವ ಮನೆಗಳಲ್ಲಿ, ರಾಜಧಾನಿಯಲ್ಲಿ ಅರಮನೆಗಳು ಶಾಶ್ವತವಾಗಿ ಉಳಿಯಬಹುದಾದ ಕಲ್ಲಿನ ಕಟ್ಟಡಗಳಾಗಿರಲಿಲ್ಲ. ಆದರೆ ದೇವಾಲಯಗಳನ್ನು ಮಾತ್ರ ಶಾಶ್ವತವಾಗಿ ಉಳಿಯಲು ಕಲ್ಲಿನಿಂದ ಕಟ್ಟಿಸಿದರು. ಇದಕ್ಕೆ ವಿಜಯನಗರದ ಸಾಮ್ರಾಜ್ಯದ ಹಂಪಿಯಲ್ಲಿ ಕಂಡುಬರುವ ದೇವಾಲಯಗಳೇ ಸಾಕ್ಷಿ. ಇದಕ್ಕೆ ನಿದರ್ಶನವೆಂಬಂತೆ ರಾಜರ ಅರಮನೆಗಳೆಲ್ಲವೂ ನೆಲಸಮವಾಗಿರುವುದು ಕಂಡುಬರುತ್ತದೆ.

ಇಂದು ನಾವು ದೇವಾಲಯಗಳನ್ನು ಅಧ್ಯಯನ ಮಾಡುವಾಗ ದೇವಾಲಯದ ಮೇಲಿರುವ ಪೂಜ್ಯತೆ ಹಾಗೂ ಭಕ್ತಿಯಿಂದಾಗಿ ಅದನ್ನು ನಮ್ಮ (ಮಾನವನ) ದೇಹದ ಭಾಗಗಳೊಂದಿಗೆ ಗುರ್ತಿಸಿಕೊಳ್ಳುವುದು ವಾಡಿಕೆಯಾಗಿದೆ. ಪಾದ, ಚರಣ, ಆಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ ಹೆಸರುಗಳನ್ನು ಕೊಟ್ಟಿರುವುದು ಕಂಡುಬರುತ್ತದೆ. ಈ ಮೇಲಿನ ಹೆಸರುಗಳನ್ನು ಗುರ್ತಿಸುವುದಕ್ಕೂ ಮೊದಲು ಅಸ್ತಿತ್ವಕ್ಕೆ ಬಂದುದು ಕೇವಲ ಗರ್ಭಗೃಹ ಮಾತ್ರ ದೇವರನ್ನು ಈ ಸಣ್ಣ ಕೋಣೆಯಲ್ಲಿ ಇಟ್ಟು ಪೂಜಿಸುತ್ತಿದ್ದರು. ಈ ಗರ್ಭಗೃಹದ ಮೇಲೆಯೇ ಒಂದು ಶಿಖರವನ್ನು ಎತ್ತರಿಸಿ ಕಟ್ಟುತ್ತಿದ್ದರು. ಇದಕ್ಕೆ ವಿಮಾನ ಎಂದು ಹೆಸರು ಕಟ್ಟಡದ ತಳಹದಿಯಿಂದ ಪ್ರಾರಂಭವಾಗಿ ಭಿತ್ತಿ (ಗೋಡೆ), ಪೊದ (ಕಂಭ) ಬೋಧಿಗೆ (ಪ್ರಸ್ತರ), ಕಂಠ (ಗ್ರೀವ) ಮತ್ತು ಶಿಖರಗಳನ್ನೊಳಗೊಂಡ ಎಲ್ಲ ಭಾಗಗಳಿಗೂ ವಿಮಾನವೆಂದು ಹೆಸರಿದೆ. ಶಿಖರದ ಮೇಲೆ ಸ್ತೂಪಿ ಇರುತ್ತದೆ. ಇದು ಕವುಚಿದ ಬೋಗುಣಿ ಅಥವಾ ಗಂಟೆಯಾಕಾರಾದಲ್ಲಿದ್ದು ಮೇಲುಗಡೆ ಒಂದು ಕಳಶವಿರುತ್ತದೆ. ಶಿಖರದ ಬುಡದಲ್ಲಿ ಮುಂದಕ್ಕೆ ಚಾಚಿದ ಭಾಗವಿದ್ದು ಅದರ ಮೇಲೆ ತೆರೆದ ಬಾಯಿ ನರಸಿಂಹ ಮುಖದ ಆಕೃತಿ ಇರುತ್ತದೆ.ಇದಕ್ಕೆ ಕೀರ್ತಿಮುಖ ಎಂದು ಕರೆಯಲಾಗಿದ್ದು. ಈ ಕೀರ್ತಿ ಮುಖದ ಮಧ್ಯೆ ಇರುತ್ತದೆ. ಇದಕ್ಕೆ ಕೀರ್ತಿಮುಖ ಎಂದು ಕರೆಯಲಾಗಿದ್ದು, ಈ ಕೀರ್ತಿ ಮುಖದ ಮಧ್ಯೆ ಒಮ್ಮೊಮ್ಮೆ ಶಿಲ್ಪಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಗರ್ಭಗೃಹದ ಮುಂದಕ್ಕೆ ಹೊಂದಿಕೊಂಡಂತಿರುವುದು ಅಂತರಾಳ, ಇದು ಸಾಮಾನ್ಯವಾಗಿ ಆಯಾತಾಕಾರವಾಗಿರುತ್ತದೆ. ಇದನ್ನೇ ಸುಕನಾಸಿಯೆಂದೂ, ಅರ್ಧಮಂಟಪವೆಂದೂ ಕರೆಯುವ ರೂಢಿ ಇದೆ. ನವರಂಗ ಎಂಬುದು ಈ ಅಂತರಾಳದ ಮುಂದುಗಡೆಗೆ ಸೇರಿಸಲಾದ ಭಾಗ. ಮೇಲೆ ವರ್ಣಿಸಿರುವ ಎಲ್ಲಾ ರೀತಿಯ ದೇವಾಲಯಗಳೂ ಸಹ ವಿಜಯನಗರದ ಹಿಂದಿನ ಕಾಲದ ವಾಸ್ತುಶಿಲ್ಪದ ಕೆಲವು ಪ್ರಮುಖ ಲಕ್ಷಣಗಳೆಂದು ಹೇಳಬಹುದಾಗಿದೆ.

ವಿಜಯನಗರದರಸರ ಕಾಲದಲ್ಲಿ ಮೇಲಿನವುಗಳಲ್ಲಿ ಕೆಲವು ಬದಲಾವಣೆಗಳಾದುವಲ್ಲದೆ. ಹಲವಾರು ಹೊಸ ಹೊಸ ಅಂಶಗಳೂ ಸೇರಿಕೊಂಡು “ವಿಜಯನಗರ ಶೈಲಿ” ಎಂಬ ಹೊಸ ಶೈಲಿಯನ್ನೇ ಹುಟ್ಟು ಹಾಕಿತ್ತೆನ್ನಬಹುದು. ಇತಿಹಾಸದಿಂದ ನಮಗೆಲ್ಲ ತಿಳಿದಿರುವ

ಹಾಗೆ ಹಿಂದೂಧರ್ಮವನ್ನು ರಕ್ಷಿಸಲೆಂದು ಈ ಹೊಸ ಸಾಮ್ರಾಜ್ಯ ಹುಟ್ಟಿಕೊಂಡಿತು ಎಂಬುದನ್ನು ಹಾಗೂ ಧರ್ಮಪ್ರಚಾರಕ್ಕಾಗಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಂಡಿರುವುದು ತಿಳಿದಿರುವ ವಿಷಯವೇ. ಇದನ್ನು ಗಮನಿಸಿದರೆ ಹಿಂದೂ ಸಂಸ್ಕೃತಿಯ ಎಲ್ಲ ವೈಶಿಷ್ಟ್ಯಗಳನ್ನೂ ಸಂರಕ್ಷಿಸಿ, ಪುನಃ ಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿದ್ದಿತ್ತು. ಅದಕ್ಕಾಗಿಯೇ ಸಂಗೀತ, ಲಲಿತಕಲೆ ಮುಂತಾದವುಗಳಿಗೆ ವಿಶೇಷವಾದ ಪ್ರೋತ್ಸಾಹ ನೀಡಲಾಯಿತ್ತೆನ್ನಬಹುದು. ದೇವಾಲಯದಲ್ಲಿ ದುಃಖ ಮತ್ತು ರೌದ್ರಕರವಾದ ಪ್ರಸಂಗಗಳನ್ನು ಚಿತ್ರಿಸಬಾರದೆಂದೂ, ನಮ್ಮ ಹಿರಿಯರ ದೃಷ್ಟಿಯಲ್ಲಿ ದೇವಾಲಯಗಳೂ ಸಕಲ ಕಲಾಪ್ರದರ್ಶನ ಶಾಲೆಗಳಾದುದರಿಂದ ಅಲ್ಲಿ ಕಾಮ (ಮಿಥುನ ಶಿಲ್ಪ) ಕಲಾ ಪ್ರದರ್ಶನಕ್ಕೂ ವಿಜಯನಗರದ ಅರಸರು ಅವಕಾಶ ಕಲ್ಪಿಸಿದ್ದರು. ಹಾಗೆಯೇ ಉತ್ಕೃಷ್ಟವಾದ ಕಲೆಯಲ್ಲಿಯೇ ನಿಜವಾದ ದೇವಾಂಶವಿದೆ. ಅದು ಎಂದೆಂದಿಗೂ ಅನಂದದಾಯಕವಾದದ್ದು ಹಾಗೂ ನಿಷ್ಠೆಗೆ ಪ್ರಮುಖ ಸಾಧನವಾದುದು. ಇದಕ್ಕೆ ಸಾಕ್ಷಿಯೆಂಬಂತೆ ಇಂದಿಗೂ ಹಂಪಿಯ ದೇವಾಲಯಗಳಲ್ಲಿ ಶಿಲ್ಪ, ಚಿತ್ರ, ನೃತ್ಯ ನಾಟ್ಯಗಳು ಅವ್ಯಕ್ತ ಸೌದರ್ಯವನ್ನು ವ್ಯಕ್ತಗೊಳಿಸುತ್ತಾ ನಿಂತಿರುವುದೆ ಆಗಿದೆ.

ಮೊದಲು ಇಂಥಹ ದೇವಾಲಯಗಳನ್ನು ನಿರ್ಮಿಸಲು, ದೇವಾನುದೇವತೆಯರನ್ನು ಕಲ್ಲಿನಲ್ಲಿ ಕಡೆದು ಸುಂದರ ರೂಪನೀಡಲು, ದೇವಾಲಯದ ಪ್ರತಿಯೊಂದು ಹಂತವನ್ನು ಸುಂದರವಾದ ಕೆತ್ತನೆಯಿಂದ ನಿರ್ಮಿಸಬೇಕಾದರೆ ಶಿಲ್ಪಿಯು ವಿವಿಧ ಶಾಸ್ತ್ರಗಳ ಪ್ರವೀಣನಾಗಿರಲೇಬೇಕಾಗುತ್ತದೆ. ಉದಾಹರಣೆಗೆ :

೧. ಶಿಲ್ಪಿಯು ಒಬ್ಬ ಯೋಗಿಯಾಗಿ : ಭಾರತೀಯ ಶಿಲ್ಪಿಯು ಒಬ್ಬ ಯೋಗಿ, ಶಾಂತಿಯನ್ನು ನೀಡುವ, ಅನಂದಕರವಾದ ದೃಶ್ಯವು ಆ ಶಿಲೆಯಲ್ಲಿ ಕೆತ್ತಿ ಮೂಡಿಸುವ ಹಾಗೆ ಪರಿವರ್ತಿಸುವಲ್ಲಿ ಶಿಲ್ಪಯು ಸಹ ಒಬ್ಬ ಯೋಗಿಯಾಗಿರುತ್ತಾನೆ. ಅವನು ಎಲ್ಲೂ ತನ್ನ ಬಾಹ್ಯ ಸೌಂದರ್ಯವನ್ನು ಪ್ರಕಟಿಸಲು ಪ್ರಯತ್ನಿಸಬಾರದು. ಉದಾ : ಬುದ್ಧನ, ಶಿವನ ಧ್ಯಾನಮಗ್ನ ಶಿಲ್ಪಗಳನ್ನು ನಿರ್ಮಿಸುವಾಗ ಈ ಭಾವನೆಗಳು ಮೂಡುವುದು ಸಹಜವಾಗಿ ವ್ಯಕ್ತವಾಗುತ್ತದೆ.

೨. ಶಿಲ್ಪಯು ಒಬ್ಬ ಭೂಗರ್ಭಶಾಸ್ತ್ರಜ್ಞನಾಗಿರುತ್ತಾನೆ : ತಾನು ನಿರ್ಮಿಸುತ್ತಿರುವ ಶಿಲ್ಪಕ್ಕೆ (ಅದು ದೇವತಾಮೂರ್ತಿಯಾಗಿರಲಿ ಅಥವಾ ದೇವಾಲಯದ ಕಂಬಗಳಾಗಿರಲಿ) ಈ ಶಿಲೆಯು ಯೋಗ್ಯವಾದುದೆಂದು ಗುರ್ತಿಸುವಲ್ಲಿನ ಸನ್ನಿವೇಶದಲ್ಲಿ ಅವನು ಭೂಗರ್ಭಶಾಸ್ತ್ರದಲ್ಲಿ ಪ್ರವೀಣನಾಗಿರಲೇಬೇಕು. ಉದಾ : ವಿಠಲಸ್ವಾಮಿ ದೇವಾಲಯದ ಕಂಬಗಳು ಸಪ್ತಸ್ವರಗಳ ನಾದವನ್ನು ಮೀಟುವ ಹಾಗೆ ಮಾಡುವಲ್ಲಿ ಇವನು ಜಾಣ್ಮೆ ಮೂಡಿಸಿದ್ದಾನೆ.

೩. ಶಿಲ್ಪಿಯು ಒಬ್ಬ ಕವಿಯಾಗಿಯೂ ಈ ಸನ್ನಿವೇಶದಲ್ಲಿ ಕೆಲಸ ಮಾಡುತ್ತಾನೆ. ಹಾಗೂ ಸೌಂದರ್ಯವನ್ನು ಪ್ರೀತಿಸುವವನಾಗಿರುತ್ತಾನೆ.

೪. ಈ ಸನ್ನಿವೇಶದಲ್ಲಿ ಶಿಲ್ಪಿಯು ಒಬ್ಬ ದಾರ್ಶನಿಕವಾಗಿ, ವಾಗ್ಮಿಯಾಗಿ, ಚಿಂತಕನಾಗಿಯೂ ಕಂಡುಬರುತ್ತಾನೆ ಉದಾ : ಹಜಾರರಾಮ ದೇವಾಲಯದ ಗೋಡೆಯ ಮೇಲೆ ರಾಮಾಯಣ, ಮಹಾಭಾರತ, ಭಗವದ್ಗೀತೆಗಳ ಸುಂದರ ಚಿತ್ರಣವನ್ನು ಶಿಲ್ಪಿಯು ನಿರ್ಮಿಸುವಾಗ ಮೇಲಿನವೆಲ್ಲವೂ ಆಗಿರಲೇಬೇಕಲ್ಲವೆ.

೫. ಶಿಲ್ಪಿಯು ವಾಸ್ತುಶಾಸ್ತ್ರಜ್ಞನಾಗಿರುವುದೂ ಮುಖ್ಯವಾಗಿರುತ್ತದೆ. ದೇವಾಲಯದ ನಿರ್ಮಾಣ ಹಾಗೂ ವಿವಿಧ ರೂಪಗಳು ಎಲ್ಲೆಲ್ಲಿ ಕಂಡುಬರಬೇಕೆಂದು ನಿರ್ಧರಿಸುವ ಸನ್ನಿವೇಶದಲ್ಲಿ ಅವನು ವಾಸ್ತುಶಾಸ್ತ್ರಜ್ಷನಾಗಿರುತ್ತಾನೆ ಎಂಬುದು ಸತ್ಯ.

ಒಬ್ಬ ಶಿಲ್ಪಿಯು ಮೇಲಿನವೆಲ್ಲವನ್ನು ಮೈಗೂಡಿಸಿಕೊಂಡಿದ್ದರೆ ಮಾತ್ರ ಉತ್ತಮ ದೇವಾಲಯಗಳನ್ನು ನಿರ್ಮಿಸಬಲ್ಲವನೆಂದು ಹೇಳುವುದಾದರೆ. ವಿಜಯನಗರದ ಕಾಲದ ದೇವಾಲಯಗಳನ್ನು ಗಮನಿಸಿದರೆ ಅಂದಿನ ಶಿಲ್ಪಗಳು ಮೇಲಿನವೆಲ್ಲವನ್ನೂ ಮೈಗೂಡಿಸಿಕೊಂಡಿದ್ದರೆಂದು ಹೇಳಬಹುದು. ಶಿಲ್ಪಿಯು ಕಲ್ಪನೆಗೆ ಸಹಾಯಕವಾಗುವ ಧ್ಯಾನ ಶ್ಲೋಕಗಳು ನಮ್ಮ ಶಾಸ್ತ್ರಗಳಲ್ಲಿ ಬೇಕಾದಷ್ಟಿವೆ. ಉದಾ : ಶ್ರೀದೇವಿಯ ಧ್ಯಾನ ಶ್ಲೋಕವನ್ನು ಇಲ್ಲಿ ಉಲ್ಲೇಖಿಸಬಯಸಬಹುದಾದರೆ,

*ಅರುಣ ಕಮಲ ಸಂಸ್ಥಾ ತದ್ರಜಃ ಪುಂಜವರ್ಣಾ*
*ಕರಕಮಲಧೃ ತೇಷ್ಟಾ ಭೀತಿಯುಗ್ಮಾಂಬುಜಾಚ*
*ಮಣಿ ಮಕುಟ ವಿಚಿತ್ರಾ ಲಂಕ್ಯಾತಾ ಕಲ್ಪಜಾಲ್ಯೆ*
*ಭವತು ಭುವನಮಾತಾ ಸಂತಕಂಶ್ರೀಃ ಶ್ರೀಯೈವಃ*

ಎಂದು ಸುಂದರವಾಗಿ ನಿರೂಪಿಸುವ ಈ ಶ್ಲೋಕವು ಸಂಕೇತ ವಿದ್ಯೆಗೆ ಹೆಚ್ಚಿನ ಒತ್ತು ನೀಡುತ್ತದೆ. ಈ ಸಂಕೇತ ವಿದ್ಯೆಯು ಮೂರ್ತಿಗೆ ತಕ್ಕ ರೂಪವನ್ನು ವಾತಾವರಣವನ್ನು ಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಂಕೇತ ವಿದ್ಯೆಯಿಂದ ಕಲಾವಿದರಿಗೆ ಎರಡು ರೀತಿಯಲ್ಲಿ ಸಹಾಯಕವಾಗುತ್ತದೆನ್ನಬಹುದು. ಒಂದನೆಯದಾಗಿ ಶಿಲ್ಪಿಯು ಸ್ಪಷ್ಟವಾಗಿ ಭಾವಿಸಿಕೊಳ್ಳುವುದಕ್ಕೂ ಹಾಗೂ ಎರಡನೆಯದಾಗಿ ಹಾಗೆ ಬಾವಿಸಿಕೊಂಡ ವಿಧಾನವನ್ನು ಸ್ಪಷ್ಟವಾಗಿ ಶಿಲ್ಪದಲ್ಲಿ ರೂಪಿಸುವುದಕ್ಕೂ ಸಹಾಯವಾಗುವಂತೆ ಮಾಡುತ್ತದೆ. ಸಂಕೇತಗಳು ಕಲಾವಿದರಿಗೆ ಯಾವ ವಿಧದಲ್ಲೂ ಬಂಧನವಾಗುವುದಿಲ್ಲ, ಇದಕ್ಕೆ ಬದಲಾಗಿ ಅವನಿಗೆ ಸಹಕಾರಿಯೂ ಮತ್ತು ಅವಶ್ಯಕವೂ ಆಗಿರುತ್ತವೆ. ವಿಜಯನಗರದ ಕಾಲದ ಶಿಲ್ಪಗಳು ಸಹ ಯಾವುದೇ ರೀತಿಯಲ್ಲಿ ಬಂಧನಕ್ಕೆ ಒಳಗಾಗದೆ ಇದ್ದುದರಿಂದಲೇ ಶಿಲ್ಪದಲ್ಲಿ ಆಧ್ಯಾತ್ಮಿಕವಾದ ಮತ್ತು ಕಲಾತ್ಮಕವಾದ ಭಾವನೆಗಳನ್ನು ಸರಿಯಾಗಿ ರೂಪಿಸುವುದಕ್ಕೆ ಕಾರಣವಾಯಿತ್ತೆನ್ನಬಹುದು. ಉದಾ : ವೇಣುಗೋಪಾಲನ ವೇಣುವಾದನದ ಬೆರಳಿನ ಮುದ್ರೆಯನ್ನು ರೂಪಿಸಬೇಕಾದರೆ ಸಂಕೇತ ವಿದ್ಯೆಯು ತಿಳಿಸುವುದೇನೆಂದರೆ "ಬೆರಳಾಟದಲ್ಲಿ ಅಭಿನಯದ ಸೌಜನ್ಯದೊಡನೆ ಮನೋಭಾವದ ದಿವ್ಯತೆಯೂ ಮಿಲನವಾಗಬೇಕು" ಎಂಬುದನ್ನು ಇದಕ್ಕೆ ನಮ್ಮ ಹೊಯ್ಸಳ ಕಾಲದ ನಂತರ ವಿಜಯನಗರ ಕಾಲದ ಶಿಲ್ಪಗಳು ಉತ್ತಮ ನಿದರ್ಶಕರಾಗುತ್ತಾರೆ.

ಹಾಗೆ ನೋಡಿದರೆ ಪ್ರಪಂಚದ ಎಲ್ಲಾ ವಸ್ತುಗಳೂ ಅದರಲ್ಲಿಯೂ ಹಿಂದೂ ಸಂಸ್ಕೃತಿಯಲ್ಲಂತೂ ಪ್ರತಿಯೊಂದು ವಸ್ತುಗಳೂ ಪರಮಾತ್ಮನ ಯಾವುದೋ ಒಂದು ಭಾವಕ್ಕೆ ಸಂಕೇತಗಳಾಗಿರುತ್ತವೆ. ಆದುದರಿಂದ ಶಿಲ್ಪಗೆ ಅವರವರ ಭಾವವನ್ನು ತಿಳಿಯುವುದಕ್ಕೆ ಆಯಾ ವಸ್ತುವಿನ ಚರಿತ್ರೆಯೇ ಸಂಕೇತವಾಗುತ್ತದೆ ಎಂದು ಹೇಳಬಹುದು. ಹಿಂದೂ ದೇವತೆಗಳನ್ನು ನಿರ್ಮಿಸುವಾಗಲಂತೂ ಆ ದೇವತೆಗಳ ಸಂಕೇತವನ್ನು ಮೊದಲು ಶಿಲ್ಪಯು ಕರಗತ ಮಾಡಿಕೊಂಡಿರಬೇಕಾಗುತ್ತದೆ. ಏಕೆಂದರೆ ಆ ದೇವತೆಯನ್ನು (ಬ್ರಹ್ಮ, ವಿಷ್ಣು, ಮಹೇಶ್ವರ, ರಾಮ, ರಾವಣ, ಸೀತೆ, ಕೃಷ್ಣ, ವಿವಿಧ ರೀತಿಯ ಪುರಾಣ ಕಥೆಗಳು) ಗುರುತಿಸಬೇಕಾದರೆ ಅವರು ಧರಿಸುತ್ತಿದ್ದ ಉಡುಪು, ವಸ್ತುಗಳು ಹಾಗೂ ಅವರ ಆಯುಧಗಳು ಸಂಕೇತವಾಗುತ್ತವೆ.

ಸಂಕೇತಗಳನ್ನು ಶಿಲ್ಪಿಯು ಪ್ರಯೋಗಿಸಬೇಕಾದರೂ ಅವನಲ್ಲಿ ಔಚಿತ್ಯವಿರಬೇಕಾಗುತ್ತದೆ ಏಕೆಂದರೆ ಅವುಗಳನ್ನು ಅನ್ಯೋನ್ಯವಾಗಿ ಪ್ರಯೋಗಿಸಬೇಕಾಗುತ್ತದೆ. ಇಲ್ಲದಿದ್ದರೆ ಶಿಲ್ಪದಲ್ಲಿ ಸೌಂದರ್ಯ, ಸತ್ಯವಾಗಲಿ ಸಂಪೂರ್ಣವಾಗಿ ಲಭಿಸುವುದಿಲ್ಲ, ಪ್ರತಿಯಾಗಿ ಪ್ರತಿಮೆಗೆ ದೋಷಗಳು ಸಂಭವಿಸಬಹುದು. ಸಂಕೇತಗಳನ್ನು ಅಳವಡಿಸುತ್ತೇನೆಂದು ಅತಿಯಾಗಿ ಪ್ರಯೋಗಿಸಿದರೆ ಪ್ರತಿಮೆಯ ನಿಜಸ್ವರೂಪವೂ ಮಾಯವಾಗಬಹುದು. ಅದ್ದರಿಂದ ಕಲವಿದರು ಸಮತೂಕವಾದ ಪ್ರಯೋಗದಿಂದ ಮಾತ್ರ ಪ್ರತಿಮೆಗೆ ಉತ್ತಮ ಸ್ವರೂಪವನ್ನು ಕೊಡಲು ಸಾಧ್ಯವಾಗುತ್ತದೆ ಇವುಗಳೆಲ್ಲ ವಿಜಯನಗರದ ಶಿಲ್ಪಗಳು ಪ್ರತಿಯೊಬ್ಬರ ಮನಗೆದ್ದಿದ್ದರೆನ್ನಬಹುದು.

ಹಿಂದೂ ದೇವತೆಗಳಿಗೆ ಕೆಲವು ಸಂಕೇತಗಳು ಆಯುಧಗಳಿಗೆ ರೂಪದಲ್ಲಿರುವುದು ಕಂಡುಬರುತ್ತದೆ. ಖಡ್ಗ, ಬಾಣ, ಅಂಕುಶ, ಶೂಲ, ಖಟ್ವಾಂಗ, ತ್ರಿಶೂಲ, ಶಕ್ತಿ, ಪಾಶ, ಗುಣಗಳಿಗೆ ಅನುಸಾರವಾದ ಆಯುಧಗಳಲ್ಲಿ ಬೇರೆ ಬೇರೆ ದೇವತೆಗಳಿಗೆ ಅವರವರ ಗುಣಗಳಿಗೆ ಅನುಸಾರವಾಗಿ ಆಯುಧಗಳನ್ನು ಕೊಡಲಾಗಿದೆ. ಹಾಗೆಯೇ ವಾದ್ಯಗಳಲ್ಲಿ ಹಾಗೆಯೇ ಕಮಂಡಲ, ಕನ್ನಡಿಗಳೂ ಬೇರೆ ಬೇರೆ ದೇವತೆಗಳ ಗುಣನಿರೂಪಣೆಗೆ ಅವಶ್ಯಕವಾಗಿವೆ, ಪಶುವರ್ಗದಲ್ಲಿ ಸಿಂಹ, ಎತ್ತು, ಇಲಿ, ಆನೆ, ಕುದುರೆ, ಕೋಳಿ, ಎಮ್ಮೆ, ಆಡು, ಅಮೆ, ಮುಳ್ಳಂದಿ, ಮಕರ, ಕರಡಿ, ಜಿಂಕೆ, ಹಾವು, ಹುಲಿ ಮುಂತಾದವುಗಳು ಬೇರೆ ಭೇರೆ ದೇವತೆಗಳ ನಿರೂಪಣೆಯಲ್ಲಿ ಅತ್ಯಂತ ಹೆಚ್ಚಿನ ಅವಶ್ಯಕವಾಗಿರುವುದಾಗಿದೆ. ಹಾಗೆಯೇ ಮುಖ್ಯವಾಗಿ ದೇವತಾ ಪ್ರತಿಮೆಗಳನ್ನು ಬೇರೆ ಬೇರೆ ಆಸನಗಳಲ್ಲಿ ಕುಳ್ಳಿರಿಸುವುದಕ್ಕೂ ಶಿಲ್ಪಶಾಸ್ತ್ರದ ಪ್ರಮುಖ ಆಧಾರಗಳೇ ಕಾರಣ, ಆ ಆಸನಗಳು ಆಯಾ ದೇವತೆಗಳ ಗುಣಗಳನ್ನು ಅವಲಂಭಿಸಿರುತ್ತದೆ ಎನ್ನಬಹುದು. ಪ್ರಮುಖವಾಗಿ ಕಂಡುಬರುವ ದೇವತೆಗಳ ಗುಣಗಳನ್ನು ದೇವತೆಗಳ ಆಸನಗಳೆಂದರೆ ಕೂರ್ಮಾಸನ, ಮಕರಾಸನ, ಪದ್ಮಾಸನ,

ವೀರಾಸನ, ಭದ್ರಾಸನ, ಸಿಂಹಾಸನಗಳೆಂದು ಆರು ಮುಖ್ಯ ಆಸನಗಳಿರುವುದು ಕಂಡುಬರುತ್ತದೆ. ನಮ್ಮ ಸಂಸ್ಕೃತಿಯಲ್ಲಿ ಉಡುಗೆಗಳೂ ಸಹ ಪ್ರಮುಖವಾದ ಸಂಕೇತಗಳಾಗಿವೆ. ಕೆಲವು ಉಡುಗೆಗಳೂ ಸಹ ಪ್ರಮುಖವಾದ ಸಂಕೇತಗಳಾಗಿವೆ. ಕೆಲವು ಉಡುಗೆಗಳು ಇಂದಿನ ಸಮಾಜದ ಕೆಲವು ವರ್ಗದವರೆಂದು ಗುರುತಿಸಲು ಹಾಗೆ ದೇವತೆಗಳ ಮೇಲೆ ಇರುವ ಉಡುಗೆಯಿಂದಲೂ ಸಹ ಯಾವ ದೇವತೆಯೆಂದು ಗುರ್ತಿಸಲು ಸಹಕಾರಿಯಾಗಿವೆ.

ಮೇಲೆ ಚರ್ಚಿಸಿರುವ ಸಂಕೇತ ಕಲೆಯನ್ನು ಸಂಪೂರ್ಣವಾಗಿ ಬಳಸಿಕೊಂಡು ವಿಜಯನಗರದ ವಾಸ್ತುಶಿಲ್ಪವನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ, ೧. ಲೌಕಿಕ ವಾಸ್ತುಶಿಲ್ಪ, ೨. ಧಾರ್ಮಿಕ ವಾಸ್ತುಶಿಲ್ಪ.

ಲೌಕಿಕ ಕಟ್ಟಡಗಳು ನಮಗೆ ಕಾಣುವುದು ಹಂಪಿಯಲ್ಲಿಯೇ. ಇದು ಸಾಮ್ರಾಜ್ಯದ ರಾಜಧಾನಿ. ಇಲ್ಲಿ ಅರಸರ ಅರಮನೆ, ಅದಕ್ಕೆ ಸಂಬಂಧಿಸಿದ ಇತರ ಮಂಟಪಗಳು ಅರಸಿಯರ ಈಜುಕೋಳ, ಕಮಲ ಮಹಲ್, ಆನೆಯ ಲಯಗಳು, ಕಾವಲುಗೋಪುರ ಹಾಗೂ ದೇವಾಲಯದ ಸಮೀಪದಲ್ಲಿರುವ ಮಾರುಕಟ್ಟೆಯ ಸ್ಥಳಗಳನ್ನು ಉದಾಹರಣೆ ನೀಡಬಹುದಾಗಿದೆ. ಏಕೆಂದರೆ ಈ ಕಟ್ಟಡಗಳ ತಳಪಾಯ ಮಾತ್ರ ಕಲ್ಲಿನಲ್ಲಿ ಕಟ್ಟಲಾಗಿದ್ದು, ಮೇಲಿನ ಸ್ತರಗಳನ್ನೆಲ್ಲ ಮರಗಳಿಂದಲೂ ಅಥವಾ ಗಾರೆಗಳಿಂದ ಕಟ್ಟಲಾಗಿದೆ. ಕಂಬಗಳಿಗೂ ಕಲ್ಲು ಅಥವಾ ಮರವನ್ನು ಉಪಯೋಗಿಸಿರುವುದು ಕಂಡುಬರುತ್ತದೆ, ಕೆಲವು ಕಂಬಗಳ ಒಳಭಾಗಗಳು ಕಲ್ಲಿನದಾಗಿದ್ದು ಅದರ ಸುತ್ತಲೂ ಇಟ್ಟಿಗೆ, ಗಾರೆಗಳನ್ನು ಬಳಸಿ ಕಂಬದ ಗಾತ್ರವನ್ನು ಹೆಚ್ಚಿಸುವ ತಂತ್ರವನ್ನು ಬಳಸಿರುವುದು ಕಂಡುಬರುತ್ತದೆ. ಕಮಾಣುಗಳ ಉಪಯೋಗ ಒಂದು ವಿಶೇಷವಾಗಿದೆ.

ಹಂಪಿ ಹಾಗೂ ಅದರ ಸಾಮ್ರಾಜ್ಯದಾದ್ಯಂತ ಇರುವ ದೇವಾಲಯಗಳು ಧಾರ್ಮಿಕ ವಾಸ್ತುಶಿಲ್ಪಕ್ಕೆ ಉದಾಹರಣೆಗಳಾಗಿವೆ. ಇವುಗಳಲ್ಲಿ ಕಂಡು ಬಂದ ಹೊಸ ಶಿಲೊ ಕಲೆಯಿಂದಾಗಿ ಅಂದು ಸ್ವತಂತ್ರವಾದ "ವಿಜಯನಗರ ಶೈಲಿ" ಎಂದು ಹೆಸು ಪಡೆಯುವಂತಾಯಿತು. ಹಂಪಿಯು ಅನೇಕ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ ಮತ್ತು ಅಂತರಾಳಗಳಿಗೆ ಹೊಂದಿದಂತೆ ಮುಚ್ಚಿದ ಕಂಬಗಳುಳ್ಳ ಪ್ರದಕ್ಷಿಣಾಪಥವಿರುತ್ತದೆ, ಗರ್ಭಗೃಹ ಮತ್ತು ಅಂತರಾಳಗಳಿಗೆ ಸೇರಿದಂತೆ ಒಂದು ಅಧಿಷ್ಠಾನ, ಇದು ಪ್ರಕಾರಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿರುತ್ತದೆ. ಕಂಬಗಳು ಅಲಂಕಾರಿಕವಾಗಿರುತ್ತವೆ. ಹಿಂದೂ ಧರ್ಮವನ್ನು ರಕ್ಷಿಸಲೆಂದು ಈ ಹೊಸ ಸಾಮ್ರಾಜ್ಯವು ಹುಟ್ಟಿಕೊಂಡಿತ್ತೆಂದು ಹೇಳವುದಾದರೆ ಧರ್ಮದ ಪ್ರಚಾರಕ್ಕಾಗಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಳ್ಳಲಾರಂಭಿಸಿದರು. ದೇವರ ಪೂಜೆಗೆ ಸಂಬಂಧಿಸಿದಂತೆ ಹೊಸ ಹೊಸ ಉತ್ಸವಗಳನ್ನು ಅಲವಡಿಸಲಾಯಿತು. ಅಂದರೆ ಹಿಂದೂ ಸಂಸ್ಕೃತಿಯ ಎಲ್ಲಾ ವೈಶಿಷ್ಟ್ಯಗಳನ್ನು ಸಂರಕ್ಷಿಸಿ ಪುನಃಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿದ್ದಿತ್ತು. ಈ ದಿಕ್ಕಿನಿಂದಾಗಿ ದೇವಾಲಯಗಳು ವಿಶೇಷವಾದ ಆಸಕ್ತಿಯನ್ನು ಪಡೆದವು. ದೇವಾಲಯಗಳ ಗೋಡೆಗಳ ಮೇಲೆ, ಕಂಬಗಳ ಮೇಲೆ ಪೌರಾಣಿಕ ಕಾವ್ಯಾತ್ಮಕ ಕಥೆಗಳ ಪ್ರಾತ್ಯಕ್ಷಿಕೆಗಳನ್ನು ಮೂಡಿಸಲಾಯಿತು. ಇದಕ್ಕಾಗಿ ಸಾವಿರಾರು ಶಿಲ್ಪಿಗಳು, ರೂವಾರಿಗಳು, ಪರಿಣಿತರುಗಳು ಹಗಲಿರುಳೂ ತಮ್ಮ ಜೀವನವನ್ನು ತೊರೆದು ಶ್ರಮಿಸಿದ್ದರು. ಜೊತೆಗೆ ವೀರತ್ವಕ್ಕೆ, ಶೌರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಲೆಂಬಂತೆ ಆ ಗುಣಗಳೇ ಎದ್ದು ಬರುವ ಹಾಗೆ ರಾಮ, ಹನುಮಂತ, ಕೃಷ್ಣ, ಭೀಮ, ಅರ್ಜುನ, ಮುಂತಾದವರ ಕೆತ್ತನೆಗಳನ್ನು ಶಿಲ್ಪಗಳಲ್ಲಿ ಮೂಡಿಸಲಾಯಿತು. ಈ ಮೊದಲು ಶಿಲ್ಪಗಳಿಗೆ ಇಂತಹ ಕಥೆಗಾಳವೂವೂ ಇಷ್ಟ ವಿಪುಲವಾಗಿ ವಸ್ತುಗಾಳಗಿರುವುದು ಕಂಡುಬರುವುದಿಲ್ಲ. ಸೈನ್ಯದ ವಿವಿಧ ಅಂಗಗಳಾದ ಕಾಲುದಳ, ಆನೆಗಳು, ಕುದುರೆಗಳು, ಒಂಟೆಗಳು ಇತ್ಯಾದಿಗಳು ಯುದ್ಧದ ಚಿತ್ರಗಳು, ಆಯುಧಗಳು ಸುಂದರವಾಗಿ ಶಿಲೆಯಲ್ಲಿ ಮೂಡಿ ಬರುತ್ತದೆ. ಇದರಿಂದ ಪ್ರಜೆಗಳಲ್ಲಿ ವೀರ ಪೌರುಷದ ಭಾವನೆಯನ್ನು ಹೆಚ್ಚಿಸಬಹುದೆಂಬುವುದು ವಿಜಯನಗರದರಸರ ಭಾವನೆಯಾಗಿದ್ದಿತ್ತು. ಇವು ಪ್ರಜೆಗಳಿಗೆ ಸ್ಪೂರ್ತಿಯನ್ನು ನೀಡಿ. ಅವರು ದೇಶ್ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ ಜೀವನವನ್ನು ಮುಡುಪಾಗಿಡಲು ಹೂಡಿದ ತಂತ್ರವೆಂದು ಕೆಲವು ಇತಿಹಾಸಗಾರರು ಅಭಿಪ್ರಾಯಪಡುತ್ತಾರೆ. ಅದೇನೆ ಇರಲಿ, ಇಂದಂತು ಅಂದಿನ ಕಾಲದ ಸಂಸ್ಕೃತಿಯನ್ನು ಹೊರ ಚೆಲ್ಲುತ್ತಾ ಭರತಖಂಡದಲ್ಲಿಯೇ ಅಲ್ಲದೆ ಪ್ರಪಂಚಕ್ಕೆ ಕನ್ನಡದ ಕಂಪನ್ನು ಚೆಲ್ಲುತ್ತಾ ನಿಂತಿವೆ.

# ೭. ಶಿಲ್ಪ ಮತ್ತು ಚಿತ್ರಕಲೆ (೧)

## ೭.೧. ಶಿಲ್ಪದಲ್ಲಿ ಸೌಂದರ್ಯದ ವರ್ಣನೆ

ನಮ್ಮ ಕಲೆಯೂ ಸಂಸ್ಕೃತಿಯೂ ತತ್ವ ಪ್ರಧಾನವಾದವುಗಳು ಎಂದು ಹೇಳುತ್ತಾರೆ. ಆದರೆ ಇದನ್ನು ಒಪ್ಪಲು ಸಾಧ್ಯವಾಗದು. ಏಕೆಂದರೆ ಒಂದು ದೃಷ್ಟಿಯಲ್ಲಿ ಈ ಬೃಹತ್ ದೇವಾಲಯಗಳಲ್ಲಿ ಕೆಲವೇ ಕೆಲವು ವರ್ಗದವರಿಗೆ ಮಾತ್ರ ಪ್ರವೇಶ ಹಾಗೂ ಕಾರ್ಯಕ್ರಮಗಳನ್ನು ನೆರವೇರಿಸಲು ಅವಕಾಶವಿದ್ದಿತ್ತು. ಶೂದ್ರರು ಹಾಗೂ ಪಂಚಮರು (ದಲಿತರು) ದೇವಾಲಯಗಳ ಬಳಿಯೂ ಸುಳಿದಾಡುವ ಹಾಗಿರಲಿಲ್ಲ. ಈ ದೇವಾಲಯಗಳನ್ನು ನಿರ್ಮಿಸಲು ಮೇಲಿನವರ ಪೂರ್ಣಪ್ರಮಾಣದ ಶ್ರಮವು ಅತ್ಯಾವಶ್ಯಕವಾಗಿ ಬಳಕೆಯಾಗುತ್ತಿದ್ದಿತ್ತು. ಆದರೆ ಅವರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಹೇಳತೀರದಾಗಿದ್ದಿತ್ತು. ಹಂಪಿಯಲ್ಲಿರುವ ಸುಂದರವಾದ ಬೃಹತ್ ದೇವಾಲಯಗಳನ್ನು ಸಾವಿರಾರು ಶಿಲ್ಪಿಗಳು ಶ್ರಮಿಕರ ಸಹಾಯದಿಂದ ನಿರ್ಮಿಸಿದರೇನೂ ಅಷ್ಟೇ ಅನಂತರ ಅವರೂ ಸಹ ದೇವಾಲಯದ ಒಳಗಡೆ ಪ್ರವೇಶವನ್ನು ನಿಷೇಧಿಸಲ್ಪಡುತ್ತಿದ್ದರು. ಇಂಥಹ ಬೃಹತ್ ಸುಂದರ ದೇವಾಲಯಗಳನ್ನು ನಿರ್ಮಿಸಿದ್ದ ಶಿಲ್ಪಿಗಳು ಪ್ರೀತಿ, ವಿಶ್ವಾಸದಿಂದ ಸುಂದರ ಶಿಲ್ಪಗಳನ್ನು ನಿರ್ಮಾನ ಮಾಡದೆ. ರಾಜ ಹಾಗೂ ಬ್ರಾಹ್ಮಣರ ಭಯ ಭೀತಿಯಿಂದ ಕೆಲಸ ಮಾಡುವ ಪರಿಸ್ಥಿತಿ ಉದ್ಭವವಾಗಿತ್ತೆಂದು ಹೇಳಬಹುದು. ಏಕೆಂದರೆ ಈ ಬೃಹತ್ ದೇವಾಲಯಗಳನ್ನು ನಿರ್ಮಿಸಿದ್ದರೂ ಸಹ (ಒಂದೆರಡು ದೇವಾಲಯವನ್ನು ಹೊರತುಪಡಿಸಿ) ಶಿಲ್ಪಿಗಳ ಹೆಸರುಗಳು ಎಲ್ಲೂ ಕಂಡುಬರುವುದಿಲ್ಲ ಕೇವಲ ದೇವಾಲಯ ಕಟ್ಟಿಸಿದ ರಾಜ, ರಾಣಿ, ಪುರೋಹಿತ ಹೆಸರುಗಳು ಮಾತ್ರ ರಾರಾಜಿಸುತ್ತವೆ. ನಮ್ಮ ಜೀವನದ ಹಂಗನ್ನೆ ತೊರೆದು ಹಗಲಿರುಳೆನ್ನದೆ ದುಡಿದು ತಮ್ಮ ಬೆವರಿನ ಪ್ರತಿಯೊಂದು ಕಣದಲ್ಲಿಯೂ ಒಂದೊಂದು ಸುಂದರ ಶಿಲ್ಪಗಳನ್ನು ನಿರ್ಮಿಸಿದ ಅಂದಿನ ಶಿಲ್ಪಿ ಮಹೋನ್ನರಿಗೆ ಇಂದಿಗೂ ಎಂದೆಂದಿಗೂ ನಾವೆಲ್ಲರೂ ಕೃತಜ್ಞರಾಗಿರಲೇಬೇಕು. ವಿಜಯನಗರದ ಚರಿತ್ರೆಯನ್ನು ಸಂಸ್ಕೃತಿಯನ್ನು ಅಧ್ಯಯನ ಮಾಡಿದಾಗ ತಕ್ಷಣ ಮೂಡುವ ಪ್ರಶ್ನೆ ಅಥವಾ ಸಂದೇಹವೆಂದರೆ "ವಿಜಯನಗರ ಸಾಮ್ರಾಜ್ಯವು ಸಾಮ್ರಾಜ್ಯದ ವಿಸ್ತರಣೆಯಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಬೃಹತ್ ಸಾಮ್ರಾಜ್ಯವೆಂದು ಗುರುತಿಸಿಕೊಂಡಿತ್ತು. ಆದರೆ ಸಾಮಾಜಿಕವಾಗಿ ಇದೊಂದು ಪುಟ್ಟ ಸಂಸ್ಥಾನದಂತ್ತಿತ್ತೆಂದು ಹೇಳುವ ಸಂದೇಹಗಳು ಸಹಜವಾಗಿಯೇ ಮೂಡುತ್ತವೆ.

ಮೇಲೆ ತಿಳಿಸಿದ ಹಾಗೆ ಶಿಲ್ಪಿಗಳು ತಮ್ಮ ಎಷ್ಟೋ ಕಷ್ಟವನ್ನು ಬದಿಗೊತ್ತಿ ಸುಂದರ ಶಿಲ್ಪಗಳನ್ನು ಅವುಗಳಲ್ಲಿ ಸೌಂದರ್ಯದ ಭಾವನೆಗಳನ್ನು ತುಂಬಿ ನಿರ್ಮಿಸಿದ್ದಾರೆ. ಅಂದಿನ ಶಿಲ್ಪಿಗಳಿಗೆ ಶಿಲ್ಪದಲ್ಲಿ ಸೌಂದರ್ಯದ ಅಂಗವನ್ನು ಚೆನ್ನಾಗಿ ಅಳವಡಿಸಲು ಪ್ರಾಚೀನ ಕಾಲದಲ್ಲಿಯೇ ಬೆಳಕಿಗೆ ಬಂದಿದ್ದ 'ಚಿತ್ರಲಕ್ಷಣ' ಎಂಬ ಬೌದ್ಧ ಗ್ರಂಥವು ಆಧಾರವಾಗಿತ್ತೆನ್ನಬಹುದು. ಏಕೆಂದರೆ ಈ ಗ್ರಂಥವು ಶಿಲ್ಪದ ಸೌಂದರ್ಯದ ಬಗ್ಗೆ ಮಾರ್ಗದರ್ಶನ ನೀಡುವ ಗ್ರಂಥವಾಗಿ ರೂಪಗೊಂಡಿದೆ. ಈ ಗ್ರಂಥವು ದೇವತೆಗಳಿಗೂ, ರಾಜರಿಗೂ, ಸಾಧಾರಣ ಜನಿರಗೂ, ಪ್ರಾಣಿಗಳನ್ನು ಶಿಲೆಯಲ್ಲಿ ಶಿಲ್ಪಿಯು ನಿರ್ಮಿಸುವಾಗ ಯಾವ ರೀತಿ ನಿಯಮಗಳನ್ನು ಅನುಸರಿಸಬೇಕೆಂದು ಸ್ಪಷ್ಟಪಡಿಸುತ್ತದೆ. ಅಷ್ಟೇ ಅಲ್ಲದೆ ದೇಹದ ಆಕಾರವನ್ನು ವಿಭಜಿಸಿ, ಚಿಕ್ಕಪುಟ್ಟ ಪ್ರಮಾಣಗಳ್ನು ಕೂಡ ವಿವರಿಸುತ್ತದೆ. ಚಿತ್ರ ಲಕ್ಷಣವು ಹೇಳುವಂತೆ ಸುಂದರವಾದ ಮುಖವು ಎಲ್ಲಾ ದೃಷ್ಟಿಯಿಂದಲೂ ಅಕರ್ಷಕವಾಗಿರಬೇಕು. ಮುಖವು ತ್ರೀಕೋಣಾಕಾರವಾಗಿಯೂ, ಸೊಟ್ಟಾಗಿಯೂ, ಅಂಡಾಕಾರವಾಗಿಯೂ, ವರ್ತುಳಾಕಾರವನ್ನು ಹೋಲುವ ಮುಖಗಳೆ ಇರಬೇಕು. ಆದರೆ ಮನುಷ್ಯರನ್ನು ರಚಿಸುವಾಗ ಆಕಾರದಲ್ಲಿ ಸ್ವಲ್ಪ ಸ್ವಾತಂತ್ರ್ಯವನ್ನು ಸಂದರ್ಭಕ್ಕೆ ತಕ್ಕಂತೆ ಪರಿವರ್ತಿಸಬಹುದೆಂದು ಹೇಳುತ್ತದೆ. ದೇವತೆಗಳೂ, ರಾಜರಿಗೂ ಸೊಗಸಾದ ನೀಲವರ್ಣದ ಗುಂಗುರು ಕೂದಲು ಅವಶ್ಯಕವಾಗಿರುತ್ತದೆ. ಸ್ತ್ರೀರೂಪವೂ ಮನೋಹರವಾದ ಅಂಗಗಳ ಸಂಯೋಗದಿಂದ ಕೂಡಿರುವುದಾಗಿರುತ್ತದೆ. ಹಾಗೆಯೇ ಅವುಗಳು ಕೋಮಲವಾಗಿಯೂ ಯೌವನದಿಂದ ಕೂಡಿರುವ ಲಕ್ಷಣಗಳು ಸೂಚಿಸುವಂತಿವೆ. ಇವುಗಳೆಲ್ಲದರಲ್ಲಿಯೂ ಸಹ ಶಿಲ್ಪಿಗಳು ತಮ್ಮ ಮನದಲ್ಲಿ "ಭಾವನಾ ಸಂಪತ್ತಿನ ರೂಪವು ಸೌಂದರ್ಯ ರಹಿತವಾದುದೆಂದು" ಮನವರಿಕೆ ಮಾಡಿಕೊಂಡಿದ್ದರು.

ಶಿಲ್ಪದ ಸೌಂದರ್ಯದ ಬಗ್ಗೆ ವಾತ್ಸ್ಯಾಯನ ಕಾಮಸೂತ್ರವೂ ಸಹ ಹೆಚ್ಚಿನ ಮಾಹಿತಿ ನೀಡುತ್ತದೆ. ಈ ಗ್ರಂಥವು ಹೆಚ್ಚಾಗಿ ಚಿತ್ರಕಲೆಗೆ ಹೆಚ್ಚಿನ ಮಾಹಿತಿಯನ್ನು ದೊರಕಿಸುತ್ತದೆ. ಉದಾ. ಚಿತ್ರದಲ್ಲಿ ಬಣ್ಣ ಹಚ್ಚುವಾಗ ದೇಹದ ವಿವಿಧ ಅಂಗಗಳಿಗೆ ಕೊಡಬೇಕಾದ ಬಣ್ಣಗಳು

ಯಾವುದೆಂಬುದನ್ನು ಅರಿವುಂಟಾಗುವಂತೆ ತಿಳಿಸುತ್ತದೆ. ಅದ್ದರಿಂದ ಇದು ಚಿತ್ರ ರಚನೆಗೆ ಮಾತ್ರ ಅನ್ವಯಿಸುತ್ತದೆಯೇ ವಿನಹಃ ಶಿಲ್ಪಕ್ಕಲ್ಲ ಎನ್ನಬಹುದು. ವಿಜಯನಗರದ ನರ್ತನಾ ಶಾಲೆಯ ವರ್ಣನೆಯಿಂದ ಆ ಅಂಶವು ಸ್ವಷ್ಟಗೊಳ್ಳುತ್ತದೆ.

ಶಿಲ್ಪಿಯು ತನ್ನ ಅರಿವಿನಲ್ಲಿ ಗ್ರಹಿಸಿರುವ ಹಾಗೆ (ಪುರಾಣಗಳು ಹೇಳುವ ಹಾಗೆ) ಶಿಲ್ಪವನ್ನು ನಿಮಿಸುತ್ತಿದ್ದನು. ಅವರು ನಿರ್ಮಿಸಿರುವ ಮೂರ್ತಿಗಳನ್ನು ಮೂರು ಭಾಗಗಳಾಗಿ ಗುರ್ತಿಸಬಹುದು. ಅವುಗಳೆಂದರೆ ನಾರಾಯಣ, ರಾಮ, ವಾಲಿ, ಇಂದ್ರ ಭಾಗವತ, ಅರ್ಜುನ ಮುಂತಾದವರುಗಳು ನರ ಮೂರ್ತಿಗಳಾದರೆ, ಹಿರಣ್ಯಕಶಿವು, ವೃತ, ಹಿರಣ್ಯಾಕ್ಷ, ರಾವಣ, ಕುಂಭಕರ್ಣ, ಮಹಿಷಾಸುರ, ಶರಭ, ನಿಶುಂಭ, ಜರಾಸಂದ ಮುಂತಾದವರುಗಳು ಅಸುರ ಮೂರ್ತಿಗಳಾಗಿಯೂ, ಭೈರವ, ವೀರಭದ್ರ, ಚಂಡಿ, ನರಸಿಂಹ, ವರಾಹ, ತ್ರಿವಿಕ್ರಮ ಮುಂತಾದವು ದೌದ್ರ ಮೂರ್ತಿಗಳೂ, ಹಾಗೆಯೇ ಗೋಪಾಲ, ಬಾಲಕೃಷ್ಣ, ಬಾಲಗಣಪತಿ, ಕುಮಾರಸ್ವಾಮಿ ಮುಂತಾದವುಗಳು ಬಾಲಮೂರ್ತಿಗಳಾದರೆ, ವಾಮನ, ಕೃಷ್ಣ ಮುಂತಾದವು ಕುಮಾರ ಮೂರ್ತಿಗಳಾಗಿರುತ್ತವೆ. ಮೇಲಿನ ಶಿಲ್ಪಗಳ ವೈವಿದ್ಯತೆಯನ್ನು ನೀವು ಹಂಪಿಯ ದೇವಾಲಯಗಳಲ್ಲಿ ಸ್ವಷ್ಟವಾಗಿ ಗಮನಿಸಬಹುದು.

ವಿಜಯನಗರದ ಶಿಲ್ಪಗಳಲ್ಲಿನ ಭಂಗಿಗಳ ಬಗ್ಗೆ ಚರ್ಚಿಸುವುದಾದರೆ ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಕೆಳಕಂಡ ಭಂಗಿಗಳಲ್ಲಿ ಅವು ಇರುವುದು ಕಂಡುಬರುತ್ತದೆ. ಅವನ್ನು ಏಕಭಂಗಿ, ದ್ವಬಂಗಿ, ತ್ರಿಭಂಗಿ, ಅತಿಭಂಗಿಗಳೆಂದು ಹಾಗೂ ವಿವಿಧ ಭಂಗಿಗಳೆಂದು ಗುರುತಿಸಬಹುದಾಗಿದೆ. ಸಾಮಾನ್ಯವಾಗಿ ವಿಷ್ಣು ಪ್ರತಿಮೆಗಳು ಸಮಭಂಗಿಯಲ್ಲಿರುತ್ತವೆ. ಶಿವನ ಪ್ರತಿಮೆಗಳು ತ್ರಿಭಂಗಿಯಲ್ಲಿಯೂ ಅತಿಭಂಗಿಯಲ್ಲಿಯೂ ಇರುವುದು ಕಂಡುಬರುತ್ತದೆ. ಸ್ಥಾನಿಕ ದೇವಿಯರ ಪ್ರತಿಮೆಗಳು ಏಕ ಅಥವಾ ದ್ವಿತೀಯ ಭಂಗಿಯಲ್ಲಿ ಇರುವವು. ಇನ್ನೂ ಮುಂದುವರೆದು ಅಸನದ ಬಗ್ಗೆ ಗಮನಿಸಿದರೆ ತಿಳಿದುಬರುವ ಅಂಶವೆಂದರೆ ದೇವತೆಗಳು ಹಾಗೂ ಚಕ್ರವರ್ತಿಗಳು ಹೆಚ್ಚಾಗಿ ಪದ್ಮಾಸನದಲ್ಲಿರುವುದು ಕಂಡುಬರುತ್ತದೆ. ಹಾಗೆಯೇ ಹಿಂದೂ ದೇವತೆಗಳು ಧರಿಸುವ ಮುಕುಟ ಎಷ್ಟೋ ಬಗೆಯಲ್ಲಿರುವುದು ಸಂಸ್ಕೃತಿಯ ಒಂದು ಭಾಗವೇ ಆಗಿದೆ. ಉದಾಹರಣೆಗೆ ಹೇಳುವುದಾದರೆ ವಿಷ್ಣು, ಅದಿರಾಜ, ಸಾರ್ವಭೌಮಿರಿಗೆ ಕಿರೀಟವೇ ಮುಕುಟವಾದರೆ, ಬ್ರಹ್ಮನಿಗೆ ಜಟಾ ಮುಕುಟವಾಗಿರುತ್ತದೆ. ಪಾರ್ವತಿಗೆ ಮನೋನ್ಮನಿ ಮುಕುಟವಾದರೆ, ಸರಸ್ವತಿ, ಮಹಾರಾಣಿಯರು, ಸಾರ್ವಭೌಮಿಯರಿಗೆ ಕೇಶಬಂಧವೇ ಮುಕುಟವಾಗಿರುವುದು ಕಂಡುಬರುತ್ತದೆ. ಇವುಗಳ ಆಧಾರದ ಮೇಲೆಯೇ ನಾವು ಸಂಬಂಧಪಟ್ಟ ಶಿಲ್ಪಗಳನ್ನು ಗುರುತಿಸಬಹುದಾಗಿದೆ. ಹೆಚ್ಚಾಗಿ ಕಿರೀಟ ಮುಕುಟವೇ ಉಪಯೋಗದಲ್ಲಿರುವುದು ಕಂಡುಬರುತ್ತದೆ. ಇನ್ನೂ ಶಿಲ್ಪಗಳು ಗಂಡು, ಹೆಣ್ಣು, ದೇವಾನುದೇವತೆಗಳ ಶಿಲ್ಪಗಳನ್ನು ನಿರ್ಮಿಸುವಾಗ ಮುಖ, ಕಣ್ಣು, ತುಟಿ, ಕಿವಿ, ಹುಬ್ಬು, ಕೈ ಕಾಳು, ಎದೆ, ಹೊಟ್ಟೆಗಳ ನಿರ್ಮಾಣದಲ್ಲಿ ಅನುಸರಿಸುವ ರೀತಿಗಳಂತೂ ಅದ್ಬುತವಾಗಿವೆ. ಇದರಿಂದಾಗಿಯೇ ಇವು ಅತ್ಯಂತ ಹೆಚ್ಚಿನ ಸೌಂದರ್ಯವನ್ನು ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಮೆರೆಯುತ್ತಿವೆ ಎಂದು ಹೇಳಬಹುದು.

**೭.೩. ವಿಜಯನಗರದ ದೇವಾಲಯಗಳು**

ಹಂಪಿ ಅಥವಾ ವಿಜಯನಗರದಲ್ಲಿ ಎಲ್ಲಿ ನೋಡಿದರಲ್ಲಿ ದೇವಾಲಯಗಳು ಕಂಡು ಬರುತ್ತವೆ. ಅದಕ್ಕೆ ಇದನ್ನು ದೇವಾಲಯಗಳ ಉದ್ಯಾನವನ ಎಂದು ಕರೆದಿರುವುದು ಚಿಕ್ಕ ಹಾಗೂ ಬೃಹತ್ ಆಕಾರದ ದೇವಾಲಯಗಳು ತಮ್ಮದೆ ಆದಂತಹ ಸಂಸ್ಕೃತಿಯನ್ನು ತಮ್ಮ ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು ಬೆಚ್ಚಗೆ ಕುಳಿತಿವೆ ಎನ್ನಬಹುದು. ಹಂಪಿಯಲ್ಲಿ ಕಂಡುಬರುವ ದೇವಾಲಯಗಳನ್ನೂ, ಕೆಲವು ಪಟ್ಟಿ ಮಾಡುವುದಾದರೆ ವಿರೂಪಾಕ್ಷ, ಹಜಾರರಾಮ, ವಿಜಯವಿಠ್ಠಲ ಸ್ವಾಮಿ ದೇವಾಲಯಗಳು, ಕೋದಂಡರಾಮ, ಯಂತ್ರೋದ್ಧಾರಕ ಅಂಜನೇಯ ದೇವಸ್ಥಾನ, ಅಚ್ಯುತರಾಮ ದೇವಸ್ಥಾನ, ಸಾಸಿವೆಕಾಳು ಮತ್ತು ಕಡಲೆಕಾಳು ಗಣೇಶ ವಿಗ್ರಹಗಳು, ಕೃಷ್ಣದೇವಸ್ಥಾನ, ವಿಷ್ಣಪಾದ ದೇವಸ್ಥಾನ, ಲಕ್ಷ್ಮೀನರಸಿಂಹ, ಬಡವಲಿಂಗ, ಸರಸ್ವತಿ ಗುಡಿ, ಉದ್ದಾನ ವೀರಭದ್ರ ದೇವಾಲಯ, ಚಂಡಿಕೇಶ್ವರ ದೇವಾಲಯ, ಗಾಣಗಿತ್ತಿ ಜೈನ ದೇವಾಲಯ ಕಮಲಾಪುರದ ಪಟ್ಟಾಭಿರಾಮ ದೇವಾಲಯ, ಅನಂತಶಯನ ಗುಡಿ, ಮಲ್ಲಪ್ಪನಗುಡಿ (ಮಲಪನಗುಡಿ) ಹಾಗೂ ಹೇಮಕೂಟದಲ್ಲಿರುವ ದೇವಾಲಯಗಳ ಸಮೂಹ, ಇವುಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಹಾಗೂ ಪ್ರಮುಖವಾಗಿರುವ ದೇವಾಲಯಗಳ ವರ್ಣನೆಯನ್ನು ಹೇಳುವುದಾದರೆ

**೧. ವಿರೂಪಾಕ್ಷ ದೇವಸ್ಥಾನ :** ಈ ದೇವಾಲಯವು ವಿಜಯನಗರಕ್ಕಿಂತಲೂ ಹಿಂದಿನದೆಂದು ಕಂಡುಬರುತ್ತದೆ. ಏಕೆಂದರೆ ಈ ದೇವಾಲಯದ ಅವರಣದಲ್ಲಿರುವ ವಿವಿಧ ಭಾಗಗಳನ್ನು ಬೇರೆ ಬೇರೆ ಕಾಲದಲ್ಲಿ ರಚಿತವಾಗಿರುವುದು, ಮತ್ತೆ ಕೆಲವು ಭಾಗಗಳು ಜೀರ್ಣೋದ್ದಾರಗೊಂಡಿರುವುದು ಕಂಡುಬರುತ್ತದೆ. ಆದರೆ ಕಲ್ಯಾಣ ಮಂಟಪ ಹಾಗೂ ಗೋಪುರಗಳನ್ನು ನಿರ್ಮಿಸಿ ದೇವಾಲಯದ ಅವರಣದೊಳಗೇ ಇತರ ಗುಡಿಗಳನ್ನು ಕಟ್ಟಿಸಿದ ಖ್ಯಾತಿಯು ವಿಜಯನಗರದರಸರಿಗೆ ಸಲ್ಲುತ್ತದೆ. ಏಕೆಂದರೆ ಪಂಪಾಕ್ಷೇತ್ರದ ಉಲ್ಲೇಖವು ಬಾದಾಮಿ ಚಾಲುಕ್ಯರ ಅರಸನಾದ ವಿನಯಾದಿತ್ಯನ ತಾಮ್ರ ಶಾಸನದಲ್ಲಿ ಸಿಗುತ್ತದೆ. ಅದೇ ರೀತಿಯಲ್ಲಿ ಚಾಲುಕ್ಯ ಮನೆತನದ ಐದನೆಯ ವಿಕ್ರಮಾದಿತ್ಯ ಕ್ರಿ. ಶ. ೧೦೧೮ನೇಯ ಶಾಸನವೊಂದರಲ್ಲಿ ಪಂಪಾವತಿ ಎನಿಸಿದ ಮಹಾಕಾಲನಿಗೆ ಪಲ್ಲವ ವಂಶದ ವೃದ್ಧಮಬ್ಬರಸಿ ಎಂಬಾಕೆ ಭೂದಾನ ಮಾಡಿದಳೆಂದಿದೆ. ಅಂದು ಪಂಪಾವರಿಗೆ ಮಹಾಕಾಲನೆಂಬ ಹೆಸರಿದ್ದದು ತಿಳಿದುಬರುತ್ತದೆ. ಕ್ರಿ. ಶ.೧೧೯೯ರಲ್ಲಿ ಹುಟ್ಟಿದ ನಾಗವಂಶದ ಅರಸನಾದ ಕಲಿದೇವನ ಕಾಲದ ಶಾಸನದಲ್ಲಿ ಈ ದೇವರನ್ನು ವಿರೂಪಾಕ್ಷನೆಂದೂ, ದೇವಿಯನ್ನು ಪಂಪಾದೇವಿಯೆಂದೂ ಕರೆಯಲಾಗಿದೆ. ಇವುಗಳ ಆಧಾರದ ಮೇಲೆ ಇದೊಂದು ವಿಜಯನಗರದ ಪೂರ್ವದ ದೇವಾಲಯವೆಂದು ಹೇಳಬಹುದು.

ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಸ್ಥಾಪನೆಯಾದಾಗ ಅಂದಿನ ರಾಜ, ಪ್ರಭು, ದೈವ, ಎಲ್ಲವೂ ಸಹ ವಿರೂಪಾಕ್ಷನೇ ಆಗಿದ್ದನು ಅಂದರೆ ಸಂಸ್ಥಾಪಕ ರಾಜರು ವಿರೂಪಾಕ್ಷನಿಗೆ ಮೇಲಿನ ಸ್ಥಾನ ನೀಡಿದ್ದರು ಎಂದರ್ಥ. ಪ್ರವೇಶ ದ್ವಾರದ ಮೇಲೆ ಸುಮಾರು ೧೬೫ ಅಡಿ ಎತ್ತರದ (೫೨.೬ ಮೀಟರ್) ಒಂಬತ್ತು ಅಂತಸ್ತಿನ ಬೃಹತ್ ಗೋಪುರವಿದೆ. ಇದನ್ನು ಎರಡನೆಯ ದೇವರಾಯನ ಕಾಲದಲ್ಲಿ ನಿರ್ಮಿತವಾಗಿದ್ದುದೆಂದು ಹೇಳಲಾಗಿದೆ. ಇದಕ್ಕೆ ಇಂದು ಬಿಷ್ಟಪ್ಪಯ್ಯ ಎಂಬ ಭಕ್ತನು ಕಟ್ಟಿಸಿದನೆಂದೂ ಅದಕ್ಕೆ ಇಂದು ಬಿಷ್ಟಪ್ಪಯ್ಯ ಗೋಪುರ ಎಂದು ಸಹ ಕರೆದುಕೊಂಡು ಬರುವ ರೂಢಿಯಿದೆ. ಒಳಗಡೆ ಕೃಷ್ಣದೇವರಾಯನು ಕಟ್ಟಿಸಿದ ಗೋಪುರವು ಅಷ್ಟೇನು ಎತ್ತರವಿಲ್ಲ. ಇದು ಮೂರಂತಸ್ತಿನ ಗೋಪುರ, ಕೃಷ್ಣದೇವರಾಯನು ಪಟ್ಟಾಭೀಷೇಕವಾದ ನೆನಪಿಗೆ ಕಟ್ಟಿಸಿದನೆಂದು ತಿಳಿದುಬರುವ ಈ ಗೋಪುರವು ರಾಯಗೋಪುರ ಎಂದೂ ಕರೆಸಿಕೊಳ್ಳುತ್ತಿದೆ.

ಒಳ ಭಾಗದಲ್ಲಿ ರಂಗಮಂಟಪ (ಕಲ್ಯಾಣಮಂಡಪ)ವಿದ್ದು ಇದು ವಿಜಯನಗರ ಶೈಲಿಯ ಕಲೆಗೆ ಕೈಗನ್ನಡಿಯಂತಿದೆ. ಅಂದಿನ ಕಾಲದ ಚಿತ್ರಕಲೆಯಿಂದಲೂ ಶೋಭಿಸುತ್ತಾ ನಿಂತಿದೆ.

**೨. ಅಚ್ಯುತರಾಮ ದೇವರಾಯ :** ಸೂಳೆ ಬಜಾರು ಎಂಬ ಪೇಟೆಯ ದಕ್ಷಿಣ ತುದಿಯಲ್ಲಿ ದೊಡ್ಡದಾದ ಅಚ್ಯುತರಾಯ ದೇವಾಲಯವಿದೆ. ಇದು ೧೫೩೯ರಲ್ಲಿ ವಿಜಯನಗರದ ದೊರೆ ಅಚ್ಯುತದೇವರಾಯ ಕಟ್ಟಿಸಿದನೆನ್ನಲಾಗಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯದಲ್ಲಿ ಅನೇಕ ಭಾಗಗಳಿದ್ದು. ಗರ್ಭಗುಡಿಯಲ್ಲಿದ್ದ ದೇವರು ತಿರುವೇಂಗಡನಾಥನೆನ್ನಲಾಗಿದ್ದು ಈ ದೇವಸ್ಥಾನಕ್ಕೆ ತಿರುವೇಂಗಡನಾಥ ದೇವಾಲಯವೆಂದೂ ಕರೆಯಲಾಗಿದೆ. ಇಲ್ಲಿಯೂ ಸಹ ವಿಜಯನಗರ ಶೈಲಿಯ ವಾಸ್ತುಗಳಾದ ಪೂರ್ವ ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಗೋಪುರಗಳಿವೆ, (ಈಗ ಸ್ವಲ್ಪ ನಶಿಸಿವೆ) ಹೊರ ಒಳ ಅಂಗಗಳಲ್ಲಿ ಎರಡು ಬದಿಗಳಲ್ಲಿಯೂ ಕಂಬಗಳ ಮಂಟಪಗಳಿವೆ, ಮುಟ್ಟಿದ ಪ್ರದಕ್ಷಿಣಪಥ, ಅಂತರಾಳ, ಅರ್ಧಮಂಟಪ ಹಾಗೂ ಅಲಂಕೃತ ಮಹಾಮಂಟಪಗಳು ಒಂದಕ್ಕೊಂದು ಹೊಂದಿಕೊಂಡಿರುವುದು ಕಂಡುಬರುತ್ತದೆ.

**೩. ವಿಜಯ ವಿಠಲ ದೇವಾಲಯ :** ಹಂಪಿಗೆ ಕಲಶಪ್ರಾಯವಾಗಿರುವ ದೇವಸ್ಥಾನ ವಿರೂಪಾಕ್ಷ ದೇವಾಲಯವಾದರೆ, ತಿಲಕ ಪ್ರಾಯವಾಗಿರುವ ದೇವಾಲಯ ವಿಜಯ ವಿಠಲ ದೇವಾಲಯ ಎನ್ನಬಹುದು.

ಜಗತ್ತಿನಲ್ಲಿಯೇ ಖ್ಯಾತಿವೆತ್ತ ಈ ವಿಠಲಸ್ವಾಮಿ ದೇವಾಲಯವು ಕಲಾಕುಶಲತೆಯ ದೃಷ್ಟಿಯಿಂದ ಅತ್ಯಂತ ಸುಂದರವಾದದ್ದಾಗಿದೆ. ಅಲ್ಲಲ್ಲಿ ಹಾಳಾಗಿದ್ದರೂ ಸಹ ಶಿಲ್ಪ ವೈಭವಕ್ಕೆ ಕುಂದು ಬಂದಂತಿಲ್ಲ (ASI ನಿಂದ ಈಗ ದೇವಾಲಯದ ಜೀರ್ಣೋದ್ದಾರದ ಕೆಲಸ ನಡೆಯುತ್ತಿದೆ) ಕೃಷ್ಣದೇವರಾಯನು ೧೫೧೩ರಲ್ಲಿ ಈ ದೇವಾಲಯವನ್ನು ಕಟ್ಟಿಸಲು ತೊಡಗಿದನೆಂದು ಹೇಳಿರುವುದು ಕಂಡುಬಂದರೂ ಸಹ ಹದಿನಾಲ್ಕನೆಯ ಶತಮಾನದ ಆದಿ ಭಾಗದಲ್ಲಿ ಈ ದೇವಾಲಯ ಅಸ್ತಿತ್ವದಲ್ಲಿತ್ತೆಂಬುದು ಹರಿಭಟ್ಟನಿಂದ ರಚಿತವಾದ "ಉತ್ತರ ನರಸಿಂಹ

ಪುರಾಣ"ದಿಂದ ತಿಳಿದುಬರುತ್ತದೆ. ಆದರೆ ಅಂದು ಒಂದು ಚಿಕ್ಕ ದೇವಾಲಯವಾಗಿದ್ದನ್ನು ಕೃಷ್ಣದೇವರಾಯನು ಬೃಹತ್ ದೇವಾಲಯವನ್ನಾಗಿ ನಿರ್ಮಿಸಲು ಪಣತೊಟ್ಟು ಸುಮಾರು ಐವತ್ತು ವರ್ಷಗಳು ಸತತವಾಗಿ ಸಾವಿರಾರು ಶಿಲ್ಪಿಗಳು ಹಗಲಿರುಳು ದುಡಿಯಬೇಕಾಯಿತು. ಇದರ ಫಲವಾಗಿಯೇ ವಿಜಯನಗರದ ವಾಸ್ತುಶಿಲ್ಪವು ಇಲ್ಲಿ ಕಲ್ಲರಳಿ ಹೂವಾಗಿ ಕಂಗೊಳಿಸುತ್ತಿದೆ. ಕೃಷ್ಣದೇವರಾಯನು ಕಳಿಂಗದ ದಿಗ್ವಿಜಯದ ನಂತರ ಈ ದೇವಾಲಯವನ್ನು ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹವಿದ್ದರೂ ಸಹ ಯಾವ ವಿಗ್ರಹವನ್ನು ಪ್ರತಿಷ್ಠಾಪಿಸಿರಲಿಲ್ಲವೆಂದೂ ಕಂಡುಬರುತ್ತದೆ. ಆದರೆ ಕೆಲವು ಆಧಾರಗಳ ಪ್ರಕಾರ ತಾಳಿಕೋಟೆ ಯುದ್ಧದ ವರೆವಿಗೂ ಇಲ್ಲಿ ಪೂಜೆಗಳು ನಡೆಯುತ್ತಿದ್ದವೆಂದು ತಿಳಿಸುತ್ತವೆ.

ಅಂಗಳದ ಸುತ್ತ ಮಂಟಪದ ಸಾಲುಗಳಿವೆ, ಕಲ್ಯಾಣ ಮಂಟಪ, ಉತ್ಸವ ಮಂಟಪ, ನೂರು ಕಂಬಗಳ ಮಂಟಪ ಮತ್ತು ಮುಂಭಾಗದಲ್ಲಿ ಕಲ್ಲಿನ ರಥ ಇವೆ. ಇಲ್ಲಿನ ಕಲ್ಲಿನ ರಥವನ್ನು ಒಂದೇ ಶಿಲೆಯಿಂದ ಕೆತ್ತಲಾಗಿದೆ. ಇದೊಂದು ಸುಂದರವಾದ ರಚನೆ, ಸಾಮಾನ್ಯವಾಗಿ ವಿಷ್ಣು ದೇವಾಲಯಗಳ ಮುಂದೆ ಗರುಡನಿಗೆಂದು ಒಂದು ಸಣ್ಣ ಗುಡಿಯನ್ನು ಕಟ್ಟುವುದು ವಾಡಿಕೆ. ಇಲ್ಲಿ ಕಲ್ಲಿನ ರಥವೇ ಗರುಡನ ಗುಡಿಯಾಗಿದೆ. ಎಂದು ಇತಿಹಾಸಗಾರರ ಅಭಿಪ್ರಾಯ, ರಥದ ಗರ್ಭಗೃಹದಲ್ಲಿ ಗರುಡನ ವಿಗ್ರಹವಿದೆ. ರಥದ ಮೇಲೆ ಇಟ್ಟಿಗೆಯ ಒಂದು ವಿಮಾನವಿತ್ತೆಂದೂ ಹೇಳಬಹುದು. ಆದರೆ ಇಂದು ಸಂಪೂರ್ಣ ಕಾಣೆಯಾಗಿದೆ. ಕಲ್ಲಿನ ರಥದಲ್ಲಿ ಸೂಕ್ಷ್ಮ ಕೆತ್ತನೆಯ ಕೆಲಸವನ್ನು ನೋಡಿ, ನಮ್ಮ ಸಂಸ್ಕೃತಿಯ ಎಳೆಎಳೆಯಾಗಿ ಹೊರಹೊಮ್ಮುವಂತೆ ಮಾಡುತ್ತದೆ. ಮಹಾ ಮಂಟಪದಲ್ಲಿ ನಲವತ್ತು ಕಂಬಗಳಿದ್ದು ಅವುಗಳೆಲ್ಲವೂ ಸಹ ಸಮಾನಾಂತರದಲ್ಲಿವೆ. ಒಂದೊಂದು ಕಂಬವೂ ದೊಟ್ಟ ಗಾತ್ರಕ್ಕಿದ್ದು, ಶಿಲ್ಪಕಲೆ ಅಪೂರ್ವವೆನಿಸುತ್ತದೆ. ಸಣ್ಣ ಕಂಬಗಳ ಮೇಲೆ ಮೆಲ್ಲಗೆ ತಟ್ಟಿದಾಗ ಸಂಗೀತದ ಸಪ್ತಸ್ವರಗಳು ಹೊರಹೊಮ್ಮುತ್ತವೆ. ಈ ನಾದ ಮಾಧರ್ಯದಿಂದ ಶಿಲೆಗಳು ಸಂಗೀತ ಹಾಡುತ್ತಿವೆಯೋ ಎನ್ನುವಂತೆ ಮಾಡುತ್ತದೆ.

**೪. ಹಜಾರರಾಮ ದೇವಾಲಯ :** ಕೃಷ್ಣದೇವರಾಯನು ಹಂಪಿಯಲ್ಲಿ ಕಟ್ಟಿಸಿದ ದೇವಾಲಯಗಳಲ್ಲಿ ಹಜಾರರಾಮ ದೇವಾಲಯವೂ ಒಂದು, ಇದನ್ನು ಅವನ ದಿಗ್ವಿಜಯದ ಸಂಕೇತವಾಗಿ ಕಟ್ಟಿಸಿದ್ದು ಎಂಬ ಅಭಿಪ್ರಾಯವಿದೆ. ಈ ದೇವಾಲಯವು ರಾಮಾಯಣಕ್ಕೆ ಸಂಬಂಧಿಸಿದ ಅನೇಕ ಚಿತ್ರಗಳನ್ನು ಹೊಂದಿರುವುದರಿಂದಲೇ ಇದಕ್ಕೆ ಹಜಾರರಾಮ ಎಂದು ಹೆಸರು ಬರಲು ಕಾರಣವೆಂದು ಇತಿಹಾಸಗಾರರು ನಂಬಿದ್ದಾರೆ, ಹಜಾರವೆಂದರೆ ತೆಲುಗಿನಲ್ಲಿ ಸಭಾಮಂಟಪ ಎಂಬ ಅರ್ಥವಿದೆ ಹಾಗೆಯೇ ಅರಮನೆಯ ದ್ವಾರಮಂಟಪ ಎಂಬ ಇನ್ನೊಂದು ಅರ್ಥವೂ ಇದೆ. ಈ ದೇವಾಲಯವು ರಾಜರ ಅರಮನೆಯ ಹೆಬ್ಬಾಗಿಲಿನಲ್ಲಿಯೇ ಇರುವುದರಿಂದ ಈ ಹೆಸರೂ ಬಂದಿರಬಹುದೆಂದು ಕೆಲವರ ಅಭಿಪ್ರಾಯ.

ದೇವಾಲಯದ ಹೊರಗೋಡೆಯು ಸುಂದರವಾದ ಕಲೆಯಿಂದ ಮೈತುಂಬಿಕೊಂಡು ಅಂದಿನ ಇತಿಹಾಸವನ್ನು ಸೂಚಿಸುತ್ತಿದೆ. ದೇವಾಲಯದ ಒಳಗಡೆ ರಾಮಾಯಣ, ಭಗವದ್ಗೀತೆಗೆ ಸಂಬಂಧಿಸಿದ ಚಿತ್ರಗಳು, ಕಂಗೊಳಿಸುತ್ತವೆ. ಅವುಗಳಲ್ಲಿ ದಶರಥನಿಗಾಗಿ ಋಷ್ಯಶೃಂಗ ಮುನಿ ಪುತ್ರಕಾಮೇಷ್ಠಿ ಯಾಗ ಮಾಡುತ್ತಿರುವುದು, ಸೀತಾ ಸ್ವಯಂವರ ಸಂದರ್ಭದಲ್ಲಿ ಜನಕಮಹಾರಾಜನ ಪರಿವಾರದವರು ಮಹಾಭಾರತದ ಶಿವದನಸ್ಸು ಹೊತ್ತು ತರುತ್ತಿರುವುದು ಕಿಷ್ಕಿಂದೆಯಲ್ಲಿ ರಾಮನು ಏಳು ತಾಳೆ ವೃಕ್ಷಗಳನ್ನು ಒಂದೇ ಬಿಲ್ಲಿನಿಂದ ತುಂಡು ಮಾಡುತ್ತಿರುವುದು. ಹನುಮಂತನಿಂದ ರಾಮನಿಗೆ ಚೂಡಾಮಣಿ ಪ್ರಧಾನ, ನರಸಿಂಹ ಹಾಗೂ ಅವನ ತೊಡೆಯ ಮೇಲೆ ಲಕ್ಷ್ಮೀ, ಕೃಷ್ಣನ ಲೀಲಾ ದೃಶ್ಯಗಳು, ವಾಲಿಸುಗ್ರೀವರ ಕಾಳಗ ಮೊದಲಾದವುಗಳು ಕಣ್ಣಿಗೆ ಆನಂದ ತರುತ್ತವೆ. ಹೇಳುವುದಾದರೆ ಹೊರಗೋಡೆಯ ಮೇಲೆ ಎಲ್ಲ ಹಿಂದೂ ದೇವಾನುದೇವತೆಗಳ ಚಿತ್ರವಿರುವುದು ಕಂಡುಬರುತ್ತದೆ. ಬುದ್ಧನಿಗೂ ಇಲ್ಲಿ ಸ್ಥಾನ ದೊರೆತಿರುವುದು ವಿಶೇಷವಾಗಿದೆ.

ದೇವಾಲಯದ ಹೊರಗೋಡೆಗಳಲ್ಲಿಯೂ ಸಹ ಕೆತ್ತನೆಗಳಿರುವುದು ಇಡೀ ದೇವಾಲಯದ ಆನಂದವನ್ನು ಶ್ರೀಮಂತಗೊಳಿಸಿದೆ ಎನ್ನಬಹುದು. ನಮ್ಮ ಸಂಸ್ಕೃತಿಯ ಪ್ರತೀಕಗಳಾಗಿ ಇವು ಇಂದಿಗೂ ಕಂಗೊಳಿಸುತ್ತಿವೆ. ಹೊರ ಗೋಡೆಗಳಲ್ಲಿ ಐದು ಹಂತದಲ್ಲಿ ಚಿತ್ರಗಳಿದ್ದು ಆನೆಗಳು ಹಾಗೂ ಅದರ ಮೇಲೆ ಸವಾರರು, ಕುದುರೆಗಳು ಹಾಗೂ ಅವನ್ನು ಎಳೆಯೊಯ್ಯುತ್ತಿರುವ ಪುರುಷರು ಇಲ್ಲವೆ ಸವಾರರು, ರಥ ಕಾಲಾಳುಗಳು ಹಾಗೂ ಈಟಿ, ಭರ್ಚಿ ಹಿಡಿದು ಸಾಗುತ್ತಿರುವ ದೈನಿಕರು, ನೃತ್ಯಗಾರ್ತಿಯರನ್ನು ಇಲ್ಲಿನ ಉಬ್ಬು

ಶಿಲ್ಪಗಳಲ್ಲಿ ಕಡೆಯಲಾಗಿದೆ. ಹಜಾರರಾಮ ದೇವಾಲಯವು ಹಿಂದೂ ಧರ್ಮದ ಸಂಸ್ಕೃತಿಯನ್ನು ಹೊರಚೆಲ್ಲುತ್ತಿರುವ ಒಂದು ಕಲೆ ಎನ್ನಬಹುದಾಗಿದೆ. ದೇವಾಲಯವು ಒಳ ಹಾಗೂ ಹೊರ ಕೆತ್ತನೆಯಿಂದಾಗಿ ಸೌಂದರ್ಯಮಯವಾಗಿದೆ.

**ಹೇಮಕೂಟ :** ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗುವುದಕ್ಕೂ ಹಿಂದೆಯೇ ಆಧಾರಗಳ ಪ್ರಕಾರ ಕಂಪಿಲರಾಯರ ಕಾಲದಲ್ಲಿ ಹಂಪಿಯಲ್ಲಿ ಕೆಲವು ಕದಂಬ ನಾಗರ ಶೈಲಿಯ (ಸಮಕಟ್ಟಾದ ಅಂತಸ್ತುಗಳ) ದೇವಾಲಯಗಳು ರಚನೆಗೊಂಡವು. ಅವು ಇಂದಿಗೂ ಸುರಕ್ಷಿತವಾಗಿ ಉಳಿದುಕೊಂಡು ಪವಿತ್ರಕ್ಷೇತ್ರವೆನ್ನಿಸಿಕೊಂಡು ಬೆಳೆದುಬರುತ್ತಿವೆ. ಡಾ. ಸಿಂದಗಿ ರಾಜಶೇಖರರವರು ಇವುಗಳ ಕಾಲವನ್ನು ಕ್ರಿ.ಶ. ೧೩೫೦ರ ಮೊದಲು ನಿರ್ಮಾಣವಾಗಿರಬೇಕೆಂದು ಸೂಚಿಸುತ್ತಾರೆ. ಇದು ಸತ್ಯವೆಂದೂ ಹೇಳಬಹುದಾಗಿದೆ. ಇಲ್ಲಿರುವ ದೇವಾಲಯಗಳು ತಮ್ಮದೇಯಾದ ವಿಶಿಷ್ಟ ಲಕ್ಷಣಗಳನ್ನು ಹೊಂದಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

೧. ಗರ್ಭಗೃಹ ಅರ್ಧ ಮಂಟಪ ಮತ್ತು ಮಹಾಮಂಟಪಗಳುಳ್ಳ ಈ ಆಲಯದ ಗರ್ಭಗರಹವನ್ನು ನೀಳವಾದ, ಆಯಾತಾಕಾರದ, ನುಣುಪುಗೊಳಿಸಿದ ಕಲ್ಲುಗಳಿಂದ ಕಟ್ಟಲಾಗಿದೆ.

೨. ಅರ್ಧ ಮಂಟಪ ಮತ್ತು ಮಹಾಮಂಟಪಗಳಲ್ಲಿ ಘನಾಕೃತಿಯ ಭಾರವಾದ ಸರಳವಾದ ಕಂಬಗಳಿವೆ.

೩. ಗರ್ಭಗೃಹದ ಮೇಲೆ ಮೆಟ್ಟಲು ಮೆಟ್ಟಿಲುಗಳಾಗಿ ವಿಸ್ತಾರ ಕಡಿಮೆಯಾಗುತ್ತಾ ಹೋಗುವ ಗೋಪುರಗಳಿರುವುದು.

೪. ಬೆಣಚು ಕಲ್ಲಿನಲ್ಲಿ ನಿರ್ಮಿಸಿದ ಈ ದೇವಾಲಯಗಳ ಅಧಿಷ್ಠಾನ ಸರಳ ಮತ್ತು ನಿರಲಂಕಾರವಾಗಿದೆ.

೫. ಹೊರಗೋಡೆಗಳ ವೈವಿಧ್ಯವಿಲ್ಲದ, ನಿರ್ವಿಶೇಷ ಸಾದಾ ಗೋಡೆಗಳಾಗಿವೆ.

೬. ಪ್ರವೇಶ ಮಂಟಪವು ಅರ್ಧತೆರೆದಿದ್ದು ಇದರಲ್ಲಿ ಕೂಡಲು ಸುತ್ತಲೂ ಕಲ್ಲಿನ ಕಟ್ಟೆಯಿದೆ. ಇದರ ಮೇಲೆ ಚಿಕ್ಕ ಪ್ರಮಾಣದ ಕಂಬಗಳನ್ನು ಸೇರಿಸಲಾಗಿದೆ.

ಹೇಮಕೂಟದ ಮೇಲಿನ ಈ ದೇವಾಲಯಗಳ ಸಮೂಹ ಶೈವ ಮೂಲದವಾಗಿದ್ದು ಕ್ರಿ.ಶ. ಒಂಬತ್ತರಿಂದ ಹದಿನಾಲ್ಕನೆ ಶತಮಾನದ ಆರಂಭ ಕಾಲದವರೆಗಿನ ಅವಧಿಯಲ್ಲಿ ಕಟ್ಟಿಸಿರಬಹುದೆಂದು ತಿಳಿಯಬಹುದಾಗಿದೆ. ಇವು ಹಂಪಿಯ ಪರಿಸರದಲ್ಲಿ ಕಂಡು ಬರುವ ಬಹು ಹಿಂದಿನ ರಚನೆಗಳು ಎನ್ನಬಹುದು. ಈ ರಚನೆಯಲ್ಲಿ ಹೋಲುವ ದೇವಾಲಯಗಳು ಕಮಲಾಪುರದ ಪ್ರವಾಸಿ ಬಂಗಲೆಯ ಸಮೀಪದಲ್ಲಿ ಕಂಡುಬರುತ್ತದೆ. ಇದನ್ನು ಇಂದು ಗಾಣಗಿತ್ತು ಗುಡಿ ಎಂದು ಕರೆಯಲಾಗುತ್ತಿದೆ.

**೭.೪. ವಿಜಯನಗರದ ಚಿತ್ರಕಲೆ**

ಪ್ರಾಚೀನ ಕಾಲದಿಂದಲೂ ಚಿತ್ರಕಲಾ ಸಂಸ್ಕೃತಿಯು ಮಾನವರಲ್ಲಿ ಮನೆಮಾಡಿಕೊಂಡಿತ್ತೆನ್ನಬಹುದು. ಒಂದು ದೃಷ್ಟಿಯಲ್ಲಿ ಈ ಸಂಸ್ಕೃತಿಯು ಕಣ್ಣಿಗೆ ಕಾಣದ ಕೇವಲ ಆಚರಣೆಗಳಲ್ಲಿ ಮಾತ್ರ ಮನಸ್ಸಿಗೆ ಗೋಚರವಾಗುವ ಕಲ್ಪನೆಯಾಗಿತ್ತೆನ್ನಲೂಬಹುದು. ಈ ಚಿತ್ರಕಲಾ ಸಂಸ್ಕೃತಿಯು ಸಾಮಾನ್ಯವಾಗಿ ಮಾನವ ಜನಾಂಗಗಳು ಎಲ್ಲೆಲ್ಲಿ ಒಟ್ಟೊಟ್ಟಿಗೆ ವಾಸ ಮಾಡಲು ಆರಂಬಿಸಿದವೋ ಅಲ್ಲೆಲ್ಲ ಬೇರೆ ಬೇರೆಯಾಗಿ ಪ್ರಾದೇಶಿಕವಾಗಿ ಭಿನ್ನ ಭಿನ್ನ ರೀತಿಯಲ್ಲಿ ಬೆಳೆಯಲಾರಂಬಿಸಿತು. ಕಾಲ ಕಳೆದಂತೆ ಸಂಸ್ಕೃತಿಯು ನಾಗರಿಕತೆಯಾಗಿ ವಿಕಾಸಗೊಳ್ಳುತ್ತಿರುವುದು ನಮಗೆಲ್ಲ ತಿಳಿದಿರುವ ವಿಷಯವೇ, ವಿಜಯನಗರದರಸರ ಪೂರ್ವದಲ್ಲಿಯೂ ಚಿತ್ರಕಲೆ ಕಂಡುಬಂದರೂ ಸಹ ಮೇಲೆ ತಿಳಿಸಿದ್ದಂತೆ ಸಂಸ್ಕೃತಿಯಲ್ಲಿ ಬದಲಾವಣೆಗೊಂಡ ವಿಜಯನಗರದ ಅರಸರು ನಾಗರಿಕತೆಯಲ್ಲಿ ಬದಲಾವಣೆ ಕಾಣಲಾರಂಭಿಸಿದ್ದರಿಂದ ಕಲೆಗಳೂ ಸಹ ವೈವಿಧ್ಯಮಯವಾಗಿ ಬೆಲೆಯಿತ್ತೆನ್ನಬಹುದಾಗಿದೆ. ಅಂದಿನ ಕಲೆಗಾರರು ಕಲೆಯನ್ನು ಕಲೆಗಾಗಿ ಕಲೆ, ಆನಂದಕ್ಕಾಗಿ ಕಲೆ, ಪ್ರವೃತ್ತಿಗಾಗಿ ಕಲೆ ಎಂದು ನಂಬಿದವರಾಗಿದ್ದರು ಎಂದರೆ ತಪ್ಪಾಗದು.

ಹಂಪಿಯ ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಟಪದ ಒಳ ಮಾಳಿಗೆಯ ಮೇಲೆ ಕಂಡುಬರುವ ಶಿವಾಪಾರ್ವತಿಯರ ಕಲ್ಯಾಣ ವೈಭವದ ಇನ್ನಾವ ದೇವಾಲಯಗಳಲ್ಲಿಯೂ ಅಥವಾ ಬೇರೆ ಎಲ್ಲೂ ವಿಜಯನಗರದ ಚಿತ್ರಕಲೆಯು ಕಂಡುಬರುವುದಿಲ್ಲ. ಆದರೆ ಹಂಪಿಗೆ ಮೂರು ಮೈಲಿಗಳ ದೂರದಲ್ಲಿರುವ ಆನೆಗುಂದಿಯ ಅರಮನೆಯಲ್ಲಿ ಮಾತ್ರ ಚಿತ್ರಕಲೆ ಇರುವುದು ಕಂಡುಬರುತ್ತದೆ. ಇದಕ್ಕೆ ಅಲ್ಲಿನ ಹುಚ್ಚಪ್ಪಯ್ಯ ಮಠ ನಿದರ್ಶನವಾಗಿದೆ. ವಿರೂಪಾಕ್ಷ ದೇವಾಲಯದ ಕಲ್ಯಾಣ ಮಂಪಟದಲ್ಲಿರುವ ಚಿತ್ರಕಲೆಯು ಪುರಾಣದ ವಿಷಯಗಳನ್ನು ಒಳಗೊಂಡಿದೆ. ಅಲ್ಲಿ ತ್ರಿಪುರ ಸಂಹಾರಿ, ಕಾಮದಹನ ಮೂರ್ತಿ ಮೊದಲಾದ ಶಿವನ ರೂಪಗಳುಳ್ಳ ಹಲವು ವರ್ಣ ಚಿತ್ರಗಳು, ಅರ್ಜುನನ ಮತ್ಸ್ಯ ಭೇದ, ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆಯಲ್ಲಿ ಹೋಗುತ್ತಿರುವ ಸನ್ಯಾಸಿಯ ಚಿತ್ರ, ದಶಾವತಾರ, ಶಿವಪಾರ್ವತಿಯರ ಕಲ್ಯಾಣದ ವೈಭವಗಳು ಚಿತ್ರಿತವಾಗಿದೆ. ಇಲ್ಲಿನ ಸನ್ಯಾಸಿಯ ಚಿತ್ರ ವಿದ್ಯಾರಣ್ಯರದೆಂದು ಇತಿಹಾಸಕಾರರು ತಿಳಿಸುತ್ತಾರೆ. ಈ ಚಿತ್ರಗಳು ವಿಜಯನಗರದ ಕಾಲದ ಚಿತ್ರಕಲೆಯ ಕುರುಹಾಗಿ ಇಂದಿಗೂ ಉಳಿದಿದೆ ಎನ್ನಬಹುದಾಗಿದೆ.

ವಿಜಯನಗರದ ಚಿತ್ರಕಲೆಯು ಹಂಪಿ ಹಾಗೂ ಆನೆಗುಂದಿಗಳಲ್ಲದೆ ನಾಡಿನ ವಿವಿಧ ಪ್ರದೇಶ ಹಾಗೂ ತಮಿಳುನಾಡಿನ ದೇವಾಲಯಗಳಲ್ಲಿಯೂ ಕಂಡುಬರುತ್ತದೆ. ಇದರಲ್ಲಿ ಪ್ರಮುಖವಾಗಿ ಹಿಂದೂಪುರ ತಾಲೂಕಿನಲ್ಲಿರುವ ಲೇಪಾಕ್ಷಿಯ ಪಾಪನಾಥೇಶ್ವರ ದೇವಾಲಯ, ಇದರ ಕಾಲವನ್ನು ಕ್ರಿ.ಶ. ೧೫೩೫ ಎಂದು ಪರಿಗಣಿಸಲಾಗಿದೆ. ಚಿತ್ತೂರು ಜಿಲ್ಲೆಯ ಮದನಪಲ್ಲಿ ತಾಲ್ಲೂಕಿನ ಸೋಮಪಲ್ಲಿಯ ಚನ್ನಕೇಶವ ದೇವಾಲಯ, ಇದರ ಕಾಲ ಕ್ರಿ.ಶ. ೧೫೫೦; ಕಾಂಚೀಪುರದ ವರದ ರಾಜಸ್ವಾಮಿಯ ದೇವಸ್ಥಾನದಲ್ಲಿ ಇದರ ಕಾಲ ಕ್ರಿ.ಶ. ೧೫೦೯ - ೧೫೩೦; ಕಾಂಚೀಪುರದ ಹತ್ತಿರವಿರುವ ಜಿನಕಂಚಿಯ ವರ್ಧಮಾನ ದೇವಾಲಯದಲ್ಲಿ, ಇದರ ಕಾಲ ಕ್ರಿ.ಶ. ೧೩೭೮ - ೧೪೦೪; ಈ ಪ್ರದೇಶಗಳಲ್ಲಿಯೂ ವಿಜಯನಗರದ ಚಿತ್ರಕಲೆಯು ಉಳಿದುಕೊಂಡು ಅಧ್ಯಯನಕ್ಕೆ ಯೋಗ್ಯವಾಗಿ ಬೆಳೆದು ಬಂದಿದೆ.

ಲೇಪಾಕ್ಷಿಯ ಪಾಪನಾಥೇಶ್ವರ ದೇವಾಲಯದಲ್ಲಿರುವ ಕೆಲವು ಚಿತ್ರಗಳು ಜೈನ ಶೈಲಿಯಲ್ಲಿ ಮತ್ತೆ ಕೆಲವುಗಳು ತಂಜಾವೂರಿನ ಶೈಲಿಯಲ್ಲಿ ರಚಿಸಲ್ಪಟ್ಟಿವೆ ಎನ್ನಬಹುದಾಗಿದೆ. ಏಕೆಂದರೆ ತಂಜಾವೂರಿನ ಶೈಲಿಯಲ್ಲಿ ಬಿಡಿಸಿದ ಚಿತ್ರಗಳು ವಿರೂಪಾಕ್ಷ ದೇವಸ್ಥಾನದ ಚಿತ್ರಗಳನ್ನು ಸಂಪೂರ್ಣವಾಗಿ ಹೋಲುವುವು. ಲೇಪಾಕ್ಷಿಯ ವರ್ಣಚಿತ್ರಗಳನ್ನು ಕರಿ, ಹಸಿರು, ಬೂದುಬಣ್ಣ, ಹಳದಿ ಮಿಶ್ರಿತ ಕಂದುಬಣ್ಣ ಮತ್ತು ಕಿರಿಮಂಚಿ ಬಣ್ಣಗಳನ್ನು ಬಳಸಿ ಚಿತ್ರಿಸಲಾಗಿದೆ. ಇವು ಇಂದಿಗೂ ಸಹ ಮನಮೋಹಕವಾಗಿವೆ.

ಇತಿಹಾಸಗಾರರ ಪ್ರಕಾರ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರದ ಚಿತ್ರಕಲೆಯು ಉನ್ನತ ಸ್ಥಿತಿಯನ್ನು ಪಡೆದಿದ್ದಿತ್ತೆಂದೂ ಅವನ ನಂತರ ಕ್ಷೀಣಿಸತೊಡಗಿತ್ತೆಂದೂ ಅಭಿಪ್ರಾಯಪಡುತ್ತಾರೆ. ೧೫೫೯ರಲ್ಲಿ ವಿಜಯನಗರದ ನಿರ್ಣಾಯಕ ಯುದ್ಧದ ತರುವಾಯ ಸಾಮ್ರಾಜ್ಯದಲ್ಲಿ ಅಶಾಂತಿ ತುಂಬಿದ ಪ್ರಯುಕ್ತ ಚಿತ್ರಕಲೆಗೆ ಯಾವುದೇ ರೀತಿಯ ಪೋಷಣೆ ದೊರೆಯಲಿಲ್ಲವೆನ್ನಬಹುದು.

***

## ಭಾಗ ೨ - ಕೆಳದಿ ನಾಯಕರ ಸಂಸ್ಕೃತಿ ಚರಿತ್ರೆ

## ಸಾಕ್ಷಾತ್ ಕೆಳದೀಶ್ವರ ರಾಮೇಶ

*ಗಿರಿಶಮಾಮದ ಕರುಣಸುಧಾಬ್ಧಿ*

*ಹರಶಂಕರಪಾವನೆ ಫಾರಜತಾದ್ರಿ*

*ಪರಶುಹಿನಾಂಕು ಶೇಖರವಿಭೋ ಮಹೇಶ್ವರ ||ಪ||*

*ಸುರಪಿನೀಧರನ ಗಜಾಪ*
*ಕಮಲಾಪತಿ ಸಂನುತ ಘನರೂಪ*
*ಸ್ಫುರದುರಗಾಧಿಪ ಸುಕಲಾಪ*
*ಸಮುದಾಚಿತ ಮಂಗಲಕರ ರೂಪ* ||೧||

*ಘನಕರ ತ್ರಿಪುರ ದಹನಶೂರ*
*ವೃಷಾವಾಹನ ದುರ್ಗಾಶರೀರ*
*ಮುನಿಜನಹೃಂನಳಿನಾಗಾರ*
*ಮದನಾಂತಕ ದಾರಿಧಗಂಭೀರ* ||೨||

*ಪ್ರವಿಮಲ ಮೃಗಧರ ಸರ್ವೇಶ*
*ಶಮಿತಾಂಧಕ ಸಾಧಿತ ಬಹುದೋಷಾ*
*ಶಿತಿಕಂಧರ ಬಂಧುರ ಶುಭಕೋಶ*
*ಸಾಕ್ಷಾತ್ ಕೆಳದೀಶ್ವರ ರಾಮೇಶ* ||೩||

**ಲಿಂಗಣ್ಣ ಕವಿ ವಿರಚಿತ**

**ಪೀಠಿಕೆ**

ಕೆಳದಿ ಸಂಸ್ಥಾನವು ವಿಜಯನಗರದರಸರ ಅಧೀನದಲ್ಲಿದ್ದ ಒಂದು ಪ್ರಬಲವಾದ ರಾಜ್ಯ ಈ ರಾಜ್ಯವು ಕ್ರಿ.ಶ. ೧೪೯೯ರಲ್ಲಿ ನಿರ್ಮಾಣವಾಯಿತೆಂದು ದೊರಕಿರುವ ಸಾಹಿತ್ಯಾಧಾರಗಳು ಹಾಗೂ ಶಾಸನಗಳಿಂದ ತಿಳಿಯಬಹುದಾಗಿದೆ. ವೈಭವದ ಸುಂದರ ಮಲೆನಾಡಿನ ಮಡಿಲಲ್ಲಿ ತಲೆಯೆತ್ತಿ ನೂರಾರು ವರ್ಷಗಳ ಕಾಲ ಹಿಂದೂ ದರ್ಮ ಹಾಗೂ ಸಂಸ್ಕೃತಿಯ ರಕ್ಷಣೆಗಾಗಿ ದುಡಿದು ಕನ್ನಡನಾಡಿನಲ್ಲಿಯೇ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಹಿಂದಿನ ಇತಿಹಾಸಗಾರರು ಸಣ್ಣಪುಟ್ಟ ಸಂಸ್ಥಾನಗಳ ಇತಿಹಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದರಿಂದ ನಮ್ಮ ಬೃಹತ್ ರಾಷ್ಟ್ರದ ಇತಿಹಾಸಕ್ಕೆ ಹಾಗೂ ಅದರ ಐಕ್ಯತೆಗೆ ಧಕ್ಕೆ ಬರುತ್ತದೆಂದು ಅಭಿಪ್ರಾಯ ಪಟ್ಟಿದ್ದರೆನ್ನಬಹುದು. ಆದರೆ ಇದು ತಪ್ಪು ನಿರ್ಧಾರವೆಂದು ಹೇಳಬಹುದು. ಏಕೆಂದರೆ ಸಾಮಂತ ರಾಜರ ಬೆಂಬಲದಿಂದಲೇ ಅನೇಕ ವೇಳೆ ವಿಶಾಲ ಸಾಮ್ರಾಜ್ಯವೆಂದು ಬಂದಿರುವುದೂ ಹಾಗೂ ಸಣ್ಣ ಪುಟ್ಟ ರಾಜರುಗಳು ಶತ್ರುಗಳಿಂದ ತಮ್ಮ ಸಾಮ್ರಾಜ್ಯಕ್ಕೆ ಧಕ್ಕೆ ತಗಲಿಸಿಕೊಂಡಿರುವುದೂ. ಈ ಎರಡಕ್ಕೂ ನಿದರ್ಶನಗಳಿವೆ. ಇದಕ್ಕೆ ಉತ್ತಮ ನಿದರ್ಶನವೆಂಬಂತೆ ವಿಜಯನಗರ ಸಾಮ್ರಾಜ್ಯವು ರಾಜ್ಯದ ವಿಸ್ತರಣೆಯ ಸಮಯದಲ್ಲಿ ನಿರತವಾಗಿದ್ದಾಗ ಅಥವಾ ರಾಜ್ಯದ ಸಂರಕ್ಷಣೆಗಾಗಿ ಯುದ್ಧದಲ್ಲಿ ತೊಡಗಿದ್ದಾಗ ಅವರ ಅಧೀನದಲ್ಲಿ ರಾಜ್ಯಭಾರ ಮಾಡುತ್ತಿದ್ದ ಸಣ್ಣ ಪುಟ್ಟ ಸಂಸ್ಥಾನಗಳು ಸಾಮ್ರಾಜ್ಯ ಹಾಗೂ ಧರ್ಮದ ಉಳಿವಿಗಾಗಿ ಸರ್ವಪ್ರಯತ್ನ ಮಾಡುತ್ತಿದ್ದ ಈ ದೃಷ್ಟಿಯಿಂದ ಅವಲೋಕಿಸಿ ನೋಡಿದರೆ ಭಾರತದ ಪ್ರಾಚೀನ ಸಂಸ್ಕೃತಿಯ ಅಭಿವೃದ್ಧಿಗೆ ಸಾಮಂತ ರಾಜರುಗಳು ಹಿರಿದಾದ, ಭವ್ಯವಾದ ಸೇವೆಸಲ್ಲಿಸಿದ್ದಾರೆ. ಈ ಹಂತದಲ್ಲಿ ಇಕ್ಕೇರಿಯ ನಾಯಕರು ಅಮರರಾಗಿದ್ದಾರೆ.

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯವು ಯುದ್ಧದಲ್ಲಿ ಸಂಪೂರ್ಣ ಸೋತು ಅವನತಿಯ ಹಾದಿಯನ್ನು ಹಿಡಿದಾಗ ಆ ಸಾಮ್ರಾಜ್ಯದ ಜಾಡಿನಲ್ಲಿಯೇ ಹಿಂದೂ ಧರ್ಮದ ಪುನರುದ್ಧಾರಕ್ಕಾಗಿ ಕರ್ನಾಟಕದಲ್ಲಿ ಉಜ್ವಲವಾಗಿ ಮೆರೆದ ರಾಜ್ಯಗಳೆಂದರೆ ಕೆಳದಿ ಹಾಗೂ ಮೈಸೂರು ಸಂಸ್ಥಾನಗಳೆಂದು ಹೇಳಬಹುದು. ಈ ನಿಟ್ಟಿನಲ್ಲಿ ಕೆಳದಿ ಸಂಸ್ಥಾನದ ಬಗೆಗೆ ಪ್ರಸ್ತಾಪಿಸುವುದಾದರೆ, ಡಾ. ಜಿ.ಎಸ್. ದೀಕ್ಷಿತ್ ಹೇಳುವ ಹಾಗೆ, “ವಿಜಯನಗರವು ತಾಯಿಯಾದರೆ, ಕೆಳದಿ ಅಥವಾ ಇಕ್ಕೇರಿಯು ಇದರ ಮಗು. ಈ ಮಗು ಕೇವಲ ಮಗುವಾಗಿರದೇ ಮಮತೆಯ ಮಗುವಾಗಿತ್ತು; ಇದಕ್ಕೆ ಯಾವಾಗಲೂ ತಾಯಿಯ ಹಿತಚಿಂತನೆಯೇ ಪರಮ ಧ್ಯೇಯವಾಗಿತ್ತು; ಎಂದರೆ ಸನಾತನ ಧರ್ಮದ ರಕ್ಷಣೆಯೇ ಇದರ ಧ್ಯೇಯ ಇತ್ಯಾದಿ” ಎಂಬುದಾಗಿ ಹೇಳಿರುವುದೇ ನಿದರ್ಶನವಾಗಿದೆ. ಇಕ್ಕೇರಿ ಅರಸರು ಅಂದು ಕಟ್ಟಿಸಿದ ಸುಂದರ

ದೇವಾಲಯಗಳು, ಮಂಟಪಗಳು, ಮಠಗಳನ್ನು ಈಗಲೂ ನೋಡಬಹುದಾಗಿದೆ. ಸಂಗೀತ, ನಾಟ್ಯ, ಶಿಲ್ಪ ಮತ್ತು ವಾಸ್ತು ಕಲೆಗಳಿಗೂ, ವಿದ್ಯಾಭ್ಯಾಸಕ್ಕೂ ಅವರು ನೀಡಿದ ಪ್ರೋತ್ಸಾಹದಿಂದಲೇ ಅವರು ಇತಿಹಾಸದಲ್ಲಿ ಅಮರವಾಗಿ ಉಳಿದಿದ್ದಾರೆ. ವಿಜಯನಗರದ ಪತನದ ನಂತರ ಇಕ್ಕೇರಿ ಮಧುರೆ, ತಮಜಾವೂರು, ಗೇರುಸೊಪ್ಪ, ಸೋದೆ ಮೊದಲಾದ ಸಣ್ಣಪುಟ್ಟ ಸಂಸ್ಥಾನಗಳು ಸಂಸ್ಕೃತ ವಿದ್ಯಾಭ್ಯಾಸದ ಬೆಳವಣಿಗೆಗ ಹಾಗೂ ಕಲೆಗಳ ಅಭಿವೃದ್ಧಿಗೆ ಶ್ರಮಿಸಿದ್ದರ ಪ್ರಯುಕ್ತ ಹಿಂದೂ ಧರ್ಮದ ಬೆಳವಣಿಗೆ ಹಾಗೂ ಅದರ ಉಳಿವಿಗೆ ಕಾರಣವಾಯಿತ್ತೆನ್ನಬಹುದು. ಏಕೆಂದರೆ ಈ ಸಮಯದಲ್ಲಿ ಬ್ರಿಟಿಷರ ಪ್ರಾಬಲ್ಯದಿಂದಾಗಿ ಕ್ರೈಸ್ತಧರ್ಮದ ಪ್ರವೇಶ ಸಾಗರೋತ್ತರವಾಗಿ ಬರುತ್ತಿದ್ದರೆ. ಮುಸ್ಲಿಂ ಧರ್ಮವು ಭದ್ರವಾಗಿ ನೆಲೆಯೂರಿಕೊಂಡು ತನ್ನ ಮಂದಹಾಸವನ್ನು ಚೆಲ್ಲುತ್ತಲ್ಲಿತೆನ್ನಬಹುದು ಇಂಥಹ ಸಂದರ್ಭದಲ್ಲಿ ಇದರ ಪಾತ್ರ ಅಜರಾಮರವಾದದ್ದಾಗಿದೆ. ಇಕ್ಕೇರಿ ಅರಸರು ಈ ಹಂತದಲ್ಲಿ ಎಲ್ಲಾ ಮತಗಳನ್ನು ಸಮಾನ ದೃಷ್ಟಿಯಿಂದ ನೋಡಿ ಅಂದು ಮಠಗಳಿಗೂ, ಮುಸಲ್ಮಾನರ ಮಸೀದಿ, ಕ್ರಿಶ್ಚಿಯನ್ ಚರ್ಚುಗಳಿಗೂ ದಾನದತ್ತಿಗಳನ್ನು ಕೊಟ್ಟಿರುವುದು ಹಾಗೂಸರ್ವ ಧರ್ಮಗಳನ್ನು ಸಮನ್ವಯವಾಗಿ ಕಂಡು ಸಹಬಾಳ್ವೆಯಿಂದ ರಾಜ್ಯಬಾರ ಮಾಡಿರುವುದಕ್ಕೆ ಆಧಾರಗಳಿವೆ. ಇಂಥಹ ಇತಿಹಾಸವನ್ನು ಉತ್ಪ್ರೇಕ್ಷೆ ಇಲ್ಲದೆ ಬರೆದ ಪಕ್ಷದಲ್ಲಿ ಮಾತ್ರ ಕರ್ನಾಟಕದ ಸಂಸ್ಕೃತಿ ಚರಿತ್ರೆಯು ಶ್ರೀಮಂತವಾಗುತ್ತದೆನ್ನಬಹುದು.

ಒಂದು ಸಾಮ್ರಾಜ್ಯದ ಅಥವಾ ಪ್ರಾಂತ್ಯದಲ್ಲಿನ ದೇವಾಲಯಗಳು, ಶಾಸನಗಳೂ, ಸ್ಮಾರಕಗಳು ಅಲ್ಲಿನ ಸಾಂಸ್ಕೃತಿಕ ಸಂಪತ್ತಿನ ಪ್ರತೀಕಗಳಾಗಿರುತ್ತವೆ. ಇವು ಆ ಪ್ರದೇಶದ ಇತಿಹಾಸದ ವೈಭವವನ್ನು ಜಗತ್ತಿಗೆ ಸಾರುತ್ತಾ ಕಂಗೊಳಿಸುತ್ತಿವೆ. ಹೇಳಬೇಕಾದ ಇತಿಹಾಸವನ್ನು ಸಂಕ್ಷಿಪ್ತವಾಗಿಯೇ ವಿವಿಧ ರೀತಿಯಲ್ಲಿ ತಿಳಿಸುತ್ತವೆ. ಈ ದೃಷ್ಟಿಯಲ್ಲಿ ಕೆಳದಿಯು ಐತಿಹಾಸಿಕವಾಗಿಯೂ ಹಾಗೂ ಕರ್ನಾಟಕದ ರಾಜಕೀಯ, ಸಾಂಸ್ಕೃತಿಕ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವೊಂದನ್ನು ೧೫ನೇ ಶತಮಾನದ ಉತ್ತರಾರ್ಧದವರೆಗೆ ವೀರಶೈವ ಅರಸು ಮನೆತನವೊಂದು ಕೆಳದಿ ಅರಸು ಮನೆತನವೆಂದೇ ಪ್ರಸಿದ್ಧಿಪಡೆದು ಉಜ್ವಲ ಆಳ್ವಿಕೆ ನಡೆಸಿ ಇತಿಹಾಸದಲ್ಲಿ ಅಮರರಾಗಿದ್ದಾರೆ.

ಕೆಳದಿ ಇತಿಹಾಸ, ಆಡಳಿತ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೆಲವು ವಿದ್ವಾಂಸರು ಸೂಕ್ಷ್ಮವಾಗಿ ಅಧ್ಯಯನ ನಡೆಸಿರುವುದು ಕಂಡುಬರುತ್ತದೆ. ರಾಬರ್ಟ್ ಸೇವೆಲ್ ಎಂಬ ವಿದೇಶಿ ಇತಿಹಾಸಗಾರರು ಮೊದಲ ಬಾರಿಗೆ ಕೆಳದಿ ರಾಜವಂಶಾವಳಿಯನ್ನು ತಮ್ಮ "ಸ್ಕೆಚ್ ಆಫ್ ದಿ ಡೈನಾಸ್ಟೀಸ್ ಅಫ್ ಸದರ್ನ್ ಇಂಡಿಯಾ" ಎಂಬ ಮಹತ್ವದ ಕೃತಿಯಲ್ಲಿ ಪ್ರಕಟಿಸಿದರು. ಇವರು ಸಿದ್ಧಪಡಿಸಿದ ಕಾಲಾನುಕ್ರಮಣಿಕೆಯಲ್ಲಿನ ತಿದ್ದುಪಡಿಯನ್ನು ಮತ್ತೊಬ್ಬ ಪ್ರಖ್ಯಾತ ಇತಿಹಾಸಗಾರರಾಗಿದ್ದ ಎಲ್.ಡಿ. ಬಾರ್ನೆಟ್ ಅನುಮೋದಿಸಿದರು. ಶಾಮಶಾಸ್ತ್ರೀಗಳು ೧೯೧೧ - ೧೨ರಲ್ಲಿ "ಕ್ವಾಟರ್ಲಿ ಜರ್ನಲ್ ಅಫ್ ದಿ ಮಿಥಿಕ್ ಸೋಸೈಟಿ" ಎಂಬ ಕೃತಿಯಲ್ಲಿ ಮಲೆನಾಡಿನ ನಾಯಕರ ಮುರಿತು ಹೆಚ್ಚು ವಿವರಣೆ ನೀಡುವಂತೆ ಬರೆದಿರುತ್ತಾರೆ. ನಂತರದಲ್ಲಿ ಸಾಹಿತ್ಯ ಮತ್ತು ಐತಿಹ್ಯವನ್ನು ಆಧರಿಸಿ ಎಂ.ಎಸ್. ಪುಟ್ಟಣ್ಣನವರು "ಇಕ್ಕೇರಿ ಸಂಸ್ಥಾನದ ಚರಿತ್ರೆ"ಎಂಬ ಮಹತ್ವದ ಪುಸ್ತಕವನ್ನು ೧೯೩೦ರಲ್ಲಿ ರಚಿಸಿದರು. ಕೆಳದಿ ನಾಯಕರ ಕಾಲ, ಅವರ ದಂಡಯಾತ್ರೆ ಮೊದಲಾದವುಗಳ ಬಗೆಗೆ ಖಚಿತವಾದ ಮಾಹಿತಿಯನ್ನು ಆಧರಿಸಿ ಎನ್. ಲಕ್ಷ್ಮೀನಾರಾಯಣರಾವ್ ಪುಸ್ತಕ ಬರೆದರೆ ಕೆಳದಿಯನ್ನು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಪ್ರಪಂಚಕ್ಕೆ ಪರಿಚಯಿಸಲು ಕೆಳದಿ ಗುಂಡಾಜೋಯ್ಸರ "ಕೆಳದಿಯ ಸಂಕ್ಷಿಪ್ತ ಇತಿಹಾಸ" ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಹಕಾರಿ ಇವುಗಳೆಲ್ಲವುದಕ್ಕೆ ನಿದರ್ಶನವಾಗುವಂತೆ ಡಾ. ಕೆ.ಜಿ. ವೆಂಕಟೇಶ್ ಜೋಯಿಸ್‌ರವರು ಕೆಳದಿ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಸಾಂಸ್ಕೃತಿಕ ಅಧ್ಯಯನಮಾಡಿ ರಚಿಸಿದ್ದ "ಕೆಳದಿ ಶಾಸನಗಳ ಸಾಂಸ್ಕರತಿಕ ಅಧ್ಯಯನ" ಎಂಬ ಪುಸ್ತಕ ಮಹತ್ವವಾಗಿದೆ.

ಕೆಳದಿ ಅರಸರ ಅಧ್ಯಯನಕ್ಕೆ ಮೂಲ ಅಕರ ಗ್ರಂಥಗಳಾಗಿ ಇಂದಿಗೂ ಕಂಗೊಳಿಸುತ್ತಿರುವ ಸ್ಮಾರಕಗಳು, ನಾಣ್ಯಗಳು, ಶಾಸನಗಳು, ದೇಶಿಯ ಹಾಗೂ ವಿದೇಶಿಯರ ಬರವಣಿಗೆಗಳು, ಜಾನಪದ ಕಥೆಗಳು ಹೇರಳವಾಗಿ ದೊರೆತಿದ್ದು ಕೆಳದಿ ಇತಿಹಾಸವನ್ನು ಶ್ರೀಮಂತಗೊಳಿಸಲು ಮುಂದಾಗಿವೆ.

***

# ೧. ಮೂಲ ಮತ್ತು ಬೆಳವಣಿಗೆ

ಕ್ರಿ. ಶ. ೧೬ನೆಯ ಶತಮಾನದ ಅದಿಭಾಗದಲ್ಲಿ ಉದಯಿಸಿದ ಇಕ್ಕೇರಿ ಅರಸರ ಚರಿತ್ರೆಯನ್ನು ಹಾಗೂ ಅದರ ಮೂಲ ಬೆಳವಣಿಗೆಯನ್ನು ಪ್ರಾರಂಭಿಸುವ ಮುನ್ನ ಈ ಐತಿಹಾಸಿಕ ಸಂಸ್ಥಾನದ ಹಿನ್ನೆಲೆಯನ್ನು ಅರಿಯುವುದು ಬಹುಮುಖ್ಯವೆಂದೆನ್ನಿಸುತ್ತದೆ.

ಸುಂದರ ಮಲೆನಾಡಿನ ಸೆರಗಿನ ಜಿಲ್ಲೆಯಾಗಿರುವ ಶಿವಮೊಗ್ಗದ ಸಾಗರ ತಾಲ್ಲೂಕು ಕೇಂದ್ರದಿಂದ ಎರಡು ಮೈಲಿ ದೂರದಲ್ಲಿರುವ ಇಕ್ಕೇರಿಯು ಇತ್ತೀಚಿನ ೪೫೦ ವರ್ಷಗಳ ಹಿಂದೆಯಷ್ಟೇ ಕರ್ನಾಟಕದ ಪಾವಿತ್ರ್ಯತೆಯನ್ನು ತನ್ನ ಮಡಿಲಿನಲ್ಲಿ ಸಾಕಿ ಸಲುಹಿ ಭರತ ಖಂಡದಲ್ಲಿಯೇ ವಿಶಿಷ್ಟ ಚರಿತ್ರೆಯನ್ನು ನಿರ್ಮಿಸಿ, ರಾಜಧಾನಿಯಾಗಿ ಮೆರೆದ ಊರು ಎಂದು ಹೇಳಿದರೆ ನಂಬಲಾಗದಿರಬಹುದು. ಇಕ್ಕೇರಿಯು ಇಂದು ಒಂದು ಗ್ರಾಮವಾಗಿ ಮಾತ್ರ ಉಳಿದಿದ್ದು ತಾನು ತನ್ನ ವೈಭವದ ಕಾಲದಲ್ಲಿ ಈ ನಾಡಿನ ರಕ್ಷಣೆಗೋಸ್ಕರ, ಇದರ ಸಂಸ್ಕೃತಿಯ ಉಳಿವಿಗೋಸ್ಕರ ಹೋರಾಡಲು ವೀರಾಧಿವೀರ ಅರಸರಿಗೆ ಜನ್ಮ ನೀಡಿತ್ತು ಎಂಬುವುದನ್ನು ಮರೆತಂತೆ ಮರೆಯಲ್ಲಿಯೇ ನಾಚಿಕೆಯಿಂದ ಕಂಗೊಳಿಸುತ್ತಿದೆ. ಅಂದಿನ ಕಾಲದಲ್ಲಿಯೇ ಒಂದು ಪುಟ್ಟ ವಿದ್ಯಾಕೇಂದ್ರದಂತಿದ್ದ ಇಕ್ಕೇರಿಯು ಅನೇಕ ವಿದ್ವಾಂಸರನ್ನು, ಕವಿಗಳನ್ನು, ನಾಟಕಕಾರರನ್ನು ರಕ್ಷಿಸಿಕೊಂಡು ಅವರಿಂದ ಉತ್ತಮ ಕೃತಿಗಳು ನಾಡಿಗೆ ಸಮರ್ಪಿತವಾಗುವಂತೆ ಮಾಡಿದೆ. ಇಂದು ಈ ಗ್ರಾಮದ ಸುತ್ತಮುತ್ತಲೂ ಕಂಡುಬರುವ ಪುರಾತನ ಅವಶೇಷಗಳು ಆ ಕಾಲದ ವೈಭವದ ಇತಿಹಾಸವನ್ನು ಇಂದಿನ ಪೀಳಿಗೆಗೆ ದಿನನಿತ್ಯ ಪಠ್ಯರೂಪದಲ್ಲಿ ಓದಿ ತಮ್ಮ ಪೂರ್ವಜರ ಆಚಾರ, ವಿಚಾರ, ಕಲೆ, ಸಂಸ್ಕೃತಿಯ ಪಾಠವನ್ನು ತಿಳಿಸುತ್ತಿವೆ. ಅವರು ಕಟ್ಟಿಸಿರುವ ದೇವಾಲಯಗಳು, ಮಠಗಳು ಹಾಗೂ ಮಸೀದಿಗಳನ್ನು ಈಗಲೂ ನೋಡಬಹುದಾಗಿದೆ. ಇಲ್ಲಿಯ ಅರಸರು ಸಂಗೀತ, ನಾಟ್ಯ, ಶಿಲ್ಪ ಮತ್ತು ವಾಸ್ತುಕಲೆಗಳಿಗೂ ಹಾಗೂ ವಿದ್ಯಾಭ್ಯಾಸದ ಬೆಳವಣಿಗೆಗೆ ವಿವಿಧ ರೀತಿಯ ಪ್ರೋತ್ಸಾಹ ನೀಡಿದ್ದರು. ಇದಕ್ಕೆ ನಿದರ್ಶನವೆಂಬಂತೆ ಹೇಳುವುದಾದರೆ ವಿಜಯನಗರದ ಪತನದ ನಂತರ ಇಕ್ಕೇರಿ, ಮಧುರೆ, ತಂಜಾವೂರು, ಗೇರುಸೊಪ್ಪೆ, ಸೋದೆ ಮೊದಲಾದ ಸಂಸ್ಥಾನಗಳು ಸಂಸ್ಕೃತ ವಿದ್ಯಾಭ್ಯಾಸದ ಬೆಳವಣಿಗೆಗೆ ಹಾಗೂ ಕಲೆಗಳ ಅಭಿವೃದ್ಧಿಗೆ ತುಂಬಾ ಸಹಾಯಕವಾಗಿದ್ದವು ಎಂದು ಅನೇಕ ಸಾಹಿತ್ಯಾಧಾರಗಳಿಂದ ತಿಳಿಯುತ್ತದೆ.

ಇಂದು ಭಾರತವು ತನ್ನ ರಕ್ತದೊಂದಿಗೆ ಬೆಸೆದುಕೊಂಡಿರುವ ಸರ್ವಧರ್ಮವನ್ನೂ ಸಮನಾಗಿ ಕಾಣು ಎನ್ನುವ ತತ್ವಕ್ಕೆ ಅಂದಿನ ಕಾಲದ ರಾಜಮಹಾರಾಜರು ಅಂಟಿಕೊಂಡಿರುವ ಸುಮಧುರವಾದ ದಾರಿಯೇ ಮೂಲ ಕಾರಣವೆಂದು ಹೇಳಬಹುದು. ಇದರಲ್ಲಿ ಇಕ್ಕೇರಿಯ ನಾಯಕರು ಹಿಂದೆ ಬಿದ್ದಿರಲಿಲ್ಲ. ಎಲ್ಲಾ ಧರ್ಮ, ಮತಗಳನ್ನು ಸಮಾನ ದೃಷ್ಟಿಯಿಂದ ನೋಡಿ ತಮ್ಮ ಸಂಸ್ಥಾನದಲ್ಲಿದ್ದ ಮಠ, ಮಸೀದಿ, ಚರ್ಚುಗಳಿಗೆ ಅಪಾರ ದಾನದತ್ತಿಗಳನ್ನು ನೀಡಿ ಅವುಗಳ ಶ್ರೇಯೋಭಿವೃದ್ಧಿಗೆ ಕೈ ಚಾಚಿರುವುದಕ್ಕೆ ಶಾಸನಾಧಾರಗಳು ಲಭ್ಯವಿದೆ. ಬಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದ ಸಂಸ್ಕೃತಿಯು ಪ್ರಧಾನವಾಗಿ ಕಂಡರೆ, ಅಪ್ರಧಾನ ಸಂಸ್ಕೃತಿಯು ಉಜ್ವಲವಾಗಿ ಬೆಳಗಬೇಕಾದರೆ ಇಕ್ಕೇರಿ ಹಾಗೂ ಮೈಸೂರು ಸಂಸ್ಥಾನದ ಅಧೀನ ರಾಜ್ಯಗಳ ಸಾಂಸ್ಕೃತಿಕ ಇತಿಹಾಸವನ್ನು ಉತ್ಪ್ರೇಕ್ಷೆ ಇಲ್ಲದೆ ಬರೆದರೆ ಮಾತ್ರ ನಮ್ಮ ನಾಡಿನ ಚರಿತ್ರೆಯ ಜೊತೆಗೆ ದೇಶದ ಇತಿಹಾಸದ ನ್ಯೂನತೆಗಳನ್ನು ಸರಿಪಡಿಸಿಕೊಳ್ಳಬಹುದೆನ್ನಿಸುತ್ತದೆ.

**ಕೆಳದಿ ಅರಸರ ಮೂಲ**

ಕೆಳದಿ ಅರಸರ ಮೂಲದ ಬಗ್ಗೆ ಖಚಿತವಾಗಿ ಹೇಳುವ ಮೂಲ ದಾಖಲೆಗಳು ದೊರಕುವುದಿಲ್ಲ. ದೊಕಿರುವ ಅನೇಕ ಸಾಹಿತ್ಯಾಧಾರಗಳು ಹಾಗೂ ಶಾಸನಗಳ ಆಧಾರದ ಮೇಲೆ ಈ ನಾಡಿನ ಬಗ್ಗೆ ಪ್ರೊ.ದೀಕ್ಷಿತ್ ಹಾಗೂ ಕೆಳದಿ ಗುಂಡಾ ಜೋಯಿಸ್ ರವರು ನೀಡಿರುವ ಹೇಳಿಕೆಯನ್ನೆ ನಾವು ಇಂದಿಗೂ ನಂಬಬೇಕಾಗಿದೆ. ಒಂದು ರೀತಿಯಲ್ಲಿ ಈ ಆಧಾರವು ಸತ್ಯವಾದದೆಂದೂ ಹೇಳಬಹುದು. ಕೆಲವು ಸನ್ನಿವೇಶಗಳು ಉತ್ಪ್ರೇಕ್ಷೆಯಿಂದ ಕೂಡಿರುವುದಾಗಿದ್ದರೂ ಅವನ್ನು ಹೊರತುಪಡಿಸಿದರೆ ಮಿಕ್ಕ ದಾಖಲೆಗಳು ಸಿಕ್ಕ ಸಂಗತಿಯನ್ನು ನಿರೂಪಿಸುತ್ತವೆ ಹಾಗೂ ನಂಬುವಂತೆಯೂ ಮಾಡುತ್ತವೆ.

ಕೆಳದಿ ಗುಂಡಾಜೋಯಿಸ್ ರವರು ತಮ್ಮ ಮಹತ್ವದ ಕೃತಿಯಾಗಿರುವ "ಕೆಳದಿಯ ಸಂಕ್ಷಿಪ್ತ ಇತಿಹಾಸ" ಎಂಬುದರಲ್ಲಿ ಈ ಕೆಳಕಂಡಂತೆ ಕೆಳದಿ ಅರಸರ ಮೂಲ ಹಾಗೂ ಸ್ಥಾಪನೆಯ ಬಗ್ಗೆ ವಿವರಣೆ ನೀಡುತ್ತಾರೆ. "ಈಗಿನ ಶಿವಮೊಗ್ಗ ಜಿಲ್ಲೆಯ 'ಕೆಳದಿ' ಎಂಬ ಗ್ರಾಮವು ನಾಲ್ಕುನೂರಾ ಐವತ್ತು ವರ್ಷಗಳ ಹಿಂದೆ ದಟ್ಟವಾದ ಅರಣ್ಯ ಪ್ರದೇಶಗಳಿಂದ ಕೂಡಿತ್ತು. ಆಗ ಸಂಚಾರಕ್ಕೆ ಮಾರ್ಗಗಳೇ ಇರದೆ. ಕೇವಲ ಕಾಲುದಾರಿಗಳಿಂದ ಸಂಪರ್ಕ ಪಡೆದಿದ್ದ ಪಳ್ಳಿ ಬಯಲು (ಈಗ ಹಳ್ಳಿಬೈಲು ಎಂದಾಗಿದೆ) ಎಂಬ ಗ್ರಾಮದಲ್ಲಿ ಬಸವಪ್ಪನೆಂಬ ರೈತನು ತಕ್ಕಮಟ್ಟಿಗೆ ಕೃಷಿ ಮೊದಲಾದ್ದನ್ನು ಮಾಡಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದನು. ಉತ್ತಮ ಶಿವಭಕ್ತನೂ, ಜ್ಞಾನಿಯೂ ಆಗಿದ್ದ ಈತನಿಗೆ ಬಸವಮಾಂಬೆ ಎಂಬ ಪತ್ನಿಯಿದ್ದಳು. ಇವಳು ತುಂಬಾ ಸದ್ಗುಣಶೀಲೆಯಾಗಿದ್ದು. ಪತಿವ್ರತಾಶಿರೋಮಣಿಯಾಗಿ ಪತಿಗೆ ತಕ್ಕ ಪತ್ನಿಯಾಗಿದ್ದಳು. ಇವಳಿಗೆ ಚೌಡಪ್ಪ - ಭದ್ರಪ್ಪ ಎಂಬಿಬ್ಬರು ಗಂಡು ಮಕ್ಕಳು ಹುಟ್ಟಿದರು. ಈರ್ವರೂ ಬುದ್ಧಿವಂತರಾಗಿ ವೃದ್ಧಿಯಾಗುತ್ತಾ ಪ್ರಬುದ್ಧಮಾನಕ್ಕೆ ಬಂದಕೂಡಲೇ ಕೃಷಿಕಾರ್ಯಗಳಲ್ಲಿ ನಿರತರಾಗಿ ತಂದೆಗೆ ನೆರವು ನೀಡುತ್ತಾ ತಂದೆಗೆ ತಕ್ಕ ಮಕ್ಕಳಾಗಿ ಕಾಲಯಾಪನೆ ಮಾಡುತ್ತಿದ್ದರು. ಯೌವನ ಪ್ರಾಪ್ತವಾಗುತ್ತಲೇ ಇವರಿಬ್ಬರಿಗೂ ಬಸಪ್ಪನು ಸತ್ಕುಲ ಪ್ರಸೂತೆಯರಾದ ಕನ್ಯೆಯರನ್ನು ತಂದು ವಿವಾಹ ಮಾಡಿದನು. ಕಾಲಕ್ರಮದಲ್ಲಿ ವಿಧಿಯ ದುರ್ಯೋಗದಿಂದ ಬಸಪ್ಪನು ಶಿವಾಧೀನನಾದನು. ತರುವಾಯ ಚೌಡಪ್ಪ - ಭದ್ರಪ್ಪರೀರ್ವಗೂ ತಾಯಿಯನ್ನು ಸಂತೈಸಿ, ತಮ್ಮ ಪಾಲಿಗೆ ಪ್ರಾಪ್ತವಾದ ಭೂಮಿಯನ್ನು ಕಾಲಕಾಲಕ್ಕೆ ಕೃಷಿ ರೂಪದಿಂದ ಅಭಿವೃದ್ಧಿಪಡಿಸುತ್ತಾ ಬೇಸಾಯದಲ್ಲಿ ನಿರತರಾಗಿ ಕಾಲಮಾಪನೆ ನಡೆಸುತ್ತಿದ್ದರು" ಎಂದು ತಿಳಿಸುತ್ತಾ ನಂತರ ಅವರು ಚೌಡಪ್ಪ - ಭದ್ರಪ್ಪರವರುಗಳನ್ನು ಅದೃಷ್ಟವಂತರನ್ನಾಗಿಸಲು ಮುಂದಾಗುತ್ತಾರೆ. ಮೇಲಿನದು ಅನೇಕ ಆಧಾರಗಳಿಂದ ತಿಳಿದುಬರುವಂತಹ ಘಟನೆ. ಆದರೆ ಅವರಿಗೆ ರಾಜ್ಯಪ್ರಾಪ್ತವಾಗಿರುವ ವಿಷಯದ ಪ್ರಸ್ತಾಪ ಮಾತ್ರ ಸ್ವಲ್ಪ ನಂಬಲು ಸಾಧ್ಯವೆಂದೆನಿಸುತ್ತದೆ. ಆದರೆ ನಮ್ಮ ಸಂಸ್ಕೃತಿಯಲ್ಲಿ ಪ್ರತಿಯೊಂದು ಘಟನೆಗೂ ಒಂದೊಂದು ಪುರಾಣ ಮಿಶ್ರಿತವಾದ ಕಥೆಯನ್ನು ಹೇಳುವುದು ವಾಡಿಕೆ. ಅದೇ ರೀತಿಯಲ್ಲಿ ಕೆಳದಿ ಅರಸರ ಉಗಮದಲ್ಲಿಯೂ ಈ ಪುರಾಣ ಕಥೆ ಬೆಳೆದು ಬಂದಿದೆ.

ಕಥೆಯ ಪಾಠ ಈ ಕೆಳಗಿನ ರೀತಿಯಲ್ಲಿರುತ್ತದೆ. ಒಂದು ದಿನ ಚೌಡಗೌಡನು ತನ್ನ ವ್ಯವಸಾಯದ ಭೂಮಿಯಲ್ಲಿ ಕೆಲಸವನ್ನೆಲ್ಲ ಮುಗಿಸಿಕೊಂಡು ಮನೆಗೆ ಹಿಂತಿರುಗುವಾಗ ಆಯಾಸವಾಗಿದ್ದರಿಂದ ಹತ್ತಿರದಲ್ಲಿರುವ ಒಂದು ಮಾವಿನ ಮರದ ಕೆಳಗೆ ಮಲಗಿ ವಿಶ್ರಮಿಸಿಕೊಳ್ಳಲು, ಸ್ವಲ್ಪ ಹೊತ್ತಿನಲ್ಲಿಯೇ ಗಾಢನಿದ್ರೆ ಬಂದಿತು. ಅದೇ ಸಮಯದಲ್ಲಿ ಮಾರ್ಗಸ್ಥರಾಗಿಕ ವೆಂಕಟಾದ್ರಿ ಯಜಮಾನರೆಂಬ ವಿಪ್ರಶ್ರೇಷ್ಠರೊಬ್ಬರು ಅಲ್ಲಿಗೆ ಬಂದಾಗ ಪ್ರಸಂಗವಶಾತ್ ಅದ್ಭುತವೊಂದನ್ನು ಕಂಡರು. ಮಾವಿನ ಮರದ ಕೆಳಗೆ ಮಲಗಿರುವ ಚೌಡಗೌಡನ ತಲೆಯ ಮೇಲ್ಭಾಗದಲ್ಲಿ ನಾಗಸರ್ಪವೊಂದು ಹೆಡೆಯಾಡಿಸುತ್ತಾ ಅವನ ಮುಖಕ್ಕೆ ನೆರಳನ್ನುಂಟುಮಾಡಿತ್ತು. ಇದನ್ನು ನೋಡಿದ ವೆಂಕಟಾದ್ರಿಜೋಯ್ಸರು ಕ್ಷಣ ಮಾತ್ರದಲ್ಲಿ ಸ್ತಬ್ಧರಾಗಿ ಕುತೂಹಲಚಿತ್ತದಿಂದ ಮುಂದಿನ ಘಟನೆಗಳನ್ನು ನಿರೀಕ್ಷಿಸುತ್ತಿದ್ದರು.

ಇತ್ತ ಬಹು ಹೊತ್ತಾದರೂ ತನ್ನ ಮಗನು ಮನೆಗೆ ಬಾರದೇ ಇದ್ದುದರಿಂದ ಚಿಂತಾಕ್ರಾಂತಳಾದ ಬಸವಮಾಂಬೆಯು ಚೌಡಗೌಡನನ್ನು ಹುಡುಕಿಕೊಂಡು ಹೋಗುತ್ತಾ ಗದ್ದೆಯ ಹತ್ತಿರ ಬರುವಾಗ್ಗೆ. ಅಲ್ಲಿ ನಿಂತಿರುವ ತೇಜಸ್ವೀ ಬ್ರಾಹ್ಮಣನನ್ನು ಮತ್ತು ಮರದ ಕೆಳಗೆ ನಿದ್ದೆ ಮಾಡುತ್ತಿದ್ದ ತನ್ನ ಮಗನ ತಲೆಯ ಮೇಲ್ಭಾಗದಲ್ಲಿ ಹೆಡೆಯಾಡಿಸುತ್ತಿರುವ ನಾಗಸರ್ಪವನ್ನೂ ಕಂಡು ಬೆರಗಾದಳು. ತದನಂತರ ಅವಳು ತನ್ನ ಮಗನಿಗೆ ಸರ್ಪವು ಏನು ಮಾಡುವುದೋ ಎಂದು ಗಾಬರಿಯಿಂದ ಅರಚಿಕೊಳ್ಳಲು ಪ್ರಯತ್ನಿಸುವ ಸಂದರ್ಭದಲ್ಲಿ ಜೋಯ್ಸರು ಅವಳಿಗೆ ಧೈರ್ಯ ಹೇಳಿ ಸುಮ್ಮಾನಾಗಿಸಿ "ಸ್ವಲ್ಪ ಕಾಲ ಏನೂ ಸದ್ದು ಮಾಡಬೇಡ. ನಿನ್ನ ಮಗನು ಬಹು ಪುಣ್ಯಶಾಲಿ ಮುಂದೇ ಅವನಿಗೆ ರಾಜ್ಯಾಧಿಪತ್ಯಯೋಗವಿದೆ" ಎಂದರು. ಕೂಡಲೆ ಗೌಡನು ಜೋಯ್ಸರ ಪೂರ್ವೇತಿಹಾಸವನ್ನು ತಿಳಿದು ಕೆಲವು ಕಾಲ ಇಲ್ಲಿಯೇ ಇರಲು ಪ್ರಾರ್ಥಿಸಿದನು.

ಮೇಲೆ ಉಲ್ಲೇಖಿಸಿರುವ ವೆಂಕಟಾದ್ರಿ ಮೂಲತಃ ಆನೆಗೊಂದಿ ಪಟ್ಟಣದ ನಿವಾಸಿಗಳಾಗಿದ್ದರು. ಕೆಲವು ಸಾಮಾಜಿಕ ತೊಡೆರುಗಳಿಂದಾಗಿ ಮನೆಯನ್ನು ತೊರೆದು ಅನೇಕ ಸ್ಥಳಗಳಲ್ಲಿ ಸಂಚರಿಸುವಾಗ ಹಳ್ಳಿಬೈಲಿನ ಹತ್ತಿರ ಕಂಡ ಮೇಲ್ಕಂಡ ದೃಶ್ಯವು ಇವರು ಅಲ್ಲಿಯೇ ನಿಲ್ಲುವಂತೆ ಮಾಡಿತು.

ಇದಕ್ಕೆ ಸಂಬಂಧಿಸಿದಂತೆಯೇ ಗುಂಡಾಜೋಯಿಸ್ ರವರು ಮತ್ತೊಂದು ಸನ್ನಿವೇಶವನ್ನು ಬರೆದಿದ್ದಾರೆ. ಗೌಡನ ಹಸುವೊಂದು ಕೆಲವು ದಿನಗಳವರೆಗೆ ಹಾಲನ್ನು ಕೊಡುತ್ತಿರಲಿಲ್ಲ. ದನಕಾಯುವ ಹುಡುಗನೊಡನೆ ಕಾರಣವನ್ನು ಶೋಧಿಸಲಾಗಿ, ಹಸುವು ಮೇಯಲು ಹೊರಟಾಗ ಅದನ್ನು ಹಿಂಬಾಲಿಸಲು ಅದು ಹತ್ತಿರದಲ್ಲಿರುವ ಹುತ್ತವೊಂದರ ಮೇಲೆ ಹಾಲು ಸುರಿಸುತ್ತಿರುವುದು ಕಂಡುಬಂದಿತು. ಕೂಡಲೇ ಎಲ್ಲರೂ ಸೇರಿ ಹುತ್ತವನ್ನು ಅಗೆಸಲಾಗಿ ಈಶ್ವರಲಿಂಗವೊಂದು ಗೋಚರಿಸಿತು. ಇದನ್ನು ಕಂಡು ಆಶ್ಚರ್ಯದಾನಂದ ತುಂಬಿದವರಾಗಿ ಅದರ ಸುತ್ತಲೂ ಚೊಕ್ಕಟ ಮಾಡಿಸಿ ಅದಕ್ಕೆ ಪೂಜಾದಿ ಕಾರ್ಯಗಳನ್ನು ಏರ್ಪಡಿಸಿದರು. ಅದೇ ದಿನ ರಾತ್ರಿ ಗೌಡನ ಕನಸಿನಲ್ಲಿ ವಿಪ್ರಶ್ರೇಷ್ಠನೊಬ್ಬನು ಕಾಣಿಸಿಕೊಂಡು. ಅರಣ್ಯದಲ್ಲಿನ ಹುತ್ತದೊಳಗಿಂದ ಉದ್ಭವಿಸಿದ ಲಿಂಗವು ಶ್ರೀ ರಾಮೇಶ್ವರಲಿಂಗವೆಂದೂ ಇದರ ಪೂಜಾದಿಗಳನ್ನು ನಿಷ್ಠೆಯಿಂದ ನಡೆಸಿಕೊಂಡು ಬರತಕ್ಕದ್ದೆಂದೂ. ಶೀಘ್ರದಲ್ಲಿಯೇ ಒಂದು ಪ್ರಾತ್ಯದ ಅಧಿಪತಿಯಾಗುವ ಯೋಗವಿದೆಯೆಂದೂ ತಿಳಿಸಿ ಅಂತರ್ಧಾನನಾದನು

ನಂತರ ಇವನಿಗೆ ಹಾವು ಸನ್ನೆಮಾಡಿದ್ದ ಸ್ಥಳದಲ್ಲಿ ಹೇರಳವಾಗಿ ದ್ರವ್ಯ ಸಿಕ್ಕಿ ಇದರಿಂದ ರಾಜ್ಯ ಸ್ಥಾಪಿಸಿದರೆಂದು ಪುರಾಣ ಕಥೆಗಳು ಹಾಗೂ ಜನಪದರೂಪದಲ್ಲಿ ಹೇರಳವಾಗಿ ಕಂಡುಬರುತ್ತದೆ. ಆದರೆ ಇಲ್ಲಿ ಕೆಳದಿ ಅರಸರ ಮೂಲದ ಬಗ್ಗೆ ದೊರಕಿರುವ ವಿಷಯಗಳೆಲ್ಲವೂ ಸಹ ಪುರಾಣ ಮಿಶ್ರಿತವಾದ ಘಟನೆಗಳಾಗಿಯೇ ಹೊರತು ಮಿಶ್ರಿತವಾದ ಇತಿಹಾಸದ ಮೇಲೆ ಅಪಾರ ನಂಬಿಕೆಯಿತ್ತೇ ವಿನಃ ಸತ್ಯವಾದ, ಶುದ್ಧವಾದ ಇತಿಹಾಸದಲ್ಲಿ ಹೆಚ್ಚಿಗೆ ನಂಬಿಕೆ ಕಂಡುಬರುತ್ತಿರಲಿಲ್ಲ. ಇದು ಸತ್ಯವೂ ಕೂಡ, ಇಂದೂ ಸಹ ಮನುಷ್ಯನು ಕಾನೂನು ಕಟ್ಟೆಗಳಿಗೆ ಬೆಲೆಕೊಡುವುದಿಲ್ಲ. ಆದರೆ ಧಾರ್ಮಿಕ ಕಟ್ಟೆಗಳಿಗೆ ಸಂಪೂರ್ಣ ತಲೆಬಾಗಿ ನಡೆಯುವುದನ್ನು ನಾವು ನೋಡುತ್ತಿರುವುದೇ ಆಗಿರುತ್ತದೆ. ಈ ನಿಸರ್ಗ ಪ್ರಕೃತಿಯ ಬದಲಾವಣೆಯು ನಂಬಲು ಅಸಾಧ್ಯವಾಗಿದ್ದರೂ. ಇಂತಹ ಪುರಾಣ ಕಥೆಗಳಂತೂ ದೇಶದುದ್ದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಪ್ರಚಲಿತದಲ್ಲಿರುವುದು ಕಂಡುಬರುತ್ತದೆ.

ಮೇಲಿನದೆಲ್ಲವೂ ಪುರಾಣ ಆಧಾರಗಳಾದರೆ ಗುಂಡಾಜೋಯಿಸರು ಅವರ ಮೂಲವನ್ನು ವಿಜಯನಗರದ ಅರಸರಾದ ಕೃಷ್ಣದೇವರಾಯನಿಂದ ಅನುಮತಿಪಡೆದು ಈ ಪ್ರಾಂತ್ಯದ ಜವಾಬ್ದಾರಿಯನ್ನು ಪಡೆದುಕೊಂಡು ಅವರಿಗೆ ಸಾಮಂತರಾಗಿ ಆಳ್ವಿಕೆ ನಡೆಸಲಾರಂಭಿಸಿದರೆಂದೂ ಕೆಲವು ಆಧಾರಗಳಿಂದ ಸ್ಪಷ್ಟಪಡಿಸಲು ಪ್ರಯತ್ನಿಸುತ್ತಾರೆ. ಇದಕ್ಕೆ ಅನೇಕ ಆಧಾರಗಳು ಲಭ್ಯವಾಗಿವೆ. ಅತಿ ಬಡವರಾದವರು ದಿಢೀರನೆ ಶ್ರೀಮಂತರಾದರೆ ನೋಡುವವರಿಗೆ ಅಸಹನೆ ಅಥವಾ ಹೊಟ್ಟೆಕಿಚ್ಚು ಬರುವುದು ಸಹಜವೇ ತಾನೆ, ಇದರಂತೆ ಕೆಳದಿಯ ಹಳ್ಳಿಬೈಲಿನಲ್ಲಿ ಚೌಡಪ್ಪ - ಭದ್ರಪ್ಪರೀರ್ವರ ಉತ್ಕರ್ಷವನ್ನು ಮತ್ತು ಅಭಿವೃದ್ಧಿಯನ್ನು ಕೇಳಿ ತಿಳಿದಿದ್ದ ವಿಜಯನಗರದ ಅಸ್ಥಾನದಲ್ಲಿನ ಕೆಲವು ಅದಿಕಾರಿಗಳಿಗೆ ಅಸಹನೆಯುಂಟಾಯಿತು. ಅವರೆಲ್ಲರೂ ರಾಜನಲ್ಲಿ ಕೆಳದಿ ನಾಯಕರ ಬಗ್ಗೆ ದುರಾಭಿಪ್ರಾಯ ಮೂಡುವಂತೆ ದೂರಿತ್ತರು. ಕೆಳದಿ ಸಹೋದರರ ಖ್ಯಾತಿಯನ್ನೂ ಮತ್ತು ಅವರಿಗೆ ಕರಗತವಾದ ದ್ರವ್ಯದ ಸಂಗತಿಯನ್ನೂ ಮೊದಲೇ ಅರಿತಿದ್ದ ರಾಜನಿಗೆ ಅವರನ್ನು ನೋಡಬೇಕೆಂಬ ಕುತೂಹಲವುಂಟಾಗಿ, ಕೂಡಲೇ ಓಲೆಯನ್ನು ಬರೆಯಿಸಿ, ವಿಜಯನಗರದ ರಾಯಭಾರಿಯನ್ನು ಇಕ್ಕೇರಿಗೆ ಕಳುಹಿಸಿ ಆಸ್ಥಾನಕ್ಕೆ ಬರಲು ಚೌಡಗೌಡ - ಭದ್ರಗೌಡರನ್ನು ಆಹ್ವಾನಿಸಿದನು.

ಸಹೋದರರು ಈ ಆಹ್ವಾನವನ್ನು ಅಂಗೀಕರಿಸಿ ಮಿತಪರಿವಾರದವರೊಡನೆ ವಿಜಯನಗರದ ಆಸ್ಥಾನಕ್ಕೆ ರಾಜಮರ್ಯಾದೆ ಪಡೆದು ಪ್ರವೇಶಿಸಿದರು. ಚಕ್ರವರ್ತಿಯಾದ ಕೃಷ್ಣದೇವರಾಯನು ಇವರಿಬ್ಬರನ್ನು ಉಚಿತಾಸನದಲ್ಲಿ ಕುಳ್ಳರಿಸಿ, ಕೂಸಲ ಪ್ರಶ್ನೆಗಳು ಜರುಗಿದ ತರುವಾಯ ಅವರನ್ನು ಕುರಿತು “ಬಡವರೂ, ರೈತರೂ ಆದ ನೀವು ಹೇಗೆ ಇಷ್ಟು ಪ್ರಾಬಲ್ಯವನ್ನು ಹೊಂದಿದಿರಿ? ನಿಮಗೆ ನಿಕ್ಷೇಪಗಳು ಸಿಕ್ಕಿವೆ ಎಂದು ಕೇಳಿದ್ದೇವೆ, ಅದನ್ನು ರಾಜಭಂಡಾರಕ್ಕೆ ಒಪ್ಪಿಸದೆ ನೀವುಗಳೇ ಉಪಯೋಗಿಸಿಕೊಂಡುದು ರಾಜನೀತಿಗೆ ವಿರೋಧವಾಗಿದೆ. ಅದ್ದರಿಂದ ಅವುಗಳನ್ನು ರಾಜ ಭಂಡಾರಕ್ಕೆ ಒಪ್ಪಿಸಿರಿ” ಎಂದು ಕೇಳಿದನು. ಕೂಡಲೇ ಸಹೋದರರು ತಮಗೆ ನಿಕ್ಷೇಪ ದೊರೆತ ಸಂಗತಿಯನ್ನು ಮತ್ತು ತಮಗೆ ಗೋಚರಿಸಿದ ಕನಸಿನ ವಿವರಗಳನ್ನೂ ಅದರಂತೆ ಕೆಳದಿ ಶ್ರೀ ರಾಮೇಶ್ವರ ಲಿಂಗವು ಉದ್ಭವವಾಗಿ ಕೃಪೆ ಮಾಡಿದ ವಿವರಗಳನ್ನೂ ಸಂಪೂರ್ಣವಾಗಿ ಅರಿಕೆ ಮಾಡಿಕೊಂಡರು.

ಇದನ್ನು ಕೇಳಿ ರಾಯನು “ನೀವು ಬಹು ಪುಣ್ಯಶಾಲಿಗಳಿರುವಿರಿ; ದುಷ್ಟರಾದ ಆಸ್ಥಾನದ ಅಧಿಕಾರಿಗಳ ಮಾತು ಕೇಳಿ ನಿಮ್ಮನ್ನು ನೋಯಿಸಿದ್ದು ತುಂಬಾ ಅನುಚಿತವಾಗಿದೆ. ಆದ್ದರಿಂದ ನೀವುಗಳು ನಾವು ಮಾಡುವ ಎಲ್ಲಾ ರಾಜಕಾರ್ಯಗಳಿಗೂ

ಬೆಂಬಲರಾಗಿದ್ದುಕೊಂಡು ಸನ್ಮಿತ್ರರಾಗಿರಬೇಕು" ಎಂದು ಹೇಳಿ ಅವರಿಗೆ ಛತ್ರ, ಚಾಮರ, ಪಲ್ಲಕ್ಕಿ ಮೊದಲಾದ ಉಡುಗೊರೆಗಳಿಂದ ಸನ್ಮಾನಿಸಿ ಕೆಲವು ದಿನಗಳವರೆಗೆ ತನ್ನ ಅರಮನೆಯಲ್ಲಿಯೇ ಇರಿಸಿಕೊಂಡು ಸತ್ಕರಿಸಿದನು.


ಕೃಷ್ಣದೇವವರಾಯನ ಅಪ್ಪಣೆಯಂತೆ ನಾಯಕರು ಸಾಮ್ರಾಜ್ಯದ ಒಂದು ಭಾಗದಲ್ಲಿ ಬೇಡರೂ ಮತ್ತು ಇತರ ದುಷ್ಟರೂ ಕೂಡಿಕೊಂಡು ಲಕ್ಷ್ಯವಿಲ್ಲದೆ ಪ್ರಜೆಗಳನ್ನು ಬಹುವಾಗಿ ಹಿಂಸಿಸುತ್ತಿದ್ದುದನ್ನು ಹತ್ತಿಕ್ಕಲು ಅಜ್ಞೆ ಪಡೆದು ಇದರಲ್ಲಿ ಚೌಡಪ್ಪ - ಭದ್ರಪ್ಪ ಇವರಿಬ್ಬರೂ ಪರಾಕ್ರಮದಿಂದ ಹೋರಾಡಿ ದಂಗೆಯನ್ನು ಹತ್ತಿಕ್ಕಿ ಕೃಷ್ಣದೇವರಾಯ ಇವರನ್ನು ಸನ್ಮಾನಿಸಿ ಚಂದ್ರಗುತ್ತಿ, ಕೆಳದಿ, ಇಕ್ಕೇರಿ, ಪೆರ್ಬಯಲು, ಯಲಗಳಲೆ, ಮೋದೂರು, ಕಲಿಸೆ ಮತ್ತು ಪಾತವಾಡಿ ಎಂಬ ಎಂಟು ಮಾಗಣೆಗಳನ್ನಿತ್ತು, ಇದನ್ನು ವಂಶಪಾರಂಪರ್ಯವಾಗಿ ಆಳಿ ಅನುಭವಿಸಿಕೊಂಡು ಬರುತ್ತಾ ನಮಗೆ ಸಹಾಯಕರಾಗಿರಬೇಕೆಂದು ಹೇಳಿ ಶಾಸನ ಬರೆಯಿಸಿ, ಅವರನ್ನು ಪಲ್ಲಕ್ಕಿಯಲ್ಲಿ ಕೂರಿಸಿ "ಕೆಳದಿ ಮೂಲಸಂಸ್ಥಾನದ ಮೊನ್ನೆಯ ಚೌಡಪ್ಪ ನಾಯಕ" ಎಂದು ಬಿರುದನ್ನಿತ್ತು ಗೌರವಿಸಿ ಮಿತಪರಿವಾರದೊಡನೆ ಕೆಳದಿಗೆ ಕಳುಹಿಸಿಕೊಟ್ಟನು ಎಂದು ಕೆಳದಿ ಗುಂಡಾಜೋಯಿಸ್‌ರವರು ವಿವರಣೆ ನೀಡುತ್ತಾರೆ. ಇದನ್ನು ಅನೇಕ ವಿದ್ವಾಂಸರೂ ಸಹ ಅನುಮೋದಿಸಿರುವುದು ಕಂಡುಬರುತ್ತದೆ. ಇದಕ್ಕೆ ನಿದರ್ಶನವೆಂಬಂತೆ ಅನೇಕ ಶಾಸನಗಳಲ್ಲಿ ಹಾಗೂ ಸಾಹಿತ್ಯ ಗ್ರಂಥಗಳಲ್ಲಿಯೂ ಇದೇ ವ್ಯಕ್ತವಾಗಿರುವುದನ್ನು ನಾವು ಕಾಣಬಹುದಾಗಿದೆ.

"ಇಕ್ಕೇರಿ ಅರಸರು" ಎಂಬ ಕೃತಿಯಲ್ಲಿ ನಿರೂಪಿಸಿರುವಂತೆ ಈ ಪಾಳೆಯಪಟ್ಟು ಕ್ರಿ.ಶ. ೧೪೯೯ರಲ್ಲಿ ಉದಯಿಸಿತು. ಇದರ ಪ್ರಥಮ ದೊರೆ ಚೌಡಪ್ಪ ನಾಯಕನು. ಕೆಳದಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಹದಿಮೂರು ವರ್ಷಗಳವರೆಗೆ ಆಳ್ವಿಕೆ ನಡೆಸಿದ್ದನು. ಕ್ರಿ.ಶ. ೧೫೧೨ರಲ್ಲಿ ರಾಜಧಾನಿಯು ಕೆಳದಿಯಿಂದ ಇಕ್ಕೇರಿಗೆ ವರ್ಗಾಯಿಸಲ್ಪಟ್ಟಿತು. ಎರಡನೆ ರಾಜಧಾನಿ ಇಕ್ಕೇರಿಯಲ್ಲಿ ಕ್ರಮವಾಗಿ ಸಾದಶಿವ ನಾಯಕ, ದೊಡ್ಡ ಸಂಕಣ್ಣ, ಚಿಕ್ಕಸಂಕಣ್ಣ, ರಾಮರಾಜನಾಯಕ, ಹಿರಿಯ ಮೆಂಕಟಪ್ಪ ನಾಯಕ ಮತ್ತು ವೀರಭದ್ರ ನಾಯಕರವರುಗಳು ಕ್ರಮವಾಗಿ ಕ್ರಿ.ಶ. ೧೫೧೪ ರಿಂದ ೧೬೪೫ರವರೆಗೂ ಆಳಿದರು. ಅಂದಿನ ಸಂಸ್ಕೃತಿಯನ್ನು ವಿದೇಶಿ ಪ್ರವಾಸಿಗರಾದ, ಇಟಲಿಯನ್ ಪ್ರವಾಸಿ, ಪ್ರಿಯತ್ರೋಡೆಲ್ಲಾವಲ್ಲೆ ಹಾಗೂ ಕ್ರಿ.ಶ. ೧೬೩೭ರಲ್ಲಿ ಯೂರೋಪಿಯನ್ ಪ್ರವಾಸಿ, ಪೀಟರ್ ಮಂಡಿ ಮುಂತಾದವರು ಕಣ್ಣಾರೇ ಕಂಡು ವರ್ಣಿಸಿದ್ದಾರೆ. ಇಷ್ಟೇ ಅಲ್ಲದೆ ಕೆಳದಿ ಅರಸರ ಸಮಗ್ರ ಇತಿಹಾಸವನ್ನೂ ತಿಳಿಯಲು ಅನೇಕ ಸಾಧನ ಸಾಮಗ್ರಿಗಳು ಲಭ್ಯವಿದ್ದು ಅವುಗಳೆಲ್ಲವೂ ಇಂದಿಗೂ ಸಹ ಇತಿಹಾಸದ ಮರೆಯಲ್ಲಿಯೂ ಅಲ್ಲಲ್ಲಿಯೂ ಹರಡಿಕೊಂಡಿವೆ. ತಾಮ್ರಪಟಗಳು, ನಾಣ್ಯಗಳು, ಐತಿಹಾಸಿಕ ಪರಿಸರಗಳು, ಪ್ರಾಚ್ಯ ಅವಶೇಷಗಳು, ಕಡತಗಳು, ಓಲೆಗರಿಗಳು, ಚಾರಿತ್ರಿಕ ದಾಖಲೆಗಳು, ವಿದೇಶೀಯ ಪ್ರವಾಸಿಗರ ಹಾಗೂ ಇತರ ಉಲ್ಲೇಖಗಳು ಈ ದಿಸೆಯಲ್ಲಿ ಸಂಶೋಧನೆಗೆ ಗಮನಾರ್ಹ ಬೆಳಕನ್ನು ಚೆಲ್ಲುತ್ತವೆ.

**ವಂಶವೃಕ್ಷ**

ಕ್ರಿ.ಶ. ೧೪೯೯ ರಿಂದ ೧೭೬೩ ರವರೆಗೆ ಮಲೆನಾಡಿನ ಮಡಿಲಿನಲ್ಲಿ ವೈಭವದ ಆಳ್ವಿಕೆ ನಡೆಸಿದ ಕೆಳದಿ ಅರಸರು, ಮೊದಲು ವಿಜಯನಗರ ಸಾಮ್ರಾಜ್ಯದ ಸಾಮಂತರಾಗಿ ಆಡಳಿತ ಪ್ರಾರಂಭಿಸಿ ೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯವು ರಕ್ಕಸತಂಗಡಿ ಯುದ್ಧದಲ್ಲಿ ಸಂಪೂರ್ಣವಾಗಿ ಸೋತು ಪತನದ ಹಾದಿ ಹಿಡಿದಿದ್ದಾಗ ನಾಯಕನು ಸ್ವತಂತ್ರವಾಗಿ ಆಳ್ವಿಕೆ ನಡೆಸಿಕೊಂಡು ಬರಲಾರಂಭಿಸಿದರು. ದೊರಕಿರುವ ಶಾಸನಾಧಾರ ಹಾಗೂ ಸಾಹಿತ್ಯಧಾರಗಳ ಮೇಲೆ ನಾಯಕರ ಕಾಲಾನುಕ್ರಮವನ್ನು ಈ ಕೆಳಕಂಡಂತೆ ಕೆಳದಿ ಗುಂಡಾಜೋಯಿಸ್‌ರವರು ವರ್ಗೀಕರಿಸಿರುವುದು ಅವರ ಬಿದನೂರಿನ ಕೆಳದಿ ನಾಯಕರು ಎಂಬ ಪುಸ್ತಕದಲ್ಲಿ ಕಂಡುಬರುತ್ತದೆ. ಇದರಿಂದಾಗಿ ಇಕ್ಕೇರಿ ನಾಯಕರ ಆಡಳಿತ ಪದ್ಧತಿ, ಧರ್ಮ, ಸಂಸ್ಕೃತಿ ಹಾಗೂ ರಾಜ್ಯದ ಏಳು - ಬೀಳು ಮೊದಲಾದ ಅಂಶಗಳನ್ನೂ ಗಮನಿಸಬಹುದಾಗಿದೆ.

# ಕೆಳದಿಯ ನಾಯಕರ ವಂಶವೃಕ್ಷ



ಮೇಲಿನ ಕಾಲಾನುಕ್ರಮಿಕೆಯನ್ನು ಅನೇಕ ಸಾಹಿತ್ಯ ಹಾಗೂ ಶಾಸನಗಳು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಒಂದೇ ಕಾಲಾವಧಿಯನ್ನು ಸೂಚಿಸುತ್ತವೆ. ಮೇಲೆ ಸೂಚಿಸಿರುವ ವಂಶವೃಕ್ಷವನ್ನು ಖ್ಯಾತ ಸಂಶೋಧಕರಾದ ಅಳ್ವಾರೀಸ್, ಡಾ. ಸ್ವಾಮಿನಾಥನ್, ಡಾ. ಕೆ.ಎನ್ ಚಿಟ್ನೀಸ್ ಮೊದಲಾದವರ ನಿರಂತರ ಸಂಶೋಧನೆಯು ಮೇಲಿನದನ್ನೆ ಅನುಮೋದಿಸುತ್ತದೆ.

***

## ೨. ಆಡಳಿತ ಪದ್ಧತಿ

ಇಕ್ಕೇರಿ ಅರಸರ ಸಂಸ್ಥಾನದ ಆಳ್ವಿಕೆಯು ವಿಶಿಷ್ಟವಾದುದ್ದಾಗಿತ್ತು. ಇವರ ಆಳ್ವಿಕೆಯ ಕಾಲವನ್ನು ಶಿಸ್ತಿನ ಸಿಪಾಯಿ ಕಾಲವೆಂದೇ ಇತಿಹಾಸದಲ್ಲಿ ಕರೆಯಲಾಗಿದೆ. ಇವರು ಆಡಳಿತಕ್ಕೆ ಅನುಕೂಲಕರವಾದ ದೃಷ್ಟಿಯಿಂದ ಮುಖ್ಯವಾಗಿ ಎರಡು ಭಾಗಗಳಾಗಿ ವಿಭಾಗಿಸಿಕೊಂಡಿದ್ದನ್ನು ಗಮನಿಸಬಹುದಾಗಿದೆ.

(೧) ರಾಜ್ಯದ ಆಡಳಿತ (ಕೇಂದ್ರ ಆಡಳಿತ)
(೨) ಪ್ರಾಂತ್ಯಾಡಳಿತದ ಅಥವಾ ಗ್ರಾಮೀಣ ಆಡಳಿತ

ವಿಜಯನಗರಸರ ಆಳ್ವಿಕೆಯಲ್ಲಿದ್ದಂತೆಯೇ ಗ್ರಾಮಗಳನ್ನು ವಿಶೇಷ ಸಂದರ್ಭಗಳಲ್ಲಿ ಪ್ರತ್ಯೇಕ ಘಟಕಗಳಾಗಿ ಪರಿಗಣಿಸಲಾಗುತ್ತಿತ್ತು. ಕೆಳದಿ ಅರಸರ ಆಳ್ವಿಕೆಯಲ್ಲಿ ಹಳ್ಳಿಯು ವಿಶಿಷ್ಟವಾಗಿ ಮಹತ್ವದ ಅಧಿಕಾರ ಹೊಂದಿದ್ದಿತ್ತೆನ್ನಬಹುದು.

ರಾಜ್ಯರಕ್ಷಣೆ ಹಾಗೂ ಪ್ರಜಾಪಾಲನೆಯೇ ರಾಜನ ಪ್ರಮುಖ ಕರ್ತವ್ಯವಾಗಿದ್ದಿತ್ತು. ಅಷ್ಟೇ ಅಲ್ಲದೆ ಜನರೂ ರಾಜನನ್ನು "ರಾಜಾ ಪ್ರತ್ಯಕ್ಷ ದೇವತಾ" ಎಂದು ತಿಳಿದಿದ್ದವರಾಗಿದ್ದರು. ರಾಜರ ಹೆಸರಿನಲ್ಲಿಯೇ ದೇವಾಲಯಗಳು, ಮಠಗಳು ನಿರ್ಮಾಣವಾಗುತ್ತಿದ್ದವು. ಉದಾಹರಣೆಗೆ ಕ್ರಿ.ಶ. ೧೬೭೧ರಲ್ಲಿ ಲೋಕಯ್ಯ ಎಂಬುವನು ಚೆನ್ನಮ್ಮಾಜಿಯವರಿಗೆ ಶ್ರೇಯೋಭಿವೃದ್ಧಿಯುಂಟಾಗುವುದಕ್ಕಾಗಿ ಸಿರ್ಸಿಯ ಹಳ್ಳಿಯ ಭೂಮಿಯನ್ನು ಬಸವಲಿಂಗ ದೇವರಿಗೆ ನೀಡಿದ್ದಾನೆ. ಕ್ರಿ.ಶ. ೧೬೭೦ರ ಶಾಸನದಲ್ಲಿ ಸೋಮಶೇಖರ ನಾಯಕನ ಹೆಸರಿನಲ್ಲಿ ಕಟ್ಟಿಸಿದ ಮಹತ್ತಿನ ಮಠಕ್ಕೆ ಬಿಟ್ಟ ದಾನವನ್ನು ಶಾಸನವೊಂದು ತಿಳಿಸುತ್ತದೆ. ಶಿವರಾಜಪುರದಲ್ಲಿ ಶಿವಪ್ಪನಾಯಕನ ಹೆಸರಿನಲ್ಲಿ ಕಟ್ಟಿಸಿದ ಮಠವನ್ನು ಗಮನಿಸಬಹುದು. ರಾಜರುಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡುತ್ತಿದ್ದರು. ಇದಕ್ಕೆ ನಿದರ್ಶನವೆಂಬಂತೆ ಕೆಲವು ಅರಸರು ಸ್ವತಃ ರಚಿಸಿರುವ ಕೃತಿಗಳು ಸಾಕ್ಷಿಯಾಗಿವೆ. ಕೆಳದಿ ಅರಸರ ಕಾಲದಲ್ಲಿ ದತ್ತು ತೆಗೆದುಕೊಳ್ಳುವ ಪದ್ಧತಿಯು ಜಾರಿಯಲ್ಲಿತ್ತು. ಕೆಳದಿ ಚೆನ್ನಮ್ಮಾಜಿಯು ತನಗೆ ಮಕ್ಕಳಿಲ್ಲದ ಕಾರಣ ಮರಿಯಪ್ಪಶೆಟ್ಟಿಯ ಮಗ ಬಸಪ್ಪನನ್ನು ದತ್ತು ತೆಗೆದುಕೊಂಡು ಅವನು ಇನ್ನೂ ಚಿಕ್ಕವನಾಗಿದ್ದ ಕಾರಣ, ಅವನನ್ನು ಮುಂದಿಟ್ಟುಕೊಂಡು ತಾನೇ ರಾಜ್ಯಭಾರ ನಡೆಸಿದುದ್ದಕ್ಕೆ ಆಧಾರಗಳಿವೆ. ರಾಜರ ಪಟ್ಟಾಭಿಷೇಕದ ಉತ್ಸವವು ಸಾಮಾನ್ಯವಾಗಿ ವಿಜೃಂಭಣೆಯಿಂದ ನಡೆಯುತ್ತಿತ್ತು. ರಾಜರಿಗೆ ಪಟ್ಟಾಭಿಷೇಕವಾಗುವ ಸಂದರ್ಭದಲ್ಲಿ ಸಂಸ್ಥಾನದ ಇತರೆಡೆಗಳ ದೇವಾಲಯಗಳಲ್ಲಿ ಉತ್ಸವ ಹಾಗೂ ವಿಶೇಷ ಪೂಜಾದಿ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯುತ್ತಿದ್ದವು. ಇಂತಹ ಸಂದರ್ಭದಲ್ಲಿ ರಾಜಕುಮಾರರ ಒಳತಿಗಾಗಿ ದಾನದತ್ತಿ ಕೊಡುವ ಪದ್ಧತಿಯು ಬೆಳೆದು ಬಂದಿತ್ತು. ಪಟ್ಟಾಭಿಷೇಕ ಕಾರ್ಯಕ್ರಮಗಳು ಹೆಚ್ಚಾಗಿ ಕೆಳದಿ, ಇಕ್ಕೇರಿ, ನಗರ ಅಂದರೆ ರಾಜಧಾನಿಗಳಲ್ಲಿಯೂ ನಡೆಯುತ್ತಿತ್ತು. ವಿದೇಶಿ ಪ್ರವಾಸಿಗರು ತಮ್ಮ ಪ್ರವಾಸಿ ಕಥನಗಳಲ್ಲಿ ರಾಜನ ದರ್ಬಾರ್‌ನ ಬಗ್ಗೆ ವರ್ಣಿಸುವುದು ಕಂಡುಬರುತ್ತದೆ. ಅವರ ಪ್ರಕಾರ ರಾಜನು ಎತ್ತರವಾದ ವೇದಿಕೆಯ ಮೇಲೆ ಕುಳಿತಿರುವುದನ್ನು ಕಂಡಿರುವುದಾಗಿ ಬರೆದಿದ್ದಾರೆ. ರಾಜನ ಹಿಂದೆ ಆಸ್ಥಾನಿಕರು ಹೆಚ್ಚಾಗಿ ಇರುತ್ತಿದ್ದರೆಂದು ಹೇಳಿದ್ದಾರೆ. ಇದನ್ನೆಲ್ಲಾ ಕ್ರಿ.ಶ. ೧೬೨೩ರಲ್ಲಿ ಇಕ್ಕೇರಿಗೆ ಭೇಟಿ ನೀಡಿದ ಪಿಯಾತ್ರೋದೆಲ್ಲಾವಲ್ಲೆ ಸಂಕ್ಷಿಪ್ತವಾಗಿ ಬರೆದಿದ್ದಾನೆ. ಡಾ. ಹೆಚ್.ಎಲ್. ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾ ಸಂಪುಟದ ನಾಲ್ಕನೇ ಸಂಪುಟದಲ್ಲಿ ಇದು ಉಲ್ಲೇಖನೀಯವಾಗಿದೆ. ಆಸ್ಥಾನದಲ್ಲಿ ನರ್ತಕಿಯರಿಗೂ, ವಾದ್ಯ ಬಾರಿಸುವವರಿಗೂ ಹೆಚ್ಚಿನ ಜಾಗವಿರುತ್ತಿತ್ತು. ಇದರಿಂದ ಅಲ್ಲಿ ಸಂಗೀತ ಹಾಗೂ ನೃತ್ಯಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಇತ್ತೆಂದು ತಿಳಿಯಬಹುದಾಗಿದೆ. ದಾನದರ್ಮಗಳನ್ನು ಮಾಡುವುದು, ಜನರ ಯೋಗಕ್ಷೇಮಗಳನ್ನು ಆಗಾಗ್ಗೆ ಪ್ರತ್ಯಕ್ಷವಾಗಿ ರಾಜ್ಯದಲ್ಲಿ ಸಂಚರಿಸಿ

ವಿಚಾರಿಸುವುದು ರಾಜರ ಪ್ರಮುಖ ಕರ್ತವ್ಯವೆಂದು ನಂಬಿದ್ದರು. ಇದರ ಜೊತೆಗೆ ದುಷ್ಟ ಶಿಷ್ಟರನ್ನೂ, ರಕ್ಷಕನೂ ತನ್ನನ್ನೂ ರಕ್ಷಿಸಿಕೊಳ್ಳುವುದು ರಾಜನಿಗೆ ಪ್ರಮುಖ ಕರ್ತವ್ಯವಾಗಿದ್ದಿತು. ಆಡಳಿತಾಂಗದಿಂದ ಪ್ರತ್ಯಕ್ಷವಾಗಿ ಅಥವಾ ಪರೀಕ್ಷವಾಗಿ ಮಠ, ದೇವಾಲಯ, ಚರ್ಚು, ಮಸೀದಿ ಮೊದಲಾದವುಗಳಿಂದ ತಮಗಾಗುತ್ತಿದ್ದ ತೊಂದರೆಗಳನ್ನು ಪ್ರಜೆಗಳು ಧೈರ್ಯವಾಗಿ ರಾಜರಲ್ಲಿ ಹೇಳಿಕೊಂಡು ಅದಕ್ಕೆ ಸೂಕ್ತ ಪರಿಹಾರ ಕಂಡುಕೊಳ್ಳುವ ಅವಕಾಶವಿದ್ದಿತ್ತು.

ಇಕ್ಕೇರಿ ಅರಸರು ತಮ್ಮ ಅಸ್ಥಾನದಲ್ಲಿ ಅಸ್ಥಾನದ ರಾಣಿಯರಿಗೂ ಸಹ ವಿಶೇಷವಾದ ಸ್ಥಾನಮಾನವನ್ನು ಕಲ್ಪಿಸಿದ್ದರು. ಇದಕ್ಕೆ ಸಾಕ್ಷಿ ಎಂಬಂತೆ ಇಕ್ಕೇರಿ ಅರಸರ ಆಳ್ವಿಕೆಯ ಕಾಲಾವಧಿಯಲ್ಲಿ ಇಬ್ಬರು ಪ್ರಬಲವಾದ ರಾಣಿಯರು ಕೆಳದಿಯನ್ನು ಆಳಿರುವುದನ್ನು ನೆನೆಯಬಹುದಾಗಿದೆ. ಇಕ್ಕೇರಿ ಸಂಸ್ಥಾನದ ರಾಣಿಯರೂ ಸಹ ರಾಜ್ಯದ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದರು. ಸೋಮಶೇಖರನಾಯಕನು ತನ್ನ ಹೆಂಡತಿಯಾಗುವಂತವಳು ಬುದ್ಧಿವಂತಳು, ವಿದ್ಯಾವಂತಳೂ ಆಗಿರಬೇಕೆಂದು ಅಪೇಕ್ಷಿಸಿದ್ದನೆಂದು ಕೆಳದಿಯ ಸಂಕ್ಷಿಪ್ತ ಇತಿಹಾಸದಲ್ಲಿ ಗುಂಡಾ ಜೋಯಿಸ್‌ರವರು ಬರೆದಿದ್ದಾರೆ. ವೀರ ಚೆನ್ನಮ್ಮಾಜಿಯು ಕೆಳದಿ ಅರಸರಲ್ಲಿಯೇ ಶ್ರೇಷ್ಠ ಆಡಳಿತಗಾರ್ತಿ ಎಂದು ಹೆಸರು ಪಡೆದವಳಾಗಿದ್ದಾಳೆ. ಕ್ಲಿಷ್ಟಕರ ಸನ್ನಿವೇಶದಲ್ಲಿ ಕೆಳದಿಯ ರಾಜ್ಯಾಧಿಕಾರವನ್ನು ವಹಿಸಿಕೊಂಡು ಚೆನ್ನಮ್ಮಾಜಿಯು ಅದರ ಪ್ರಗತಿಗಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟಳು. ಇದರಿಂದಾಗಿ ಇವಳು "ಮಹಾರಾಣಿ" ಎಂಬ ಬಿರುದಿಗೆ ಪಾತ್ರಳಾಗಿದ್ದಳು. ಕೆಳದಿ ಸಂಸ್ಥಾನದ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುವ ಲಿಂಗಣ್ಣ ಕವಿಯು ರಚಿಸಿರುವ ಕೆಳದಿ ನೃಪ ವಿಜಯದಲ್ಲಿ ಚೆನ್ನಮ್ಮಾಜಿಯನ್ನು ಕುರಿತು

*ಉನ್ನತ ಶುಭಗುಣಸಂ |*
*ಪನ್ನತೆಯಿಂದ ಕ್ಷಾತ್ರದಾನಧರ್ಮಾದಿಗಳಾ ||*
*ಚೆನ್ನಮ್ಮಾಜಿಗೆ ಸರಿಯಹ |*
*ಮನ್ನೆಯರಿಲೆನಿಸಿ ರಾಜ್ಯವಂ ರಕ್ಷಿಸಿದಳ್ ||*

ಎಂದು ಮಹತ್ವ ಪೂರ್ಣವಾದ ಸಾಲುಗಳನ್ನು ಮೀಸಲಿಟ್ಟಿರುವುದು ಕಂಡುಬರುತ್ತದೆ. ಮತ್ತೊಬ್ಬ ದಕ್ಷತೆಯ ರಾಣಿ ಎಂದರೆ ಬಸವಪ್ಪನಾಯಕನ ಹಿರಿಯ ಹೆಂಡತಿ ವೀರಮ್ಮಾಜಿ. ಇವಳ ಆಳ್ವಿಕೆಯು ಸಹ ಸಂಸ್ಥಾನದಲ್ಲಿ ಶಾಂತಿ ಹಾಗೂ ಸುಭದ್ರತೆಯನ್ನು ಕಾಪಾಡುತ್ತಿತ್ತೆನ್ನಬಹುದು. ಕೆಳದಿ ಅರಸರು ವೀರಶೈವ ಧರ್ಮಕ್ಕೆ ಸೇರಿದವರಾಗಿದ್ದುದರಿಂದ ಇವ ಆಳ್ವಿಕೆಯು ಕಾಲದಲ್ಲಿ ಅನೇಕ ವೀರಶೈವ ಮಠಗಳು ಅಸ್ತಿತ್ವಕ್ಕೆ ಬಂದು ಅಭಿವೃದ್ಧಿ ಹೊಂದಿದವು. ವೀರಭದ್ರನಾಯಕನ ಪತ್ನಿ ಮಲ್ಲಮ್ಮಾಜಿಯು ಗದಗದ ತೋಂಟದಾರ್ಯ ಮಠಕ್ಕೆ ಚಿನ್ನದ ಪಾದುಕೆಗಳನ್ನು ಮಾಡಿಸಿಕೊಟ್ಟಿದ್ದಳು. ವೆಂಕಟಪ್ಪನಾಯಕನ ಪತ್ನಿ ವೀರಮ್ಮಳು ಇಕ್ಕೇರಿಯ ಭತ್ತದ ಪೇಟೆಯಲ್ಲಿಯ ಮಠಕ್ಕೆ ದಾನ ನೀಡಿರುವುದಕ್ಕೆ ಶಾಸನಾಧಾರಗಳಿವೆ. ಕ್ರಿ.ಶ. ೧೬೬೪ರಲ್ಲಿ ನಾಗಮ್ಮಾಜಿಯು ತನ್ನ ಮೊಮ್ಮಗ ಶಿವಪ್ಪನಾಯಕನ ಹೆಸರಿನಲ್ಲಿ ಕೊಡುವಳಿಯಲ್ಲಿ ಮಠವೊಂದನ್ನು ಕಟ್ಟಿಸಿದಳು. ಹೆಚ್ಚಾಗಿ ಅಂದಿನ ರಾಣಿಯರು ಧಾರ್ಮಿಕ ಕೆಲಸಗಳಿಗೆ ಹೆಚ್ಚಿನ ಹೊತ್ತು ನೀಡಿರುವುದು ಕಂಡುಬರುತ್ತದೆ.

ಇಕ್ಕೇರಿ ರಾಜರು ತಮ್ಮ ಸಂಸ್ಥಾನದ ಆಳ್ವಿಕೆಗೆ ಅನುಕೂಲವಾಗುವ ಉದ್ದೇಶದಿಂದ ತಮ್ಮ ನಂತರ ಯುವರಾಜರನ್ನು ನೇಮಿಸಿಕೊಳ್ಳುತ್ತಿದುದು ಕಂಡು ಬರುತ್ತದೆ. ಯುವ ರಾಜರಿಗೂ ಸಹ ಆಸ್ಥಾನದಲ್ಲಿ ಪ್ರಮುಖ ಸ್ಥಾನಮಾನ ನೀಡಲಾಗಿತ್ತು. ಸಾಮಾನ್ಯವಾಗಿ ಅರಸರು ತಮ್ಮ ಹರಿಯ ಮಗನನ್ನು ಯುವರಾಜನನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಮಹಾರಾಜರಿಗೆ ಮಕ್ಕಳಿಲ್ಲದ ಸಂದರ್ಭದಲ್ಲಿ ಅಣ್ಣತಮ್ಮಂದಿರ ಅಥವಾ ಸಂಬಂಧಿಕರ ಮಕ್ಕಳನ್ನು ಯುವರಾಜನನ್ನಾಗಿ ನೇಮಿಸಿಕೊಳ್ಳುವ ಪರಿಪಾಠ ಜಾರಿಯಲ್ಲಿತ್ತೆನ್ನಬಹುದು. ಯುವರಾಜರಿಗೆ ಉತ್ತಮ ಶಿಕ್ಷಣ ಕೊಡಿಸುವ ಪದ್ಧತಿ ಜಾರಿಯಲ್ಲಿದ್ದಿತ್ತು. ಕುದುರೆ ಸವಾರಿ, ಆನೆ ಸವಾರಿ, ಕತ್ತಿ ವರಸೆ, ಶಾಸ್ತ್ರ ಪುರಾಣ, ಮೊದಲಾದ ಶಿಕ್ಷಣವನ್ನು ಕೊಡಿಸಲಾಗುತ್ತಿತ್ತು. ಯುವರಾಜರ ವಿವಾಹೋತ್ಸವ ಸಂದರ್ಭದಲ್ಲಿ ದೇವಾಲಯ, ಮಠಗಳಿಗೆ ದಾನ ದತ್ತಿಯನ್ನು ಅಪಾರ ಪ್ರಮಾಣದಲ್ಲಿ ಕೊಡಲಾಗುತ್ತಿತ್ತು. ಚೆನ್ನಮ್ಮಾಜಿಯು ತನ್ನ ಮಗ ಬಸಪ್ಪನಾಯಕನ ಮದುವೆಯ ಸಂದರ್ಭದಲ್ಲಿ ಶೃಂಗೇರಿ ಮಠಕ್ಕೆ ಎರಡು ಸಾಲು ಉಡುಗೊರೆ ಕಳಿಸಿದ್ದಳೆಂದು ಎಸ್.ಕೆ. ಅಯ್ಯಂಗಾರ್, ಅಪ್ ಸಿದ್ ತಿಳಿಸುತ್ತದೆ.

ಹಿಂದೂ ರಾಷ್ಟ್ರದ ಸಂಪ್ರದಾಯದಂತೆ ಮಹಾರಾಜರಿಗೆ ಮಕ್ಕಳಿಲ್ಲದ ಸಂದರ್ಭದಲ್ಲಿ ದತ್ತು ಪುತ್ರರನ್ನು ಸ್ವೀಕರಿಸುವ ಪದ್ಧತಿಯು ಕೆಳದಿ ಅರಸರಲ್ಲಿಯೂ ಹೆಚ್ಚಾಗಿ ಕಂಡು ಬರುತ್ತಿತ್ತು. ಮಹಾರಾಜರಿಗೆ ಗಂಡು ಸಂತಾನವಿಲ್ಲದಿದ್ದ ಸಂದರ್ಭದಲ್ಲಿ ಅಥವಾ ಮಗು ಇನ್ನೂ ಚಿಕ್ಕವನಿದ್ದಾಗ ದತ್ತು ತೆಗೆದುಕೊಳ್ಳುತ್ತಿದ್ದುದು ಕಂಡುಬರುತ್ತದೆ. ಉದಾಹರಣೆಗೆ ಮರಿಯಪ್ಪ ಶೆಟ್ಟಿಯ ಮಗ ಬಸಪ್ಪನೆಂಬುವನನ್ನು ದತ್ತು ತೆಗೆದುಕೊಳ್ಳಲಾಯಿತು. ಆದರೆ ಅವನಿನ್ನೂ ಚಿಕ್ಕವನಾದ ಕಾರಣ, ಅವನನ್ನು ಎದುರಲ್ಲಿಟ್ಟುಕೊಂಡು ಚೆನ್ನಮ್ಮಾಜಿಯು ಆಡಳಿತವನ್ನು ಕೆಲಕಾಲ ನಡೆಸಿದಳೆಂದು ಕೆಳದಿ ನರಪವಿಜಯದಲ್ಲಿ ಉಲ್ಲೇಖಿತವಾಗಿರುವುದು ಕಂಡುಬರುತ್ತದೆ. ಇದೇ ರೀತಿಯಲ್ಲಿ ಕ್ರಿ.ಶ. ೧೭೫೫ರಲ್ಲಿ ಬೂದಿ ಬಸಪ್ಪ ನಾಯಕನು ಸಹ ತನಗೆ ಗಂಡು ಮಕ್ಕಳಿಲ್ಲದ ಕಾರಣ ಸಂಸ್ಥಾನದ ಮುಂದಿನ ಜವಬ್ದಾರಿಯನ್ನು ತಿಳಿದು ಚೆನ್ನಪ್ಪನೆಂಬಾತನನ್ನು ದತ್ತು ಸ್ವೀಕರಿಸಿಕೊಂಡು ಮುಂದೆ ಅವನನ್ನು ಚೆನ್ನಬಸಪ್ಪ ನಾಯಕ ಎಂದು ಹೆಸರಿಸಿದನೆಂದು ತಿಳಿಯಬಹುದು. ಆದರೆ ಕೆಲವು ಶಾಸನಗಳ ಆಧಾರದ ಪ್ರಕಾರ ವೀರಮ್ಮಾಜಿಯು ಆ ಮಗನನ್ನು ಕೊಲ್ಲಿಸಿದ್ದುದಾಗಿ ಹೇಳಲಾಗಿದೆ. ಒಟ್ಟಿನಲ್ಲಿ ಕೆಳದಿ ಅರಸರ ಆಳ್ವಿಕೆಯ ಕಾಲದಲ್ಲಿ ದತ್ತು ಪದ್ಧತಿಯು ಹೆಚ್ಚಾಗಿಯೇ ಬಳಕೆಯಲ್ಲಿತ್ತು.

ಕೆಳದಿ ಅರಸರು ಪ್ರಬಲ ವಿಜಯನಗರ ಸಾಮ್ರಾಜ್ಯಕ್ಕೆ ಅಧೀನವಾಗಿದ್ದರಿಂದ ವಿಜಯನಗರದ ರಾಜಧಾನಿಗೂ ಇಕ್ಕೇರಿ ರಾಜಧಾನಿಗೂ ಬಿಡಿಸಲಾಗದ ಸಂಬಂಧವಿತ್ತು. ಇದರಿಂದ ಇಕ್ಕೇರಿ ನಾಯಕರು ವಿಜಯನಗರದರಸರ ಮಾದರಿಯಲ್ಲಿಯೇ ರಾಜ ದರ್ಭಾರನ್ನು ಬಹು ವಿಜೃಂಭಣೆಯಿಂದಲೇ ರೂಪಿಸಿದ್ದರು. ಇಕ್ಕೇರಿಯನ್ನು ವೆಂಕಟಪ್ಪ ನಾಯಕನು ಆಳುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಸಂದರ್ಶಿಸಿದ್ದ ಇಟಲಿಯ ಪಿಯಾತ್ರೋದೆಲ್ಲಾವಲ್ಲಿಯು ತನ್ನ ಪ್ರವಾಸ ಕಥನದಲ್ಲಿ ಅಂದಿನ ರಾಜದರ್ಭಾರನ್ನು ಸೊಗಸಾಗಿಯೇ ವರ್ಣಿಸಿದ್ದಾನೆ. ಅವನ ಪ್ರಕಾರ ಕೆಳದಿಯ ಅರಸರು ನಿರಂಕುಶ ಪ್ರಭುಗಳಾಗಿದ್ದರು. ದರ್ಮವೇ ಅಂದು ರಾಜನ ನೀತಿ ರೀತಿಗಳನ್ನು ನಿರ್ಧರಿಸುತ್ತಿತ್ತು. ಪ್ರಜೆಗಳ ರಕ್ಷಣೆಗಿಂತಲೂ ಸಹ ಧರ್ಮದ ರಕ್ಷಣೆಯೇ ಅವನ ಅದ್ಯ ಕರ್ತವ್ಯವಾಗಿತ್ತೆಂದು ಹೇಳಿರುವುದು ಕಂಡುಬರುತ್ತದೆ. ಇವರ ನಿರಂಕುಶತ್ವ ಆಳ್ವಿಕೆಗೆ ಸಾಕ್ಷಿ ಎಂದರೆ ಇಕ್ಕೇರಿ ಅರಸರು ಮೂರು ಸಾರಿ ಕಂದಾಯದಲ್ಲಿ ತೆರಿಗೆ ಹೆಚ್ಚಿಸುವಲ್ಲಿ ತೋರಿದ ಧೋರಣೆಯನ್ನು ಸಾಹಿತ್ಯಾಧಾರಗಳಲ್ಲಿ ನೋಡಬಹುದಾಗಿದೆ. ಆಡಳಿತಕ್ಕೆ ಅನುಕೂಲವಾಗುವ ದೃಷ್ಟಿಯಿಂದ ರಾಜನಿಂದಲೇ ನೇಮಿಸಲ್ಪಡುತ್ತಿದ್ದ ಬೃಹತ್ ಪ್ರಮಾಣದ ಮಂತ್ರಿಮಂಡಲವಿರುತ್ತಿತ್ತು. ಮಂತ್ರಿಮಂಡಲದಲ್ಲಿ ಬ್ರಾಹ್ಮಣರು, ಶ್ರೀಮಂತರಿಗೆ ಮಾತ್ರ ಪ್ರವೇಶವಿತ್ತು. ಆದರೆ ದಲಿತರು, ಕೆಳವರ್ಗದವರು ಪ್ರವೇಶಿಸುವಂತಿರಲಿಲ್ಲ. ಸಾಮಾನ್ಯವಾಗಿ ಮಂತ್ರಿ ಪದವಿಯು ವಂಶಪಾರಂಪರ್ಯವಾಗಿದ್ದಿತ್ತು. ಆದರೆ ಕೆಲವು ಸಮಯದಲ್ಲಿ ಅರ್ಹತೆಯನ್ನು ಆಧರಿಸಿರುತ್ತಿದ್ದದ್ದು ಕಂಡುಬರುತ್ತದೆ. ಕೆಳದಿ ನೃಪವಿಜಯದಲ್ಲಿ ತಿಳಿದುಬರುವಂತೆ ಇಕ್ಕೇರಿ ಸಂಸ್ಥಾನದಲ್ಲಿ ೬ ರಿಂದ ೮ ರವರೆಗೆ ಮಂತ್ರಿಗಳ ಬಲಾಬಲ ಇದ್ದಿರಬಹುದೆಂದು ಊಹಿಸಬಹುದಾಗಿದೆ. ಅಸ್ಥಾನದಲ್ಲಿ ರಾಜಗುರುಗಳಿಗೆ ವಿಶೇಷ ಗೌರವವಿದ್ದಿತ್ತು. ಬುಕಾನೆನ್‌ನು ತನ್ನ ಪ್ರವಾಸ ಕಥನದಲ್ಲಿ ಉಜ್ಜನಿ ಸ್ವಾಮಿಯವರು ಕೆಳದಿ ಆಸ್ಥಾನದ ರಾಜಗುರುಗಳಾಗಿದ್ದರು ಎಂದು ತಿಳಿಸಿರುತ್ತಾನೆ. ಕೆಲವು ಆಧಾರಗಳ ಪ್ರಕಾರ ಮಾಧವ ಜೋಯ್ಸ್ ಎಂಬುವರು ಆಸ್ಥಾನದ ಗುರುಗಳಾಗಿದ್ದರೆಂದೂ ತಿಳಿದುಬರುತ್ತದೆ. ಇಕ್ಕೇರಿ ನಾಯಕರು ಪ್ರಾರಂಭದಲ್ಲಿ ವೆಂಕಟಾದ್ರಿ ಜೋಯ್ಸರನ್ನು ತಮ್ಮ ಗುರುಗಳನ್ನಾಗಿ ಹೊಂದಿದ್ದರೆಂದು, ಹಿಂದೆ ಅವರ ರಾಜ್ಯದ ಉಗಮದ ಸನ್ನಿವೇಶದಲ್ಲಿ ಜೋಯ್ಸರು ವಹಿಸಿದ್ದ ಪಾತ್ರವನ್ನು ಹಿಂದೆ ತಿಳಿಸಲಾಗಿದೆ. ಮಂತ್ರಿಮಂಡಲದ ಮುಖ್ಯಸ್ಥನನ್ನು ಪ್ರಧಾನಿ ಎಂಬುವವನದಾಗಿದ್ದಿತ್ತು. ಇವನು ಯುದ್ಧದ ಸಂದರ್ಭದಲ್ಲಿ 'ಮಹಾದಂಡ ನಾಯಕ'ನಾಗಿ ಕಾರ್ಯನಿರ್ವಹಿಸುತ್ತಿದ್ದನು. ಈ ಹುದ್ದೆಯೂ ಸಹ ಯೋಗ್ಯತೆಯ ಆಧಾರದ ಮೇಲೆಯೇ ನೇಮಿಸಿಕೊಳ್ಳುವ ಏರ್ಪಾಡಿದ್ದಿತ್ತು. ೧೫೬೫ರಲ್ಲಿ ನಡೆದ ವಿಜಯನಗರದ ನಿರ್ಣಾಯಕ ಯುದ್ಧದ ತರುವಾಯ ಆ ಸಾಮ್ರಾಜ್ಯದ ಮಂತ್ರಿಗಳು ಕೆಳದಿ ಆಸ್ಥಾನದಲ್ಲಿ ಆಶ್ರಯವನ್ನು ಪಡೆದಿದ್ದರೆಂದು ಕಂಡುಬರುತ್ತದೆ. ಇದಕ್ಕೆ ಇಕ್ಕೇರಿ ಅರಸರು ತುಂಬುಹೃದಯದ ಸ್ವಾಗತವಿತ್ತು.

ಕೆಳದಿ ಸಂಸ್ಥಾನದಲ್ಲಿ ಮಂತ್ರಿಗಳಿಗೆ ಅಧೀನರಾಗಿ ಕಾರ್ಯನಿರ್ವಹಿಸಲು ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಇವರನ್ನು ಅಂದಿನಕಾಲದಲ್ಲಿ ಸರ್ವಾಧಿಕಾರಿಗಳು ಹಾಗೂ ದಳವಾಯಿಗಳು ಎಂಬುದಾಗಿ ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಇವರು ಶಾಸನಗಳನ್ನು ರಾಜರ ಹೆಸರಿನಲ್ಲಿ ಬರೆಯಿಸುವುದು ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುವುದು, ಹೊರರಾಷ್ಟ್ರದಿಂದ ನಾಡಿಗೆ ಬಂದವರನ್ನು ಸ್ವಾಗತಿಸುವ ಕೆಲಸವನ್ನು ನಿರ್ವಹಿಸಬೇಕಾಗಿತ್ತು. ಈ ದೃಷ್ಟಿಯಿಂದ ಇವರು ಹಲವು ಭಾಷೆಗಳನ್ನು ಕಲಿಯುವುದು ಕಡ್ಡಾಯವಾಗಿ ಇತ್ತು. ಈ ಮಾದರಿಯಲ್ಲಿ ಮಂತ್ರಿಗಳಿಗೆ ಸಹಾಯಕ ಅಧಿಕಾರ ವರ್ಗ ಹೊಂದಿದ್ದ ಸಂಸ್ಕೃತಿಯು ಕಂಡುಬರುತ್ತದೆ.

ಕೆಳದಿ ಅರಸರು ಸಂಸ್ಥಾನದಲ್ಲಿ ತಪ್ಪು ಮಾಡಿದವರಿಗೆ ಕಠಿಣ ಶಿಕ್ಷೆ ವಿಧಿಸುತ್ತಿದ್ದರೆಂದು ಸಾಹಿತ್ಯಾಧಾರಗಳಿಂದ ತಿಳಿದುಬರುತ್ತದೆ. ಈ ದೃಷ್ಟಿಯಿಂದಲೇ ಸಾಮ್ರಾಜ್ಯದಲ್ಲಿ ಹೇಳಿಕೊಳ್ಳುವ ದೊಡ್ಡ ಪ್ರಮಾಣದ ದರೋಡೆ, ಕಳ್ಳತನಗಳು ನಡೆಯುತ್ತಿರಲಿಲ್ಲ. ಅಲೆಕ್ಸಾಂಡರ್ ಹ್ಯಾಮಿಲ್ಟ್‌ನ್‌ನು "ಕೆಳದಿ ರಾಜ್ಯದಲ್ಲಿ ಯಾರೂ ಸುರಕ್ಷಿತವಾಗಿ ಒಬ್ಬರೇ ರಾತ್ರಿಯ ಹೊತ್ತಿನಲ್ಲಿಯೂ ಸಂಚರಿಸಬಹುದಿತ್ತು. ಅವರಿಗೆ ಯಾವುದರಿಂದಲೂ, ಎಷ್ಟು ಹೊತ್ತಿನಲ್ಲಿಯೂ ಭಯವಿರಲಿಲ್ಲ" ಎಂದು ತನ್ನ ಕಥನದಲ್ಲಿ ಹೇಳಿರುವುದು ನಿದರ್ಶನವಾಗಿದೆ. ಗೋವಿಗೆ ಆಸ್ಥಾನದಲ್ಲಿ ಪವಿತ್ರವಾದ ಸ್ಥಾನವನ್ನು ನೀಡಿ ಸಂಸ್ಥಾನದಲ್ಲಿ ಗೋಹತ್ಯೆ ಹಾಗೂ ಪ್ರಾಣಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು. ಗೋಹತ್ಯೆ ಮಾಡಿದವರು ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. ಕ್ರಿ.ಶ. ೧೬೪೬ರಲ್ಲಿ ವೀರಭದ್ರನಾಯಕನ ಮಾಲ್ವೆ ಮಠದಲ್ಲಿ ನಡೆದ ಒಳಜಗಳದಲ್ಲಿ ತೊಂದರೆಯನ್ನು ಬಗೆಹರಿಸಿ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಆಗುವಂತೆ ಮಾಡಿರುವುದಕ್ಕೆ ಶಾಸನಾಧಾರಗಳಿವೆ. ಕೆಳದಿ ಅರಸರ ಕಾಲದಲ್ಲಿ ತಪ್ಪು ಮಾಡಿದವರನ್ನು ಗಟ್ಟಿಯಾಗಿ ವಿಚಾರ ಮಾಡಿ, ತಪ್ಪು ಮಾಡಿದವರಿಗೆ ಬುದ್ಧಿ ಹೇಳಿಸಿ, ಧರ್ಮದಿಂದ ಬಿಡಬಹುದಾದ್ದನ್ನು ಬಿಟ್ಟು, ಸುಸಂಸ್ಕೃತ ಮನುಷ್ಯರ ಬದುಕಿಗೆ ತೊಂದರೆ ಯಾಗದಂತೆ, ಮಠಧರ್ಮಕ್ಕೆ ತೊಂದರೆಯಾಗದಂತೆ ತಿಳುವಳಿಕೆ ನೀಡಿ ಸುರಕ್ಷಿತವಾಗಿ ಬಗೆಹರಿಸಿದ್ದನೆಂದು ಹೇಳಿರುವುದು ಗಮನಾರ್ಹವಾಗಿದೆ. ಇಕ್ಕೇರಿ ಅರಸರು ಧರ್ಮಕ್ಕೆ ಹೆಚ್ಚಿನ ನಿಷ್ಠೆ ತೋರಿಸುತ್ತಿದ್ದರು ಎಂಬುದಕ್ಕೆ ಅವರು ಧರ್ಮ ಹಾಗೂ ಸಮಾಜಕ್ಕೆ ಅನ್ಯಾಯ, ಅನಾಚಾರಗಳು ನಡೆದಾಗ ತೆಗೆದುಕೊಳ್ಳುತ್ತಿದ್ದ ಕ್ರಮದಿಂದ ವ್ಯಕ್ತವಾಗುತ್ತದೆ. ಇದಕ್ಕೆ ಸಾಕ್ಷಿಯಾಗಿ ಶೃಂಗೇರಿ ಮತ್ತು ಕೊಡಲಿ ಶೃಂಗೇರಿ ಮಠಗಳಿಗೆ ಆದ ಒಳಜಗಳಗಳನ್ನು ಸಮರ್ಪಕವಾಗಿ ಬಗೆಹರಿಸಿದ್ದುದ್ದಕ್ಕೆ ಅನೇಕ ಆಧಾರಗಳು ಲಭ್ಯವಿದೆ. ಕೆಳದಿ ಅರಸರು ಸರ್ವ ಧರ್ಮಸಮನ್ವಯಿಗಳಾಗಿದ್ದರು. ಅವರ ಅಸ್ಥಾನದಲ್ಲಿಯೇ ಎಲ್ಲ ಧರ್ಮದವರೂ ಪ್ರಮುಖ ಉದ್ದೇಶಗಳಲ್ಲಿ ಸ್ಥಾನಗಳಿಸಿದ್ದರು. ಸಂಸ್ಥಾನದುದ್ದಕ್ಕೂ ಪ್ರತಿಯೊಂದು ಧರ್ಮಕ್ಕೆ ಸಂಬಂಧಿಸಿದ ದೇವಾಲಯ, ಮಠ, ಬಸದಿ, ಚರ್ಚು ಹಾಗೂ ಮಸೀದಿಗಳು ಇದ್ದವು. ಹಾಗೆ ಇವೆಲ್ಲವುಗಳಿಗೂ ಅರಸರು ದಾನದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ. ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ರಾಮಾನುಜಾಚಾರ್ಯ ಮತ್ತು ಕಾಶಿಯಿಂದ ಇಕ್ಕೇರಿಗೆ ಆಗಮಿಸಿದ್ದ ಭಟೋಜಿ ದೀಕ್ಷಿತನಿಗೆ ಅದ್ವೈತ, ವಿಶಿಷ್ಟಾದ್ವೈತದಲ್ಲಿ ಚರ್ಚೆ ನಡೆದು ಭಟೋಜಿ ದೀಕ್ಷಿತನು ಜಯಗಳಿಸಿ ಬಿರುದು ಬಾವಲಿಗಳನ್ನು ಪಡೆದನು. ಇದರಿಂದ ಕೆಳದಿ ಅರಸರಿಗೆ "ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ ಶಿವಗುರು ಭಕ್ತಿ ಪರಾಯಣರಾದ" ಎಂಬ ಬಿರುದು ಬಂದಿತ್ತೆಂದು ಕೆಳದಿ ಅರಸರ ಶಾಸನ ಸಂಪುಟ ಹಾಗೂ ಕೆಳದಿ ನೃಪ ವಿಜಯಗಳಲ್ಲಿ ಕಂಡುಬರುತ್ತದೆ. ಪ್ರಸಿದ್ಧ ದೊರೆ ಶಿವಪ್ಪನಾಯಕನು ಜಂಗಮರಿಗಾಗಿ ಮಠಗಳನ್ನು ದೇವಾಲಯಗಳನ್ನೂ ಹಾಗೂ ಬ್ರಾಹ್ಮಣರಿಗಾಗಿ ಆಗ್ರಹಾರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣ ಮಾಡಿಸಿದನು. ಸುಬ್ರಹ್ಮಣ್ಯ ದೇವಸ್ಥಾನ, ಆನಂದಪುರದ ಮಹತ್ತಿನ ಮಠ, ಅಕ್ಕಿಪೇಟೆ ಮಹತ್ತಿನ ಮಠ, ಕಾಶೀಮಠ ಹಾಗೂ ಇಕ್ಕೇರಿಯ ಮೈಲಾರ ದೇವರುಗಳಿಗೂ ಸಾಕಷ್ಟು ದಾನ ನೀಡಿ ಅವುಗಳ ಅಭಿವೃದ್ಧಿಗೆ ಶ್ರಮಿಸಿದ್ದರು. ಶೃಂಗೇರಿ ಮಠವಂತೂ ಶಿವಪ್ಪನಾಯಕನ ಕಾಲದಲ್ಲಿ ವೈಭವದ ತಾಣವಾಗಿತ್ತೆನ್ನಬಹುದು. ಮಠಗಳಿಗೆ ಜನರು ತಾವು ಬೆಳೆದ ದವಸದಾನ್ಯಗಳನ್ನು ಅರ್ಪಿಸಿದರೆ ಅವರಿಗೆ ಸುಂಕದಲ್ಲಿ ರಿಯಾಯಿತಿ ದೊರೆಯುತ್ತಿತ್ತು. ಕೆಳದಿ ಅರಸರು ವೀರಶೈವ ಧರ್ಮದವರಾದರೂ ಸಹ ಸರ್ವಧರ್ಮವನ್ನು ಪ್ರೀತಿಸುತ್ತಿದ್ದರು. ಇದಕ್ಕೆ ಅವರ ನಿಲುವೆಂದರೆ "ಧರ್ಮವನ್ನು ನಾವು ರಕ್ಷಿಸಿದರೆ, ನಮ್ಮನ್ನು ಧರ್ಮವು ರಕ್ಷಿಸುತ್ತದೆ" ಎಂಬುವುದಾಗಿತ್ತು.

ಕೆಳದಿ ಅರಸರು ಚಲಾವಣೆಗೆ ತಂದಿದ್ದ ನಾಣ್ಯಗಳು ಅಪಾರವಾಗಿ ಇಂದು ಗೊರಕಿದ್ದು ಅವುಗಳ ಮೇಲೆ ಶೈವ ಧರ್ಮದ ಸಂಕೇತಗಳಾದ ಶಿವ ಪಾರ್ವತಿ ಹಾಗೂ ನಂದಿ ಚಿತ್ರಗಳನ್ನು ಬಳಸಿರುವುದು ಕಂಡುಬರುತ್ತದೆ. ಅರಸರು ಗಂಡು ಭೇರುಂಡವನ್ನು ತಮ್ಮ ರಾಜ ಚಿಹ್ನೆಯನ್ನಾಗಿ ಹೊಂದಿದ್ದರೆಂದು ಹೇಳಬಹುದು. ಏಕೆಂದರೆ ಕೆಳದಿ ದೇವಾಲಯದಲ್ಲಿ ಕಂಡುಬರುವ ಗಂಡುಭೇರುಂಡದಿಂದ ಇದನ್ನು ಊಹಿಸಬಹುದಾಗಿದೆ. ಇಷ್ಟೆ ಅಲ್ಲದೆ ಕೆಳದಿ ಅರಸರು ನಾಣ್ಯಗಳ ಮೇಲೆ ಚಂದ್ರಮೌಳೇಶ್ವರ ಮತ್ತು ಶ್ರೀ ಸದಾಶಿವ ಎಂಬುದಾಗಿಯೂ ಅಚ್ಚಿಸಿರುವುದು ಕಂಡುಬರುತ್ತದೆ. ಇವುಗಳ ಆಧಾರದ ಮೇಲೆಯೇ ಅವರು ರಾಜ ಚಿಹ್ನೆಯನ್ನಾಗಿ ಇವುಗಳನ್ನು ಬಳಸಿರಬಹುದೆಂದು ಕೆಲವು ವಿದ್ವಾಂಸರ ಅಭಿಪ್ರಾಯ ಎಂದು ಡಾ. ಕೆ.ಜಿ. ವೆಂಕಟೇಶ ಜೋಯಿಸ್ ರವರು ತಮ್ಮ ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನದಲ್ಲಿ ವ್ಯಕ್ತಪಡಿಸುತ್ತಾರೆ.

ಕೆಳದಿ ನಾಯಕರೂ ಸಹ ವಿಜಯನಗರದ ಸಂಸ್ಕೃತಿಯನ್ನು ತಮ್ಮ ಆಳ್ವಿಕೆಯಲ್ಲಿ ಅಳವಡಿಸಿಕೊಂಡಿದ್ದು ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು. ವಿಜಯನಗರದ ಕಾಲದಲ್ಲಿದ್ದ 'ಗ್ರಾಮ ಮತ್ತು ಹಳ್ಳಿ ಎಂಬ ಪದಗಳು ಗ್ರಾಮೀಣ ಪ್ರದೇಶದ ಸೂಚಕವಾಗಿದ್ದರೆ 'ಪುರ' ಎಂಬ ಪದವನ್ನು ಪಟ್ಟಣಕ್ಕೆ ಅನ್ವಯವಾಗುವಂತೆ ಬಳಸುತ್ತಿದ್ದರು. ವ್ಯಾಪಾರ ಮಹಿವಾಟು, ಸಂತೆಗಳು ನಡೆಯುತ್ತಿದ್ದ ಸ್ಥಳಗಳನ್ನು 'ಪೇಟೆ' ಎಂದು ಕರೆಯುತ್ತಿದ್ದರು. ಇವುಗಳನ್ನೇ ಇಕ್ಕೇರಿ ನಾಯಕರೂ ಸಹ ತಮ್ಮ ಸಂಸ್ಥಾನದಲ್ಲಿ ಅಳವಡಿಸಿಕೊಂಡಿದ್ದರೆನ್ನಬಹುದು. ಸಂಸ್ಥಾನದ ಪ್ರಮುಖ ಹೋಬಳಿ, ಪಟ್ಟಣ, ಪುರಗಳಲ್ಲಿ ಪ್ರತಿವಾರ ನಿಗದಿತ ದಿನದಂದು ಸಂತೆ ನಡೆಯುತ್ತಿತ್ತು. ಈ ಸಂತೆಗಳೂ ಸಹ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಪ್ರಮಾಣದಲ್ಲಿ ಸಹಕಾರಿಯಾಗುತ್ತಿದ್ದವೆನ್ನಬಹುದು. ಇಕ್ಕೇರಿಯಲ್ಲಿ ಪ್ರತಿ ಶುಕ್ರವಾರ ಸಂತೆ ನಡೆಯುತ್ತಿತ್ತು. ವಿದೇಶಿ ಯಾತ್ರಿಕನಾದ ಪಿಯತ್ರೋದೆಲ್ಲಾವೆಲ್ಲೆಯು ಇಕ್ಕೇರಿಯಲ್ಲಿ ತಾನು ಕಂಡ ಸಂತೆಯ ವೈಶಿಷ್ಟ, ಸಂತೆಯಲ್ಲಿ ದೊರಕುತ್ತಿದ್ದ ವಸ್ತುಗಳು, ಸಂತೆಯ ರೀತಿನೀತಿಗಳನ್ನು ಸಂಕ್ಷಿಪ್ತವಾಗಿ ತನ್ನ ಕಥನದಲ್ಲಿ ಬರೆದಿಟ್ಟಿದ್ದಾನೆ. ಶಾಸನಗಳಲ್ಲಿ ಅಕ್ಕಿಪೇಟೆ, ಭತ್ತದ ಪೇಟೆ, ಹೊಸಪೇಟೆ, ರತ್ನಾಪುರದ ಪೇಟೆ, ಬಿದರೂರು ಸೋಮವಾರ ಪೇಟೆಗಳೆಂದು ಮೊದಲಾದ ಪೇಟೆಗಳ ಹೆಸರುಗಳು ಹೆಸರಿಸಿರುವುದು ಕಂಡುಬರುತ್ತವೆ. ಸಂತೆಯು ಸ್ಥಳೀಯ 'ಗೌಡ'ನಿಂದ ನಿಯಂತ್ರಿಸಲ್ಪಡುತ್ತಿತ್ತು. ಸಂತೆಯು ಪ್ರಾರಂಭವಾಗಲು ಗೌಡನ ಅಥವಾ ದಿವಾನನ ಅನುಮತಿ ಪಡೆಯಬೇಕಾಗಿತ್ತು ಎಂದು ಊಹಿಸಬಹುದಾಗಿದೆ.

ಪ್ರತಿಯೊಂದು ಪ್ರಮುಖ ಪಟ್ಟಣದಲ್ಲಿಯೂ ಸಹ 'ನಗರಸಭೆ' ಹಾಗೂ 'ಪೌರಸಭೆ'ಗಳು ಇಂದಿನ ಮಾದರಿಯಲ್ಲಿಯೇ ಇರುತ್ತಿದ್ದು ಇವುಗಳು ಕೆಲವು ವಿಶಿಷ್ಟವಾದ ಹಕ್ಕನ್ನು ಹೊಂದಿದ್ದವೆನ್ನಬಹುದು. ಉದಾಹರಣೆಗೆ ಕೇಂದ್ರ ಸರ್ಕಾರವೇ ನಗರಕ್ಕೆ ಸೇರಿದ ಸರಹದ್ದಿನಲ್ಲಿ ಏನೇ ದಾನದತ್ತಿ ನೀಡುವಾಗಲೂ ಸಹ ನಗರಸಭೆಯ ಅನುಮತಿ ಪಡೆಯಬೇಕಿತ್ತು. ಹಾಗೂ ಜನಸಾಮಾನ್ಯರ ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಸ್ಪಂದಿಸುವ ಸಲುವಾಗಿ 'ನಗರಮಧ್ಯಸ್ಥ' ಎಂಬುವನು ಇದ್ದು ಇವನು ನಗರ ಸಭೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದನು. ಇವನು ಗ್ರಾಮೀಣ ಪ್ರದೇಶದ ನ್ಯಾಯಾಧೀಶನಾಗಿಯೂ ಕಾರ್ಯನಿರ್ವಹಿಸುತ್ತಿದ್ದನು. ಗ್ರಾಮ ಹಾಗೂ ಪಟ್ಟಣಗಳಲ್ಲಿ ಎಲ್ಲಾ ಜಾತಿ, ಮತಗಳವರೂ ವಾಸಿಸುತ್ತಿದ್ದರು. ಆದರೆ ಪಂಚಮರು (ಹೊಲೆಯ, ಮಾದಿಗರು) ಊರಿನಿಂದ ಹೊರಗೆ ವಾಸಿಸುತ್ತಿದ್ದರು. ಇವರ ಸ್ಥಿತಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಕುಸಿದ್ದಿತ್ತೆನ್ನಬಹುದು. ಆರ್ಥಿಕವಾಗಿ ತುಂಬ ಕೆಳಮಟ್ಟದಲ್ಲಿದ್ದರೆ ಸಾಮಾಜಿಕವಾಗಿ ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿದ್ದರು. ನಗರದಲ್ಲಿ ಪಡುವಕೇರಿ, ಉಪ್ಪಾರಗೇರಿ, ಕುಂಬಾರಗೇರಿ, ಹೊಲಗೇರಿ ಮುಂತಾದ ಪ್ರಮುಖ ಕೇರಿಗಳ ಉಲ್ಲೇಖವನ್ನು ಶಾಸನಗಳಲ್ಲಿ ನೋಡಬಹುದಾಗಿದೆ. ಡಾ. ಕೆ.ಜಿ. ವೆಂಕಟೇಶ್ ಜೋಯಿಸ್ ರವರು ಉಲ್ಲೇಖಿಸಿರುವಂತೆ ಕೆಲವು ಶಾಸನಗಳಲ್ಲಿ 'ಶೂದ್ರವಾಡ' ಬ್ರಾಹ್ಮಣವಾಡ' ಎಂಬ ಪದಗಳೂ ಸಹ ಬಳಕೆಯಾಗಿವೆ. ಇದು ಶೂದ್ರರ ವಾಸಸ್ಥಳ, ಬ್ರಾಹ್ಮಣರ ವಾಸಸ್ಥಳ ಎಂಬ ಅರ್ಥನ್ನು ನೀಡುವಲ್ಲಿ ಬಳಕೆಯಾಗಿರಬಹುದೆಂದು ಅವರ ಅಭಿಪ್ರಾಯವಾಗಿದೆ.

ಆಗ್ರಹಾರವು ಕೆಳದಿ ಅರಸರ ಆಳ್ವಿಕೆಯಲ್ಲಿ ಪ್ರಮುಖ ಸ್ಥಾನ ಪಡೆದಿದ್ದಿತ್ತು. ಇದು ವಿಜಯನಗರದರಸರ ಕಾಲದಲ್ಲಿದ್ದಂತೆಯೇ ಮುಂದುವರೆದುಕೊಂಡು ಬಂದಿದ್ದನ್ನು ಗಮನಿಸಬಹುದು. ಅಗ್ರಹಾರದ ನಿವಾಸಿಗಳಾದ ಬ್ರಾಹ್ಮಣರುಗಳನ್ನು 'ಬುದ್ಧಿವಂತ' 'ಗ್ರಾಮಹೆಬ್ಬಾರುವ' 'ಹೆಗ್ಗಡೆ' 'ಒಡೆಯರು' 'ಮಹಾಪ್ರಭು'ಗಳ ಮಹತ್ವದ ಹೆಸರುಗಳಿಂದ ಸಂಭೋಧಿಸಿಕೊಳ್ಳುತ್ತಿದ್ದರು. ಡಾ. ಎ.ವಿ.ವೆಂಕಟರತ್ನಂರವರು ತಮ್ಮ ಮಹತ್ವದ ಕೃತಿಯಾದ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ' ಎಂಬ ಕೃತಿಯಲ್ಲಿ ಬುದ್ಧಿವಂತರು ಎಂಬುವುದಕ್ಕೆ ಉದಾಹರಣೆ ನೀಡಲು ಪ್ರಯತ್ನಿಸಿದ್ದಾರೆ. ಅವರ ಪ್ರಕಾರ ಈಗಿನ ಕೊಪ್ಪ ಮೂಡಿಗೆರೆ, ತೀರ್ಥಹಳ್ಳಿ ಮತ್ತು ನಗರ ತಾಲ್ಲೂಕುಗಳ ಶಾಸನಗಳಲ್ಲಿ 'ಬುದ್ಧಿವಂತರು' ಎಂಬ ಪದವನು ಸಾಮಾನ್ಯವಾಗಿ ಬಳಸಲಾಗಿದೆ. ಉದಾಹರಣೆಗೆ ಕ್ರಿ.ಶ. ೧೪೩೯ರಲ್ಲಿ ಭೈರಪ್ಪ ಹೆಗ್ಗಡೆ ಬತ್ತ ಬೆಳೆಯುವ ಒಂದು ಜಮೀನನ್ನು ಕೊಂಡುಕೊಂಡು ದೇವರಿಗೆ ದಾನ ಮಾಡಿದನು. ಈ ದಾನವನ್ನು ಪ್ರಭುಗಳು ಮತ್ತು 'ಬುದ್ಧಿವಂತರು' ಕಾರ್ಯಗತ ಮಾಡಿದರು. ಕ್ರಿ.ಶ. ೧೫೪೭ರ ಬ್ರಾಹ್ಮಣ ಸ್ಮಾರ್ತಪಂಥಕ್ಕೆ ಸೇರಿದ ಹರಿಹರಪುರ ಮಠದ ಒಂದು ಶಾಸನ 'ಬುದ್ಧಿವಂತರು' ಎಂಬ ಪದವನ್ನು ಉಪಯೋಗಿಸುತ್ತದೆ. ಈ ಶಾಸನವು ವಿವಿಧ ಸ್ಥಳಗಳಲ್ಲಿದ್ದ ನಾಲ್ವರು ಸಮಕಾಲೀನರನ್ನು ಹೆಸರಿಸುತ್ತದೆ. ಎಂದು ಮುಂದುವರೆದು ಕೊನೆಗೆ ಕಾರ್ಕಳದ ದೊರೆಯ ಸೇವೆಯಲ್ಲಿದ್ದ 'ಬುದ್ಧಿವಂತರು' ಹಲ್ತೊರೆಯ ತಿಮ್ಮಯ್ಯಸೇನಬೋದ ಮತ್ತು ನಾಡಿನ ನಿವಾಸಿಗಳು ಈ ವ್ಯವಹಾರಕ್ಕೆ ಸಾಕ್ಷಿಯಾಗಿದ್ದರು ಎಂದು ವಿವರಣೆ ನೀಡುತ್ತಾರೆ. ಹಾಗೆಯೇ ಗ್ರಾಮಹೆಬ್ಬಾರುವ ಹೆಗ್ಗಡೆ, ಹಬ್ಬಾರು ವಕ್ಕಲು, ಹೆಬ್ಬಾರು, ಪ್ರಭು ಎಂದು ಕರೆಸಿಕೊಳ್ಳುತ್ತಿದ್ದ ಬ್ರಾಹ್ಮಣರ ಬಗೆಯೂ ಹಾಗೂ ಅವರ ಅನಿಷ್ಟ

ಆಚರಣೆಯ ಸಂಸ್ಕೃತಿಯನ್ನು ತಿಳಿಸುತ್ತಾರೆ. ಸರ್ಕಾರಿ ಅಧಿಕಾರಿಗಳಿದ್ದರೂ ಅಗ್ರಹಾರಗಳಿಗೆ ಅದರದೇ ಆದ ಸ್ವಾಯತ್ತತೆ ಇರುತ್ತಿತ್ತು. ಪ್ರತಿಯೊಂದು ಕ್ಷೇತ್ರದಲ್ಲಿಯೂ ಬ್ರಾಹ್ಮಣರಿಗೆ ಮರ್ಯಾದೆ ದೊರಕುವಂತೆ ಇಕ್ಕೇರಿ ನಾಯಕರು ದಯಪಾಲಿಸಿದರೆನ್ನಬಹುದು.

ಅಗ್ರಹಾರ ಹಾಗೂ ಹಳ್ಳಿಯ ಗಡಿಗಳನ್ನು ಮರ, ಹಳ್ಳ, ಕೆರೆ, ಕಾಲುವೆ ಅಥವಾ ನೆಟ್ಟ ಲಿಂಗಮುದ್ರೆಗಳ ಮೂಲಕವೂ ನಿಶ್ಚಯಿಸುತ್ತಿದ್ದರು. ಅಂದಿನ ಹಳ್ಳಿಗಳಲ್ಲಿ ಹೊಲಗಳಲ್ಲಿ ಲಿಂಗ ಮುದ್ರೆಯುಳ್ಳ ಕಲ್ಲನ್ನು ನೆಟ್ಟಿರುತ್ತಿದ್ದರು ಎಂದು ಶಾಸನ ತಿಳಿಸುತ್ತದೆ.

***

## ೩. ಧಾರ್ಮಿಕ ಪದ್ಧತಿ

ಭಾರತವು ಹಲವು ಧರ್ಮ, ಜಾತಿ, ಭಾಷೆ ಹಾಗೂ ಸೀಮೆಗಳ ಆಗರ ಇಷ್ಟಾದರೂ ಸಹ ನಮ್ಮ ಈ ಭೂಮಿಯು ವೈವಿಧ್ಯತೆಯಲ್ಲಿ ಏಕತೆಯನ್ನು ಕಂಡುಕೊಂಡು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯ ಕಂಪನ್ನು ಪ್ರಪಂಚಕ್ಕೆ ನೀಡಿದೆ ಎಂದೆನ್ನಬಹುದು. ಪ್ರಾಚೀನ ಕಾಲದಿಂದಲೂ ನೂರಾರು ಸಂಸ್ಥಾನಗಳು ಈ ಭೂಮಿಯ ಮೇಲೆ ಆಳ್ವಿಕೆ ನಡೆಸಿ ತಮ್ಮದೇ ಆದ ಸಂಸ್ಕೃತಿಯನ್ನು ಕೊಡುಗೆಯಾಗಿ ನೀಡಿರುವುದರಿಂದಲೋ ಏನೋ ಧಾರ್ಮಿಕ ಅಥವಾ ಜಾತಿಯ ಗಲಭೆಗಳಿಗೆ ಪ್ರಚೋಧನೆ ನೀಡದೆ ಸರ್ವಧರ್ಮವನ್ನು ಸಮನಾಗಿ ನೋಡಿಕೊಂಡು ಅವುಗಳನ್ನು ಪೋಷಿಸಿಕೊಂಡು ಬಂದಿರುವುದಕ್ಕೆ ಸಾಕಷ್ಟು ಆಧಾರಗಳು ದೊರಕುತ್ತವೆ. ಇಕ್ಕೇರಿ ಅರಸರು ಮೂಲತಃ ವೀರಶೈವ ಧರ್ಮದವರು. ಇವರಿಗಿಂತ ಹಿಂದೆ ವಿಜಯನಗರದ ಧರ್ಮವು ತನ್ನ ಪರಂಪರೆಯನ್ನು ಈ ಪ್ರದೇಶಗಳಲ್ಲಿ ಹೆಚ್ಚಾಗಿ ಬೀರಿತ್ತು. ಪುರಂದರದಾಸರು, ಕನಕದಾಸರು, ವ್ಯಾಸರಾಯರುಗಳು ವೈಷ್ಣವ ಧರ್ಮಪಂಥೀಯರ ಹಾಗೂ ಇನ್ನಿತರ ಧರ್ಮಪ್ರಚಾರಕರು ತಮ್ಮ ತಮ್ಮ ಧರ್ಮದ ಪ್ರಚಾರವನ್ನು ಕೈಗೊಂಡಿದ್ದರು.

ಬಿದನೂರಿನ ಅರಸರು ವೀರಶೈವ ಧರ್ಮದವರಾಗಿದ್ದರೂ ಸಹ ಅಂದು ಪ್ರಚಲಿತವಾಗಿದ್ದ ಶೈವ, ವೈಷ್ಣವ, ಶ್ರೀವೈಷ್ಣವ, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳಿಗೂ ಸಹ ಯಾವುದೇ ತೊಂದರೆ ನೀಡದೆ ಅವುಗಳು ತಮ್ಮದೇ ಪಥದಲ್ಲಿ ಬೆಳವಣಿಗೆ ಹೊಂದಲು ಅವಕಾಶ ನೀಡಿದ್ದರು, ಇದಕ್ಕೆ ನಿದರ್ಶನವೆಂಬಂತೆ ಲಿಂಗಣ್ಣ ಕವಿಯು ಕೆಳದಿ ನೃಪವಿಜಯದಲ್ಲಿ ಹಿರಿಯ ವೆಂಕಟಪ್ಪನಾಯಕನನ್ನು ಕುರಿತು “ಶೃಂಗೇರಿಯ ಧಂ, ಬಾಳೇ ಹಳ್ಳೀ ಸಿಂಹಾಸನದ ಧರ್ಮ, ಸವರಾಷ್ಟ್ರಗಳೊಳ್ ನಾಲ್ಗಡೆಗಳೊಳ್ಳುಳ್ಳ ಸನ್ಯಾಸಿಗಳ ಮಠ, ಮಹತ್ತಿನ ಮಠಾಗ್ರಹಾರ ಕೂಡಗಿಮಾನ್ಯ ಉಂಬಳಿ ಉತ್ತಾರ ಪಳ್ಳಿದಾಸರ ಧರ್ಮ, ಮುಂತಾದ ನಾನಾ ಧರ್ಮಗಳಂ ಸಮಗ್ರವಾಗಿ ನಡೆಸಿ ಪರಿಪಾಲಿಸಿದನು” ಎಂದು ಹೇಳೀರುವುದನ್ನು ಡಾ. ವೆಂಕಟೇಶ್ ಜೋಯಿಸ್ ರವರು ಕೆಳದಿ ಶಾಸನಗಳ ಅಧ್ಯಯನ ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಮುಂದುವರೆದು ಅವರು ಈ ನಾಯಕನ ರಾಜಧಾನಿಯಲ್ಲಿ ವಿದ್ವತ್ ಸಭೆಗಳನ್ನು ಏರ್ಪಡಿಸಿ “ವಿಶಿಷ್ಟ ವೈದಿಕಾ ದ್ವೈತ ಸಿದ್ಧಾಂತ ಸ್ಥಾಪನಾಚಾರ್ಯ” ಎಂಬ ಬಿರುದನ್ನು ನೀಡಿ ಗೌರವಿಸಿರುವುದನ್ನು ಉಲ್ಲೇಖಿಸಿದ್ದಾರೆ. ಶಿವಪ್ಪನಾಯಕ ಹಾಗೂ ಚೆನ್ನಮ್ಮಾಜಿಯವರೂ ಸಹ ಶಿವಭಕ್ತ, ಗುರಿಕಾರ ಶೈವ ವೈಷ್ಣವರು, ಬ್ರಾಹ್ಮಣ ಗುರಿಕಾರರು ಹಾಗೂ ಮಠಮಾನ್ಯರುಗಳನ್ನು ದೇವಸಾನಾ ಗ್ರಹಾರಾದಿಗಳನ್ನು ವಿವಿಧರೂಪದ ಧರ್ಮಗಳ ಅನುಯಾಯಿಗಳನ್ನು ಪ್ರೀತಿಯಿಂದ ಕಾಣುತ್ತಿದ್ದರು. ಇಕ್ಕೇರಿ ನಾಯಕರು ಶೃಂಗೇರಿ ಶಾರದಾ ಪೀಠಕ್ಕೆ ಅಪಾರ ಕಾಣಿಕೆ ನೀಡಿದ್ದಾರೆ. ಇವರ ಆಳ್ವಿಕೆಯ ಕಾಲದಲ್ಲಿ ಶೃಂಗೇರಿ ಮಠವು ವೈಭವದ ತಾಣವಾಗಿದ್ದಿತ್ತು. ಶೈವ ಧರ್ಮದ ಅದ್ವೈತ ಮಠಗಳಿಗೆ ಅಪಾರ ಸೇವೆಸಲ್ಲಿಸಿರುವುದರ ಜೊತೆಗೆ ಬೇರೆಯವರಿಂದ ತೊಂದರೆಯಾಗದಂತೆ ಜವಾಬ್ದಾರಿಯಿಂದ ನೋಡಿಕೊಂಡು ಬಂದರು. ವೈಷ್ಣವ ಧರ್ಮಕ್ಕೆ ಉಡುಪಿ ಕೇಂದ್ರವಾಗಿತ್ತು.

ಇಕ್ಕೇರಿ ಅರಸರ ಕಾಲದಲಿ ಧರ್ಮ ಪ್ರಚಾರಕರಾದ ಪುರಂದರದಾಸರು, ಕನಕದಾಸರು, ರಾಘವೇಂದ್ರಯತಿ ಸಾರ್ವಭೌಮರು (ಕ್ರಿ.ಶ. ೧೬೨೩ ರಿಂದ ೧೬೭೧) ಕೆಳದಿ ಸಂಸ್ಥಾನಕ್ಕೆ ಭೇಟಿನೀಡಿ ದಕ್ಷಿಣ ಕನ್ನಡ, ಸುಬ್ರಮಣ್ಯ ಮತ್ತು ಉಡುಪಿಗಳನ್ನು ಸಂದರ್ಶಿಸಿ ತಮ್ಮ ಧರ್ಮ ಪ್ರಚಾರ ಕೈಗೊಂಡಿದ್ದರೆಂದು ಕರ್ನಾಟಕ ಹರಿದಾಸ ಸಾಹಿತ್ಯವು ಸಾರುತ್ತದೆ. ಕೆಳದಿ ಸಂಸ್ಥಾನದ ಪಶ್ಚಿಮ ಘಟ್ಟಪ್ರದೇಶಗಳು ಹಾಗೂ

ಮಲೆನಾಡಿನ ಬಹುಭಾಗಗಳಲ್ಲಿ ವೀರಶೈವ ಧರ್ಮ್ಮ ಹೆಚ್ಚು ಪ್ರಭಾವಶಾಲಿಯಾಗಿತ್ತು. ದಕ್ಷಿಣ ಕನ್ನಡದಲ್ಲಿರುವ ಬಾಂಕೂರು, ಬಸರೂರು, ಕೋಟೇಶ್ವರ, ಕಲ್ಯಾಣಪುರ, ಸೋಮೇಶ್ವರಗಳಲ್ಲಿ ವೀರಶೈವ ಧರ್ಮದ ಪ್ರಭಾವವನ್ನು ಸೂಸಿಸುವ ಶಾಸನಗಳು ಹೆಚ್ಚಾಗಿ ಕಂಡುಬರುತ್ತದೆ. ಮೆಕೆಂಜಿಯವರು ಕಣ್ಮಣಿಯಾಗಿರುವ ಸರ್ವಜ್ಞ ಮಹಾಶಯನೂ ಕೆಳದಿ ರಾಜ್ಯದಲ್ಲಿ ಸಂಚರಿಸಿ ಧರ್ಮದ ಬಗ್ಗೆ ಜಾಗೃತಿ ಹಾಗೂ ಮೂಡನಂಬಿಕೆ, ಅಜ್ಞಾನದ ಬಗ್ಗೆ ಅರಿವು ಮೂಡಿಸಿರುವುದು ಇಂದಿಗೂ ಎಂದೆಂದಿಗೂ ಪ್ರಸ್ತುತವಾಗಿದೆ.

ಧರ್ಮಸ್ಥಳ, ಹುಂಚ, ಮೂಡಬಿದರೆಗಳ ಜೈನ ಧರ್ಮದ ಕೇಂದ್ರ ಪ್ರದೇಶಗಳು ಕೆಳದಿ ರಾಜ್ಯಗಳಲ್ಲಿಯೇ ಪ್ರಮುಖಸ್ಥಾನವನ್ನು ಪಡೆದುಕೊಂಡಿದ್ದವು ಸ್ವತಃ ಕೆಳದಿಯಲ್ಲಿಯೇ ಪ್ರಸಿದ್ಧ ತೀರ್ಥಂಕರಾದ ಪಾರ್ಶ್ವನಾಥ ಬಸದಿಯನ್ನು ಇಂದಿಗೂ ಕಾಣಬಹುದಾಗಿದೆ. ಈ ಧರ್ಮಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಈ ಕಾಲದಲ್ಲಿಯೇ ದೊರಕಿರುವುದನ್ನು ಗಮನಿಸಬಹುದಾಗಿದೆ ಇಷ್ಟೆಲ್ಲ ಇದ್ದರೂ ಸಹ ಕೆಲವು ಚರಿತ್ರೆಗಾರರು ಕೆಳದಿ ಅರಸರು ಜೈನಧಂದ ವಿನಾಶಕ್ಕೆ ಕಾರಣರಾದರೆಂಬ ವಾದ ಮಂಡಿಸುತ್ತಾರೆ. ಇವರಲ್ಲಿ ಹೆಚ್ಚಿನ ಸತ್ಯಾಂಶ ಕಾಣಿಸಿಗದೆನ್ನಬಹುದು. ಇಸ್ಲಾಂ ಧರ್ಮಕ್ಕೆ ಇಕ್ಕೇರಿ ಅರಸರು ಅಮೂಲ್ಯವಾದ ಸಹಕಾರ ನೀಡಿರುವುದು ಕಂಡುಬರುತ್ತದೆ. ಹಿರಿಯ ವೆಂಕಟಪ್ಪ ನಾಯಕನು ಭುವನಗಿರಿ ಮಾರ್ಗದಲ್ಲಿ ಇಸ್ಲಾಂ ಧರ್ಮದ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಮಸೀದಿಯೊಂದನ್ನು ನಿರ್ಮಿಸಿದನೆಂದು ಶಾಸನ ಆಧಾರಗಳಿಂದ ತಿಳಿಯಬಹುದಾಗಿದೆ. ಹಾಗೆಯೇ ಮಸೀದಿಗಳ ನಿರ್ವಹಣೆಗಾಗಿ ಭೂಮಿಗಳನ್ನು ನೀಡಿರುವುದು ಕಂಡುಬರುತ್ತದೆ. ಇಂದಿಗೂ ವಿವಾದ ಗ್ರಸ್ಥವಾಗಿರುವ ಶತಮಾನಗಳಿಂದಲೂ ಹಿಂದೂ ಮುಸ್ಲಿಂ ಐಕ್ಯದ ಸಂಕೇತ ಕ್ಷೇತ್ರವಾಗಿದೆ ಎಂದು ಹೇಳಿಕೊಳ್ಳುತ್ತಿರುವ ಬಾಬಾಬುಡನ್ ಗಿರಿಯ ಮಸೀದಿಯನ್ನು ವೀರ ಚೆನ್ನಮ್ಮಾಜಿಯು ಜೀರ್ಣೋದ್ಧಾರ ಮಾಡಿಸಿ ಅದರ ಪ್ರಗತಿಗೆ ಅಪಾರ ದಾನದತ್ತಿ ನೀಡಿರುವುದು ಉಲ್ಲೇಖನೀಯವಾಗಿದೆ. ಕ್ರಿ.ಶ. ೧೬೦೦ರಲ್ಲಿಯೇ ಬ್ರಿಟೀಷರು ಈಸ್ಟ್ ಇಂಡಿಯಾ ಕಂಪನಿಯೊಂದನ್ನು ಭಾರತದಲ್ಲಿ ಸ್ಥಾಪಿಸಿಕೊಂಡು ಭಾರತದಲ್ಲಿ ಸ್ಥಿರವಾಗಿ ನೆಲೆಯೂರಲು ಪ್ರಾರಂಭಿಸಿದ ಮೇಲೆ ದೇಶದ ಪ್ರತಿಯೊಂದು ಆಯಕಟ್ಟಿನ ಸ್ಥಳಗಳನ್ನು ಅವರು ನೆಲೆಸುವ ತಾಣಗಳನ್ನಾಗಿ ಪರಿವರ್ತಿಸಿಕೊಳ್ಳಲಾರಂಭಿಸಿದರು. ಇಕ್ಕೇರಿ ನಾಯಕರು ತಮ್ಮ ರಾಜ್ಯವನ್ನು ಭಾರತದಲ್ಲಿಯೇ ಅತ್ಯಂತ ಹೆಚ್ಚಿನ ಶ್ರೀಮಂತ ಪ್ರದೇಶವಾಗಿರುವ ಮಲೆನಾಡಿನ ಮಡಿಲಲ್ಲಿ ಸ್ಥಾಪಿಸಿದ್ದರಿಂದ ಈ ಪ್ರದೇಶಕ್ಕೆ ಬ್ರಿಟಿಷರು ಅಂದರೆ ಕ್ರೈಸ್ಥರು ಬಂದು ನೆಲೆಸುವುದು ಸಾಮಾನ್ಯವೇ ಆಗಿದ್ದಿತ್ತು. ಕೆಳದಿ ಅರಸರು ಕ್ರೈಸ್ತ ಮತಕ್ಕೂ ಆಶ್ರಯ ನೀಡಿದರು. ಕ್ರೈಸ್ತಧರ್ಮ ಪ್ರಚಾರಕರು ಮೊದಲು ಸಂಸ್ಥಾನದಲಿದ್ದ ದೀನದಲಿತರುಗಳಿಗೆ ಆಹಾರ, ಬಟ್ಟೆಗಳನ್ನು ನೀಡಿ ಅವರ ಮನಪರಿವರ್ತನೆ ಮಾಡಿಸಿ ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳುವಲ್ಲಿ ಸಫಲರಾಗುತ್ತಿದ್ದರು. ಇದಕ್ಕೆ ಅಂದಿನ ಸಾಮಾಜಿಕ ಪರಿಸ್ಥಿತಿಯೂ ಸಹ ಮೂಲ ಕಾರಣವಾಗಿದ್ದಿತ್ತೆನ್ನಬಹುದಾಗಿದೆ. ಶಿವಪ್ಪನಾಯಕನು ಫಾದರ್ ಜೋಸೆಫ್ ಎಂಬುವವನನ್ನು ಆಸ್ಥಾನಕ್ಕೆ ಬರಮಾಡಿಕೊಂಡು ಮತಾಂತರವಾಗದಂತೆ ಕಟ್ಟುಪಾಡು ಮಾಡಿಕೊಂಡು ಆಯಾ ಧರ್ಮದಲ್ಲಿಯೇ ಅವರು ಜೀವಿಸಲು ಅನುವು ಮಾಡಬೇಕೆಂದು ಅದಕ್ಕಾಗಿ ಅವರುಗಳಿಗೆ ರಕ್ಷಣೆ ಒದಗಿಸಿದನೆಂದು ಬಿ.ಎಸ್. ಶಾಸ್ತ್ರೀಯವರು "ದಿ ಪೋರ್ಚುಗೀಸ್ ಇನ್ ಕೆನರಾ"ಎಂಬ ಅಪ್ರಕಟಿತ ಮಹಾ ಪ್ರಬಂದದಲ್ಲಿ ಉಲ್ಲೇಖಿಸುತ್ತಾರೆ. ವೀರ ಚೆನ್ನಮ್ಮಾಜಿಯು ರೋಮನ್ ಕೆಥೋಲಿಕರಿಗೆ ಮಂಗಳೂರಿನ ಹಂಪನಕಟ್ಟೆಯಲ್ಲಿ ಮಿಲಾಗ್ರಿಸ್ ಇಗರ್ಜಿಯನ್ನು ಕಟ್ಟುವುದಕ್ಕೆ ನಿವೇಶನವನ್ನು ದಾನವಾಗಿ ನೀಡಿ ತನ್ನ ಔದಾರ್ಯವನ್ನು ಮೆರೆದಿದ್ದಾಳೆ.

ಹಿಂದೂ ವೀರಶೈವ, ಜೈನ, ಮುಸ್ಲಿಂ, ಕ್ರೈಸ್ತ ಹೀಗೆ ಅನೇಕ ಅನೇಕ ಪ್ರಮುಖ ಧರ್ಮಗಳು ತಮ್ಮದೇ ಆದ ಪ್ರಭಾವಗಳಿಂದಾಗಿ ಅಭಿವೃದ್ಧಿ ಹೊಂದುತ್ತಿದ್ದರೆ ಮೇಲಿನ ಯಾವ ಧರ್ಮಕ್ಕೂ ಸೇರದೆ ಧರ್ಮರಹಿತರಾಗಿದ್ದ ಶೂದ್ರರು (ಪಂಚಮರು) ಸಮಾಜದಲ್ಲಿ ನಾಯಿಗಿಂತಲೂ ಕೆಳಮಟ್ಟದ ಜೀವನ ನಡೆಸುತ್ತಿದ್ದರು. ಅಸ್ಪೃಶ್ಯತೆಯು ಸಮಾಜದಲ್ಲಿ ತಾಂಡವಾಡುತ್ತಿದ್ದಿತು. ಮೇಲು, ಕೀಳು ಎಂಬುವುದು ಸರ್ವೇಸಾಮಾನ್ಯವಾಗಿದ್ದಿತ್ತು. ಜೀತಪದ್ಧತಿ ಸಾಮಾಜಿಕ ಕಟ್ಟುಪಾಡುಗಳು, ಈ ಜನಾಂಗದವರನ್ನು ಜೀವನಪೂರ್ತಿಯಾಗಿ ಇಡಿಯಾಗಿ ಹಿಂಡುವ ಕೆಲಸಮಾಡಿ ಅವರನ್ನು ಒಂದು ರೀತಿಯ ಮಾನಸಿಕ ಷಂಡರನ್ನಾಗಿಸುವ ಪರಿಸ್ಥಿಯೂ ಇತ್ತೆಂದರೆ ತಪ್ಪಾಗಲಾರದು. ಮಧ್ಯೆ ಮಧ್ಯೆ ಇವರ ಅಭಿವೃದ್ಧಿಗೆ ಕೆಲವು ಅಭಿವೃದ್ಧಿ ಕೆಲಸಗಳು ಕೈಗೊಂಡಿರುವುದು ಕಂಡು ಬಂದರೂ ಅವು ಫಲಕಾರಿಯಾದಂತೆ ಕಂಡುಬರುವುದಿಲ್ಲ. ವರ್ಣಾಶ್ರಮ ಪದ್ಧತಿಯು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿದ್ದಿತ್ತು. ಬ್ರಾಹ್ಮಣರು ರಾಜಪರಿವಾರದವರಿಗಿಂತಲೂ ಉತ್ತಮ ವರ್ಗದವರಾಗಿದ್ದರು. ಮುಂದೆ ಸಾಮಾಜಿಕ ಪದ್ಧತಿಯಲ್ಲಿ ಇವರ ವರ್ಣನೆಯನ್ನು ಸಂಕ್ಷಿಪ್ತವಾಗಿ ಆಧಾರಗಳ ಸಮೇತ ನೋಡಬಹುದಾಗಿದೆ.

**ದೇವಾಲಯಗಳು :** ಹಿಂದೆ ನಾವು ಚರ್ಚಿಸಿರುವಂತೆ ಕೆಳದಿ ಮನೆತನದ ಉಗಮಕ್ಕೆ ಮೂಲ ಕಾರಣವೆಂದರೆ ಶ್ರೀರಾಮೇಶ್ವರ ಲಿಂಗ, ಈ ಶ್ರೀರಾಮೇಶ್ವರನೇ ಕೆಳದಿ ಅರಸರ ಆರಾಧ್ಯ ಮನೆದೇವರು, ಆದರೆ ದೊಡ್ಡ ಸಂಕಣ್ಣನಾಯಕನ ನಂತರದಲ್ಲಿ ಇಕ್ಕೇರಿಯ ಅಘೋರೇಶ್ವರನು ಈ ವಂಶದವರ ಕುಲದೇವರಲ್ಲಿ ಒಬ್ಬನಾದನು. ಸಹಜವಾಗಿಯೇ ಈ ದೇವಾನು ದೇವರುಗಳಿಗೆ ಅರಸರು ಉದಾರವಾಗಿ ದಾನನೀಡಿರುವುದು ಕಂಡುಬರುತ್ತದೆ.

ಶ್ರೀರಾಮೇಶ್ವರ ದೇವಾಲಯ ಕುರಿತು ಕೆಳದಿ ಗುಂಡಾಜೋಯಿಸ್ ರವರು ತಮ್ಮ ಕೆಳದಿಯ ಸಂಕ್ಷಿಪ್ತ ಇತಿಹಾಸ ಎಂಬ ಪುಸ್ತಕದಲ್ಲಿ ಲಿಂಗಣ್ಣ ಕವಿಯು ತನ್ನ ನೃಪ ವಿಜಯದಲ್ಲಿ ಪ್ರಸ್ಥಾಪಿಸಿರುವ ದೇವಾಲಯ ಕುರಿತ ವಿಷಯವನ್ನು ಸಂಪೂರ್ಣವಾಗಿ ವಿವರಿಸಿದ್ದಾರೆ. ಅದನ್ನು ಇಲ್ಲಿ ಉಲ್ಲೇಖಿಸುವುದು ಉತ್ತಮವೆಂದು ಹೇಳಬಹುದು.

*ಶ್ರೀಮತ್ಕೆಳದಿಯ ಪೊಳಲೊಳ್*
*ಹೈಮವತೀರಮಣನೆಸೆದ ಲಿಂಗಾಕೃತಿಯಿಂ*
*ರಾಮೇಶ್ವರಾಖ್ಯೆಯಿಂ ತಳೆ*
*ದಾ ಮಹಿಯೊಳ್ ಪುತ್ತದಲ್ಲಿ ನೆಲೆಸಿರುತಿರ್ದಂ*

ಅಂದರೆ ಕೆಳದಿಯಲ್ಲಿ ಇರುವ ಶ್ರೀರಾಮೇಶ್ವರ ಲಿಂಗವು ಕೆಳಗೆ ನೀಡುವ ಆಧಾರಗಳಿಂದ ಇದೊಂದು ಉದ್ಭವಲಿಂಗವೆಂದು ಮೇಲು ನೋಟಕ್ಕೆ ಕಂಡುಬರುತ್ತದೆ. ಅದನ್ನು ಲಿಂಗಣ್ಣ ಕವಿಯು ವಿವರಿಸುತ್ತಾ. "ಭದ್ರಪಾಗ್ರಜನಪ್ಪ ಚೌಡಪನ ಸ್ವಪ್ನದೊಳ್ ಶ್ರೀಮತ್ಸರಮೇಶ್ವರಂ ಮನಂಗೊಳಿಪ್ಪ ವೃದ್ಧ ಜಂಗಮ ಸ್ವರೂಪದಿಂ ಪ್ರಸನ್ನನಾಗಿ ಕೆಳದಿ ಪುರದೆಡೆಯೊಳ್ ಸೀಗೆವಳ್ಳಿಯೆಂಬ ತಾಣದೊಳ್ ತುರುಗುಲ್ಮಲತಾ ಪ್ರತಾನಾವೃತಮಾದ ಸೀಗೆವೆಳೆಯ ಮಧ್ಯದೊಳ್ ರಾಮೇಶ್ವರನೆಂಬ ಮಹಾದಿವ್ಯಲಿಗಂ ನೆಲೆಸಿರ್ಪುದಾಲಿಂಗಂ ಬಹುಕಾಲಮಾರಭ್ಯ ವಲ್ಮೀಕಾಚ್ಛಾದಿತಮಾಗಿರ್ಪುದಲ್ಲ ತಲ್ಲಿಂಗಮಿಪುದರ್ಕೆ ಕುರುಹೇನೆಂ ದೊಡೆ ನಿನ್ನ ಮನೆಯೊಳೆಸೆದ ಕಪಿಲೆವಣ್ಣನ ಪಶು ಕರುವೆರಸಾತಾಣ ಮನ್ನೈದಿನಾಂದಾಪುತ್ತದ ಮೇಗಡೆಯೊಳ್ ಪ್ರತಿದಿನಂ ಪಾಲ್ಗರೆದು ಬರುತಿರ್ಪುದೆ ಕುರುಹಾಲಿಂಗಮಂ ಸದ್ಭಕಿತಿಂದರ್ಚಿಸಲ್ ನಿನಗಖಂಡ ಪೃಥ್ವೀಪತಿತ್ವಂ ಕೈ ಸಾರ್ವುದೆಂದು ಸಿರ್ದಾ ಜಂಗಮ ಮೂರ್ತಿಯಂ ತಥಾನಮನ್ನೈದಲೆಳ್ಚತುಗ ಪರಮ ಹರ್ಷಿತನಾಗಿ ನಿಜ ಮಾತೃವಪ್ಪ ಬಸವಾಂಬಿಕೆಯೊಳಿಂತು ಕಂಡ ಸ್ವಪ್ನವನು ಸಿರಲದಂ ಕೇಳ್ದಂತು ಸ್ವಪ್ನದೊಳ್ ನಿರೂಪಿಸಿಪೋದ ಜಂಗಮಮೂರ್ತಿ ಸಾಕ್ಷಾತ್ಪರಮೇಶ್ವರನೆಂಬುದೆ ನಿಶ್ಚಯವಾರಾಮೇಶ್ವರ ಲಿಂಗಕ್ಕೆ ಭಕ್ತಿಯ್ನೊಡೆಕೊಂಡೊಡೆ ಮುಂದೆ ನಿನಗೆ ಮಹಾಭಿವೃದ್ಧಿಯುಂಟಾದರ್ಕೆ ಸಂದೆಗಮಿಲ್ಲೆಂದು ಸಿರಲಂತಾ ಮಾತಂ ಕೇಳ್ದು ಮರುದಿವಸಂ ಬೇಹಚರರಂ ಕಾಯ್ದಿರ್ಕಿ ನಿಜ ಮಂದಿರದೊಳಿರ್ಪ ಕಪಿಲೆವಣ್ಣದ ಪಸುವಾ ಪುತ್ರದೆಡೆಗೈದಿ ಸುಭಿಯಂ ಕರೆದು ಬರ್ಪುದಂ ಗೋರಕ್ಷಕರ ಮುಖದಿಂದರಿದಲ್ಲಿ ಗೈದಿಯಾಪುತ್ತಾವನಗುಳಿಸಿ ನೋಡಲದರೊಳ್ ಕಂಗೊಳಿಸುತಿರ್ಪ ಮಂಗಲಮೂರ್ತಿಯಪ್ಪ ಶ್ರೀ ರಾಮೇಶ್ವರ ಲಿಂಗಮಿರಲ್ಕಂಡು ವಿಸ್ಮಿತನಾಗಿ ಕರಸರೀಜಮಂ ಮುಗಿದು ಭಯಭರಿತ ಭಕ್ತಿಯಿಂ ಪೊಡಮಟ್ಟಾನುತಿಸಿ....

ಮೊದಲು ಚೌಡಪ್ಪನು ತಮ್ಮ ವಂಶದ ಸ್ಥಾಪನೆಗೆ ಮೂಲ ಕಾರಣವಾದ ಶ್ರೀರಾಮೇಶ್ವರ ದೇವಾಲಯವನ್ನು ಮರದಿಂದ ಕಟ್ಟಿಸಿದನು. ನಂತರ ಅಳ್ವಿಕೆಗೆ ಬಂದ ಸದಾಶಿವನಾಯಕನು ಇಂದು ಕಾಣುವ ಸುಂದರ ಶಿಲೆಯಿಂದ ದೇವಾಲಯವನ್ನು ನಿರ್ಮಿಸಿದನು. ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ರಾಮೇಶ್ವರ ದೇವರ ರಂಗಮಂಟಪ ನಿರ್ಮಾಣವಾಯಿತೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಶ್ರೀ ರಾಮೇಶ್ವರನನ್ನು ಕುರಿತು, ವೆಂಕಣ್ಣ ಕವಿಯಿಂದ "ಸಾಕ್ಷಾತ್ ಕೆಳದೀಶ್ವರ ರಾಮೇಶ" "ವರದಾತಿರವಾಸ ಕೆಳದಿಯ ಪುರವರಾಧೀಶ ರಾಮೇಶ" ಎಂಬ ಅಂಕಿತವಿರುವ ಕೀರ್ತನೆಗಳು ರಚನೆಗೊಂಡು ಅಂದಿನ ಧಾರ್ಮಿಕ ಸಂಸ್ಕೃತಿಯನ್ನು ಎಳೆಎಳೆಯಾಗಿ ತಿಳಿಸುತ್ತವೆ.

ಕೆಳದಿ ಶ್ರೀ ರಾಮೇಶ್ವರನಂತೆ ಇಕ್ಕೇರಿಯ ಅಘೋರೇಶ್ವರನಿಗೂ ಅರಸರು ಸಂಸ್ಥಾನದಲ್ಲಿ ಸಾಕಷ್ಟು ಭಕ್ತಿಭಾವದಿಂದ ನೆಡೆದುಕೊಂಡಿದ್ದರೆನ್ನಬಹುದು ಇದಕ್ಕೆ ಸಾಕ್ಷಿಯೆಂಬಂತೆ ಈ ದೇವಾಲಯ ಕುರಿತು ಶಿವತತ್ವ ರತ್ನಾಕರದಲ್ಲಿ ಹೀಗೆ ವರ್ಣಿಸಲಾಗಿದೆ.

*೧. ಗದಾಂ ತ್ರಿಶೂಲಕಂ ಜೈನದಧಾನಾಃ ಕ್ರಯಶೋಸಿತಾಃ*
*ದ್ವಾತ್ರಿಂಶದ್ದಸ್ತ ಮೂರ್ತೇಸ್ತು ಶಕ್ತಯಶ್ಚ ಪ್ರಕೀರ್ತತಾಃ*

*೨. ಏಕವಕ್ತ್ರಂ ಸದಾನಂದಂ ದಾತ್ರಿಂಶದ್ಭುಜಸಂಯುತಮ್*
*ಜಟಾಮುಕುಟ ಸಂಯುಕ್ತಂ ತ್ರಿಣೇತ್ರಂ ಚಂದ್ರಶೇಖರಮ್*

*೩. ಅಭಯಂ ಖಡ್ಗ ಶೋಲೋಚ ಚಕ್ರಂ ಡಮರುಕಂ ತಥಾ*
*ದಧಾನ ಮಸ್ಥಿಭಾಣಾಚ ಗಧಾಂ ಪದ್ಮಂ ಕಪಾಲಕಂ*

*೪. ಜ್ಞಾನ ಮುದ್ರಾಂ ಕುಂತ ಹಸ್ತಂ ಅಂಕುಶಂ ಚಾಕ್ಷಮಾಲಿಕಾಂ*
*ಖಟ್ವಾಂಗಂ ಪರಶುಂ ಚೈವದಧಾನಂ ದಕ್ಷಿಣೈರ್ಭರ್ಲಾಜೈಃ*

*೫. ವರಂ ಚ ಫಲಕಂ ಚೈವ ಟಂಕಂ ಪಶಂಚ ಮುದ್ಗರಂ*
*ನಾಗಮಗ್ನಿಂ ಮೃಗಂ ಘಂಟಾಂ ಧನುಶ್ಚ ಕಟಹಸ್ತಕಂ*

*೬. ರತ್ನಂ ಚ ಕುಮುದಂ ಕುಂಭಂ ಖೇಟಕಂ ಪುಸ್ತಕಂ ತಥಾ*
*ಅಘೋರಮುರ್ತಿಂ ನೀಲಾಂಭ ರುಂಡಮಾಲಾ ವಿಭೂಕ್ಷಿತಮ್*
*ಕಾಲ ಮುಂಡಸ್ಯ ಶಿರಸಿ ಸ್ಥಿತಂ ಸರ್ವಾಭಯ ಪ್ರದಮ್*

ಎಂದು ವರ್ಣಿಸಿರುವುದನ್ನು ವೆಂಕಟೇಶ್ ಜೋಯಿಸ್ ರವರು ಸಂಪೂರ್ಣವಾಗಿ ತಮ್ಮ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಈ ದೇವರಿಗೆ ಸಂಸ್ಥಾನದಲ್ಲಿ ಶ್ರೀ ರಾಮೇಶ್ವರನಷ್ಟೇ ಸ್ಥಾನಮಾನವನ್ನು ದಾನವಾಗಿ ನೀಡಿ ತೆರಿಗೆಯಿಂದ ಮುಕ್ತರನ್ನಾಗಿಸಲಾಗಿತ್ತು. ಕ್ರಿ.ಶ. ೧೭ನೇ ಶತಮಾನದಲ್ಲಿ ಇಕ್ಕೇರಿಗೆ ಭೇಟಿ ನೀಡಿದ್ದ ಇಟಲಿಯ ಪ್ರವಾಸಿಗ ಪಿಯತ್ರೋದೆಲ್ಲಾವೆಲ್ಲೆಯು ಬೃಹತ್ತಾದ ಈ ಮೂರ್ತಿಯನ್ನು ನೋಡಿ ಭಕ್ತ ಪರಾಧೀನನಾಗಿರುವನೆಂದು ತನ್ನ ಪ್ರವಾಸಿ ಕಥನದಲ್ಲಿ ತಿಳಿಸಿರುವುದು ಕಂಡು ಬರುತ್ತದೆ.

ಕೆಳದಿಯ ಶ್ರೀರಾಮೇಶ್ವರ ದೇವಾಲಯದ ನಿರ್ಮಾಣ ಕುರಿತು ಕೆಳದಿ ಗುಂಡಾ ಜೋಯಿಸ್ ರವರು ತಮ್ಮ ಕೆಳದಿ ಸಂಕ್ಷಿಪ್ತ ಇತಿಹಾಸದಲ್ಲಿ ಪ್ರಾಚೀನಾ ದಾಖಲೆಗಳೊಂದಿಗೆ ಅಂತಿಮವಾಗಿ ತಾಳೆ ನೋಡಿ ಕ್ರಿ.ಶ. ೧೫೮೩ ರಿಂದ ೧೬೩೦ ಅವಧಿಯಲ್ಲಿ ಆಳ್ವಿಕೆ ನಡೆಸುತ್ತಿದ್ದ ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ಸಂಪೂರ್ಣವಾಗಿ ಶಿಲೆಯಲ್ಲಿ ನಿರ್ಮಾಣವಾಯಿತ್ತೆಂಬ ತೀರ್ಮಾನಕ್ಕೆ ಬರುತ್ತಾರೆ. ಇದಕ್ಕೆ ಅವರು ನೀಡುವ ಪ್ರಾಚೀನ ಆಧಾರಗಳೆಂದರೆ

*೧. ಕೆಳದಿ ನೃಪವಿಜಯದಲ್ಲಿ'*

........... ತತ್ಪುರೀ ರಾಮೇಶ್ವರ ದೇವರ ಗರ್ಭಗೃಹಮಂ ಶಿಲಾಮಯವನಾಗಿಸಿ ………… ಇದು ಶಾ.ಶಕ.೧೪೨೨ರಲ್ಲಿ, ಎಂದರೆ ಕ್ರಿ.ಶ. ೧೫೦೦ರಲ್ಲಿ ಚೌಡಪ್ಪನಾಯಕನು ಪಟ್ಟಾಭಿಷೇಕವಾದೊಡನೆ (ಪುಟ - ೨೬ - ಏಓಗಿ)

*೨. ಉರುತರ ಕೆಳದಿಯ ರಾಮೇ*
*ಶ್ವರದೇವರ ನಂದಿಮಂಟಪವನಧಿಕ ಮನೋ*
*ಹರ ಮಾಗೆ ಶಿಲಾಮಯಮಂ*
*ವಿರಚಿಸಿದಂ ಶಿಲ್ಪ ಶಾಸ್ತ್ರ ಕೌಶಲವಿಧಿಯಿಂ*

ಇದು ಶಾ.ಶಕ. ೧೪೩೬ ರಿಂದ ೧೪೬೮ ಎಂದು ಅಂದರೆ ಕ್ರಿ.ಶ. ೧೫೧೪ ರಿಂದ ೧೫೪೬ ರವರೆಗೆ ಸದಾಶಿವನಾಯಕನ ಕಾಲವಾಗಿರುತ್ತದೆ (ಪುಟ - ೪೦, ೪೧ - KNV)

೩. ……….ರಾಮೇಶ್ವರ ದೇವರ ರಂಗಮಂಪಟಪಮಂ ಶಿಲಾಮಯವನಾಗಿಸಿ……… ಇದು ಶಾ.ಶಕ. ೧೫೦೫ ರಿಂದ ೧೫೫೨ ರವರೆಗೆ ಎಂದರೆ ಕ್ರಿ.ಶ. ೧೫೮೩ ರಿಂದ ೧೬೩೦ರವರೆಗೆ ಹಿರಿಯ ವೆಂಕಪಟ್ಟ ನಾಯಕನ ಕಾಲವಾಗಿರುತ್ತದೆ.

೪. ಮೈಸೂರು ಸರ್ಕಾರದ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯವರು ತಮ್ಮ ೧೯೩೨ರ ವಾರ್ಷಿಕ ವರದಿಯಲ್ಲಿ,

Traditionally, this temple is said to have been built by Chauwadappa Nayak, a vijayanagar officer who get keladi and the neighbourhood as a hereditory kingdom from the emperor. Chowdappa Nayak ruled between 1499 – 1513 and the temple must have been built in this days, before the capital was transferred to IKKERI. ಎಂದು ಉಲ್ಲೇಖಿತವಾಗಿರುತ್ತದೆ.

೫. ರೈಸ್ ರವರು ಗೆಜೆಟೀರ್ ನಲ್ಲಿ

Chowdagowa after receiving from the vijayanagar king a seal (Sikha Moharu) the town of keladi was then founded, together with the temple of Sree Rameshwara.

ಈ ಮೇಲಿನ ನಾಲ್ಕು ಮತ್ತು ಐದರಲ್ಲಿ ಕಂಡುಬರುವ ಅಂಶವೆಂದರೆ ಈ ದೇವಾಲಯವು ಸಂಸ್ಥಾನದ ಮೊದಲನೆಯ ದೊರೆ ಚೌಡಪ್ಪನಾಯಕನು ರಾಜಧಾನಿಯನ್ನು ಕೆಳದಿಯಿಂದ ಇಕ್ಕೇರಿಗೆ ಬದಲಾಯಿಸುವ ಮುನ್ನ (ಕ್ರಿ.ಶ. ೧೪೯೯ ರಿಂದ ೧೫೧೩ ರ ಅವಧಿಯಲ್ಲಿ) ನಿಮಿಸಲ್ಪಟ್ಟಿರಬೇಕೆಂದು ತಿಳಿದುಬರುತ್ತದೆ. ಇದು ಅನೇಕ ವಿದ್ವಾಂಸರ ಅಭಿಪ್ರಾಯವೂ ಸಹ ಆಗಿರುತ್ತದೆ. ಒಟ್ಟಿನಲ್ಲಿ ಇಕ್ಕೇರಿ ಅರಸರ ಧಾರ್ಮಿಕ ಸಂಸ್ಕೃತಿಯ ಪ್ರತೀಕವಾಗಿ ಇಂದಿಗೂ ಮಲೆನಾಡಿನ ಮಡಿಲಿನಲ್ಲಿ ಕಂಗೊಳಿಸುತ್ತಾ ಇಂದಿನ ಜನರಿಗೆ ತನ್ನ ವೈಭವದ ದಿನಗಳನ್ನು ನೆನೆಯುವಂತೆ ಮಾಡುತ್ತಾ ಬಿಸಿಲಿಗೆ, ಮಳೆಗೆ ಮೈಹೂಡಿ ನಿಂತಿದೆ ಈ ಶ್ರೀ ರಾಮೇಶ್ವರ ದೇವಾಲಯ.

ಕೆಳದಿ ಅರಸರ ಮತ್ತೊಂದು ಪ್ರಮುಖ ದೇವಾಲಯವೆಂದರೆ ಶ್ರೀ ಪಾರ್ವತಮ್ಮ ನವರ ದೇವಾಲಯ, ಇದನ್ನಿ ಕುರಿತು 'ಕೆಳದಿ ನೃಪವಿಜಯ'ದಲ್ಲಿ ಉಲ್ಲೇಖಿತವಾಗಿರುವ ಮಾಹಿತಿಯನ್ನು ಕೆಳದಿ ಗುಂಡಾ ಜೋಯಿಸ್ ರವರು ತಮ್ಮ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ.

*ರಾಮೇಶ್ವರ ಲಿಂಗದ ಸ*
*ದ್ವಾ ಮದೊಳುಜ್ವಲಿಪ ಪಾರ್ವತೀ ಮೂರ್ತಿಯನು*
*ದ್ದಾ ಮಾಗಮ ವಿಧಿಯಿಂ ತ*
*ದ್ಭೂಮಿಪ ತಿಲಕಂ ಪ್ರತಿಷ್ಠೆಯಂ ವಿರಚಿಸಿದ* ||

ಎಂಬ ಮಹತ್ವದ ಸಾಲುಗಳನ್ನು ಉಲ್ಲೇಖಿಸಿ ಇದು ಶಾ.ಶಕ. ೧೪೩೬ ರಿಂದ ೧೪೬೮ರ ವರೆಗೆ ಎಂದರೆ ಕ್ರಿ.ಶ. ೧೫೧೪ ರಿಂದ ೧೨೫೪೬ರ ವರೆಗೆ ಸದಾಶಿವರಾಯ ನಾಯಕನ ಕಾಲದಲ್ಲಿ ನಿರ್ಮಾಣವಾಗಿರಬೇಕೆಂದು ನಿರ್ಧಾರಕ್ಕೆ ಬರುತ್ತಾರೆ. ಈ ದೇವಾಲಯವು ಅರ್ಧಭಾಗ ಶಿಲೆಯಿಂದಲೂ ಉಳಿದರ್ಧಭಾಗ ಆಧುನಿಕ ಮಾದರಿಯ ಕಟ್ಟಡಗಳಂತೆಯೂ ಇರುವುದು ಕಂಡುಬರುತ್ತದೆ. ಶಿಲಾಭಾಗದಲ್ಲಿ ಭೈರವ, ಷಣ್ಮುಖ, ಗಣೇಶ, ಅಂಧಕಾಸುರನ ಮೇಲೆ ನರ್ತನ ಮಾಡುತ್ತಿರುವ ಶಿವ, ಮೃದಂಗ ಬಾರಿಸುತ್ತಿರುವ ನಂದಿಕೇಶ, ಈಶ್ವರಲಿಂಗವನ್ನು ಪೂಜಿಸುತ್ತಿರುವ ಪುರುಷಾಮೃಗ, ಸನ್ಯಾಸಿ, ಕಣ್ಣಪ್ಪ, ಗಜಲಕ್ಷ್ಮಿ ಮತ್ತು ಯೋಧನೊಬ್ಬನು ಸ್ತ್ರೀಯಳೊಡನೆ ಸಂಭಾಷಿಸುತ್ತಿರುವ ವಿಗ್ರಹಗಳು ಇವೆ. ಆಧುನಿಕ ಕಟ್ಟದಂತಿರುವ ಭಾಗದಲ್ಲಿ ಒಂದಕ್ಕೊಂದು ಹೋಲದಂತಿರುವ ಸುಂದರ ರಂಗೋಲಿಗಳು ಮರದ ಕೆತ್ತನೆಯಲ್ಲಿ ಮನಮೋಹಕವಾಗಿ ಕಂಡುಬರುತ್ತವೆ.

ಇಂದಿಗೂ ಸಹ ದೇವಾಲಯದಲ್ಲಿ ಶ್ರೀ ಪಾರ್ವತಮ್ಮನ ದರ್ಶನ ಮಾಡಿದರೆ ಭಕ್ತರ ಕಷ್ಟಗಳು ದೂರವಾಗುತ್ತವೆ. ಎಂಬ ನಂಬಿಕೆ ಬೇರೂರಿದೆ. ನವರಾತ್ರಿಯಂದು ಇಲ್ಲಿ ದುರ್ಗಾಪೂಜೆಯು ಬಹು ವಿಜ್ರಂಭಣೆಯಿಂದ ನಡೆಯುತ್ತದೆ. ಆಗ ವಿವಿಧ ರೀತಿಯ ಜನಪದ ನೃತ್ಯ, ಜನಪದ ಸಂಗೀತ, ಗೀತೆಗಳನ್ನು ಸುತ್ತ ಮುತ್ತಲಿನ ಜನ ನಡೆಸಿಕೊಡುತ್ತಾರೆ. ಈ ಸನ್ನಿವೇಶವಂತೂ ಇಕ್ಕೇರಿ ನಾಯಕರ ವೈಭವದ ದಿನಗಳನ್ನು ನೆನಪಿಸುತ್ತದೆ.

ಅರಸರ ಮತ್ತೊಂದು ಬೃಹತ್ ಪ್ರಮಾಣದ ದೇವಿಯ ಮಂದಿರವೆಂದರೆ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ. ಇದೂ ಸಹ ಇಕ್ಕೇರಿ ನಾಯಕರ ಆರಾಧ್ಯ ದೇವತೆಯಾಗಿ ಕಂಗೊಳಿಸಿತು. ಈ ದೇವಿಯ ದೇವಸ್ಥಾನಕ್ಕೆ ಕೆಳದಿ ಅರಸರು ಸಲ್ಲಿಸಿದ ಸೇವೆ ಅಪಾರವಾದದ್ದು. ವೆಂಕಟಪ್ಪನಾಯಕನು ಇದನ್ನು ಶಿಲೆಯಿಂದ ನಿರ್ಮಿಸಿದರೆ ವೀರರಾಣಿ ಚೆನ್ನಮ್ಮಾಜಿಯು ಸಾಕಷ್ಟು ದಾನದತ್ತಿ ನೀಡಿ ಅಭಿವೃದ್ಧಿಪಡಿಸಿದಳು. ಶಿವರಾತ್ರಿ ಸಮಯದಲ್ಲಿ ಇಲ್ಲಿ ತುಂಬಾ ವಿಜೃಂಭಣೆಯ ಆಚಾರಗಳು ನಡೆಯುತ್ತಿದ್ದವು. ಶಿವಪ್ಪನಾಯಕನು ಈ ದೇವಿಗೆ ಅಪಾರ ಭಕ್ತಿಭಾವದಿಂದ ನೆಡೆದುಕೊಂಡು ಬರುತ್ತಿದ್ದನೆಂದು ಕೈಫಿಯತ್ತುಗಳಿಂದ ತಿಳಿದುಬರುತ್ತದೆ.

ಕೆಳದಿ ಅರಸರ ಸಾಮ್ರಾಜ್ಯದಲ್ಲಿ ಕೊಲ್ಲೂರು, ಶೃಂಗೇರಿ, ಉಡುಪಿ, ಮೂಡಬಿದರೆ, ಸುಬ್ರಮಣ್ಯ, ಶಂಕರನಾರಾಯಣ, ಗೋಕರ್ಣ, ಕಳಸ, ಉಡುಗಣಿ ಮೊದಲಾದ ಧಾರ್ಮಿಕ ಕ್ಷೇತ್ರಗಳು ಕಂಗೊಳಿಸಿದ್ದವು ಹಾಗೂ ಹಿಂದೆ ನಿರ್ಮಾಣವಾಗಿದ್ದ ಪುರಾತನ ದೇವಾಲಯಗಳ ನಿರ್ವಹಣೆ, ಜೀರ್ಣೋದ್ಧಾರದ ಕೆಲಸವನ್ನು ಸಹ ಇವರು ನಿರ್ವಹಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ರಾಜರು ಯುದ್ಧಕ್ಕೆ ಹೊರಡುವುದಕ್ಕೆ ಮುಂಚೆ ಸೈನ್ಯಸಮೇತವಾಗಿ ದೇವಾಲಯಕ್ಕೆ ಬಂದು ದೇವ, ದೇವಿಯರ ದರ್ಶನ ಪಡೆದು ಮುನ್ನಡೆಯುತ್ತಿದ್ದರು, ಶೃಂಗೇರಿಯ ಶಾರದಾಂಬ ದೇವಾಲಯವು ಈ ಅರಸರ ಕಾಲದಲ್ಲಿ ಅಪಾರವಾದ ಭಕ್ತಿ ಹಾಗೂ ಆರ್ಥಿಕ ಸೇವೆ ಪಡೆದಿದೆ. ಈ ದೇವಾಲಯ ನಿರ್ವಹಣೆಗಾಗಿ ಸುತ್ತಲಿನ ಗ್ರಾಮಗಳನ್ನು ದಾನವಾಗಿ ಕೊಡಲಾಗಿತ್ತು. ಆ ಗ್ರಾಮದ ಜನರು ತಾವು ಬೆಳೆದ ದವಸ ದಾನ್ಯಗಳನ್ನು ನಿಗದಿತ ಪ್ರಮಾಣದಲ್ಲಿ ತಪ್ಪದೆ ದೇವಾಲಯಕ್ಕೆ ಸಲ್ಲಿಸಬೇಕಾಗಿತ್ತು. ತಪ್ಪಿದವರಿಗೆ ಶಿಕ್ಷೆಯ ಮೂಲಕ ವಸೂಲು ಮಾಡುವ ವ್ಯವಸ್ಥೆಯೂ ಜಾರಿಯಲ್ಲಿದ್ದಿತ್ತು. ಬಸಪ್ಪ ನಾಯಕನು ಶೃಂಗೇರಿ ಮಠಕ್ಕೆ ಬರಬೇಕಾದ ಕಾನಿಕೆಯ ವಸೂಲಿಗಳಲ್ಲಿ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಸಹಕರಿಸುವಂತೆ ಕೇಳಿಕೊಂಡದ್ದಲ್ಲದೆ. ಉದಾಸೀನ ಮಾಡಿದವರಿಗೆ ಸರಿಯಾದ ಶಿಕ್ಷೆ ನೀಡಿ ಅವರನ್ನು ಒಪ್ಪಿಸುವಂತೆ ನಿರೂಪವೊಂದನ್ನು ಹೊರಡಿಸಿದನೆಂದ ಮೇಲೆ ಅಂದಿನ ಕಾಲದ ಕೆಳವರ್ಗದ ಜನರ ರೈತರ ಸ್ಥಿತಿಗತಿಯ ಚಿತ್ರಣವನ್ನೇ ಊಹಿಸಬಹುದು. ಕೆಳದಿ ಅರಸರು ಶೃಂಗೇರಿ ಜಗದ್ಗುರುಗಳಲ್ಲಿ ಹಾಗೂ ಶೃಂಗೇರಿ ಮಠದಲ್ಲಿ ನಿಕಟ ಸಂಪರ್ಕ ಹೊಂದಿದ್ದರು. ವಿಜಯನಗರದ ಪತನದ ನಂತರ ಶೃಂಗೇರಿ ಮಠವು ನಶಿಸಿ ಹೋಗುತ್ತಿದ್ದ ಸಂದರ್ಭದಲ್ಲಿ ಇಕ್ಕೇರಿ ನಾಯಕರು ಅದನ್ನು ಪೋಷಿಸಿದ್ದರು. ಅವರ ಅಂದಿನ ಅಕ್ಕರೆಯ ಪೋಷಣೆಯಿಂದಲೇ ಇಂದಿಗೂ ಸಹ ಅದು ಸಮೃದ್ಧವಾಗಿ ಬೆಳೆದುಬರುತ್ತಿದೆ.

ಇಕ್ಕೇರಿ ಅರಸರ ಕಾಲದಲ್ಲಿ ದೇವಾಲಯಗಳಲ್ಲಿ ಶ್ರೀ ರಾಮೇಶ್ವರ ದೇವಾಲಯ ವೀರಭದ್ರ ದೇವಾಲಯ, ಇಕ್ಕೇರಿಯ ಅಘೋರೇಶ್ವರ ದೇವಾಲಯ ಶೈವ ದೇವಾಲಯಗಳು ನಿರ್ಮಾಣವಾಗಿ ಕಂಗೊಳಿಸಿದರೆ. ಕಾಶಿಯಲ್ಲಿನ ಕರ್ದಮೇಶ್ವರ, ನರ್ಮದೇಶ್ವರ, ಭೀಮಚಂಡಿಕೆ, ವೃಷಭಧ್ವಜೇಶ್ವರ ದೇವಾಲಯಗಳು ಹಾಗೂ ಧರ್ಮಸ್ಥಳ, ಗೋಕರ್ಣ ದೇವಾಲಯಗಳು ಉತ್ತಮ ರೀತಿಯಲ್ಲಿ ಜೀರ್ಣೋದ್ಧಾರಗೊಂಡವು.

ಉಡುಪಿಯು ವೈಷ್ಣವರ ಪ್ರಮುಖ ಕೇಂದ್ರಬಿಂದುವಾಗಿದ್ದಿತು. ಉತ್ತರ ಕನ್ನಡ ಜಿಲ್ಲೆಯ ಸೋದೆಯ ವಾದಿರಾಜತೀರ್ಥರ ಮಠ ಹಾಗೂ ತೀರ್ಥಹಳ್ಳಿಯ ಅಕ್ಷೋಭತೀರ್ಥ ಮಠಗಳು ಸಹ ಕೆಳದಿ ಅರಸರಿಂದ ಅಪಾರ ಪ್ರಮಾಣದಲ್ಲಿ ಸೌಲಭ್ಯಗಳನ್ನು ಪಡೆದು ಮುನ್ನಡೆಯುತ್ತಾ ಬಂದವು. ಉಡುಪಿಯ ಕೃಷ್ಣ ದೇವಾಲಯದ ನಿರ್ವಹಣೆಗಾಗಿ ಬಾರಕೂರು ಪ್ರದೇಶಕ್ಕೆ ಸೇರಿದ್ದ ಹೂವಿನಕೆರೆ ಎಂಬ ಗ್ರಾಮವನ್ನು ದಾನವನ್ನಾಗಿ ಅರಸರು ದಯಪಾಲಿಸಿದ್ದರು. ಒಟ್ಟಿನಲ್ಲಿ ಇಕ್ಕೇರಿ ನಾಯಕರು ಧಾರ್ಮಿಕವಾಗಿ ಅಪಾರ ನಂಬಿಕೆ ಹೊಂದಿದವರಾಗಿದ್ದರು. ದೇವತಾ ಕಾರ್ಯಗಳನ್ನು ಸಂತೋಷದಿಂದ, ಭಕ್ತಿಯಿಂದ ವಿಜೃಂಭಣೆಯಿಂದ ಆಚರಿಸುತ್ತಿದ್ದರು.

ಅಂದು ವೀರಶೈವ ಧರ್ಮವು ರಾಜಧರ್ಮವಾಗಿದ್ದಿತು. ಸ್ವತಃ ಅರಸರೇ ವೀರಶೈವ ಧರ್ಮದವರಾಗಿದ್ದರು. ಅಂದು ವೂರಶೈವ ಮಠಗಳು ಸಮಾಜದ ಜೀವಾಳಗಳಂತೆ ರಕ್ತನಾಡಿಗಳಂತೆ ಕೆಲಸ ಮಾಡುತ್ತಿದ್ದವು. ಕರ್ನಾಟಕದ ಉದ್ದಗಲಕ್ಕೂ ಅಂದು ವೀರಶೈವ ಮಠಗಳು

ಕಂಡುಬರುತ್ತಿದ್ದರೂ ಇಕ್ಕೇರಿಯಲ್ಲಿ ಅವುಗಳ ಪ್ರಭಾವ ಪೂರ್ಣವೆನಿಸಿದ್ದವು. ಅಂದು ಕರ್ನಾಟಕದಾದ್ಯಂತ ಚಿತ್ರದುರ್ಗ, ಹುಬ್ಬಳ್ಳಿ, ಧಾರವಾಡ, ಗದಗ, ಕುಪ್ಪೂರು ಗದ್ದಿಗೆ, ಗೋಡೇಕೆರೆ, ಡೊಂಬಳ, ಕೊಪ್ಪಳ, ನವಲುಗುಂದ, ನಿಡುಸೋಸಿ, ಸಿದ್ಧಗಂಗಾ, ಸುತ್ತೂರು, ಅರಭಾವಿ, ಅಥಣಿ, ಅಂಕಲಗಿ, ಉರದಕೊಂಡ, ಗುರುಪುರ, ಭುವನಗಿರಿಗುರ್ಗ, ಸಿರಿಗೆರೆ, ಕಾನಾಮಡು, ಕೆಳದಿ, ಕ್ಯಾಸನೂರು, ಹೊನ್ನಾಳಿ, ಸೊಲ್ಲಾಪುರ, ಕಲ್ಯಾಣ, ಕಲ್ಬುರ್ಗಿ, ಬೆಟ್ಟದಪುರ, ಆನಂದಪುರ, ಹಾನಗಲ್ಲು, ಸ್ವಾದಿ, ಶಿರಸಿ, ಹಾವೇರಿ, ವೀರರಾಜ ಪೇಟೆ, ಉಡುಪಿ, ಗೂಳೂರು, ಹಾಲಕೆರೆ, ಸಾವಳಗಿ, ದುಧನಿ, ಆದವಾನಿ, ಹಾಸನ ಮೊದಲಾದ ಪ್ರದೇಶಗಳಲ್ಲಿ ನೆಲೆಗೊಂಡಿದ್ದ ಮಠಗಳು ಅತ್ಯಂತ ಪ್ರಭಾವ ಪೂರ್ಣವೆನ್ನಿಸಿದ್ದವು. ವೀರಶೈವ ಸಮಾಜದ (ಧರ್ಮದ) ಅಭ್ಯುದಯಕ್ಕಾಗಿ ಈ ಮಠಗಳು ಕೈಗೊಂಡಿರುವ ಕಾರ್ಯಗಳು ಅಂದಿನಿಂದಲೂ ಪ್ರಸಿದ್ಧಿಯಾಗಿದೆ. ಇವುಗಳು ಪ್ರಮುಖವಾಗಿ ವಿದ್ಯಾಪ್ರಸಾರ, ದಾಸೋಹದ ಪವಿತ್ರ ಕೆಲಸಗಳ ಜೊತೆಗೆ, ಅಹಿಂಸಾತತ್ವ ಪರಿಪಾಲನೆ, ಸನೇಹ, ಸಹಬಾಳ್ವೆಗೆ ಹೆಚ್ಚಿನ ಒತ್ತು ನೀಡಿ ಅಂದಿನಿಂದಲೂ ಮುಂದುವರೆದುಕೊಂಡು ಬರುತ್ತಿವೆ. ಕೆಲವು ಸ್ವಜನ ಪಕ್ಷಪಾತಗಳಿಂದಾಗಿ ಇಂದು ಸ್ವಲ್ಪ ಪ್ರಮಾಣದಲ್ಲಿ ಕೆಡುತ್ತಿರುವುದು ಕಂಡುಬರುತ್ತದೆ.

ಇಕ್ಕೇರಿ ನಾಯಕರು ಪ್ರತಿಯೊಂದು ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಿದಾಗಲೆಲ್ಲಾ ಹಣ ಭೂಮಿಯನ್ನು ದಾನ ಅಥವಾ ಕಾನೀಕೆಯ ರೂಪದಲ್ಲಿ ದೇವಾಲಯ, ಮಠಗಳಿಗೆ ಸಲ್ಲಿಸುತ್ತಿದ್ದರು, ಇದರಿಂದ ಅವರಿಗೆ ಕರ್ಮ ಎಂಬುವುದು ತೊಲಗಿ ಸುಖಶಾಂತಿ ದೊರಕುವುದೆಂದು ನಂಬಿದ್ದರು. ಕೆಲವು ದೇವಾಲಯಗಳಲ್ಲಿ ಆಗಮಶಾಸ್ತ್ರ ಪದ್ಧತಿಯಂತೆ ರಾಜರೇ ಧಾರ್ಮಿಕ ಉತ್ಸವಗಳನ್ನು ನಡೆಸುತ್ತಿದ್ದರು. ಯುಗಾದಿಯಿಂದ ಆರಂಭವಾಗಿ ವರ್ಷದ ಕೊನೆಯವರೆವಿಗೂ ಶ್ರಾವಣ, ನವರಾತ್ರಿ, ದೀಪಾವಳಿ, ಕಾರ್ತಿಕ, ಶಿವರಾತ್ರಿ ಮೊದಲಾದ ಮಾಸಗಳಲ್ಲಿ ವಿಶೇಷ ಸಮಾರಂಭಗಳು, ಜಾತ್ರೆಗಳು, ನಡೆಯುತ್ತಿದ್ದವು. ಇವು ಇಂದಿಗೂ ಸಹ ಅದೇ ಸಮಯದಲ್ಲಿ ಪ್ರಾರಂಭವಾಗಿ ನಿಗದಿತ ದಿನದವರೆಗೆ ನಡೆದುಕೊಂಡುಬರುತ್ತಿದೆ. ಕೆಳದಿ ಅರಸರ ಸಾಮ್ರಾಜ್ಯವು ಮಲೆನಾಡಿನ ಪ್ರದೇಶವಾಗಿದ್ದ ರಿಂದ ತಾವು ಬೆಳೆದ ಹೊಸ ಪಸಲು ಮನೆಗೆ ಬರುವ ಸಮಯದಲ್ಲಿ ಅಂದರೆ ಸುಗ್ಗಿಯ ಸಮಯದಲ್ಲಿ ಹಬ್ಬ ಹಾಗೂ ರಥೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಸ್ವತಃ ರಾಜನೂ ಕೆಲವೊಮ್ಮೆ ಈ ಸಮಾರಂಭಗಳಲ್ಲಿ ಭಾಗಿಯಾಗುತ್ತಿದ್ದನು. ಕೆಳದಿ, ಇಕ್ಕೇರಿ, ಬಿದನೂರು, ಕಳಸ ಮೊದಲಾದ ಕಡೆಗಳಲ್ಲಿ ಬೃಹತ್ತಾದ ರಥಗಳನ್ನು ನಿರ್ಮಿಸಲಾಗಿತ್ತು ಎಂದು ವಿದೇಶಿ ಪ್ರವಾಸಿಗನಾದ ಪಿಯತ್ರೋದೆಲ್ಲಾವಲ್ಲಿಯು ತಿಳಿಸಿ ಅಂದಿನ ರಥೋತ್ಸವದ ವರ್ಣನೆಯನ್ನು ಸಹ ಸಂಪೂರ್ಣವಾಗಿ ವಿವರಿಸುತ್ತಾನೆ.

ಅಂದು ಅಮಾವ್ಯಾಸೆ ಹಾಗೂ ಹುಣ್ಣಿಮೆಯ ದಿನಗಳನ್ನು ವಿಶೇಷ ರೀತಿಯಲ್ಲಿ ಹಬ್ಬದ ಸಡಗರದಿಂದ ಆಚರಿಸಲಾಗುತ್ತಿತ್ತು. ದೀಪಾವಳಿ, ಶಿವರಾತ್ರಿ, ಯುಗಾದಿ, ಸಂಕ್ರಾಂತಿ, ಮಹಾನವಮಿ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಹಬ್ಬದ ದಿನ ಸಿಡಿ ಆಡುವ ಪದ್ಧತಿಯು ಇತ್ತೆಂದು ಪಿಯಾತ್ರೋದೆಲ್ಲಾವೆಲ್ಲಿಯು ತಿಳಿಸಿ ಅದರ ಸಂಪೂರ್ಣ ವರ್ಣನೆಯನ್ನೂ ತಿಳಿಸಿದ್ದಾನೆ.

ಪ್ರಬಲ ವಿಜಯನಗರ ಸಾಮ್ರಾಜ್ಯಕ್ಕೆ ಸಾಮಂತರಾಗಿ, ನಿರಂತರವಾಗಿ ಯುದ್ಧದಲ್ಲಿಯೇ ತೊಡಗಿರುತ್ತಿದ್ದ ವಿಜಯನಗರದ ಅರಸರೊಂದಿಗೆ ಕೈಜೋಡಿಸುವುದರ ಜೊತೆಗೆ ತಮ್ಮ ಸಂಸ್ಥಾನದ ರಕ್ಷಣೆ ಹಾಗೂ ವಿಸ್ತರಣೆಗೆ ಹೆಚ್ಚಿನ ಗಮನ ನೀಡುತ್ತಿದ್ದ ಸಮಯದಲ್ಲಿಯೂ ನಾಯಕರುಗಳು ತಾವು ಹೊಂದಿದ್ದ ಧರ್ಮಾಭಿಮಾನದಿಂದ, ದೈವಭಕ್ತಿಯಿಂದಾಗಿ ಅವರು ಸಂಸ್ಥಾನದಲ್ಲಿ ಕೈಗೊಂಡ ಧಾರ್ಮಿಕ ಕೆಲಸಕಾರ್ಯಗಳು ಶ್ಲಾಘನೀಯವೆಂದೆ ಹೇಳಬೇಕು.

* * *

## ೪. ಸಾಮಾಜಿಕ ಪದ್ಧತಿ

ಇಕ್ಕೇರಿ ನಾಯಕರು ಕಡಲ ಆಡಳಿತದಲ್ಲಿ ಹಾಗೂ ಧಾರ್ಮಿಕ ಕೆಲಸಗಳಲ್ಲಿ ಮಾತ್ರ ಶಿಸ್ತಿನ ಸಿಪಾಯಿಗಳಾಗಿರದೆ ಸಾಮಾಜಿಕವಾಗಿಯೂ ತಮ್ಮ ಆಳ್ವಿಕೆಯ ಅವಧಿಯಲ್ಲಿ ಉತ್ತಮ ಕೆಲಸ ಮಾಡಿರುವುದು ದಾಖಲೆಗಳಿಂದ ತಿಳಿದುಬರುತ್ತದೆ. ಮೊದಲೆ ತಿಳಿಸಿದಂತೆ ಇವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ವಿಜಯನಗರದ ಅರಸರಿಗೆ ಅಧೀನರಾಗಿ ಹಾಗೂ ತಮ್ಮ ಸಂಸ್ಥಾನದ ಅಂತರಿಕ ಸಮಸ್ಯೆಗಳನ್ನು

ಬಗೆಹರಿಸಿಕೊಳ್ಳುವುದಕ್ಕಾಗಿ ಒಂದಲ್ಲ ಒಂದು ರೀತಿಯ ಯುದ್ಧದಲ್ಲಿ ನಿರತರಾಗಬೇಕಾಗಿತ್ತು. ಈ ಸನ್ನಿವೇಶಗಳ ನಡುವೆಯೂ ಇವರು ತಮ್ಮ ಸಂಸ್ಥಾನದಲ್ಲಿನ ಸಾಮಾಜಿಕವಾದ ಅಮೂಲ್ಯ ಕೆಲಸ ಕಾರ್ಯಗಳನ್ನು ಕೈಗೊಂಡು ನೆರವೇರಿಸಿದ್ದಾರೆ. ಮಲೆನಾಡಿನ ಮಡಿಲಿನಲ್ಲಿ ಸ್ಥಾಪನೆಯಾಗಿದ್ದ ಈ ಸಾಮ್ರಾಜ್ಯವು ಮೇಲ್ ಜಾತಿ ಎಂದು ಕರೆಸಿಕೊಳ್ಳುತ್ತಿದ್ದ ಜನರನ್ನೊಳಗೊಂಡಂತೆ ಕೆಳವರ್ಗದ ಜನರಿಗೆ ಉದ್ಯೋಗವು ವರ್ಷಪೂರ್ತಿ ದೊರಕುವ ಪರಿಸರವನ್ನು ಸೃಷ್ಟಿಸಿತ್ತು. ಇದರಿಂದಾಗಿ ಮಿಕ್ಕ ನೆರೆಯ ಸಾಮ್ರಾಜ್ಯಗಳಿಗೆ ಹೋಲಿಸಿದರೆ ಇಲ್ಲಿನ ಜನರು ಆರ್ಥಿಕವಾಗಿ ಸ್ವಲ್ಪ ಪ್ರಮಾಣದಲ್ಲಿ ಉತ್ತಮವಾಗಿಯೇ ಇದ್ದರೆನ್ನುವುದಾದರೆ, ಸಾಮಾಜಿಕ ತೊಡಕುಗಳು ಅಲ್ಪಸ್ವಲ್ಪ ಬದಲಾವಣೆ ಕಾಣುವುದು ಸಹಜವೆ.

ಡಾ. ವೆಂಕಟೇಶ್ ಜೋಯಿಸ್ ರವರು ಅಂದಿನ ಸಾಮಾಜಿಕ ವ್ಯವಸ್ಥೆಯನ್ನು ಮೂರು ಭಾಗಗಳಲ್ಲಿ ನೋಡಲು ಬಯಸುತ್ತಾರೆ. ಆದರೆ ಕೆಲವು ಆಧಾರಗಳನ್ನು ಗಮನಿಸಿ ಆ ಮೂರರ ಜೊತೆ ಮತ್ತೊಂದನ್ನು ಸೇರಿಸಿ ಅಧ್ಯಯನ ಮಾಡಬಹುದು.

೧. ಕೆಳದಿ ಅರಸರು ಕೈಗೊಂಡ ಸಾರ್ವಜನಿಕ ಚಟುವಟಿಕೆಗಳು.
೨. ಅಂದಿನ ಜಾತಿ ವ್ಯವಸ್ಥೆ
೩. ಸ್ತ್ರೀಯರಿಗೆ ಅಂದು ಇದ್ದ ಸ್ಥಾನಮಾನ.
೪. ಹೊಲೆಮಾದಿಗರ ಅಂದಿನ ಸ್ಥಿತಿಗತಿ.

ಕೆಳದಿ ಅರಸರು ಬಹು ಸೌಂದರ್ಯೋಪಾಲಕರಾಗಿದ್ದರೆನ್ನಬಹುದು. ಇವರು ಪ್ರಾರಂಭದಿಂದಲೇ ವಿಜಯನಗರ ಸಾಮ್ರಾಜ್ಯದೊಂದಿಗೆ ಹೆಚ್ಚಿನ ಆತ್ಮೀಯ ಸಂಬಂಧವನ್ನು ಹೊಂದಿದ್ದರಿಂದ ಅವರ ಮಾದರಿಯಲ್ಲಿಯೇ ತಮ್ಮ ಸಂಸ್ಥಾನದಲ್ಲಿ ಬೃಹತ್ ಉದ್ಯಾನಗಳನ್ನು ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮುಂದಾಗಿದ್ದರು. ಅಂದು ರಾಜ ಪರಿವಾರದವರಿಗೆ ಪ್ರತ್ಯೇಕವೆನ್ನಿಸಿದ್ದ ಉದ್ಯಾನವನಗಳಿದ್ದವು. ಈ ಉದ್ಯಾನವನಗಳಿಗೆ ಸಾರ್ವಜನಿಕರು ಹೋಗುವಂತಿರಲಿಲ್ಲ. ಅಂತೆಯೇ ಸಾರ್ವಜನಿಕರಿಗೆ ಇದ್ದ ಉದ್ಯಾನವನಗಳಿಗೆ ಕೀಳುಜಾತಿಯ ಜನರು ಹೋಗುವಂತಿರಲಿಲ್ಲ. ಸಮಾಜದಲ್ಲಿ ಉನ್ನತ ವರ್ಗವೆಂದು ಗುರುತಿಸಿಕೊಂಡಿದ್ದ ಜನರು ಮಾತ್ರ ಆ ಉದ್ಯಾನವನಗಳಿಗೆ ಹೋಗಿ ಬರುತ್ತಿದ್ದರು. ಅರಮನೆ, ಮಠ, ದೇವಾಲಯ, ಚರ್ಚು, ಮಸೀದಿ ಮುಂತಾದ ಪ್ರಮುಖ ಧಾರ್ಮಿಕ ಕ್ಷೇತ್ರಗಳ ಸಮೀಪದಲ್ಲಿ ಹೆಚ್ಚಾಗಿ ಉದ್ಯಾನವನಗಳು ಇರುತ್ತಿದ್ದವು. ಹಿರಿಯ ವೆಂಕಟಪ್ಪನಾಯಕನು ಆನಂದಪುರದ ಮುರುಘಾ ಮಠದ ಸಮೀಪ "ಚಂಪಕ ಸರಸಿ' ಎಂಬ ಸರೋವರ ಹಾಗೂ ಬೃಹತ್ ಉದ್ಯಾನವನವನ್ನು ನಿರ್ಮಿಸಿದ್ದನೆಂದು ಕೆಳದಿ ನೃಪವಿಜಯ ತಿಳಿಸುತ್ತದೆ. ಹಾಗೆ ವೆಂಕಟಪ್ಪನಾಯಕನೂ ಸಾಗರದ ಗಣಪತಿ ದೇವಾಲಯದ ಸಮೀಪ ಚಂದನವನ (ಚಂದಮಾವಿನ ತೋಪ್ಪಲು)ವನ್ನು ನಿರ್ಮಿಸಿದ್ದನೆಂಬುದು ತಿಳಿಸುತ್ತದೆ. ಕೆಳದಿ ಅರಮನೆಯ ಸುತ್ತಲೂ ಬೃಹತ್ ಹೂವಿನ ಉದ್ಯಾನವನವಿತ್ತೆಂದು ಅಲ್ಲಿ ಗುಲಾಬಿ, ಸಂಪಿಗೆ, ಸೇವಂತಿಗೆ, ಮಲ್ಲಿಗೆ ಮುಂತಾದ ಸುಗಂಧ ಭರಿತವಾದ ಹೂವುಗಳನ್ನು ಬೆಳೆಸಲಾಗುತ್ತಿತ್ತೆಂದು ಸಹ ತಿಳಿಯಬಹುದಾಗಿದೆ. ಹೀಗೆ ಸಾಮ್ರಾಜ್ಯದ ತುಂಬೆಲ್ಲಾ ಉದ್ಯಾನವನಗಳು ಇದ್ದರೂ ಅದು ಆಳುವ ಹಾಗೂ ಪ್ರಬಲ ಕೋಮಿನ ಜನರಿಗೆ ಮಾತ್ರ ಮೀಸಲಾಗಿತ್ತೆಂದು ಹೇಳಬಹುದಾಗಿದೆ.

ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಪ್ರಾಚೀನ ಕಾಲದಿಂದಲೂ ಪ್ರಮುಖ ಅವಶ್ಯಕಮ ಕೆಲಸಗಳಾಗಿದ್ದ ಕೆರೆ, ಕಟ್ಟೆ, ಬಾವಿಗಳ ನಿರ್ಮಾಣಕ್ಕೆ ರಾಜರುಗಳು, ಶ್ರೀಮಂತರು, ಸಾರ್ವಜನಿಕರು, ಮಹಿಳೆಯರು ದುಡಿದಿರುವುದು ಕಂಡು ಬರುತ್ತದೆ. ಈ ಕೆಲಸವನ್ನು ಮಾಡಿದರೆ ಅವರು ದೇವರ ಕೆಲಸ ಮಾಡಿದಂತ್ತೆಂದು ನಂಬಿದ್ದರು. ಸರ್ಕಾರದಿಂದ ಕಾನೂನು ಕಟ್ಲೆಯನ್ನು ಹೊರಡಿಸಿ ಪ್ರತಿಯೊಂದು ಗ್ರಾಮದಲ್ಲಿಯೂ ಕೆರೆ, ಬಾವಿಗಳನ್ನು ಅಲ್ಲಿಯ ಶ್ರೀಮಂತರು ಹಾಗೂ ಸಾಮಂತ ರಾಜರುಗಳು ನಿರ್ಮಾಣ ಮಾಡಬೇಕೆಂದು ಹೇಳಿದರೆ ಈ ಕೆಲಸ ನೆರವೇರುತ್ತಿರಲಿಲ್ಲ. ಆದರೆ ಅವರಲ್ಲಿ ಧಾರ್ಮಿಕ ಭಾವನೆಯು ತನ್ನದೇ ಆದ ಪ್ರಭಾವ ಬೀರಿದಾಗ ಮಾತ್ರ ತಮ್ಮ ತನು, ಮನ, ಧನಗಳನ್ನೆಲ್ಲ ಅರ್ಪಿಸಿ ಈ ಕೆಲಸ ಪೂರೈಸಿ ತಮ್ಮ ಪ್ರಾಣವನ್ನೇ ಬಲಿ ನೀಡಿರುವುದನ್ನು ಕಾಣಬಹುದು. ಅಂದರೆ ಕಾನೂನಿಗೆ ಅಂಜದ ಜನ ಧಾರ್ಮಿಕ ಕಟ್ಲೆಗಳಿಗೆ ಜೀವ ಭಯಪಡುತ್ತಿದ್ದರು. ಅಂದು ಧಾರ್ಮಿಕ ಪ್ರಭಾವ ಹೆಚ್ಚಿನ ಪ್ರಾಭವಶಾಲಿಯಾಗಿ ಬೆಳೆಯುತ್ತಿದ್ದಿತ್ತು. ಈ ರೀತಿಯ ಭಾವನೆಯಿಂದ ಇಂದಿನ ಜನರೇನೂ ಹೊರತಾಗಿಲ್ಲ ಎನ್ನಬಹುದು.

ಕೆಳದಿ ಅರಸರು ಈ ಕಾರ್ಯದಲ್ಲಿ ಕ್ರಿ.ಶ. ೧೬೨೧ರಲ್ಲಿ ಹಿರಿಯ ವೆಂಕಟಪ್ಪ ನಾಯಕನ ಕಾಲದ ಶಾಸನವೊಂದು ಸೇನೆ ಭೋವ ಹತ್ತಿ ಮತ್ತೂರ ಕಾಮದೇವಭಟ್ಟರ ಮೊಮ್ಮಗ ಕೋನಪ್ಪನು ಗೋವರ್ಧನಗಿರಿಯ ಕೆಳಗೇರಿ ಸೊಪ್ಪೆಗೆ ಹೋಗುವ ಮಾರ್ಗದಲ್ಲಿ ಒಂದು ಚೌಕಾಕಾರದ ಕೊಳವನ್ನು ನಿರ್ಮಿಸಿದ್ದನ್ನು ಉಲ್ಲೇಖಿಸಬಹುದಾಗಿದೆ. ಇದು ಕೆಳದಿ ಅರಸರ ಶಾಸನ ಸಂಪುಟದಲ್ಲಿ ಉಲ್ಲೇಖಿತವಾಗಿರುವುದು ಕಾಣಬಹುದು. ಸೋಮಶೇಖರನಾಯಕನ ಕಾಲದಲ್ಲಿ ಬಸವಯ್ಯನ ಭಕ್ತ ಹರಕೇರಿ ಎಂಬುವನು ಗುರುಲಿಂಗ ಸಮಾಧಿಯ ಮೇಲೆ ವಿರಕ್ತ ಮಠ ಮತ್ತು ಹಯಿನೂರು ಎಂಬಲ್ಲಿ 'ಬಸವನ ಒಡ್ಡು' ಎಂಬ ಸೇತುವೆಯನ್ನು ನದಿಗೆ ನಿರ್ಮಿಸಿ ಸಾರ್ವಜನಿಕ ಕೆಲಸಗಳಿಗೆ ಉತ್ತೇಜನ ನೀಡಿದನೆಂದು ಕೆಳದಿ ನೃಪವಿಜಯ ತಿಳಿಸುತ್ತದೆ. ಡಾ. ವೆಂಕಟೇಶ್ ಜೋಯಿಸ್ ರವರು ಇವುಗಳ ಉಪಯೋಗವನ್ನು ತಮ್ಮ ಕೃತಿಯಲ್ಲಿ ಮಹತ್ವದ ಪ್ರಮಾಣದಲ್ಲಿ ಬಳಸಿ ಕೊಂಡಿರುವುದು ಕಾಣಬಹುದು, ಕೆಳದಿ ಮಠಕ್ಕೆ ನೀರಿನ ಸೌಕರ್ಯಕ್ಕಾಗಿ ಭಕ್ತ ಬೊಕ್ಕಸದ ಸಿದ್ದಬಸವನು ಕೆಳದಿ ಮಠದ ಸಮೀಪದಲ್ಲಿ 'ಕಲ್ಲಿನ ಬಾವಿ'ಯನ್ನು ನಿರ್ಮಿಸಿ ಮಠಕ್ಕೆ ಸಮರ್ಪಿಸಿರುವುದು ಕಂಡುಬರುತ್ತದೆ. ಫೀಟರ್ ಮಂಡಿ ಎಂಬ ಇಟಲಿ ಪ್ರವಾಸಿಗನು ತಾನು ಇಕ್ಕೇರಿ ಸಂಸ್ಥಾನಕ್ಕೆ ಭೇಟಿ ನೀಡಿದ್ದ ಸಮಯದಲ್ಲಿ ಹಲವಾರು ಕೆರೆಕಟ್ಟೆ, ಬಾವಿಗಳ ಕೆಲಸಕಾರ್ಯಗಳು ನಡೆಯುತ್ತಿದ್ದವೆಂದು ತನ್ನ ಪ್ರವಾಸಿ ಕಥನದಲ್ಲಿ ಬರೆದಿರುವುದು ಕಂಡುಬರುತ್ತದೆ. ವೆಂಕಪಟ್ಟನಾಯಕನಿಂದ ಕೆಳದಿಯಲ್ಲಿ ನಿರ್ಮಾಣವಾದ ಕೆರೆಗೆ 'ಸಂಪೆ ಕಟ್ಟಿಕೆರೆ' ಎಂದು ಹೆಸರಿತ್ತೆಂದು ಕೆಳದಿ ನೃಪವಿಜಯವು ತಿಳಿಸುತ್ತದೆ. ಕೆಳದಿಯಲ್ಲಿ ಕೆಳದಿ ಎಂಬ ಮಹಿಳೆಯು ಒಂದು ದೊಡ್ಡ ಕೆರೆಯನ್ನು ನಿರ್ಮಿಸಿ ಸಾರ್ವಜನಿಕರ ಪಾಲಿಗೆ ಬಿಟ್ಟಿದುದು ಶಾಸನಗಳಿಂದ ತಿಳಿದುಬರುತ್ತದೆ. ಈ ವಿಷಯದಲ್ಲಿ ಗುಂಡಾ ಜೋಯಿಸ್ ರವರು ಉಲ್ಲೇಖಿಸಿರುವ ಹಾಗೆ ಪ್ರಚಲಿತವಾದ ದಂತಕಥೆಯು ಹೊರಮೂಡುತ್ತದೆ. ಇಕ್ಕೇರಿಯ ನಾಯಕನು ಈ ಕೆರೆಯನ್ನು ತೋಡಿಸುತ್ತಿರುವಾಗ ನೀರು ಬರಲಿಲ್ಲವಂತೆ, ನಾಯಕನ ಕನಸಿನಲ್ಲಿ ವಿಪ್ರ ಶ್ರೇಷ್ಠನೊಬ್ಬನು ಒಂದು ನರಬಲಿಯನ್ನು ನೀಡಿದರೆ ನೀರು ಬರುವುದೆಂದು ನಿರೂಪಿಸಿದನಂತೆ. ಈ ವಿಷಯವು ಇದೇ ಊರಿನಲ್ಲಿ ವೇಶ್ಯೆಯಾಗಿದ್ದ "ಕೆಳದಿ" ಎಂಬುವಳಿಗೆ ಗೊತ್ತಾಗಿ, ಜನೋಪಕಾರಕ್ಕಾಗಿ ತಾನು ತನ್ನ ಪ್ರಾಣವನ್ನು ಅರ್ಪಿಸುವುದಾಗಿ ಹೇಳಿ ಹೆಸರು ಶಾಶ್ವತವಾಗಿ ಉಳಿಯಲು ಆ ಕೆರೆಗೆ ಹಾಗೂ ಆ ಊರಿಗೆ ಆಕೆಯ ಹೆಸರನ್ನೇ ಇಟ್ಟರೆಂದು ಮೌಖೀಕಾದಾರಗಳು ಹಾಗೂ ಶಾಸನಾಧಾರಗಳು ತಿಳಿಸುತ್ತವೆ. ಈ ಕೆರೆಗೆ ದೊಡ್ಡಕೆರೆ, ಹಿರೇಕರೆ, ಕೆಳದಿಕೆರೆ ಎಂದೂ ಹೆಸರುಗಳಿರುವುದು ಕಂಡುಬರುತ್ತದೆ. ಸಂಸ್ಥಾನದಲ್ಲಿ ಹೈನುಗಾರಿಕೆಯು ಪ್ರಮುಖ ವೃತ್ತಿಯಾಗಿತ್ತೆನ್ನಬಹುದು. ಜಾನುವಾರುಗಳಿಗೆ ಮೇವನ್ನು ಸಾರ್ವಜನಿಕರುಗಳೇ ಒದಗಿಸಿದ ಬಗ್ಗೆ ಶಾಸನಾಧಾರಗಳಿವೆ.

ಜನರು ಸಂಚರಿಸುವಾಗ ದಾರಿಯಲ್ಲಿ ಬಾಯಾರಿಕೆ ಉಂಟಾದರೆ ನೀರಿನ ದಾಹ ತೀರಿಸಿ ಕೊಳ್ಳಲು ದಾರಿಯ ಪಕ್ಕದಲ್ಲಿ ಅರವಟ್ಟಿಗೆ ನಿರ್ಮಿಸಿರುವುದು ಗಮನಿಸಿದರೆ ಇವರು ಸಾರ್ವಜನಿಕರಿಗೆ ತೋರುತ್ತಿದ್ದ ಸಹಕಾರ ವ್ಯಕ್ತವಾಗುತ್ತದೆ. ಏಕೆಂದರೆ ಈ ಪದ್ಧತಿಯು ವಿಜಯನಗರದರಸರ ಪೂರ್ವದಲ್ಲಿ. ಕೇವಲ ದೇವಾಲಯ, ಮಠ, ಛತ್ರಗಳಿಗೆ ಮಾತ್ರ ಮೀಸಲಾಗಿದ್ದಿತ್ತು. ಪ್ರಮಾಣಿಕರು ಸಂಚರಿಸುವಾಗ (ಯಾತ್ರಾಸ್ಥಳ, ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಲು) ಮಧ್ಯೆ ಮಧ್ಯೆ ಅವರು ಉಳಿದುಕೊಳ್ಳಲು ಛತ್ರ ಕಟ್ಟಿಸಿ ತಕ್ಕಮಟ್ಟಿಗೆ ಆಹಾರದ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಛತ್ರಗಳು ಇಲ್ಲದ ಕಡೆಗಳಲ್ಲಿ ಊರಿನ ಹಿರಿಯ ಗೌಡರು, ದಾನಿಗಳು ತಮ್ಮ ಊರಿನ ಪ್ರಮುಖ ಸ್ಥಳಗಳಲ್ಲಿ ನೀರು, ಪಾನಕ, ಮಜ್ಜಿಗೆ, ಬ್ಯಾಲದ ಹಣ್ಣಿನ ಪಾನಕ ಮುಂತಾದ ಪಾನೀಯಗಳನ್ನು ನೀಡಿ ಸತ್ಕರಿಸಿ ಮುನ್ನೆಡೆಸುತ್ತಿದ್ದರು. ಇದು ಹೆಚ್ಚಾಗಿ ಹಬ್ಬದ ದಿನಗಳಲ್ಲಿ ಹಾಗೂ ವಿಶಿಷ್ಟ ದಿನಗಳಲ್ಲಿ ಮಾತ್ರ ಹೆಚ್ಚಾಗಿ ಕಂಡುಬರುತ್ತಿತ್ತು. ಈ ಪದ್ಧತಿಯು ಇಂದಿಗೂ ಹಲವು ಜೀವಂತವಾಗಿ ಬೆಳೆದುಬರುತ್ತಿದೆ. ಅಂದು ಅನ್ನದಾನಕ್ಕೆ ವಿಶೇಷ ಆಧ್ಯತೆ ಇದ್ದಿತ್ತು. ಈ ಕೆಲಸದಲ್ಲಿ ವೀರಶೈವ ಮಠಗಳು ಮೇಲುಗೈ ಸಾಧಿಸಿದ್ದವು. ಈ ಛತ್ರಗಳಿಗೆ ಹಾಗೂ ಅವುಗಳ ಖರ್ಚಿಗಾಗಿ ಭೂಮಿಯನ್ನು ದತ್ತಿ ನೀಡುವುದು ಸಾಮಾನ್ಯವಾಗಿದ್ದಿತ್ತು.

ಇಕ್ಕೇರಿ ನಾಯಕರು ಪ್ರಮುಖವಾಗಿ ಸಸ್ಯಹಾರಿಗಳಾಗಿದ್ದರು. ಆದರೆ ಸಂಸ್ಥಾನದಲ್ಲಿ ಮಾಂಸಾಹಾರವು ಹೆಚ್ಚಾಗಿ ಬಳಕೆಯಾಗುತ್ತಿತ್ತು. ಊಟದಲ್ಲಿ ಅನ್ನವನ್ನು ಹೆಚ್ಚಾಗಿ ಬಳಸುತ್ತಿದ್ದರು. ಉಪ್ಪಿನಕಾಯಿ, ಸಾರು, ಮೊಸರು, ಹಾಲನ್ನು ಬಳಸುತ್ತಿದ್ದರು. ಮಾಂಸಾಹಾರಿಗಳು ಕುರಿ, ಕೋಳಿ, ಮೇಕೆ, ಎತ್ತು, ಎಮ್ಮೆಗಳನ್ನು ಆಹಾರವನ್ನಾಗಿ ಬಳಸುತ್ತಿದ್ದರು. ಶ್ರೀಮಂತರು ಊಟದ ನಂತರ ಹಣ್ಣು, ಹಂಪಲಗಳನ್ನು ಬಳಸುತ್ತಿದ್ದರೆಂದು ಪೀಟರ್ ಮಂಡಿಯು ತಿಳಿಸುತ್ತಾನೆ. ಮದ್ಯ ಸೇವನೆಯೂ ಸಹ ಬಳಕೆಯಲ್ಲಿತ್ತು. ಮಲೆನಾಡಿನ ಮಡಿಲಲ್ಲಿ ತನ್ನ ನೆಲೆಯನ್ನು ಸೃಷ್ಟಿಸಿದ್ದ ಈಚಲು ಮರದ ಸೇಂದಿಯು ಹೆಚ್ಚಾಗಿ ಬಳಕೆಯಾಗುತ್ತಿತ್ತೆಂದು ವಿದೇಶಿ ಪ್ರವಾಸಿಗರು ತಿಳಿಸಿದ್ದಾರೆ. ಊಟದ

ನಂತರ ಎಲೆ ಅಡಿಕೆಯನ್ನು ತಾಂಬೂಲ ಮಾಡಿ ಸೇವಿಸುತ್ತಿದ್ದದ್ದು ಸರ್ವೇಸಾಮಾನ್ಯವಾಗಿತ್ತು. ಜನಸಾಮಾನ್ಯರ ಆಹಾರ ಪದ್ಧತಿಯು ಅತ್ಯಂತ ಕೆಳಮಟ್ಟದಾಗಿತ್ತು. ಒಂದು ದಿನಕ್ಕೆ ಒಂದೊತ್ತು ಊಟವೂ ಸಿಗದಷ್ಟು ಬಡತನವಿದ್ದಿತ್ತು. ಇವರು ಗೋಧಿ ಗಂಜಿ, ಅಕ್ಕಿ ಗಂಜಿ, ರಾಗಿಯನ್ನು ಊಟಕ್ಕೆ ಉಪಯೋಗಿಸುತ್ತಿದ್ದರೆಂದು ಹೇಳಬಹುದು. ಕಾಡಿನಲ್ಲಿ ಸಿಗುತ್ತಿದ್ದ ಸೊಪ್ಪು, ದ್ವಿದಳ ಧಾನ್ಯಗಳು ಹೆಚ್ಚಾಗಿ ಸಾಂಬರ್ ಪದಾರ್ಥಗಳಾಗಿದ್ದವು.

ಅರಸರ ಕಾಲದಲ್ಲಿ ಸಾರಿಗೆ ವ್ಯವಸ್ಥೆಯು ತಕ್ಕಮಟ್ಟಿಗೆ ಉತ್ತಮವಾಗಿತ್ತು. ಸಂಸ್ಥಾನವು ಹೆಚ್ಚಾಗಿ ಬೆಟ್ಟಗುಡ್ಡಗಳ ಪ್ರದೇಶದಲ್ಲಿ ಇದ್ದುದರಿಂದ ರಸ್ತೆ ಸಾರಿಗೆಯು ಕಷ್ಟಕರವಾದ ಕೆಲಸವೇ ಆಗಿತ್ತು. ಆದರೂ ಪ್ರಮುಖ ನಗರಗಳಿಗೆ, ಗ್ರಾಮೀಣ ಪ್ರದೇಶಗಳಿಗೆ ಅನುಕೂಲವಾಗುವ ರೀತಿಯಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಿಕೊಡಲು ರಾಜರು ಪ್ರಯತ್ನಿಸಿದ್ದರು ಪ್ರಮುಖವಾಗಿ ಅಂದು ಜಾರಿಯಲ್ಲಿದ್ದ ಸಾರಿಗೆ ಪದ್ಧತಿಯನ್ನು

೧. ಭೂಮಾರ್ಗ

೨. ಜಲಮಾರ್ಗ

ಎಂದು ಕರೆಯಬಹುದಾಗಿದೆ. ಭೂ ಮಾರ್ಗದಲ್ಲಿ ರಾಜಧಾನಿಗೆ ಸೇರುವ ರಸ್ತೆಗಳನ್ನೆ ಹೆದ್ದಾರಿಗಳೆಂದು, ಪ್ರಾಂತ್ಯಗಳಿಗೆ ಸೇರುವ ರಸ್ತೆಗಳನ್ನು ಒಳಹೆದ್ದಾರಿಗಳೆಂದು ಕರೆಯಲಾಗುತ್ತಿತ್ತು. ಜಲಮಾರ್ಗವು ನದಿ, ಸಮುದ್ರಗಳಲ್ಲಿ ನಡೆಯುತ್ತಿದ್ದವು ಪಿಯತ್ರೋದೆಲ್ಲಾವೆಲ್ಲಿಯು ತನ್ನ ಪ್ರವಾಸಿ ಕಥನದಲ್ಲಿ ಅಂದಿನ ಸಾರಿಗೆ ವ್ಯವಸ್ಥೆಯನ್ನು ವಿವರಿಸಿರುವುದು ಕಂಡುಬರುತ್ತದೆ. ಇಕ್ಕೇರಿಗೆ ಹೋಗುವ ಮಾರ್ಗವು ವಿಶಾಲವಾಗಿದ್ದು ಇಕ್ಕೆಲಗಳಲ್ಲಿಯೂ ಸಾಲುಮರಗಳಿದ್ದವೆಂದು ತಿಳಿಸಿರುವುದು ಕಾಣಬಹುದು. ಮತ್ತೊಬ್ಬ ಪ್ರವಾಸಿಗನಾದ ಜಾಕೋಬಸನು ಬಸಪ್ಪನಾಯಕನ ಕಾಲದಲ್ಲಿ ರಸ್ತೆಗಳು ಸೊಗಸಾಗಿದ್ದವಲ್ಲದೆ ರಸ್ತೆ ಪಕ್ಕದ ಮರಗಳು ಪ್ರವಾಸಿಗರಿಗೆ ನೆರಳನ್ನೀಯುತ್ತಿದ್ದವೆಂಬುದಾಗಿ ವರ್ಣಿಸಿದ್ದಾನೆ. ಭೂಮಾರ್ಗದಲ್ಲಿ ಸಾಮಾನ್ಯವಾಗಿ ಪಲ್ಲಕ್ಕಿ, ಕುದುರೆ, ಆನೆ, ಎತ್ತಿನಗಾಡಿ ಮೊದಲಾದವುಗಳನ್ನು ಬಳಸಲಾಗುತ್ತಿತ್ತು. ಜಲಮಾರ್ಗವು ಹಾಯಿದೋಣಿ, ದೋಣಿ, ಹರಿಗೋಲು ಮೊದಲಾದ ವಿಧಾನದ ಸಾಧನಗಳನ್ನು ಬಳಸಲಾಗುತ್ತಿತ್ತು. ಈ ನಾವಿಕರುಗಳಿಗೆ ನಾಯಕರು ದಾನ ನೀಡಿ ಸಹಕರಿಸಿರುವುದು ಕಂಡುಬರುತ್ತದೆ.

ಇಕ್ಕೇರಿ ಸಂಸ್ಥಾನದಲ್ಲಿ ಮಹಿಳೆಯರಿಗೆ ಯಾವ ಸ್ಥಾನಮಾನವಿದ್ದಿತ್ತೆಂದು ಹಿಂದಿನ ಅಧ್ಯಾಯದಲ್ಲಿಯೇ ಗಮನಿಸಿದ್ದೇವೆ. ಇವರ ಆಳ್ವಿಕೆಯ ಅವಧಿಯಲ್ಲಿ ಪ್ರಮುಖ ರಾಣಿಯರಾದ ವೀರಮ್ಮಾಜಿ ಹಾಗೂ ವೀರಚೆನ್ನಾಮ್ಮಾಜಿಯವರ ಸ್ಥಾನಮಾನವನ್ನು ಗಮನಿಸುವುದಾದರೆ, ಅಂದು ಮಹಿಳೆಯರು ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರೆಂದು ಹೇಳಬಹುದು. ರಾಣಿಯರಿಗೆ ಹಾಗೂ ಶ್ರೀಮಂತ ಮಹಿಳೆಯರಿಗೆ ಮಾತ್ರ ಶಿಕ್ಷಣ ಪಡೆಯುವ ಅವಕಾಶವಿದ್ದಿತ್ತು. ರಾಜಧಾನಿಯ ಮಹಿಳೆಯರ ಬಗ್ಗೆ ಲಿಯತ್ರೋದೆಲ್ಲಾವೆಲ್ಲಿಯು ಸುಂದರವಾಗಿ ವರ್ಣಿಸುತ್ತಾನೆ. ಸಾಮಾನ್ಯ ಹಾಗೂ ಕೆಳಜಾತಿಯ ಹೆಂಗಸರ ಸ್ಥಿತಿ ಶೋಚನೀಯವಾಗಿದ್ದಿತ್ತು. ಅವರು ಊಟ ಇರಲಿ ಬಟ್ಟೆಯೂ ಇರದಿರುವ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು. ಅರಸರು ಬಹು ಪತ್ನಿಯರನ್ನು ಹೊಂದಿರುತ್ತಿದ್ದರು. ಕೆಳದಿ ನೃಪವಿಜಯ ಕೃತಿಯು ರಾಜರು ಮೂರರಿಂದ ನಾಲ್ಕು ಮಡದಿಯರನ್ನು ಹೊಂದಿದ್ದ ಬಗ್ಗೆ ವಿವರಿಸುತ್ತದೆ. ಈ ಪದ್ಧತಿಯು ಹೆಚ್ಚಾಗಿ ಶ್ರೀಮಂತರು, ರಾಜರು, ರಾಜಪರಿವಾರದವರು, ಬ್ರಾಹ್ಮಣರಲ್ಲಿ ಮಾತ್ರ ಹೆಚ್ಚಾಗಿದ್ದಿತ್ತೆನ್ನಬಹುದು. ಕೆಲವು ಸಾಮಾನ್ಯರೂ ಸಹ ಇಬ್ಬರು ಪತ್ನಿಯರನ್ನು ಹೊಂದಿದ್ದರ ಬಗ್ಗೆ ಮಾಹಿತಿ ತಿಳಿದುಬರುತ್ತದೆ.

ಇಕ್ಕೇರಿ ಸಂಸ್ಥಾನದಲ್ಲಿ ಬಾಲ್ಯವಿವಾಹವು ಹೆಚ್ಚಿನ ಪ್ರಮಾಣದಲ್ಲಿ ಆಚರಣೆಯಲ್ಲಿತ್ತೆನ್ನಬಹುದು. ಶ್ರೀಮಂತರು, ರಾಜಪರಿವಾರ, ರಾಜರ ಮದುವೆಗಳು ವಿಜೃಂಭಣೆಯಿಂದ ನಡೆಯುತ್ತಿದ್ದವು. ಮದುವೆಯ ಸಮಯದಲ್ಲಿ ದೇವಾಲಯ, ಮಠ ಹಾಗೂ ಇನ್ನಿತರ ಧಾರ್ಮಿಕ ಕ್ಷೇತ್ರಗಳಿಗೆ ಉಡುಗೊರೆಗಳನ್ನು ಕೊಡುವುದು ಸಾಮಾನ್ಯವಾಗಿದ್ದಿತ್ತು. ವಿಧವೆಯರು ತಮ್ಮ ಜೀವನವನ್ನು ಶೋಚನೀಯ ರೀತಿಯಲ್ಲಿ ಕಳೆಯಬೇಕಾಗಿತ್ತು. ಅವರು ಹೆಚ್ಚಾಗಿ ತಮ್ಮ ಜೀವನವನ್ನು ಧಾರ್ಮಿಕ ಕ್ರಿಯೆಗಳಲ್ಲಿಯೇ ತೊಡಗಿಸಿಕೊಂಡು ಕಾಲಕಳೆಯುತ್ತಿದ್ದರು. ಸ್ತ್ರೀಯರಿಗೆ ಮಠಕ್ಕೆ ಸೇರುವ ಅವಕಾಶವಿರಲಿಲ್ಲ. ಕೆಳದಿ ಸಂಸ್ಥಾನದಲ್ಲಿ ಸತಿ ಪದ್ಧತಿಯು ಬಳಕೆಯಲ್ಲಿದ್ದಿತ್ತು. ಈ ಅನಿಷ್ಟ ಪದ್ಧತಿಗೆ ಹೆಚ್ಚಾಗಿ

ರಾಣಿಯರು, ಶ್ರೀಮಂತ ಮಹಿಳೆಯರು ಹಾಗೂ ಕೆಳವರ್ಗದವರು ಬಲಿಯಾಗುತ್ತಿದ್ದರು. ಬ್ರಾಹ್ಮಣರಲ್ಲಿ ಈ ಪದ್ದತಿ ಹೆಚ್ಚಾಗಿ ಕಂಡು ಬರುತ್ತಿರಲಿಲ್ಲ. ವಿದೇಶಿ ಪ್ರವಾಸಿಗನಾದ ಪಿಯತ್ರೋದೆಲ್ಲವಲ್ಲೆಯು ಸತಿಗೆ ಸಿದ್ದವಾಗಿ ಹೋಗುತ್ತಿದ್ದ ಒಬ್ಬ ಮಹಿಳೆಯನ್ನು ಕಂಡು, ಅವಳ ಅಂದಿನ ವೇಷಭೂಷಣ ಹಾಗೂ ಅವಳ ಜೊತೆಯಲ್ಲಿ ಇದ್ದ ಸನ್ನಿವೇಶವನ್ನು ಸುಂದರವಾಗಿ ವರ್ಣಿಸಿದ್ದಾನೆ. ಆದರೆ ನಾನು ಸತಿ ನಡೆಯುವ ಸ್ಥಳಕ್ಕೆ ಹೋಗಲು ಸಾಧ್ಯವಾಗಲಿಲ್ಲವೆಂಬ ಕೊರಗನ್ನು ವ್ಯಕ್ತಪಡಿಸಿಕೊಂಡಿರುವುದು ಕಂಡುಬರುತ್ತದೆ.

ಕೆಳದಿಯಲ್ಲಿ ದೇವದಾಸಿ ಪದ್ಧತಿಯು ಹೆಚ್ಚಾಗಿಯೇ ಇದ್ದಿತು. ದೇವದಾಸಿಯರು ದೇವರ ಕಾರ್ಯಗಳನ್ನು ನಿರ್ವಹಿಸಲು ಬಿಟ್ಟವರೆಂಬ ಕೆಟ್ಟ ಸಂಪ್ರದಾಯವು ಮೂಡುವಂತೆ ಮೇಲ್ಜಾತಿಯವರು ನಂಬಿಸಿದರು. ದೇವದಾಸಿಯರು ಹೆಚ್ಚಾಗಿ ಕೆಳಜಾತಿಗೆ ಸೇರಿದವರಾಗಿದ್ದರು ಎಂಬುವುದು ಈಗಾಗಲೇ ಅಧ್ಯಯನಗಳಿಂದ ದೃಢಪಟ್ಟಿದೆ. ಇವರು ಹೆಚ್ಚಾಗಿ ವೇಶ್ಯಾವೃತ್ತಿಯನ್ನು ಅವಲಂಭಿಸಿಕೊಂಡಿದ್ದರು. ಕೆಳದಿ ಶಾಸನದಲ್ಲಿ ಇವರನ್ನು ಹುಜೂರು ಮೇಳ ಎಂದು ಕರೆದಿರುವುದು ಕಂಡುಬರುತ್ತದೆ. ಇವರ ಜೀವನ ಶೋಚನೀಯವಾಗಿದ್ದಿತ್ತು. ಆದರೆ ಸಮಾಜದಲ್ಲಿ ಕೆಲವು ಧಾರ್ಮಿಕ ನಂಬಿಕೆಗಳಿಂದ ಇವರು ಗೌರವವನ್ನು ಹೊಂದಿದ್ದರು. ಇವರು ನೃತ್ಯದಲ್ಲಿ ಪರಿಣಿತರಾಗಿದ್ದರೆಂದೂ, ಧಾರ್ಮಿಕ ಸಮಾರಂಭಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರೆಂದೂ ವಿದೇಶಿಯರು ವ್ಯಕ್ತಪಡಿಸಿರುವುದು ಕಂಡುಬರುತ್ತದೆ.

**ಜಾತಿ ವ್ಯವಸ್ಥೆ :** ಈ ಸಮಯಕ್ಕೆ ವರ್ಣಾಶ್ರಮ ಪದ್ಧತಿಯು ತನ್ನ ಕಠಿಣವಾದ ಅನಿಷ್ಟ ಪದ್ಧತಿಗಳಲ್ಲಿ ಸ್ವಲ್ಪ ಪ್ರಮಾಣದ ಸಡಿಲಿಕೆ ಮಾಡಿಕೊಂಡಿತ್ತೆನ್ನಬಹುದು ವಿಜಯನಗರ ಸಾಮ್ರಾಜ್ಯದಲ್ಲಿ ವೃತ್ತಿಯಿಂದ ಸೂಚಿಸುವ ಜಾತಿಗಳು ಇದ್ದಂತೆ ಇಲ್ಲಿಯೂ ಸಹ ಅದೇ ಮಾದರಿಯಲ್ಲಿ ಜಾತಿಗಳು ಸ್ಪಷ್ಟವಾಗಿದ್ದವು. ಜಾತಿಗಳಲ್ಲಿ ಬ್ರಾಹ್ಮಣರು ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿ ಅಪಾರ ಗೌರವ ಪಡೆದವರಾಗಿದ್ದರು. ಆಸ್ಥಾನದ ಪ್ರಮುಖ ಕವಿಗಳಾದ ಲಿಂಗಣ್ಣ, ವೆಂಕಣ್ಣ, ಮೊದಲಾದವರು ಬ್ರಾಹ್ಮಣರೇ ಆಗಿದ್ದರು. ಅವರ ಮನೆಯಲ್ಲಿ ಇತರೇ ಜಾತಿಯವರು ಊಟ ಮಾಡುವಂತಿರಲಿಲ್ಲ. ಅವರಲ್ಲಿಯೂ ಕೆಲವರು ಈಶ್ವರನನ್ನು ಪೂಜಿಸಿದವರನ್ನು ಸ್ಮಾರ್ತರೆಂದೂ, ವಿಷ್ಣುವನ್ನು ಪೂಜಿಸುವವರನ್ನು ವೈಷ್ಣವರೆಂದೂ ಕರೆಸಿಕೊಳ್ಳುತ್ತಿದ್ದರೆಂದು ಮೆಕಂಜಿಯು ಸಂಗ್ರಹಿಸಿರುವ ಕೈಫಿಯತ್ ಗಳಲ್ಲಿ ವಿವರವಾಗಿ ತಿಳಿಯಬಹುದಾಗಿದೆ.

ಸಂಸ್ಥಾನದಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಅವರಷ್ಟೇ ಪ್ರಭಾವಶಾಲಿಗಳಾದವರೆಂದರೆ ವೀರಶೈವರು. ಸ್ವತಃ ಇಕ್ಕೇರಿ ನಾಯಕರೇ ವೀರಶೈವದವರಾಗಿದ್ದರಿಂದ ಈ ಧರ್ಮವು ಹೆಚ್ಚು ಪ್ರಭಾವಶಾಲಿಯಾಗಿದ್ದಿತ್ತು. ವೀರಶೈವ ಮಠಗಳು ಇವರ ಕಾಲದಲ್ಲಿ ಹೆಚ್ಚು ಹೆಚ್ಚು ನಿರ್ಮಾಣವಾದವು. ವಿರಕ್ತ ಮಠಗಳು, ಮಹತ್ತಿನ ಮಹಾಮಹತ್ತಿನ ಮಠಗಳು, ವಶೀಕೃತ ಮಠಗಳು, ಕೂಡಲಿ ಕಲ್ಲುಮಠ, ಆನವಟ್ಟಿ ಗ್ರಾಮದ ತುಪನೂರು ಸೀಮೆಯಲ್ಲಿಯ ಕಲ್ಲಿನ ಮಠ, ಚಟ್ಟಹಳ್ಳಿಯಲ್ಲಿದ್ದ ಗದ್ದಿಗೆ ಮಠಗಳೂ ನಿರ್ಮಾಣವಾಗಿ ಅಪಾರ ದಾನದತ್ತಿಯನ್ನು ಪಡೆದು ಅಭಿವೃದ್ಧಿಯ ಪಥದಲ್ಲಿ ಮುನ್ನಡೆದವು. ಮೆಕಂಜಿಯು ಅಂದು ವ್ಯಾಪಾರದಲ್ಲಿ ತಲ್ಲೀನರಾಗಿದ್ದ ವೈಶ್ಯರ ಬಗ್ಗೆಯೂ ಸಹ ವಿವರಣೆಯನ್ನು ನೀಡುತ್ತಾರೆ. ಮೆಕೆಂಜಿಯವರು ಸಂಗ್ರಹಿಸಿದ್ದ ವೈಶ್ಯರ ಬಗ್ಗೆಯೂ ಸಹ ವಿವರಣೆಯನ್ನು ನೀಡುತ್ತಾರೆ. ಮೆಕಂಜಿಯವರು ಸಂಗ್ರಹಿಸಿದ್ದ ಕೈಫಿಯತ್ ಗಳನ್ನು ಡಾ. ಎಂ.ಎಂ. ಕಲ್ಬುರ್ಗಿಯವರು ಶೇಖರಿಸಿ ಕನ್ನಡದಲ್ಲಿ ಪ್ರಕಟಿಸಿರುವುದರ ಪ್ರಕಾರ ಕೆಳದಿಯಲ್ಲಿ ಮುಸಲ್ಮಾನರು, ಮರಾಠಿಯವರು, ಕೊರವರು, ಸೊನಗಾರರು, ಕುಂಬಾರರು, ಉಪ್ಪಾರರು, ಬೆಸ್ತರು, ಜೋಗೋರರು, ಬಣಗಾರರು, ಜಾಡರು, ಲಿಂಗದವೀರರು, ದೊಂಬಿಜಾತಿಯವವರು, ಜಾತಾಳ ಜಾತಿಯವರು, ರೆಡ್ಡಿ ಜಾತಿಯವರು, ಜಟಿಗಳ ಜಾತಿಯವರು, ಜೈನರು, ಕಂಚುಗಾರರು, ಬೇಡರು, ಹಜಾಮರು, ಹಳೇಪೈಕದವರು, ಕುರುಬರು, ಮಾಲೇರರು, ಗಾಣಗಾರರು, ಕಟುಕರು, ಬಳೆಗಾರರು, ಗೋಸಾಯಿಗಳು ಮೊದಲಾದವರು ನಗರ ಸೀಮೆಯಲ್ಲಿ ವಾಸಿಸುತ್ತಿದ್ದರೆಂದು ವಿವರಣೆಯನ್ನು ನೀಡುತ್ತಾರೆ.

ಅಂದಿನ ಜನರು ತಮ್ಮ ತಮ್ಮ ಕುಲ ವೃತ್ತಿಗಳನ್ನು ಅಪಾರವಾಗಿ ಗೌರವಿಸುತ್ತಿದ್ದರು. ಧರ್ಮದ ಕಟ್ಟುಪಾಡುಗಳಿಗಿಂತಲೂ ಹೆಚ್ಚಾಗಿ ಜಾತಿ ಕಟ್ಟುಪಾಡುಗಳಿಗೆ ಹೆಚ್ಚಿನ ಬೆಲೆಕೊಡುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಅಂದು ಧರ್ಮವೆಂಬುವುದೇ ಇರಲಿಲ್ಲ. ಧರ್ಮ ಜಾತಿಗಳೆಲ್ಲವೂ ಒಂದೇ ಆಗಿದ್ದಿತ್ತು. ಅದೇ 'ಜಾತಿ' ಎಂದು ಹೇಳಿದರೆ ತಪ್ಪಾಗಲಾರದು. ಇದರಿಂದ ಅವರು ಸಮಾಜದಲ್ಲಿ ನಮ್ಮ ಗೌರವ ಹೆಚ್ಚುತ್ತದೆ ಎಂದು ನಂಬಿದವರಾಗಿದ್ದರು.

**ಹೊಲೆಯ ಮಾದಿಗರ ಸ್ಥಿತಿ**

ಹೊಲೆಯ ಮಾದಿಗರು ಸಾಮಾನ್ಯವಾಗಿ ಪ್ರತಿಯೊಂದು ಗ್ರಾಮದಲ್ಲಿಯೂ ಇದ್ದರೂ ಅವರು ಊರಿನಿಂದ ಹೊರಗಡೆ ವಾಸಿಸುತ್ತಿದ್ದರು. ಇದರಿಂದಲೇ ಅಂತ ಕಾಣುತ್ತದೆ. ಪ್ರಾಚೀನಕಾಲದಿಂದಲೂ ಉಳಿದುಬಂದಿರುವ ಗಾದೆಯ ಮಾತು "ಊರು ಬಂದ ಮೇಲೆ ಹೊಲಗೇರಿ ಇರಲೇಬೇಕು" ಹಾಗೂ "ಊರು ಬೊಲಗೇರಿ ಒಂದು ಮಾಡಿಬಿಟ್ಟ" ಎಂಬ ಗಾದೆಗಳು ಜನ್ಮ ತಾಳಿರುವುದು. ಈ ಗಾದೆಗಳೇ ಬಹು ವಿಶಾಲವಾದ ಅರ್ಥವನ್ನು ತಮ್ಮ ತಮ್ಮ ಮಡಿಲಿನಲ್ಲಿ ಅಡಗಿಸಿಕೊಂಡು, ಅಂದಿನ ಜಾತಿವ್ಯವಸ್ಥೆಯ ಸಂಸ್ಕೃತಿಯನ್ನು ತಿಳಿಹೇಳುತ್ತವೆನ್ನಬಹುದು. ಇವರ ಜೀವನ ಅಂದು ಹೀನಸ್ಥಿತಿಯಲ್ಲಿತ್ತು. ಜೀವನದ ಪ್ರತಿಯೊಂದು ಹಂತದಲ್ಲಿಯೂ ಅದು ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ ಕ್ಷೇತ್ರದ ವಿಷಯಗಳಲ್ಲಿರಬಹುದು ಈ ಜನ ಅತ್ಯಂತ ಕೆಳಮಟ್ಟದಲ್ಲಿ ಜೀವಿಸುತ್ತಿದ್ದರೆನ್ನಬಹುದು. ವಿಜಯನಗರದರಸರ ಕಾಲದಲ್ಲಿ ಇದ್ದಂತೆ ಇಲ್ಲಿಯು ದಲಿತರನ್ನು ಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಒಡೆಯನಿಗೆ ಅಧೀನವಾಗಿ ಸಾಯುವವರೆಗೆ ದುಡಿದು ಜೀವನ ಸಾಗಿಸಬೇಕಾಗಿತ್ತು. ದಲಿತ ಮಹಿಳೆಯರ ಜೀವನ ಶೋಚನೀಯವಾಗಿದ್ದಿತ್ತೆನ್ನಬಹುದು. ಇವರುಗಳಿಗೆ ಸಂಸ್ಥಾನದ ಕಾನೂನುಗಳಲ್ಲಿ ಯಾವುದೇ ರೀತಿಯಲ್ಲಿಯೂ ಭದ್ರತೆ ಇದ್ದಂತೆ ಕಂಡುಬರುತ್ತಿರಲಿಲ್ಲ. ಹೆಚ್ಚಿನ ಸಂಖ್ಯೆಯ ಮಹಿಳೆಯರು ದೇವದಾಸಿಯರೂ ಹಾಗೂ ವೇಶ್ಯೆಯರೂ ಆಗಿ ಜೀವನ ಮಾಡುತ್ತಿದ್ದರು. ಇವರ ಪಾಲಿಗೆ ಶಿಕ್ಷಣ ಎಂಬುವುದು ಕನಸಿನ ಮಾತಾಗಿತ್ತು. ಕೆಲವು ವೀರಶೈವ ಮಠಗಳು ಇವರುಗಳ ಪರಿಸ್ಥಿತಿಯನ್ನು ತಿಳಿದು ಹಬ್ಬ ಹರಿದಿನಗಳಲ್ಲಿ ದಾಸೋಹ ನೀಡುತ್ತಿದ್ದುದ್ದಕ್ಕೆ ಆಧಾರಗಳಿವೆ.

ಈ ಜನಾಂಗವು ಸಂಸ್ಥಾನದ ಬೀದಿ, ಚರಂಡಿ, ಶ್ರೀಮಂತರ ಮನೆ ಅಂಗಳಗಳನ್ನು ಸ್ವಚ್ಛಗೊಳಿಸುವ ಕಾಯಕ ಮಾಡಿ ಜೀವನ ನಡೆಸಬೇಕಾಗಿತ್ತು ಹಾಗೂ ಶ್ರೀಮಂತರ ಜಮೀನಿನಲ್ಲಿ ಯಾವುದೆ ರೀತಿಯ ಸೌಕರ್ಯಗಳಿಲ್ಲದೆ ನಾಯಿಗಿಂತಲೂ ಕೆಳಮಟ್ಟದಲ್ಲಿ ದುಡಿಯಬೇಕಾಗಿತ್ತು. ತಪ್ಪಿದರೆ ಕಠಿಣ ಶಿಕ್ಷೆಗೆ ಗುರಿಯಾಗುತ್ತಿದ್ದರು. ದೇವತಾ ಕಾರ್ಯಗಳಲ್ಲಿ ನರಬಲಿಕೊಡುವ ಕೆಟ್ಟ ಸಂಪ್ರದಾಯ ಬಳಕೆಯಲ್ಲಿತ್ತು. ಇಂತಹ ಸಮಯದಲ್ಲಿ ನರಬಲಿಗೆ ದಲಿತವರ್ಗದವರನ್ನು ನೀಡಲಾಗುತ್ತಿತ್ತು. ಅವರಲ್ಲಿದ್ದ ಅಜ್ಞಾನದಿಂದ ಅವರು ಅದನ್ನು ದೇವತಾಕಾರ್ಯವೆಂಬಂತೆ ಭಕ್ತಿಭಾವದಿಂದ ಅರ್ಪಿಸಿಕೊಳ್ಳುತ್ತಿದ್ದರು. ಇವರು ಆಚರಿಸುತ್ತಿದ್ದ ಹಬ್ಬಗಳಲ್ಲಿ ಪ್ರಾಣಿಬಲಿ, ನರಬಲಿ, ಅಂಗಾಂಗಗಳ ವಿಚ್ಛೇದನ ಮುಂತಾದ ಬಲಿಗಳನ್ನು ಅರ್ಪಿಸಿ ತಮ್ಮ ತಮ್ಮ ದೇವರುಗಳನ್ನು ತೃಪ್ತಿಪಡಿಸುತ್ತಿದ್ದರು. ಇದು ಅವರ ಅಜ್ಞಾನಕ್ಕೆ ಹಿಡಿದ ಕನ್ನಡಿ ಎನ್ನಬಹುದು.

ಇಕ್ಕೇರಿ ನಾಯಕರು ಇವರುಗಳಿಗೂ ಕೆಲವು ಸನ್ನಿವೇಶದಲ್ಲಿ ಪ್ರಶಂಸಾರ್ಥವಾಗಿ ನಡೆದುಕೊಂಡಿರುವುದನ್ನು ಕೆಲವು ಆಧಾರಗಳಿಂದ ನೋಡಬಹುದು. ಉದಾಹರಣೆಗೆ ಗ್ರಾಮಗಳಿಗೆ ನುಗ್ಗಿ ದರೋಡೆ ಮಾಡುವ ಜನರನ್ನು ಹಿಂಸೆಗೆ ಗುರಿ ಮಾಡುತ್ತಿದ್ದ ಕಳ್ಳರನ್ನು ಹಾಗೂ ದುಷ್ಟ ಪ್ರಾಣಿಗಳನ್ನು ವೀರಾವೇಶದಿಂದ ಪ್ರಾಣದ ಹಂಗನ್ನು ತೊರೆದು ಹೋರಾಡಿ ಕೊಲ್ಲಿದ ವ್ಯಕ್ತಿಗೆ ಪ್ರಶಂಸಿಸಿ ದತ್ತಿ ನೀಡಿರುವುದು ಕಂಡುಬರುತ್ತದೆ. ಇದು ಅನೇಕ ಕೆಳಜಾತಿಯವರ ವಂಶದವರೆಂದು ಕಂಡುಬಂದಿರುವ ವೀರಗಲ್ಲುಗಳಲ್ಲಿ ಗಮನಿಸಬಹುದು. ಮುಖ್ಯವಾಗಿ ಈ ವರ್ಗದವರೇ ಸಂಸ್ಥಾನದ ಸೈನಿಕರಾಗಿದ್ದರು. ಈ ಸೈನಿಕರ ಸ್ಥಿತಿಯೂ ಸಹ ಶೋಚನೀಯವಾಗಿತ್ತೆನ್ನಬಹುದು. ಯುದ್ಧಗಳಲ್ಲಿ ಹೆಚ್ಚು ಪ್ರಾಣಹಾನಿಯಾಗುತ್ತಿದದ್ದು ಈ ಜನಾಂಗದವರೆ ಯುದ್ಧ ಘೋಷಣೆಯಾದಾಗ ಪ್ರತಿಯೊಂದು ಗ್ರಾಮದಿಂದಲೂ ಸಹ ಮನೆಗೊಬ್ಬ ಗಂಡಸು (ಹೊಲೆಮಾದಿಗರ ಕೇರಿಯಿಂದ) ಸ್ವತಃ ತಾನೇ ಯುದ್ಧ ಸಾಮಗ್ರಿಗಳಾದ ಭರ್ಚಿ, ಕತ್ತಿ, ಕೊಡಲಿ, ಬಾಕು, ಬೀಸು ಕೊಡಲಿಗಳನ್ನು ತಯಾರಿಸಿಕೊಂಡು ಸಿದ್ಧನಾಗಿ ಬರಬೇಗಿತ್ತು. ತಪ್ಪಿದಲ್ಲಿ ಶಿಕ್ಷೆಗೆ ಪಳಗಾಗುವುದು ಸಹಜವೆ. ಇದು ರಾಜಾಜ್ಞೆಯಾಗಿದ್ದಿತ್ತು. ಇಂಥಹ ಸನ್ನಿವೇಶದಲ್ಲಿಯೇ ಗ್ರಾಮೀಣ ಪ್ರದೇಶದಲ್ಲಿ ಅದರಲ್ಲಿಯೂ ದಲಿತ ಜನರಲ್ಲಿ "ದಂಡಿಗೆ ಹೋದವನ ಹೆಂಡತಿ ಮುಂಡೆ" ಎಂಬ ಗಾದೆ ಹುಟ್ಟಿರುವುದು. ಈ ಗಾದೆಯ ಅರ್ಥವನ್ನು ಎಳೆಎಳೆಯಾಗಿ ಬಿಡಿಸಿದಾಗ ಯುದ್ಧದ ಸಂಪೂರ್ಣ ಚಿತ್ರಣ ಕಣ್ ಮುಂದೆ ಬಂದು ನಿಲ್ಲುತ್ತದೆ.

ಒಟ್ಟಿನಲ್ಲಿ ಈ ಜನಾಂಗದ ಸ್ಥಿತಿಗತಿಯನ್ನು ಹೊರತುಪಡಿಸಿದರೆ ಮಿಕ್ಕ ಎಲ್ಲ ಜನಾಂಗದ ಸಾಮಾಜಿಕ ಸಂಬಂಧಗಳು, ಸಂಸ್ಥಾನದಲ್ಲಿ ಪ್ರೀತಿ ಹಾಗೂ ಸೌಹಾರ್ದತೆಯಿಂದ ಒಟ್ಟಿಗೆ ಶಾಂತಿಯುತವಾಗಿ ಜೀವನ ನಡೆಸುತ್ತಿದ್ದರೆನ್ನಬಹುದು.

* * *

# ೫. ಆರ್ಥಿಕ ಪದ್ಧತಿ

ಇಕ್ಕೇರಿ ಅರಸರ ಆರ್ಥಿಕ ಪದ್ಧತಿಯನ್ನು ತಿಳಿಯಲು ಸಾಹಿತ್ಯಾಧಾರಗಳು ಹಾಗೂ ಶಾಸನಾಧಾರಗಳು ಹೆಚ್ಚಿನ ಪ್ರಮಾಣದಲ್ಲಿ ಸಹಕಾರಿಯಾಗುತ್ತವೆ. ಅಂದಿನ ಕಾಲದ ವ್ಯವಸಾಯ ಪದ್ಧತಿ, ತೆರಿಗೆ ಸಂಗ್ರಹಣೆ ಹಾಗೂ ವಸೂಲಿಯ ರೀತಿ, ನಾಣ್ಯ ವ್ಯವಸ್ಥೆ, ವಿದೇಶಿ ವಿನಿಮಯ, ವಿಜಯನಗರದೊಂದಿಗೆ ಇವರ ಆರ್ಥಿಕ ಒಪ್ಪಂದ ಮೊದಲಾದ ವಿಷಯಗಳು ವಿವರವಾಗಿ ಇವುಗಳಿಂದ ತಿಳಿದುಬರುತ್ತವೆ.

**ಕೃಷಿ**

ಪ್ರಾಚೀನ ಕಾಲದಿಂದಲೂ ಭಾರತೀಯರ ಪ್ರಮುಖ ಕಸುಬೇ ಕರಸಿ, ಆದರೆ ಈ ಕೃಷಿ ಪದ್ಧತಿಯು ಭಾರತದಲ್ಲಿ ಮಳೆಯೊಡನೆ ಜೂಜಾಟವಾಡುತ್ತಲೆ ಬೆಳೆದು ಬರುತ್ತಿದೆ. ನಂತರದಲ್ಲಿ ನದಿಗಳಿಗೆ ಸೂಕ್ತ ಸ್ಥಳಗಳಲ್ಲಿ ಒಡ್ಡುಗಳನ್ನು ನಿರ್ಮಿಸಿ ನಂತರದಲ್ಲಿ ಕೆರೆ, ಕಟ್ಟೆ, ಬಾವಿಗಳನ್ನು ನಿರ್ಮಿಸಿ ಕರಷಿಗೆ ಯೋಗ್ಯವಾಗುವ ನೀರನ್ನು ಶೇಖರಿಸಿಕೊಂಡು ನೀರಾವರಿ ವ್ಯವಸಾಯವನ್ನು ಕೈಗೊಂಡು ಉತ್ತಮ ಫಸಲನ್ನು ಪಡೆಯುವ ಕಾಯಕವನ್ನು ಮನುಷ್ಯ ರೂಢಿಸಿಕೊಂಡ, ಈ ಕಾಯಕದಲ್ಲಿ ಇಕ್ಕೇರಿ ನಾಯಕರು ಹಿಂದೆ ಇರಲಿಲ್ಲ. ಇಕ್ಕೇರಿ ಸಂಸ್ಥಾನವೇ ಮೂಲತಃ ಮಲೆನಾಡಿನ ಮಡಿಲಿನಲ್ಲಿ ಇದ್ದಂತಹದಾದ್ದರಿಂದ ಇಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಲಾಗುತ್ತಿತ್ತು. ಈ ಪ್ರದೇಶವು ಕೆಲವು ಪ್ರಮುಖ ವಾಣಿಜ್ಯ ಬೆಳೆಗಳ ಬೆಳೆಗೆ ಯೋಗ್ಯವಾದ ಪ್ರದೇಶವಾಗಿದ್ದುದರಿಂದ ಅದಕ್ಕೆ ಹೊಂದಿಕೊಳ್ಳುವ ಅಡಿಕೆ, ತೆಂಗು, ಭತ್ತ, ಮೆಣಸು, ವೀಳ್ಯೆದೆಲೆಯ ವಾಣಿಜ್ಯ ಬೆಳೆ ಹಾಗೂ ಶ್ರೀಗಂಧ, ತೇಗ, ಹೊನ್ನೆ ಮುಂತಾದ ಬೆಲೆಬಾಳುವ ಮರಗಳನ್ನು ಹೆಚ್ಚಿನ ಪ್ರಮಾಣದಲ್ಲಿಯೇ ಬೆಳೆಯಲಾಗುತ್ತಿತ್ತು. ಅಂದಿನ ರಾಜರಿಂದ ಸಾಮಾನ್ಯ ಜನರವರೆಗೂ ಸಹ ಭೂಮಿಯನ್ನು ಮಾತೃ ಭಾವನೆಯಿಂದ ನೋಡುವ ಸಂಪ್ರದಾಯ ಬೆಳೆದು ಬಂದಿತ್ತು. ಇಂದು ವಿವಿಧ ಮಾದರಿಯ ದಾನಗಳು ಅನೇಕ ಪಾವಿತ್ರತೆಯನ್ನು ಪಡೆದಿವೆ. ಆದರೆ ಕೆಳದಿ ಅರಸರ ಕಾಲದಲ್ಲಿಕ ಭೂದಾನವು ಪವಿತ್ರವಾಗಿತ್ತು. 'ಭೂದಾನ' ಶ್ರೇಷ್ಠತೆಯಲ್ಲಿ ಶ್ರೇಷ್ಠ ಎಂಬ ಕೀರ್ತಿ ಪಡೆದಿತ್ತು. ಸಂಸ್ಥಾನದಲ್ಲಿ ಭೂದಾನ ಮಾಡಿರುವ ವಿಷಯದ ಮೇಲೆ ಬೆಳಕು ಚೆಲ್ಲುವ ನೂರಾರು ಶಾಸನಗಳು ಕಂಡುಬರುತ್ತವೆ. ವ್ಯವಸಾಯಕ್ಕೆ ಎತ್ತು, ದನ, ಎಮ್ಮೆಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದರು. ಪಶುಸಂಗೋಪನೆಯು ಅಂದು ಪವಿತ್ರವಾದ ಉದ್ಯೋಗವಾಗಿ ಪರಿವರ್ತನೆ ಪಡೆದಿತ್ತು.

ಕೆಳದಿ ಅರಸರು ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ನೀರಾವರಿ ಭೂಮಿ ಹಾಗೂ ಖುಷ್ಕಿ ಭೂಮಿ ಎಂದು ಎರಡು ಭಾಗಗಳಾಗಿ ವಿಭಾಗಿಸಿಕೊಂಡು ವ್ಯವಸಾಯ ಮಾಡಿ ಇವುಗಳ ಆಧಾರದ ಮೇಲೆಯೇ ತೆರಿಗೆಯನ್ನು ವಸೂಲು ಮಾಡುತ್ತಿದ್ದರು. ಮೊದಲೆ ತಿಳಿಸಿದಂತೆ ನೀರಾವರಿ ಕೃಷಿಗೆ ಕೆರೆ, ನದಿ, ಬಾವಿ ನೀರನ್ನು ಅವಲಂಭಿಸಿದರೆ, ಖುಷ್ಕಿಗೆ ಮಳೆಯೊಡನೆ ಕಣ್ಣಾಮುಚ್ಚಾಲೆ ಆಟ ಹಾಡಬೇಕಾಗಿತ್ತು. ಖುಷ್ಕಿ ಭೂಮಿಯಲ್ಲಿ ಮಳೆಗಾಲವನ್ನು ಅನುಸರಿಸಿಕೊಂಡು ಬಿತ್ತನೆ ಮಾಡಿ ಭತ್ತ, ರಾಗಿ, ಕಬ್ಬು, ಎಳ್ಳು ಶೇಂಗ, ದ್ವದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ನೀರಾವರಿಗೆ ಒಳಪಟ್ಟಿರುವ ಭೂಮಿಯಲ್ಲಿ ತೆಂಗು, ಭತ್ತ, ಅಡಿಕೆ, ಮಾವು, ಬಾಲೆ, ವೀಳ್ಯೆದೆಲೆ, ಮೆಣಸು ಮುಂತಾದ ಪ್ರಮುಖ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದರು. ದೇವಾಲಯ, ಮಠ ಹಾಗೂ ಅಗ್ರಹಾರಗಳಿಗೆ ಅಡಿಕೆ ತೋಟಗಳನ್ನು ದಾನವಾಗಿ ಕೊಟ್ಟಿರುವುದು ಶಾಸನಗಳಿಂದ ತಿಳಿದುಬರುತ್ತದೆ. ವ್ಯವಸಾಯಕ್ಕೆ ಜಾನುವಾರುಗಳ ಸಗಣಿಯ ಗೊಬ್ಬರವೇ ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತಿದ್ದರೆನ್ನಬಹುದು. ಬ್ರಾಹ್ಮಣರ ಭುಮಿಯನ್ನು ಊರಿನ ರಥರು ಸಾಗುವಳಿ ಮಾಡಿ ಅವರಿಂದ 'ಗೇಣಿ' ರೂಪದಲ್ಲಿ ಸಂಭಾವನೆಯನ್ನು ಪ್ರತಿವರ್ಷ ಪಡೆಯುತ್ತಿದ್ದರು. ಈ ಗೇಣಿ ಪದ್ಧತಿಯು ಅವರು ವ್ಯವಸಾಯ ಮಾಡುವ ಭುಮಿಯ ವಿಸ್ತರಣೆಯ ಪ್ರಕಾರ ನಿಗದಿಪಡಿಸಲಾಗುತ್ತಿದ್ದಿತು. ಸಾರ್ವಜನಿಕವಾಗಿ ಸೇವೆ ಸಲ್ಲಿಸುವರಿಗೆ ಪ್ರೋತ್ಸಾಹ ನೀಡುವುದಕ್ಕಾಗಿ ಅಂಥವರಿಗೆ 'ಉಂಬಳಿ' ಎಂಬ ಭೂಮಿಯನ್ನು ಕೊಡಲ್ಪಡುವ ಪದ್ಧತಿಯು ಜಾರಿಯಲ್ಲಿದ್ದಿತ್ತು. ಜಾನುವಾರುಗಳ ಮೇವಿನ ಸ್ಥಳಕ್ಕಾಗಿ, ಧಾರ್ಮಿಕ ಕೆಲಸ ಕಾರ್ಯಗಳಿಗಾಗಿ, ಚಾತುರ್ಮಾಸದ ವಿಶಿಷ್ಟ ಪೂಜೆಗಳಲ್ಲಿ ಜನರು ಬಂದು ಒಂದು ಕಡೆ ಸೇರಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸುವ ಅನುಕೂಲಕ್ಕಾಗಿ ಭೂಮಿಯ ಒಡೆಯರು ಭೂಮಿಯನ್ನು 'ದಾನ' ಬಿಡುತ್ತಿದ್ದರು. ಇಂತಹ ಪದ್ಧತಿಯನ್ನು 'ಉತ್ತಾರ' ಬಿಟ್ಟ ಭೂಮಿ ಎಂದು ಕರೆಯುವ ವಾಡಿಕೆಯು ಇದ್ದಿತ್ತು. ಇದು ಅಂದಿನ ಪ್ರಮುಖ ಸಂಸ್ಕೃತಿಯಾಗಿತ್ತೆಂದು ತಿಳಿದುಬರುತ್ತದೆ.

ಸಂಸ್ಥಾನದಲ್ಲಿ ವ್ಯವಸಾಯದ ನಂತರದ ಪ್ರಮುಖ ವೃತ್ತಿಯು ಗುಡಿ ಕೈಗಾರಿಕೆಯಾಗಿದ್ದಿತ್ತು. ನೇಕಾರರು ಬಟ್ಟೆಗಳನ್ನು ನೇಯ್ದು ಆಸ್ಥಾನದ ರಾಜರಾಣಿಯರನ್ನು ಸುಂದರವಾಗಿಸುತ್ತಿದ್ದರು. ಕುಂಬಾರರು ಮಡಿಕೆ ಮಾಡುವ ಗೃಹ ಕೈಗಾರಿಕೆಯನ್ನು ಅವಲಂಬಿಸಿದ್ದರು. ಅಂದು ಕಬ್ಬು ಪ್ರಮುಖ ವಾಣಿಜ್ಯ ಬೆಳೆಯಾಗಿದ್ದರಿಂದ ಬೆಲ್ಲವನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲಾಗುತ್ತಿತ್ತು. ಅಕ್ಕಸಾಲಿಗರು, ಚಿನಿವಾರರು, ಬಡಗಿಗಳು, ಮೋಚಿಗಳು ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುತ್ತಿದ್ದರು. ಗಾಣದಿಂದ ಎಣ್ಣೆ ತೆಗೆಯುವ ಕೆಲಸವನ್ನು ಹೊಂದಿದ್ದ ಗಾಣಿಗರು ಅಂದು ಹೆಚ್ಚಿನ ಪ್ರಮಾಣದಲ್ಲಿದ್ದರು. ಇವರುಗಳು ಸಹ ನಿಗದಿತ ಪ್ರಮಾನದಲ್ಲಿ ಸರ್ಕಾರಕ್ಕೆ ತೆರಿಗೆ ಸಲ್ಲಿಸಬೇಕಾಗಿದ್ದಿತ್ತು.

ವಿದೇಶಿಗಳಿಗೆ ಅಮದು ರಫ್ತುಗಳೂ ನಿಗದಿತ ಪ್ರಮಾಣದಲ್ಲಿ ನಡೆಯುತ್ತಿತ್ತು. ಬ್ರಿಟಿಷರು ಹಾಗೂ ಪೋರ್ಚುಗೀಸರೊಡನೆ ನಡೆಸಿರುವ ಪತ್ರ ವ್ಯವಹಾರಗಳನ್ನು ಗಮನಿಸಿದಾಗ ಮೆಣಸು, ಏಲಕ್ಕಿ ಮೊದಲಾದ ಸಂಬಾರ ಪದಾರ್ಥಗಳು ಆ ದೇಶಗಳಿಗೆ ರಫ್ತಾಗಿ ಅಲ್ಲಿಂದ ಕುದುರೆ, ಮುತ್ತುರತ್ನಗಳು ಹಾಗೂ ವಿಶಿಷ್ಟ ಬಟ್ಟೆಗಳು ಅಮದು ಮಾಡಿಕೊಳ್ಳುತ್ತಿದ್ದರೆಂದು ಕಂಡುಬರುತ್ತದೆ. ಈ ಹಂತದಲ್ಲಿ ಅಂತೆಯೇ ವಿದೇಶಿ ಸಂಸ್ಕೃತಿಯು ಭಾರತದಲ್ಲಿ ತನ್ನ ಪ್ರಭಾವವನ್ನು ಬೀರಲಾರಂಭಿಸಿತ್ತೆಂದು ತಿಳಿಯಬಹುದು.

ಬೃಹತ್ ಸಾಮ್ರಾಜ್ಯವಾಗಿದ್ದ ವಿಜಯನಗರದಲ್ಲಿ ಬಳಕೆಯಲ್ಲಿದ್ದ ನಾಣ್ಯ ವ್ಯವಸ್ಥೆಯನ್ನೇ ಕೆಳದಿಯ ಅರಸರು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದರೆನ್ನಬಹುದು. ನಾಣ್ಯಗಳು ಬೆಳ್ಳಿ, ಚಿನ್ನ, ತಾಮ್ರ ಮೊದಲಾದ ಲೋಹಗಳಿಂದ ತಯಾರಾಗುತ್ತಿದ್ದವು. ಇಕ್ಕೇರಿ ನಾಯಕರು ತಮ್ಮದೆಯಾದ ಟಂಕಸಾಲೆಯೊಂದನ್ನು ಹೊಂದಿದ್ದರೆಂದು ಶಾಸನಗಳು ತಿಳಿಸುತ್ತವೆ. ಹೊಸನಗರದ ಒಂದು ಶಾಸನವು 'ಟಂಕಸಾಲೆ' ಕಲ್ಲಿನ ಬಗೆಗೆ ಮಾಹಿತಿ ಒದಗಿಸಿಕೊಡುತ್ತದೆ. ವಿಶಿಷ್ಟವೆಂದರೆ ನಾಣ್ಯಗಳನ್ನು ಮುದ್ರಿಸಲು ಇಕ್ಕೇರಿ ನಾಯಕರು ಖಾಸಗಿಯವರಿಗೂ ಪರವಾಣಿಗೆ ನೀಡಿದ್ದರು. ಇದಕ್ಕೆ ನಿದರ್ಶನವೆಂಬಂತೆ "ಶ್ರೀ ತೊಂಟಲಿಂಗ ಪ್ರಸನ್ನ ಸ್ವಾಮಿ"ಎಂದು ಮುದ್ರಿತವಾಗಿರುವ ಅಂಶವು ದೃಢಪಡಿಸುತ್ತದೆ. ನಾಣ್ಯಗಳನ್ನು ವಿಶ್ವಾಕರ್ಮದವರು, ಅಕ್ಕಸಾಲಿಗರು ಅಚ್ಚು ಹಾಕುತ್ತಿದ್ದರು. ಇದಕ್ಕಾಗಿ ಅವರನ್ನು ಹೆಚ್ಚಾಗಿ ಸರ್ಕಾರಿ ಕೆಲಸಕ್ಕೆ ನೇಮಿಸಿಕೊಳ್ಳಲಾಗುತ್ತಿತ್ತು.

ಕೆಳದಿ ನಾಣ್ಯಗಳು 'ಇಕ್ಕೇರಿ ವರಹ'ಗಳೆಂದೇ ಪ್ರಸಿದ್ಧವಾಗಿವೆ. ಇದನ್ನು ಸದಾಶಿವ ನಾಯಕನು ಮೊದಲು ಜಾರಿಗೆ ತಂದನು. ಸದಾಶಿವನಾಯಕನ ಚಿನ್ನದ ನಾಣ್ಯಗಳು ವಿಜಯನಗರದ ಕಾಲದವೇ ಎಂಬ ಅನುಮಾನ ಮೂಡುವಂತೆ ಮಾಡುತ್ತವೆ. ಅಂದು ಚಿನ್ನದ ನಾಣ್ಯಗಳನ್ನು 'ವರಹ' ಎಂತಲೂ, ತಾಮ್ರದ ನಾಣ್ಯಗಳನ್ನು 'ಪಣಂ' ಎಂದು ಕರೆಯುತ್ತಿದ್ದರು. ಬೆಳ್ಳಿಯ ನಾಣ್ಯಗಳು 'ತರೆ' ಎಂದು ಕರೆಸಿಕೊಳ್ಳುತ್ತಿದ್ದವು. ಅವುಗಳ ಸಂಕ್ಷಿಪ್ತ ಪರಿಚಯವನ್ನು ಡಾ. ವೆಂಕಟೇಶ್ ಜೋಯಿಸ್ ರವರು ಕೆಳಕಂಡಂತೆ ವಿವರಿಸುತ್ತಾರೆ.

೧. ವರಹ : ಮುಂಭಾಗ - ಶಿವ ಮತ್ತು ಪಾರ್ವತಿ ಚಿತ್ರ, ಶಿವನ ತೊಡೆಯಲ್ಲಿ ಪಾರ್ವತಿ ಕುಳಿತಿರುವುದು (ಚಂದ್ರಮೌಳೇಶ್ವರ)

ಹಿಂಭಾಗ : ಮೂರು ಸಾಲುಗಳಲ್ಲಿ 'ಶ್ರೀ ಸದಾಶಿವ' ಎಂಬ ದೇವನಾಗರಿ ಲಿಪಿಯ ಬರಹ.

೨. ವರಹ : ಮೇಲಿನ ರೀತಿಯೇ ನಾಗರೀ ಲಿಪಿಯಲ್ಲಿ 'ಶ್ರೀ'

೩. ಅರ್ಧ ವರಹ ಅಥವಾ ಹೊನ್ನು ವರಹವನ್ನೇ ಹೋಲುತ್ತದೆ. ತುಂಬಾ ಸಣ್ಣ ನಾಣ್ಯ

ಶಿಸ್ತಿನ ಸಿಪಾಯಿ ಎಂದೇ ಹೆಸರಾಗಿರುವ ದೊರೆ ಶಿವಪ್ಪನಾಯಕನ ಕಾಲದಲ್ಲಿ ತಾಮ್ರದ ನಾಣ್ಯಗಳಲ್ಲಿ ಛಾಪಿಸುತ್ತಿದ್ದದು ಕಂಡುಬರುತ್ತದೆ. ಇದು ೦.೫ ಡಯಾಮೀಟರ್ ಹೊಂದಿತ್ತು.

ಮುಂಭಾಗ - ಎತ್ತು ನಿಂತಿರುವುದು ಮತ್ತು 'ಶಿವ' ಎಂಬ ನಾಗರೀ ಬರಹ

ಹಿಂಭಾಗ - 'ಶ್ರೀ ಶಿವ' ಎಂಬ ನಾಗರೀ ಬರಹ.

ವೆಂಕಟಪ್ಪನಾಯಕನ ಕಾಲದಲ್ಲಿ ಛಾಪಿತವಾದ ತಾಮ್ರದ ನಾಣ್ಯ ೦.೪ ಡಯಾಮೀಟರ್ ಇತ್ತು.

ಮುಂಭಾಗ : ಶಿವ ಪಾರ್ವತಿ ಕುಳಿತಿರುವ ಚಿತ್ರ

ಹಿಂಭಾಗ - ನಾಗರಿ ಲಿಪಿಯಲ್ಲಿ ಎರಡು ಸಾಲುಗಳಲ್ಲಿ "ಶ್ರೀ ವೆಂಕಟ"

ಮೇಲ್ಕಂಡ ರೀತಿಯಲ್ಲಿ ವೀರಶೈವ ಧರ್ಮದ ಸಂಕೇತಗಳಿಗೆ ಆಧಾರವಾಗಿ ನಾಣ್ಯಗಳನ್ನು ಮುದ್ರಿಸಿ ಚಲಾವಣೆಗೆ ತಂದು ತಮ್ಮ ಆರ್ಥಿಕ ವ್ಯವಹಾರವನ್ನು ಸುಗಮಗೊಳಿಸಿಕೊಳ್ಳುತ್ತಿದ್ದರು.

ಅಂದಿನ ತೆರಿಗೆ ಪದ್ಧತಿಯು ಹಣ ಅಥವಾ ಧಾನ್ಯಗಳ ರೂಪದಲ್ಲಿ ಸಂಗ್ರಹವಾಗುತ್ತಿತ್ತೇ ಎಂಬ ವಿಷಯದಲ್ಲಿ ನಿಖರವಾದ ಮಾಹಿತಿ ದೊರಕಿರುವುದಿಲ್ಲ. ತೆರಿಗೆ ಸಂಗ್ರಹಕ್ಕೆ ತೆರಿಗೆ ಅಧಿಕಾರಿಗಳು ಇರುತ್ತಿದ್ದರು. ಸುಗ್ಗಿಯ ಕಾಲವು ತೆರಿಗೆಯನ್ನು ವಸೂಲು ಮಾಡುವ ಸನ್ನಿವೇಶವಾಗಿದ್ದಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಶ್ಯಾನುಭೋಗನು ತೆರಿಗೆ ವಸೂಲು ಮಾಡುವ ಅಧಿಕಾರ ಹೊಂದಿದ್ದನು.

ಒಟ್ಟಾರೆ ಕೆಳದಿ ಅರಸರ ಆರ್ಥಿಕ ನೀತಿಯ ಪ್ರತಿಯೊಂದು ಹಂತದಲ್ಲಿಯೂ ವಿಜಯನಗರದರಸರ ಆರ್ಥಿಕ ಪದ್ಧತಿಯನ್ನು ಅನುಸರಿಸಲು ರೀತಿಯಲ್ಲಿ ಮುಂದುವರೆಯುತ್ತಿತ್ತು. ಎಷ್ಟೋ ಬಾರಿ ಒಂದೇ ನಾಣ್ಯಗಳು ಎರಡು ಸಾಮ್ರಾಜ್ಯದಲ್ಲಿ ಬಳಕೆಯಾಗಿರುವುದೂ ಸಹ ಕಂಡುಬರುತ್ತದೆ. ಪ್ರೋ. ದಿಕ್ಷಿತ್ ಹೇಳಿರುವಂತೆ ವಿಜಯನಗರವು ತಾಯಿಯಾದರೆ ಅವರ ನೆಚ್ಚಿನ ಮಗು ಇಕ್ಕೇರಿಯು ಒಂದೇ ನಾಣ್ಯ ಪದ್ಧತಿಯನ್ನು ಕೆಲವು ದಿನಗಳವರೆಗೆ ಹೊಂದಿತ್ತೆಂದರೆ ಅತಿಶಯವೇನಲ್ಲ.

* * *

## ೬. ಸಾಹಿತ್ಯ

ಕೆಳದಿ ಅರಸ ಮನೆತನಗಳ ಸಮಗ್ರ ಇತಿಹಾಸವನ್ನು ತಿಳಿಯಲು ಹೆಚ್ಚಿನ ಪ್ರಮಾಣದಲ್ಲಿಯೇ ಸಾಹಿತ್ಯಾಧಾರಗಳು ಲಭ್ಯವಿದ್ದು, ಅವೆಲ್ಲವೂ ಇತಿಹಾಸದ ಮರೆಯಲ್ಲಿ ಹರಡಿಕೊಂಡಿವೆ ಎನ್ನಬಹುದು. ಇವುಗಳಲ್ಲಿ ಕಡತಗಳು, ಓಲೆಗರಿಗಳು, ಚಾರಿತ್ರಿಕ ದೇಶಿಯ ಸಾಹಿತ್ಯಗಳು, ವಿದೇಶಿಯ ಪ್ರವಾಸಿಗರ ಹಾಗೂ ಮತ್ತಿತರ ಪ್ರಮುಖ ಉಲ್ಲೇಖಗಳು ಕೆಳದಿ ಅರಸರ ಬಗ್ಗೆ ಹೆಚ್ಚಿನ ಬೆಳಕನ್ನು ಚೆಲ್ಲುತ್ತವೆ. ಸುಮಾರು ೨೫೦ ವರ್ಷಗಳ ಕಾಲ ಕೆಳದಿ ಅರಸರ ರಾಜಧಾನಿಯಾಗಿ ಮೆರೆಉ ಕರ್ನಾಟಕ ಸಂಸ್ಕೃತಿ ಚರಿತ್ರೆಯಲ್ಲಿ ತನ್ನದೇ ಆಯಾದ ವಿಶಿಷ್ಟ ಛಾಪನ್ನು ಮೂಡಿಸಿರುವ ಮಲೆನಾಡಿನ ಕೆಳದಿ ಎಂಬ ಪುಟ್ಟ ಗ್ರಾಮ ಒಂದು ಸಂಸ್ಥಾನದ ರಾಜಧಾನಿಯಾಗಿ ಮೆರೆದು ಈ ನಾಡಿಗೆ ಅಮೂಲ್ಯ ಸಂಸ್ಕೃತಿಯನ್ನು ಕಾಣಿಕೆ ನೀಡಿದೆ. ಇಲಿ ಆಳ್ವಿಕೆ ನಡೆಸಿದ್ದ ೨೦ ಮಂದಿ ರಾಜರು ಕೆಲವು ರಾಣಿಯರು ಕ್ರಿ.ಶ. ೧೫೦೦ ರಿಂದ ೧೭೬೩ ರವರೆಗೆ ಆಳ್ವಿಕೆ ನಡೆಸಿದರು. ಈ ಅವಧಿಯಲ್ಲಿ ಕೆಳದಿ ಇತಿಹಾಸದ ಬಗ್ಗೆ ಹಲವು ಕೃತಿಗಳ ರಚಿಸಲ್ಪಟ್ಟವು ಇವುಗಳಿಂದ ಅಂದಿನ ಸಂಸ್ಕೃತಿಯನ್ನು ಗಮನಿಸಬಹುದಾಗಿದೆ.

**ಲಿಂಗಣ್ಣ ಕವಿ ವಿರಚಿತ: ಕೆಳದಿ ನೃಪವಿಜಯ**

ಈ ಕೃತಿಯು ಕೆಳದಿಯ ಇತಿಹಾಸ ತಿಳಿಯಲು ಹೆಚ್ಚಿನ ಸಹಕಾರಿಯಾಗಿದೆ. ಈ ಗ್ರಂಥದಿಂದ ಕೆಳದಿಯ ರಾಜರ ವಮಶ, ರಾಜ್ಯಸ್ಥಾಪನೆಯ ವರ್ಷ, ರಾಜ್ಯವನ್ನು ಸ್ಥಾಪಿಸಿದ ರೀತಿಯು ಸಂಕ್ಷಿಪ್ತವಾಗಿ ತಿಳಿಯುತ್ತದೆ. ಬಸಪ್ಪ ಮತ್ತು ಬಸವಾಂಬೆಯರ ಪುತ್ರರು ಚೌಡಪ್ಪ ಮತ್ತು ಭದ್ರಪ್ಪರೆಂದು ಈ ಗ್ರಂಥವು ತಿಳಿಸುತ್ತದೆ. ರಾಜರ ವ್ಯಕ್ತಿತ್ವದ ಬಗ್ಗೆ ವರ್ಣಿಸುತ್ತಾ ಈ ಸ್ಥಿತಿಯು ಕೆಳದಿಯ ವೀರರಾಣಿ ಚೆನ್ನಮ್ಮಾಜಿಯು ಶಿವಾಜಿಯ ಮಗ ರಾಜರಮನಿಗೆ ಆಶ್ರಯ ನೀಡಿ ಔರಂಗಜೇಬನ ದೈನಿಕರೊಂದಿಗೆ ಹೋರಾಡಿ ಜಯ ಸಂಪಾದಿಸಿದನ್ನು ಸಂಕ್ಷಿಪ್ತವಾಗಿ ತಿಳಿಸಿ ಅಂದಿನ ರಾಜಕೀಯ ಬೆಳವಣಿಗೆಯ ಸಂಸ್ಕೃತಿಗೆ ಕನ್ನಡಿ ಹಿಡಿದಂತೆ ರಚನೆಯಾಗಿದೆ. ಹಿರಿಯ ಬಸವಪ್ಪನಾಯಕನು ಕೇರಳದ

ಮಲೆಯಾಳಿಗಳನ್ನು, ಮೈಸೂರು ಅರಸರನ್ನು ಸೋಲಿಸಿದನು. ಪ್ರಸಿದ್ಧ ಮೇಣುಪುರಿ ನದಿಗೆ ಸೇತುವೆ ಕಟ್ಟಿಸಿದನು. ಶೃಂಗೇರಿ ಮಠಕ್ಕೆ ದಾನ ನೀಡಿ ಧಾರ್ಮಿಕ ಸಂಸ್ಕೃತಿಯ ಪ್ರಗತಿಗೆ ಪ್ರೋತ್ಸಾಹಿಸಿದ್ದನ್ನು ಈ ಗ್ರಂಥ ತಿಳಿಸುತ್ತದೆ. ಈ ಗ್ರಂಥವು ಪ್ರಸಿದ್ಧ ದೊರೆ ದೊಡ್ಡ ಸಂಕಣ್ಣನಾಯಕನ ವ್ಯಕ್ತಿತ್ವವನ್ನು ವರ್ಣಸುತ್ತಾ ಈ ರೀತಿ ಹೇಳಿದೆ "ಬಗೆಬಗೆಯ ದಾನ ಧರ್ಮಾದಿಗಳು ಶಾಸ್ತ್ರೋಕ್ತ ಮಾರ್ಗದಿಂ ವಿರಚಿತ ಮೂಜಿಗ ಮೈದೆ ಪೊಗಳೆ ತನ್ನ ನೃಪನಗಣಿತ ಸಧರ್ಮದಿಂದ ಮಳೆಯಂ ಪೊರದಂ" ಹಾಗೆಯೇ ಶಿಸ್ತಿನ ಸಿಪಾಯಿ ಎಂದೇ ಹೆಸರುವಾಸಿಯಾಗಿರುವ ಶಿವಪ್ಪನಾಯಕನ ಬಗ್ಗೆ ಈ ಗ್ರಥವು ವಣಿಸಿರುವುದೇನೆಂದರೆ "ಹಲವು ವ್ಯಕ್ತಿಗಳಿಂದೇರಿವು ಕಾಲ ಭೈರವ ಶಿವ ನೃಪಾಲ ಗೆಣೆಯಹ ನೃಪರೀ ಕಲಿಯುಗದೊಳಿಲ್ಲಮವನಿಪಕುಲಕಂತಾ ತಿಲಕನೆನಿಸಿ ರಾರಾಜಿಸಿದಂ" ಎಂದೂ ವೈಭವ ಪೂರ್ವವಾಗಿ ತಿಳಿಸಿದೆ. ಹಾಗೆಯೇ ಕಿರಿಯ ಬಸಪ್ಪನಾಯಕನು ಚಿತ್ರದುರ್ಗದ ಮದಕರಿ ನಾಯಕನ ನಾಶಕ್ಕೆ ಕಾರಣವಾದ ಕಟು ಸತ್ಯಸಂಗತಿಯನ್ನು ಎಳೆ ಎಳೆಯಾಗಿ ಹೊರಚೆಲ್ಲುತ್ತದೆ. ಒಟ್ಟಿನಲ್ಲಿ ಈ ಕೃತಿಯಲ್ಲಿರುವ ಕಾವ್ಯಾಂಶದಲ್ಲಿ ಚಾರಿತ್ರಿಕ ಅಂಶ ಹಾಗೂ ಸಂಸ್ಕೃತಿಯ ವಿಷಯಗಳೇ ಮನೆಮಾಡಿಕೊಂಡಿವೆ.

**ಶಿವತತ್ವ ರತ್ನಾಕರ**

ಈ ಅಮೂಲ್ಯ ಸಂಶೋಧನಾ ಗ್ರಂಥವು ಕೆಳದಿಯ ೧೫ನೇ ಅರಸನಾದ ಬಸಪ್ಪ ನಾಯಕನಿಂದ ರಚಿಸಲ್ಪಟ್ಟಿದೆ. ಇದು ಸಂಸ್ಕೃತ ಭಾಷೆಯಲ್ಲಿದ್ದು ಅಂದಿನ ಕಾಲದ ನೈಜ ಇತಿಹಾಸಕ್ಕೆ ಕನ್ನಡಿಯಂತಿವೆ. ಇದು ಬಸಪ್ಪನಿಗೆ ೪ ಜನ ಮಕ್ಕಳಿದ್ದರೆಂದು ಹಾಗೂ ಪ್ರಾರಂಭದಲ್ಲಿ ಚೌಡಪ್ಪನಿಗೆ ರಾಜ್ಯಕಟ್ಟಲು ನಿಧಿ ದೊರೆತ ಸ್ಥಳದ ಬಗ್ಗೆ ಮಾಹಿತಿ ನೀಡುತ್ತದೆ. ಬಸವಪ್ಪ ನಾಯಕನ ಮಕ್ಕಳಾದ ಸದಾಶಿವ ಭದ್ರಪ್ಪರು ೧೪೩೬ನೆಯ ಶ್ರೀಮುಖ ಸಂವತ್ಸರ ಶ್ರಾವಣ ಶುದ್ಧ ಮೂರರಲ್ಲಿ ಇಕ್ಕೇರಿ ಅರಮನೆಯಲ್ಲಿ ಪಟ್ಟಕಟ್ಟಿಸಿಕೊಳ್ಳುತ್ತಾರೆಂದು, ಸದಾಶಿವನಾಯಕನು ಯಡವ ಮುರಾರಿ ಎಂಬ ಜಾಲ ಹಳ್ಳಿಯ ಪಾಳೆಗಾರರನ್ನು ಸೋಲಿಸಿದ್ದನು. ಇದರಿಂದ ಈತನಿಗೆ "ಯಡವ ಮುರಾರಿ ಕೋಟೆ ಕೋಲಾಹಲು" ಎಂಬ ಬಿರುದು ಬಂತೆಂದು ಈ ಕೃತಿಯು ತಿಳಿಸುತ್ತದೆ. ಈತ ವಿಜಯನಗರದ ಅರಸರಿಗೆ ಉಪದ್ರವಕಾರಿಯಾದ ಸಾವಳ ತಿಮ್ಮನಾಯಕ, ಕೇರಳ ಮತ್ತು ತುಳುವರನ್ನು ಸೋಲಿಸಿದ್ದು ಈ ಗ್ರಂಥ ಸಂಕ್ಷಿಪ್ತವಾಗಿ ವರ್ಣಿಸಿದೆ. "ಮೆರೆಯ ಕಾಸರಗೋಡೋಳ್ ತೊಲಗದ ಕಾಂಬವನ ನೃಪತಿ ತಿಲಕಂ, ಮೆರೆದನತಿ ಸಹಾಸಮಂ" ಎಂದು ಹೇಳುವುದು ಕಂಡುಬರುತ್ತದೆ. ಕೆಳದಿ ಮತ್ತು ಚಂದ್ರಗಿರಿಯಲ್ಲಿ (ಚೆನ್ನಗಿರಿ) ಕೋಟೆ ಕಟ್ಟಿಸಿದ್ದನ್ನೂ, ಈಗಿನ ಸಾಗರ ತಾಲೂಕನ್ನು ನಿರ್ಮಿಸಿದ್ದನ್ನು ತನ್ನ ತಮ್ಮ ಭದ್ರಪ್ಪನನ್ನು ಸಿಂಹಾಸನದಲ್ಲಿ ಕೂರಿಸಿ ತಾನು ನಿವೃತ್ತಿಯಾದುದನ್ನು ಈ ಗ್ರಂಥವು ವಿವರವಾಗಿ ತಿಳಿಸುತ್ತದೆ.

ದೊಡ್ಡ ಸಂಕಣ್ಣನಾಯಕನ ಯಾವುದೇ ಶಾಸನಗಳೂ ಲಭ್ಯವಾಗಿಲ್ಲದ ಕಾರಣ ಆತನ ಸಂಪೂರ್ಣ ಇತಿಹಾಸ ತಿಳಿಯಲು ಈ ಕೃತಿಯು ಮುಖ್ಯ ಆಧಾರವಾಗಿದೆ. ಹಿರಿಯ ವೆಂಕಪ್ಪನಾಯಕನು ಈಗಿನ ಕೌಲೆದುರ್ಗವನ್ನು ಬಲಪಡಿಸಿ ಅದಕ್ಕೆ ಭೂವನಗಿರಿ ದುರ್ಗ ಎಂದು ಕರೆದಿರುವುದು ಕಂಡುಬರುತ್ತದೆ. ವೆಂಕಟಪ್ಪನಾಯಕನು ೧೬೩೦ರಲ್ಲಿ ಲಿಂಗೈಕ್ಯನಾದನೆಂದು ಈ ಗ್ರಂಥವು ಸ್ಪಷ್ಟಪಡಿಸುತ್ತದೆ. ವೀರಭದ್ರನಾಯಕನು ರಾಜಧಾನಿಯನ್ನು ಇಕ್ಕೇರಿಯಿಂದ ಬಿದನೂರಿಗೆ ವರ್ಗಾಹಿಸಿದದ್ದು, ಹಿರಿಯ ಸೋಮಶೇಖರ ನಾಯಕನು ಚೆನ್ನಮ್ಮಾಜಿಯನ್ನು ಮದುವೆಯಾದದ್ದು ಹಾಗೂ ಶಿವಪ್ಪನಾಯಕ ವೆಂಕಟಪ್ಪನಾಯಕನಿಗೆ ರಾಜ್ಯ ವಹಿಸಿದ್ದು ಈ ಕೃತಿಯಿಂದಲೆ ತಿಳಿದುಬರುವುದು. ಈ ಕೃತಿಯು ಅಂದಿನ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ಪ್ರಮುಖವಾಗಿ ವಿಜ್ಞಾನದ ಬಗ್ಗೆ ಹೆಚ್ಚಿನ ಮಾಹಿತಿ ನೀಡುತ್ತದೆ

**ವೀರಶೈವ ಧರ್ಮ ಶಿರೋಮಣಿ**

ಕಿರಿಯ ಬಸವಪ್ಪನಾಯಕನ ಆಸ್ಥಾನದಲ್ಲಿದ್ದ ಷಡಕ್ಷರ ಎಂಬ ಮಂತ್ರಿಯು ಈ ಗ್ರಂಥವನ್ನು ರಚಿಸಿದನೆಂದು ತಿಳಿದುಬರುತ್ತದೆ. ಇದೊಂದು ಮೂಲತಃ ಧರ್ಮ ಗ್ರಂಥವಾದರೂ ಐತಿಹಾಸಿಕ ಸಂಗತಿಯಳಿಗೇನೋ ಕೊರತೆಯಾಗಿಲ್ಲ. ಈ ಕೃತಿಯು ಪ್ರಸಿದ್ಧ ಅರಸ ಸದಾಶಿವನಾಯಕನಿಗೆ ಇದ್ದ ಹಳೆಯ ಬಿರುದುಗಳಲ್ಲಿದೆ 'ಏಕಾಂಗ ವೀರ' 'ಬಲವಂತ' 'ಅರಿದಲೆ ಮೇಘಡಂಬರ' 'ದಿವಾಪ್ರದೀಪ' ಪಡುವಣ ಸಮುದ್ರಾದೀಶ್ವರ' ಇತ್ಯಾದಿ ಬಿರುದುಗಳಿದ್ದವೆಂದೂ ವಿವರವಾಗಿ ತಿಳಿಸುತ್ತದೆ. ಮತ್ತೊಬ್ಬ ಅರಸ ವೀರಭದ್ರನಾಯಕನು ಕೊಡುಗೈ

ದಾನಿಯಾಗಿದ್ದನೆಂದು, ಈತನ ದಾನ ವೈಭವ ಕೇಳಿ ಮಂದಾರ ಪಾರಿಜಾತ ಸಂತಾನ ಕಲ್ಪವೃಕ್ಷ, ಹರಿಚಂದನವೆಂಬ ಪಂಚವೃಕ್ಷವೇ ನಾಚಿದವಂತೆ, ಕಾಮಧೇನು ಹುಲ್ಲು ಮೇಯಿತಂತೆ ಮುಂತಾದ ಐತಿಹಾಸಿಕ ಸಂಗತಿಯನ್ನು ತಿಳಿಸುತ್ತದೆ. ಪ್ರಸಿದ್ಧ ರಾಣಿಯಾದ ಚೆನ್ನಮ್ಮಳ ವ್ಯಕ್ತಿತ್ವವನ್ನು ವರ್ಣಿಸುತ್ತಾ ಈ ಗ್ರಂಥವು "ಸಮಸ್ತ ದಿಗ್ವಿನಿತೆಯಂ ಕುಟ ಪ್ರದೇಶಕ್ಕೆ ತನ್ನ ಕೀರ್ತಿ ಎಂಬ ವಿಮಲ ವಸ್ತ್ರವನ್ನು ಹೊದಿಸಿ ಸುಜನ ರಂಜನಾ ಕಾರ್ಯವನ್ನು ಎಸಗುತ್ತಾ ಸರ್ವಶ್ಲಾಘ್ಯವಾದ ಸಮಸ್ತ ಮಂಗಳ ಗುಣಶ್ರೀ ಯಾಗಿ ಜಗತ್ತನ್ನು ಆಳಿದ್ದಾಳೆ" ಎಂದು ವಿವರವಾಗಿ ತಿಳಿಸುತ್ತದೆ. ಹಿರಯ ಬಸವಪ್ಪನಾಯಕನ ವ್ಯಕ್ತಿತ್ವದ ಬಗ್ಗೆ ಹೇಳುತ್ತಾ "ಆಕಾಶದ ನಕ್ಷತ್ರ ಎಣಿಸುವ ಪ್ರೌಢಿಮೆಯು, ಸಮುದ್ರತೀರದ ಮರಳನ್ನು ಎಣಿಸುವ ಹಾಗೆಯೇ, ಕುದುರೆಯ ಮೈಗೂದಲನ್ನು ಎಣಿಸುವ ಕೌಶಲ್ಯವು ಲೋಕದಲ್ಲಿ ಯಾರಿಗಾದರೂ ಇದ್ದರೆ ಅಂತವನು ಮಾತ್ರ ಈ ಬಸಪ್ಪನಾಯಕನ ಗುಣವನ್ನು ಎಣಿಸಬಲ್ಲವೆಂದು" ವರ್ಣಿಸಲಾಗಿದೆ, ಹಿರಿಯ ವೆಂಕಟಪ್ಪ ನಾಯಕನ ಆಸ್ಥಾನದಲ್ಲಿದ್ದ ತಿರುಮಲ್ಲಭಟ್ಟನೆಂಬ ಕವಿರಚಿತ "ಕರ್ನಾಟಕ ಶಿವಗೀತೆ" ಎಂಬ ಗ್ರಂಥದಿಂದ ಕೆಳದಿ ನಗರದ ವೈಭವನ್ನು ಗುರುತಿಸಬಹುದು. ಇಲ್ಲಿ ಕೆಳದಿ ನಗರದ ವರ್ಣನೆಯನ್ನು "ಕರ್ಣ ಸಮಾಧಾನ ಶೂರ ಸಕಲ ಮುನಿಜನ ಕರ್ಣನೀಯ ಚರಿತ್ರೆ ಕೆಳದಿಯ ನೃಪರ್ಗೆ ಗೋಕರ್ಣದಿಂದಾರು ಯೋಜನದೊಳಿಹುದಾಜ್ಞೆಯ ದಿಗಾಭಗದಲ್ಲಿ ಮೆರೆವ ಕರ್ನಾಟಕದ ನೀಕಾಮಿನಿಯ ವದನರೆದು ಕರ್ಣ ಪಾಟಂಕವೆನೋ ಶೋಭಿಸುತ್ತೀಗಳಿದ ಕರ್ಣವಾಮೃತ ಮಹಿಯೊಳಗೆ ಇಲ್ಲವೆನಿಸಿಕೊಂಡಿಕ್ಕೇರಿ ಎಂಬ ನಗರ" ಎಂದು ನಗರದ ವರ್ಣನೆಯು ವೈಭವಪೂರಿತವಾಗಿ ಕಂಡುಬರುತ್ತದೆ.

ಮೇಲಿನ ಗ್ರಂಥಗಳಲ್ಲದೆ ಹಿರಿಯ ಬಸವಪ್ಪನಾಯಕನ ಸೂಕ್ತಿ ಸುಧಾಕರ, ಗಂಗಾದೇವಿಯ ಕೆಳದಿ ರಾಜಾಭ್ಯುದಯಂ, ಕಿರಿಯ ಬಸಪ್ಪನಾಯಕನ ಆಸ್ಥಾನದ ವೆಂಕ ಕವಿಯ ನರಹರಿ ವಿಜಯ, ಹಿರಿಯ ವೆಂಕಟಪ್ಪನಾಯಕನ ಆಸ್ಥಾನದ ರಂಗನಾಥ ದೀಕ್ಷಿತರ ತಂತ್ರ ಸರವ್ಯಾಕ್ಯ, ಅಶ್ವಪಂಡಿತನ ಮಾದಪ್ರಿಯಾ, ಕಿರಿಯ ಬಸಪ್ಪ ನಾಯಕನ ಆಸ್ಥಾನದಲ್ಲಿದ್ದ ಮರಿತೋಂಟದಾರ್ಯನ ವೀರಶೈವನಂದಾ ಚಂದ್ರಿಕ ಮುಂತಾದ ಹಲವು ಅಮೋಘ ಸಾಹಿತ್ಯಾಧಾರಗಳು ಕೆಳದಿ ಸಂಸ್ಥಾನದ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸಲು ಸಹಕಾರಿಯಾಗಿದೆ.

**ವಿದೇಶಿ ಸಾಹಿತ್ಯ**

ಕೆಳದಿ ಅರಸರ ಕಾಲದ ಸಂಸ್ಕೃತಿಯು ಕೇವಲ ದೇಶೀಯ ಬರವಣಿಗೆಯಿಂದಲೇ ರೂಪಿತವಾಗದೆ, ಇದಕ್ಕೆ ಪೂರಕವಾಗಿ ವಿದೇಶಿಯರ ಪ್ರವಾಸಿಕಥನಗಳಿಂದಲೂ ಹೆಚ್ಚು ಸಹಕಾರಿಯಾಗಿದೆ. ವಿದೇಶಿಯಾತ್ರಿಕರು ಪ್ರಮುಖವಾಗಿ ಕೆಳದಿಯ ಪ್ರಕೃತಿ ಸೌಂದರ್ಯವನ್ನು ವರ್ಣಿಸುತ್ತಾ, ಅಲ್ಲಿನ ವೈಭವವನ್ನು ಕೊಂಡಾಡಿದ್ದಾರೆ. ಇಟಲಿಯ ಪ್ರೆಟ್ರೋಡೆಲ್ಲಾ ವೆಲ್ಲಾನು, ಪಶ್ಚಿಮ ಘಟ್ಟಗಳ ಬಗ್ಗೆ ಇರುವ ಸೌಂದರ್ಯವು ಇಟಲಿಯ ಅಪನೈನ್ ಪರ್ವತವನ್ನು ಹೋಲುತ್ತಿತ್ತೆಂದು ಹೇಳಿದ್ದಾನೆ. ಫ್ರಾನ್ಸಿಸ್ ರಾಬ್ಬನ್‌ನು ಉತ್ತಂಗ ಪರ್ವತ ಶ್ರೇಣಿ ಮತ್ತು ದಟ್ಟವಾದ ಕಾಡುಗಳಿಂದ ಕೂಡಿದ ಮಲೆನಾಡು ದುರ್ಗಮವಾದ ಮತ್ತು ಅತ್ಯಂತ ಫಲವತ್ತಾದ ಪ್ರಾಂತ್ಯ ಎಂದು ವರ್ಣಿಸಿದ್ದಾನೆ. ಈ ವರ್ಣನೆಗಳಲ್ಲಿಯೇ ಅಲ್ಲಿನ ಸಾಂಸ್ಕೃತಿಕ ಬದುಕನ್ನು ಊಹಿಸಬಹುದಾಗಿದೆ.

ಕೆಳದಿಯ ಅರಸರ ಅತಿಥ್ಯದ ಬಗ್ಗೆ ಇಟಲಿಯ ಪೆಟ್ರೋಡೆಲ್ಲಾ ವೆಲ್ಲಾನು ನನ್ನನ್ನು ನಮ್ಮ ಸಾಮಾನು ಹೊತ್ತುಕೊಂಡು ಒಯ್ಯುವ ಪಲ್ಲಕ್ಕಿಗಾಗಿ ಕಾಯುತ್ತಿದ್ದೆವು ಎಂದಿದ್ದಾನೆ. ಅಲೆಗ್ಸಾಂಡರ್ ಹ್ಯಾಮಿಲ್ಟನು ತನ್ನ ಬರವಣಿಗೆಯಲ್ಲಿ ಬೇರೆ ಬೇರೆ ಕಡೆ ಗುಡಿಸಲುಗಳಿಗೆ ಅಲ್ಲಿ ಹಗಲು ಹೊತ್ತಿನಲ್ಲಿ ವೃದ್ಧರು ಇರುತ್ತಾರೆ. ಆ ಗುಡಿಸಲುಗಳಲ್ಲಿ ಸರ್ಕಾರದ ವೆಚ್ಚದಿಂದ ಪ್ರಯಾಣಿಕರಿಗೆ ಸ್ವಚ್ಛವಾದ ತಣ್ಣೀರು ದೊರೆಯುವ ವ್ಯವಸ್ಥೆ ಇದೆ ಎಂದು ತಿಳಿಸಿದ್ದಾನೆ. ಜಾಕೋಬಸ್, ಕ್ಯಾಂಟರ್, ವಿಶಚರ್ ರವರುಗಳು ಬಿದನೂರಿನಲ್ಲಿ ಯಾವ ಅಪರಿಚಿತ ವ್ಯಕ್ತಿಗೂ ದರೋಟೆ ಹಿಂಸೆಗಳ ಭಯವಿರಲಿಲ್ಲವೆಂದು ವರ್ಣಿಸಿಕೊಂಡಿದ್ದಾರೆ. ಇಕ್ಕೇರಿ ಪಟ್ಟಣದ ಬಗ್ಗೆ ವರ್ಣಿಸುತ್ತಾ ಪೀಟರಮಂಡಿಯು ಇಕ್ಕೇರಿಯು ವಿಶಾಲವಾದ ಬೀದಿಗಳು ಮತ್ತು ಮಾರುಕಟ್ಟೆಯಿಂದ ಕೂಡಿದ ದೊಡ್ಡ ಪಟ್ಟಣವೆಂದಿದ್ದಾನೆ. ಪೆಟ್ರೋಡೆಲ್ಲಾವೆಲ್ಲಾನು ಹೊನ್ನಾವರ ಒಂದು ಉತ್ತಮ ಬಂದರು ಎಂದು, ಅಲ್ಲಿ ನಡೆಯುತ್ತಿದ್ದ ವ್ಯಾಪಾರ ವಹಿವಾಟು, ಅಮದು, ರಫ್ತುಗಳ ವರ್ಣನೆಯನ್ನು ತಿಳಿಸಿರುತ್ತಾನೆ. ಜಾನ್ ಪ್ರೇಯರ್ ಹಿನ್ನಾವರದ ಕೋಟೆ ಸುಭದ್ರವಾದ ಕೋಟೆ ಎಂದಿದ್ದಾನೆ. ಹ್ಯಾಮಿಲ್ಟನ್ ಮಂಗಳೂರು ಕೆನರಾದಲ್ಲಿಯೇ ಅತ್ಯಂತ ದೊಡ್ಡ ಮಾರುಕಟ್ಟೆ ಎಂದಿದ್ದಾನೆ. ಕೆಳದಿಯ ಅರಸರ ಸೈನಿಕ ನೆಲೆಯು ಮಂಗಳೂರಾಗಿತ್ತೆಂದು ಪಿಂಕರ್ಟನ್ ತಿಳಿಸಿದ್ದಾನೆ.

ಮೇಲೆ ಚರ್ಚಿಸಿರುವ ಕೃತಿಗಳಲ್ಲಿ ಕೆಳದಿ ಅರಸರ ಕಾಲದ ರಾಜಕೀಯ ಚರಿತ್ರೆಯಲ್ಲದೆ ಸಂಗೀತ, ನಾಟ್ಯ, ನೃತ್ಯ, ಧರ್ಮ, ಯೋಗ, ತತ್ವಜ್ಞಾನ, ಯುದ್ಧಗಳು, ಸಾಮಾಜಿಕ ಜನರ ಸ್ಥಿತಿಗತಿಯ ಬಗ್ಗೆಯೂ ಸಹ ಹೆಚ್ಚಿನ ಪ್ರಮಾಣದಲ್ಲಿಯೇ ಚರ್ಚಿಸಿರುವುದು ಕಂಡುಬರುತ್ತದೆ. ಕೆಳದಿ ಇತಿಹಾಸ, ಆಡಳಿತ, ಸಾಹಿತ್ಯಕ್ಕೆ ಸಂಬಂದಿಸಿ ಉಗಾಗಲೇ ಇಂದಿನ ಕೆಲವು ವಿದ್ವಾಂಸರು ಅಧ್ಯಯನ ನಡೆಸಿರುವುದು ಕಂಡುಬರುತ್ತದೆ. ರಾಬರ್ಟ್ ಸಿವೆಲ್ ಮೊದಲ ಬಾರಿಗೆ ಕೆಳದಿ ರಾಜವಂಶಾವಳಿಯನ್ನು ತಮ್ಮ 'ಸ್ಕೆಚ್ ಅಫ್ ದಿ ಡೈನಾಸ್ಟೀಸ್ ಅಫ್ ಸದರ್ನ್ ಇಂಡಿಯಾ'ದಲ್ಲಿ ಪ್ರಕಟಿಸಿದರು. ಸಿವೆಲ್ಲರು ಸಿದ್ದಪಡಿಸಿದ ಕಾಲಾನುಕ್ರಮಣಿಕೆಯಲ್ಲಿ ಇದ್ದ ಕೆಲವು ತಪ್ಪುಗಳನ್ನು ಎಲ್.ಡಿ. ಬಾರ್ನಟ್ ರವರು ತಿದ್ದುಪಡಿ ಮಾಡಿದ್ದಾರೆ. ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ. ಕೆ.ಜಿ. ವೆಂಕಟೇಶ್ ಜೋಯಿಸ್, ಪು೭ ಶಾಮಾಶಾಸ್ತ್ರಗಳ ೧೯೨೧ - ೨೨ರಲ್ಲಿ "ಕ್ವಾರ್ಟರ್ಲಿ ಜರ್ನಲ್ ಅಫ್ ದಿ ಮಿಥಿಕ್ ಸೊಸೈಟಿ"ಯಲ್ಲಿ ಮಲೆನಾಡ ನಾಯಕರ ಕುರಿತು ಹೆಚ್ಚು ವಿವರವಾಗಿ ಬರೆದಿರುವವರು. ಎಸ್.ಎನ್. ನರಸಿಂಹಯ್ಯನವರು ೧೯೩೦ - ೩೧ರಲ್ಲಿ ಕೆಳದಿ ರಾಜವಂಶಾವಳಿ ಕುರಿತು ಉತ್ತಮ ಲೇಖನ ಬರೆದಿದ್ದಾರೆ, ಈ ಎಲ್ಲ ದಾಖಲೆಗಳನ್ನು ಆಧರಿಸಿಕೊಂಡು ೧೯೩೦ರಲ್ಲಿ ಎಂ.ಎಸ್. ಪುಟ್ಟಣ್ಣನವರು "ಇಕ್ಕೇರಿ ಸಂಸ್ಥಾನದ ಚರಿತ್ರೆ" ಎಂಬ ಮಹತ್ವದ ಪುಸ್ತಕವನ್ನು ಬರೆದಿದ್ದಾರೆ. ಹಾಗೆಯೇ ಕೆಳದಿ ನಾಯಕರ ಕಾಲ, ಅವರ ದಂಡಯಾತ್ರೆ ಮೊದಲಾದವುಗಳ ಬಗೆಗೆ ಖಚಿತವಾಗಿ ಮಾಹಿತಿಯನ್ನು ಶಾಸನದಲ್ಲಿ ಪಡೆದುಕೊಂಡು ಎನ್. ಲಕ್ಷ್ಮಿನಾರಾಯಣರಾವ್ ಕೃತಿ ರಚನೆ ಮಾಡಿದ್ದಾರೆ. ಆನಂತರದಲ್ಲಿ ಈ ಸಂಸ್ಥಾನದ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡಿ ಕೆಳದಿ ಅರಸರ ಪರಿಪರಿಯನ್ನು ಎಳೆಎಳೆಯಾಗಿ ವಿವರಿಸಿರುವ ಕೆಳದಿ ಗುಂಡಾಜೋಯ್ಸರ ಅನೇಕ ಪುಸ್ತಕ ಲೇಖನಗಳು ಪ್ರಕಟವಾದವು ಪ್ರೊ. ಜಿ.ಎಸ್. ದೀಕ್ಷಿತ್ ರ "ಕೆಳದಿ ನಾಯಕರು" ಮತ್ತು ಅವರ ಸಂಪಾದಕತ್ವದಲ್ಲಿ ಹೊರಬಂದ "ಸ್ಟಡೀಸ್ ಇನ್ ಕೆಳದಿ ಹಿಸ್ಟರಿ" ಎಂಬ ಗ್ರಂಥಗಳನ್ನು ಅಧ್ಯಯನ ಮಾಡಬಹುದಾಗಿದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಬಗ್ಗೆ ತಿಳಿಯಲು ಪ್ರೊ. ಅ. ಸುಂದರರವರ "ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ" ಪುಸ್ತಕ ಉಪಯುಕ್ತವಾಗಿದೆ. ಇವುಗಳೆಲ್ಲದರ ಆಧಾರದಿಂದ ಕೆಳದಿ ಅರಸರ ಕಾಲದ ಸಾಂಸ್ಕೃತಿಕ ಚರಿತ್ರೆ ಶ್ರೀಮಂತವಾಗಿದೆ.

**ಕೆಳದಿ ಅರಸರ ಕಾಲದ ಒಟ್ಟು ಸಾಹಿತ್ಯ ಕೃತಿಗಳು**

| **ಕನ್ನಡ ಕೃತಿಗಳು** | **ಕೃತಿಕಾರ** | **ಕೃತಿ** |
|---|---|---|
| ೧. ಹಿರಿಯ ವೆಂಕಟಪ್ಪ ನಾಯಕ ಕ್ರಿ.ಶ. ೧೫೯೨ - ೧೬೨೯ | ತಿರುಮಲ ಭಟ್ಟ | ಕರ್ನಾಟಕ ಶಿವಗೀತೆ |
| ೨. ವೀರಭದ್ರ ನಾಯಕ ಕ್ರಿ.ಶ. ೧೬೨೯ - ೧೬೪೮ | ರಾಮಚಂದ್ರ ಕವಿ | ಮಲ್ಲಿಕಾಜುನ ಶತಕ ಪಾರ್ವತಿ ಸೋಭಾನೆ ರಾಜ ವೀರಭದ್ರನ ಬಗ್ಗೆ ಕೆಲವು ಸ್ತುತಿ ಶ್ಲೋಕಗಳು |
| ೩. ಶಿವಪ್ಪ ನಾಯಕ ಕ್ರಿ.ಶ ೧೬೪೫ - ೧೬೬೦ | ಚರಮೂರ್ತಿ ಬಸವಲಿಂಗ ದೇವರು | ವೀರ ಮಹೇಶ್ವರ ಸುಧಾವರ್ಧಿ ಬಗ್ಗೆ ಕನ್ನಡದಲ್ಲಿ ವ್ಯಾಖ್ಯಾನ |
| ೪. ಹಿರಿಯ ವೆಂಕಟಪ್ಪ ನಾಯಕ ಕ್ರಿ.ಶ. ೧೬೬೦ - ೧೬೬೧ | ಚೆನ್ನವೀರ ಮಹೇಶ್ವರ | ಕಸಕೃತಸ್ನ ಧಾತುಕಳಿ ಕಥೆ ಪುರುಷಸೂಕ್ತ ವ್ಯಾಖ್ಯಾ(ವೀರಶೈವ ಭಾಷ್ಯೆ) ಸಾರಸ್ವತ ವ್ಯಾಕರಣ ಗಮಕ ಸಮಕ |
| ೫. ಹಿರಿಯ ಬಸಪ್ಪ ನಾಯಕ ಕ್ರಿ.ಶ. ೧೬೬೭ - ೧೭೧೪ | ಹಿರಿಯ ಬಸಪ್ಪ ನಾಯಕ ಸರ್ಜಾನಾಗಪ್ಪಯ್ಯ ಅಪ್ಪಯ್ಯ (ಲಕ್ಷ್ಮಣ) ಗಂಗಾದೇವಿ | ಸೂಕ್ತಿ ಸುಧಾಕರ ಶುಖಸಪ್ತತಿ ಶ್ಲೋಕಗಳು ಕೆಳದಿ ರಾಜ್ಯಾಭ್ಯುದಯಂ |
| ೬. ಹಿರಿಯ ಸೋಮಶೇಖರ ನಾಯಕ ಕ್ರಿ.ಶ. ೧೭೧೪ - ೧೭೩೯ | ನಿರ್ಮಾಣ ಮಂತ್ರಿ ಸಂಗನ ಬಸಪ್ಪ | ಶಿವಪೂಜಾ ವಿಧಾನ ವೀರಶೈವ ಸುಧಾನಿಧೀ ಟೀಕು |
| ೭. ಕಿರಿಯ ಬಸಪ್ಪ ನಾಯಕ | ಲಿಂಗಣ್ಣ ಕವಿ | ಕೆಳದಿ ನೃಪವಿಜಯ ಶಿವಪೂಜಾ ದರ್ಪಣ |

| | | |
|---|---|---|
| | | ದಕ್ಷದ್ವಾರ ವಿಜಯ |
| | | ಪಾರ್ವತಿ ಪರಿಣಯ |
| | | ಶಿವಕಲ್ಯಾಣ |
| | ವೆಂಕಣ್ಣ ಕವಿ | ಗಣಸಹಸ್ರ ನಾಮ , |
| | | ಪಾರ್ವತಿ ವಲ್ಲಭ ಶತಕ ರುಕ್ಮಣಿ |
| | (ಲಿಂಗಣ್ಣನ ಮಗ) ಸುಬ್ಬ(ವೆಂಕಣ್ಣನ ಮಗ) | ಸ್ವಯಂವರ(ಯಕ್ಷಗಾನ) ಪಾರಜಾತ (ಯಕ್ಷಗಾನ) |

(ಕೃಪೆ : ಡಾ ಕೆ.ಜಿ. ವೆಂಕಟೇಶ್ ಜೋಯಿಸ್, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೬)

**ಸಂಸ್ಕೃತ ಕೃತಿಗಳು**

| **ರಾಜ** | **ಕವಿ** | **ಕೃತಿ** |
|---|---|---|
| ೧. ಹಿರಿಯ ವೆಂಕಟಪ್ಪ ನಾಯಕ ಕ್ರಿ.ಶ ೧೫೯೨ - ೧೬೨೯ | ಹಿರಿಯ ವೆಂಕಟಪ್ಪ ನಾಯಕ | ಶಿವಗೀತ ವ್ಯಾಖ್ಯಾ ವೀರಶೈವ ಸುಧಾವಾರಿಧೀ ಶಿವಾಷ್ಟಪದೀ |
| | ತಿರುಮಲ ಭಟ್ಟ | ಗೀತ ಗೌರೀವರ |
| | ಭಟ್ಟೋಜಿ ಧೀಕ್ಷಿತ, | ತತ್ವ ಕೌಸ್ತುಭಂ |
| | ಸಂಗಮೇಶ್ವರ ಯತಿ | ಸಂಗಮೇಶ್ವರ ವಿಲಾಸ ಭಾಷ್ಯಂ ಶಿವಸಹಸ್ರನಾಮ ವ್ಯಾಖ್ಯಾ |
| | ರಂಗನಾಥ ದೀಕ್ಷಿತ | ತಂತ್ರಸಾರ ವ್ಯಾಖ್ಯಾ |
| | ಅಶ್ವಪಂಡಿತ, | ಮಾನಪ್ರಿಯ |
| | ಮಾನಪ್ಪ ಪಂಡಿತ | ವೀರಶೈವಾಚಾರ ಕೌಸ್ತುಭಂ |
| ೨. ವೀರಭದ್ರ ನಾಯಕ ಕ್ರಿ.ಶ. ೧೬೨೯ - ೧೬೪೫ | ಕೌಂಡ ಭಟ್ಟ | ತರ್ಕ ಪ್ರದೀಪಂ ಶವೋಲ್ಲಾಸ (ಕಾಳಹಸ್ತೆ ಸ್ತೋತ್ರಂ) |
| ೩. ಹಿರಿಯ ವೆಂಕಟಪ್ಪ ನಾಯಕ ಕ್ರಿ.ಶ. ೧೬೬೦ - ೧೬೬೧ | ಹಿರಿಯ ವೆಂಕಟಪ್ಪ ನಾಯಕ | ಪಾದಪೂಜಾ |
| ೪. ಹಿರಿಯ ಬಸಪ್ಪ ನಾಯಕ ಕ್ರಿ.ಶ. ೧೭೧೪ - ೧೭೩೯ | ಹಿರಿಯ ಬಸಪ್ಪ ನಾಯಕ | ಶಿವತತ್ವ ರತ್ನಾಕರಂ ಸುಭಾಷಿತ ಸುರದ್ರುಮಂ |
| ೫. ಕಿರಿಯ ಸೋಮಶೇಖರ ನಾಯಕ ಕ್ರಿ.ಶ. ೧೭೧೪ - ೧೭೩೯ | ನಿರ್ವಾಣಮಂತ್ರಿ | ಕ್ರಿಯಾಸಾರ ವ್ಯಾಖ್ಯಾ ನಿಜಗುಣ ಶಿವಯೋಗಿಯ ವಿವೇಕ ಚಿಂತಾಮಣಿಯ ಕೆಲಭಾಗ ಸಂಸ್ಕೃತ ರೂಪಾಂತರ |
| ೬. ಕಿರಿಯ ಬಸಪ್ಪ ನಾಯಕ ಕ್ರಿ.ಶ. ೧೭೩೯ - ೧೭೫೫ | ಕಿರಿಯ ಬಸಪ್ಪ ನಾಯಕ | ಶೈವ ಸಂಜೀವಿನೀ (ಪಂಚಶ್ಲೋಕ ವ್ಯಾಖ್ಯಾ) |
| | ಮರಿ ತೊಂಟದಾರ್ಯ | ವೀರಶೈವಾನಂದವಾದ ಚಂದ್ರಿಕಾ |
| | | ವೀರಶೈವಾನಂದವಾದ ಖಾಂಡ |

| | |
|---|---|
| | ವೀರಶೈವಾನಂದ |
| | ಕ್ರಿಯಾ ಖಾಂಡ |
| | ಜ್ಞಾನ ಖಾಂಡ, |
| | ಕೈವಲ್ಯಸಾರ, |
| | ಷಡ್ ಸ್ಥಳ ಕೌಮುದಿ, |
| | ತರ್ಕ ಚಂದ್ರಿಕಾ |
| | ಸಿದ್ಧಾಂತ ಶಿಖಾಮಣಿ |
| | ವ್ಯಾಖ್ಯಾ. |
| ಷಡಕ್ಷರ ಮಂತ್ರಿ | ವೀರಶೈವ ಧರ್ಮ ಶಿರೋಮಣಿ |
| | ಮರಿತೋಂಟದಾರ್ಯರ |
| ಸಂಗನಬಸಪ್ಪ | ವೀರಶೈವಾನಂದ |
| | ಚಂದ್ರಿಕೆಯ ಬಗ್ಗೆ ವಿವರಣೆ |
| ಚೊಕ್ಕನಾಥ | ಸೇವಂತಿಕಾ ಪರಿಣಯ |

*(ಕೃಪೆ : ಡಾ. ಕೆ.ಜಿ. ವೆಂಕಟೇಶ್ ಜೋಯಿಸ್, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ.ಸಾ.ಪ. ಬೆಂಗಳೂರು ೧೯೯೬)*

**ಚೆನ್ನಮ್ಮಾಜಿಯ ಉಪದೇಶ**

ಕೆಳದಿಯ ವೀರ ರಾಣಿ ಚೆನ್ನಾಮ್ಮಾಜಿಯು ತನ್ನ ದತ್ತು ಪುತ್ರನಾದ ಹಿರಿಯ ಬಸಪ್ಪ ನಾಯಕನಿಗೆ ಮಾಡಿದ ಉಪದೇಶ ಬಹು ಮಾರ್ಮಿಕವಾಗಿದೆ. ಅದರ ಮೂಲಪಾಠ ಮತ್ತು ಅರ್ಥವನ್ನು ಜಿ.ಎಸ್. ದೀಕ್ಷಿತ್ ರವರು ತಮ್ಮ ಕೆಳದಿ ನಾಯಕರು ಎಂಬ ಮಹತ್ವದ ಪುಸ್ತಕದ ಪುಟ ಸಂಖ್ಯೆ ೫೩ - ೫೪ರಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಸಂಸ್ಕೃತಿ ಚರಿತ್ರೆಯನ್ನು ಹೇಳುತ್ತಿರುವ ಸಂದರ್ಭದಲ್ಲಿ ಈ ವಿಷಯವನ್ನು ಇಲ್ಲಿ ಹೇಳುವುದು ಅವಶ್ಯಕವೆನಿಸಿದ್ದರಿಂದ ಅವರ ಮೂಲ ಪಾಠ ಹಾಗೂ ಅರ್ಥವನ್ನು ಅಳವಡಿಸಿಕೊಳ್ಳಲಾಗಿದೆ. ಕೆಳದಿ ಕಾಲದ ಸಂಸ್ಕೃತಿಯ ತಿರುಳಿಗೆ ಇದೊಂದು ಮಾದರಿಯಾಗಿರುತ್ತದೆ ಎಂದು ಹೇಳಬಹುದು.

**ಮೂಲ ಪಾಠ**

*ಉಕ್ತಂ ತ್ವಂ ನಾನ್ಯಥಾ ಬ್ರೂಯಾಃ ಕ್ವಾಪಿ ಕಾರ್ಯಂ ನ ಸತ್ಯಜ*
*ಮಾ ಮಂಚ ಮಧುರಾಲಾಪಂ ನ ಬ್ರೂಯಾ ಹೃದಯಂ ಶಠೇ*
*ಅ ಮಾರ್ಗೇನ ಪದಂ ಕುರ್ಯಾಃ ಸ್ವೇಷ ಬೇದಂ ಸ ಕಾರಯ*
*ಪಾಪಂ ವಿಮಂ ಚ ಸುಕೃತಂ ಕುರು ಶಂಭೋಃ ಪದಂ ಭಜ*
*ಬಜ ಭೂತೇಷ ಕುರುಣಾಂ ಸಂಕ್ರಿತಾನ್ ಪರಿಪಾಲಯ*
*ನ ನಿಂದಾಂ ರಚ ಯೊನ್ಯೇಷಾಂನ ಸ್ವೈರಮಿಹ ಸಂಚರ*
*ಜಯಾ ಕಾಮಾದಿಕಾನ್ ದೋಷಾನ್ ಜಗುಪ್ಸಾಂ ಚ ಭದೆ ಕುರು*
*ವ್ಯಸನ ಭಯಮುನ್ನಂಚ ಚಹೀಂ ಹಿ ವಿಭವೆ ಮದಂ*
*ಸಂಪ್ರಧಾರಯ ತತ್ವಾದಿ ಭಾವಯೊದ್ವೈತ ಮಾಂತರಂ*
*ನಾತಿವರ್ತ ಸ್ವ ಸಮಯಂ ವೇದಜ್ಞಂಶ್ಚ ಸಮರ್ಚಯ*

*ಸ್ವಪ್ನಂ ಭಾವಯ ಸಂಸಾರಂ ಕೋಹಮಿತನುಚಿಂತಯ*
*ಹಸೇರ ಹಸನೀಯಸ್ತ್ವಂ ಬ್ರೂಹಿ ವಾಕ್ಯಾ ಮನುತ್ತಮಂ*
*ಜನಸ್ತುತಿ ಪದಂ ಜೀವೇರ ನಾವೃತ್ತಿಗತಿಂ ಭಿಜೆ*
*ಶಿವಂ ಪ್ರಸಾದ್ಯ ಬಹುಧಾ ಸಂತತಾನಂದ ಭಾಗ್ಭವ*

**ಅರ್ಥ :** ನುಡಿದದ್ದನ್ನು ಬದಲಿಸಿದಿರು, ಎಂದಿಗೂ ಎಲ್ಲಿಯೂ ಕರ್ತವು ಚ್ಯುತನಾಗದಿರು, ಸರ್ವದಾ ಮಧುರವಾಗಿ ಮಾತನಾಡುವಂತೆ ಎಚ್ಚರವಹಿಸು, ದುಷ್ಟರಿಗೆ ನಿನ್ನ ಹೃದ್ಗತವನ್ನು ತೋಡದಿರು, ದುರ್ಮಾರ್ಗ ಹಿಡಿಯದಿರು, ಸ್ವಜನರಲ್ಲಿ ಭೇದವೆಣಿಸದಿರು. ಪಾಪಕಾರ್ಯ ಮೊಡದಿರು, ಸತ್ಕಾರ್ಯಗಳನ್ನು ಮಾಡು. ಸದಾ ಶಂಭುವಿನ ಪಾದಗಳನ್ನು ಧ್ಯಾನಿಸು, ಸಕಲ ಜೀವಿಗಳಲ್ಲಿ ದಯೆ ತೋರು, ಆಶ್ರಯ ಬಯಸಿ ಬಂದವರಿಗೆ ರಕ್ಷಣೆ ನೀಡು, ಪರರನ್ನು ನಿಂದಿಸದಿರು, ಪ್ರಪಂಚದಲ್ಲಿ ಆತ್ಮ ಸಂಯಮವಿಲ್ಲದೆ ನಡೆಯದಿರು. ಕಾಮಾದಿ ದೋಷಗಳನ್ನು ಜಯಿಸು ಮತ್ತು ಹುಟ್ಟು ಸಾವುಗಳಿಂದ ಮುಕ್ತಿಪಡೆ. ವಿಪತ್ಕಾಲದಲಿ ಕೂಡ ಧೃತಿಗೆಡದಿರು. ಸಿರಿತನ ಬಂದಾಗ ಸೊಕ್ಕದಿರು. ತತ್ವವನ್ನು ಕುರಿತು ಚಿಂತಿಸು, ಅದ್ವೈತ ತತ್ವದ ತಿರುಳನ್ನು ತಿಳಿದುಕೊ, ಸುಸಂಧಿಯನ್ನು ಕಳೆದುಕೊಳ್ಳದಿರು, ವೇದಜ್ಞರನ್ನು ಸನ್ಮಾನಿಸು. ಜೀವನವನ್ನು ಕನಸೆಂದು ತಿಳಿ, ನಾನು ಯಾರು? ಎಂಬ ಪ್ರಶ್ನೆಯನ್ನು ವಿವೇಚಿಸು, ನೀನು ನಗೆಗೀಡಾಗದಂತೆ ನಗು. ಉತ್ತಮವಾಗಿ ಮಾತನಾಡು, ಜತಸ್ತುತಿ ಮಾಡುವ ಹಾಗೆ ನಡೆ, ಪುನರ್ಜನ್ಮ ತಾರದ ಮಾರ್ಗವನ್ನು ಅನುಸರಿಸು, ಶಿವನನ್ನು ವಿವಿಧ ರೀತಿಯಲ್ಲಿ ಪೂಜಿಸು ಮತ್ತು ಅನಂತ ಆನಂದವನ್ನು ಅನುಭವಿಸು ಎಂದು ಬಹು ಅರ್ಥಪೂರ್ಣವಾದ ನುಡಿಮುತ್ತುಗಳನ್ನು ಹೇಳಿ ಸತ್ಯ ಧರ್ಮ ಹಾಗೂ ಅಹಿಂಸೆಯ ಮೂಲ ಸ್ವರೂಪವನ್ನು ಮೈಗೂಡಿಸಿಕೊಂಡು ಆಳ್ವಿಕೆ ನಡೆಸಿದ ಚೆನ್ನಮ್ಮಾಜಿಯು ಇಂದಿನ ಮಹಿಳೆಯರಿಗೂ ಮಾದರಿಯಾಗಿ ಕಂಡುಬರುತ್ತಾಳೆಂದರೆ ಅತಿಶಯೋಕ್ತಿಯೇನಲ್ಲ. ಮೇಲಿನ ಆಧಾರಗಳಿಂದಲೇ ನಾವು ಅಂದಿನ ಸಂಸ್ಕೃತಿಯನ್ನು ಹಾಗೂ ಅವರ ಅಳವಡಿಕೆ ಇಕ್ಕೇರಿ ಅರಸರು ನೀಡಿದ ಮಹತ್ವವನ್ನು ಗುರುತಿಸಬಹುದಾಗಿದೆ.

೪. ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿರುವ ಕೆಳದಿ ಅರಸರ ಕಾಲದ ಸಾಹಿತ್ಯ ಕೃತಿಗಳು.

| **ಕೆಳದಿ ಅರಸರು** | **ಕವಿಗಳು** | **ಕೃತಿಗಳು** |
|---|---|---|
| ೧. ಹಿರಿಯ ವೆಂಕಟಪ್ಪ ನಾಯಕ ೧೫೮೨ - ೧೬೨೯ | ಸ್ವಯಂ ಕವಿ | ಶಿವಗೀತಾ ವ್ಯಾಖ್ಯಾ (ಸಂಸ್ಕೃತ) |
| | ತಿರುಮಲಭಟ್ಟ ೧೬೦೦ | ಕರ್ನಾಟಕ ಶಿವಗೀತೆ (ಕನ್ನಡ) |
| | ಭಟ್ಟೋಜಿ ದೀಕ್ಷಿತ | ಸಿದ್ಧಾಂತ ಕೌಮುಧಿ (ಸಂಸ್ಕೃತ) |
| ೨. ಹಿರಿಯ ಬಸಪ್ಪ ನಾಯಕ ೧೬೯೭ - ೧೭೧೪ | ಮೌನಪ್ಪ ಪಂಡಿತ ೧೭೦೦ | ವೀರಶೈವಾಚಾರ ಕೌಸ್ತುಭ ಸಂಸ್ಕೃತ |
| ೩. ಕಿರಿಯ ಸೋಮಶೇಖರ ನಾಯಕ ೧೭೧೪ - ೧೭೩೯ | ನಿರ್ವಾಣ ಮಂತ್ರಿ (೧೭೨೫) | ಕ್ರಿಯಾಸಾರ ವ್ಯಾಖ್ಯಾ ಸಂಸ್ಕೃತ |
| | (೧೭೨೫) | ಶಿವಪೂಜಾ ವಿಧಾನ ಕನ್ನಡ |
| | (೧೭೨೫) | ವಿವೇಕ ಚಿಂತಾಮಣಿ ಸಂಸ್ಕೃತ |
| ೪. ಹಿರಿಯ ಬಸಪ್ಪ ನಾಯಕ (೧೭೩೯ - ೧೭೫೪) | ಷಡಕ್ಷರ ಮಂತ್ರಿ ೧೭೪೫ | ವೀರಶೈವ ಧರ್ಮ ಶಿರೋಮಣಿ (ಸಂಸ್ಕೃತ) |
| | ಮರಿ ತೋಂಟದಾರ್ಯ (೧೭೫೦) | ವೀರಶೈವಾನಂ ಚಂದ್ರಿಕೆ(ಸಂಸ್ಕೃತ) |
| | (೧೭೫೦) | ಸಿದ್ಧಾಂತ ಶಿಖಾಮಣಿ ವ್ಯಾಖ್ಯಾ (ಸಂಸ್ಕೃತ) |
| ೫. ದೊಡ್ಡ ಸಂಕಣ್ಣ ನಾಯಕ ಕ್ರಿ.ಶ. ೧೫೪೫ - ೧೫೫೮ | ಚೆನ್ನವೀರ ಮಾಹೇಶ್ವರ (೧೫೫೦) | ಕಾಶೀ ಖಾಂಡ |

*(ಕೃಪೆ : ಡಾ. ಕೆ.ಜಿ. ವೆಂಕಟೇಶ್ ಜೋಯಿಸ್, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕ.ಸಾ.ಪ. ಬೆಂಗಳೂರು ೮.)*

**ಉಪಸಂಹಾರ**

ವಿಜಯನಗರದ ಸಾಮ್ರಾಜ್ಯವು ವೈಭವದಿಂದ ಮೆರೆಯುತ್ತಿದ್ದ ಸಮಯದಲ್ಲಿ ಕೆಳದಿ ಸಂಸ್ಥಾನದ ಉದಯವು ಕರ್ನಾಟಕದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದು ಮಹತ್ವವೆನ್ನಿಸಿಕೊಂಡಿದೆ. ವಿಜಯನಗರದ ಪತನದ ನಂತರ ದಕ್ಷಿಣ ಭಾರತದಾದ್ಯಂತ ನೂರಾರು ಹಿಂದೂ ಸಣ್ಣಪುಟ್ಟ ಸಾಮ್ರಾಜ್ಯಗಳು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಪ್ರಾರಂಭಿಸಿದರೂ ಇಕ್ಕೇರಿಯು ಮಾತ್ರ ವಿಜಯನಗರದ ಪರಂಪರೆ, ಧ್ಯೇಯ, ಉದ್ದೇಶಗಳನ್ನು ಚಾಚೂ ತಪ್ಪದೆ ಮುಂದುವರಿಸಿಕೊಂಡು ಬಂದಿತ್ತೆನ್ನಬಹುದು. ಸುಮಾರು ಹದಿನೆಂಟು ಜನ ಅರಸರುಗಳಿಂದ ಆಳಲ್ಪಟ್ಟ ಸಾಮ್ರಾಜ್ಯವು ಇಬ್ಬರು ವೀರ ಮಹಿಳೆಯರಿಂದ ವಿಜೃಂಭಣೆಯಿಂದ ಆಳಿಸಿಕೊಂಡ ಮಹತ್ವವಾದ ಸಂಸ್ಥಾನವಾಗಿದೆ. ಸುಮಾರು ೨೮೫ ವರ್ಷಗಳ ಕಾಲ ಕರ್ನಾಟಕದ ಸಂಸ್ಕೃತಿಯ ಉಳಿವಿಗಾಗಿ ರಕ್ಷಣೆಗಾಗಿ ಹೋರಾಡಿದ ತಾಯಿ ನಾಡಾಯಿತು ಇಕ್ಕೇರಿ, ಸಣ್ಣ ಪಾಳೆಯ ಪಟ್ಟಾಗಿ ತಲೆ ಎತ್ತಿದ ಈ ನಾಡು ಕೇರಳದ ಕಾಸರಗೋಡು, ಬಲಿಯಾಪಟಮ್ ನಿಂದ ಉತ್ತರದಲ್ಲಿ ಕಾರವಾರ ಗೋವಾದ ವರೆವಿಗೂ ಪೂರ್ವದಲ್ಲಿ ಅರಬ್ಬಿ ಸಮುದ್ರ ಪಶ್ಚಿಮದಲ್ಲಿ ಚಿಕ್ಕನಾಯಕನ ಹಳ್ಳಿಯವರೆಗೆ ವಿಸ್ತೀರ್ಣ ಹೊಂದುವ ಸಂಸ್ಥಾನವಾಗಿತ್ತೆಂದರೆ ಅಚ್ಚರಿಯೇ?

ಈ ಪ್ರಬಂಧದ ಸಿದ್ಧತೆಗೆ ಕೆಳದಿ ಸಂಸ್ಥಾನದ ಬಗ್ಗೆ ಇಂಚು ಇಂಚನ್ನು ಅಧ್ಯಯನ ನಡೆಸಿರುವ ಕೆಳದಿ ಗುಂಡಾಜೋಯಿಸ್ ರವರ ಎಲ್ಲ ಪುಸ್ತಕಗಳೂ, ಲೇಖನಗಳು ಹಾಗೂ ಡಾ. ಕೆಳದಿ ವೆಂಕಟೇಶ್ ಜೋಯಿಸ್‌ರವರ ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಗಳನ್ನು ಹೆಚ್ಚಾಗಿ ಬಳಸಿಕೊಂಡಿರುತ್ತೇನೆ. ಇದಕ್ಕಾಗಿ ಮಾನ್ಯರಿಗೆ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ. ಪ್ರಬಲ ರಾಜವಂಶದವರ ಸಾಮ್ರಾಜ್ಯದ ಅಧ್ಯಯನಕ್ಕೆ ಇಂದು ಹೆಚ್ಚು ಹೆಚ್ಚು ಗಮನವನ್ನು ನಮ್ಮ ವಿದ್ವಾಂಸರು ನೀಡುತ್ತಿರುವುದರಿಂದ ಇಕ್ಕೇರಿ ಸಂಸ್ಥಾನದ ಸಾಮಂತ ಪ್ರಬಲ ರಾಜ್ಯಗಳ ಚರಿತ್ರೆ ಸಂಪೂರ್ಣ ಗೌಣವಾಗುತ್ತಿದೆ. ಈ ಹಂತದಲ್ಲಿ ಇತಿಹಾಸಗಾರರು, ಸಂಶೋಧಕರು ಹೆಚ್ಚಿನ ಗಮನ ಹರಿಸಿ ಇಕ್ಕೇರಿ ಇತಿಹಾಸವನ್ನು ಅದರಲ್ಲಡಗಿರುವ ಸಾಂಸ್ಕೃತಿಕ ಅಂಶವನ್ನು ಹೊರತೆಗೆದಾಗ ಮಾತ್ರ ಇಕ್ಕೇರಿ ಚರಿತ್ರೆಯ ಜೊತೆಗೆ ರಾಷ್ಟ್ರ ಚರಿತ್ರೆಯೂ ಶ್ರೀಮಂತವಾಗುತ್ತದೆ.

***

# ಭಾಗ ೩ - ಮೈಸೂರು ಒಡೆಯರ ಸಂಸ್ಕೃತಿ ಚರಿತ್ರೆ

## ೧. ಮೈಸೂರು ಒಡೆಯರು

**ಪೀಠಿಕೆ :** ಭವ್ಯ ಪರಂಪರೆಯೊಂದಿಗೆ ಉಜ್ವಲ ಭವಿಷ್ಯವನ್ನು ಹೊಂದಿದ್ದ ಮೈಸೂರು ಸಂಸ್ಥಾನವು ಶೃಂಗಾರ ಪ್ರಿಯರಿಗೂ, ಸೌಂದರ್ಯಪ್ರಿಯರಿಗೂ, ಸಂಸ್ಕೃತಿ ಪ್ರಿಯರಿಗೂ, ಇತಿಹಾಸ, ವಾಸ್ತು ಶಿಲ್ಪ, ನಾಣ್ಯ, ಶಾಸನ, ಚಿತ್ರಕಲೆಗಳಲ್ಲಿ ಆಸಕ್ತಿ ಉಳ್ಳವರಿಗೂ, ಕೇವಲ ವಿನೋದ ವಿಹಾರಗಳನ್ನೇ ಬಯಸುವ ಜನರಿಗೂ, ಶಾಂತಿ ಪ್ರಿಯರಿಗೂ ಗ್ರಾಮಗಳ ಏಳಿಗೆಗಾಗಿ, ಗ್ರಾಮೀಣ ಬದುಕಿಗೆ ಸಮನಾದ ಸೌಲಭ್ಯಗಳನ್ನು ನೀಡಿ, ಏಕ ಪ್ರಕಾರವಾದ ಆಕರ್ಷಣೆಯನ್ನೂ ನೀಡಿದಂತಹ ವೈಶಿಷ್ಟ್ಯ ಪೂರ್ಣವಾದ ಮಾದರಿ ಸಂಸ್ಥಾನ ಮೈಸೂರು. ಈ ನಾಡು ಜೀವನದಿಗಳಿಂದ, ಕೆರೆಕಟ್ಟೆಗಳಿಂದ, ಗಿರಿಧಾಮಗಳಿಂದ, ಕಾಡು ಮೇಡುಗಳಿಂದ, ನೋಡುಗರ ಬೀಡುಗಳಿಂದ ಸಂಪದ್ಭರಿತವಾಗಿ ವಿವಿಧ ಮಾನವ ಸಂಸ್ಕೃತಿಗಳ ಬೀಡಾಗಿ ಕಂಗೊಳಿಸಿದೆ. ಈ ಪ್ರದೇಶವು ಅನೇಕ ಪ್ರಾಚೀನ ಸಾಮ್ರಾಜ್ಯಗಳು ಮೆರೆದು ಅಮೂಲ್ಯ ಸಂಸ್ಕೃತಿಯ ಬೀಜವನ್ನು ಬಿತ್ತಿರುವ ಪುರಾಣ ಪ್ರಸಿದ್ಧ ಸ್ಥಳವಾಗಿದೆ.

ಮೈಸುನಾಡು, ಮಯಿಸೂರು, ಮಯೂರು, ಮಹಿಷಊರು ಎಂದು ಅನೇಕ ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದ ಮೈಸೂರು, ಮಹಾಭಾರತದ "ಮಹಿಷ್ಮತಿ"ಯಾಗಿತ್ತೆಂದೂ ಹೇಳುತ್ತಾರೆ. ಕ್ರಿ.ಶ. ೨ನೇ ಶತಮಾನದಲ್ಲಿ ಟಾಲೆಮಿಯಾ, ಗ್ರೀಕ್ ಭೂಗೋಳಶಾಸ್ತ್ರಜ್ಞನೂ ಈ ಪ್ರದೇಶವನ್ನು ಉಲ್ಲೇಖಿಸಿರುವುದು ತಿಳಿದುಬರುತ್ತದೆ. ಕ್ರಿ.ಶ. ೨ನೇ ಶತಮಾನದ ತಂಜಾವೂರಿನ ಪಟಗಳಲ್ಲಿ ಮುಯ್ಸೂರು ನಾಡಿನ ಹೆಸರಿದೆ. ಅನಂತರದ ಶಾಸನ, ಸಾಹಿತ್ಯಗಳಲ್ಲಿ ಇಂದಿನ ಮೈಸೂರು ಉಲ್ಲೇಖಿತವಾಗಿದೆ. ಹೀಗೆ 'ಮಾಹಿಷೇಕ' ಮಹಿಷ' ವಿಷಯದಿಂದಲೇ ಮೈಸೂರು ಉಗಮವಾಗಿರಬಹುದು. ತಮಿಳಿನಲ್ಲಿ ಇದನ್ನೇ ಎರೆವೆಯೂರ್ ಎರುವೆಯೂರಾನ್ (ಎರಮ್ಮ - ಮಹಿಷ) ಎನ್ನುತ್ತಾರೆ. ಇಂಥಹ ಪ್ರಸಿದ್ಧ ಹಾಗೂ ಪ್ರಾಚೀನ ಇತಿಹಾಸ ಹೊಂದಿರುವ ಸ್ಥಳದಲ್ಲಿ ಒಡೆಯರ್ ವಂಶಸ್ಥರು ತನ್ನದೆ ಆದ ಸಂಸ್ಥಾನವನ್ನ ಸ್ಥಾಪಿಸಿ ವಿಶಿಷ್ಟ ಸಂಸ್ಕೃತಿಯ ಉಗಮಕ್ಕೆ ಕಾರಣಕರ್ತರಾಗಿದ್ದರು.

ಮೈಸೂರು ಒಡೆಯರು ವಿಜಯನಗರದ ಅರಸರ ಸಮಕಾಲೀನರಾಗಿ ಸಾಮಂತರಾಗಿ ಅವರ ನೆರಳಲ್ಲಿಯೇ ಬೆಳೆದವರು. ವಿಜಯನಗರದ ಅವನತಿಯ ನಂತರ ಅಂದಿನ ಎಲ್ಲಾ ರೀತಿಯ ಸಂಸ್ಕೃತಿಯನ್ನು ಚಾಚೂ ತಪ್ಪದೆ ಪಾಲಿಸಿಕೊಂಡ ಸಂಸ್ಥಾನವೇ ಮೈಸೂರು, ಆಡಳಿತ ಪದ್ಧತಿ, ಆರ್ಥಿಕ ಪದ್ಧತಿ, ವಾಣಿಜ್ಯ, ಹಬ್ಬ ಹರಿದಿನಗಳ ಆಚರಣೆ, ದಸರಾ ಹಬ್ಬದ ವೈಭವದ ದಿನಗಳನ್ನು ಮೈಸೂರು ಅರಸರು ವಿಜಯನಗರದ ಅರಸರಿಂದ ಪ್ರಭಾವಿತರಾಗಿ ಬೆಳೆಸಿ ಉಳಿಸಿಕೊಂಡು ಬಂದರು. ಈ ದೃಷ್ಟಿಯಿಂದಾಗಿ ಇಡೀ ಭರತ ಖಂಡದಲ್ಲಿಯೇ ಅಲ್ಲದೆ ವಿಶ್ವದಲ್ಲಿಯೇ ಮೈಸೂರು ಒಂದು ಸಾಂಸ್ಕೃತಿಕ ಸ್ಥಳವಾಗಿ ಕಂಗೊಳಿಸುತ್ತಿದೆ. ಇಂದಿಗೂ ನಡೆಯುತ್ತಿರುವ ವಿಶ್ವವಿಖ್ಯಾತ ದಸರಾ ಉತ್ಸವ ಈ ಹಂತದಲ್ಲಿ ಪ್ರಮುಖವಾಗಿದೆ. ಕರ್ನಾಟಕದ ಚರಿತ್ರೆಯಲ್ಲಿ ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಜೀವನದ ಇತಿಹಾಸವು ಮಹತ್ವಪೂರ್ಣವಾಗಿ ಕಂಡುಬರುತ್ತದೆ.

ಮೈಸೂರು ರಾಜ್ಯವನ್ನು ೫೭೦ ವರ್ಷಗಳಷ್ಟು ಕಾಲ ಆಳ್ವಿಕೆ ನಡೆಸಿದ ಒಡೆಯರ್ ಮನೆತನದ ಎಲ್ಲ ೨೫ ಅರಸರೂ ಸಮರ್ಥರೆಂದು ಹೇಳಲಾಗುವುದಿಲ್ಲ. ಇವರುಗಳಲ್ಲಿ ಅಶಕ್ತರೂ, ಅನಾಮಧೇಯರೂ ಆಗಿರುವವರು ಹೆಚ್ಚಾಗಿಯೇ ಇದ್ದಾರೆ. ಒಡೆಯರ್‌ರವರ ಮೂಲ ಪುರುಷರಾದ ಯದುರಾಯರ (೧೩೯೯) ನಂತರ ಮೈಸೂರು ಸಾಮ್ರಾಜ್ಯವು ಮತ್ತೆ ಬೆಳಕಿಗೆ ಬಂದದ್ದು ೧೫೭೮ರಲ್ಲಿ ಅಧಿಕಾರಕ್ಕೆ ಬಂದ ರಾಜ ಒಡೆಯರಿಂದಲೇ ಇವರ ನಂತರ ಬಂದ ಕಂಠೀರವ ನರಸರಾಜ ಒಡೆಯರು. ಚಿಕ್ಕ ದೇವರಾಜ ಒಡೆಯರ್, ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಆಳ್ವಿಕೆಯ ಕಾಲವು ಮೈಸೂರು ಸಂಸ್ಥಾನವನ್ನು ಭರತಖಂಡದಲ್ಲಿಯೇ "ಮಾದರಿ ಸಂಸ್ಥಾನ" ಎಂದು ಗುರುತಿಸುವಂತೆ ಮಾಡಿತು. ಸಂಸ್ಥಾನದ ಕೀರ್ತಿ ಪ್ರತಿಷ್ಠೆಗಳನ್ನು ಬೆಳೆಸಿ, ಗಡಿ ಪ್ರದೇಶಗಳನ್ನು ವಿಸ್ತರಿಸಿ, ಕರ್ನಾಟಕದ ಸಂಸ್ಕೃತಿ ಸಾಹಿತ್ಯಗಳ ಆಶ್ರಯ ದಾತರಾಗಿ ಮುಖ್ಯವಾಗಿ ಪ್ರಜಾಹಿತವನ್ನೇ ತಮ್ಮ ಮುಖ್ಯ ಧ್ಯೇಯವಾಗಿಸಿದ್ದ ಇವರು ವಿಜಯನಗರ ಸಾಮ್ರಾಜ್ಯದ ನಂತರ ಸಂಸ್ಕೃತಿಯನ್ನು ಪೋಷಿಸಿ ಬೆಳೆಸಿಕೊಂಡು ಬಂದರು.

ಈಗ ಮೈಸೂರು ಎಂದು ಕರೆಯಲಾಗುತ್ತಿರುವ ಪ್ರದೇಶಕ್ಕೆ ಮುಂಚೆ "ಹದಿನಾಡು" ಎಂದು ಹೆಸರಿದ್ದಿತ್ತು. ಕ್ರಿ.ಶ. ೧೩೯೮ - ೯೯ರ ಸಮಯದಲ್ಲಿ ಉತ್ತರ ಭಾರತದ ದ್ವಾರಕಾ ನಗರದಿಂದ ಯದುವಂಶೀಯರೆಂದು ಹೇಳಿಕೊಂಡ ಇಬ್ಬರು ಯುವಕರು ದಕ್ಷಿಣದ ಕಡೆಗೆ ವಲಸೆ ಬಂದು ಮೇಲುಕೋಟೆಯ ಚಲುವ ನಾರಾಯಣನ ದರ್ಶನ ಪಡೆದು ಅಲ್ಲಿಯೇ ಬದುಕಲಾರಂಭಿಸಿದರು. ಇದು ಅನೇಕ ಅಧಾರಗಳಿಂದ ಲಭ್ಯವಾಗುವ ವಿಷಯ. ಹದಿನಾಡು ಪ್ರದೇಶವನ್ನು ಅಳ್ವಿಕೆ ನಡೆಸುತ್ತಿದ್ದ ಪಾಳ್ಯಗಾರನು ಮಾನಸಿಕ ದೌಬಲ್ಯಗಳಿಂದಾಗಿ ರಾಜ್ಯ ಹಾಗೂ ಕುಟುಂಬವನ್ನು ಸಂಪೂರ್ಣವಾಗಿ ತೊರೆದು ತೀರ್ಥಯಾತ್ರೆಗೆ ಹೋಗಿದ್ದನು. ಹದಿನಾಡು ಪ್ರಾಂತ್ಯದ ನೆರೆಯ ಪಾಳ್ಯಗಾರನಾಗಿದ್ದ ಕಾರುಗಳ್ಳಿಯ ನಾಯಕನು ಇದೇ ಅವಕಾಶವನ್ನು ಉಪಯೋಗಿಸಿಕೊಂಡು. ಹದಿನಾಡು ನಾಯಕನ ಮಗಳನ್ನು ಮದುವೆ ಮಾಡಿಕೊಂಡು ಆ ಪ್ರಾಂತ್ಯವನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿ ಅವಳ ತಾಯಿಯನ್ನು ಒತ್ತಾಯ ಪಡಿಸುತ್ತಿದ್ದನು. ಕೆಳಜಾತಿಯ ನಾಯಕನಿಗೆ ಮಗಳನ್ನು ಕೊಡಲಿಚ್ಛಿಸದ ಹಾಗೂ ಅವನ ಹಿಂಸೆಯನ್ನು ತಾಳಲಾರದೆ ಅನೇಕ ತೊಂದರೆಗಳಲ್ಲಿ ತೊಳಲುತ್ತಿದ್ದಾಗ ಮೇಲೆ ತಿಳಿಸಿದ್ದ ದ್ವಾರಕೀಯದ ಯುವಕರು ಆಕೆಗೆ ನೆರವಾದರು. ಇವರು ಸ್ಥಳೀಯರ ಸಹಾಯದಿಂದ ಕಾರುಗಳ್ಳಿಯ ನಾಯಕನನ್ನು ಕೊಂದು ಅವಳ ಪಾಳ್ಯಪಟ್ಟವನ್ನು ಸಂಪೂರ್ಣವಾಗಿ ಹದಿನಾಡಿನ ಪ್ರದೇಶಕ್ಕೆ ಸೇರಿಸಿಕೊಟ್ಟರು. ಈ ಉಪಕಾರಕ್ಕಾಗಿ ಹದಿನಾಡು ನಾಯಕನ ಪತ್ನಿಯು ತನ್ನ ಮಗಳನ್ನು ಯಾದವ ಸಹೋದರರಲ್ಲಿ ಒಬ್ಬನಾದ ವಿಜಯನಿಗೆ ಮದುವೆ ಮಾಡಿದಳು. (ಮತ್ತೊಬ್ಬನ ಹೆಸರು ಕೃಷ್ಣ). ಈ ವಿಜಯ ಎಂಬುವನೇ ಮುಂದೆ "ಒಡೆಯ" ಎಂಬ ಬಿರುದು ಧರಿಸಿ ಹದಿನಾಡು - ಕಾರುಗಳ್ಳ

ಪ್ರಾಂತ್ಯದ ಆಡಳಿತವನ್ನು ವಹಿಸಿಕೊಂಡು ಆಳಲಾರಂಭಿಸಿದನು. ಈ ವಿಜಯ ಎಂಬುವನು ಯದು ವಂಶದವನಾಗಿದ್ದರಿಂದ ಮೂಲತಃ “ಯದುರಾಯ’ ಎಂಬ ಹೆಸರಿನಿಂದ ಆಳ್ವಿಕೆಯನ್ನು ಪ್ರಾರಂಭಿಸಿ ಒಡೆಯರ ಮನೆತನದ ಮೂಲಪುರುಷ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ.

ಅಂದಿನಿಂದ ಇಂದಿನವರೆಗೂ ನಮ್ಮ ನಾಡಿನ ಸಾಂಸ್ಕೃತಿಕ ರಾಜಧಾನಿಯಾಗಿರುವ ಮೈಸೂರು ಹಾಗೂ ಮೈಸೂರು ಸಂಸ್ಥಾನವನ್ನು ೧೩೯೯ ರಿಂದ ೧೯೪೭ರ ವರೆಗೆ ಅಳಿಕೊಂಡು ಬಂದ ಮಹಾನ್ ಪುರುಷರನ್ನು ಗಣನೆಯಲ್ಲಿಟ್ಟುಕೊಂಡು ಈ ಕೆಳಕಂಡಂತೆ ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ಸಾಂಸ್ಕೃತಿಕವಾದ ಅಧ್ಯಾಯ ಮಾಡಬಹುದು.

೧. ೧೩೯೯ರಿಂದ ೧೫೭೮ರವರೆಗೆ ಮೈಸೂರು ಒಡೆಯರು ವಿಜಯನಗರದ ಅರಸರಿಗೆ ಸಾಮಂತ ರಾಜರಾಗಿದ್ದಂತ ಕಾಲ.

೨. ೧೫೭೮ರಿಂದ ಮೈಸೂರು ಒಡೆಯರು ಸ್ವಾತಂತ್ರ್ಯರಾಗಿ ಆಳ್ವಿಕೆ ನಡೆಸಲು ಪ್ರಾರಂಭಿಸಿ, ನಂತರ ೧೭೬೦ರಲ್ಲಿ ಹೈದರಾಲಿಯು ಪ್ರಾಬಲ್ಯಕ್ಕೆ ಬರುವವರೆಗೆ.

೩. ೧೭೬೦ರಿಂದ ೧೭೯೯ರಲ್ಲಿ ಟಿಪ್ಪುಸುಲ್ತಾನ್ ನನ ಪತನದವರೆಗಿನ ಕಾಲ.

೪. ೧೭೯೯ರಿಂದ ೧೯೪೭ರಲ್ಲಿ ಮೈಸೂರು ಸಂಸ್ಥಾನವು ಸ್ವತಂತ್ರ ಭಾರತದ ಗಣರಾಜ್ಯದಲ್ಲಿ ವಿಲೀನದವರೆಗಿನ ಆಧುನಿಕ ಮೈಸೂರಿನ ಮಹತ್ವದ ಕಾಲ.

ಕಾಲಘಟ್ಟಕ್ಕೆ ಸಂಬಂಧಿಸಿ ಇತಿಹಾಸದ ಘಟನೆಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಿದರೆ ಸಾಂಸ್ಕೃತಿಕ ಚರಿತ್ರೆಯ ಅಧ್ಯಯನಕ್ಕೆ ಅನುಕೂಲವಾಗುತ್ತದೆ. ಅದರಲ್ಲಿಯೂ ಸಂಸ್ಕೃತಿ ಚರಿತ್ರೆಯ ಅಧ್ಯಯನದ ಈ ಸಂದರ್ಭದಲ್ಲಿ ಇದು ಅವಶ್ಯಕವಾಗಿದೆ. ಏಕೆಂದರೆ ಇವುಗಳ ಮಧ್ಯೆ ಹೈದರ್, ಟಿಪ್ಪು, ದಳವಾಯಿಗಳಾದ ನಾಗರಾಜಯ್ಯ, ದೇವರಾಜಯ್ಯ ಅನಂತರ ಬ್ರಿಟಿಷ್‌ರವರ ಆಳ್ವಿಕೆಯ ಅವಧಿಯಲ್ಲಿ ಮೈಸೂರು ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಯಾವ ನಿಟ್ಟಿನಲ್ಲಿ ಮೈಗೂಡಿಸಿಕೊಂಡು ಬಂದಿತ್ತೆಂದು ತಿಳಿಯುವುದಕ್ಕೆ ಮೇಲಿನ ವಿಭಜನೆಯು ಅನುಕೂಲವಾಗುತ್ತದೆ.

ಯದುರಾಯರಿಂದ ಏಳನೆಯ ರಾಜರಾದ ಬೋಳ ಚಾಮರಾಜ ಒಡೆಯರ್ ವರೆಗಿನ ಮೈಸೂರು ಚರಿತ್ರೆಯು ನಿಂತಲ್ಲೇ ನಿಲ್ಲುತ್ತದೆ. ಅನಂತರ ಒಡೆಯರು ಸಾಮ್ರಾಜ್ಯದ ವಿಸ್ತರಣೆಯಲ್ಲಿ ಮುಂದಾಗಿದ್ದರೆ ಪ್ರಯುಕ್ತ, ಮೊದಲಿಗೆ ಬೋಳ ಚಾಮರಾಜ ಒಡೆಯರು ವಿಜಯನಗರದ ರಾಮರಾಯನ ಸೇನಾನಿಯನ್ನು ಸೋಲಿಸಿ ಪಲಾಯನ ಮಾಡಿಸಿದನು. ನಂತರ ಬೃಹತ್ ವಿಜಯನಗರ ಸಾಮ್ರಾಜ್ಯಕ್ಕೆ ಪ್ರತಿವರ್ಷವೂ ಕೊಡುತ್ತಿದ್ದ. ಪೊಗದಿ (ಕಪ್ಪಾಕಾಣಿಕೆ) ಯನ್ನು ನಿಲ್ಲಿಸಿದನು. ತನ್ನ ಗಡಿ ಪ್ರಾಂತ್ಯವೆನ್ನೆಲ್ಲ ಭದ್ರಪಡಿಸಿಕೊಂಡು ಕಂದಾಯ ವಸೂಲಿ ಮಾಡಲು ಪ್ರಾರಂಭಿಸಿದನು. ಆದರೂ ಸಹ ಪ್ರಬಲ ವಿಜಯನಗರದ ಪ್ರಭಾವ ಮೈಸೂರಿನ ಮೇಲೆ ಹೆಚ್ಚಾಗಿಯೇ ಇದ್ದಿತು. ಇಲ್ಲದಿದ್ದರೆ ಈ ಸನ್ನಿವೇಶವನ್ನೆ ಮೈಸೂರು ಸ್ವತಂತ್ರ ಸಂಸ್ಥಾನವೆಂದು ಹೇಳಿಸಿಕೊಳ್ಳುವ ದಿನ ಎಂದು ಹೇಳಬಹುದಾಗಿತ್ತೆನೋ. ಇವರ ನಂತರ ಪಟ್ಟಕ್ಕೆ ಬಂದ ಬೆಟ್ಟದ ಚಾಮರಾಜ ಒಡೆಯರು ದಕ್ಷ ಆಡಳಿತಗಾರರಾಗಿರಲಿಲ್ಲವಾದ ಪ್ರಯುಕ್ತ ಇವನ ಆಳ್ವಿಕೆಯನ್ನು ಅಂತ್ಯಗೊಳಿಸಿ ಇವನ ಸಹೋದರನಾದ ರಾಜ ಒಡೆಯರ್ ರವರಿಗೆ ಪಟ್ಟಕಟ್ಟಿದರು. ಇವನು ದಕ್ಷನೂ ಸೂರನೂ ಆಗಿದ್ದರಿಂದ ಮೈಸೂರು ಸಂಸ್ಥಾನವು ಸ್ವತಂತ್ರ್ಯಗೊಂಡು ವಿಜಯನಗರದ ಅರಸರಿಗೆ ಅಧೀನವಾಗಿರದೇ ಸ್ವತಂತ್ರ್ಯ ರಾಜರೆಂದು ಆಳ್ವಿಕೆ ನಡೆಸಲು ಪ್ರಾರಂಭಿಸಿದನು. ಮೈಸೂರು ಸಂಸ್ಥಾನದ ರತ್ನ ಸಿಂಹಾಸನಾಧೀಶ್ವರರೆಂಬ ಬಿರುದಿನೊಂದಿಗೆ ಆಳ್ವಿಕೆ ನೆಡೆಸಲು ಪ್ರಾರಂಭಿಸಿದ ರಾಜ ಒಡೆಯರ್ ವಿಜಯನಗರದ ಅರಸರಂತೆ ಮೈಸೂರು ಸಂಸ್ಥಾನದಲ್ಲಿಯೂ ಇಂದು ವಿಶ್ವವಿಖ್ಯಾತವಾಗಿರುವ ನವರಾತ್ರಿ ಮಹೋತ್ಸವ (ದಸರಾ ಮಹೋತ್ಸವ)ವನ್ನು ಆರಂಭಿಸಿದನೆಂದು ದಾಖಲೆಗಳಿಂದ ತಿಳಿದುಬರುತ್ತದೆ.

ಮೈಸೂರು ಒಂದು ರತ್ನ ಸಿಂಹಾಸನದ ಆಸ್ಥಾನವೆಂದಾದ ಮೇಲೆ ರಾಜ ಒಡೆಯರ್‌ರವರು ಕಾರುಗಳ್ಳಿಯ ಜಂಬಗಾರ ವೀರರಾಜಯ್ಯನನ್ನು ಪದಚ್ಯುತಿಗೊಳಿಸಿ, ಅದನ್ನು ವಶಪಡಿಸಿಕೊಂಡನು. ವಿಜಯನಗರದ ಅರಸರ ಸಾಮಂತರಲ್ಲಿ ಒಬ್ಬರಾಗಿದ್ದ ಉಮ್ಮತ್ತೂರಿನ ಪಾಳೆಗಾರರನ್ನು ಸೋಲಿಸಿ ಅವರ ಕೋಪಕ್ಕೆ ಗುರಿಯಾದನು. ಆದರೆ ತಕ್ಷಣವೇ ವಿಜಯನಗರಸ ಅರಸರಿಗೆ ಸಮಸ್ಯೆಯಾಗಿ ಕಾಣುತ್ತಿದ್ದ ಬೇಗೂರು ಗ್ರಾಮ, ಯಳಂದೂರು ಮೊದಲಾದ ಪಾಳೆಗಾರರನ್ನು ಸೋಲಿಸಿ ವಿಜಯನಗರ ಅರಸರಿಗೆ ಪ್ರೀತಿಪಾತ್ರರಾಗಿ ಅವರಿಂದಲೇ ಬನ್ನೂರು ಹಾಗೂ ಸೋಸಲೆ ಗ್ರಾಮಗಳನ್ನು ಉಡುಗೊರೆಯಾಗಿ ಪಡೆದನು. ನಂತರ ಶ್ರೀರಂಗಪಟ್ಟಣ ಹಾಗೂ ಉಮ್ಮತ್ತೂರುಗಳನ್ನು ವಿಜಯನಗರಸ ಅರಸರಿಂದ ಉಡುಗೊರೆಯಾಗಿ ಪಡೆದುಕೊಂಡು ಮೈಸೂರನ್ನು ಬಿಟ್ಟು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ ಒಡೆಯರ್ 'ರಾಜ'ನಾಗಿ ಆಳ್ವಿಕೆ ನಡೆಸಲು ಪ್ರಾರಂಭಿಸಿದನು. ಇವರ ನಂತರ ಮೊಮ್ಮಗನಾದ ೬ನೇ ಚಾಮರಾಜ ಒಡೆಯರ್ ಅಧಿಕಾರಕ್ಕೆ ಬಂದನು. ಇವರು ಚನ್ನಪಟ್ಟಣವನ್ನು (ಅಂದು ಚೆನ್ನಪಟ್ಟಣವನ್ನು ಜಗದೇವರಾಯನೆಂಬುವನು ಆಳ್ವಿಕೆ ನಡೆಸುತ್ತಿದ್ದನು) ಮತ್ತು ಅದರ ಆಳ್ವಿಕೆಗೆ ಒಳಗಾಗಿದ್ದ ಎಲ್ಲಾ ಪ್ರದೇಶಗಳನ್ನು ವಶಪಡಿಸಿಕೊಂಡು ಆಳ್ವಿಕೆ ನಡೆಸಲಾರಂಭಿಸಿದರು. ಇವನು ಪ್ರಮುಖ ವಿದ್ವಾಂಸನೂ ದೈವಭಕ್ತನೂ ಆಗಿದ್ದನು. "ಚಾಮರಾಜೋಕ್ತಿ ವಿಲಾಸ" ಎಂದು ಇತ್ತೀಚೆಗೆ ಪ್ರಕಟಗೊಂಡ ವಾಲ್ಮೀಕಿ ರಾಮಾಯಣದ ಗದ್ಯಾನುವಾದದ ಕರ್ತೃ ೬ನೇ ಚಾಮರಾಜ ಒಡೆಯರ್ ರವರ. ಇವರ ಕಾಲದಲ್ಲಿ ಮೈಸೂರಿನ ಸಂಸ್ಕೃತಿಯು ತನ್ನ ಕಂಪನ್ನು ಚೆಲ್ಲಲಾರಂಭಿಸಿತು. ನಂತರ ಬಂದ ಕೆಲವು ಅಸಮರ್ಪಕ ರಾಜರ ನಂತರ ಬೆಟ್ಟದ ಚಾಮರಾಜ ಒಡೆಯರ ಮಗ ರಣಧೀರ ಕಂಠೀರವ ನರಸರಾಜ ಒಡೆಯರು ಅಧಿಕಾರವಹಿಸಿಕೊಂಡು ಮೈಸೂರಿನ ಧೀರತನವನ್ನು ಪ್ರಸರಿಸಿದನು. ರಣಧೀರ ಕಂಠೀರವ ನರಸರಾಜ ಒಡೆಯರ್ ರವರು ಪಟ್ಟಕ್ಕೆ ಬರುವ ಮೊದಲೇ ಪಕ್ಕದ ತಿರುಚನಾಪಳ್ಳಿಗೆ ಪ್ರವಾಸಕ್ಕಾಗಿ ತೆರಳಿ, ಅಲ್ಲಿಯ ರಾಜಸ್ಥಾನದಲ್ಲಿ ಜಗಜಟ್ಟಿಯಾಗಿ ಮೆರೆಯುತ್ತಿದ್ದ ಮಲ್ಲನೊಬ್ಬನನ್ನು ಸೋಲಿಸಿ 'ರಣಧೀರ'ರಾಗಿದ್ದರು. ಇವನ ಆಳ್ವಿಕೆಯ ಕಾಲದಲ್ಲಿ ಅಂದಿನ ಪ್ರಮುಖ ಕ್ರೀಡೆಗಳಾಗಿದ್ದ ಕುಸ್ತಿ ಕತ್ತಿವರಸೆ, ಕುದುರೆ ಸವಾರಿ ಹಾಗೂ ಜನಪದೀಯ ಕ್ರೀಡೆಗಳು ಹೆಚ್ಚು ಹೆಚ್ಚು ಸಾಂಸ್ಕೃತಿಕವಾಗಿ ಬೆಳೆಯಲು ಪ್ರೇರಣೆ ನೀಡಿದನು. ರಣಧೀರನಿಗೆ ಮಕ್ಕಳಿಲ್ಲದ ಪ್ರಯುಕ್ತ ಬೋಳ ಚಾಮರಾಜ ಒಡೆಯರ ಮೊಮ್ಮಗ ದೊಡ್ಡ ದೇವರಾಯರು ಪಟ್ಟಕ್ಕೆ ಬಂದರು. ಇವನು ಪಟ್ಟಕ್ಕೆ ಬಂದ ಪ್ರಾರಂಭದಲ್ಲಿಯೇ ಬಿದನೂರಿನ ಶಿವಪ್ಪನಾಯಕನು ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದನು. ದೊಡ್ಡ ದೇವರಾಯನು ಅವನನ್ನು ಸೋಲಿಸುವುದರ ಜೊತೆಗೆ ರಣದುಲ್ಲಾಖಾನ್ ನನ್ನು ಸೋಲಿಸಿ ಸಕ್ಕರೆ ಪಟ್ಟಣ, ಹಾಸನಗಳನ್ನು ವಶಪಡಿಸಿಕೊಂಡನು. ಇವನ ಆಳ್ವಿಕೆಯ ಕಾಲದಲ್ಲಿ ಮೈಸೂರು ಒಂದು ಸಂಸ್ಥಾನವಾಗಿ ಪರಿವರ್ತನೆಗೊಂಡಿತು. ಕವಿ ಚಾಮಯ್ಯನು ದೊಡ್ಡದೇವರಾಯ ಸಾಂಗತ್ಯ ಎಂಬ ಕೃತಿಯಲ್ಲಿ ಒಡೆಯರ ಧೈರ್ಯ, ಶೌರ್ಯ, ದೈವಭಕ್ತಿ, ಧರ್ಮನಿಷ್ಠೆಗಳನ್ನು ಹಾಗೂ ಅಂದಿನ ಸಂಸ್ಕೃತಿಯನ್ನು ವರ್ಣಿಸಿದ್ದಾನೆ. ಚಾಮುಂಡಿ ಬೆಟ್ಟಕ್ಕೆ ತಳದಿಂದ ತುದಿಯವರೆವಿಗೂ ಮೆಟ್ಟಿಲುಗಳನ್ನು ಕಟ್ಟಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ದೊಡ್ಡ ದೇವರಾಯನ ನಂತರ ಅಧಿಕಾರಕ್ಕೆ ಬಂದವರೆಂದರೆ ಬೋಳ ಚಾಮರಾಜ ಒಡೆಯರ್ ರವರ ಮರಿಮಗನಾದ ಚಿಕ್ಕದೇವರಾಜ ಒಡೆಯರ್, ಸುಮಾರು ೩೧ ವರ್ಷಗಳ ಸುದೀರ್ಘ ಅವಧಿ ಆಳ್ವಿಕೆ ನಡೆಸಿದ ಚಿಕ್ಕದೇವರಾಜರು ಮೈಸೂರು ಚರಿತ್ರೆಯಲ್ಲಿ ರಾಜಾ ಜಗದೇವರಾಗಿ ನವಕೋಟಿ ನಾರಾಯಣರಾಗಿ ಮೆರೆದು ಮರೆಯಾಗಿದ್ದಾನೆ. ಸಂಸ್ಥಾನದಲ್ಲಿ ಚಾಣಾಕ್ಷ ರಾಜನೆಂದೇ ಹೆಸರು ಗಳಿಸಿರುವ ಇವನು ಪ್ರಪ್ರಥಮವಾಗಿ ಸಂಸ್ಥಾನದಲ್ಲಿ ಅಂಚೆ ವ್ಯವಸ್ಥೆಯನ್ನು ಜಾರಿಗೆ ತಂದು ಸಂಸ್ಥಾನದ ಮೂಲೆ ಮೂಲೆಗಳಿಗೂ ಶೀಘ್ರವಾಗಿ ವರ್ತಮಾನ ತರಿಸಿಕೊಳ್ಳುವ ವ್ಯವಸ್ಥೆಯನ್ನು ಜಾರಿಗೊಳಿಸಿದನು. ಸ್ವತಃ ಪಂಡಿತರಾಗಿದ್ದ ಪ್ರಯುಕ್ತ ಇವನ ಆಸ್ಥಾನದಲ್ಲಿ ಕವಿಗಳೂ, ಸಾಹಿತಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ವಿಜೃಂಭಿಸುತ್ತಿದ್ದರು. ಚಿಕ್ಕದೇವರಾಜ ಒಡೆಯರ್‌ರವರ ಆಸ್ಥಾನ ಅಂದಿನ ಸಮಕಾಲೀನ ರಾಜರೆಲ್ಲರ ದೃಷ್ಟಿಯಿಂದ ವೈಭವೋಪೂರಿತ ಸಭೆಯಾಗಿತ್ತು. ಅಂದಿನ ವೈಭವದ ಸಾಂಸ್ಕೃತಿಕ ಜೀವನಕ್ಕೆ ಅನೇಕ ರೀತಿಯಲ್ಲಿ ಸ್ಪೂರ್ತಿಯ ಸೆಲೆಯಾಗಿ ಪರಿವರ್ತನೆಗೊಂಡಿತ್ತೆನ್ನಬಹುದು. ಆಗತಾನೇ ಬೆಂಕಿಯ ಆರಿ ಹೊಗೆಯಾಡುತ್ತಿದ್ದ ಸಾಮ್ರಾಜ್ಯವು ಗತ ಇತಿಹಾಸದ ಪುಟಗಳಲ್ಲಿ ಅಡಗಿಹೋಗಿದ್ದ ವಿಜಯನಗರ ಸಾಮ್ರಾಜ್ಯದ ಕನ್ನಡ ವೈಭವವು ಪುನರ್ಜನ್ಮ ಪಡೆದಂತೆ ಭಾಸವಾಗುತ್ತಿತ್ತು. ಇದಕ್ಕೆ ಪ್ರಮುಖ ಕಾರಣ ಚಿಕ್ಕದೇವರಾಜ ಒಡೆಯರ್ ರವರ ರಾಜಾಶ್ರಮ ಎಂದು ಹೇಳಬಹುದಾಗಿದೆ. ವಿಜಯನಗರದರಸರ ನಂತರ "ಕರ್ನಾಟಕ ಚಕ್ರವರ್ತಿ" ಎಂಬ ಬಿರುದನ್ನು ಧರಿಸಿದ ವ್ಯಕ್ತಿ ಎಂದರೆ ಇವನೆ.

ಇವನ ನಂತರ ಅಧಿಕಾರಕ್ಕೆ ಬಂದ ಎರಡನೇ ಕಂಠೀರವ ನರಸರಾಜನು ಅಸಮರ್ಥನಾಗಿದ್ದನು. ಇವನು ಕಿವುಡ ಹಾಗೂ ಮೂಕನೂ ಆಗಿದ್ದ ಪ್ರಯುಕ್ತ ಸಂಸ್ಥಾನದ ಅವನತಿಗೆ ಒಂದಲ್ಲ ಇಂದು ರೀತಿಯಲ್ಲಿ ಕಾರಣವಾದನು. ಇವನು ದೌರ್ಬಲ್ಯಗಳಿಂದಾಗಿ ಸಂಸ್ಥಾನದಲ್ಲಿ ದಳವಾಯಿಗಳಾಗಿದ್ದ ನಂಜರಾಜಯ್ಯ ಹಾಗೂ ದೇವರಾಜಯ್ಯನವರ ವಶಕ್ಕೆ ಸಂಸ್ಥಾನದ ಆಳ್ವಿಕೆ ಒಳಪಟ್ಟಿತು. ನಂತರ ಈ ದಳವಾಯಿಗಳನ್ನು ಏಳನೆಯ ಚಾಮರಾಜ ಒಡೆಯರ ಕುಂಠಿತಗೊಳಿಸಿದನು ಎಂದು ದಾಖಲೆಗಳ ಮೂಲಕ ಹೇಳಬಹುದು. ಚಾಮರಾಜ ಒಡೆಯರ ಅನಂತರ ಅವರ ಸಹೋದರ ವೆಂಕಟೇ ಅರಸು ಪಟ್ಟಕ್ಕೆ ಬರಬೇಕಾಯಿತು. ನಂತರ ಚಿಕ್ಕ ಕೃಷ್ಣರಾಜ ಒಡೆಯರ್ ಒಂಬುದರು ಪಟ್ಟಕ್ಕೆ ಬಂದನು. ಈ ಅರಸರನು ೩೨ ವರ್ಷಗಳು ರಾಜ್ಯಭಾರ ನಡೆಸಿದನು. ದಳವಾಯಿಗಳ ಆಡಳಿತ ಮುಗಿದು ಹೇದರಾಲಿ ಪ್ರಾಬಲ್ಯಕ್ಕೆ ಬಂದುದೂ, ಬ್ರಿಟಿಷರ ಆಡಳಿತ ಭಾರತದಲ್ಲಿ ತಳವೂರತೊಡಗಿದುದ್ದೂ ಈ ಅರಸರನ ಕಾಲದಲ್ಲಿಯೇ. ೧೭೭೬ರಲ್ಲಿ ಚಿಕ್ಕ ಕೃಷ್ಣರಾಜನು ನಿಧನಹೊಂದುವ ಹೊತ್ತಿಗೆ ಹೈದರಾಲಿಯು ಮೈಸೂರು ಸಂಸ್ಥಾನದ ಸರ್ವಾಧಿಕಾರಿಯಾಗಿ ಅಳ್ವಿಕೆ ನಡೆಸಲಾರಂಭಿಸಿದನು. ಇವನ ನಂತರ (ಈ ಮಧ್ಯೆ ನಾಮಕಾವಸ್ಥೆಯಾಗಿ ಮೈಸೂರು ಒಡೆಯರ್ ವಂಶಸ್ಥರೇ ರಾಜರಾಗಿ ಕೆಲವರು ಮುಂದುವರೆದಿರುತ್ತಾರೆ). ಮಗ ಟಿಪ್ಪುಸುಲ್ತಾನನು ಪಟ್ಟಕ್ಕೆ ಬಂದು ತನ್ನ ಧೈರ್ಯ, ಸಾಹಸಗಳಿಂದ ಬ್ರಿಟಿಷರನ್ನು ಹಿಮ್ಮೆಟ್ಟಿಸಿ "ಮೈಸೂರು ಹುಲಿ" ಎಂಬ ಬಿರುದನ್ನು ಪಡೆದು, ಬ್ರಿಟಿಷರ ಜೊತೆ ಹೋರಾಡುತ್ತಲೆ ೧೭೯೯ರಲ್ಲಿ ಶ್ರೀರಂಗಪಟ್ಟಣದ ಕೋಟೆಯಲ್ಲಿ ಮರಣ ಹೊಂದಿದ್ದನು. ಇದರಿಂದಾಗಿ ಸುಮಾರು ೩೯ ವರ್ಷಗಳು ಮೈಸೂರು ಸಂಸ್ಥಾನ ಕಂಡ ಮುಸ್ಲಿಂ ಸರ್ವಾಧಿಕಾರಿಗಳ ಆಡಳಿತ ಕೊನೆಗೊಂಡಂತಾಯಿತು. ವಿಜಯಿಗಳಾದ ಬ್ರಿಟಿಷರು ಮೈಸೂರು ಸಂಸ್ಥಾನವನ್ನು ೪ ಭಾಗಗಳಾಗಿ ವಿಂಗಡಿಸಿ ಅದರಲ್ಲಿ ಒಂದನ್ನು ಮತ್ತೆ ಮೈಸೂರು ವಂಶೀಯರಿಗೆ ಕೊಡಲು ನಿರ್ಧರಿಸಿದರಿಂದಾಗಿ ಒಡೆಯರ ಆಳ್ವಿಕೆಯು ಮತ್ತೆ ಅಸ್ತಿತ್ವಕ್ಕೆ ಬಂದಿತು. ತದನಂತರ ಆರು ವರ್ಷದ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನವೇರಿದನು. ಕೃಷ್ಣರಾಜನು ಇನ್ನೂ ಬಾಲ್ಯಾವ್ಯವಸ್ಥೆಯಲ್ಲಿದ್ದುದರಿಂದ ದಿವಾನ್ ಪೂರ್ಣಯ್ಯನವರೇ ರಾಜ ಪ್ರತಿನಿಧಿಯಾಗಿ ಆಡಳಿತ ನಿರ್ವಹಿಸುತ್ತಿದ್ದರು. ನಂತರದ ಆಳ್ವಿಕೆಯ ಕಾಲವನ್ನು ಈ ಕೆಳಗಿನ ನಾಲ್ಕು ಭಾಗಗಳಲ್ಲಿ ಗಮನಿಸಬಹುದು.

೧. ೧೭೯೯ ರಿಂದ ೧೮೧೧ರವರೆಗೆ ಪೂರ್ಣಯ್ಯನವರ ರೀಜೆನ್ಸಿ ಆಡಳಿತ - ಒಟ್ಟು ೧೨ ವರ್ಷಗಳು.

೨. ೧೮೧೧ ರಿಂದ ೧೮೩೧ರ ವರೆಗಿನ ೨೦ ವರ್ಷಗಳು ಮುಮ್ಮಡಿ ಕೃಷ್ಣರಾಜ ಒಡೆಯರ್ ರವರ ಆಡಳಿತ,

೩. ೧೮೩೦ ರಿಂದ ೧೮೬೭ ರವರೆಗಿನ ೩೬ ವರ್ಷಗಳ ಬ್ರಿಟಿಷ್ ಕಮೀಷನರ ಆಳ್ವಿಕೆ

೪. ೧೮೬೭ ರಿಂದ ಒಂದು ವರ್ಷ ರಾಜ್ಯ ಮತ್ತೆ ಲಭ್ಯವಾದರು ಸಹ ಅರಸರ ಆಡಳಿತವಿಲ್ಲದ ಕಾಲ

ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದು. ಮುಮ್ಮಡಿ ಕೃಷ್ಣರಾಜರು ಬಾಲಕರಾಗಿದ್ದಾಗಿನಿಂದಲೂ ಧೀರ ಗಂಭೀರದ ವ್ಯಕ್ತಿಯಾಗಿದ್ದರೆಂದು ಸಮಕಾಲೀನ ಬರಹಗಳು ವ್ಯಕ್ತಪಡಿಸುತ್ತವೆ. ಅಂದು ಅಸ್ಥಾನಕ್ಕೆ ಭೇಟಿ ನೀಡಿದ ಡಾ. ಬುಖನನ್ ಹ್ಯಾಮಿಲ್ಟನ್ ರವರು ಈ ಅಭಿಪ್ರಾಯವನ್ನು ತಮ್ಮ ಪ್ರವಾಸಿಕಥನದಲ್ಲಿ ಸಂಕ್ಷಿಪ್ತವಾಗಿ ವ್ಯಕ್ತಪಡಿಸುತ್ತಾರೆ. ಈ ಅವಧಿಯಲ್ಲಿಯೂ ಒಡೆಯರು ತಮ್ಮ ವಾಸದ ಮನೆಯು ಮೈಸೂರಿನಲ್ಲಿ ಇದ್ದರೂ ಶ್ರೀರಂಗಪಟ್ಟಣವೇ ಸಂಸ್ಥಾನದ ರಾಜಧಾನಿಯನ್ನಾಗಿ ಮುಂದುವರಿಸಿಕೊಂಡು ಬಂದಿದ್ದರು. ಈ ಸಮಯದಲ್ಲಿ ಮೈಸೂರು ಅರಮನೆ ಮತ್ತು ಕೋಟೆಯನ್ನು ಪೂರ್ಣಯ್ಯನು ೧೭೯೯ - ೧೮೦೦ರಲ್ಲಿ ಪುನರ್ರಚಿಸಿದರಿಂದಾಗಿ ಹಾಗೂ ಇದೇ ಸಂದರ್ಭದಲ್ಲಿ ಕರ್ನಲ್ ವಿಲ್ಕ್ಸ್ ಕ್ರಮವಾಗಿ ಶ್ರೀರಂಗಪಟ್ಟಣವನ್ನು ಬಿಟ್ಟು ಮೈಸೂರನ್ನೇ ರಾಜಧಾನಿಯಾಗಿ ಮಾಡಿಕೊಳ್ಳುವುದು ಸೂಕ್ತವೆಂದು ಗವರ್ನರ್ ಜನಲ್‌ಗೆ ಶಿಫಾರಸು ಮಾಡಿದ ಪರಿಣಾಮದಿಂದಾಗಿ ಮೈಸೂರಿನಲ್ಲಿ ಅರಮನೆ ಮತ್ತು ಆಡಳಿತ (ಮರದ ಅರಮನೆ) ಕಛೇರಿಗಳನ್ನು ರಚಿಸಲಾಯಿತು. ೧೮೧೧ರಿಂದ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ನೇರವಾಗಿ ಆಡಳಿತ ನಡೆಸಲು ಪ್ರಾರಂಭಿಸಿದರು. ಪೂರ್ಣಯ್ಯ ಸಂಪೂರ್ಣವಾಗಿ ನಿವೃತ್ತವಾಗಿ ಯಳಂದೂರನ್ನು ಜಾಹಗೀರ್ ಆಗಿ ಒಡೆಯರಿಂದ ಪಡೆದು ಅಲ್ಲಿಯೇ ಅಂತಿಮ ಜೀವನ ಕಳೆದನು.

೧೮೧೧ ರಿಂದ ೧೮೨೪ರವರೆಗೆ ಮುಮ್ಮಡಿಯವರು ಆಂಗ್ಲರೊಂದಿಗೆ ಸಹಕರಿಸಲು ಅನೇಕ ಯುದ್ಧಗಳಲ್ಲಿ ತೊಡಗಬೇಕಾಯಿತು. ಅವುಗಳಲ್ಲಿ ಪಿಂಡಾರೆ ಯುದ್ಧ, ಪೇಶ್ವೆ ಬಾಜೀರಾಯನೊಂದಿಗೆ ನಡೆದ ಕದನ, ಕಿತ್ತೂರಿನ ಸಮರಗಳಲ್ಲಿಯೂ ಒಡೆಯರ ಅಶ್ವಸೇನೆ ಹೋರಾಟ ನಡೆಸಬೇಕಾಯಿತು. ಇದಕ್ಕೆ ಬ್ರಿಟಿಷರ ಮೆಚ್ಚಿಗೆಯೂ ಲಭಿಸಿತ್ತು. ತದನಂತರ ೧೮೩೦ರಲ್ಲಿ ಸಂಭವಿಸಿದ ನಗರ ಪ್ರಮುಖವಾದದ್ದು. ಸದರಮಲ್ಲನೆಂಬುವನು ಬೂದಿ ಬಸಪ್ಪನೆಂದು ಹೆಸರನ್ನು ಬದಲಾಯಿಸಿಕೊಂಡು ನಾನು ಇಕ್ಕೇರಿ ಅರಸರ ವಂಶದವನೆಂದು ಸಂಸ್ಥಾನದಲ್ಲಿ ರೈತರನ್ನು ಒಂದು ಮಾಡಿಕೊಂಡು ಬೃಹತ್ ದಂಗೆಯನ್ನು ಎಬ್ಬಿಸಿದನು. ಮುಮ್ಮಡಿಯವರು ಈ ದಂಗೆಯನ್ನು ಪ್ರಬಲವಾಗಿಯೇ ಅಡಗಿಸಿದವರಾದರೂ ಆಂಗ್ಲರು ಮುಮ್ಮಡಿಯವರು ದುರ್ಬಲ ಹಾಗೂ ಅಸಮರ್ಥ ರಾಜರೆಂದು ನಿರ್ಧಾರಕ್ಕೆ ಬಂದು ಅಂದಿನ ಗವರ್ನರ್ ಜನರಲ್‌ರಾಗಿದ್ದ ಲಾಡ್ ವಿಲಿಯಂ ಬೆಂಟಿಂಕನು ಮೈಸೂರು ಆಡಳಿತವನ್ನು ಬ್ರಿಟಿಷರೇ ವಹಿಸಿಕೊಳ್ಳುವುದು ಉತ್ತಮ ಎಂದು ಕೇಂದ್ರಕ್ಕೆ ಶಿಪಾರಸ್ಸು ಮಾಡಿದನು. ಇದರಿಂದಾಗಿ ೧೮೩೧ರಲ್ಲಿ ಮೈಸೂರು ಇಂಗ್ಲೆಂಡಿನ ಅಧಿಕಾರಿಗಳ ವಶವಾಯಿತು. ತಾನು ಕೈಗೊಂಡ ಕ್ರಮ ತಪ್ಪೆಂದು ಬೆಂಟಿಂಗ್ ನು ಮೂರೇ ವರ್ಷಗಳಲ್ಲಿ ಅರಿತುಕೊಂಡು ಮತ್ತೆ ಮೈಸೂರು ಒಡೆಯರ ವಂಶದವರಿಗೆ ಸಂಸ್ಥಾನವನ್ನು ವಹಿಸುವಂತೆ ಶಿಪಾರಸ್ಸು ಪತ್ರ ಬರೆದರೂ ಸಹ ಅದು ೩೬ ವರ್ಷಗಳ ವರೆಗೆ ಮುಂದುವರೆಯಿತು. ಅದರೇನಂತೆ ಈ ೩೬ ವರ್ಷಗಳಲ್ಲಿ ಅಂಗ್ಲ ಕಮೀಷನರುಗಳ ಆಡಳಿತದಿಂದಾಗಿ ಮೈಸೂರು ಆಡಳಿತ ವ್ಯವಸ್ಥೆಗೆ ಒಂದು ಆಧುನಿಕ ಸ್ವರೂಪ ಬಂದಿತು. ಆಂಗ್ಲ ದಿನಾಂಕಗಳನ್ನು ಬಳಸುವ ಪದ್ಧತಿ, ನ್ಯಾಯಾಲಯಗಳು, ಅನೇಕ ಕಾನೂನು ಕಟ್ಟಳೆಗಳು, ಶಿಕ್ಷಣ, ಇಂಗ್ಲಿಷ್ ಶಿಕ್ಷಣ ಮತ್ತು ಲೋಕೋಪಯೋಗಿ ಇಲಾಖೆಗಳು ಅಸ್ತಿತ್ವಕ್ಕೆ ಬಂದವು. ಸರಕಾರಿ ಆಡಳಿತ ಇಲಾಖೆಗಳೆಲ್ಲ ಮೈಸೂರಿನಿಂದ ಬೆಂಗಳೂರಿಗೆ ಬಂದು ಬೆಂಗಳೂರು ಆಡಳಿತದ ರಾಜಧಾನಿಯಾಗಿ ಕಂಗೊಳಿಸಿತು. ದಂಡಿನ ಪ್ರದೇಶ ರಚನೆಯಾಗಿ ಬೆಳೆದದ್ದು ಈ ಸಂದರ್ಭದಲ್ಲಿಯೇ ಆದರೆ ಬ್ರಿಟಿಷರು ಈ ಸಮಯದಲ್ಲಿ ಮೈಸೂರು ಸಂಸ್ಥಾನವನ್ನು ಮದರಾಸು ಪ್ರಾಂತ್ಯದಲ್ಲಿ ವಿಲೀನಗೊಳಿಸಬೇಕೆಂಬ ಪ್ರಯತ್ನವನ್ನು ಪದಚ್ಯುತಿಗೊಂಡಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ಪ್ರಬಲವಾಗಿ ವಿರೋಧಿಸಿದರು, ಇಂಥ ಬದಲಾವಣೆಯಿಂದ ಮೈಸೂರಿನ ಪ್ರಜೆಗಳ ಹಿತರಕ್ಷಣೆ ಆಗದು. ಇದು ನನ್ನ ಮತ್ತು ನನ್ನ ವರ್ಣೀಯರ ಹಕ್ಕನ್ನು ಶಾಶ್ವತವಾಗಿ ಇಲ್ಲದಂತೆ ಮಾಡುವ ಪ್ರಯತ್ನ ಎಂದು ತೀವ್ರವಾಗಿ ಪ್ರತಿಭಟಿಸಿದರು. ಇದಕ್ಕೆ ಅಂದಿನ ಬ್ರಿಟಿಷ್ ಗವರ್ನರ್ ಆಗಿದ್ದ ಲಾಡ್ ಕ್ಯಾನಿಂಗ್ ಬೆಂಬಲಿಸಿ ವಿಲೀನದ ವಿಷಯವನ್ನು ಕೈಬಿಟ್ಟರು. ನಿಜ ಹೇಳಬೇಕೆಂದರೆ ಮುಮ್ಮಡಿಯವರು ಅಂದು ಈ ದೃಢ ನಿರ್ಧಾರವನ್ನು ತೆಗೆದುಕೊಳ್ಳದೇ ಕೇವಲ ಸ್ವಾರ್ಥದಿಂದ ಭೋಗ ಜೀವನ ಮಾಡುತ್ತಾ ಜೀವನ ಮಾಡುತ್ತಿದ್ದರೆ ಇಂದು ಕರ್ನಾಟಕ ರಾಜ್ಯ ಎಂಬುವುದಾಗಲಿ, ಕನ್ನಡ ಭಾಷೆಯಾಗಲಿ ಇರುತ್ತಿತ್ತೆಂದು ಹೇಳಲು ಸಾಧ್ಯವಾಗದು. ರಾಜ್ಯಾಡಳಿತವು ಮತ್ತೆ ಮೈಸೂರು ವಂಶದವರಿಗೆ ದೊರಕಿ ಮುಮ್ಮಡಿಯವರು ಮಹಾರಾಜರಾಗಿ ತಮಗೆ ತಮ್ಮ ವಂಶಸ್ಥರಿಗೆ ಕನ್ನಡ ನಾಡು ದೊರಕಿದ ಸವಿನೆನಪಿನ ಒಂದೇ ವರ್ಷದ ಅವಧಿಯಲ್ಲಿ ನಿಧನರಾದರು.

ಇವರ ನಂತರ ಅವರ ದತ್ತು ಪುತ್ರ ೧೦ನೇ ಚಾಮರಾಜ ಒಡೆಯರವರು ಸಂಸ್ಥಾನದ ಮಹಾರಾಜರಾದರು. ಇಂದಿನಿಂದ ಆಧುನಿಕ ಮೈಸೂರಿನ ಇತಿಹಾಸ ಪ್ರಾರಂಭವಾಗುತ್ತದೆ. ಒಡೆಯರ್‌ರವರು ಬಾಲಕರಾಗಿದ್ದ ಪ್ರಯುಕ್ತ ಬ್ರಿಟಿಷ ಸರ್ಕಾರವೇ ಆಡಳಿತದ ನಿರ್ವಹಣೆಯ ಹೊಣೆ ಹೊತ್ತುಕೊಂಡು ಲಾಡ್ ಗಾರ್ಡನ್ ರವರನ್ನು ರಕ್ಷಕನಾಗಿ ನೇಮಿಸಲಾಯಿತು.

೧೮೮೧ ಮಾಚ್ ನಲ್ಲಿ ೧೦ನೇ ಚಾಮರಾಜ ಒಡೆಯರವರು ಪ್ರಾಪ್ತ ವಯಸ್ಕರಾಗಿ ರಾಜ್ಯಾಡಳಿತವನ್ನು ತಾವೇ ವಹಿಸಿಕೊಂಡು ಮುಂದಿನ ೫೫ ವರ್ಷಗಳ ಕಾಲ ಮೈಸೂರು ನಾಡು ಮೂಲವಂಶದವರ ಕೈಗೆ ಸಂಪೂರ್ಣವಾಗಿ ದೊರಕಿ ದೇಶದಲ್ಲಿಯೇ ಅಲ್ಲದೆ ಪ್ರಪಂಚದಲ್ಲಿಯೇ ಅನೇಕ ಅಭಿವೃದ್ಧಿ ಕೆಲಸಗಳಿಂದಾಗಿ ಮಾದರಿ ರಾಜ್ಯ ಎಂಬ ಹೆಸರಿಗೆ ಪಾತ್ರವಾಯಿತು. ಇದಕ್ಕೆ ಮೂಲ ಪುರುಷರೆಂದರೆ ೧೦ನೇ ಚಾಮರಾಜ ಒಡಯರ್, ನವ ಮೈಸೂರಿನ ನಿರ್ಮಾಣದ ಶಿಲ್ಪಿ ಎಂದೆನಿಸಿಕೊಂಡಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಹಾಗೂ ಪ್ರಸಿದ್ಧ ದಿವಾನರುಗಳು ಮೂಲ ಕಾರಣಕರ್ತರಾಗಿರುವುದು ಕಂಡುಬರುತ್ತದೆ.

ಸುಮಾರು ೫೭೦ ವರ್ಷಗಳ ಕಾಲ ದೇಶಿಯ ಹಾಗೂ ವಿದೇಶಿಯರ ದಾಳಿಗಳ ನಡುವೆಯೂ ಅಧಿಕಾರ ವಂಚಿತರಾಗಿಯೂ ವೈಭವದ ಆಡಳಿತ ನಡೆಸಿದ ಮೈಸೂರು ಒಡೆಯರ ಸಮಗ್ರ ವಂಶಾವಳಿಯನ್ನು ಇಂದಿಗೂ ಸುರಕ್ಷಿತವಾಗಿರುವ ದಾಖಲೆಗಳಿಂದ ಸಂಕ್ಷಿಪ್ತವಾಗಿ

ತಿಳಿಯಬಹುದಾಗಿದೆ. ಅರಮನೆಯ ಸರಸ್ವತಿ ಪುಸ್ತಕ ಭಂಡಾರದಲ್ಲಿ ಇರುವ ದಾಖಲೆಗಳಲ್ಲಿ ಕಂಡುಬರುವ ಮೈಸೂರನ್ನಾಳಿದ ಒಡೆಯರ ಮನೆತನದ ಅರಸರನ್ನು ಕ್ರಮಬದ್ಧವಾಗಿ ಗುರುತಿಸುವುದಾದರೆ.

| **ಒಡೆಯರ್ ರವರುಗಳು** | **ಆಳ್ವಿಕೆ ನಡೆಸಿದ ಕಾಲ** |
|---|---|
| ೧. ಯದುರಾಯರು | ೧೩೯೯ - ೧೪೨೩ |
| ೨. ಹಿರೇ ಬೆಟ್ಟದ ಚಾಮರಾಜ ಒಡೆಯರ್ - ೧ | ೧೪೨೩ - ೧೪೫೮ |
| ೩. ತಿಮ್ಮರಾಜ ಒಡೆಯರ್ - ೧ | ೧೪೫೮ - ೧೪೭೮ |
| ೪. ಹಿರೇ ಚಾಮರಾಜ ಒಡೆಯರ್ - ೨ | ೧೪೭೮ - ೧೫೧೩ |
| ೫. ಬೆಟ್ಟದ ಚಾಮರಾಜ ಒಡೆಯರ್ - ೩ | ೧೫೧೩ - ೧೫೫೨ |
| ೬. ತಿಮ್ಮರಾಜ ಒಡೆಯರ್ - ೨ | ೧೫೫೨ - ೧೫೭೧ |
| ೭. ಬೋಳ ಚಾಮರಾಜ ಒಡೆಯರ್ - ೪ | ೧೪೭೨ - ೧೫೭೬ |
| ೮. ಬೆಟ್ಟದ ಚಾಮರಾಜ ಒಡೆಯರ್ - ೫ | ೧೫೭೬ - ೧೫೭೮ |
| ೯. ರಾಜ ಒಡೆಯರ್ - ೧ | ೧೫೭೮ - ೧೬೪೬ |
| ೧೦. ಚಾಮರಾಜ ಒಡೆಯರ್ - ೬ | ೧೬೧೭ - ೧೬೩೭ |
| ೧೧. ಇಮ್ಮಡಿರಾಜ ಒಡೆಯರ್ - ೨ | ೧೬೩೭ - ೧೬೩೮ |
| ೧೨. ರಣಧೀರ ಕಂಠೀರವ ನರಸರಾಜ ಒಡೆಯರ್ | ೧೬೩೭ - ೧೬೫೯ |
| ೧೩. ದೊಡ್ಡ ದೇವರಾಜ ಒಡೆಯರ್ | ೧೬೫೮ - ೧೬೭೨ |
| ೧೪. ಚಿಕ್ಕ ದೇವರಾಜ ಒಡೆಯರ್ | ೧೬೭೨ - ೧೭೦೪ |
| ೧೫. ಕಂಠೀರವ ಒಡೆಯರ್ | ೧೭೦೪ - ೧೭೧೩ |
| ೧೬. ದೊಡ್ಡ ಕೃಷ್ಣರಾಜ ಒಡೆಯರ್ - ೧ | ೧೭೧೩ - ೧೭೩೧ |
| ೧೭. ಚಾಮರಾಜ ಒಡೆಯರ್ - ೭ | ೧೭೩೧ - ೧೭೩೪ |
| ೧೮. ಕೃಷ್ಣರಾಜ ಒಡೆಯರ್ - ೨ | ೧೭೩೪ - ೧೭೬೬ |
| ೧೯. ನಂಜರಾಜ ಒಡೆಯರ್ | ೧೭೬೬ - ೧೭೭೦ |
| ೨೦. ಬೆಟ್ಟದ ಚಾಮರಾಜ ಒಡೆಯರ್ - ೮ | ೧೭೭೦ - ೧೭೭೬ |
| ೨೧. ಖಾಸಾ ಚಾಮರಾಜ ಒಡೆಯರ್ - ೯ | ೧೭೭೬ - ೧೭೯೬ |
| ೨೨. ಮುಮ್ಮಡಿ ಕೃಷ್ಣರಾಜ ಒಡೆಯರ್ | ೧೭೯೯ - ೧೮೬೮ |
| ೨೩. ಚಾಮರಾಜ ಒಡೆಯರ್ - ೧೦ | ೧೮೬೮ - ೧೮೯೪ |
| ೨೪. ನಾಲ್ವಡಿ ಕೃಷ್ಣರಾಜ ಒಡೆಯರ್ | ೧೮೯೪ - ೧೯೪೦ |
| ೨೫. ಜಯ ಚಾಮರಾಜ ಒಡೆಯರ್ | ೧೯೪೦ - ೧೯೪೭ |

ಒಡೆಯರ ಚರಿತ್ರೆ ಎಷ್ಟೇ ವಿಶಾಲವಾಗಿದ್ದರೂ ಸಹ ಅವರ ಮೂಲೋತ್ಪತ್ತಿ ಸ್ಪಷ್ಟವಾಗಿಲ್ಲ. ಮೌಖಿಕವಾಗಿ ದೊರೆಕುವ ಆಧಾರಗಳು ಸ್ವಾರಸ್ಯ ಪೂರ್ಣವಾಗಿವೆ. ಹದಿನಾಡಿನ ರಾಜ ಚಾಮರಾಜನು ೧೩೯೯ರವರೆಗೆ ರಾಜ್ಯವಾಳಿ ಮರಣ ಹೊಂದಿದನು. ಅವನ ಮಡದಿ ದೇವರಾಜಮ್ಮಣ್ಣಿ ಮತ್ತು ಮಗಳು ಚಿಕ್ಕದೇವರಸಿಯರಿಗೆ ಪಕ್ಕದ ಕಾರುಗಳ್ಳಿಯ ಪಾಳೆಯಗಾರರಾದ ಮಾರನಾಯಕನು ತೊಂದರೆಯುಂಟು ಮಾಡಿದುದಲ್ಲದೆ ಚಿಕ್ಕದೇವ ರಸಿಯನ್ನು ತನಗೆ ಕೊಟ್ಟು ಮದುವೆ ಮಾಡಬೇಕೆಂದು ಪೀಡಿಸಿದನು.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿದ್ದಾಗ ದ್ವಾರಕ ನಗರದಿಂದ ಬಂದಿದ್ದ ಯದುರಾಯ ಮತ್ತು ಕೃಷ್ಣರಾಯರೆಂಬ ಸಹೋದರರರು ದುಷ್ಟ ಮಾರನಾಯಕನನ್ನು ಕೊಂದು ಚಾಮರಾಜನ ಕುಟುಂಬದವರನ್ನು ರಕ್ಷಿಸಿದರು. ಇದರಿಂದ ಸಂತೋಷಗೊಂಡ ದೇವಜಮ್ಮಣಿಯವರು ಮಗಳು ಚಿಕ್ಕದೇವರಸಿಯನ್ನು ಯದುರಾಯರಿಗೆ ವಿವಾಹ ಮಾಡಿಕೊಟ್ಟಿದಲ್ಲದೆ ರಾಜ್ಯವನ್ನು ನೀಡಿ ಈ ಹೊಸ ಸಿಂಹಾಸನಾಧಿಪತಿಗೆ 'ಒಡೆಯರ್' ಎಂದು ನಾಮಕರಣ ಮಾಡಿದರು. ಹೀಗೆ ಯದುರಾಯರಿಗೆ ಪ್ರಾಪ್ತವಾದ ಒಡೆಯರ್ ಎಂಬ ಬಿರುದೇ ತರುವಾಯ ಬಂದ ಎಲ್ಲ ಅರಸರಿಗೂ ಅನ್ವಯವಾಯಿತು.

***

## ೨. ಆಡಳಿತ ಪದ್ಧತಿ

ಮೈಸೂರು ಸಂಸ್ಥಾನವು ಮೂಲತಃ ಕೃಷಿಯನ್ನು ಅಧಾರವಾಗಿಟ್ಟುಕೊಂಡು ಬೆಳೆದುಬಂದ ಪ್ರದೇಶ. ಈ ದೃಷ್ಟಿಯಿಂದ ನೋಡುವುದಾದರೆ ಯಾವುದೇ ರಾಜಮನೆತನದ ಸರ್ಕಾರವೂ ತನ್ನ ಆಡಳಿತ ವ್ಯವಸ್ಥೆಯಲ್ಲಿ ವಿಕೇಂದ್ರೀಕರಣದ ಕಡೆಗೆ ಸಂಪೂರ್ಣವಾಗಿ ವಾಲುವುದು ಸಹಜವಾಗಿಯೇ ಇರುತ್ತದೆ. ಮೈಸೂರು ಸಂಸ್ಥಾನವು ಪ್ರಾರಂಭದಲ್ಲಿ ವಿಜಯನಗರದರಸರ ಅಧೀನವಾಗಿದ್ದು ನಂತರ ಬ್ರಿಟಿಷರಿಗೆ ಸಾಮಂತರಾಗಿ ಸುಮಾರು ೬೦೦ ವರ್ಷಗಳ ಸುದೀರ್ಘವಾಗಿ ಆಳ್ವಿಕೆಯನ್ನು ನಡೆಸಿಕೊಂಡು ಬಂದು, ಕೊನೆಯ ೭೦ ವರ್ಷಗಳ ಅವರ ಆಳ್ವಿಕೆಯ ಸಂಸ್ಥಾನವನ್ನು ವಿಕೇಂದ್ರೀಕರಣದ ಸರ್ಕಾರ ಅಥವಾ ಮಾದರಿ ಸಂಸ್ಥಾನ ಎಂದು ಕರೆಸಿಕೊಳ್ಳುವತ್ತ ಮುನ್ನಡೆದಿತ್ತೆನ್ನಬಹುದು.

ಮೈಸೂರು ಸಂಸ್ಥಾನವು ಹೆಚ್ಚಿನ ಕಾಲಾವಧಿಯನ್ನು ವಿಜಯನಗರ ಸಾಮ್ರಾಜ್ಯದ ಸಾಮಂತವಾಗಿ ಆಳ್ವಿಕೆ ನಡೆಸಿಕೊಂಡು ಬಂದದ್ದಾದರೂ ಸ್ಥಳೀಯ ಹಾಗೂ ಕೇಂದ್ರ ಆಳ್ವಿಕೆಯಲ್ಲಿ ಗ್ರಾಮಗಳು, ಅಗ್ರಹಾರಗಳು, ದೇವಸ್ಥಾನಗಳು ಮತ್ತರು ಮಠಗಳು ಹೆಚ್ಚಿನ ಪ್ರಮಾಣದಲ್ಲಿ ತನ್ನದೆ ಅದಂತಹ ಸ್ವಾಯತ್ತತೆಯನ್ನು ಪಡೆದಿದ್ದವೆಂದೂ ಹೇಳಬಹುದಾಗಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ ನಮ್ಮ ಪೂರ್ವಿಕರು ಹಾಗೂ ರಾಜಮಹಾರಾಜರು ಧಾರ್ಮಿಕ ನಂಬಿಕೆಗಳ ಕಟ್ಟುಪಾಡುಗಳಿಗೆ ತಲೆಬಾಗುತ್ತಿದ್ದ ಹಾಗೂ ಅದರ ಆಧಾರದ ಮೇಲೆ ರಾಜ್ಯಭಾರ ಮಾಡುತ್ತಿದ್ದದ್ದು ಮೂಲ ಕಾರಣವೆಂದು ಹೇಳಬಹುದು. ಮೈಸೂರು ಸಂಸ್ಥಾನದಲ್ಲಿ ಬ್ರಿಟಿಷ್ ಆಡಳಿತ ಪದ್ಧತಿಯ ತನ್ನ ಪ್ರಭಾವವನ್ನು ಬೀರುವುದಕ್ಕೂ ಮುಂಚೆಯೇ, ಈ ಭಾಗದಲ್ಲಿದ್ದ ಗ್ರಾಮಗಳು ಮತ್ತು ಪಟ್ಟಣಗಳಿಗೆ ಸ್ವಯಂ ಆಡಳಿತವನ್ನು ನೀಡಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ರಾಜ್ಯದ ಆಡಳಿತ ಪದ್ಧತಿಯೊಂದು ರೂಪಗೊಂಡಿತ್ತೆಂಬುದನ್ನು ಪಾಶ್ಚಾತ್ಯ ವಿಮರ್ಶಕರು ಸಂಪೂರ್ಣವಾಗಿ ಅಲ್ಲಗಳೆದಿರುವುದು ಕಂಡುಬರುತ್ತದೆ. ಆದರೆ ಸ್ಥಳೀಯ ಇತಿಹಾಸಗಾರರು ಇದನ್ನು ಸಂಪೂರ್ಣವಾಗಿ ಅಲ್ಲಗೆಳೆಯದಿರುವುದು ಕಂಡುಬರುತ್ತದೆ. ಏಕೆಂದರೆ ಪ್ರಾಚೀನ ಕಾಲದಿಂದಲೂ ಈ ಪ್ರದೇಶವನ್ನು ಚೋಳರು, ಪಲ್ಲವರು ಆಳ್ವಿಕೆ ನಡೆಸಿಕೊಂಡು ಬಂದಿದ್ದಾರೆ. ಇವರ ಆಳ್ವಿಕೆಯ ಕಾಲದಲ್ಲಿಯೇ ಈ ಭೂಭಾಗಗಳಲ್ಲಿ ಸ್ಥಳೀಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಸ್ವಯಂ ಆಡಳಿತ ಪದ್ಧತಿಯು ಅಸ್ತಿತ್ವದಲ್ಲಿತ್ತೆಂಬ ಅಭಿಪ್ರಾಯವನ್ನು ಇತಿಹಾಸಗಾರರು ಹಾಗೂ ಚಿಂತಕರು ಹೆಚ್ಚಿನ ಪ್ರಮಾಣದಲ್ಲಿ ಒಪ್ಪಿಕೊಳ್ಳುತ್ತಾರೆ.

೧೩೯೯ ಸುಮಾರಿನಲ್ಲಿ ಸ್ಥಾಪಿಸಲ್ಪಟ್ಟ ಮೈಸೂರು ಸಂಸ್ಥಾನವು ತನ್ನ ಜೀವಿತದ ಮುಕ್ಕಾಲು ಭಾಗ ತಾನು ಸಾಂತ ಸಂಸ್ಥಾನವಾಗಿದ್ದ ವಿಜಯನಗರದರಸರ ಆಡಳಿತ ಪದ್ಧತಿಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿಕೊಂಡು ಬಂದಿತು. ವಿಜಯನಗರದ ಆಳ್ವಿಕೆಯ ರೀತಿ ನೀತಿಗಳೇ ಕೆಲವೇ ಕೆಲವು ಸಣ್ಣ - ಪುಟ್ಟ ಬದಲಾವಣೆಗಳೊಂದಿಗೆ ಮೈಸೂರು ಒಡೆಯರು ರೂಪಿಸಿಕೊಂಡು ಮುಂದುವರೆಸಿಕೊಂಡು ಬಂದವರೆನ್ನಬಹುದು. ಪ್ರಾರಂಭದಲ್ಲಿ ಒಡೆಯರವರು ಗ್ರಾಮಸಭೆಗಳನ್ನು ವಿವಿಧ ಹೆಸರುಗಳಿಂದ ನಿರ್ಮಿಸಿ, ನಂತರ ಅವುಗಳು ಗ್ರಾಮೀಣ ಪ್ರದೇಶದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ವ್ಯವಸ್ಥೆಗೊಳಿಸಿದ್ದರು. ಈ ಹಂತದಲ್ಲಿ ನಾಡು, ಮಹಾನಾಡು, ಗ್ರಾಮಗಳ ನಿರ್ದಿಷ್ಟ ಸಮೂಹಗಳ ಮೇಲೆ ಅಧಿಕಾರ ಪಡೆದು ಸಮಾಜದ ಹಾಗೂ ಸಂಸ್ಥಾನದ ಏಳಿಗೆಗಾಗಿ ಶಕ್ತಿ ಮೀರಿ ಶ್ರಮಿಸಲು ಮುಂದಾಗಿದ್ದರು.

ಮೈಸೂರು ಒಡೆಯರ ಆಡಳಿತ ಪದ್ಧತಿಯನ್ನು ತಿಳಿಯಲು ನಮಗೆ ಶಾಸನಗಳು ಹೆಚ್ಚಿನ ಪ್ರಮಾಣದಲ್ಲಿ ಸಹಕಾರಿಯಾಗಿವೆ. ಒಂದು ದೃಷ್ಟಿಯಲ್ಲಿ ಶಾಸನಗಳು ನಂಬಿಕೆಗೆ ಯೋಗ್ಯವಾದ ಆಧಾರವೆನ್ನಬಹುದು. ಹೆಚ್ಚಾಗಿ ಇವು ತಾಮ್ರದ ತಗಡುಗಳ ಮೇಲೆ ಹಾಗೂ ಬಂಡೆಗಳ ಮೇಲೆ ಬರೆಸಿರುವುದು ಕಂಡುಬರುತ್ತದೆ. ಇವುಗಳಿಂದ ಗ್ರಾಮೀಣ ಪ್ರದೇಶ ಹಾಗೂ ಕೇಂದ್ರ ಸರ್ಕಾರದ ಆಡಳಿತದ ಮುಖಂಡರ ಹೆಸರು ಹಾಗೂ ಅವರ ಸ್ಥಾನಮಾನವನ್ನು ಸೂಚಿಸುವ ಹುದ್ದೆಗಳನ್ನು ಉಲ್ಲೇಖಿಸಿ ರಚಿಸಿರುವುದಾಗಿರುವುದು ಸಂಸ್ಕೃತಿ ಅಧ್ಯಯನಕ್ಕೆ ಹೆಚ್ಚು ಸಹಕಾರಿಯಾಗಿದೆ. ಈ ಶಾಸನಗಳು ಸಂಸ್ಥಾನದ ಆಡಳಿತದ ಉಪ ವಿಭಾಗಗಳಾದ ಸೀಮೆ ಅಥವಾ ನಾಡು, ಗ್ರಾಮ, ಅಗ್ರಹಾರ, ನಗರ ಅಥವಾ ಪಟ್ಟಣ ಮುಂತಾದ ಪ್ರಮುಖ ಆಡಳಿತ ವಿಭಾಗಗಳನ್ನು ತಿಳಿಸುತ್ತವೆ. ಈ ದೃಷ್ಟಿಯಿಂದಲೇ ಖ್ಯಾತ ಶಾಸನತಜ್ಞರಾದ ಬಿ.ಎಲ್. ರೈಸ್ ರವರು ಶಾಸನಗಳು ಆಡಳಿತದ ವಿವಿಧ ಲಕ್ಷಣಗಳನ್ನು ಮತ್ತು ವೈಶಿಷ್ಟ್ಯಗಳನ್ನು ತಿಳಿಸಿಕೊಡುತ್ತವೆ ಎಂದು ಹೇಳಿರುವುದು. ಅವರ ಮಾತನ್ನು ಸತ್ಯವೆಂದೇ ಹೇಳಬಹುದು. ಮತ್ತೊಂದು ಪ್ರಮುಖ ಆಧಾರವೆಂದರೆ ಸಾಹಿತ್ಯಾಧಾರ. ಇವುಗಳಲ್ಲಿ ದೇಶಿಯ ಹಾಗೂ ವಿದೇಶಿಯ ಆಧಾರಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮೈಸೂರು ಸಂಸ್ಥಾನವು ಈ ದೃಷ್ಟಿಯಿಂದ ಅತ್ಯಂತ ಶ್ರೀಮಂತ ಸಂಸ್ಥಾನವೆಂದೇ ಹೇಳಬಹುದು. ಮೈಸೂರು ಒಡೆಯರು ವಿಜಯನಗರದರಸರ ಸಾಮಂತರಾಗಿದ್ದರೆಂದು ಹೇಳವುದರಿಂದ ನಾವು ಈ ಹಂತದಲ್ಲಿ ಹೆಚ್ಚಿನ ಮಾಹಿತಿಗೆ ವಿಜಯನಗರದ ಸಾಮ್ರಾಜ್ಯದ ಸಾಹಿತ್ಯಾಧಾರಗಳ ಕಡೆಗೂ ಗಮನಹರಿಸುವುದು ಉತ್ತಮವೆನ್ನಿಸುತ್ತದೆ. ಅಮುಕ್ತಮಾಲ್ಯದ ಕೃತಿಯ ಸಂಪೂರ್ಣ ಭಾಗವು ರಾಜ, ಯುರಾಜ ಹಾಗೂ ಮಂತ್ರಿಗಳು ಸಾಮ್ರಾಜ್ಯವನ್ನು ಆಳ್ವಿಕೆ ನಡೆಸುವ ರೀತಿ ನೀತಿಗಳನ್ನು ತಿಳಿಸುವ ಒಂದು ಗ್ರಂಥವಾಗಿದೆ. ಈ ಆಧಾರಗಳನ್ನು ಪ್ರಾರಂಭದಲ್ಲಿ ಮೈಸೂರು ಒಡೆಯರೂ ಅಳವಡಿಸಿ, ಮುನ್ನಡೆದುಕೊಂಡು ಬಂದರೆನ್ನಬಹುದು ಇದಕ್ಕೆ ಸಾಕ್ಷಿ ಎಂಬಂತೆ ತಿರುಮಲಾರ್ಯನ ಕರ್ಣ ವೃತ್ತಾಂತ ಕಥೆ, ವಿರೂಪಾಕ್ಷ ಕವಿಯ ವಾಲ್ಮೀಕಿ ರಾಮಾಯಣದ ಕನ್ನಡ ಟೀಕೆ ಮತ್ತು ಬ್ರಹ್ಮೋತ್ತರ ಖಂಡದ ಟೀಕೆ, ಭಾರತಿನಂಜ ಕವಿಯ ಕಂಠೀರವ ನರಸರಾಜ ವಿಜಯ, ಚಿಕ್ಕದೇವರಾಜ ಒಡೆಯರವರ ಗೀತಗೋಪಾಲ ಭಾಗವತ, ಶೇಷಧರ್ಮ, ಭಾರತ, ಬಿನ್ನಪ, ಗ್ರಂಥಗಳು ಹಾಗೂ ಸಂಚಿ ಹೊನ್ನಮ್ಮನ ಹದಿಬದೆಯಧರ್ಮ, ತಿರುಮಲಾರ್ಯನ ಅಪ್ರತಿಮ ವೀರಚರಿತೆ, ಚಿಕ್ಕದೇವರಾಜ ವಿಜಯ, ಚಿಕ್ಕದೇವರಾಜ ವಂಶಾವಳಿ, ಚಿಕ್ಕದೇವರಾಜ ಶತಕ ಗ್ರಂಥಗಳು ಬಹು ಉಪಯೋಗವಾಗಿವೆ. ಇತ್ತೀಚೆಗೆ ಪ್ರಕಟವಾದ ಬಿ.ಎಂ ಶ್ರಿಯವರ ೧೯೨೮ರಲ್ಲಿನ ರಾಜಭಕ್ತಿ ಮುಕ್ತಾವಳಿ, ಎಂ.ಶಿಂಗ್ರಯ್ಯನವರು ೧೯೧೮ರಲ್ಲಿ ಬರೆದು ಪ್ರಕಟಿಸಿದ ಮೈಸೂರನ್ನು ಆಳಿದ ಮಹಾಸ್ವಾಮಿಯವರಾದ ನಾಲ್ವಡಿ ಕೃಷ್ಣರಾಜ ಒಡೆಯರವರು ಹಾಗೂ ಶ್ರೀನಾಥ ಎಂಬುವರು ೧೯೩೬ರಲ್ಲಿ ಪ್ರಕಟಿಸಿದ ನಾಲ್ವಡಿ ಕೃಷ್ಣರಾಜನ ಮೈಸೂರು ಎಂಬ ಚಿಕ್ಕ ಪುಸ್ತಕದಿಂದ ತಿಳಿಯಬಹುದು. ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಜೀವನ ಚರಿತ್ರೆಯಾಗಿರುವ ಸಿ.ಕೆ ವೆಂಕಟರಾಮಯ್ಯನವರ ಆಳಿದ ಮಹಾಸ್ವಾಮಿಯವರು ಎಂಬ ಪುಸ್ತಕ ೧೯೪೧ರಲ್ಲಿ ಪ್ರಕಟವಾಯಿತು. ಈ ಬೃಹತ್ ಕೃತಿಯು ಅಂದಿನ ಆಡಳಿತ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಯಲು ಸಹಕರಿಸುತ್ತದೆ. ಸಿ. ಹಯವದನರಾವ್ ರವರ “Mysore Gezzettear” ಈ ಹಂತದಲ್ಲಿ ಉತ್ತಮ ಇಂಗ್ಲಿಷ್ ಗ್ರಂಥವಾಗಿದೆ.

ಆಡಳಿತದ ಹಂತದಲ್ಲಿ ಕೇಂದ್ರ ಸರ್ಕಾರವು ಪ್ರಮುಖ ಸ್ಥಾನದಲ್ಲಿತ್ತು. ಅಂದರೆ ಈ ಸರ್ಕಾರದ ನಾಯಕ ರಾಜ, ರಾಜತ್ವವು ಸಂಪೂರ್ಣವಾಗಿ ಸಂಸ್ಥಾನದ ಆಡಳಿತವನ್ನೇ ತನ್ನ ಕೈಯಲ್ಲಿಟ್ಟುಕೊಂಡಿತ್ತೆನ್ನಬಹುದು. ರಾಜನ ಪಟ್ಟಾಭಿಷೇಕ ಮಹೋತ್ಸವವನ್ನು ವಿಧಿವತ್ತಾಗಿ ವೈಭವದಿಂದ ಆಚರಿಸಲಾಗುತ್ತಿತ್ತು. ಈ ದೃಷ್ಟಿಯಿಂದ ರಾಜನಿಗೆ ಸಂಸ್ಥಾನದ ಆಳ್ವಿಕೆ ನಡೆಸಲು ನ್ಯಾಯಬದ್ಧವಾದ ಅಧಿಕಾರ ದೊರಕುವಂತಾಗುತ್ತಿತ್ತು. ರಾಜನ ಪಟ್ಟಾಭಿಷೇಕ ಮಹೋತ್ಸವದಲ್ಲಿ ಸಂಸ್ಥಾನದ ಅಧಿಕಾರಿಗಳು, ಸಾಮಂತ ಪಾಳ್ಯಗಾರರು, ಸಮಾಜದಲ್ಲಿನ ಪ್ರಮುಖ ಮುಖಂಡರು, ಧಾರ್ಮಿಕ ಮುಖಂಡರು ಹಾಜರಿರುತ್ತಿದ್ದರು. ಮೈಸೂರಿನ ರಾಜರು ತಮ್ಮ ನಂತರ ಸಂಸ್ಥಾನದ ಆಡಳಿತದ ಮುಂಚೂಣಿಯಲ್ಲಿಯೇ ತಮ್ಮ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳುತ್ತಿದ್ದರು. ಈ ಉತ್ತರಾಧಿಕಾರಿಗೆ ಯುವರಾಜ ಎಂದು ಪಟ್ಟಾಭಿಷೇಕ ಬಮಾಡುತ್ತಿದ್ದರು. ಇಮ್ಮಡಿ ರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರ ಆಳ್ವಿಕೆಯಲ್ಲಿ ದೊಡ್ಡ ದೇವರಾಜ ಒಡೆಯರವರು ಯುವರಾಜರಾಗಿ ಕಾರ್ಯನಿರ್ವಹಿಸಿದ್ದಾರೆ. ನಂತರ ಆಧುನಿಕ ಮೈಸೂರಿನ ಇತಿಹಾಸದಲ್ಲಿ ಇದು ಹೆಚ್ಚಾಗಿ ಜಾರಿಯಲ್ಲಿ ಕಂಡುಬರುತ್ತದೆ ಈ ಪದ್ಧತಿಯಲ್ಲಿ ಅರಸನ ಪುತ್ರನನ್ನು ಯುವರಾಜನನ್ನಾಗಿ ನೇಮಿಸುವ ಪದ್ಧತಿ ರೂಢಿಯಲ್ಲಿತ್ತು. ಅರಸರಿಗೆ ಗಂಡುಮಕ್ಕಳ ಸಂತಾನವಿಲ್ಲದಿದ್ದ ಪಕ್ಷದಲ್ಲಿ ಅವರ ರಕ್ತ ಸಂಬಂಧಿಗಳೊಬ್ಬನನ್ನು ದತ್ತು

ತೆಗೆದುಕೊಂಡು ಅವನನ್ನು ಯುವರಾಜನನ್ನಾಗಿ ನೇಮಿಸಿಕೊಳ್ಳಲಾಗುತ್ತಿತ್ತು. ಮೈಸೂರು ಒಡೆಯರು ದತ್ತು ಮಕ್ಕಳಿಗೆ ಪಣ ಕಟ್ಟಿರುವುದರಲ್ಲಿ ಮೊದಲಿಗರಾಗಿದ್ದಾರೆ ಎನ್ನಬಹುದು.

ಮೈಸೂರು ಸಂಸ್ಥಾನದ ಅರಸರುಗಳು ಹೆಚ್ಚಿನ ಪ್ರಮಾಣದಲ್ಲಿ ನಿರಂಕುಶತ್ವವನ್ನು ಪಾಲಿಸುತ್ತಿರಲಿಲ್ಲವೆಂದು ಹೇಳಬಹುದು. ಕಾರಣ ಅವರಿಗೆ ಅವರದೇ ಆದ ಅನೇಕ ಸಂಪ್ರದಾಯ ಬದ್ಧವಾದ ಆಚರಣೆಗಳು ಮನೆಮಾಡಿಕೊಂಡಿದ್ದವು. ಉದಾಹರಣೆಹೆ ಅವರಿಗೆ ಧರ್ಮವು ಅಡ್ಡಿಯಾಗುತ್ತಿತ್ತು. ರಾಜತ್ವವು ಸಂಪೂರ್ಣವಾಗಿ ಧರ್ಮದ ಆಳ್ವಿಕೆಗೆ ಒಳಪಟ್ಟಿತ್ತು. ಅದ್ದರಿಂದ ಧರ್ಮವನ್ನು ಪರಿಪಾಲಿಸುವುದು ರಾಜನ ಪ್ರಮುಖ ಕರ್ತವ್ಯವಾಗಿತ್ತು. ಹಾಗೂ ಸಾರ್ವಜನಿಕ ಅಭಿಪ್ರಾಯ ಮತ್ತು ರೂಢಿಸಂಪ್ರದಾಯಗಳು ರಾಜರ ನಿರಂಕುಶ ಪ್ರಭುತ್ವವನ್ನು ನಡೆಸಲು ಅಡ್ಡಿಪಡಿಸುತ್ತಿದ್ದವು. ಇವುಗಳ ಜೊತೆಗೆ ಮೈಸೂರು ಸಂಸ್ಥಾನದಲ್ಲಿ ವಿವಿಧ ಸಂಘಗಳು ತಲೆ ಎತ್ತಿ ಇವುಗಳ ರೂಢಿಸಿದ ನಿಬಂಧನೆಗಳನ್ನು ರಾಜ ಪರಿಶೀಲಿಸಿ ಜಾರಿಗೆ ತರುವ ಕರ್ತವ್ಯವನ್ನು ಹೊಂದಿದ್ದನು. ಇವುಗಳಲ್ಲಿ ಮುಖ್ಯವಾದ ಸಂಘಗಳೆಂದರೆ ಸಂಘಜೀವನ, ಕಾರ್ಮಿಕ ಸಂಘಗಳು, ವೃತ್ತಿ ಸಂಘಗಳು (ಅವರುಗಳು ಮಾಡುತ್ತಿದ್ದ ವೃತ್ತಿಗೆ ಅನುಗುಣವಾಗಿ ಸಂಘಗಳು) ಹಾಗೂ ಪ್ರಜಾಪ್ರತಿನಿಧಿಗಳ ಸಂಘಗಳು ಹೆಚ್ಚಿನ ಪ್ರಭಾವ ಬೀರುತ್ತಿದ್ದವು. ರಾಜರು ತಮ್ಮ ಸಂಸ್ಥಾನದ ಆಳ್ವಿಕೆಯನ್ನು ಸುಭದ್ರಗೊಳಿಸುವುದಕ್ಕೋಸ್ಕರ ಉತ್ತಮ ಮಂತ್ರಿಮಂಡಲವನ್ನು ಹೊಂದಿರುತ್ತಿದ್ದರು. ಮಂತ್ರಮಂಡಲದಲ್ಲಿ ರಾಜನಿಂದ ನೇಮಿಸಿಕೊಂಡ ಮಂತ್ರಿಗಳು ಮತ್ತು ಸಂಸ್ಥಾನದಲ್ಲಿ ಉತ್ತಮ ವರ್ಗದವರೆಂದು ಹೇಳಿಕೊಳ್ಳುತ್ತಿದ್ದ ಶ್ರೀಮಂತರೂ ಸದಸ್ಯರಾಗಿರುತ್ತಿದ್ದರು. ಸಂಸ್ಥಾನದ ಆಡಳಿತಕ್ಕೆ ಸಂಬಂಧಿಸಿದ ಸಲಹೆ ಸೂಚನೆಗಳನ್ನು ರಾಜ ಮಂತ್ರಿಮಂಡಲದಿಂದ ಪಡೆದುಕೊಳ್ಳುವ ಸಂಪ್ರದಾಯ ರೂಢಿಯಲ್ಲಿದ್ದಿತ್ತು.

ಆಡಳಿತವನ್ನು ಸುಭದ್ರವಾಗಿ ನಡೆಸಿಕೊಂಡು ಬರಲು ಒಡೆಯರವರು ಸಂಸ್ಥಾನವನ್ನು ಸೀಮೆ ಅಥವಾ ನಾಡು ಸ್ಥಳ ಮತ್ತು ಗ್ರಾಮಗಳೆಂದು ವಿಂಗಡಿಸಿಕೊಂಡಿದ್ದರು. ಸಾಮಾನ್ಯವಾಗಿ ಇದು ಚೋಳರ ಕಾಲದಿಂದಲೇ ಬಳವಳಿಯಾಗಿ ಬಂದದ್ದಾಗಿತ್ತು. ರಾಜ ಒಡೆಯರ್ ಕಾಲದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳು ಪ್ರಾರಂಭವಾಯಿತು. ನಂತರ ಗ್ರಾಮೀಣ ಪ್ರದೇಶದ ಆಡಳಿತ ಪದ್ಧತಿಯು ತನ್ನದೆ ಆದ ಒಂದು ಆಡಳಿತ ಭಾಗವನ್ನು ಹೊಂದಲಾರಂಭಿಸಿತ್ತು. ಈ ಹಂತದಲ್ಲಿ ಹಲವು ಗ್ರಾಮಗಳನ್ನು ಸೇರಿಸಿ ಸ್ಥಳ (ಗಡಿಮನೆ) ಎಂದು ಕರೆಯುವ ಪದ್ಧತಿ ಬೆಳೆದು ಬಂದಿತ್ತು. ಹಲವು ಸ್ಥಳಗಳನ್ನು ಒಟ್ಟುಗೂಡಿಸಿ ಸೀಮೆ ಅಥವಾ ನಾಡು (ಹೋಬಳಿ) ಎಂದು ಕರೆಯಲಾಗುತ್ತಿತ್ತು. ಈ ವರ್ಗೀಕರಣವನ್ನು ಇಂದಿಗೂ ನೋಡಬಹುದಾಗಿದೆ. ಉದಾಹರಣೆಗೆ ಕ್ರಿ.ಶ.೧೫೧೭೮ರ ನಂಜನಗೂಡು ತಾಲ್ಲೂಕಿನ ಒಂದು ಶಾಸನವು ಬಳಗುಳದ (ಬೆಳಗೋಳ) ಸಮ್ಮತ್ ಎಂದು ತಿಳಿಸುತ್ತದೆ. ಹಾಗೆಯೇ ಕ್ರಿ.ಶ. ೧೫೩೩ರ ಹಿರಿಯೂರಿನ (ಚಿತ್ರದುರ್ಗ ಜಿಲ್ಲೆ) ಒಂದು ಶಾಸನವು ಧರ್ಮಾಪುರ ಸಮ್ಮತ್ ಎಂದು ದಾಖಲಿಸಿರುವುದು ಕಂಡುಬರುತ್ತದೆ. ಮೇಲೆ ಹೇಳಿದಂತೆ ಇಂದು ಹಲವು ಗ್ರಾಮಗಳನ್ನು ಒಂದುಗೂಡಿಸಿ ಹೋಬಳಿ ಇರುವ ಹಾಗೆ ಅಂದು ಅನೇಕ ಸ್ಥಳಗಳನ್ನು ಸೇರಿಸಿ ಸೀಮೆ ಅಥವಾ ನಾಡುಗಳನ್ನು ಸೃಷ್ಟಿಸಲಾಗುತ್ತಿತ್ತು ಎಂಬ ಅಂಶ ಮೇಲಿನ ಆಧಾರಗಳಿಂದ ಸ್ಪಷ್ಟವಾಗುತ್ತದೆ.

**ಗ್ರಾಮೀಣ ಪ್ರದೇಶದ ಆಡಳಿತ**

ಸಂಸ್ಥಾನದ ಗ್ರಾಮೀಣಾಡಳಿತದಲ್ಲಿ ಜನರ ಸಹಕಾರವು ಬಹು ಮುಖ್ಯವಾಗಿದ್ದಿತ್ತು. ಇಲ್ಲಿನ ಆಡಳಿತವು ವಿಜಯನಗರದರಸರಿಂದ ರೂಪಿತವಾಗಿತ್ತು. ಮೈಸೂರು ಸಂಸ್ಥಾನದ ಗ್ರಾಮೀಣಾಡಳಿತದ ಸಾಂಸ್ಕೃತಿಕ ಅಧ್ಯಯನವು ವಿಜಯನಗರದರಸರ ಇತಿಹಾಸಕ್ಕೆ ಉತ್ತಮ ಹಿನ್ನೆಲೆಯಾಗುತ್ತದೆ. ಮೈಸೂರು ಅರಸರು ತಮ್ಮ ಸಂಸ್ಥಾನದ ಗ್ರಾಮೀಣಾಡಳಿತದಲ್ಲಿ ಗ್ರಾಮದ ವ್ಯವಹಾರವನ್ನು ಗ್ರಾಮಸ್ಥರೇ ನಡೆಸಿಕೊಂಡು ಹೋಗುವ ಉತ್ತಮ ವ್ಯವಸ್ಥೆಯನ್ನು ನಿರ್ಮಿಸಿದ್ದರು. ಗ್ರಾಮಗಳಲ್ಲಿ ಅಂದು ಗ್ರಾಮ, ಅಗ್ರಹಾರ ಮತ್ತು ಪಟ್ಟಣಗಳೆಂಬ ಪ್ರಾದೇಶಿಕ ವಿಭಾಗಗಳಿದ್ದವು. ಗಾವುಂಡ (ಗೌಡ) ಎಂಬುವನು ಗ್ರಾಮಾಡಳಿತದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದನು. ಕರಣಿಕನನ್ನು ಶಾನುಭೋಗ ಅಥವಾ ಕುಲಕರ್ಣಿ ಎಂದು ಕರೆಯುತ್ತಿದ್ದರು. ಈ ಹುದ್ದೆಗಳು ಹೆಚ್ಚಾಗಿ ವಂಶಪಾರಂಪರ್ಯವಾಗಿ ಮುಂದುವರಿದುಕೊಂಡು ಬರುವುದಾಗಿದ್ದಿತ್ತು. ಗ್ರಾಮೀಣ ಪ್ರದೇಶದಲ್ಲಿ ಬಳಕೆಯಲ್ಲಿದ್ದ ಗ್ರಾಮಸಭೆಯು ಸಾಮಾನ್ಯವಾಗಿ ಗ್ರಾಮದ ದೇವಸ್ಥಾನ, ಚಾವಡಿ(ಸಭಾಂಗಣ) ಅಥವಾ ಊರಿನ ಮುಂದೆ ಇರುವ ಅರಳಿಮರದ ಕಟ್ಟೆಯಲ್ಲಿ ಸೇರುತ್ತಿತ್ತು. ಇಲ್ಲಿ ಗ್ರಾಮದ ಮುಂಖಡರೇ ನ್ಯಾಯಾದೀಶರಾಗಿ ಕಾರ್ಯನಿರ್ವಹಿಸಿ ಸರಿ ತಪಗಳನ್ನು ನಿರ್ಧರಿಸುತ್ತಿದ್ದರು. ಗ್ರಾಮಸಭೆಗಳ ಪ್ರಮುಖ ಕರ್ತವ್ಯಗಳೆಂದರೆ ಗ್ರಾಮದ

ಜಮೀನುಗಳ ಮೇಲಿನ ಹತೋಟಿ, ನೀರಾವರಿ ಕೆಲಸಗಳ ಮತ್ತು ದೇವಸ್ಥಾನಗಳ ಮೇಲ್ವಿಚಾರಣೆ, ತೆರಿಗೆ ವಸೂಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ರಿಯಾಯಿತಿಗಳ ನೀಡಿಕೆ, ದಾನಗಳ ಹತೋಟಿ, ಹಣದ ಠೇವಣಿಗಳನ್ನು ಹೊಂದಿರುವುದು, ಬ್ಯಾಂಕಿನ ವ್ಯವಹಾರಗಳು ಇನ್ನಿತರ ಪ್ರಮುಖ ಕಾರ್ಯಗಳಲ್ಲಿ ನೇರ ಗ್ರಾಮದ ಪ್ರಗತಿಗೆ ಮುಂದಾಗುತ್ತಿದ್ದವು.

**ಅಗ್ರಹಾರ ಮತ್ತು ಆಡಳಿತ**

ಅಗ್ರಹಾರದೆಂದರೆ ಅಗ್ರರು ವಾಸಿಸುವ ಸ್ಥಳವಾಗಿದ್ದಿತ್ತು. ಸಾಮಾಜಿಕ ದೃಷ್ಟಿಯಿಂದ ತಾವೇ ಎಲ್ಲ ವರ್ಗದವರಿಗಿಂತಲೂ ಅಗ್ರರು (ಹಿರಿಯರು) ಎಂದು ಸ್ವಘೋಷಿಸಿಕೊಂಡು ಜೀವನ ನಡೆಸುತ್ತಿದ್ದ ಬ್ರಾಹ್ಮಣರು ವಾಸಿಸುವ ಸ್ಥಳಕ್ಕೆ ಅಗ್ರಹಾರವೆಂದು ನಾಮಕರಣ ಮಾಡಿಕೊಂಡಿದ್ದರು. ಇದು ಭಾರತದಾದ್ಯಂತ ಹರಡಿಕೊಂಡಿದ್ದ ಹಾಗೆಯೇ ಮೈಸೂರು ಸಂಸ್ಥಾನದಲ್ಲಿಯೂ ಹೆಚ್ಚಿನ ಪ್ರಮಾಣದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತ್ತೆಂದು ಹೇಳಬಹುದು. ಈ ಅಗ್ರಹಾರಗಳಲ್ಲಿ ಸ್ಥಳೀಯ ಕುಂದುಕೊರತೆಯನ್ನು ನಿವಾರಿಸಿಕೊಳ್ಳಲು 'ಮಹಾರಾಜ ಸಭೆ' ಎಂಬ ಸಂಘವು ಅಸ್ತಿತ್ವದಲ್ಲಿತ್ತು. ಇದು ಅಗ್ರಹಾರದ ಮೇಲ್ವಿಚಾರಣೆ ಮತ್ತು ಇತರೆ ಪೌರಕರ್ತವ್ಯಗಳನ್ನು ನಿರ್ವಹಿಸಿಕೊಳ್ಳಲು ಸಹಕಾರಿಯಾಗಿತ್ತು. ಈ ಪ್ರದೇಶದಲ್ಲಿ ಜಾತಿ ಪದ್ಧತಿ ಹಾಗೂ ವರ್ಣಾಶ್ರಮ ಪದ್ಧತಿಯು ಹೆಚ್ಚಾಗಿ ಬಳಕೆಯಲ್ಲಿತ್ತು. ಬ್ರಾಹ್ಮಣರು ಇಲ್ಲಿ ಸಕಲ ವಿದ್ಯೆಯನ್ನು ಕಲಿತು ರಾಜಾಶ್ರಯದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ವೈಭೋಗದ ಜೀವನ ನಡೆಸುತ್ತಿದ್ದರು. ಇವರು ಧಾರ್ಮಿಕ ಹಾಗೂ ಮೂಡನಂಬಿಕೆಗಳಿಂದ ಸಾಮಾನ್ಯ ಜನರಿಂದ ಹಿಡಿದು ರಾಜ ಪರಿಹಾರದವರನ್ನು ತಮ್ಮ ಬಲೆಯಿಂದ ಸಿಲುಕಿಸಿಕೊಂಡು ಅವರಿಂದ ಜೀವನಾವಶ್ಯಕವಾದ ಕೆಲಸಗಳೆಲ್ಲವನ್ನು ಮಾಡಿಸಿಕೊಂಡು ತಮ್ಮ ಸುತ್ತಲಿನ ಬೇಲಿಗಳನ್ನಾಗಿಸಿಕೊಂಡಿದ್ದರೆನ್ನಬಹುದು, ಸ್ಪಷ್ಟವಾಗಿ ನಿರೂಪಿಸುವುದಾದರೆ ಅಂದು ಅಗ್ರಹಾರ ಸ್ವಯಂಧಿಕಾರವುಳ್ಳ ಒಂದು ಸಂಸ್ಥೆಯಾಗಿತ್ತೆನ್ನಬಹುದು. ನಂತರ ಮೈಸೂರು ಸಂಸ್ಥಾನವು ೧೮೮೧ರಲ್ಲಿ ಬ್ರಿಟಿಷರಿಂದ ನೇರವಾಗಿ ಸಂಸ್ಥಾನದ ಆಳ್ವಿಕೆಯ ಚುಕ್ಕಾಣಿಯನ್ನು ಪಡೆದುಕೊಂಡ ಮೇಲೆ ಆಡಳಿತಾತ್ಮಕ ಕ್ಷೇತ್ರದಲ್ಲಿ ವಿಶಿಷ್ಟವಾದ ಬದಲಾವಣೆ ತಂದು ಎಲ್ಲಾ ಪ್ರಜೆಗಳಿಗೂ ಶಿಕ್ಷಣ ದೊರಕಿಸುವ ಕಡೆ ಗಮನ ಹರಿಸಿದರು. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಅಗ್ರಹಾರಗಳ ಸಂಖ್ಯೆ ಕಡಿಮೆಯಾದದ್ದು ಕಂಡುಬರುತ್ತದೆ.

ಅಗ್ರಹಾರದ ಎಲ್ಲಾ ಉತ್ಪತ್ತಿಯ ಬ್ರಾಹ್ಮಣರಿಗೆ ಸಲ್ಲಿತ್ತಿತ್ತು. ಅಗ್ರಹಾರದಿಂದ ಆದಾಯಕ್ಕೆ ಸಲ್ಲಬೇಕಾಗಿದ್ದ ಸಂಪತ್ತನ್ನು ಬ್ರಾಹ್ಮಣರು ಅನುಭವಿಸುತ್ತಿದ್ದರು. ಇಷ್ಟಲ್ಲದೆ ರಾಜರು ಅಗ್ರಹಾರಗಳಿಗೆ ಸರ್ವಸಾಮಾನ್ಯ ತೆರಿಗೆಯಲ್ಲಿಯೂ ಸಂಪೂರ್ಣ ವಿನಾಯಿತಿ ನೀಡಿರುವುದು ಇಲ್ಲ ಗಮನಾರ್ಹ ರಾಜರುಗಳು ಅಗ್ರಹಾರಗಳನ್ನು ಸ್ಥಾಪಿಸಿ ವಿದ್ಯಾವಂತರಾದ ಬ್ರಾಹ್ಮಣರು ಹೆಚ್ಚಾಗಿ ಅಲ್ಲಿ ನೆಲಸುವಂತೆ ಮಾಡುತ್ತಿದ್ದರು. ಪಂಡಿತರಿಗೆ ವಿದ್ವಾಂಸರಿಗೆ ಹೇರಳವಾದ ಧನ ಸಹಾಯ ಮಾಡಿದ್ದಲ್ಲದೆ ವಿಶೇಷ ಭೂಮಿ ಅಥವಾ ಗ್ರಾಮಗಳ ಅದಾಯವನ್ನು ದತ್ತಿಯಾಗಿ ಬಿಟ್ಟುಕೊಡುತ್ತಿದ್ದರೆಂದು ತಿಳಿಯಬಹುದು. ಡಾ. ಚಿದಾನಂದ ಮೂರ್ತಿಯವರು "ಅಗ್ರಹಾರಗಳಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ, ಬೇರೆ ಜಾತಿಯ ಜನಾಂಗಗಳೂ ಇರಬಹುದು" ಎಂದು ತಮ್ಮ ಸಂಶೋಧನಾ ಎಂಬ ಕೃತಿಯಲ್ಲಿ ತಿಳಿಸಿದ್ದಾರೆ ಆದರೆ ಇದರ ಬಗ್ಗೆ ಚರ್ಚೆ ನಡೆಯುತ್ತಿದೆ.

**ಆಧುನಿಕ ಮೈಸೂರಿನಲ್ಲಿ ಕೇಂದ್ರಾಡಳಿತ**

ಒಡೆಯರ್ ಆಳ್ವಿಕೆಯ ಕಾಲದಲ್ಲಿನ ಮೈಸೂರು ಸಂಸ್ಥಾನ ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಉಲ್ಲೇಖನಾರ್ಹವಾದ ಕೊಡುಗೆಗಳನ್ನು ನೀಡಿ ಭಾರತದ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿತ್ತು. ಕ್ರಿ.ಶ. ೧೩೯೯ರಿಂದ ೧೯೪೭ರವರೆಗೆ ಆಳಿದ ಒಡೆಯರ ಸಂತತಿಯಲ್ಲಿ ಅತ್ಯಂತ ಪ್ರಸಿದ್ಧರು ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರು. ಇವರ ಆಳ್ವಿಕೆ (೧೯೦೨ ರಿಂದ ೧೯೪೦) ಮೈಸೂರಿನ ಇತಿಹಾಸದಲ್ಲಿಯೇ ಅತ್ಯಂತ ಮಹತ್ವದ ಮತ್ತು ವೈಭವದ ಅಧ್ಯಯನವಾಗಿದೆ.

ಮೈಸೂರು ಸಂಸ್ಥಾನ ಬ್ರಿಟಿಷರ ಪರೋಕ್ಷ ಆಳ್ವಿಕೆಗೆ ಒಳಪಟ್ಟಿದ್ದರೂ ನಾಲ್ವಡಿ ಕೃಷ್ಣರಾಜ ಒಡೆಯರು ಆಡಳಿತದ ಕೇಂದ್ರಬಿಂದುವಾಗಿದ್ದರು. ಒಳಾಡಳಿತವೆಲ್ಲವೂ ಅವರ ಹೆಸರಿನಲ್ಲೇ ನಡೆಯುತ್ತಿದ್ದರಿಂದ ಮಹಾರಾಜನೇ ಸರ್ಕಾರವಾಗಿದ್ದರು.

ಒಳಾಡಳಿತದಲ್ಲಿ ಮಹಾರಾಜರ ಅಧಿಕಾರಕ್ಕೆ ಅಡ್ಡಿಯಿರಲಿಲ್ಲ. ಸರ್ಕಾರ ಅಧಿಕಾರಗಳದ್ದು, ನ್ಯಾಯಮೂರ್ತಿಗಳನ್ನು ನೇಮಕಮಾಡುವ ಮತ್ತು ಕಾನೂನುಗಳನ್ನು ಜಾರಿಗೆ ತರುವ ಅಧಿಕಾರ ಅವರದಾಗಿತ್ತು. ಪ್ರಮುಖವಾಗಿ ಕೇಂದ್ರಾಡಳಿತವನ್ನು ಎರಡು ಭಾಗಗಳಾಗಿ ವಿಂಗಡಿಸಲಾಗಿತ್ತು. ಸಂಸ್ಥಾನದ ಆಡಳಿತ ಮತ್ತ ಅರಮನೆಯ ಆಡಳಿತ ಮಹಾರಾಜರ ಹೆಸರಿನಲ್ಲೇ ನಡೆಯುತ್ತಿದ್ದರೂ ಎರಡು ಆಡಳಿತಗಳು ಪ್ರತ್ಯೇಕವಾಗಿದ್ದವು. ಮೈಸೂರು ಒಡೆಯರ ರಾಜಧಾನಿಯಾದರೂ ಬೆಂಗಳೂರು ಆಡಳಿತ ಕೇಂದ್ರವಾಗಿತ್ತು. ರಾಜರು ಮೈಸೂರಿನಲ್ಲೇ ಇದ್ದುಕೊಂಡು ಆಡಳಿತ ಕಾರ್ಯಗಳಿಗಾಗಿ ಬೆಂಗಳೂರು ಮತ್ತು ಮೈಸೂರುಗಳ ನಡುವೆ ಪ್ರವಾಸ ಕೈಗೊಳ್ಳುತ್ತಿದ್ದರು.

ಮಹಾರಾಜ ಕೇಂದ್ರಾಡಳಿತ ಮುಖ್ಯಬಿಂದುವಾಗಿದ್ದರು. ಆದರೆ ಅವರಿಗೆ ಆಡಳಿತದಲ್ಲಿ ನೆರವಾಗಲು ಕಾರ್ಯನಿರ್ವಹಣೆ ಸಭೆ (ಎಕ್ಸಿಕ್ಯೂಟಿವ್ ಕೌನ್ಸಿಲ್) ಅಸ್ತಿತ್ವದಲ್ಲಿತ್ತು. ದಿವಾನರ ಅಧ್ಯಕ್ಷತೆಯಲ್ಲಿ ಇಬ್ಬರು ಅಥವಾ ಮೂವರು ಸದಸ್ಯರನ್ನು ಹೊಂದಿದ್ದ ಕಾರ್ಯನಿರ್ವಹಕ ಸಭೆ, ಪೂರ್ಣಕಾಲದ ಮಂತ್ರಿಮಂಡಲವಾಗಿತ್ತು. ಮಹಾರಾಜರ ನಂತರ ಈ ಸಭೆಯೇ ಮುಖ್ಯವಾದುದು. ರಾಜರ ನಂತರ ಹೆಚ್ಚಿನ ಅಧಿಕಾರ ಹೊಂದಿದವರು ದಿವಾನರು. ಇವರಿಗೆ ಎಲ್ಲಾ ಇಲಾಖೆಗಳ ಮೇಲ್ವಿಚಾರಣೆಯ ಅಧಿಕಾರವಿತ್ತು. ಆದರೆ ರಾಜರ ಒಪ್ಪಿಗೆಯಿಲ್ಲದೆ ಕಾನೂನು ರಚನೆ. ಹೊಸ ತೆರಿಗೆ ವಿಧಿಸುವ ಅಥವಾ ತೆರಿಗೆ ತೆಗೆದು ಹಾಕುವ ಕಾರ್ಯವನ್ನು ಯಾರೋ ಮಾಡುವಂತಿರಲಿಲ್ಲ. ಅದರ ಮೇಲೆ ಮಹಾರಾಜರ ಸಂಪೂರ್ಣ ಹತೋಟಿ ಇತ್ತು. ಒಂದರ್ಥದಲ್ಲಿ ಇವರಿಗೆ ಮುಖ್ಯವಾಗಿದ್ದುದು ವ್ಯಕ್ತವಾಗಿಲ್ಲ. ಸಂಸ್ಥಾನದ ಹಾಗೂ ಪ್ರಜಾಕೋಟಿಯ ಹಿತವೆಂದೇ ಹೇಳಬಹುದು. ಇದಕ್ಕೆ ನಮ್ಮ ಸಂಸ್ಕೃತಿಯು ಇವರ ಆಳ್ವಿಕೆಯ ಕಾಲದಲ್ಲಿ ಕಂಡ ಬದಲಾವಣೆಯೇ ಸಾಕ್ಷಿಯಾಗಿದೆ.

ಎಕ್ಸಿಕ್ಯೂಟಿವ್ ಕೌನ್ಸಿಲ್ ಗೆ ಸಹಾಯಕವಾಗಿ ಸೆಕ್ರಿಟೇರಿಯಟ್ ಇತ್ತು. ಸೆಕ್ರಟರಿ ಅಂಡರ್ ಸೆಕ್ರಟರಿ, ಅಸಿಸ್ಟೆಂಟ್ ಸೆಕ್ರೆಟರಿ ಮತ್ತು ಬರಹಗಾರ ನೌಕರರುಗಳಿಂದ ಕೂಡಿದ್ದು ಸೆಕ್ರೆಟೇರಿಯಟ್ ಕೇಂದ್ರಾಡಳಿತದ ಕಾರ್ಯಾಲಯವಾಗಿತ್ತು. ಅದು ಸಂಸ್ಥಾನದ ಆಡಳಿತ ವ್ಯವಹಾರಗಳಿಗೆ ಸಂಬಂಧಿಸಿದ ಮುಖ್ಯ ಕಾಗದ ಪತ್ರಗಳನ್ನು ಪರಿಶೀಲಿಸಿ ಒಪ್ಪಿಗೆಗಾಗಿ ದಿವಾನ ಮತ್ತು ಕೌನ್ಸಿಲ್‌ಗಳಿಗೆ ಒಪ್ಪಿಸುತ್ತಿತ್ತು. ದಿವಾನರು ಅವುಗಳನ್ನು ವಿಮರ್ಶಿಸಿ ತಮ್ಮ ಅಭಿಪ್ರಾಯಗಳನ್ನು ಬರೆದು ಕೊನೆಯ ಅಜ್ಞೆಗಾಗಿ ಮಹಾರಾಜರಿಗೆ ಕಳುಹಿಸಿಕೊಡುತ್ತಿದ್ದರು. ಸಂಸ್ಥಾನದಲ್ಲಿ ೧೯೧೩ - ೧೪ರಲ್ಲಿ ನಾಲ್ಕು ಪ್ರಮುಖ ಸೆಕ್ರೆಟೇರಿಯಟ್‌ಗಳಿದ್ದವು, ಅವುಗಳೆಂದರೆ ಜನರಲ್ ಅಂಡ್ ರೆವಿನ್ಯೂ ಸೆಕ್ರೆಟೇರಿಯಟ್, ದಿ ಪಬ್ಲಿಕ್ ವರ್ಕ್ಸ್ ಸೆಕ್ರೆಟೇರಿಯಟ್, ದಿ ಫೈನಾನ್ಸಿಯಲ್ ಸೆಕ್ರೆಟೇರಿಯಟ್ ಮತ್ತು ರೈಲ್ವೆ ಸೆಕ್ರೆಟೇರಿಯಟ್, ಇವುಗಳು ದಿವಾನರ ಉಸ್ತುವಾರಿಯಲ್ಲಿದ್ದು ಸೆಕ್ರೆಟರಿಗಳ ನೇರ ಆಡಳಿತಕ್ಕೆ ಒಳಪಟ್ಟಿದ್ದವು.

ಮಹಾರಾಜ ದಿವಾನ ಮತ್ತು ಕಾರ್ಯನಿರ್ವಾಹಕ ಸಭೆ ಹಾಗೂ ಸೆಕ್ರೆಟೇರಿಯಟ್ ಗಳು ಸಂಸ್ಥಾನದಲ್ಲಿ ಕಾರ್ಯಾಂಗದ ಕೆಲಸವನ್ನು ನಿರ್ವಹಿಸುತ್ತಿದ್ದರೆ ೧೯೦೭ರವರೆಗೆ ಕಾರ್ಯ ನಿರ್ವಾಹಕ ಸಭೆ (ಎಕ್ಸಿಕ್ಯೂಟಿವ್ ಕೌನ್ಸಿಲ್) ಮಹಾರಾಜರ ಒಪ್ಪಿಗೆ ಪಡೆದು ಕಾನೂನುಗಳನ್ನು ರಚನೆ ಆಚರಣೆಗೆ ತರುತ್ತಿತ್ತು. ೧೯೦೭ರಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ (ನ್ಯಾಯ ವಿಧಾಯಕ ಸಭೆ) ಸ್ಥಾಪನೆಯೊಂದಿಗೆ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಶಾಸಕಾಂಗಕ್ಕೆ ಅಡಿಪಾಯ ಹಾಕಲಾಯಿತು.

೧೯೦೭ರಲ್ಲಿ ಅಸ್ತಿತ್ವಕ್ಕೆ ಬಂದ ನ್ಯಾಯ ವಿಧಾಯಕ ಸಭೆಗೆ ಅಧ್ಯಕ್ಷರು ದಿವಾನರು. ಒಟ್ಟು ೬೦ ಸದಸ್ಯರನ್ನು ಹೊಂದಿದ್ದ ಈ ಸಭೆ ವರ್ಷಕ್ಕೆ ಎರಡು ಬಾರಿ ನಡೆಯುತ್ತಿತ್ತು. ಒಬ್ಬ ಸದಸ್ಯರ ಪೈಕಿ ೨೨ ಮಂದಿಯನ್ನು ಪ್ರಜೆಗಳೇ ಚುನಾಯಿಸುತ್ತಿದ್ದರು. ಉಳಿದವರು ಸರ್ಕಾರದಿಂದ ನಾಮಕರಣಗೊಳ್ಳುತ್ತಿದ್ದರು. ಪ್ರತಿವರ್ಷ ಎರಡು ಬಾರಿ ಸಭೆ ಸೇರಿದಾಗ ಸಭೆಯಲ್ಲಿ ಸಂಸ್ಥಾನದ ಆಯವ್ಯಯದ ಚರ್ಚೆ, ಆಡಳಿತಕ್ಕೆ ಸಂಬಂಧಿಸಿದ ಪ್ರಶ್ನೆಗಳು ಚರ್ಚಿಸಲ್ಪಡುತ್ತಿದ್ದವು. ೧೮೮೧ರಲ್ಲಿ ರಚಿತವಾದ ಪ್ರಜಾಪ್ರತಿನಿಧಿ ಸಭೆ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ತನ್ನ ಸ್ವರೂಪ, ಅಧಿಕಾರ ವ್ಯಾಪ್ತಿ, ಹಕ್ಕು ಬಾಧ್ಯತೆ ಹಾಗೂ ದಲಿತರ ಅಭಿವೃದ್ಧಿಗಾಗಿ ಕೈಗೊಳ್ಳಬೇಕಾದ ಕೆಲಸಕಾರ್ಯಗಳನ್ನು ವಿಸ್ತರಿಸಿಕೊಂಡು ಹೆಚ್ಚು ಹೆಚ್ಚು ಪ್ರಜಾಸತ್ತಾತ್ಮಕವಾಯಿತು. ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯ ವಿಧಾಯಕ ಸಭೆಗಳೆರಡೂ ಮೈಸೂರು ಸಂಸ್ಥಾನದ ರಾಜಕೀಯ ಜೀವನನ್ನು ಪ್ರತಿಬಿಂಬಿಸುವ ಕನ್ನಡಿಗಳಾಗಿದ್ದವು.

**ಸ್ಥಳೀಯ ಆಡಳಿತ**

ಮೈಸೂರು ಸಂಸ್ಥಾನದ ಆಧುನಿಕ ಸ್ಥಳೀಯ ಆಡಲಿತ ಮತ್ತು ಸ್ಥಳೀಯ ಸಂಸ್ಥೆಗಳ ವಿಕಾಸದ ಇತಿಹಾಸವು ಒಂದೂವರೆ ಶತಮಾನದಷ್ಟು ಹಿಂದಿನದು. ಇದನ್ನು ಬ್ರಿಟಿಷ್ ಕಮಿಷ್‌ನರುಗಳಿಂದ ಎರವಲು ಪಡೆದು ಒಡೆಯರ್ ರವರು ತಮ್ಮ ಪ್ರಾಂತ್ಯದಲ್ಲಿ ಪೋಷಿಸಿದರು ಎನ್ನಬಹುದು.

ಆಧುನಿಕ ಆಡಳಿತ ವ್ಯವಸ್ಥೆಗೆ ಹೆಚ್ಚಿನ ಸುಧಾರಣಾ ಕ್ರಮಗಳು ಪ್ರಾರಂಭವಾದುದು ೧೮೩೧ರಲ್ಲಿ ಏಕೆಂದರೆ ಬ್ರಿಟಿಷ್ ಪ್ರಭುತ್ವ ಮೈಸೂರು ರಾಜ್ಯದ ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಅಧಿಕಾರವನ್ನು ಹಿಂದಕ್ಕೆ ಪಡೆದು ಕಮಿಷನರ್ ಮೂಲಕ ಆಡಳಿತದ ನಡೆಸಲು ಪ್ರಾರಂಭಿಸಿದ್ದು ಆ ವರ್ಷದಿಂದಲೇ. ಇಡೀ ಮೈಸೂರು ರಾಜ್ಯವನ್ನು ಮೂರು ಕಂದಾಯ ವಿಭಾಗಗಳಾಗಿ ಮಾರ್ಪಾಡಿಸಿ ಒಟ್ಟು ಎಂಟು ಜಿಲ್ಲೆಗಳನ್ನು ರಚಿಸಲಾಗಿತ್ತು. ನಂದಿದುರ್ಗ, ಅಷ್ಟಗ್ರಾಮ ಮತ್ತು ನಗರ ಇವು ಆ ಮೂರು ವಿಭಾಗಗಳು, ನಂದಿದುರ್ಗ ವಿಭಾಗಕ್ಕೆ ಬೆಂಗಳೂರು, ಕೋಲಾರ ಮತ್ತು ತುಮಕೂರು ಜಿಲ್ಲೆಗಳು ಸೇರಿದ್ದವು. ಅಷ್ಟ ಗ್ರಾಮ ವಿಧಾನಕ್ಕೆ ಮೈಸೂರು ಮತ್ತು ಹಾಸನ ಜಿಲ್ಲೆಗಳು ಸೇರಿದರೆ ನಗರ (ಬಿದನೂರು) ವಿಧಾನಕ್ಕೆ ಶಿವಮೊಗ್ಗ, ಕಡೂರು (ಚಿಕ್ಕಮಗಳೂರು) ಮತ್ತು ಚಿತ್ರದುರ್ಗ ಜಿಲ್ಲೆಗಳು ಸೇರಿದ್ದವು. ವಿಭಾಗಗಳಿಗೆ ವಿಭಾಗ ಸೂಪರಿಂಟೆಂಡೆಂಟ್‌ಗಳು ಮತ್ತು ಜಿಲ್ಲೆಗೆ ಜಿಲ್ಲಾ ಸೂಪರಿಂಟೆಂಡೆಂಟ್‌ಗಳನ್ನು ನೇಮಿಸಲಾಯಿತು. ಜಿಲ್ಲೆಗಳನ್ನು ತಾಲ್ಲೂಕುಗಾಳಗಿ ನಿರ್ಮಿಸಲಾಗಿತ್ತು. ತಾಲ್ಲೂಕು ಸ್ಥಳೀಯ ಆಡಳಿತದ ಪ್ರಮುಖ ಹಂತವಾಗಿತ್ತು. ಅಮಲ್ದಾರರು ತಾಲ್ಲೂಕಿನ ಮುಖ್ಯ ಅಧಿಕಾರಿ, ಅಲ್ಲೇ ಜನಸಾಮಾನ್ಯರು ಎಲ್ಲ ಸಮಸ್ಯೆಗಳಿಗೂ ಪರಿಹಾರ ಕಂಡುಕೊಳ್ಳಬೇಕಾಗಿತ್ತು. ಕಂದಾಯ ವಸೂಲಾತಿ, ದರಖಾಸ್ತು ಭೂಮಿ ಮಂಜೂರಾತಿ, ಕಾನೂನು ಪಾಲನೆ, ಅಪರಾಧಿಗಳ ವಿಚಾರಣೆ ಇವೆಲ್ಲ ತಾಲ್ಲೂಕಿನ ಆಡಳಿತಾಧಿಕಾರಿಯ ಅಧಿಕಾರವಾಗಿತ್ತು. ಹೋಬಳಿಗೆ ಶೇಕ್ ದಾರ್ ಎಂಬ ಅಧಿಕಾರಿಯಿದ್ದು ಅಮಲ್ದಾರರಿಗೆ ಆಡಳಿತದಲ್ಲಿ ನೆರವಾಗಬೇಕಿತ್ತು. ಪ್ರಾಚೀನ ಕಾಲದಿಂದಲೂ ಅಸ್ತಿ ತ್ವದಲ್ಲಿದ್ದ ಗ್ರಾಮಾಡಳಿತದ ಪ್ರಾಥಮಿಕ ಆಡಳಿತ ಘಟಕವನ್ನು ಹಾಗೆಯೇ ಉಳಿಸಿಕೊಳ್ಳಲಾಯಿತು. ಆದರೆ ಹಿಂದೆ ಇದ್ದ ಗ್ರಾಮ ಗೌಡನ ಸ್ಥಾನದಲ್ಲಿ ಪೋಲೀಸ್ ಪಟೇಲನು ನೇಮಕವಾದುದು. ಆತನಿಗೆ ಕಂದಾಯ ವಸೂಲಾತಿ ಮತ್ತು ಕಾನೂನು ವ್ಯವಸ್ಥೆಯ ಹೊಣೆಯನ್ನು ವಹಿಸಲಾಯಿತು. ಈ ಪಟೇಲ ಹುದ್ದೆ ಬಹುಮಟ್ಟಿಗೆ ಹಿಂದಿನ ಗ್ರಾಮಗೌಡನ ಮನೆತನದವರಿಗೇ ಬಂದಿತು. ಶಾನುಭೋಗ ಪಾರಂಪರಿಕ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು. ಆ ಹುದ್ದೆ ಮುಂದುವರೆಯಿತು. ಕುಳವಾಡಿ ಅಥವಾ ತಳವಾರರು ಗ್ರಾಮದ ಕೊನೆಯ ಗ್ರಾಮ ಸಹಾಯಕರಾಗಿದ್ದರು.

೧೯೩೦ರ ದಶಕದಲ್ಲಿ ಮೈಸೂರು ಸಂಸ್ಥಾನದಲ್ಲಿ ಹೆಚ್ಚಿನ ರಾಜಕೀಯ ಸಂಘಟನೆಗಳಿಂದಾಗಿ ಈ ಸ್ಥಳೀಯ ಸಂಸ್ಥೆಗಳು ಹೆಚ್ಚಾಗಿ ಅಸರೆಯಾಗಿದ್ದವು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರೊಂದಿಗೆ ಜಿಲ್ಲಾ ಬೋರ್ಡ್ ಮತ್ತು ಗ್ರಾಮಪಂಚಾಯಿತಿ ಸದಸ್ಯರು ಸೇರಿಕೊಂಡು ಜನಪ್ರತಿನಿಧಿಗಳ ದೊಡ್ಡ ಪಡೆಯೇ ನಿರ್ಮಾಣವಾಯಿತು. ಇವರೆಲ್ಲ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಪಾಲ್ಗೊಳ್ಳಲು ಈ ಸ್ಥಳೀಯ ಸಂಸ್ಥೆಗಳ ಅನುಭವವೇ ದೊಡ್ಡ ಶಕ್ತಿಯಾಗಿತ್ತೆನ್ನಬಹುದು. ಈ ದೃಷ್ಟಿಯಿಂದ ಮೈಸೂರಿನ ಸ್ಥಳೀಯ ಜನತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರ ವಹಿಸಿರುವುದು ಚರಿತ್ರಾರ್ಹವಾಗಿದೆ.

***

## ೩. ಧಾರ್ಮಿಕ ಪದ್ಧತಿ (೧)

ಮೈಸೂರಿನ ಯದುವಂಶದವರಾದ ಒಡೆಯರ್‌ರವರು ತಮ್ಮ ಸಂಸ್ಥಾನದಲ್ಲಿ ಜೈನ, ಶೈವ, ವೀರಶೈವ, ವೈಷ್ಣವ ಮುಂತಾದ ಧರ್ಮಗಳಿಗೂ ಸಮನಾದ ಆಶ್ರಯನೀಡಿ ಸರ್ವಧರ್ಮ ಸಮನ್ವಯವನ್ನು ಕಾಪಾಡಿಕೊಂಡು ಬಂದರೆನ್ನಬಹುದು. ಸಂಸ್ಥಾನದಲ್ಲಿ ಮೊದಲಿಗೆ ವೈದಿಕ ಧರ್ಮ ಬಲವಾದ ಬೇರು ಬಿಟ್ಟಿತ್ತು. ನಂತರ ಜೈನ, ಬೌದ್ಧ, ಶೈವ, ವೈಷ್ಣವ ಧರ್ಮಗಳು. ಮೈಸೂರಿನ ಮಣ್ಣಿನಲ್ಲಿ ಬೆಳೆಯಲಾರಂಭಿಸಿದವು. ಅನಂತರ ಬಸವೇಶ್ವರನ ತತ್ವಗಳು ಸಂಸ್ಥಾನದ ಜನತೆಯಲ್ಲಿ ಹೆಚ್ಚಿನ ಪರಿಣಾಮ ಬೀರಿ ವೀರಶೈವ ಧರ್ಮಕ್ಕೂ ಹೆಚ್ಚಿನ ಪ್ರೋತ್ಸಾಹ ದೊರಕಲಾರಂಭಿಸಿತು. ಕ್ರಿ.ಶ. ೧೪ನೇ ಶತಮಾನದಿಂದ ಇಸ್ಲಾಂ ಧರ್ಮ, ಪೋರ್ಚುಗೀಸ್ ಹಾಗೂ ಇಂಗ್ಲಿಷರಿಂದ ಕ್ರೈಸ್ತಧರ್ಮವೂ ಈ ನಾಡಿಗೆ ಲಗ್ಗೆ ಹಾಕಿದವೆಂದು ಹೇಳಬಹುದಾಗಿದೆ. ವರ್ಧಮಾನದೇವ, ಚಾಮುಂಡರಾಯ, ಅದಿಪಂಪ,

ಅಬಿನವ ಪಂಪ. ನೇಮಿಚಂದ್ರ, ಪೂಜ್ಯಪಾದ, ಜನ್ನ, ಕವಿಪರಮೇಷ್ಠಿ, ಪೊನ್ನ, ರನ್ನ, ಮೊದಲಾದ ಮಹಾನ್ ಕವಿಗಳು ಜೈನಧರ್ಮವನ್ನು ಕುರಿತು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಬಹುಮುಖ್ಯವಾದ ಗ್ರಂಥಗಳನ್ನು ಬರೆದಿದ್ದಾರೆ. ಹಾಗೆಯೇ ನಂದಿಕೇಶ್ವರ, ಶಿವಯೋಗಿ ಶಿವಾಚಾರ್ಯ, ನಂಜಣಾಚಾರ್ಯ, ಆಚಾರ್ಯ ನೀಲಕಂಠ, ಸಿದ್ಧವೀರಣಾಚಾರ್ಯ, ಬಸವೇಶ್ವರ, ಪ್ರಭುದೇವರು, ಚೆನ್ನ ಬಸವೇಶ್ವರ, ಸಿದ್ದರಾಮೇಶ್ವರ ಮೊದಲಾದ ಕ್ರಾಂತಿಕಾರಿ, ಸಾಹಿತಿಗಳು ಕನ್ನಡ ಸಂಸ್ಕೃತಗಳೆರಡರಲ್ಲಿಯೂ ಪರಣಿತರಾಗಿ ವೀರಶೈವ ಧರ್ಮವನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಮೇಲಿನವರು ಅಂದಿನ ಧಾರ್ಮಿಕ ಕ್ಷೇತ್ರಕ್ಕೆ ಹೆಚ್ಚಿನ ಬೆಳಕನ್ನು ಹರಿಸಿದ್ದಾರೆ. ಅಂದು ಶ್ರೀ ಮಾಧವಾಚಾರ್ಯರು ಸರ್ವರನ್ನೂ ಸಮಾನವಾಗಿ ಕಾಣುವ ಸರ್ವದರ್ಶನ ಸಂಗ್ರಹದಂತಹ ಅಮೂಲ್ಯ ಗ್ರಂಥ ಬರೆದು ಸನಾತನ ಧರ್ಮವನ್ನು ಎತ್ತಿ ಹಿಡಿದಿದ್ದಾರೆ. ವ್ಯಾಸರಾಜರು, ವಾದಿರಾಜರು ಮೊದಲಾದವರು ದ್ವೈತ ಸಿದ್ಧಾಂತವನ್ನು ಅಂದು ಬೋಧಿಸಿ ಗ್ರಂಥಗಳನ್ನು ರಚಿಸಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಬೌದ್ಧ ಧರ್ಮವು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಲ್ಲಿತ್ತೆಂದು ಕೇಳಿಬಂದರೂ ನಿಖರವಾದ ಮಾಹಿತಿ ದೊರಕದೆ, ಅದು ಗೌಣವಾಗಿಯೇ ಉಳಿದುಕೊಂಡಿದೆ. ಸರ್ವಾಧಿಕಾರಿಯಾಗಿ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಹೊಸ ಪುಟಗಳನ್ನು ನಿರ್ಮಿಸಿದ್ದ ಹೈದರ್ ಆಲಿ ಹಾಗೂ ಟಿಪ್ಪುರವರು ನಂಜನಗೂಡು ಮಲೆಮಹದೇಶ್ವರ ಬೆಟ್ಟ ಹಾಗೂ ಶೃಂಗೇರಿ ಪೀಠಕ್ಕೆ ತೋರಿಸಿಕೊಂಡು ಬಂದ ಭಕ್ತಿ ಅಮೂಲ್ಯವಾದ ನಿದರ್ಶನವಾಗಿವೆ. ಮುಸ್ಲಿಂ ಧರ್ಮದವರಾದರೂ ಹಿಂದೂ ಧರ್ಮೀಯರ ಬಗ್ಗೆ. ಹಿಂದೂ ದೇವಾಲಯಗಳ ಬಗ್ಗೆ ಅವರಿಟ್ಟಿದ್ದ ಭಕ್ತಿ. ಗೌರವ ಇಲ್ಲಿ ಅಪಾರವೆನ್ನಿಸುತ್ತದೆ. ಈ ಸಮಯದಲ್ಲಿಯೇ ಮೈಸೂರು ಸಂಸ್ಥಾನಕ್ಕೆ (ಕನ್ನಡ ನಾಡಿಗೆ)ಕ್ರೈಸ್ತಧರ್ಮದ ಪ್ರಚಾರಕ್ಕಾಗಿ ಬಂದ ಡಾ. ಕಿಟ್ಟೆಲ್ (ಇವರು ನಿರೂಪಿಸಿಕೊಟ್ಟ ಕನ್ನಡ ನಿಘಂಟು ಕನ್ನಡಿಗರಿಗೂ ನಾಚಿಸುವ ಅದ್ಭುತ ಕೆಲಸವಾಗಿದ್ದು ಇವರ ಕೊಡುಗೆ ಅಪಾರವೆನಿಸಿದೆ,) ಡಾ. ರೈಸ್, ಡಾ. ಥಾಮ್ಸನ್, ಡಾ. ಪ್ಲೀಟ್ ರವರು ಕನ್ನಡದಲ್ಲಿಯೇ ವ್ಯವಹರಿಸಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಬಗ್ಗೆ ಅಮೂಲ್ಯಗ್ರಂಥಗಳನ್ನು ಬರೆದು ಪ್ರಕಟಿಸಿ ಕ್ರೈಸ್ತಧರ್ಮದ ಪ್ರಚಾರ ಕೈಗೊಂಡಿದ್ದಾರೆ. ಇವರಿಗೆ ಮೈಸೂರಿನ ಒಡೆಯರ್‌ರವರು ಸರ್ವಧರ್ಮವನ್ನೂ ಸಮನಾಗಿ ಕಾಣುವ ದೃಷ್ಟಿಯಿಂದ ರಾಜಾಶ್ರಯದಲ್ಲಿ ಸ್ವಾಗತಿಸಿ ಸಹಕರಿಸಿದರು.

ಒಂದು ದೃಷ್ಟಿಯಲ್ಲಿ ವಿಶ್ಲೇಷಿಸುವುದಾದರೆ ಮೈಸೂರು ಸಂಸ್ಥಾನದ ಧಾರ್ಮಿಕ ಪರಂಪರೆಯ ಭರತಖಂಡದ ಧಾರ್ಮಿಕ ಪರಂಪರೆಯ ಚೌಕಟ್ಟಿನಲ್ಲೇ ಬೆಳೆದು ಬಂದದ್ದು ಎನ್ನಬಹುದು. ಏಕೆಂದರೆ ಸಂಸ್ಥಾನವು ದೇಶದ ಪ್ರಮುಖ ಎಲ್ಲಾ ಧರ್ಮಗಳನ್ನು ತನ್ನ ಮಡಿಲಿನಲ್ಲಿ ಬೆಳೆಸಿ. ಪೋಷಿಸಿ, ರಕ್ಷಿಸಿಕೊಂಡು ಬಂದಿರುವುದಕ್ಕೆ ಅಪೂರ್ವವಾದ ದಾಖಲೆಗಳು ದೊರಕುತ್ತವೆ. ಸಂಸ್ಥಾನದಲ್ಲಿ ಪ್ರಧಾನವಾಗಿ ಹಿಂದೂಗಳು ಇದ್ದರೂ ಅದರಲ್ಲಿಯೇ ಶೈವ ಹಾಗೂ ವೈಷ್ಣವ ಮತಗಳನ್ನು ಅನುಸರಿಸಿಕೊಂಡು ಬಂದವರ ಸಂಖ್ಯೆಯೇ ಹೆಚ್ಚೆನ್ನಬಹುದು. ಸಂಸ್ಥಾನದ ಪ್ರಾಚೀನ ಕಾಲದ ಇತಿಹಾಸವನ್ನು ಅಧ್ಯಯನ ಮಾಡಿದರೆ ಈ ಭಾಗದ ಪ್ರಾಚೀನ ಧಾರ್ಮಿಕ ನಂಬಿಕೆಗಳ ಬಗೆಗೆ ಹೆಚ್ಚಿನ ಮಾಹಿತಿ ದೊರಕುತ್ತವೆ. ಏಕೆಂದರೆ ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿಯೂ ಹೆಚ್ಚಾಗಿ ಕಂಡು ಬರುವ ಜೈನ ಬಸದಿಗಳು ಗ್ರಾಮೀಣ ಆರಾಧ್ಯ ಗ್ರಾಮದೇವತೆಯ ದೇಗುಲವಾಗಿ (ಮಾರಿ ದೇವತೆ ಹಾಗೂ ವೀರಭದ್ರನ ದೇವಾಲಯಗಳಾಗಿವೆ) ಪರಿವರ್ತನೆಗೊಂಡಿರುವುದಕ್ಕೆ ದಾಖಲೆಗಳು ದೊರಕುತ್ತವೆ. ಇವನ್ನು ಪರಿಗಣಿಸಿದರೆ ಜೈನಧರ್ಮವು ಈ ಸಂಸ್ಥಾನದ ಪ್ರಾಚೀನ ಧರ್ಮಗಳಲ್ಲಿ ಒಂದಾಗಿತ್ತೆನ್ನಬಹುದು. ಇದಕ್ಕೆ ಸಾಕ್ಷಿ ಎಂಬಂತೆ ತಲಕಾಡಿನ ಗಂಗರು. ತದನಂತರ ಆಳ್ವಿಕೆ ನಡೆಸಿದ ಹೊಯ್ಸಳರ ಕಾಲದಲ್ಲಿ ಈ ಧರ್ಮವು ರಾಜಧರ್ಮವಾಗಿ ಮೆರೆದಿತ್ತೆಂಬುದ್ದಕ್ಕೆ ದೊರೆತಿರುವ ಸಾವಿರಾರು ಜೈನಶಾಸನಗಳು, ಬಸದಿಗಳು, ತೀರ್ಥಂಕರ ವಿಗ್ರಹಗಳು ಮೂಕಸಾಕ್ಷಿಯಾಗಿವೆ. ಇದಲ್ಲದೆ ವೈಷ್ಣವ ಮತಗಳಂತೂ ಪ್ರಾಚೀನ ಕಾಲದಿಂದಲೂ ಬೆಳೆದು ಬಂದ ಜನಪ್ರಿಯತೆಯ ಫಲದಿಂದಾಗಿ ಇಂದು ಹಿಂದೂ ಧರ್ಮವಾಗಿ ಪರಿವರ್ತನೆಗೊಂಡು ಸಂಸ್ಥಾನದ ರಾಜಧರ್ಮವಾಗಿ ಕಂಗೊಳಿಸಿದೆ. ಮೈಸೂರಿನ ಒಡೆಯರ್‌ರವರು ಹಲವಾರು ಶೈವ, ವೈಷ್ಣವ ದೇವಾಲಯಗಳನ್ನು ಕಟ್ಟಿಸಿರುವುದು ಕಂಡುಬರುತ್ತದೆ. ಹಾಗೇಯೇ ಇವರಿಗಿಂತ ಮುಂಚೆಯೇ ನಿರ್ಮಿಸಿದ್ದ ದೇವಾಲಯಗಳನ್ನು ದುರಸ್ಥಿಗೊಳಿಸಿ ದಾನದತ್ತಿ ನೀಡಿರುವುದೂ ಅನೇಕ ಸಾಹಿತ್ಯ ಶಾಸನಾಧಾರಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಚಾಮರಾಜ ನಗರದಲ್ಲಿರುವ ಚಾಮರಾಜೇಶ್ವರ ದೇವಾಲಯ, ಚಾಮುಂಡಿ ಬೆಟ್ಟದಲ್ಲಿರುವ ಚಾಮುಂಡೇಶ್ವರಿ ದೇವಾಲಯ ಹಾಗೂ ಬೃಹತ್ ನಂದಿ, ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯ ಬೃಹತ್ ಗೋಪುರ, ಉಮ್ಮತ್ತೂರಿನ ದೇವಾಲಯ, ಮೂಗೂರು ತಿಬ್ಬದೇವಿ, ಸೋಸಲೆಯಲ್ಲಿರುವ ಕೃಷ್ಣರಾಜೇಂದ್ರ ದೇವಾಲಯ, ಹೊನ್ನದೇವಿ ಹಾಗೂ ವೀರಭದ್ರೇಶ್ವರ ದೇವಾಲಯ, ಮೈಸೂರು ಅರಮನೆಯಲ್ಲಿರುವ ಶೈವ ಹಾಗೂ ವೈಷ್ಣವ ದೇವಾಲಯಗಳಾದ ಗಾಯತ್ರಿದೇವಿ

ದೇವಾಲಯ, ಶ್ವೇತವರಹ ಸ್ವಾಮಿ ದೇವಾಲಯ, ವೆಂಕಟರಮಣ ಸ್ವಾಮಿ ದೇವಾಲಯ, ಗೋಪಾಲಕೃಷ್ಣ ದೇವಾಲಯಗಳು ಹಾಗೂ ಶ್ರೀರಂಗಪಟ್ಟಣದಲ್ಲಿರುವ ರಣಧೀರ ಕಂಠೀರವ ನರಸರಾಜ ಒಡೆಯರ್ ನಿರ್ಮಿಸಿರುವ ಲಕ್ಷ್ಮಿನರಸಿಂಹಸ್ವಾಮಿ ದೇವಾಲಯಗಳು ಪ್ರಮುಖವಾಗಿ ಕಂಡುಬರುತ್ತದೆ. ಇಂತಹ ಪಥದಲ್ಲಿಯೇ ನೂರಾರು ದೇವಾಲಯಗಳು ಇವರ ಕಾಲದಲ್ಲಿ ನಿರ್ಮಾಣವಾಗಿ ಅಭಿವೃದ್ಧಿ ಹೊಂದಿ ಇಂದಿಗೂ ಪ್ರಮುಖ ಧಾರ್ಮಿಕ ಕ್ಷೇತ್ರಗಳಾಗಿ ಬೆಳೆದು ಬರುತ್ತವೆ. ಇವುಗಳಲ್ಲಿ ಮಲೆ ಮಹದೇಶ್ವರ ಬೆಟ್ಟ, ಚಿಕ್ಕಲ್ಲೂರು, ಕಪ್ಪಡಿ, ಬೋಪ್ಪಣ್ಣಪುರ, ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನ, ಮುಡುಕು ತೋರೆ ಮಲ್ಲಿಕಾರ್ಜುನ ಸ್ವಾಮಿ ದೇವಾಲಯ, ತಲಕಾಡಿನ ದೇವಾಲಯ, ಕೆ.ಆರ್. ನಗರದ ಬಳಿಯಲ್ಲಿರುವ ಚುಂಚನಕಟ್ಟೆ ಶ್ರವಣಬೆಳಗೋಳ, ಬೇಲೂರು, ಸೋಮನಾಥಪುರ, ತಿರುಮಕೊಡಲು ನರಸೀಪುರ, ಶೃಂಗೇರಿ, ಮೇಲುಕೋಟೆ, ಶ್ರೀರಂಗಪಟ್ಟಣ, ಗೋಪಾಲಸ್ವಾಮಿ ಬೆಟ್ಟ, ನಂಜನಗೂಡು ಮುಂತಾದ ಅನೇಕ ಧಾರ್ಮಿಕ ಕ್ಷೇತ್ರಗಳು ಇವರ ಆಳ್ವಿಕೆಯ ಕಾಲದಲ್ಲಿ ಅಭಿವೃದ್ಧಿ ಹೊಂದಿ ಧಾರ್ಮಿಕ ಸಂಸ್ಕೃತಿಯನ್ನು ಹೊರಚೆಲ್ಲುವ ಪವಿತ್ರ ಕ್ಷೇತ್ರಗಳಾಗಿ ಕಂಗೊಳಿಸಿದ್ದವು. ಇವು ಇಂದಿಗೂ ಅದೇ ರೀತಿಯ ಮಹತ್ವವನ್ನು ಉಳಿಸಿ ಪ್ರಾಚೀನ ಸಂಸ್ಕೃತಿಯನ್ನು ಬೆಳಸಿಕೊಂಡು ಬರುತ್ತಿವೆ.

ಕಾಯಕವೇ ಕೈಲಾಸ ಎಂದು ಕಾಯಕಕ್ಕೆ ವಿಶೇಷವಾದ ಮಹತ್ವ ಕಲ್ಪಿಸಿದ ವೀರಶೈವ ಧರ್ಮವು ಇವರ ಕಾಲದಲ್ಲಿ ಪ್ರಾಬಲ್ಯಕ್ಕೆ ಬರತೊಡಗಿತ್ತು. ವೀರಶೈವ ಧರ್ಮದ ರಕ್ಷಾ ಕವಚಗಳಂತಿರುವ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಪಂಚಾಕ್ಷರಿ ಮಂತ್ರಗಳು ಸಂಸ್ಥಾನದ ಕೆಳವರ್ಗದ ಜನರನ್ನು ಅಕರ್ಷಿಸಿ ಅನೇಕ ಜನರು ಈ ಧರ್ಮಕ್ಕೆ ಮತಾಂತರ ಹೊಂದಿದ್ದು ಕಂಡುಬರುತ್ತದೆ. ಮತಾಂತರದಲ್ಲಿ ವೀರಶೈವ ಧರ್ಮದ ನಂತರ ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಧರ್ಮವಾದ ಕ್ರೈಸ್ತಧರ್ಮ ಮೈಸೂರು ಸಂಸ್ಥಾನವನ್ನು ಆಕರ್ಷಿಸಿತ್ತೆನ್ನಬಹುದು. (ಇದರ ಬಗ್ಗೆ ಪ್ರತ್ಯೇಕವಾಗಿ ಮತಾಂತರ ಎಂಬ ವಿಷಯದಡಿ ಮುಂದೆ ಚರ್ಚಿಸಬಹುದಾಗಿದೆ). ಸಂಸ್ಥಾನದಲ್ಲಿ ಅಂದು ವೀರಶೈವ ಧರ್ಮದ ಪ್ರಚಾರ ಕಾರ್ಯವು ಸುತ್ತೂರಿನ ಶಿವರಾತ್ರೇಶ್ವರ ಸ್ವಾಮಿಮಠ, ದೇವನೂರಿನ ಗುರುಮಲ್ಲೇಶ್ವರ ಮಠ. ಅರಮನೆ ಜಪದಕಟ್ಟೆಮಠ, ಕುಂತೂರಿನ ವೀರಶೈವಮಠ, ಬೆಟ್ಟದ ಪುರದ ವೀರಶೈವಮಠ, ಚಿತ್ರದುರ್ಗ ಮುರುಘರಾಜೇಂದ್ರಮಠ, ತರಳಬಾಳು ಮಠ, (ತರಳಬಾಳು ಮಠವು ಸಂಸ್ಥಾನದ ಅರಸರ ಕಾಲದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿತ್ತೆನ್ನಬಹುದು). ಶ್ರೀ ಮರುಳಸಿದ್ಧರ ಉಜ್ಜಯಿನಿ ಕ್ಷೇತ್ರಮಠಗಳು ಪ್ರಮುಖ ಪಾತ್ರ ವಹಿಸಿದ್ದವು.

ಮಠಗಳು ಅಂದು ನುಡಿಗಿಂತ ನಡೆಗೆ, ವಿಚಾರಕ್ಕಿಂತ ಆಚಾರಕ್ಕೆ, ಬುದ್ಧಿಗಿಂತ ಭಾವಕ್ಕೆ, ತರ್ಕಕ್ಕಿಂತ ಅನುಬಾವಕ್ಕೆ, ಕುಲಕ್ಕಿಂತ ಶೀಲಕ್ಕೆ ಹಾಗೂ ಪ್ರತಿಯೊಂದು ಅಹಿಂಸಾತ್ಮಕ ಕಾಯಕಗಳಿಗೂ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟು ವೀರಶೈವ ಧರ್ಮದ ಅಭಿವೃದ್ಧಿಗೆ ಕಾರಣಕರ್ತರಾದರು. ಆದರೆ ಇಂದು ಇದೊಂದು ಜಾತಿಯಾಗಿ ಪರಿವರ್ತನೆಯಾಗಿ ತನ್ನ ಮೂಲ ಸ್ವರೂಪವನ್ನು ಸಂಪೂರ್ಣವಾಗಿ ಕಳೆದುಕೊಂಡು, ಯಾವ ಧರ್ಮ ಜಾತಿಪದ್ಧತಿಯನ್ನು ಕಠೋರವಾಗಿ ವಿರೋಧಿಸಿತ್ತೋ ಅದೇ ಧರ್ಮದ ಹೆಸರೇಳಿಕೊಂಡು ಜಾತಿ ಪದ್ಧತಿಯನ್ನು ಮತ್ತೆ ವೇದಗಳ ಕಾಲದವರೆಗೆ ಕೊಂಡೊಯ್ಯುತ್ತಿರುವ ಸಮಾಜವಾಗಿ ರೂಪಗೊಳ್ಳುತ್ತಿದೆ. ಇದರ ಕೊನೆಯನ್ನು ಕಾಲವೇ ನಿರ್ಧರಿಸಬೇಕು. ಈಗಂತೂ ಕರ್ನಾಟಕದಲ್ಲಿ ವೀರಶೈವ ಧರ್ಮದವರು ತಮ್ಮಧರ್ಮದ ಪ್ರಚಾರದಲ್ಲಿ ನಿರತರಾಗಿರುವುದು ಕಂಡುಬರುತ್ತಿದೆ. ಸೃಷ್ಟಿಯಲ್ಲಿ ಜೀವದ ತೊಳಲಾಟದ ಗುಟ್ಟೇನು? ಜೀವನ ಇದರಿಂದ ಮುಕ್ತವಾಗುವ ಬಗೆಯೆಂತು? ಎನ್ನುವ ಮೂಲಭೂತ ಪ್ರಶ್ನೆಗಳೊಂದಿಗೆ ಉತ್ತರವನ್ನು ಕಂಡುಕೊಳ್ಳುತ್ತಾ ಧರ್ಮ ತನ್ನ ಉಗಮವನ್ನು ಪಡೆಯುತ್ತ ದೆಂದು ಹಿರಿಯರು ಹೇಳುತ್ತಾರೆ. ಆದರೆ ಈ ಧರ್ಮಗಳ ಉಗಮಕ್ಕೆ ಮೂಲಕಾರಣಕರ್ತರಾದ ಜೀವಿಗಳು ತಮ್ಮ ತಮ್ಮ ಸಂಕುಚಿತ ಮಾರ್ಗವನ್ನು ಮಾತ್ರ ಹುಡುಕಿ ಹೊರತೆಗೆದವು ಈ ದೃಷ್ಟಿಯಲ್ಲಿ ಗಮನಿಸಬಹುದಾದದ್ದೆಂದರೆ ಇಲ್ಲಿ ಸ್ಥೂಲ ಮನಸ್ಸು ಹಾಗೂ ಸೂಕ್ಷ್ಮ ಆತ್ಮವನ್ನು ವಂಚಿಸಲು ಯಾವುದೋ ಒಂದು ಶಕ್ತಿ ಇವರಲ್ಲಿ ಮನೆಮಾಡಿಕೊಂಡಿರುತ್ತದೆಂದು ಹೇಳಿದರೆ ತಪ್ಪಾಗದೇನೋ. ಈ ರೀತಿಯಲ್ಲಿ ಇಂದಿನ ವೀರಶೈವ ಧರ್ಮ ಹಾಗೂ ಮಠಗಳು ಬೆಳೆದು ಬರುತ್ತಿರುವುದೇನೋ ಎಂಬ ಭಾವನೆ ಮೂಡದಿರದು.

ಮೈಸೂರು ಒಡೆಯರ ಮನೆದೇವರು ಮೇಲುಕೋಟೆಯ ಚಲುವ ನಾರಾಯಣಸ್ವಾಮಿ. ಈ ಚಲುವನಾರಾಯಣ ಸ್ವಾಮಿ ದೇವಾಲಯವು ಹೊಯ್ಸಳರ ಕಾಲದಲ್ಲಿ ಜೀರ್ಣೋದ್ಧಾರ ಕಂಡಿತ್ತು. ನಂತರ ೧೪ನೇ ಶತಮಾನದಲ್ಲಿ ಮುಸ್ಲಿಮರ ದಾಳಿಗೆ ತುತ್ತಾಗಿ ಸ್ವಲ್ಪ ನಾಶ ಹೊಂದಾಲಾರಂಭಿಸಿತು. ಮಧ್ಯಯುಗದಲ್ಲಿ ಕ್ರಿ.ಶ. ೧೪೬೦ರ ಸುಮಾರಿನಲ್ಲಿ ವಿಜಯನಗರದ ದೊರೆಯಾಗಿದ್ದ ಮಲ್ಲಿಕಾರ್ಜುನ (ಪ್ರೌಢ ದೇವರಾಯ) ಮಹಾ ಪ್ರಧಾನ ಎಂಬ ಹುದ್ದೆಯನ್ನು ಹೊಂದಿದ್ದ ನಾಗಮಂಗಲದ ತಿಮ್ಮಣ್ಣ ಎಂಬ ದಂಡನಾಯಕನು ಈ ದೇವಾಲಯವನ್ನು

ಜೀರ್ಣೋದ್ಧಾರ ಮಾಡಿಸಿದ್ದ. ಇವನನ್ನು ಮೇಲುಕೋಟೆಗೆ ಮರುಜೀವ ತುಂಬಿದ "ಜೀರ್ಣೋದ್ಧಾರಕ ಎಂಬ ಬಿರುದನ್ನು ಪಡೆದಿದ್ದನು. ಇವನ ಪತ್ನಿ ರಂಗಾಬಿಕಯೊಡನೆ ದೇವಾಲಯದ ಸಭಾಂಗಣದಲ್ಲಿ ಕಲ್ಯಾಣ ಮಂಟಪ (ವಸಂತ ಮಂಟಪವೆಂದು ಇಂದು ಪ್ರಸಿದ್ಧವಾಗಿದೆ) ಕಟ್ಟಿಸಿದನು. ಈ ಮಂಟಪವು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿದ್ದು ರಾಮಾಯಣ, ಭಗವದ್ಗೀತೆ ಮಹಾಭಾರತದ ಹಿನ್ನೆಲೆಯ ಕಥೆಗಳನ್ನು ಸೂಚಿಸುವ ಸುಂದರ ಕೆತ್ತನೆಯು ಇಂದಿಗೂ ಜೀವಂತವಾಗಿ ಉಳಿದುಕೊಂಡು ಹಿಂದೂ ಸಂಸ್ಕೃತಿಯನ್ನು ಹೊರಚೆಲ್ಲುತ್ತ ನಿಂತಿದೆ.

ಮುಂದೆ ಮೇಲುಕೋಟೆಯಲ್ಲಿ ಮೈಸೂರು ಅರಸರ ರಚನೆಗಳು ಹಾಗೂ ಅಪಾರ ಕೊಡುಗೆಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಚಲುವನಾರಾಯಣ ಸ್ವಾಮಿ ದೇವಾಲಯದ ನವರಂಗದ ಒಂದುಕಂಬದಲ್ಲಿ ಮೈಸೂರಿನ ಪ್ರಥಮ ಸ್ವಾತಂತ್ರ್ಯ ಅರಸ ರಾಜ ಒಡೆಯರ್ ರವರ ಭಕ್ತಿ ಭಾವದ ಚಿಕ್ಕಮೂರ್ತಿಯನ್ನು ಕಲ್ಲಿನಲ್ಲಿ ಕಡೆಯಲಾಗಿದೆ. ರಾಜ ಒಡೆಯರು ಚಲುವನಾರಾಯಣನಿಗೆ ವಜ್ರ ಹಾಗೂ ಬಂಗಾರದಿಂದ ನಿರ್ಮಿತವಾಗಿರುವ ವೈರಮುಡಿಯನ್ನು ಅರ್ಪಿಸಿದ್ದನೆಂದು ದಾಖಲೆಗಳಿಂದ ತಿಳಿದುಬರುತ್ತದೆ. ಇಂದಿಗೂ ಪ್ರತಿವರ್ಷ ಚೈತ್ರ ಶುದ್ಧ ಹುಣ್ಣಿಮೆಯಂದು ವೈರಮುಡಿ ಉತ್ಸವ ನಡೆಯುತ್ತದೆ. ಇದರ ವರ್ಣನೆ ಅಪೂರ್ವವಾದದ್ದಾಗಿದೆ. ರಾಮಾನುಜಾಚಾರ್ಯರು. ಈ ಕ್ಷೇತ್ರದಲ್ಲಿ ನೆಲೆಸಿ ಇದನ್ನೊಂದು ಸಾಂಸ್ಕೃತಿಕ ಕ್ಷೇತ್ರವನ್ನಾಗಿ ಪರಿವರ್ತಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಸಂಸ್ಥಾನದಲ್ಲಿ ಮತ್ತೊಂದು ಪವಿತ್ರ ಧಾರ್ಮಿಕ ಕ್ಷೇತ್ರವೆಂದರೆ ಆದಿ ಚುಂಚನಗಿರಿ. ಇದು ನಾಗಮಂಗಲದ ಬಳಿಯಿರುವ ಚುಂಚನಗಿರಿ ಕ್ಷೇತ್ರ ಎಂಬ ಗ್ರಾಮದಲ್ಲಿದೆ. ಈ ಕ್ಷೇತ್ರದಲ್ಲಿ ಒಕ್ಕಲಿಗರು ಪ್ರಸಿದ್ಧವಾದ ಶ್ರೀ ಆದಿ ಚುಂಚನಗಿರಿ ಮಹಾ ಸಂಸ್ಥಾನ ಮಠವನ್ನು ನಿರ್ಮಿಸಿಕೊಂಡು ಮುನ್ನಡೆದುಕೊಂಡು ಬರುತ್ತಿದ್ದಾರೆ. ಇದರ ಗುರು ಪರಂಪರೆಯ ಪ್ರಕಾರ ಈಗಿನ ಪೀಠಾಧ್ಯಕ್ಷರಾದ ಬಾಲಗಂಗಾಧರನಾಥ ಸ್ವಾಮಿಗಳು ೭೧ನೇ ಯವರೆಂದು ತಿಳಿದುಬರುತ್ತದೆ. ಈ ಮಠಕ್ಕೆ ಸಂಬಂಧಿಸಿದಂತೆ ಕಾಲಭೈರವೇಶ್ವರ, ಗಂಗಾಧರೇಶ್ವರ, ಗವಿಸಿದ್ದೇಶ್ವರ, ಮಲ್ಲೇಶ್ವರ, ಕಂಬಡಮ್ಮ, ಗಳಗಕಲ್ಲೇಶ್ವರ ಇತ್ಯಾದಿ ದೇವಾನುದೇವತೆಗಳಿಗೆ ಪೂಜಾ ಪುರಸ್ಕಾರ ನಡೆಯುತ್ತದೆ. ಕ್ಷೇತ್ರದಲ್ಲಿ ಹಿಂದೆ ಒಕ್ಕಲಿಗರು, ಲಿಂಗಾಯಿತರು, ಹೊಲೆಯ, ಮಾದಿಗರು, ನೇಯ್ಗಯವರು ಹೆಚ್ಚಾಗಿ ಪೂಜಿಸಿಕೊಂಡು ಬರುತ್ತಿದ್ದರು. ಆದರೆ ಪ್ರಸ್ತುತ ಒಕ್ಕಲಿಗರ ಕ್ಷೇತ್ರವಾಗಿ ಮಾತ್ರ ಬೆಳೆದು ಬರುತ್ತಿರುವುದು ಶೋಚನೀಯ ಸಂಗತಿ.

ಮೈಸೂರು ಅರಸರ ರಾಜಗುರುಗಳೆಂದು ಹೆಸರು ಪಡೆದಿದ್ದ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಠದ ಯತಿಗಳ ಮಠವು ಶ್ರೀರಂಗಪಟ್ಟಣದಲ್ಲಿದೆ. ಈ ಮಠಕ್ಕೂ ಮೈಸೂರು ಅರಸರ ಪ್ರಾರಂಭದ ದೊರೆಯೆನಿಸಿಕೊಂಡಿರುವ ಯದುರಾಯರಿಗೂ ಪ್ರಾರಂಭದಿಂದಲೇ ಆತ್ಮೀಯ ಸಂಬಂಧ ಬೆಳೆದು ಬಂದಿತ್ತು. ಪ್ರಾರಂಭದಲ್ಲಿ ಈ ಮಠದ ಕೆಂದ್ರವು ತಿರುಪತಿಯಾಗಿದ್ದಿತ್ತು. ಕ್ರಿ.ಶ. ೧೯೭೯ - ೧೭೦೦ರ ಸಮಯದಲ್ಲಿ ದೊಡ್ಡಪರಕಾಲ ಸ್ವಾಮಿಗಳ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಇದು ವರ್ಗಾವಣೆ ಆಗಿತ್ತೆಂದು ತಿಳಿದುಬರುತ್ತದೆ. ಇದು ಅಂದು ವೈಷ್ಣವ ಧರ್ಮ ಪೋಷಣೆ ಪ್ರಮುಖ ಕೇಂದ್ರವಾಗಿದ್ದಿತ್ತು. ತಮ್ಮ ಮೂಲಪುರುಷನಿಂದ ಪೋಷಿಸಿಕೊಂಡು ಬಂದ ಈ ಮಠಕ್ಕೆ ಮೈಸೂರಿನ ಅರಸರು ತಮ್ಮ ಕೊನೆ ಕಾಲದವರೆಗೂ ವಿಶೇಷ ಗೌರವ ಭಕ್ತಿಯನ್ನು ಅರ್ಪಿಸಿಕೊಂಡು ಬಂದರೆಂದು ಹೇಳಬಹುದು.

**ಮೈಸೂರು ಅರಸರ ಕಾಲದ ದೇವಾಲಯಗಳು**

ಮೈಸೂರು ಸಂಸ್ಥಾನದಲ್ಲಿನ ಅನೇಕ ದೇವಾಲಯಗಳು ಹೊಯ್ಸಳ ದ್ರಾವಿಡ ಮತ್ತು ಹಿಂದೂ ಶಿಲ್ಪಕಲಾ ಕೌಶಲ್ಯದಿಂದ ಕೂಡಿ ಪ್ರಸಿದ್ಧವಾಗಿವೆ. ಈ ದೇವಾಲಯಗಳು ಕೇವಲ ಧಾರ್ಮಿಕ ಕ್ಷೇತ್ರಗಳಾಗಿರದೆ ಕೆಲವು ಆಸಕ್ತಿಗಳನ್ನು ಕೆರಳಿಸುವ ರೀತಿಯಲ್ಲಿ. ತಮ್ಮದೇ ಆದ ರಾಜಕೀಯ ಮತ್ತು ಚಾರಿತ್ರಿಕ ಹಿನ್ನೆಲೆಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಈ ದೇವಾಲಯಗಳಲ್ಲಿ ಕೆಲವು ೧೫ನೇ ಶತಮಾನಕ್ಕೂ ಹಿಂದಿನವುಗಳಾಗಿದ್ದರೆ ಮತ್ತೆ ಕೆಲವು ಈಚೆಗೆ ಕಟ್ಟಿಲ್ಪಟ್ಟವಾಗಿವೆ. ಇವುಗಳಿಂದ ಒಡೆಯರ್ ರವರ ದೈವಭಕ್ತಿ ಮತ್ತು ಶಿಲ್ಪಕಲಾ ಕ್ಷೇತ್ರವನ್ನು ಅಧ್ಯಯನ ಮಾಡಬಹುದಾಗಿದೆ.

**ಕೋಡಿ ಭೈರವಸ್ವಾಮಿ (ಸೋಮೇಶ್ವರ ದೇವಾಸ್ಥಾನ :** ಈ ದೇವಾಲಯವು ದೊಡ್ಡ ಕೆರೆಯ ಕೋಡಿಯ ಹತ್ತಿರ ಇರುವುದರಿಂದಾಗಿ ಕೋಡಿ ಭೈರವ ಎಂದು ಕರೆಸಿಕೊಂಡು ಬರುತ್ತಿದೆ. ಈ ದೇವಾಲಯವು ಸುಂದರವಾಗಿದ್ದು ಮೈಸೂರಿನ ಚರಿತ್ರೆಯಲ್ಲಿ ಅದ್ಭುತವಾದ

ಪ್ರಾಮುಖ್ಯತೆಯನ್ನು ಹೊಂದಿದೆ. ಮೈಸೂರು ರಾಜ್ಯದ ಸ್ಥಾಪನೆಯು ಈ ದೇವಾಲಯದಲ್ಲಿ ಸಂಭವಿಸಿತ್ತೆಂದು ಪ್ರತೀತಿ. ಈ ಸೃಷ್ಟಿಯಿಂದಾಗಿ ಇದು ತನ್ನ ಕೀರ್ತಿಯನ್ನು ಹೆಚ್ಚಿಸಿಕೊಂಡು ಬರುತ್ತಿದೆ, ಭೈರವಮೂರ್ತಿ ಸುಮಾರು ಮೂರು ಅಡಿ ಎತ್ತರವಿದ್ದು ನಾಲ್ಕು ಕೈಗಳಲ್ಲೂ ತ್ರಿಶೂಲ, ತಲೆಬುರುಡೆ, ಕತ್ತಿಯನ್ನು ಹಿಡಿದು ರೌದ್ರಾವತಾರದಿಂದ ನಿಂತಿದೆ. ಇದರ ಬಲಗಡೆ ಪಕ್ಕಕ್ಕೆ ಚೌಲಿಯನ್ನು ಹೊಂದಿರುವ ಸ್ತ್ರೀ ವಿಗ್ರಹ ಮತ್ತು ಎಡಕ್ಕೆ ಪಕ್ಷಿಯ ತಲೆ ಮತ್ತು ಕುಡುಗೋಲನ್ನೂ ಬಲಗೈಯಲ್ಲಿ ಎತ್ತಿ ಹಿಡಿದ ಭದ್ರಕಾಳಿ ಎಂಬ ಹೆಣ್ಣುದೇವತೆ ನಿಂತಿದ್ದಾಳೆ. ಇಂದು ಈ ದೇವಾಲಯವು ವಿದ್ಯುದ್ದೀಪಗಳಿಂದ ಕಂಗೊಳಿಸುತ್ತಿದೆ. ಇದರ ಪಕ್ಕದಲ್ಲಿಯೇ ಮೂರು ಕೋಣೆಯಲ್ಲಿ ನಾರಾಯಣ, ಇನ್ನೊಂದು ಕೋಣೆಯಲ್ಲಿ ಅಮ್ಮನವರು ಎಂಬ ದೇವತೆ ಇದೆ. ದೇವಾಲಯವು ಮೈಸೂರು ಅರಮನೆಯ ಪಕ್ಕದಲ್ಲಿರುವ ದೊಡ್ಡ ಕೆರೆಯ ಪಕ್ಕದಲ್ಲಿದೆ.

**ವರಹಾಸ್ವಾಮಿ ದೇವಾಲಯ :** ಈ ದೇವಾಲಯವು ಸಂಸ್ಥಾನದಲ್ಲಿಯೇ ಅತ್ಯಂತ ಉತ್ಕೃಷ್ಟ ಶಿಲ್ಪ ಕಲಾ ಕೌಶಲ್ಯದಿಂದ ಕೂಡಿದ ದೇವಾಲಯ ಎಂದು ಹೆಸರುಗಳಿಸಿದೆ. ಒಂದು ದೃಷ್ಟಿಯಲ್ಲಿ ಬೇಲೂರು ಮತ್ತು ಸೋಮನಾಥಪುರ ದೇವಾಲಯಗಳ ಕಲಾ ನೈಪುಣ್ಯತೆಯನ್ನು ತನ್ನ ಮಡಿಲಿನಲ್ಲಿ ಅಡಗಿಸಿಕೊಂಡಿರುವ ಈ ದೇವಾಲಯವು ಪ್ರೇಕ್ಷಕರನ್ನು ತನ್ನಡೆಗೆ ಆಕರ್ಷಿಸಿಕೊಳ್ಳುತ್ತದೆ. ಇದು ಮೈಸೂರು ಅರಮನೆ ಕೋಟೆಯ ದಕ್ಷಿಣ ಬಾಗಿಲಿನ ಬಳಿಯಲ್ಲಿದೆ. ಈ ದೇವಾಲಯವು ಹೊಯ್ಸಳ ಕಲಾಕೃತಿಗಳಿಂದ ಕೂಡಿದೆ. ದೇವಿ ಗುಡಿಯ ಸುಂದರವಾದ ಬಾಗಿಲು ಮತ್ತು ಕಂಬಗಳನ್ನು ಕೆತ್ತನೆಯ ಕೆಲಸದಿಂದ ನಿರ್ಮಿಸಿರುವ ರೀತಿ ಮನಸೂರೆಗೊಳ್ಳುತ್ತದೆ. ಅಲ್ಲಿರುವ ಅನೇಕ ಪೀಠಗಳೊಂದರಲ್ಲಿ ಚಿಕ್ಕದೇವವರಾಯ ಒಡೆಯರ "ಸೇವಾರ್ಥ" (೧೬೭೨ - ೧೭೦೪) ಎಂದು ಬರೆಯಲಾಗಿದೆ. ಈ ಶ್ವೇತ ವರಾಹಸ್ವಾಮಿ ವಿಗ್ರಹವನ್ನು ಚಿಕ್ಕದೇವರಾಜ ಒಡೆಯರು "ಶ್ರೀಮುಷ್ಣಂ" ಎಂಬ ಗ್ರಾಮದಿಂದ ತಂದರೆಂದು ತಿಳಿದುಬರುತ್ತದೆ.

**ಲಕ್ಷ್ಮೀ ರಮಣಸ್ವಾಮಿ ದೇವಸ್ಥಾನ :** ಸಂಸ್ಥಾನದ ಪುರಾತನ ದೇವಾಲಯಗಳಲ್ಲಿ ಇದೊಂದು. ಮೈಸೂರಿನ ಕೋಲ್ ಸಾಹೇಬರ ತೋಟದಲ್ಲಿ ದೊರೆತ ಕ್ರಿ.ಶ. ೧೪೯೯ರ ಶಿಲಾಶಾಸನದ ಪ್ರಕಾರ ವಿಜಯನಗರದ ಅರಸರಾದ ಕೃಷ್ಣದೇವರಾಯರ ಅಜ್ಞೆಯ ಮೇರೆಗೆ ಈ ದೇವಾಲಯಕ್ಕೆ ದಾನದತ್ತಿ ನೀಡಿದ್ದರೆಂದು ತಿಳಿದುಬರುತ್ತದೆ.

**ತ್ರಿನಯನೇಶ್ವರ ಸ್ವಾಮಿ ದೇವಾಲಯ :** ಇದು ದ್ರಾವಿಡ ನಾಗರಿಕತೆಯನ್ನು ಪ್ರತಿಬಿಂಬಿಸುವ ದೇವಾಲಯ. ಅರಮನೆಯ ಎದುರು ಭಾಗದಲ್ಲಿ ಪಶ್ಚಿಮಾಭಿಮುಖವಾಗಿದೆ. ಹೀಗಿರುವ ದೊಡ್ಡಕೆರೆಯ ಪಕ್ಕದಲ್ಲಿ ಇರುವುದರಿಂದ ಅಂದು ಕೆರೆ ನೀರಿನಿಂದ ತುಂಬಿ ದೇವಾಲಯಕ್ಕೆ ನೀರಿನ ಅಲೆಗಳು ಬಂದಪ್ಪಳಿಸಿ ದೇವಾಲಯವನ್ನು ದುಃಸ್ಥಿತಿಗೆ ತಂದೊಡ್ಡಿತ್ತು. ಇಂಚಗ ಸಮಯದಲ್ಲಿ ಕಮಠೀರವ ನರಸರಾಜ ಒಡೆಯರ್ ಹಾಗೂ ದೇವರಾಜ ಒಡೆಯರ್ ರವರು ದೇವಸ್ಥಾನದ ಸುತ್ತಲೂ ಮಣ್ಣಿನಿಂದ ಭರ್ತಿ ಹಾಕಿಸಿ ಕೋಟೆ ನಿರ್ಮಿಸಿ ದೇವಾಲಯ ರಕ್ಷಿಸಿದರು. ಈದೇವಾಲಯದ ಹೊರವಲಯದ ಮಹಾದ್ವಾರ ಬಹಳ ಸುಂದರವಾಗಿದೆ. ಒಳಭಾಗದ ಅಂಗಳಗಳೆಲ್ಲವೂ ಲಿಂಗಗಳು ಹಾಗೂ ಸಣ್ಣ ಸಣ್ಣ ಮಂಟಪಗಳಿಂದ ಕೂಡಿವೆ.

**ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ :** ೧೮೨೫ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ರವರು ಸ್ಥಾಪಿಸಿದ ಈ ದೇವಾಲಯವು ಅರಮನೆಯ ಪಶ್ಚಿಮ ಮಹಾದ್ವಾರದ ಹತ್ತಿರವಿದೆ. ಒಂದು ದಾಖಲೆಯ ಪ್ರಕಾರ ಈ ದೇವಾಲಯವನ್ನು ಮಾಧ್ವ ಧರ್ಮ ಪ್ರಚಾರಕರಾದ ಸುಬ್ಬರಾಯದಾಸ ಎಂಬುವನು ಈ ದೇವಾಲಯ ಕಟ್ಟಿಸಿದನೆಂದು ತಿಳಿದುಬರುತ್ತದೆ. ಈತನ ಮೂರು ಅಡಿ ಎತ್ತರದ ವಿಗ್ರಹ ದೇವಾಲಯದಲ್ಲಿ ಕಂಡುಬರುತ್ತದೆ.

**ಗಾಯತ್ರಿ ದೇವಾಲಯ ಮತ್ತು ಕಾಮ ಕಾಮೇಶ್ವರೀ ದೇವಸ್ಥಾನ :** ಮೈಸೂರು ಅರಮನೆಯ ಕೋಟೆಯ ಜಯಮಾರ್ತಾಂಡ ಮಹಾದ್ವಾರದ ದಕ್ಷಿಣಕ್ಕಿದೆ. ಈ ದೇವಾಲಯ ರಚನೆಯಲ್ಲಿ ಚಿಕ್ಕದಾದರೂ ಬಹು ಸುಂದರವಾಗಿದೆ. ೧೯೫೩ರಲ್ಲಿ ಇದರ ಕೆಲಸ ಪೂರ್ಣಗೊಂಡಿತು ಎಂದು ಶಾಸನಾಧಾರಗಳಿಂದ ತಿಳಿಯಬಹುದು. ಸಂಸ್ಥಾನದ ಕೊನೆಯ ದೊರೆಯಾದ ಶ್ರೀ ಜಯಚಾಮರಾಜ ಒಡೆಯರ್ ರವರು ಕಟ್ಟಿಸಿದ ಮೂರು ದೇವಾಲಯಗಳಲ್ಲಿ ಗಾಯತ್ರಿದೇವಾಲಯ, ಶ್ರೀಭುವನೇಶ್ವರಿ ದೇವಾಲಯ ಹಾಗೂ ಹಳೇ

ಅಗ್ರಹಾರದಲ್ಲಿ ಸಿದ್ದಲಿಂಗ ಸ್ವಾಮಿಗಳ ಮಠದ ಪಕ್ಕದಲ್ಲಿರುವ ಕಾಮೇಶ್ವರೀ ದೇವಸ್ಥಾನಗಳು ಪ್ರಸಿದ್ಧವಾದವು. ಈ ಮೂರು ದೇವಾಲಯಗಳೂ ಸಹ ಚಿಕ್ಕದಾದರೂ ಸುಂದರವಾಗಿವೆ.

**ಚಾಮುಂಡೇಶ್ವರಿ ದೇವಾಲಯ :** ಮೈಸೂರು ನಗರಕ್ಕೆ ಹಿಂಬದಿಯಲ್ಲಿ ಸೌಂದರ್ಯ ದೇವತೆಯಂತೆ ನಿಂತು ವೀಕ್ಷಕರ ಮನಸ್ಸನ್ನು ಸೂರೆಗೊಳ್ಳುತ್ತಿರುವ ಈ ಬೆಟ್ಟ ಬೆಳಿಗ್ಗೆ ಹಾಗೂ ಸಂಜೆಯ ವೇಳೆಯಲ್ಲಿ ಸೂರ್ಯನ ಉಗಮ ಮತ್ತು ಅಸ್ಥಮಗಳೊಂದಿಗೆ ಬಹುಸುಂದರವಾಗಿ ಆಟವಾಡುತ್ತದೆ. ದೊಡ್ಡ ದೇವರಾಜ ಒಡೆಯರ್ ರವರು ಈ ಬೆಟ್ಟಕ್ಕೆ ಒಂದು ಸಾವಿರ ಮೆಟ್ಟಿಲುಗಳನ್ನು ನಿರ್ಮಿಸಿದರು. ಈಗ ಬಸ್ ಮಾರ್ಗದ ಡಾಂಬರ್ ರಸ್ತೆಯ ಸೌಕರ್ಯವಿದೆ. ದೇವಾಲಯವು ದ್ರಾವಿಡ ಶೈಲಿಯಲ್ಲಿ ಬೃಹದಾಕಾರವಾಗಿ ನಿರ್ಮಿತವಾಗಿದೆ. ಈ ದೇವತೆಯ ರಾಜಮನೆತನದವರ ಕುಲದೇವತೆ. ಇದನ್ನು ಪಾರ್ವತಿ, ದುರ್ಗಿ, ಕಾತ್ಯಾಯಿನಿ, ಚಾಮುಂಡಿ ಅವತಾರವೆಂದು ಜನ ನಂಬಿದ್ದಾರೆ. ದೇವಾಲಯದ ಒಳ ಭಾಗದಲ್ಲಿ ಸೊಗಸಾದ ಬಿಲ್ವಪತ್ರೆಯ ಮರವಿದೆ. ಹಿಂದೂ ಸಂಪ್ರದಾಯದಲ್ಲಿ ಈ ಬಿಲ್ವ ಪತ್ರೆ ಪೂಜೆಗೆ ಬಹಳ ಮಹತ್ವವಿದೆ. ಹೊಯ್ಸಳರ ದೊರೆ ವಿಷ್ಣುವರ್ಧನನು ೧೧೨೮ರಲ್ಲಿ ಹಾಗೂ ೧೬೨೦ರಲ್ಲಿ ವಿಜಯನಗರದ ಅರಸರು ಈ ದೇವಾಲಯದ ವೈಭವವನ್ನು ಹೆಚ್ಚಿಸಿದ್ದರು. ನೆಲದಿಂದ ಬೆಟ್ಟಕ್ಕೆ ಮೆಟ್ಟಿಲಿನ ಮೂಲಕ ಹತ್ತುತ್ತಾ ಹೋದರೆ ಸರಿಯಾಗಿ ೭೦೦ ಮೆಟ್ಟಿಲುಗಳನ್ನು ಹತ್ತಿದರೆ ಬೃಹತ್ ಏಕಶಿಲಾ ಬಸವಣ್ಣ ಗೋಚರಿಸುತ್ತದೆ. ಇದನ್ನು ದೊಡ್ಡ ದೇವರಾಜ ಒಡೆಯರ್ ನಿರ್ಮಿಸಿದ್ದನೆಂದು ತಿಳಿದುಬರುತ್ತದೆ. ಬೆಟ್ಟದ ಮೇಲೆ ದೇವೀ ಕೆರೆ ಸಿಗುತ್ತದೆ. ನವರಾತ್ರಿ ಹಬ್ಬದ ಸಮಯದಲ್ಲಿ ಇಲ್ಲಿ ವೈಭವದ ಚಾಮುಂಡೇಶ್ವರಿ ತೆಪ್ಪೋತ್ಸವ ನಡೆಯುತ್ತದೆ. ಈ ಸಮಯದಲ್ಲಿ ಸಾವಿರ ದೀಪಗಳನ್ನು ಕೆರೆಗೆ ಅರ್ಪಿಸುವುದರಿಂದ ಇದು ಸಾವಿರ ದೀಪಗಳ ಸರೋವರವೆಂದು ಪ್ರಸಿದ್ದಿಯಾಗಿದೆ.

**ಹಬ್ಬ ಮತ್ತು ಉತ್ಸವಗಳು**

ಮೈಸೂರು ಸಂಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಹರಿದಿನಗಳ ಹಿನ್ನೆಲೆಯಲ್ಲಿ ಜರುಗುತ್ತಿದ್ದ ಹಲವಾರು ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯಗಳನ್ನು ಅವಲೋಕಿಸಿದಾಗ, ಅಲ್ಲಿನ ಸಾಮಾನ್ಯ ಜನತೆಯ ಧಾರ್ಮಿಕ ಸಂಸ್ಕೃತಿಯು ವಿಶಾಲವಾಗಿ ಹರಡಿಕೊಳ್ಳುತ್ತದೆ. ಪ್ರಮುಖವಾಗಿ ದೀಪಾವಳಿ ನಾಡಿದ ಪ್ರಮುಖ ನಾಡಹಬ್ಬಗಳಲ್ಲಿ ಒಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ವಿಶಿಷ್ಟವಾದ ಪರಿಣಾಮ ಬೀರುತ್ತಿತ್ತು. ಅದು ಎತ್ತುಗಳ ಓಡದ ಸ್ಪರ್ಧೆಯಿಂದಾಗಲಿ, ಭಾರವಾದ ಕಲ್ಲಿನ ಗುಂಡುಗಳನ್ನು ಎತ್ತುವ ಸ್ಪರ್ಧೆಯಾಗಲಿ, ಬಣ್ಣದ ನೀರಿನ ಕೊಳದಲ್ಲಿ ಬಿದ್ದು ಅಥವಾ ಬಣ್ಣದ ನೀರನ್ನು ಎರಚಾಡುವ ಓಕುಳಿ ಆಟವಾಗಲಿ, ಇತ್ತೀಚೆಗೆ ನಿಂತುಹೋಗಿರುವ ಅತಿ ಉದ್ದನೆಯ ಅಡಕೆ ಮಗಳ ತುದಿಯಲ್ಲಿ ನೇತಾಡುತ್ತ ಶೂಲ - ಬಲಿಯಾಗುವ ರೋಮಾಂಚಕ ಜನಪದೀಯ ಕಲೆಗಳು ಪ್ರದರ್ಶನಗೊಳ್ಳುತ್ತಿದ್ದವು. ಕೆಲವು ಗ್ರಾಮಗಳಲ್ಲಿ ಗ್ರಾಮ ದೇವತೆಯ ಹಬ್ಬದ ಸಮಯದಲ್ಲಿ ಓಕುಳಿಯಾಟ, ರಂಗದ ಕುಣಿತ, ಕೋಲಾಟವನ್ನು ಹಾಗೂ ಕುಸ್ತಿ, ದೊಣ್ಣೆವರಸೆ ನಡೆಸುವುದು ಸರ್ವೇಸಾಮಾನ್ಯವಾಗಿತ್ತು. ಇವೆಲ್ಲವೂ ಸಾಮಾನ್ಯವಾಗಿ ಮಾತೃದೇವತೆಗಳ ಹೆಸರಿನಲ್ಲಿ ನಡೆಯುತ್ತವೆ. ಗಂಡು ದೇವರುಗಳಾದರೆ ಬೀರೇಶ್ವರ, ಶಿವ ಮುಂತಾದ ಶೈವ ಗಂಡು ದೇವರ ಜಾತ್ರೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಭಕ್ತರು ಹೆಚ್ಚಾಗಿ ದೇವರಿಗೆ ಹರಕೆ ಹೊತ್ತುಕೊಂಡು ಕೊಂಡಬಂಡಿ, ಸಿಡಿ, ಮಡೆ, ನಡೆಮುಡಿ, ಕಳಸ ಸೇವೆ, ಕರಗ ಸೇವೆ, ಬಾಯಿಬೀಗಸೇವೆ, ಪಂಜಿನಸೇವೆ ದೇವರ ಮರೆತ, ದೇವರಿಗೆ ಹೊಸ ಬಟ್ಟೆಗಳ ಅರ್ಪಿಸುವಿಕೆ ಇತ್ಯಾದಿ ಸಂಪ್ರದಾಯಗಳು ಹಾಗೂ ತಮಟೆ, ನಗಾರಿ, ಯಬ್ರಗಳ ಜನಪದೀಯ ವಾದ್ಯ ವಿಶೇಷಗಳೊಂದಿಗೆ ಸಾಗಿ ಹಬ್ಬ ಮುಗಿಸುತ್ತಿದ್ದರು. ಇದು ಇಂದಿಗೂ ಕೆಲವು ಬದಲಾವಣೆಗಳೊಂದಿಗೆ ನಡೆದುಕೊಂಡು ಬರುತ್ತಿದೆ. ಏಕೆಂದರೆ ವರ್ತಮಾನ ಎಂದಿಗೂ ಭೂತದ ಬುತ್ತಿಯನ್ನು ಹೊತ್ತುಕೊಂಡು ಬಂದಿರುತ್ತದೆ. ಹಾಗೆಯೇ ವರ್ತಮಾನ ಮುಂದಿನ ಭವಿಷ್ಯಕ್ಕೆ ಇದನ್ನು ಕೊಂಡೊಯ್ಯುತ್ತದೆ.

ಗ್ರಾಮದೇವತೆಯ ಹಬ್ಬಗಳು ರೈತರ ಹಬ್ಬಗಳಾಗಿದ್ದರಿಂದ ರೈತರಿಗೆ ಬಿಡುವು ಎನ್ನುವ ದೊರೆಯುವ ಕಾಲದಲ್ಲಿಯೇ ಹೆಚ್ಚಾಗಿ ನಡೆಯುತ್ತವೆ. ರೈತರಿಗೆ ಅನುಕೂಲವಾಗುವ ಸಲುವಾಗಿ ದನಗಳ ಜಾತ್ರೆಯೂ ಬೇಸಿಗೆಯ ಕಾಲದಲ್ಲಿಯೇ ನಡೆಯುತ್ತಿದ್ದವು. ಇವು ಅದೇ ರೀತಿಯಲ್ಲಿ ಇಂದಿಗೂ ನಡೆದುಕೊಂಡು ಬರುತ್ತಿರುವುದು ಕಂಡುಬರುತ್ತದೆ. ಸಂಸ್ಥಾನದಲ್ಲಿ ಹೇಮಗಿರಿ. ಮದ್ದೂರು, ಅಂಕಲಹಳ್ಳಿ ಚುಂಚನಕಟ್ಟೆ. ಮುಡುಕು ತೊರೆ, ಟಿ. ನರಸೀಪುರ, ಬನ್ನೂರು ದನಗಳ ಜಾತ್ರೆ ಪ್ರಖ್ಯಾತವಾಗಿತ್ತು. ಸ್ಥಳೀಯರು ಆಯಾ

ಗ್ರಾಮದೇವತೆಗಳ ಅಥವಾ ದೇವರುಗಳ ಮೇಲೆ ಹಾಡುವ ಕನಪದ ಹಾಡುಗಳೂ ಮನಮೋಹಕವಾಗಿ ಮೂಡಿಬಂದು ನಮ್ಮ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

ಗ್ರಾಮೀಣ ಧಾರ್ಮಿಕ ಸಂಸ್ಕೃತಿಯು ಅಲ್ಲಿನ ಜನರ ಕಲೆ, ವೇಷ - ಭೂಷಣ, ಅವರ ವೈಯ್ಯಾರ ಹಾಗೂ ಜನಪದರ ರಸಿಕತೆಯ ಬದುಕಿನ ಕನ್ನಡಿಯಂತಿರುತ್ತವೆ. ಶೈವ ಸಂಪ್ರದಾಯದ ಜನಪದ ಗಂಡುಕಲೆ ಎನಿಸಿಕೊಂಡಿರುವ ನಂದೀಧ್ವಜಕುಣಿತ, ವೀರಭದ್ರನ ಕುಣಿತಗಳು ಹೆಚ್ಚಾಗಿ ಸಂಸ್ಥಾನದಲ್ಲಿ ಕಂಡುಬರುತ್ತಿತ್ತು. ಗ್ರಾಮೀಣ ಪ್ರದೇಶದಲ್ಲಿ ದಲಿತ ವರ್ಗದವರ ಆರಾಧ್ಯ ದೈವವಾಗಿರುವ "ಮಾರಮ್ಮದೇವಿಗೆ" ಹಬ್ಬ ಏರ್ಪಡಿಸಿ ಅದಕ್ಕೆ ಇಷ್ಟವಾದ ಮಾಂಸಹಾರ ಭೋಜನವನ್ನು ಅರ್ಪಿಸಿ ಕುಣಿದು ಕುಪ್ಪಳಿಸುವುದು ಕಂಡುಬರುತ್ತದೆ. ಇದನ್ನು 'ಮಾರಿಕುಣಿತ' ಎಂದು ಕರೆಯುತ್ತಾರೆ. ಮಾರಿ ದೇವತೆಗೆ ಶಾಂತಿಗೈಯ್ಯುವುದೇ ಈ ಕುಣಿತದ ಉದ್ದೇಶ. ತಲೆಗೆ ತೆಂಗಿನಕಾಯಿ ಹೊಡೆದುಕೊಳ್ಳುವುದು. ಕತ್ತಿಯಿಂದ ಮೈಯನ್ನು ಕುಯಿದುಕೊಳ್ಳುವುದು, ಚಾವುಟಿಯಿಂದ ಹೊಡೆದುಕೊಳ್ಳುವುದು, ಬೆಂಕಿಯನ್ನು ತುಳಿದುಕೊಂಡು ನಡೆಯುವುದು ಮುಂತಾದ ಅನಿಷ್ಟ ಪದ್ಧತಿಗಳನ್ನು ಹಾಗೂ ಕೆಲ ಪವಾಡಗಳನ್ನು ಮಾರಮ್ಮನ ಭಕ್ತರು ನಡೆಸುತ್ತಾರೆ. ಗ್ರಾಮೀಣ ಪ್ರದೇಶದ ದಲಿತ ಜನರು ಹೆಚ್ಚಾಗಿ ದೀಪಾವಳಿ ಹಬ್ಬಕ್ಕೆ ಕಜ್ಜಾಯವನ್ನು ಮಾಡುತ್ತಾರೆ. ಗೌರಿ ಹಬ್ಬಕ್ಕೆ ಎಳ್ಳು - ಸೂಸಲು, ಸಿಹಿ ಉಂಡೆಗಳನ್ನು ಮಾಡುತ್ತಾರೆ. ಯುಗಾದಿ ಹಬ್ಬಕ್ಕೆ ಇಡ್ಲಿ ಮಾಡುತ್ತಾರೆ. ಸಂಕ್ರಾಂತಿ ಹಬ್ಬಕ್ಕೆ ಪೊಂಗಲ್ ಅನ್ನಮಾಡಿ ದೇವರಿಗೆ ಅರ್ಪಿಸಿ ನಂತರ ತಾವು ಸೇವಿಸುತ್ತಾರೆ. ಇವು ಈಗಲೂ ಚಾಚುತಪ್ಪದೆ ನಡೆದುಕೊಂಡು ಬರುತ್ತಿದೆ. ಆದರೆ ಇಂದಿನ ಆಧುನೀಕರಣದಿಂದಾಗಿ ಸ್ವಲ್ಪ ನಶಿಸುತ್ತಿರುವುದೂ ಕಂಡುಬರುತ್ತದೆ.

ಹೊಸವರ್ಷದ ಹೊಸ ಋತುವಿನ ಹಸಿರಿನ ಹಬ್ಬವೇ ಯುಗಾದಿ. ಈ ಹಬ್ಬವನ್ನು ಸಂಸ್ಥಾನದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು. ಈ ಹಬ್ಬದ ದಿನ ಉತ್ತಮ ಫಸಲನ್ನು ಬೆಳೆದ ರೈತರಿಗೆ ಬಹುಮಾನವನ್ನು ರಾಜರು ನೀಡುತ್ತಿದ್ದರು. ಸಂಸ್ಥಾನದ ಜೀವನದಿಯಾಗಿದ್ದ ಕಾವೇರಿ ನದಿ ತನ್ನ ಮಡಿಲಲ್ಲಿ ನಿರ್ಮಿಸಿಕೊಂಡಿರುವ ಪವಿತ್ರ ಸ್ಥಳಗಳಲ್ಲಿ ಭಕ್ತಿ ಭಾವದಿಂದ ಜನರನ್ನು ಬರಮಾಡಿಕೊಂಡು ಅವರಿಂದ ನದಿಯಲ್ಲಿ ಪವಿತ್ರ ಸ್ನಾನ ಮಾಡಿಸಿ ಉಗಾದಿ ಹಬ್ಬವನ್ನು ಅಚರಿಸುವಂತೆ ವ್ಯವಸ್ಥೆ ಮಡಲಾಗಿತ್ತು. ಉದಾಹರಣೆ : ಶ್ರೀರಂಗಪಟ್ಟಣದ ಬಳಿಯಿರುವ ಬೋರೇದೇವರ ಗುಡಿಯ ಸನ್ನಿಧಿ ಹಾಗೂ ತ್ರಿವೇಣಿ ಸಂಗಮ [ಕಾವೇರಿ, ಕಪಿಲೆ, ಸ್ಪಟಿಕಸರೋವರ (ಗುಪ್ತಗಾಮಿನಿ)] ಎನಿಸಿಕೊಂಡಿರುವ ತಿರುಮಕೊಡಲು ನರಸೀಪುರ ಗುಂಜುನರಸಿಂಹ ಸ್ವಾಮಿ ದೇವರ ಸನ್ನಿಧಿಯಲ್ಲಿ ಯುಗಾದಿಯ ದಿನ ಪವಿತ್ರ ಸ್ನಾನ ವೈಭವ ಪೂರಕವಾಗಿ ಇಂದಿಗೂ ನಡೆಯುತ್ತಿದೆ. ಈ ಸ್ಥಳಗಳಿಗೆ ಸಮೀಪದ ಹತ್ತು ಹದಿನೈದು ಪ್ರದೇಶಗಳಿಂದಲೂ ಜನರು ಬಂದು ಅವರು ಶತಶತಮಾನಗಳಿಂದಲೂ ಹೊತ್ತು ತಂದಿದ್ದ ಜನಪದ ಕಲೆಗಳನ್ನು ಪ್ರದರ್ಶಿಸಿ ಮೆರಗು ನೀಡುತ್ತಾರೆ. ಸಂತೋಷ ಸಂಭ್ರಮದಿಂದ ಜನರು ನದಿಯಲ್ಲಿ ಸ್ನಾನಮಾಡಿ ತಾವುಗಳು ಹೊತ್ತುತಂದ ತಮ್ಮ ತಮ್ಮ ದೇವರ ಸಾಮಾಗ್ರಿಗಳನ್ನು ಶುಚಿಗೊಳಿಸಿ ಗಂಗಾಪೂಜೆ ನಡೆಸಿ ಪೂರ್ವದಿಕ್ಕಿಗೆ ನಮಸ್ಕರಿಸಿ ತಮ್ಮ ಮುಂದಿನ ಕಾರ್ಯದಲ್ಲಿ ತೊಡಗುತ್ತಾರೆ. ದೇವಾಲಯದ ನಂದಿಕಂಬ, ಪಟದ ಕುಣಿತ, ಭಾಗವಂತಿಕೆ, ಹುಲಿವಾಹನಗಳು ಸಿದ್ಧವಾಗಿ ಉತ್ಸವಕ್ಕೆ ಸಿದ್ಧವಾಗಿರುತ್ತದೆ. ವೀರಭದ್ರಕುಣಿತ, ವೀರ ಮಕ್ಕಳ ಕುಣಿತ, ಸೀಮನ ಕುಣಿತ, ಕೋಲಾಟ, ಪೂಜಾ ಕುಣಿತಗಳು ಪ್ರಾರಂಭವಾಗುತ್ತವೆ. ಕೊಂಬು ಕಹಳೆಗಳು ಮೊಳಗುತ್ತವೆ. ತಮಟೆ, ನಗಾರಿ, ಚಕ್ರಾದಿ ಬಳೆಗಳ ಜನಪದ ವಾದ್ಯಗಳು ನಾದ ಹೊಮ್ಮಿಸುತ್ತವೆ. ದಾಸಯ್ಯನವರು, ಜೋಗಯ್ಯನವರು, ತಂಬೂರಿಯವರು, ದೊಂಬಿದಾಸರು, ನೀಲಗಾರರು, ಪಂಡರೀಭಜನೆಯವರು, ಹುಲಿವೇಷದವರು, ಬುಡಬುಡಕೆಯವರು, ಭಜನೆಯವರು, ಮರಗಾಲು ವೇಷದವರು, ರಂಗದ ಕುಣಿತದವರು, ಕರಗದವರು, ಕಂಸಾಳೆಯವರು, ಒನಕೆ ಕುಣಿತದವರು ಇತ್ಯಾದಿ ಜನಪದ ಕಲೆಗಾರರು ಹರ್ಷದ ಹೊನಲನ್ನು ಭಕ್ತಿ ಪೂರ್ವಕವಾಗಿ ಸುಂದರ ಪ್ರಕೃತಿಯ ಮಡಿಲಿನಲ್ಲಿ ತಮ್ಮನ್ನು ತಾವೇ ಕಲಾಸೇವೆಯಲ್ಲಿ ಸಮರ್ಪಿಸಿಕೊಳ್ಳುತ್ತಾರೆ. ಒಂದು ರೀತಿಯಲ್ಲಿ ಇದು ಜನಪಾತ್ರೆಯಂತೆ ಕಂಗೊಳಿಸುತ್ತದೆ. ನಂತರ ಕೀರುಬೇವು - ಬೆಲ್ಲವನ್ನು ತಿಂದು ದೇವಸ್ಥಾನದಲ್ಲಿ ತೀರ್ಥ ಪ್ರಸಾದವನ್ನು ತೆಗೆದುಕೊಂಡು ತಮ್ಮ ತಮ್ಮ ಸ್ಥಳದ ಕಡೆಗೆ ನಿರ್ಗಮಿಸತೊಡಗುತ್ತಾರೆ. ಹೋಗುವಾಗ ರಸ್ತೆಯಲ್ಲಿ ತಮ್ಮ ಕಲೆಯನ್ನು (ದೇವರುಗಳನ್ನು) ಹೊತ್ತು ಹೋಗುವಾಗಿನ ನೋಟ ನೋಡುಗರಿಗೆ ಮನಮೋಹಕವಾಗಿರುತ್ತದೆ. ಇದರಿಗಾಗಿ ದಾರಿಯ ಇಕ್ಕೆಕಗಳಲ್ಲಿ ಗ್ರಾಮಸ್ಥರು ಅರವಟ್ಟಿಗೆಗಳನ್ನು ತೆರೆದು ಪಾನಕ, ಮಜ್ಜಿಗೆ, ಮುಂತಾದ ಪಾನೀಯಗಳ ಸೌಲಭ್ಯವನ್ನು ಒದಗಿಸಿಕೊಡುವ ಸಂಸ್ಕರತಿ ಅನನ್ಯವಾದುದು.

ಒಟ್ಟಾರೆ ಹೇಳುವುದಾದರೆ ದೈವ ಸ್ವರೂಪದಲ್ಲಿ ಪ್ರಕೃತಿಯ ಆರಾಧನೆ ನಡೆಯುವುದು ಇಲ್ಲಿ ಸ್ಪಷ್ಟವಾಗುತ್ತದೆ. ಇವುಗಳೆಲ್ಲವೂ ಸಂಸ್ಥಾನ ಸಂಸ್ಕೃತಿಯ ಪ್ರತಿಬಿಂಬಗಳಂತಿವೆ.

## ೩. ಧಾರ್ಮಿಕ ಪದ್ಧತಿ (೧)

**ಉತ್ಸವಗಳು**

ಹಬ್ಬಗಳು, ರಥೋತ್ಸವಗಳು ಹಾಗೂ ಉತ್ಸವಗಳು ನಮ್ಮ ಜನರ ಸಾಮಾಜಿಕ ಹಾಗೂ ಧಾರ್ಮಿಕ ಜೀವನವನ್ನು ರೂಪಿಸುವುದರಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಕಾಲಕಾಲಕ್ಕೆ ದೇವರ ಹೆಸರಿನಲ್ಲಿ ಸೇರುವ ಜಾತ್ರೆಗಳೂ, ಉತ್ಸವಗಳು ಜನರ ಸಾಂಸ್ಕೃತಿಕ ಸಂಬಂಧವನ್ನು ಶ್ರೀಮಂತಗೊಳಿಸುತ್ತದೆ ಹಾಗೂ ಅವರು ಕಲಿತಿರುವ ಸಕಲ ವಿದ್ಯೆಗಳನ್ನು ಇಂತಹ ಸ್ಥಳಗಳಲ್ಲಿ ಪ್ರದರ್ಶಿಸಿ ಸುತ್ತಮುತ್ತಲಿನ ಜನರಿಂದೆಲ್ಲ ಧೀರ, ವೀರ, ಎನ್ನಿಸಿಕೊಂಡು ಅವನ ಊರಿನ ನಾಡಿನ ಘನತೆಯನ್ನು ಎತ್ತಿಹಿಡಿಯಲು ಇದೊಂದು ರಂಗಮಂದಿರದಂತೆ ಕಂಡುಬರುತ್ತಿತ್ತು. ಮೈಸೂರು ಸಂಸ್ಥಾನದಲ್ಲಿ ಪ್ರಾರಂಭದಿಂದಲೂ ನಡೆದುಕೊಂಡು ಬರುತ್ತಿರುವ ಪ್ರಮುಖ ಜಾತ್ರೆ ಹಾಗೂ ರಥೋತ್ಸವಗಳೆಂದರೆ ಬಟ್ಟದಪುರದ ಪಿರಿಯಾಪಟ್ಟಣದಮ್ಮ ಹಾಗೂ ಕನ್ನಂಬಾಡಿಯಮ್ಮ ಜಾತ್ರೆ, ಚುಂಚನಕಟ್ಟೆಯ ರಾಮದೇವರ ರಥೋತ್ಸವ (ಭಾರಿ ದನಗಳ ಜಾತ್ರೆ), ತಿರುಮಕೂಡಲು ನರಸೀಪುರದ ಗುಂಜುನರಸಿಂಹ ಸ್ವಾಮಿ ಜಾತ್ರೆ (ಭಾರಿ ದನಗಳ ಜಾತ್ರೆ), ಮೂಗೂರಿನ ತಿಬ್ಬಾದೇವಿ ಜಾತ್ರೆ ಮತ್ತು ರಥೋತ್ಸವ, ಸೋಸಲೆ ಹೊನ್ನದೇವಿ ಜಾತ್ರೆ ಮತ್ತು ರಥೋತ್ಸವ ನಂಜನಗೂಡಿನ ಶ್ರೀಕಂಠೇಶ್ವರ ಜಾತ್ರೆ ಮತ್ತು ರಥೋತ್ಸವ ಮಲೆಮಾದೇಶ್ವರ ಜಾತ್ರೆ ಹಾಗೂ ರಥೋತ್ಸವ, ಮಂಡ್ಯದ ಮದ್ದೂರಮ್ಮನ ಜಾತ್ರೆ ಮೇಲುಕೋಟೆ ಚಲುವ ನಾರಾಯಣ ರಥೋತ್ಸವ ಹಾಗೂ ವೈರಮುಡಿ ಉತ್ಸವಗಳು, ಅದಿಚುಂಚನಗಿರಿ ಗಂಗಾಧರೇಶ್ವರ ಜಾತ್ರೆ ಉತ್ಸವ, ಕಿಕ್ಕೇರಮ್ಮನ ಜಾತ್ರೆ, ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ರಥೋತ್ಸವ, ಸುತ್ತೂರಿನ ಸುತ್ತೂರು ಶಿವರಾತ್ರೇಶ್ವರ ಸ್ವಾಮಿಜಿಯವರ ಉತ್ಸವ ಮತ್ತು ರಥೋತ್ಸವಗಳು, ಬೆಂಗಳೂರಿನ ಕರಗಮಹೋತ್ಸವ, ಬಸವನಗುಡಿಯ ಕಡ್ಲೆಜಾಯಿ ಜಾತ್ರೆ. ಚಿತ್ರದುರ್ಗದ ಸಿಗೆರೆಯಲ್ಲಿನ ತರಳಬಾಳು ಉತ್ಸವ, ಹಿರಿಯೂರಿನ ಉಮಾಮಹೇಶ್ವರ ದೇವರ ಜಾತ್ರೆ ಮತ್ತು ರಥೋತ್ಸವ, ಎಡೆಯೂರಿನ ಸಿದ್ಧಲಿಂಗೇಶ್ವರ ಸ್ವಾಮಿಯ ರತೋತ್ಸವ ಹಾಗೂ ಬೃಹತ್ ಜಾತ್ರೆ ಹೀಗೆ ನೂರಾರು ಪ್ರಸಿದ್ಧ ಜಾತ್ರೆ ಹಾಗೂ ರಥೋತ್ಸವಗಳನ್ನು ಗುರುತಿಸಬಹುದು. ಇಲ್ಲಿ ಅಂದಿನ ಸಂಸ್ಕೃತಿಯ ಪ್ರತಿಬಿಂಬ ವ್ಯಕ್ತವಾಗುವಂತೆ ಅನುವು ಮಾಡಿಕೊಡಲಾಗುತ್ತಿತ್ತು.

ಪ್ರತಿಯೊಂದು ಜಾತ್ರೆಯಲ್ಲಿಯೂ ಅವರ ಆರಾಧ್ಯ ದೇವರನ್ನು ರಥದಲ್ಲಿ ಕೂರಿಸಿ ಮೆರವಣಿಗೆ ಮಾಡಿದ ಮೇಲೆ ಜಾತ್ರೆ ಮುಗಿಯುತೆಂದು ಅರ್ಥ. ಇಂತಹ ಸಂದರ್ಭದಲ್ಲಿಯೇ ಜನಪದರಲ್ಲಿ "ತೇಲ್ ಅರ್ದಮ್ಯಾಲೆ ಜಾತ್ರೆ ಅಳಿತು" ಎಂಬ ಮಾತು ಹುಟ್ಟಿರುವುದು. ಈ ನಾಡುನುಡಿಯೇ ಜಾತ್ರೆ ಹಾಗೂ ರಥೋತ್ಸವದ ಸಂಬಂಧವನ್ನು ವಿಶಾಲವಾಗಿ ತಿಳಿಸುತ್ತದೆ.

**ತಲಕಾಡಿನ ಪಂಚಲಿಂಗ ದರ್ಶನ**

ನಾಡಿನ ಪ್ರಾಚೀನ ಸ್ಥಳಗಳಲ್ಲಿ ತಲಕಾಡು ಒಂದಾಗಿದೆ. ಕರ್ನಾಟಕದ ಪ್ರಸಿದ್ಧ ರಾಜವಂಶವಾದ ಗಂಗರ ಎರಡನೇಯ ರಾಜಧಾನಿಯಾಗಿ ಮೆರೆದ ಪ್ರದೇಶ. ಇದೊಂದು ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಹಾಗೂ ಸುಂದರ ಪ್ರಕೃತಿಯನ್ನು ತನ್ನ ಮಡಿಲಿನಲ್ಲಿ ಸೃಷ್ಟಿಸಿಕೊಂಡಿರುವುದರಿಂದ (ಕಾವೇರಿ ನದಿಯ ತಿರುವಿನಲ್ಲಿ ಹರಿಯುವ ಸೊಬಗು ಹಾಗೂ ಬೃಹತ್ ಮರಳಿನ ರಾಶಿಯಿಂದಾಗಿ) ಭಾರತದ ಭೂಪಟದಲ್ಲಿ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಈ ಊರು ಪವಿತ್ರ ಧಾರ್ಮಿಕ ಕ್ಷೇತ್ರವಾಗಿದ್ದು ಪಂಚಲಿಂಗ ದರ್ಶನದ ಉತ್ಸವಕ್ಕೆ ಖ್ಯಾತಿವೆತ್ತಿದೆ. ಈ ಉತ್ಸವವು ಸುಮಾರು ೪ ರಿಂದ ೧೪ ವರ್ಷಗಳ ಸಮಯದಲ್ಲಿ ಒಂದು ಸಲ ನಡೆಯುತ್ತದೆ. ಪುರಾಣದ ಪ್ರಕಾರ ಕಾರ್ತಿಕ ಬಹುಳ ಅಮಾವ್ಯಾಸೆಯು ಸೋಮವಾರವಾಗಿದ್ದು ಸೂರ್ಯ ಚಂದ್ರರಿಬ್ಬರೂ ವೃಶ್ಚಿಕ ರಾಶಿಯಲ್ಲಿ ಸೇರಿದಾಗ ಅಂದಿನ ಉಷಃ ಕಾಲದಲ್ಲಿ ಬರುವ ಕುಹಯೋಗವು ಪಂಚಲಿಂಗ ದರ್ಶನಕ್ಕೆ ಸೂಕ್ತವಾದದೆಂದು ಹೇಳುತ್ತಾರೆ. ಜನಪದರು ನಂಬಿರುವ ಪ್ರಸಿದ್ಧ ಪಂಚಲಿಂಗಗಳೆಂದರೆ :

೧. ತುತ್ಪುರುಷ ಮುಖ : ಅರ್ಕೇಶ್ವರ ಕಾವೇರಿಯ ಉತ್ತರ ವಾಹಿನಿ ಬಳಿ (ವಿಜಯಪುರ)

೨. ಅಘೋರ ಮುಖ : ಪೂರ್ವವಾಹಿನಿ ಬಳಿ

೩. ಸದ್ಯೋಜಾತ ಮುಖ : ಮರಳೇಶ್ವರ, ದಕ್ಷಿಣಾವಾಹಿನಿ ಬಳಿ

೪. ವಾಮದೇವ ಮುಖ : ಮಲ್ಲಿ ಕಾರ್ಜುನೇಶ್ವರ, ಪಶ್ಚಿಮಾವಾಹಿನಿ (ಮುಡುಕುತೋರೆ)

೫. ಈಶಾನ್ಯ ಮುಖ : ವೈದ್ಯನಾಥೇಶ್ವರ (ತಲಕಾಡು)

ಇವುಗಳ ದರ್ಶನ ಪಡೆದು ಜೀವನವನ್ನು ಮುಕ್ತಿಗೊಳಿಸಿಕೊಳ್ಳಲು ಜನರು ರಾಜ್ಯದಲ್ಲಲ್ಲದೆ ನೆರೆಯ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೆಲಸಿ ಐದು ಪ್ರಸಿದ್ಧ ಲಿಂಗಗಳನ್ನು ದರ್ಶನಮಾಡಿ ತಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಕಡೆ ಮುನ್ನಡೆಯುತ್ತಾರೆ. ಈ ಸಮಯದಲ್ಲಿ ನಡೆಯುವ ದೇವತಾಕಾರ್ಯಗಳು, ಉತ್ಸವಗಳು ಗತಕಾಲದ ಸಂಸ್ಕೃತಿಯನ್ನು ಹೊರಚೆಲ್ಲುವಂತೆ ಪ್ರೇರೇಪಿಸುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ತಮ್ಮ ಆಳ್ವಿಕೆಯ ಅವಧಿಯಲ್ಲಿ ನಡೆದ ಮೂರು ಪಂಚಲಿಂಗ ದರ್ಶನದಲ್ಲಿ ಸ್ವತಃ ತಾವೇ ಭಾಗವಹಿಸುವುದು ಕಂಡುಬರುತ್ತದೆ. (ಸಿ.ಕೆ ವೆಂಕಟರಮಣಯ್ಯನವರ ಆಳಿದ ಮಹಾಸ್ವಾಮಿಗಳು ಎಂಬ ಕೃತಿಯಿಂದ)

**ವಿಶ್ವವಿಖ್ಯಾತ ಮೈಸೂರು ದಸರಾ**

ಇಂದು ಕನಾಟಕದ ನಾಡಹಬ್ಬವಾಗಿ ಪರಿವರ್ತನೆಗೊಂಡಿರುವ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವವು ನಾಡಿನ ಮಣ್ಣಿನಲ್ಲಿ ಚಿರನೂತನವಾಗಿ ಕಂಗೊಳಿಸುತ್ತಿದೆ. ವಿಜಯನಗರದರಸರ ಆಳ್ವಿಕೆಯ ಕಾಲದಲ್ಲಿ ಪ್ರಾರಂಭವಾಗಿ ಅವರ ಅವನತಿಯ ನಂತರ ಅವರ ದಾರಿಯಲ್ಲಿಯೇ ಕರುನಾಡಿನ ಸಂಸ್ಕೃತಿಯನ್ನು ರಕ್ಷಿಸಿ, ಪೋಷಿಸಿ ಬೆಳೆಸಿಕೊಂಡು ಬಂದ ಮೈಸೂರು ಸಂಸ್ಥಾನವು ಮುಂದುವರೆಸಿಕೊಂಡು ಬರತೊಡಗಿತು. ಈ ವಿಶ್ವವಿಖ್ಯಾತ ದಸರಾ ಉತ್ಸವವು ಹಿಂದೂ ಧಾರ್ಮಿಕ ರೀತಿನೀತಿಗಳಲ್ಲಿ ಅಂದಿನಿಂದ ಇಂದಿನವರೆಗೂ ಆಚರಿಸಲ್ಪಡುತ್ತಿದೆ. ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿಯೇ ಹೆಚ್ಚಾಗಿ ಬರುವ ದಸರೆ ಕೆಲವು ಸಮಯದಲ್ಲಿ ಮಾತ್ರ ಸೆಪ್ಟಂಬರ್ ತಿಂಗಳಿನ ಕೊನೆಗೂ ಬಂದು ಬಿಡುತ್ತದೆ. ದಸರಾ ಸಮಯದ ಪ್ರಯುಕ್ತ ಸಂಸ್ಥಾನದಲ್ಲಿ ಕೈಗೊಳ್ಳುವ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮೈಸೂರು ಅರಮನೆಯ ಸರಸ್ವತಿ ಪುಸ್ತಕ ಭಂಡಾರದಲ್ಲಿರುವ ದಾಖಲೆಗಳಿಂದ ತಿಳಿಯಬಹುದು.

**ದಸರಾ ಹಬ್ಬದ ಪೌರಾಣಿಕ ಕತೆ :** ಇಂದು ವಿಜಯದಶಮಿ ಎಂದು ಪ್ರಖ್ಯಾತವಾಗಿರುವ ನಾಡಹಬ್ಬವೇ ದಸರೆ. ದೇವರು ಒಬ್ಬನೇ ಎಂಬ ಮಾತನ್ನು ನಮ್ಮ ಪೂರ್ವಿಕರು ಒಪ್ಪಿಕೊಂಡಿದ್ದರೂ ಆ ಶಕ್ತಿಯನ್ನು ಬೇರೆ ಬೇರೆ ರೂಪಗಳಲ್ಲಿ ಹಲವಾರು ಆಕಾರಗಳಲ್ಲಿ ಪೂಜಿಸಿಕೊಂಡು ಪ್ರತಿಯೊಂದಕ್ಕೂ ತನ್ನದೆಯಾದ ಸಂಸ್ಕೃತಿಯನ್ನು ಸೃಷ್ಟಿಸಿಕೊಂಡು ಬರತೊಡಗಿದರು ಹಾಗೂ ಪ್ರತಿರೂಪಕ್ಕೆ ಪ್ರತಿ ಆಕಾರಕ್ಕೆ, ಪ್ರತಿ ಉತ್ಸವಕ್ಕೆ ಒಂದೊಂದು ಗುರುತನ್ನು ನೀಡಬಯಸಿದರು. ಈ ದೃಷ್ಟಿಯಲ್ಲಿ ವಿಶೇಷ ಮಹತ್ವ ಪಡೆದ ಸಾಂಸ್ಕೃತಿಕ ಹಬ್ಬವೇ ದಸರಾ. ನವರಾತ್ರಿ ಅಥವಾ ವಿಜಯದಶಮಿಯ ಮುಖ್ಯ ಆರಾಧ್ಯ ದೇವತೆ ಆದಿಶಕ್ತಿ. ಈ ಆದಿಶಕ್ತಿಯೇ ಮೈಸೂರಿನಲ್ಲಿ ಮಹಿಷಾಸುರ ಮರ್ದಿನಿಯಾಗಿ ಚಾಮುಂಡಿಯಾಗಿ ಕಂಗೊಳಿಸಿದ್ದಾರೆ. ದುಷ್ಟ ಮಹಿಷಾಸುರ ರಾಕ್ಷಕನ ದುರ್ನಡತೆಯನ್ನು ತಡೆಯಲಾರದ ದೇವಾನುದೇವತೆಗಳು ಆತನ ಸರ್ವನಾಶಕ್ಕಾಗಿ ಆದಿಶಕ್ತಿಯನ್ನು ವಿನಂತಿಸಿಕೊಳ್ಳುತ್ತಾರೆ. ಆಗ ಆದಿಶಕ್ತಿ ಸಾಗರವನ್ನೇ ಗುಟಕರಿಸಿಬಿಡುವ ಪರ್ವತ ಶಿಖರಗಳನ್ನೇ ಕಿತ್ತೆಸೆದು ಬಿಡುವ ಭಯವನ್ನೇ ಅಂಜಿಸಿ ಬಿಡುವ ಭಯಂಕರ ರೂಪವನ್ನು ಧರಿಸಿ ಮಹಿಷಾಸುರನ ಮೇಲೆ ನುಗ್ಗಿ ಹೋಗುತ್ತಾಳೆ. ಒಂಬತ್ತು ದಿನ ಹಗಲಿರುಳು ಭೀಕರ ಕಾಳಗ ನಡೆಯುತ್ತದೆ. ಅಶ್ವೀಜಶುದ್ಧ ದಶಮಿಯಂದು ಆದಿಶಕ್ತಿಗೆ ಗೆಲುವು ದೊರೆಯುತ್ತದೆ. ಅಂದೇ ವಿಜಯದ ದಶಮಿ. ಇದು ದಸರೆಯ ಹಿನ್ನೆಲೆಯ ಪೌರಾಣಿಕ ಕತೆ.

ವೆಂ.ಮು.ಜೋಶಿಯವರು ತಮ್ಮ "ಮೈಸೂರು ದಸರ" ಎಂಬ ಕಿರುಪುಸ್ತಕದಲ್ಲಿ ಶಕ್ತಿ ದೇವಿಯ ಹೋರಾಟಕ್ಕೆ ಒಂಬತ್ತು ದಿನಗಳ ಗಡಿಯನ್ನೇಕೆ ಹಾಕಿದರೆಂಬುವುದಕ್ಕೆ ಸುದೀರ್ಘವಾದ ವಿಶ್ಲೇಷಣೆ ನೀಡಬಯಸುತ್ತಾರೆ. ಅವರ ಪ್ರಕಾರ ನಮ್ಮ ಸಂಖ್ಯಾಶಾಸ್ತ್ರದಲ್ಲಿ ಒಂಬತ್ತು ಅಂಕೆಗೆ ಇರುವಷ್ಟು ಮಹತ್ವ ಮತ್ತೊಂದಕ್ಕಿಲ್ಲ. ಇದರಲ್ಲಿ ಇನ್ನುಳಿದ ಯಾವ ಅಂಕೆಯೂ ಸಮಾವೇಶಗೊಳ್ಳಬಲ್ಲದು. ಆದರೆ ಇನ್ನುಳಿದ ಯಾವ ಸಂಖ್ಯೆಯಲ್ಲಿಯೂ ಇದು ಸಮಾವೇಶಗೊಳ್ಳಲಾರದು. ಹಾಗೆಯೇ ಆದಿಶಕ್ತಿಯ ಅಮಿತ ಆಕಾರದಲ್ಲಿ ಇಡೀ ವಿಶ್ವ

ಸಮಾವೇಶಗೊಳ್ಳಬಹುದೇ ವಿನಃ ವಿಶ್ವದ ಯಾವುದೇ ವಸ್ತುವಿನಲ್ಲಿ ಆದಿಶಕ್ತಿ ಸಮಾವೇಶಗೊಳ್ಳಲಾರಳು. ಸಿಂಧುವಿನಲ್ಲಿ ಬಿಂದು ಅಡಕವಾಗಬಹುದು, ಆದರೆ ಬಿಂದುವಿನಲ್ಲಿ ಸಿಂಧುವನ್ನು ಹಿಡಿದಿಡುವುದು ಅಸಾಧ್ಯ. ಒಂಬತ್ತು ಎಂಬ ಅಂಕೆಯೇ ಒಂದು ರೀತಿಯಲ್ಲಿ ಪೂರ್ಣಾಂಕ. ಈ ರೀತಿಯಾಗಿ ಅದ್ವೈತದ ಅಂಖೆ '೯' 'ದ್ವೈತ'ದಲ್ಲಿ ಕಾಲಿರಿಸಿತು. '೯' ರ ಅಅಂಕೆ ಗುಣವನ್ನು ಪಡೆಯತೊಡಗಿತು. ೯ಕ್ಕೆ ಯಾವುದೇ ಅಂಕೆಯಿಂದ ಗುಣಿಸಿದರೂ ಬರುವ ಅಂಕೆಗಳ ಮೊತ್ತ ಪುನಃ ಒಂಬತ್ತೆಯಾಗಿರುತ್ತದೆ. ಉದಾಹರಣೆಗೆ, ೯ X ೨ - ೧೮ (೧+೮ =೯), ೯ X ೩ - ೨೭ (೨+೭ =೯), ೯ X ೪ - ೩೬ (೯+೪ = ೩೯), ೯ X ೫ - ೪೫ (೪+೫ = ೯), ೯ X ೬ - ೫೪ (೫+೪ = ೯), ೯ X ೭ - ೬೩ (೬+೩ = ೯), ೯ X ೮ - ೭೨ (೭+೨ = ೯), ೯ X ೯ - ೮೧ (೮+೧ =೯), ೯ X ೧೦ - ೯೦ (೧+೦ = ೯), ಈ ರೀತಿಯಾಗಿ ೯ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದೆಂದು ಸಂಖ್ಯಾಶಾಸ್ತ್ರದ ವಿವರಣೆಯನ್ನು ನೀಡಿ ಇದರ ಮಹತ್ವಕ್ಕೆ ಹೊಸ ಬೆಳಕನ್ನೆ ನೀಡಿದ್ದಾರೆ.

ಈ ನಾಡಹಬ್ಬವು ಪ್ರಥಮಬಾರಿಗೆ ವಿಜಯನಗರದರಸರು ವಿದ್ಯಾರಣ್ಯ(ಹಂಪಿ)ದಲ್ಲಿ ಪ್ರಾರಂಭಿಸಿದರು ಇದರ ಬಗ್ಗೆ ಪಾಯೀಸ್ ಅಪಾರವಾದ ವರ್ಣನೆಯಾದಂತಹ ಮಾಹಿತಿಯನ್ನು ತನ್ನ ಪ್ರವಾಸಿ ಕಥನದಲ್ಲಿ ತಿಳಿಸಿದ್ದಾರೆ. ಅದರಲ್ಲಿ ಪ್ರಮುಖವಾದದೆಂದರೆ "ನಮ್ಮಲ್ಲಿರುವಂತೆ ಈ ಹಿಂದುಗಳಲ್ಲಿಯೂ ಹಬ್ಬ ಹರಿದಿನಗಳು ಜರುಗುತ್ತವೆ. ಉಪವಾಸ ದಿನಗಳೂ ಇವೆ. ಆಗ ಹಗಲಿಡೀ ಉಪವಾಸವಿದ್ದು ಮಧ್ಯರಾತ್ರಿಯಲ್ಲಿ ಊಟ ಮಾಡುತ್ತಾರೆ. ದಸರೆಯಲ್ಲಿ ರಾಜರು ಹೊಸನಗರದಿಂದ ರಾಜಧಾನಿಯಾದ ವಿಜಯನಗರಕ್ಕೆ ಬಂದು ಅಲ್ಲಿ ಹಬ್ಬವನ್ನು ಆಚರಿಸುತ್ತಾನೆ. ಆಗ ರಾಜ್ಯದ ನಾನಾ ಕಡೆಗಳಿಂದ ಎಲ್ಲ ದೇವದಾಸಿಯರೂ, ದಳವಾಯಿಗಳೂ, ಸಾಮಂತರೂ, ತಮ್ಮ ಪರಿವಾರದೊಂದಿಗೆ ಶ್ರೀಮಂತರೂ ಬಂದು ಸೇರುತ್ತಾರೆ. ದಸರ ಹಬ್ಬವು ಸೆಪ್ಟಂಬರ್ ಹನ್ನೆರಡನೇ ತಾರೀಖು ಪ್ರಾರಂಭವಾಗಿ ಒಂಬತ್ತು ದಿನಗಳು ನಡೆಯುತ್ತವೆ. ಹಾಗೂ ಹಬ್ಬವು ರಾಜರ ಅರಮನೆಯಲ್ಲಿ ಜರುಗುತ್ತದೆ" ಎಂದು ಹೇಳಿದ್ದಾನೆ* ಪೆಯಸ್ ಕಂಡ ವಿಜಯನಗರ, ಎಂ.ಪಿ. ಪ್ರಕಾಶ್, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ (ಮಹಾನವಮಿ ದಿಬ್ಬದ ಮುಂದುಗಡೆ ಇರುವ ಕಟ್ಟಡ ಅವಶೇಷಗಳನ್ನು ಇತಿಹಾಸಗಾರರು ಅರಮನೆಯ ಪ್ರದೇಶವೆಂದು ಗುರ್ತಿಸಿದ್ದಾರೆ. ಇದು ಇನ್ನೂ ಒಮ್ಮತನಕ್ಕೆ ಬಂದಂತೆ ಕಂಡುಬರುವುದಿಲ್ಲ). ನಂತರ ೧೮೬೫ರಲ್ಲಿ ಪ್ರಖ್ಯಾತ ವಿನಯನಗರವು ಒಂದು ಹಂತಕ್ಕೆ ಸಂಪೂರ್ಣವಾಗಿ ನಾಶಹೊಂದಿದ ನಂತರ ಈ ಸಂಪ್ರದಾಯವನ್ನು ಮೈಸೂರು ಒಡೆಯರು ಮುಂದುವರಿಸಿಕೊಂಡು ಬರತೊಡಗಿದರು.

ಮೈಸೂರಿನಲ್ಲಿ ದಸರೆಯ ಮೊದಲಿನ ದಿನ ಮುಂಜಾನೆ ಅರಮನೆಯ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಲಾಗುತ್ತದೆ. ನಂತರ ಸಿಂಹಾಸನಕ್ಕೆ ಪೂಜೆಯನ್ನು ಸಲ್ಲಿಸಿ ರತ್ನ ಖಚಿತವಾದ ಸಿಂಹಾಸನಾರೋಹಣವನ್ನು ಮಹಾರಾಜನರು ಮಾಡುತ್ತಾರೆ. ಸಿಂಹಾಸನದಲ್ಲಿ ಕುಳಿತ ತಕ್ಷಣವೇ ಗೌರವಾರ್ಥವಾಗಿ ೨೧ ಕುಶಾಲುತೋಪುಗಳನ್ನು ಹಾರಿಸಿ ಹೂವಿನ ಮಳೆಗರೆಯಲಾಗುತ್ತಿತ್ತು. ಅರಮನೆಯ ಮುಂಭಾಗದ ಅರ್ಧಚಂದ್ರಾಕಾರವಾದ ಅಂಗಳದಲ್ಲಿ ಸೈನಿಕರು, ಅಶ್ವದಳ ಹಾಗೂ ಗಜದಳದ ಪದಾಧಿಕಾರಿಗಳು ಸಾಲಾಗಿ ನಿಲ್ಲಿಸಲಾಗುತ್ತಿತ್ತು. ಸಂಸ್ಥಾನದ ಪ್ರಮುಖ ದೇವಸ್ಥಾನ ಮತ್ತು ಮಠಗಳ ಪರವಾಗಿ ಗೌರವ ಬಹುಮಾನ ಹಾಗೂ ಪ್ರಸಾದಗಳನ್ನು ಸಲ್ಲಿಸಿ, ರಾಜರ ದರ್ಬಾರಿಗೆ ಆಹ್ವಾನಿಸಲ್ಪಟ್ಟಿರುವ ವೈದಿಕ ಬ್ರಾಹ್ಮಣರು ಫಲಪುಷ್ಪಗಳನ್ನು ನೀಡಿ ಆಶೀರ್ವಾದ ಗೌರವನ್ನು ಸಲ್ಲಿಸುತ್ತಿದ್ದರು. ನಂತರ ಸೈನ್ಯದಳದ ಕವಾಯಿತು. ಅಶ್ವದಳದ ಕವಾಯಿತು, ಮದ್ದುಗುಂಡುಗಳ ಪ್ರದರ್ಶನ, ಸಾಹಸ ಕ್ರೀಡೆಗಳ ಪ್ರದರ್ಶನಗಳು ನಡೆಯುತ್ತಿದ್ದವು.

ಪ್ರಾರಂಭದಿಂದ ಒಂಬತ್ತನೇ ದಿನದವರೆವಿಗೂ ಹಿಂದೂ ಪಂಚಾಂಗದಲ್ಲಿ ಬರುವ ಆಚಾರಗಳನ್ನು ಅವಲಂಬಿಸಿ ಸಂಜೆ ವೇಳೆಯಲ್ಲಿ ವೈಭವದ ದರ್ಬಾರು ನೆರವೇರುತ್ತಿತ್ತು. ಅರಮನೆಯ ಮುಂದೆ ಇರುವ ದೊಡ್ಡ ಕೆರೆ ಮೈದಾನದಲ್ಲಿ ಕುಸ್ತಿ ಪಂದ್ಯಗಳು, ಸೈನ್ಯವಾಯಿತು, ನಾನಾ ಗರಡಿಯವರಿಂದ ದೊಣ್ಣೆ, ಕತ್ತಿ ವರಸೆ, ಕೋಲಾಟಗಳು, ಹಳ್ಳಿಯ ಜನಗಳಿಂದ ಜನಪದ ಕ್ರೀಡೆ ನೃತ್ಯ, ಮುಂತಾದ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರುತ್ತಿದ್ದವು.

ದಸರೆ ಹಬ್ಬದ ಒಂಬತ್ತನೆಯ ದಿನ ಅರಮನೆಯ ಮುಂಭಾಗದಲ್ಲಿ ಆನೆಯ ಬಾಗಿಲಿನ ಹತ್ತಿರ ಹಾಕಿರುತ್ತಿದ್ದ ವಿಶಿಷ್ಟ ಚಪ್ಪರದಲ್ಲಿ ಮಹಾರಾಜರು ಆಯುಧಪೂಜೆಯನ್ನು ನೇರವೇರಿಸುತ್ತಿದ್ದರು. ಪಟ್ಟದ ಆನೆ, ಕುದುರೆ, ರಾಷ್ಟ್ರೀಯ ಆಯುಧಗಳು, ವಿಶೇಷವಾಗಿ

ಹಸುಗಳನ್ನು ಪೂಜಿಸುವರು. ಇದನ್ನೆ ಆಯುಧಪೂಜೆ ಎಂದು ಕರೆಯಲ್ಪಡುವುದು. ನೂರಾರು ವರ್ಷಗಳಿಂದ ನಡೆದು ಬಂದಿರುವ ಈ ವೈಭವಯುತ ಪದ್ಧತಿಯನ್ನು ಬಿಡಲು ಸಾಧ್ಯವಾಗದೆ ಇಂದಿಗೂ ನಾಡಹಬ್ಬವಾಗಿ ನಮ್ಮ ಕರ್ನಾಟಕ ಸರ್ಕಾರವು ಆಚರಿಸಿಕೊಂಡು ಬರುತ್ತಿದೆ.

ಸುಮಾರು ಮಧ್ಯಾಹ್ನ ಮೂರು ಗಂಟೆಗೆ ಗೌರವದ ೨೧ ಕುಶಾಲುತೋಪು ಹಾರಿಸಲ್ಪಡುವ ತುತ್ತೂರಿ ಮತ್ತು ಕಹಳೆಯ ಶಬ್ದ ಮೊಳಗಿಸಿ ಮೈಸೂರು ಸಂಸ್ಥಾನದ ಗೀತೆಯನ್ನು ಹಾಡುವುದರೊಂದಿಗೆ ಅರಮನೆಯಿಂದ ದಸರಾ ಮೆರವಣಿಗೆಯು ಹೊರಡುತ್ತಿತ್ತು. ಚಿನ್ನದ ಅಂಬಾರಿಯನ್ನು ಹೊತ್ತಿರುವ ಪಟ್ಟದ ಆನೆಯ ಮೇಲೆ ಕುಳಿತು ಸುತ್ತಲೂ ಅಂಗರಕ್ಷಕ, ಅಶ್ವದಳದ ಸವಾರರು, ಸರದಾರರು, ಅಧಿಕಾರಿಗಳನ್ನು ಬರಮಾಡಿಕೊಂಡು ಮಹಾರಾಜರು ಲಕ್ಷಾಂತರ ಜನಗಳು ಜಾತ್ರೆಗೆ ಬಂದರೆ ಅದೊಂದು ಅವಿಸ್ಮರಣೀಯ ದಿನವೆಂದೆನ್ನಬಹುದಾಗಿತ್ತು ಎಂದು ಇಂದಿಗೂ ಹಿರಿಯ ನಾಗರೀಕರು ಹೇಳುತ್ತಾರೆ.

ಪಟ್ಟದ ಆನೆಯ ಚಿನ್ನದಿಂದ ಸೂಕ್ಷ್ಮಕೆತ್ತನೆ ಕೆಲಸ ಮಾಡಿರುವ ಪೋಷಾಕನ್ನು ಧರಿಸಿ, ಆಡಂಬರದಿಂದ ತನ್ನ ಸರಿಸಮನರಾರಿಲ್ಲವೆಂಬ ರೀತಿಯಲ್ಲಿ ರಾಜಮನೆತನದ ತನ್ನ ಯಜಮಾನನನ್ನು ಹೊತ್ತು ಗಂಭೀರವಾಗಿ ನಿಂತು ನಿಂತು ಮುಂದೆ ನಡೆಯುತ್ತಿತ್ತು. ಮೆರವಣಿಗೆಯು ಕೋಟೆಯ ಉತ್ತರದ ದ್ವಾರದಿಂದ ಹೊರಡುತ್ತಿತ್ತು. ಮೊದಲು ಈಗಿನ ಅಶೋಕ ರಸ್ತೆಯಲ್ಲಿ ನಡೆದು ಬನ್ನಿಮಂಟಪವನ್ನು ಸೇರುತ್ತಿತ್ತು. ಆದರೆ ಈಗ ಅರಮನೆಯಿಂದ ಹೊರಟು ಚಾಮರಾಜ ಒಡೆಯರ ಅಮೃತ ಶಿಲೆಯ ವಿಗ್ರಹದಿಂದ ಮಾಡಿದ ಮಂಟಪದ ಎಡಗಡೆ ತಿರುಗಿ ನಾಲ್ವಡಿ ಕೃಷ್ಣರಾಜ ಒಡೆಯರ ವೃತ್ತದಿಂದ ಉತ್ತರಕ್ಕೆ ಇರುವ ಸಯ್ಯಾಜಿರಾವ್ ರಸ್ತೆಯಲ್ಲಿ ಸುಮಾರು ಎರಡು ಕಿಲೋಮೀಟರ್ ಹೋಗಿ ಉತ್ಸವ ಬನ್ನಿ ಮಂಟಪವನ್ನು ಸೇರುತ್ತದೆ. ಮೆರವಣಿಗೆಯು ಹೋಗುವ ರಸ್ತೆಯ ಇಕ್ಕೆಡೆಗಳಲ್ಲಿಯೂ ಲಕ್ಷಾಂತರ ಜನರು ಸೇರಿ ವೀಕ್ಷಿಸಿ ಮಹಾರಾಜರು ಹಾಗೂ ಚಿನ್ನದ ಅಂಬಾರಿಯನ್ನು ನೋಡಿ ಭಕ್ತಿಭಾವದಿಂದ ನಮಸ್ಕರಿಸಿ ತಮ್ಮ ತಮ್ಮ ಸ್ಥಳಗಳಿಗೆ ಹಿಂದಿರುಗುತ್ತಿದ್ದರು. ಈ ವೈಭವದ ಉತ್ಸವವು ವಿಶ್ವದಲ್ಲೆಲ್ಲೂ ನಡೆಯುವುದಿಲ್ಲವೆಂದು ಇದು ವಿಶ್ವವಿಖ್ಯಾತಿಯಾಗಿದೆ.

ದಸರ ಹಬ್ಬವು ಪ್ರಾರಂಭವಾದ ದಿನದಿಂದ ದಸರ ಮೆರವಣಿಗೆ ನಡೆಯುವವರೆಗಿನ ೧೦ ದಿನಗಳ ವರೆಗೂ ಸಂಸ್ಥಾನದ ವಿವಿಧ ಪ್ರದೇಶಗಳಿಂದ ಹಾಗೂ ವಿದೇಶಿಗಳಿಂದ ನರ್ತಕರು, ಗಾಯಕರು, ಬಯಲಾಟದವರು, ದೋಂಬೀ ದಾಸರು, ತೊಗಲು ಬೊಂಬೆಯವರು, ಹಗಲು ವೇಷದವರು, ದೊಂಬರು, ಗೋರವಯ್ಯಗಳು, ಕಣಿ ಹೇಳುವವರು, ಜೋತಿಷ್ಯ ಹೇಳುವವರು, ಸಾಮುದ್ರಿಕ ಶಾಸ್ತ್ರ ಹೇಳುವವರು, ಕೊಂಬು ಕಹಳೆಯ ವಾಲಗಗಳನ್ನೂದಿ ಹಣ ಕೇಳುವವರು, ಕೋಲೆ ಬಸವನವರು, ಹಾವಾಡಿಗರು, ಸರ್ಕಸ್ ನಿಪುಣರು ಮೈಸೂರು ನಗರದಲ್ಲೆಲ್ಲಾ ತುಂಬಿಕೊಂಡು ತಮ್ಮ ತಮ್ಮ ಸಾಮರ್ಥ್ಯದ ಪ್ರದರ್ಶನ ನೀಡಿ ಹಣ ಸಂಪಾದಿಸುವ ಕಾಯಕದಲ್ಲಿ ತಲ್ಲೀನರಾಗುತ್ತಿದ್ದರು. ದಸರಾ ಮೆರವಣಿಗೆಯಲ್ಲಿ ಜನರು ತೋರಿಸುತ್ತಿದ್ದ ಸಾಂಸ್ಕೃತಿಕ ಪ್ರದರ್ಶನವು ಅಂದಿನ ಸಂಸ್ಕೃತಿಯ ಪ್ರತೀಕವಾಗಿ ಮೆರೆದಿದೆ.

**ಕ್ರೈಸ್ತ ಮಿಷನರಿ ಹಾಗೂ ಕ್ರೈಸ್ತಧರ್ಮ ಪ್ರಚಾರ**

ಮೇಲೆ ಹೇಳಿದುದೆಲ್ಲವೂ ಬಹುಮಟ್ಟಿಗೆ ಕನ್ನಡ ನಾಡಿನಲ್ಲಿಯೇ ಮೈದುಳದ ಧರ್ಮ ಸಂಸ್ಕೃತಿಗಳು, ಇಷ್ಟರಲ್ಲಿ ಮೈಸೂರು ಸಂಸ್ಥಾನಕ್ಕೆ ನಾಡಿನ ಹೊರಗೆ ಹರಡುತ್ತಿದ್ದ ವಿದೇಶಿ ಧರ್ಮ ಹಾಗೂ ಸಂಸ್ಕೃತಿಗಳೂ ಸೇರಿಕೊಂಡು ತಮ್ಮದೇ ಆದ ರೀತಿಯಲ್ಲಿ ಪ್ರಭಾವ ಭೀರಲಾರಂಭಿಸಿದವು. ಅವುಗಳಲ್ಲಿ ಕ್ರೈಸ್ತ ಧರ್ಮ ಹಾಗೂ ಇಸ್ಲಾಂ ಧರ್ಮಗಳು ಬಹುಮುಖ್ಯವಾದವುಗಳು.

ಕ್ರೈಸ್ತ ಧರ್ಮಕ್ಕೂ ಕನ್ನಡ ನಾಡಿಗೂ (ಮೈಸೂರು ಸಂಸ್ಥಾನ) ಇರುವ ಸಂಬಂಧ ಬಹು ಪ್ರಾಚೀನವಾದುದೆನ್ನಬಹುದು. ಪ್ರಾಚೀನ ಇತಿಹಾಸವನ್ನು ಗಮನಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹನ್ನೆರಡನೆಯ ಶತಮಾನದ ಸುಮಾರಿಗೆ ಚರ್ಚುಗಳಿದ್ದವೆಂದು ತಿಳಿದುಬರುತ್ತದೆ. ಫ್ರಜೋರ್ಡನ್ ಕಟಲನಸ್ ದಿ ಸೆವೆರೋ ಎಂಬ ಪಾದ್ರಿಯ ನೇತೃತ್ವದಲ್ಲಿ ಡಾಮಿನಿಕನ್ ಕ್ರೈಸ್ತರು ೧೩೨೫ರಲ್ಲಿ ಮೈಸೂರು ಸಂಸ್ಥಾನಕ್ಕೆ (ಆಗಿನ್ನೂ ವಿಜಯನಗರದರಸರ ಪ್ರಾರಂಭದ ಆಳ್ವಿಕೆಯ ಕಾಲ) ಬಂದು ಕ್ರೈಸ್ತ ಧರ್ಮದ ಪ್ರಸಾರದ ಪ್ರಯತ್ನವನ್ನು ಮೊದಲಬಾರಿಗೆ ಮಾಡಿದರು ಎಂದು ಆಧುನಿಕ ಮೈಸೂರು ಚರಿತ್ರೆಗಾರರಾದ ಹೇಟ್ಸಿ ತಿಳಿಸುತ್ತಾರೆ.

೧೪೪೫ರಲ್ಲಿ ವಿಜಯನಗರದ ದಿವಾನನೊಬ್ಬನು ಕ್ರೈಸ್ತನಾಗಿದ್ದನೆಂಬ ಉಲ್ಲೇಖವು ಕಂಡುಬರುತ್ತದೆ. ಕೆಲವು ಮಾಹಿತಿಗಳ ಪ್ರಕಾರ ೧೩೩೫ರಷ್ಟು ಹಿಂದೆಯೇ ಬೈಬಲನ್ನು ಕನ್ನಡದಲ್ಲಿ ತರುವ ಪ್ರಯತ್ನ ನಡೆದಿತ್ತು. ಅದೇ ರೀತಿಯಲ್ಲಿ ಬೈಬಲ್ ಬೋಧನೆಯೂ ಆರಂಭವಾಯಿತು. ಹಾಗೆಯೇ ಮತ್ತೊಂದು ದಾಖಲೆಯ ಪ್ರಕಾರ ೧೫೪೨ರಲ್ಲಿ ಲೋಯೋಲಾದ ಸಂತ ಇಗ್ನೇಶಿಯಸ್ ನ ಶಿಷ್ಯ ಸಂತ ಫ್ರಾನ್ಸಿಸ್ ಕ್ಷೇವಿಯರ್ ಕನ್ನಡ ನಾಡಿನಲ್ಲೆಲ್ಲ ಸಂಚರಿಸಿ ಕ್ರೈಸ್ತಮತಕ್ಕೆ ಸ್ಥಳೀಯ ಜನತೆಯಿಂದ ಬೆಂಬಲ ಪಡೆಯಲು ಪ್ರಯತ್ನಪಟ್ಟಿರುವುದು ಕಂಡುಬರುತ್ತದೆ. ಈಗಿನ ತಮಿಳುನಾಡು ಪ್ರದೇಶದ ಸತ್ಯಮಂಗಲದ ಕಡೆಯಿಂದ ಬಂದ ಪೋರ್ಚುಗೀಸ್ ಜೆಸ್ಯೂಟ್ ಪಂಗಡದ ಪಾದ್ರಿಗಳು 'ಕನ್ನಡ ಮಿಶನ್'ಎಂಬ ಧಾರ್ಮಿಕ ಸಂಸ್ಥೆಯೊಂದನ್ನು ಆರಂಭಿಸಿದರು. ಇದು ೧೭೦೪ರ ಸುಮಾರಿಗೆ ಪ್ರಬಲವಾದ ಸಂಸ್ಥೆಯಾಗಿ ಬೆಳೆಯಿತು. ಮುಂದೆ ಶ್ರೀರಂಗಪಟ್ಟಣವನ್ನು ತಮ್ಮ ಮೂಲ ಸ್ಥಳವನ್ನಾಗಿ ಮಾಡಿಕೊಂಡು ಅದನ್ನು 'ರೊಂ ಸನ್ಯಾಸಿ'ಗಳ ಕೇಂದ್ರವನ್ನಾಗಿ ಪರಿವರ್ತಿಸಿಕೊಂಡರು. ಹೈದರ್ ಆಲಿಯ ಮಂಗಳೂರಿನಿಂದ ಒಂಬತ್ತು ಸಾವಿರ ಕೆಥೊಲಿಕ್ ಕ್ರೈಸ್ತರನ್ನು ಶ್ರೀರಂಗಪಟ್ಟಣಕ್ಕೆ ಕರೆಸಿಕೊಂಡನೆಂದು ಆ ಕಾಲದ ದಾಖಲೆಗಳು ತಿಳಿಸುತ್ತವೆ. ಮೈಸೂರು ಸಂಸ್ಥಾನದಲ್ಲಿ ಈ "ಕನ್ನಡ ಮಿಶನ್" (ಪೋರ್ಚುಗೀಸರದು) ಮತ ಪ್ರಚಾರದ ಕೆಲಸ ಮಾಡುತ್ತಿದ್ದರೆ, ಬೆಂಗಳೂರು ಕೋಲಾರಗಳಲ್ಲಿ 'ತೆಲುಗು ಮಿಶನ್" (ಫ್ರೆಂಚರದ್ದು) ಸಕ್ರೀಯವಾಗಿ ಮತಪ್ರಚಾರದಲ್ಲಿ ತೊಡಗಿಸಿಕೊಂಡಿತ್ತು.

ಹೀಗೆ ಮತ ಪ್ರಚಾರಕ್ಕೆ ಬಂದ ಮಿಷನರಿಗಳವರು ಬುದ್ಧಿವಂತರಾಗಿಯೂ, ಕೆಲವರು ಯುರೋಪ್ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಪದವಿ ಪಡೆದವರಾಗಿದ್ದರು. ಇವರು ತಮ್ಮ ವಿದ್ಯಾಭ್ಯಾಸದ ಶಕ್ತಿಯಿಂದ ತಮ್ಮ ದೇಶದಲ್ಲಿಯೇ ಉತ್ತನ ಉದ್ಯೋಗ ದೊರಕಿಸಿಕೊಂಡು ಐಷಾರಾಮದ ಜೀವನ ನಡೆಸಬಹುದಿತ್ತು. ಆದರೆ ಅವರು ಸ್ವಧರ್ಮ ನಿಷ್ಠೆಯಿಂದ ಪ್ರೇರಿತರಾಗಿ ಕ್ರೈಸ್ತ ಸೇವಾದೀಕ್ಷೆಯನ್ನು ಪಡೆದುಕೊಂಡು, ಸವಂತ ದೇಶದ ಮಿಷನ್ ಸಂಸ್ಥೆಯಲ್ಲಿ ಸಕ್ರಿಯ ಸದಸ್ಯರಾಗಿ ಮೂರು ನಾಲ್ಕು ವರ್ಷಗಳ ಕಾಲ ಜ್ಞಾನಾರ್ಜನೆ ಪಡೆದು ಸಂಪೂರ್ಣ ತರಬೇತಿ ಹೊಂದಿದವರು. ತರುಣ ವಯಸ್ಸಿನಲ್ಲಿಯೇ ಕನ್ನಡ ಸಂಸ್ಥಾನಕ್ಕೆ ಬಂದು ಹೊಸ ನೆಲ, ಹೊಸ ಜನ, ಹೊಸ ಭಾಷೆ, ಹೊಸ ಸಂಸ್ಕೃತಿಯಲ್ಲಿ ಬೆರೆತು ನಮ್ಮವರಲ್ಲಿ ಅವರೊಬ್ಬರಾಗಿ ಮುಖ್ಯ ಕಾರ್ಯದಲ್ಲಿ ಅವರು ಜಯಿಸಬೇಕಾದದ್ದು. ಅವರು ಜಯಿಸಿದ್ದು ಅಮೂಲ್ಯವಾದದ್ದಾಗಿದೆ. ಪ್ರಾರಂಭದಲ್ಲಿ ಹಿಂದೂ ಮೂಲಭೂತವಾದಿಗಳ ತೀವ್ರ ವಿರೋಧವನ್ನು ಇವರು ಎದುರಿಸಬೇಕಾಯಿತು. ನಂತರ ಇವರು ಹಿಂದೂ ಧರ್ಮದಲ್ಲಿಯೇ ಇದ್ದ ತಾರತಮ್ಯ ಸಾಮಾಜಿಕ ಅನಿಷ್ಟ ಪದ್ಧತಿ ಹಾಗೂ ದೀನ ದಲಿತರ, ಬುಡಕಟ್ಟು ಜನರ ಹೀನಸ್ಥಿತಿಯ ಬದುಕಿನ ಕಡೆ ಹೆಚ್ಚಿನ ಗಮನಹರಿಸಿ ಅವರ ಮೂಲಭೂತ ಅವಶ್ಯಕ ವಸ್ತುಗಳಾದ ಆಹಾರ, ಬಟ್ಟೆ, ಮನೆ, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ತೊಡಗಿದ್ದರು. ಮೈಸೂರು ಸಂಸ್ಥಾನದ ಚಾಮರಾಜನಗರ, ಮೈಸೂರು, ಕೋಲಾರ, ತುಮಕೂರು, ಚಿತ್ರದುರ್ಗ ಮುಂತಾದ ಪ್ರದೇಶದ ಹೆಚ್ಚಿನ ಸಂಖ್ಯೆಯ ದಲಿತರು ತಮ್ಮ ಪ್ರಾಥಮಿಕ ಸೌಕರ್ಯಗಳನ್ನು ಪಡೆಯುವುದಕ್ಕಾಗಿ ಸ್ವ ಇಚ್ಛೆಯಿಂದಲೇ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿ ಕ್ರೈಸ್ತ ಧರ್ಮದ ಅನುಯಾಯಿಗಳಾದರು. ಈ ಪ್ರದೇಶಗಳಲ್ಲಿ ಇಂದಿಗೂ ಹೆಚ್ಚಿನ ಪ್ರಮಾಣದಲ್ಲಿ ದಲಿತ ಕ್ರೈಸ್ತರನ್ನು ಕಾಣಬಹುದಾಗಿದೆ. ಇದರ ಸಂಪೂರ್ಣ ವಿವರಣೆ ಇಲ್ಲಿ ಅವಶ್ಯಕವಲ್ಲವೆಂದೆನಿಸುತ್ತದೆ. ಕ್ರೈಸ್ತರು ಸಂಸ್ಥಾನದಲ್ಲಿ ಕೆಥೊಲಿಕ್ ಮತ್ತು ಪ್ರೊಟೆಸ್ಟೆಂಟ್ ಗಳೆಂಬ ಎರಡು ಪಂಗಡದ ರೀತಿ ನಿಯಮಗಳನ್ನು ಜನತೆಯ ಮೇಲೆ ಪ್ರಭಾವಬೀರಿ ಅವರ ಶಕ್ತಿಯ ಅನುಸಾರ ಅವರವರ ಅನುಯಾಯಿಗಳನ್ನಾಗಿ ಮಾಡಿಕೊಂಡರೆನ್ನಬಹುದು.

ಮೈಸೂರಿನ ಒಡೆಯರ್ ರವರು ಹಿಂದೂ ಧರ್ಮಗಳೆರಡನ್ನು ಸಮನಾಗಿ ಪೋಷಿಸಿಕೊಂಡು ಬಂದರೆನ್ನಬಹುದು. ಕೆಲವೊಮ್ಮೆ ಕ್ರೈಸ್ತ ಹಾಗೂ ಹಿಂದೂ ಧರ್ಮಗಳು ಒಂದು ಕಡೆ ವಿಚಿತ್ರವಾಗಿ ಕಲೆತು ಬಂದಿರುವುದೂ ಉಂಟು. ಅಂದರೆ ಮತಾಂತರ ಹೊಂದಿದ ಜನರು ತಮ್ಮ ಮೂಲ ಧರ್ಮದ ಸಂಪ್ರದಾಯವನ್ನು ಸಂಪೂರ್ಣವಾಗಿ ಬಿಡದೆ ದ್ವಂದ್ವದಲ್ಲಿ ಸಿಲುಕಿ ಈ ರೀತಿ ನಡೆದುಕೊಂಡು ಬರುತ್ತಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ಸ್ಥಾಪಿತವಾದ ರೋಮನ್ ಕ್ಯಾಥೊಲಿಕ್ ಸೇಂಟ್ ಫಿಲೋಮಿನಾ ಚರ್ಚ್ ಅಂದಿನ ಸಂಸ್ಥಾನದ ಸುಂದರ ಕಟ್ಟಡಗಳಲ್ಲಿ ಒಂದಾಗಿದೆ. ಎರಡು ಎತ್ತರದ ಶಿಖರಗಳನ್ನು ಹೊಂದಿರುವ ಚರ್ಚು ಭಾರತದಲ್ಲಿಯೇ ಇಲ್ಲವೆಂದು ಹೇಳಲಾಗಿದೆ. ಈ ಶಿಖರಗಳ ಎತ್ತರ ೧೬೫ ಅಡಿಗಳು. ಈ ಕಟ್ಟಡವು ಫ್ರೆಂಚರ ಶಿಲ್ಪ ಕಲಾ ಕೌಶಲ್ಯದಿಂದ ಕೂಡಿ, ಫ್ರೆಂಚ್ ಶಿಲ್ಪಗಳ ವೈಭವದ ವೈಖರಿಗೆ ಕನ್ನಡಿ ಹಿಡಿದಂತೆ ಕಂಗೊಳಿಸುತ್ತಿದೆ. ೧೯೩೩ರಲ್ಲಿ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು ಈ ಚರ್ಚ್‌ಗೆ ಅಸ್ತಿಭಾರ

ಹಾಕಿದರು. ೧೯೩೮ರಲ್ಲಿ ಕೆಲಸ ಸಂಪೂರ್ಣಗೊಂಡು ಭಕ್ತರಿಗೆ ತೆರೆಯಲಾಯಿತು. ನಂತರದ ಬೆಂಗಳೂರು ನೀಲಗಿರಿ ರಸ್ತೆಯಲ್ಲಿರುವ ಭಕ್ತ ರೋಮೊಯೋ ಚರ್ಚ್ ಯುರೋಪಿಯನ್ನರ ಸಹಾಯವಿಲ್ಲದೆ ೧೮೩೦ - ೩೧ರಲ್ಲಿ ನಿರ್ಮಾಣವಾಯಿತು. ಮತ್ತೊಂದು ವೆಸ್ಲಿಯನ್ ಚರ್ಚ್. ಇದು ಚರ್ಚ್ ರಸ್ತೆಯಲ್ಲಿ ವೆಸ್ಲೆಯನ್ ಪ್ರೆಸ್ಸಿನ ಪಕ್ಕದಲ್ಲಿ ಕಂಡುಬರುತ್ತದೆ. ಸುಮಾರು ೧೦೦ ವರ್ಷದ ಇತಿಹಾಸ ಹೊಂದಿರುವ ಈ ಚರ್ಚ್ ಚಿಕ್ಕದಾಗಿದ್ದರೂ ಸುಂದರವಾಗಿದೆ. ಸಂಸ್ಥಾನದಲ್ಲಿ ಹೆಚ್ಚಾಗಿ ಕೊಳ್ಳೆಗಾಲ, (ಅಂದು ಮದ್ರಾಸ್ ಪ್ರಾಂತ್ಯ) ಚಾಮರಾಜನಗರ, ಕೋಲಾರಗಳಲ್ಲಿ ಹೆಚ್ಚಾಗಿ ಚರ್ಚ್‌ಗಳನ್ನು ಕಾಣಬಹುದಾಗಿದೆ. ಹಾಗೆಯೇ ಇಲ್ಲಿ ಹೆಚ್ಚಾಗಿ ದಲಿತರು (ಹೊಲೆಯ ಮಾದಿಗರು) ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿರುವುದು ಕಂಡುಬರುತ್ತದೆ.

**ಮೈಸೂರು ಸಂಸ್ಥಾನದಲ್ಲಿ ಇಸ್ಲಾಂ ಧರ್ಮ**

ಇಸ್ಲಾಂ ಧರ್ಮವು ಭಾರತದ ನೆರೆಯ ರಾಷ್ಟ್ರಗಳಾಗಿದ್ದ ಅರೇಬಿಯದಿಂದ ಕ್ರಿ.ಶ. ೯೯೧ರ ಸುಮಾರಿಗೆ ಮೈಸೂರಿಗೆ ತಲುಪಿತ್ತೆಂದು ಪ್ರಾಚೀನ ದಾಖಲೆಗಳು ತಿಳಿಸುತ್ತವೆ. ಕ್ರಿ.ಶ. ೧೧೯೧ರ ವೇಳೆಗೆ ಇದರ ಪ್ರಭಾವವು ಭಾರತದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳಲು ಪ್ರಾರಂಭಿಸಿತು. ಕ್ರಿ.ಶ. ೧೨೦೬ ರಿಂದ ೧೫೨೬ರವರೆಗೆ ದೆಹಲಿ ಸಿಂಹಾಸನದಲ್ಲಿ ಸುಲ್ತಾನರು ಕಾರುಬಾರು ನಡೆಸಲು ಪ್ರಾರಂಭಿಸಿದಾಗ ಇಸ್ಲಾಂ ಧರ್ಮವು ದೇಶದ ಎಲ್ಲಾ ಪ್ರಾಂತ್ಯಗಳಿಗೂ ಹರಡಲು ಕಾರಣವಾಯಿತೆಂದು ಹೇಳಬಹುದು. ಈ ದೃಷ್ಟಿಯಲ್ಲಿ ಕನ್ನಡನಾಡಿಗೆ ಇಸ್ಲಾಂ ಧರ್ಮವು ರಾಷ್ಟ್ರಕೂಟ ಅರಸರ ಕಾಲದಲ್ಲಿ ಬಂದಿತ್ತೆಂದು ನಿಖರವಾಗಿ ಹೇಳಬಹುದು. ಇದಕ್ಕೆ ವಿದೇಶಿಯರ ಬರವಣಿಗೆ ಹಾಗೂ ದೇಶಿಯ ಬರವಣಿಗೆಗಳು ಸಾಕ್ಷಿಯಾಗಿವೆ. ಗುಲ್ಬರ್ಗದಲ್ಲಿ ೧೩೪೭ರ ಸುಮಾರಿನಲ್ಲಿ ಬಹಮಾನಿ ರಾಜ್ಯವು ಸ್ಥಾಪನೆಗೊಂಡ ಮೇಲೆ ಇಸ್ಲಾಂ ಧರ್ಮವು ಭದ್ರವಾಗಿ ನೆಲೆಯೂರಲು ತೊಡಗಿತು. ಸುಲ್ತಾನರುಗಳು ಕನ್ನಡ ನಾಡಿನಲ್ಲಿ ಪರ್ಶಿಯ ಅರೇಬಿಯಗಳಿಂದಲೂ ಹಾಗೂ ಉತ್ತರ ಭಾರತದ ಮೊಗಲ್ ಸಾಮ್ರಾಜ್ಯಗಳಿಂದಲೂ ಮುಸಲ್ಮಾನರನ್ನು ಕರೆಸಿಕೊಂಡು ಸ್ಥಿರವಾಗಿ ನೆಲೆಸಲು ಅವಕಾಶ ಮಾಡಿಕೊಟ್ಟರು. ಇದೇ ಸಮಯದಲ್ಲಿ ಆಫ್ರಿಕಾದಿಂದ ಸಿದ್ದಿ ಜನಾಂಗದವರೂ ಹೆಚ್ಚಿನ ಸಂಖ್ಯೆಯಲ್ಲಿ ಕರ್ನಾಟಕಕ್ಕೆ ಬರಲಾರಂಭಿಸಿದರು. ಹದಿನೈದನೆಯ ಶತಮಾನದ ಕಡೆಯ ಭಾಗದಲ್ಲಿ ಮತ್ತೆ ಮುಸಲ್ಮಾನರ ಪ್ರಾಬಲ್ಯವು ಹೆಚ್ಚಾಯಿತು. ಬಿಜಾಪುರದ ಆದಿಲ್‌ಶಾಹಿ ಮತ್ತು ಗೋಲ್ಕಂಡದ ಕುತುಬ್ ಶಾಹಿ ಅರಸರು ಮುಸ್ಲಿಂ ಜನಾಂಗದ ಅಭಿವೃದ್ಧಿಗೆ ಹೆಚ್ಚಾಗಿ ಸಹಕರಿಸಿದರು. ಮೈಸೂರು ಸಂಸ್ಥಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮುಸ್ಲಿಂಮರು ೧೬೩೭ರಲ್ಲಿ ರಣದುಲ್ಲಾಖಾನ್‌ನು ಬಿಜಾಪುರವನ್ನು ಗೆದ್ದು, ೧೬೮೭ರಲ್ಲಿ ಖಾಸಿಂ ಖಾನನ್ನು ಮೈಸೂರು ಸಂಸ್ಥಾನದಲ್ಲಿ ದಾಳಿ ಮಾಡಿಸಿದಾಗಿನಿಂದ ಹೆಚ್ಚಾಗಿ ಪ್ರಾರಂಭವಾಯಿತ್ತೆನ್ನಬಹುದು.

ತದನಂತರ ೧೭೬೧ರಿಂದ ಹೈದರ್ ಆಲಿ ಸರ್ವಾಧಿಕಾರಿಯಾಗಿ ಸಂಸ್ಥಾನದಲ್ಲಿ ಮೆರೆಯಲು ಪ್ರಾರಂಭಿಸಿದ ಮೇಲೆ ಮೈಸೂರು, ಬಿದನೂರು (ಹೈದರ್ ನಗರ ಎಂದೇ ನಾಮಕರಣಗೊಂಡಿತು) ಚಿತ್ರದುರ್ಗ, ಬೆಂಗಳೂರು, ಮಂಡ್ಯ ಮತ್ತಿತರ ಪ್ರದೇಶಗಳಲ್ಲಿ ಸೈನ್ಯ ಹಾಗೂ ಆಡಳಿತ ವರ್ಗದವರನ್ನು ಅಧಿಕ ಸಂಖ್ಯೆಯಲ್ಲಿ ಸೇರಿಸಿದ್ದುದರಿಂದ ಈ ಪ್ರದೇಶಗಳಲ್ಲಿ ಇಸ್ಲಾಂ ಧರ್ಮ ಭದ್ರವಾಗಿ ಬೇರೂರಲು ಕಾರಣವಾಯಿತು. ನಂತರ ಇವನ ಮಗ ಟೀಪೂಸುಲ್ತಾನನು ಇಸ್ಲಾಂ ಧರ್ಮವನ್ನು ಹರಡಲು ಹೆಚ್ಚಾಗಿಯೇ ಶ್ರಮಿಸಿದನೆನ್ನಬಹುದು. ಮೈಸೂರು ಸಂಸ್ಥಾನವನ್ನು ಹೈದರ್ ಮತ್ತು ಟೀಪು ಆಡಳಿತ ನಡೆಸುತ್ತಿದ್ದಾಗ ಶ್ರೀರಂಗಪಟ್ಟಣ, ಬಿಜಾಪುರದ, ಬಿಜಾಪುರ, ಬೆಂಗಳೂರು, ಗುಲ್ಬರ್ಗಾ, ಬಳ್ಳಾರಿ ಮುಂತಾದವುಗಳು ಪ್ರಮುಖ ಮುಸ್ಲಿಂ ಕೇಂದ್ರಗಳಾಗಿದ್ದವು. ಮೈಸೂರು ಸಂಸ್ಥಾನದಲ್ಲಿ ಅಂದು ಶೇಖ್, ಸೈಯದ್, ಪಠಾಣ್, ಮುಘಲ್. ಲಬ್ಬೆ, ಪಿಂಜಾರಿಗಳ ಮುಸ್ಲಿಂ ಪಂಗಡಗಳು ನೆಲಸಿದ್ದರು. ಟೀಪೂಸುಲ್ತಾನನ ಕಾಲದಲ್ಲಿ ಮಲಬಾರಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮತಾಂತರಗೊಂಡ ಹಿಂದೂಗಳು ಲಬ್ಬೆ, ಮಾಪ್ಪಾ ಎಂದು ಇಂದು ಕರೆಸಿಕೊಳ್ಳುತ್ತಿದ್ದಾರೆ. ಲಬ್ಬೆಯರು ತಮಿಳು ಭಾಷೆಯನ್ನು. ಮಾಪ್ಲಾಗಳು ಮಲೆಯಾಳಿ ಭಾಷೆಯನ್ನು ತಮ್ಮ ಮಾತೃಭಾಷೆಯಾಗಿ ಹೊಂದಿದ್ದಾರೆ. ಇವರ ಮೂಲ ಕಸುಬು ವ್ಯಾಪಾರವಾಗಿದೆ.

ವಿಜಯನಗರದ ಕಡೆಗಾಲದ ಅರಸರು. ಕೆಳದಿ ಅರಸರು ಹಾಗೂ ಮೈಸೂರು ಸಂಸ್ಥಾನದ ಒಡೆಯರು ಹಿಂದೂ ಇಸ್ಲಾಂ ಧರ್ಮಗಳೆರಡನ್ನೂ ಸಮನಾಗಿಯೇ ಪೋಷಿಸಿಕೊಂಡು ಬಂದರೆಂದು ಹೇಳಬಹುದು. ಕೆಲವೊಮ್ಮೆ ಇಸ್ಲಾಂ ಮತ್ತು ಹಿಂದೂ ಧರ್ಮಗಳೆರಡೂ ಕಲೆತುಕೊಂಡು ದೇವತಾಕಾರ್ಯಗಳನ್ನು, ಉತ್ಸವಗಳನ್ನು ಏರ್ಪಡಿಸಿರುವುದಕ್ಕೆ ಮೈಸೂರು ಸಂಸ್ಥಾನದಲ್ಲಿ

ಉದಾಹರಣೆಗಳಿವೆ. ಉದಾಹರಣೆಗೆ ಹೇಳುವುದಾದರೆ ಚಿಕ್ಕಮಗಳೂರಿನ ಪ್ರಕೃತಿಯ ಮಡಿಲನಲ್ಲಿ ತಲೆ ಎತ್ತಿನಿಂತಿರುವ ಬಾಬಾಬುಡನ್ ಗಿರಿ ಉತ್ತಮ ನಿದರ್ಶನವಾಗಿದೆ. ಈ ಪ್ರಸಿದ್ಧ ಬೆಟ್ಟ ಹಿಂದೂಗಳಿಗೆ ದತ್ತಾತ್ರೇಯ ಪೀಠ. ಇದು ಮುಸಲ್ಮಾನರಿಗೆ ದಾದಾ ಹಯೂತ್ ಮೀರ್ ಖಲಂದರ್ ಎಂಬ ಸಂತನ ಪೀಠವೆಂದೂ ಅಂದಿನಿಂದ ಇಂದಿನವರೆಗೂ ಪವಿತ್ರ ಸ್ಥಳವಾಗಿ ಉಳಿದುಕೊಂಡು ಬಂದಿದೆ. ಮೇಲಿನ ಎರಡು ಹೆಸರನ್ನು ಹೊಂದಿರುವ ಸಂತನು ಇಲ್ಲಿಗೆ ಬಂದ ಕಾಲ ಕ್ರಿ.ಶ. ೧೦೦೫ ಎಂದು ಹೇಳುತ್ತಾರೆ. ಅವನ ಪರಂಪರೆಯಲ್ಲಿ ಬಂದ ಫಕೀರರು ಈಗಲೂ "ಶ್ರೀ ದತ್ತಾತ್ರೇಯ ಸ್ವಾಮಿ ಬಾಬಾಬುಡನ್‌ಸ್ವಾಮಿ ಜಗದ್ಗುರು" ಎಂಬ ಬಿರುದನ್ನು ಬಳಸಿಕೊಂಡು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಅಂದಿನಿಂದಲೂ ಗೋಕುಲಾಷ್ಟಮಿಯಲ್ಲಿ ಇಸ್ಲಾಂ ಧರ್ಮಿಯರೂ. ಮೊಹರಂ ಹಬ್ಬದಲ್ಲಿ ಹಿಂದೂಗಳೂ ಪಾಲ್ಗೊಳ್ಳುವ ಪದ್ಧತಿ ಇಂದಿಗೂ ಬೆಳೆದು ಬರುತ್ತಿದೆ. ಹಿಂದೂಗಳು ಅಲ್ಲಿರುವ ಮುಸ್ಲಿಂ ಸಂತರ ಸಮಾಧಿಗಳಿಗೆ ಭಕ್ತಿಭಾವದಿಂದ ಪೂಜೆ ಸಲ್ಲಿಸುವುದೂ ಕಂಡುಬರುತ್ತದೆ. ಇಂದು ಇದು ವಿವಾದದ ಕೇಂದ್ರವಾಗಿ ಪರಿವರ್ತನೆಗೊಂಡಿರುವುದು ಶೋಚನೀಯ ಸಂಗತಿಯಾಗಿದೆ. ಈ ಪ್ರದೇಶದ ಪ್ರಾಚೀನ ಇತಿಹಾಸವನ್ನು ಇಂದಿನವರು ತಿಳಿದರೆ ಈ ರೀತಿಯ ವಿವಾದಕ್ಕೆ ಅಸ್ಪದವಿರಲಾರದೇನೋ.

ಒಟ್ಟಾರೆ ಚರ್ಚೆಯಿಂದ ತಿಳಿಯುವುದೇನೆಂದರೆ ದುಡಿಮೆ ಚಲನಶೀಲತೆಯನ್ನು ಮೈಗೂಡಿಸಿಕೊಂಡು ಧರ್ಮಗಳನ್ನು ಜನಪದ ಧರ್ಮಗಳೆಂದು ಅರೆಯಬಹುದೆಂಬುದು. ಏಕೆಂದರೆ ಇವು ಅಭಿಜಾತ ಧರ್ಮಗಳ ಪರಕಲ್ಪನೆಗೆ ವಿರುದ್ಧವಾಗಿರುತ್ತವೆ. ಸ್ಥಿರತೆ ಮತ್ತು ಸನಾತನತೆ ಎಂಬುವುದು ಅಭಿಜಾತ ದರ್ಮಗಳ ಮುಖ್ಯ ಗುಣಲಕ್ಷಣಗಳಾದರೆ, ಬದಲಾವಣೆ ಮತ್ತು ನಿಸರ್ಗದೊಳಗಿರುವ ಸಂಬಂಧ ಜನಪದ ಧರ್ಮಗಳ ಮುಖ್ಯ ಲಕ್ಷಣಗಳು, ತಾವು ಪವಿತ್ರವೆಂದು ನಂಬಿರುವ ಕಾಡು, ಮರ, ಬಳ್ಳಿ ಪ್ರಾಣಿಗಳ ಬಗ್ಗೆ ಅವರಿಗೆ ಗೌರವ ಭಾವನೆ ಇದ್ದು. ಅವುಗಳ ವಂಶ ವೃದ್ಧಿಯಾಗುವಂತೆ ನೋಡಿಕೊಳ್ಳುವುದು ಜಾನಪದ ಧರ್ಮದ ತಾತ್ವಿಕತೆಯಾಗಿದೆ. ಉಳಿಕೆ ಮತ್ತು ಪುನರುಜ್ಜೀವನ ಈ ಎರಡು ಸಂಗತಿಗಳು ಜನಪದ ಧರ್ಮವನ್ನು ರೂಪಿಸುತ್ತಾ, ಬೆಳಸುತ್ತಾ ಬಂದಿವೆ. ಆರ್ಥಿಕ ಮತ್ತು ಸಾಮಾಜಿಕ ಪರಿಸರದ ಹಿನ್ನೆಲೆಯಲ್ಲಿ ಈ ಎರಡು ಸಂಗತಿಗಳು ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಬುಡಕಟ್ಟು ಅಥವಾ ಆದಿ ಮಾನವನ ಮನೋವ್ಯಾಪಾರವನ್ನು ವಿವರಿಸಲು ಸಹಾಯಕವಾಗಿವೆ. ಉಳಿಕೆಯ ಸಿದ್ಧಾಂತ ಮತ್ತು ಪುನರುಜ್ಜೀವನ ಕಾರ್ಯ ಮಾನವನ ವಿಕಾಸ ಪಥದಲ್ಲಿ ಸಂಸ್ಕೃತಿ ಧರ್ಮವನ್ನು ರೂಪಿಸಲು ಪ್ರಧಾನ ಪಾತ್ರವಹಿಸಿವೆ ಎಂದು ಹೇಳಬಹುದು ಇದು ಇಂದಿಗೂ ಮೈಸೂರು ಸಂಸ್ಥಾನದ ನಾಡಿನಲ್ಲಿ ಕಾಣಬಹುದು.

* * *

## ೪. ಸಾಮಾಜಿಕ ಪದ್ಧತಿ (೧)

ದೇಶದಲ್ಲೆಲ್ಲ ಇದ್ದಂತೆ ಮೈಸೂರು ಸಂಸ್ಥಾನದಲ್ಲಿಯೂ ವಿವಿಧ ಧಾರ್ಮಿಕ, ಸಾಮಾಜಿಕ, ವೃತ್ತಿ ಸಂಬಂಧಿ, ಭಾಷಿಕ ಸಂಬಂಧಿ, ಬುಡಕಟ್ಟು ಹಾಗೂ ಮೇಲು ಕೀಳೆಂಬ ಜಾತಿಯ ಗುಂಪುಗಳು ಇದ್ದವು. ಪ್ರಾರಂಭದಲ್ಲಿ ಹೆಚ್ಚಾಗಿ ವರ್ಣಾಶ್ರಮ ಪದ್ಧತಿಯು ಆಚರಣೆಯಲ್ಲಿದ್ದಿದ್ದು ಕಂಡುಬಂದಿದೆ. ನಂತರದಲ್ಲಿ ಅದರ ಬಿಗಿಯಲ್ಲಿ ಸ್ವಲ್ಪ ಸಡಿಲಿಕೆ ಕಂಡುಬರುವ ಹಾಗೆ ಸಂಸ್ಥಾನದಲ್ಲಿ ಸಮಾಜ ಬದಲಾವಣೆಯಾಗತೊಡಗಿತ್ತೆಂದು ಹೇಳಬಹುದು. ಜಾತಿ ಪದ್ಧತಿಯು ಇಂದಿನ ಹಾಗೆಯೇ ಅಂದೂ ಸಹ ಸರ್ವೇ ಸಾಮಾನ್ಯವಾಗಿದ್ದಿತು. ಮೇಲು ಜಾತಿಯವರು ಕೀಳು ಜಾತಿಯವರನ್ನು ಹೀನಾಯವಾದ ಸ್ಥಿತಿಯಲ್ಲಿ ನಡೆಸಿಕೊಳ್ಳುತ್ತಿದ್ದರು. ಪ್ರಾರಂಭದಲ್ಲಿ ಜಾತಿಗಳು ಅವರು ಕೈಗೊಂಡಿದ್ದ ಕಸುಬಿನ ಆಧಾರದ ಮೇಲೆ ಸೃಷ್ಟಿಯಾದವೆಂದು ಕಂಡುಬರುತ್ತದೆ. ಸಂಸ್ಥಾನದಲ್ಲಿ ಇದ್ದ ಸಾಮಾಜಿಕ ರಚನೆಯನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

ಸಮಾಜದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನದಲ್ಲಿದ್ದರು. ಇವರು ಬಹುತೇಕವಾಗಿ ಪೌರೋಹಿತ್ಯ ಮತ್ತು ಶಾಸ್ತ್ರೀಯ ಪಾಂಡಿತ್ಯಗಳಲ್ಲಿ ತೊಡಗಿರುತ್ತಿದ್ದವರಾಗಿ. ಅರಸನಂತೆಯೇ ಶ್ರೀಮಂತನಾದವನೊಬ್ಬನು ದಾನರೂಪದಲ್ಲಿ ಸ್ಥಾಪಿಸುವ ಅಗ್ರಹಾರಗಳಲ್ಲಿ ಅವರು ವಾಸಿಸುತ್ತಿದ್ದರು. ಇವರು ತಮ್ಮ ಸಂಪ್ರದಾಯದಲ್ಲಿಯೇ ಷಟ್ ಕರ್ಮ ನಿರತರಾಗಿರಬೇಕೆಂದು ಬಯಸುತ್ತಿದ್ದರು. ಯಜ್ಞ (ಪುರೋಹಿತನಾಗಿ ಯಜ್ಞ ಮಾಡಿಸುವುದು), ಯಾಜನ (ಯಜ್ಞ ಕರ್ಮಗಳ ಪ್ರೇರೇಪಣೆ ಮಾಡುವುದು) ಅಧ್ಯಯನ (ಶಾಸ್ತ್ರ ಪಾಂಡಿತ್ಯ ಪಡೆಯಲು ಅಭ್ಯಾಸ

ಮಾಡುವುದು) ಅಧ್ಯಾಪನ (ಇತರರಿಗೆ ಬೋಧಿಸುವುದು ಶಿಕ್ಷಕನಾಗುವುದು) ದನ (ಕೊಡುವುದು ಮತ್ತು ದಾನ ಸ್ವೀಕರಿಸುವುದು) ಮೇಲಿನವು ಅವರ ಆರು ನಿಯಮಗಳಾಗಿದ್ದವು. ಚಾಚೂತಪ್ಪದೆ ಅವುಗಳನ್ನು ಅವರದೇ ಆದ ಸಾಮಾಜಿಕ ಕಟ್ಟುಪಾಡುಗಳಿಂದ ನಡೆಸಿಕೊಂಡು ಬರುತ್ತಿದ್ದರು. ಇವರನ್ನು ರಾಜ ಮಹಾರಾಜರುಗಳು ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ಬ್ರಾಹ್ಮಣರು ಸಂಸ್ಥಾನದಲ್ಲಿ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಒಟ್ಟಿನಲ್ಲಿ ಬ್ರಾಹ್ಮಣರು ಸಂಸ್ಥಾನದಲ್ಲಿ ಸುಖಿಗಳಾಗಿದ್ದರೆನ್ನಬಹುದು. ಬ್ರಾಹ್ಮಣರಲ್ಲಿ ಇಂದು ಇರುವ ಹಾಗೆಯೇ ಅಂದು ಸಹ ಮುಖ್ಯವಾಗಿ ಮೂರು ವಿಭಾಗಗಳಿದ್ದವು. ಅವುಗಳೆಂದರೆ ೧. ಶ್ರೀ ಶಂಕರರ ಅದ್ವೈತ ತತ್ವ ಅನುಸರಿಸಿದ ಸ್ಮಾರ್ತರು, ೨. ಮಧ್ವಾಚಾರ್ಯರ ದ್ವೈತ ತತ್ವ ಅನುಸರಿಸಿದ ವೈಷ್ಣವರು ಹಾಗೂ ೩.ರಾಮಾನುಜರ ಅನುಯಾಯಿಗಳಾದ ಶ್ರೀ ವೈಷ್ಣವರು. ಈ ಪ್ರತಿಯೊಂದು ವಿಭಾಗದಲ್ಲಿಯೂ ಮತ್ತೆ ಹಲವಾರು ಉಪ ಪಂಗಡಗಳು ಸ್ಪಷ್ಟವಾಗಿ ಜಾತಿಜಾತಿಗಳಲ್ಲಿ ವೈಷಮ್ಯದ ಮನೋಭಾವನೆ ಮೂಡಿಸುತ್ತಿವೆ.

ಮೈಸೂರು ಸಂಸ್ಥಾನದ ಮೂಲ ಪುರುಷರು ಯದು ವಂಶಸ್ಥರಾಗಿದ್ದರೂ ರಾಜ್ಯವನ್ನು ಕಟ್ಟಿ, ಬೆಳೆಸಿ ಕಾಪಾಡುವ ಜವಾಬ್ದಾರಿಯನ್ನು ನಿರ್ವಹಿಸಲು ತೊಡಗಿದ ಮೇಲೆ ಕ್ಷತ್ರಿಯರಾಗಿ ಪರಿವರ್ತನೆಗೊಂಡರು. ಏಕೆಂದರೆ ಯಾವುದೇ ರಾಜಮನೆತನದ ಪ್ರಾರಂಭಿಕ ದೊರೆಗಳು ಕೃಷಿಕರೂ ಅಥವಾ ಪಶುಪಾಲಕರೂ ಆಗಿರುವುದು ಕಂಡುಬರುತ್ತದೆ. ಕ್ಷತ್ರಿಯರು ದೇಶದ ಪ್ರಜೆಗಳ ರಕ್ಷಣೆಯ ಜವಾಬ್ದಾರಿಯನ್ನು ಸಂಪೂರ್ಣವಾಗಿ ವಹಿಸಿಕೊಂಡು ವೈಭವದ ಜೀವನ ನಡೆಸಿಕೊಂಡು ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದರು.

ಸಂಸ್ಥಾನದಲ್ಲಿ ವ್ಯಾಪಾರೋದ್ಯಮದಲ್ಲಿ ತೊಡಗಿದ್ದ ಜನಸಮುದಾಯವನ್ನೆಲ್ಲ ಮೂರನೆಯ ವರ್ಣವಾಗಿರುವ ವೈಶ್ಯರ ಗುಂಪಿಗೆ ಸೇರಿಸಲಾಗಿತ್ತು. ಈ ಮೂರನೆಯ ಗುಂಪಿನಲ್ಲಿಯೂ ಇದೇ ಕಸುಬನ್ನು ನಡೆಸುತ್ತಿದ್ದ ಬಣಜಿಗ, ಬಲಿಜ ಅಥವಾ ಬಲಂಜು ಎಂದು ಕರೆಸಿಕೊಳ್ಳುತ್ತಿದ್ದ ಉಪಜಾತಿಗಳೂ ಇದ್ದವು. ಇವರ ಬಗ್ಗೆ ಮಾಹಿತಿಗಾಗಿ ಅನೇಕ ಶಾಸನಗಳು, ಸಾಹಿತ್ಯಾಧಾರಗಳು ಲಭ್ಯವಿವೆ. ಬಣಜಿಗರೆಲ್ಲರೂ ವೈದಿಕ ಸಂಪ್ರದಾಯ ದವರಾಗಿರಲಿಲ್ಲ. ಜೈನ ಬಣಜಿಗರು, ವೀರಶೈವ ಬಳಜಿಗರುಗಳೂ ಇದ್ದರು. ಇಂದಿಗೂ ಇದ್ದಾರೆ.

ಭೂಮಿಯನ್ನು ಉತ್ತಿಬಿತ್ತಿ ಬೆಳೆ ತೆಗೆಯಲು ಸೃಷ್ಟಿಯಾದವನೇ ಶೂದ್ರ. ಆದರೆ ಹೀಗೆ ಹೇಳಿರುವುದು ಕಂಡುಬಂದರೂ ನಂತರದಲ್ಲಿ ಈ ಕಾಯಕವನ್ನು ಕೈಗೊಂಡವರನ್ನು ಒಕ್ಕಲಿಗರು ಎಂದು ಗುರ್ತಿಸಿರುವುದು ಸಂಸ್ಥಾನದ ಸಾಮಾಜಿಕ ರಚನೆಯಲ್ಲಿ ಕಂಡು ಬರುತ್ತದೆ. ಜೀವನದ ಉಳಿವಿಗಾಗಿ ಕೈಗೊಂಡ ಕೆಲಸದ ಆಧಾರದ ಮೇಲೆ ಸೃಷ್ಟಿಸಿಕೊಂಡ ಜಾತಿಗಳು ಈ ರೀತಿ ಇದ್ದವು. ಪಾಂಚಾಲರು (ಕಮ್ಮಾರರು, ಬಡಗಿಗಳು, ಶಿಲ್ಪಿಗಳು), ಅಗಸ (ಬಟ್ಟೆ ಒಗೆಯುವವನು), (ನಾಯಿಂದ ಹಜಾಮ) ಜೇಡ ಅಥವಾ ದೇವಾ (ನೇಯ್ಗೆಯವನು), ಚಿಪ್ಪಿಗ (ಬಟ್ಟೆ ಹೊಳಿಯುವವನು) ತೆಲ್ಲಿಬ (ಎಣ್ಣೆ ಮಾಡುವವ ಗಾಣಿಗ), ಕುಂಬಾರ (ಮಡಿಕೆ ಮಾಡುವವನು) ಮೋಚಿ (ಪಾದರಕ್ಷೆ ಮಾಡುವವನು ಚಮ್ಮಾರ) ಮೇದ (ಬುಟ್ಟಿ ಹೆಣೆಯುವವನು) ಗೊಲ್ಲ (ದನ ಕಾಯುವವನು), ತಂಬುಳಿಗ (ವೀಳ್ಯದೆಲೆ ವ್ಯಾಪಾರ ಮಾಡುವವನು) ಡೊಂಬ (ದೊಂಬರಾಟ ಆಡುವವನು) ಉಪ್ಪಾರ (ಕಲ್ಲು ಕುಟ್ಟಿಗ) ಕೊನೆಯಿಂದಾಗಿ ಹೊಲೆಯ - ಮಾದಿಗರು ಈ ಎಲ್ಲ ಜಾತಿಯವರ ಜೀವನ, ಬದುಕು, ಸಂಪ್ರದಾಯಗಳನ್ನು ತಿಳಿಯಲು ಹೆಚ್ಚಾಗಿ ಅಂದಿನ ಕಾಲದ ಸಾಹಿತ್ಯಾಧಾರಗಳು ಹಾಗೂ ಮೌಖಿಕವಾಗಿ ಇಂದಿಗೂ ಬೆಳೆದು ಬಂದಿರುವ ಗಾದೆ ಮಾತುಗಳೇ ಮೂಲ ಆಧಾರವಾಗಿವೆ. ಜಾತಿ ಜಾತಿಗಳಲ್ಲಿಯೇ ಕೆಲವುಗಳು ಶ್ರೇಷ್ಟ ಎಂದು ಹೋರಾಟ ಮಾಡಿಕೊಂಡು ಬಂದಿರುವುದು. ಬರುತ್ತಿರುವುದು ಸಾಮಾನ್ಯವಾಗಿ ಮೈಸೂರು ಸಂಸ್ಥಾನದಲ್ಲಿಯೇ ಅಲ್ಲದೆ ಪ್ರಾಚೀನ ಕಾಲದಿಂದ ಪ್ರಾರಂಭವಾಗಿ ಇಂದಿನವರೆಗೂ ರಕ್ತಗತವಾಗಿ ಬೆಳೆದುಬರುತ್ತಿದೆ. ಸಮಾಜದಲ್ಲಿ ಅಸ್ಪೃಶ್ಯತೆಯು ಯಥೇಚ್ಛವಾಗಿ ರೂಢಿಯಲೊಲಿದ್ದಿತ್ತು. ಮೈಸೂರು ಸಂಸ್ಥಾನದಲ್ಲಿ ದೊರೆತಿರುವ ಅನೇಕ ಶಾಸನಗಳಲ್ಲಿ ಹೊಲೆಗೇರಿಯೂ ಊರಿನ ಹೊರಗೆ ಇತ್ತೆಂಬ ವಿಚಾರವನ್ನು ತಿಳಿಸುತ್ತವೆ. ಈ ಆಧಾರದಿಂದಲೇ ಅಂದಿನ ಅಸ್ಪೃಶ್ಯತೆಯ ಮಟ್ಟವನ್ನು ಸೂಕ್ಷ್ಮವಾಗಿ ಗಮನಿಸಬಹುದು.

ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ರಚನೆಯು ತನ್ನದೆ ಆದ ಸಾಂಸ್ಕೃತಿಕ ಬದುಕನ್ನು ಅವಲಂಬಿಸಿಕೊಂಡು ರಚನೆಯಾಗಿತ್ತು. ಸಂಸ್ಥಾನದಲ್ಲಿದ್ದ (ಇಂದಿಗೂ ಅದೇ ರೀತಿಯ ಸಾಮಾಜಿಕ ರಚನೆ ಇರುತ್ತದೆ) ಕೆಲವು ಪ್ರಮುಖ ಧಾರ್ಮಿಕ ಸಮೂಹಗಳ, ಜಾತಿಗಳ ಮತ್ತೆ ಸಮುದಾಯಗಳ ಉದ್ಯೋಗ ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ತಿಳಿಯಬಹುದು.

**ಹೊಲೆಯ ಮಾದಿಗರು :** ಇವರು ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಕಂಡುಬರುತ್ತಿದ್ದರು. ಇವರು ಹೆಚ್ಚಾಗಿ ಚರ್ಮದ ಕೆಲಸವನ್ನು ಮಾಡುತ್ತಿದ್ದರು. ಹಾಗೆಯೇ ಜೀವನೋಪಾಯಕ್ಕಾಗಿ ಕೃಷಿ ಕೂಲಿಕಾರರಾಗಿ, ಬೇಸಾಯಗಾರರಾಗಿ, ಜೀತಗಾರರಾಗಿ ಸಣ್ಣ ಪುಟ್ಟ ಕೈಕೆಲಗಾರರ ಹಾಗೆ ಜೀವನ ಸಾಗಿಸುತ್ತಿದ್ದರು. ಗ್ರಾಮಗಳಲ್ಲಿ ನಗರಗಳಲ್ಲಿ ಸತ್ತ ಜಾನುವಾರುಗಳನ್ನು ತೆಗೆಯುವ, ಕೊಳಕನ್ನು ತೆಗೆಯುವ ಕೆಲಸ ಇವರಿಗೆ ಮೀಸಲಾಗಿದ್ದಿತ್ತು. ಸಂಸ್ಥಾನದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿಯೂ ಇವರೇ ಓಲೆಕಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರ ಸಾಮಾಜಿಕ ಸ್ಥಾನಮಾನ, ಬದುಕು ಬವಣೆ ಇಲ್ಲಿ ಚರ್ಚಿಸ ಬಯಸುವುದಿಲ್ಲ.

**ಅಗಸ :** ಅಗಸರು ಸಂಸ್ಥಾನದಲ್ಲಿ ಮಡಿವಾಳರು, ಸಾಕಲವಾಡರು, ರಜಕರು, ದೋಬಿಯವರುಗಳೆಂದು ಹಲವಾರು ಹೆಸರುಗಳಿಂದ ಕರೆಸಿಕೊಳ್ಳುತ್ತಿದ್ದರು. ಬಟ್ಟೆ ತೊಳೆಯುವುದು ಅವರ ವಂಶಪಾರಂಪಾರ್ಯವಾದ ವೃತ್ತಿ, ಕೆಲವರು ಕೃಷಿಕರಾಗಿ ಮುಂದುವರಿದುಕೊಂಡು ಬರುತ್ತಿದ್ದರು. ಮೈಸೂರು ಸಂಸ್ಥಾನದ ಅಗಸರು ಪ್ರಮುಖವಾಗಿ ಗೌರಿಹಬ್ಬದಲ್ಲಿ ಭೂಮದೇವರನ್ನು ವಿಶೇಷವಾಗಿ ಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ನಂತರ "ಉಬ್ಬೆ ಪೂಜೆ" ಮಾಡುತ್ತಾರೆ. (ಉಬ್ಬೆ ಎಂದರೆ ಅವರ ಸಂಪ್ರದಾಯದಲ್ಲಿ ಬಟ್ಟೆಗಳನ್ನು ಬಿಸಿನೀರಿನಲ್ಲಿ ಕುದಿಸುವುದು) ಇವರಲ್ಲಿ ಶೈವರು, ವೈಷ್ಣವರೂ ಇದ್ದು ಅವರ ಮುಖ್ಯ ದೇವರು ಮೈಲಾರ. ಬಸವೇಶ್ವರನ ಅನುಯಾಯಿಗಳಾಗಿ ಮಡಿವಾಳ ಮಾಚಯ್ಯನನ್ನು ಗೌರವಿಸಿಕೊಂಡು ಬಂದಿರುವುದು ಕಂಡುಬರುತ್ತದೆ.

**ಬಣಜಿಗರು :** ಇವರು ಸಂಸ್ಥಾನದಲ್ಲೆಡೆಯೂ ಕಂಡುಬರುತ್ತಾರೆ. ಇವರ ಮುಖ್ಯ ಕಸುಬು ವ್ಯಾಪಾರ. ಅಂದು ಸಂಸ್ಥಾನದಲ್ಲಿ ನಾಯ್ಡು. ಬಲಿಜ ಇತ್ಯಾದಿ ಹೆಸರುಗಳಿಂದಲೂ ಕರೆಸಿಕೊಳ್ಳುತ್ತಿದ್ದರು. ಇವರು ಜೀವನೋಪಾಯಕ್ಕೆ ಕೃಷಿಯನ್ನೆ ಅವಲಂಬಿಸಿಕೊಂಡಿದ್ದರು. ಇವರ ಮಾತೃಭಾಷೆ ಸಾಮಾನ್ಯವಾಗಿ ತೆಲುಗು ಆಗಿತ್ತೆಂದು ಹೇಳಬಹುದು.

**ಬೇಡರು :** ಇವರು ಸಂಸ್ಥಾನದ ಉತ್ತರ ಭಾಗದಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದರು. ಒಂದೊಂದು ಸ್ಥಳಗಳಲ್ಲಿ ಒಂದೊಂದು ಹೆಸರಿನಿಂದ ಕರೆಸಿಕೊಳ್ಳುತ್ತಿದ್ದ ಬೇಡರು ಸಾಮಾನ್ಯವಾಗಿ ಬ್ಯಾಡರು, ನಾಯಕ ಮಕ್ಕಳು, ವಾಲ್ಮೀಕಿ, ತಳವಾರ, ಬೇರಡ, ನಾಯಕ ಮತ್ತು ಪಾಳಯಗಾರರೆಂದು ಸ್ಥಳೀಯರಿಂದ ಕರೆಸಿಕೊಳ್ಳುತ್ತಿದ್ದರು. ಇವರು ವಿಜಯನಗರದ ಅರಸರ ಸೈನ್ಯ ಹಾಗೂ ಹೈದರ್ ಆಲಿ, ಟೀಪೂಸುಲ್ತಾನರ ಸೈನ್ಯದಲ್ಲಿ ಹೆಚಾಗಿ ಕಾರ್ಯ ನಿರ್ವಹಿಸಿರುವುದು ಕಂಡುಬರುತ್ತದೆ. ಇವರು ಹನುಮಂತನ್ನು ಹೆಚ್ಚಾಗಿ ಪೂಜಿಸುವುದು ಕಂಡುಬರುತ್ತದೆ. ಇದರಲ್ಲಿಯೂ ಶೈವ ವೈಷ್ಣವರಿಬ್ಬರೂ ಇದ್ದು ತಮ್ಮ ಹೆಣ್ಣು ಮಕ್ಕಳನ್ನು ಇವರು ಹರಿಸುತ್ತಿದ್ದರು. ಬೇಡರಲ್ಲಿ ಎರಡು ಪಂಗಡಗಳುಂಟು ೧. ಊರ ಬ್ಯಾಡರು. ೨. ಮ್ಯಾಸಬ್ಯಾಡರು. ಇವುಗಳು ತಮ್ಮದೆಯಾದ ಸಂಪ್ರದಾಯಗಳನ್ನು ಒಳಗೊಂಡು ಬೆಳೆದುಬರುತ್ತಿವೆ.

**ಬೆಸ್ತರು:** ಇವರಿಗೆ ಸಂಸ್ಥಾನದಲ್ಲಿ ಅನೇಕ ಹೆಸರುಗಳು ಇದ್ದವೆಂದು ಕಂಡುಬರುತ್ತದೆ. ಗಂಗಕುಲ, ಗಂಗಮತ, ಗಂಗೆ ಮಕ್ಕಳು, ಗಂಗಾಪುತ್ರ, ಗೌರಿಮತ, ಅಂಬಿಗ ಇತ್ಯಾದಿ ಹೆಸರುಗಳು ಅಂದಿನಿಂದ ಇಂದಿಗೂ ಸಹ ಬಳಕೆಯಲ್ಲಿ ಬಂದಿವೆ. ಇವರ ಮುಖ್ಯ ಕಸುಬು ಮೀನು ಹಿಡಿಯುವುದು. ಸಾಮಾನ್ಯವಾಗಿ ಇವರು ರಾಜಪರಿವಾರದವರನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಹೋರುವ ಕೆಲಸವನ್ನಬು ಮಾಡುತ್ತಿದ್ದರು. ನದಿಯಲ್ಲಿ ದೋಣಿ ನಡೆಸುವುದು, ಬೇಸಾಯ ಮಾಡುವುದು ಕೂಡ ಇವರ ಉಪ ಕಸುಬಾಗಿ ಕಂಡುಬರುತ್ತದೆ. ಬಿಳಿಗಿರಿರಂಗನ ಬೆಟ್ಟದ ರಂಗನಾಥನು ಇವರ ಪ್ರಧಾನ ದೇವರು.

**ದೇವಡಿಗರು :** ಇವರು ದೇವರ ಸನ್ನಿಧಾನದಲ್ಲಿ ಸಂಗೀತ ಹಾಡುವವರಾಗಿದ್ದರು. ಸಂಸ್ಥಾನದ ಎಲ್ಲಾ ಕಡೆಯೂ ಇವರು ಸಪ್ಪಲಿಗ, ಮೋಯ್ಲಿ. ದೇವಳಿ, ಶೇರಿಗಾರ ಮುಂತಾದ ವಿವಿಧ ಹೆಸರುಗಳಿಂದ ಗುರುತಿಸಿಕೊಳ್ಳುತ್ತಿದ್ದರು. ಇವರು ವೈಷ್ಣವ ಪಂಥದವರಾಗಿದ್ದು ತಿರುಪತಿ ವೆಂಕಟರಮಣನನ್ನು ತಮ್ಮ ಮನೆದೇವರನ್ನಾಗಿ ಪೂಜಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಇಂದಿಗೂ ಉಳಿದಿದ್ದಾರೆ.

**ದರ್ಜಿಯವರು :** ಹೊಲಿಗೆ ಕೆಲಸವನ್ನು ತಮ್ಮ ವೃತ್ತಿಯನ್ನಾಗಿ ಮಾಡಿಕೊಂಡಿರುವ ಇವರು ಸಂಸ್ಥಾನದಲ್ಲಿ ಭಾವಸೂರ ಕ್ಷತ್ರಿಯ, ಚಿಪ್ಪಿಗ, ನಾಮದೇವ ಶಿಂಪಿಗಳೆಂದು ಕರೆಸಿಕೊಂಡು ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಇವರಲ್ಲಿ ಶೈವ

ಹಾಗೂ ವೈಷ್ಣವ ಪಂಥಗಳ ಎರಡು ಗುಂಪಿಗೂ ಸೇರಿದವರು ಕಂಡು ಬರುತ್ತಾರೆ. ಚಂದ್ರಿಕಾ ಇವರ ವಿಶೇಷ ದೇವತೆ. ಹಿಂದೂ ಧರ್ಮದ ಎಲ್ಲಾ ದೇವರುಗಳನ್ನು ಪೂಜಿಸಿಕೊಂಡು ಗೌರವಿಸಿಕೊಂಡು ಬರುತ್ತಿರುವುದು ಕಂಡುಬರುತ್ತದೆ.

**ದೇವಾಂಗ :** ದೇವಾಂಗದವರ ಪ್ರಮುಖ ವೃತ್ತಿ ನೇಕಾರಿಕ. ಜೀವನೋಪಾಯಕ್ಕೆ ಕೃಷಿಯನ್ನು ಕೈಗೊಳ್ಳುವುದು ಸರ್ವೇಸಾಮಾನ್ಯ ಸಂಸ್ಥಾನದಲ್ಲಿ ಕೆಲವರು ವ್ಯಾಪಾರ ಬಡಗಿತನ, ಕಟ್ಟಡ ಕಟ್ಟುವ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದರು. ಇವರೆಲ್ಲರೂ ಸಾಮಾನ್ಯವಾಗಿ ಶೈವರಾಗಿದ್ದು ಇವರ ಮುಖ್ಯ ದೇವತೆ ಬನಶಂಕರಿ (ಈಕೆಯ ಮುಖ್ಯ ಪುಣ್ಯಕ್ಷೇತ್ರ ಬಾದಾಮಿಯ ಹತ್ತಿರವಿದೆ).

**ದೊಂಬರು :** ಹೆಚ್ಚಾಗಿ ದೊಂಬರೆಂದು ಕರೆಸಿಕೊಳ್ಳುತ್ತಿದ್ದ. ಇವರು (ಇಂದಿಗೂ ದೊಂಬರೆಂದೇ ಸಂಬೋಧಿಸಿಕೊಳ್ಳುತ್ತಾರೆ) ಸಾಂಪ್ರದಾಯಿಕವಾಗಿ ದೊಂಬರಾಟವಾಡಿ ಕೊಂಡು ಬರುವವರಾಗಿದ್ದಾರೆ. ಲಾಗ ಹಾಕುವವರು. ಸರ್ಕಸ್ ಮಾಡುವವರು. ಹಾವಾಡಿಗರು ತಮ್ಮ ಸಂಸ್ಕೃತಿಗೆ ತಮ್ಮ ಕೆಲಸಕ್ಕೆ ದೊಂಬ, ಡೊಮ್ಮರ ಅಥವಾ ದೊಂಬರಿಗಳೆಂದು ಕರೆದುಕೊಳ್ಳುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಇವರು ಹೆಚ್ಚಾಗಿ ಕಂಡುಬರುತ್ತಿದ್ದರು. ವಿವಿಧ ಅಂಗಸಾಧನೆಯ ಕಸರತ್ತುಗಳು ಇವರ ಆಟದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು. ಕರಕುಶಲ ವಸ್ತುಗಳಾದ ಬಾಚಣಿಗೆ ಮಹಿಳೆಯರಿಗೆ (ಚೌರಿ) ಉದ್ದನೆಯ ಕೂದಲು ತಯಾರಿಸುವುದು ಹಾಗೂ ಮಾರಾಟ ಮಾಡುವುದು ಇವರ ಹೆಚ್ಚನವರ ಕೆಲಸ ಇವರ ಆರಾಧ್ಯ ದೇವತೆ ಗುರುಮೂರ್ತಿ.

**ಗಾಣಿಗರು :** ಸಾಂಪ್ರದಾಯಿಕವಾಗಿ ವ್ಯಾಪಾರ, ಎಣ್ಣೆ ಹಿಂಡುವುದು ಹಾಗೂ ಎಣ್ಣೆ ಮಾರುವುದನ್ನೆ ತಮ್ಮ ಕಸುಬಾಗಿಸಿಕೊಂಡಿದ್ದ ಇವರು ವಿವಿಧ ಪ್ರದೇಶಗಳಲ್ಲಿ ಅಲ್ಲಿನ ಭಾಷೆಗೆ ಸಂಬಂಧಿಸಿದಂತೆ ಗಾಣಿಗ, ಗಾಂಡ್ಲಾ, ಸಜ್ಜಿನ ಗಾಣಿಗ ಎಂದು ವಿವಿಧ ಹೆಸರುಗಳಿಂದ ಗುರುತಿಸಿಕೊಳ್ಳುತ್ತಿದ್ದರು. ಇಂದಿಗೂ ಈ ಅರ್ಥದಲ್ಲಿಯೇ ಇವರನ್ನು ಗುರುತಿಸುತ್ತಿರುವುದನ್ನು ಗಮನಿಸಬಹುದು. ಸಂಸ್ಥಾನದಲ್ಲಿ ಇವರಿಗೆ ವಿಶೇಷ ಗೌರವಿದ್ದಿತ್ತು. ಏಕೆಂದರೆ ಅಂದು ವಿದ್ಯುತ್ ಸೌಕರ್ಯವಿಲ್ಲದ ದಿನವಾಗಿತ್ತು. ಈ ದೃಷ್ಟಿಯಲ್ಲಿ ಎಣ್ಣೆ ದೀಪಕ್ಕೆ ವಿಶೇಷ ಮಹತ್ವವಿದ್ದಿತ್ತು. ಇದನ್ನು ನಮ್ಮ ಜನಪದರು ದೈವ ಸಂಭೂತವೆಂದೇ ನಂಬಿರುವುದಕ್ಕೆ ಅನೇಕಾನೇಕ ಗಾದೆ. ಒಗಟು ಹಾಗೂ ನಂಬಿಕೆಗಳು ಇಂದಿಗೂ ಇವೆ. ಈ ಹಂತದಲ್ಲಿ ಬೆಳಕು ಕೊಡುವ ಪ್ರಮುಖ ಸಾಧನ ದೀಪ. ಈ ದೀಪಗಳಿಗೆ ಎಣ್ಣೆಯೊಂದೆ ಉರುವಲು ಸಾಧನವಾಗಿದ್ದಿತ್ತು. ಇದರಿಂದ ಜನರು ಇವರನ್ನು ಹೆಚ್ಚಿನ ಪ್ರಮಾಣದಲ್ಲಿ ಗೌರವಿಸುತ್ತಿದ್ದರು. ಗಾಣಿಗರಲ್ಲಿ ನಾಲ್ಕು ಪಂಗಡಗಳಿದ್ದವು, ಜ್ಯೋತಿಪಣ, ಜ್ಯೋತಿನಗರ, ದೇವಗಾಣಿಗ ಮತ್ತು ಸಜ್ಜನ ಗಾಣಿಗ ಎಂದು. ಇವುಗಳಲ್ಲಿ ಮೇಲಿನ ಮೂರು ವಿಭಾಗಗಳು ಮೈಸೂರು ಸಂಸ್ಥಾನದಲ್ಲಿ ಹೆಚ್ಚಾಗಿ ಕಂಡುಬಂದರೆ, ಸಜ್ಜನಗಾಣಿಗರನ್ನು ಬೆಳಗಾವಿಯ ಪ್ರದೇಶದಲ್ಲಿ ಕಂಡುಬರುವವರಾಗಿದ್ದರು. ಇವರು ಶೈವ - ವೈಷ್ಣವ ಪರಂಪರೆಯ ದೇವರುಗಳನ್ನು ಪೂಜಿಸುವವರಾಗಿದ್ದು ಇತ್ತೀಚೆಗೆ ಕೃಷಿಯಲ್ಲಿ ಹೆಚ್ಚಾಗಿ ತೊಡಗುತ್ತಿರುವುದು ಕಂಡುಬರುತ್ತದೆ.

**ಕುರುಬರು:** ಇವರು ಸಾಂಪ್ರದಾಯಿಕವಾಗಿ ಕುರಿ ಸಾಗಾಣಿಕೆಯ ಕೆಲಸವನ್ನು ಮೈಗೂಡಿಸಿಕೊಂಡವರು ಹಾಗೂ ಕುರಿಯ ಕೂದಲಿನಿಂದ ಕಂಬಳಿ ನೇಯುವುದು ಪ್ರಮುಖ ಉದ್ಯೋಗವಾಗಿತ್ತು. ಇತ್ತೀಚೆಗೆ ಕೃಷಿಯನ್ನು ಹೆಚ್ಚಾಗಿ ಅವಲಂಬಿಸಿಕೊಂಡು ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಅಂದು ಸಂಸ್ಥಾನದಲ್ಲಿ ಇವರಲ್ಲಿಯೇ ಹಾಲು ಕುರುಬರು. ಅಂಡೆ ಕುರುಬರು, ಕಂಬಳಿ ಕುರುಬರುಗಳ ಉಪ ಪಂಗಡದವರುಗಳೂ ಇದ್ದರು. ಇವರು ಹೆಚ್ಚಾಗಿ ಶೈವ ಪಂಥಕ್ಕೆ ಸೇರಿದವರಾಗಿದ್ದರೂ ಬೀರದೇವರನ್ನು ತಮ್ಮ ಆರಾಧ್ಯ ದೇವರಾಗಿ ಪೂಜಿಸಿಕೊಂಡು ಬರುತ್ತಿದ್ದಾರೆ. ಕುರುಬರು ಒಂದು ಪಂಗಡಕ್ಕೆ ಒಡೆಯರ್ ಎಂಬ ಉಪ ನಾಮಕರಣವಿರುವುದು ಕಂಡುಬರುತ್ತದೆ. ಸಂಸ್ಥಾನದ ಅರಣ್ಯ ಪ್ರದೇಶಗಳಲ್ಲಿ ಬೆಟ್ಟದ ಕುರುಬ ಜೂನು. ಕುರುಬ, ಕಾಡು ಕುರುಬರೆಂಬ ತಮ್ಮದೆಯಾದ ವೃತ್ತಿಯಲ್ಲಿ ತೊಡಗಿದ್ದ ಕುರುಬರನ್ನು ಕಾಣಬಹುದಾಗಿದೆ.

**ಲಿಂಗಾಯಿತರು:** ಲಿಂಗಾಯಿತ ಎಂಬ ಪದವು ವೀರಶೈವ ಎಂಬ ಒಂದು ಧಾರ್ಮಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ೧೨ನೇ ಶತಮಾನದಲ್ಲಿ ವೈದಿಕ ಧರ್ಮದ ಅನಿಷ್ಟ ಪದ್ಧತಿಗಳ ವಿರುದ್ಧವಾಗಿ ಹುಟ್ಟಿಕೊಂಡ ಪ್ರತಿಭಟನೆಯ ರೂಪವು ಬಸವಣ್ಣನವರ ನೇತೃತ್ವದಲ್ಲಿ ಬಲಶಾಲಿಯಾಗಿ ಒಂದು ಧರ್ಮವಾಗಿ ರೂಪತಾಳಿತು. ಇವರು ಸಂಸ್ಥಾನದ ಎಲ್ಲಾ ಕಡೆಯೂ ಕಂಡುಬರುತ್ತಿದ್ದರು. ಸಂಸ್ಥಾನದಲ್ಲಿ ಇವರ

ಪ್ರಮುಖ ಧಾರ್ಮಿಕ ಕೇಂದ್ರವಾದ 'ಮಠ'ಗಳಿಗೆ ವಿಶೇಷ ಗೌರವ ದೊರಕುತ್ತಿತ್ತು. ಇವರು ಹೆಚ್ಚಾಗಿ ಕೃಷಿ ಹಾಗೂ ವ್ಯಾಪಾರವನ್ನು ತಮ್ಮ ಮೂಲ ಕಸುಬಾಗಿ ಹೊಂದಿದವರಾಗಿದ್ದರು.

**ಮೇದರು:** ಮೇದರು ತಲತಲಾಂತರದಿಂದಲೂ ಕುಶಲ ಕೈಗಾರಿಕೆ ಮತ್ತು ಕೃಷಿ ಮಾಡಿಕೊಂಡು ಬರುತ್ತಿರುವ ಜನ. ಇವರು ಹೆಚ್ಚಾಗಿ ಬಿದಿರು ಕೆಲಸಗಾರರು. ಶಿವ ಮತ್ತು ಪಾರ್ವತಿಯನ್ನು ಆರಾಧಿಸುವವರು. ಮದುವೆ ಹಾಗೂ ಶುಭ ಸಮಾರಂಭಗಳಿಗೆ ಶೈವರು ಹಾಗೂ ಜಂಗಮರನ್ನು ಆಮಂತ್ರಿಸುವುದು ಸಾಮಾನ್ಯವಾಗಿರುತ್ತಿತ್ತು. ಇಂದಿಗೂ ಇದೇ ಸಂಪ್ರದಾಯ ಮುಂದುವರಿಯುತ್ತಿದೆ.

**ಉಪ್ಪಾರ:** ಇವರ ಹೆಸರೇ ಹೇಳುವಂತೆ ಇವರ ಮುಖ್ಯ ಕಸುಬು ಉಪ್ಪನ್ನು ತಯಾರಿಸುವುದಾಗಿತ್ತು. ಅದರಲ್ಲಿಯೂ ವಿಶೇಷವಾಗಿ ನೆಲದ ಉಪ್ಪನ್ನು ತಯಾರಿಸುವುದು. ಅಂದು ಇವರ ಪಾತ್ರ ಹೆಚ್ಚಾಗಿತ್ತು. ಹಾಗೂ ವಿಶೇಷ ಗೌರವ ಪಡೆದಿದ್ದವರಾಗಿದ್ದರು. ಇವರು ತಮ್ಮ ಹೆಸರಿನ ಕೊನೆಯಲ್ಲಿ 'ಶೆಟ್ಟಿ' ಅಥವಾ 'ಗೌಡ' ಎಂದು ಸೇರಿಸಿಕೊಂಡು ಬರುತ್ತಿದ್ದರು. ಇವರಲ್ಲಿ ಹೆಚ್ಚಿನವರು ವೈಷ್ಣವರಾಗಿದ್ದು ಚೆನ್ನಕೇಶವ, ಮೈಲಾರೇಶ್ವರ, ಬಾಲಾಜಿ ಮತ್ತು ಭವಾನಿಯರನ್ನು ಹೆಚ್ಚಾಗಿ ಪೂಜಿಸಿಕೊಂಡು ಬರುವವರಾಗಿದ್ದರು.

**ಒಕ್ಕಲಿಗರು:** ಮೈಸೂರು ಸಂಸ್ಥಾನದ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚಾಗಿ ಕಂಡು ಬರುತ್ತಿದ್ದಂತವರೆಂದರೆ ಒಕ್ಕಲಿಗರು. ಇವರುಗಳಲ್ಲಿ ಹಳ್ಳಿಕಾರ, ಕುಂಚಿಟಿಗ, ರೆಡ್ಡಿ, ಕಾಪು ಕಮ್ಮ ಮತ್ತು ಮೊರಸು ಒಕ್ಕಲಿಗರೆಂದು ವಿವಿಧ ವಿಭಾಗಗಳಿವೆ. ಕನ್ನಡ ಭಾಷೆಯಲ್ಲಿ ಒಕ್ಕಲುತನವೆಂದರೆ ಬೇಸಾಯ ಮಾಡುವುದು ಎಂದರ್ಥ. ಶಿವಮೊಗ್ಗದ ಕಡೆ ಇವರು ನಾಯಕ ಮತ್ತು ಹೆಗ್ಗಡೆ ಎಂಬುವ ಅಡ್ಡ ಹೆಸರುಗಳನ್ನು ಇಟ್ಟುಕೊಳ್ಳುವ ಸಂಪ್ರದಾಯವಿರುವುದು ಕಂಡುಬರುತ್ತದೆ. ಇವರು ಕೆಲವರು ಶೈವರಾದರೆ ಮತ್ತೆ ಕೆಲವರು ವೈಷ್ಣವರಾಗಿ ಕಂಡು ಬರುತ್ತಾರೆ. ಇವರ ಕುಲದೇವರು ಚುಂಚನಗಿರಿಯ ಗಂಗಾಧರೇಶ್ವರ ಈ ಮಠಕ್ಕೆ ಇವರು ಭಕ್ತಿಭಾವದಿಂದ ನಡೆದುಕೊಳ್ಳುತ್ತಾರೆ.

**ಸಂಸ್ಥಾನದಲ್ಲಿ ಇದ್ದ ಇತರ ಗುಂಪುಗಳು:** ಜೀವನೋಪಾಯಕ್ಕಾಗಿ ತಾವುಗಳು ಅವಲಂಬಿಸಿ ಹೊಂಡಿದ್ದ. ಕಸುಬಿನ ಆಧಾರದ ಮೇಲಕ್ಕೆ ನೂರಾರು ಜಾತಿಯ ಜನರು ಸಂಸ್ಥಾನದಲ್ಲಿ ನೆಲೆಸಿದ್ದರು. ಅವರು ಇಂದಿಗೂ ಕಂಡುಬರುತ್ತಾರೆ. ಅವುಗಳನ್ನು ಪಟ್ಟಿಮಾಡುವುದಾದರೆ -

ಅಂಬಲವಾಸಿ (ದೇವಾಸ್ಥನದ ನಿರ್ವಹಣೆಯಲ್ಲಿ ತೊಡಗಿದವರು), ಅರಸು (ಭೂ ಒಡೆಯರು. ಮೈಸೂರನ್ನು ಆಳುತ್ತಿದ್ದ ವರ್ಗ) ಬಾಂದಿ (ಮನೆಗೆಲಸದಲ್ಲಿ ಸಹಾಯ ಮಾಡುವವರು) ಬನಿಯ (ವ್ಯಾಪಾರಗಳು) ಭಾಟ (ವಂಶಾವಳಿ ಬರೆದಿಡುವವರು) ಬೋಗಾಡ (ಕಂಬಳಿ ಹೆಣೆಯುವವರು) ಬುಂಡೇ ಬೆಸ್ತ (ಮೀನುಗಾರರು, ಪಲ್ಲಕ್ಕಿ ಹೋರುವವರು) ಚಕ್ಕನ್ (ಎಣ್ಣೆ ತೆಗೆಯುವವರು), ಚಾಳಿಯಾನ್ (ನೂಲುಬಟ್ಟೆ ನೆಯುವವರು), ಚಿಟ್ಟೆ (ವ್ಯಾಪಾರಿಗಳು), ಗಾಬಿಟ್ (ಸಮುದ್ರ ಸಂಚಾರಿಗಳು, ಮೀನಾಗಾರರು), ಗಾರುಡಿ (ಬಿಕ್ಷಕರು, ಹಾವಾಡಿಗರು, ಅಲೆಮಾರಿ, ಮೋಜಿಕಾರರು) ಗಟ್ಟ (ಬೇಸಾಯಗಾರರು) ಗೌರಿಗ (ಬಿದಿರು ಕೆಲಸಗಾರ), ಘಾಡಿ (ಕಣಿ ಹೇಳುವವರು), ಗೋಣಿಗ (ಗೋಣಿ ಚೀಲ ನೆಯುವವನು) ಗೋಸಾವಿ (ಧರ್ಮದ ಹೆಸರಿನಲ್ಲಿ ಭಿಕ್ಷೆಯತ್ತಿ ತಿರುಗುವವನು), ಗುರುವ (ಸಂಗೀತಗಾರ, ದೇವಾಲಯದ ಸೇವಕ), ಹರಿಣಶಿಕಾರಿ (ಭೇಟೆಗಾರರು), ಹೆಳವ (ಲಾವಣಿಕಾರರು, ಕೃಷಿಕರು), ಹೂವಾಡಿಗ (ಹೂವು ಬೆಳೆಸುವವನು, ಮಾರುವವರು) ಐರೀ (ಕಮ್ಮಾರರು), ಕಾಡುಗೊಲ್ಲ (ದನ ಕಾಯುವವರು, ಕಣಬಿ (ಬೇಸಾಯಗಾರರು), ಕಣ್ ಸನ್ (ಭವಿಷ್ಯ ಹೇಳುವವರು), ಕರುಣೀಕರು (ಚಿಲ್ಲರೆ ವ್ಯಾಪಾರಿಗಳು ಹಾಗೂ ಗೃಹ ಕೈಗಾರಿಕೆಗಳಲ್ಲಿ ಕೆಲಸ ಮಾಡುವವರು), ಕಾಸಾರ್ (ಹಿತ್ತಾಳೆ, ತಾಮ್ರ, ಪಾತ್ರೆಗಳನ್ನು ತಯಾರಿಸುವವರು), ಕೋಟೆಗಾರರು (ಕಾವಲುಗಾರರು), ವೀಳ್ಯೆಗಾರರು (ಬೀಡಿ ಕಟ್ಟುವವರು) ಲಾಡರ (ಯಲೆಗಾರ ರಾವುಕರು, ಕುದುರೆ ವ್ಯಾಪಾರಿಗಳು), ನಾಮಧಾರಿಗೌಡ (ಕೃಷಿಕರು) ನಟವರು (ವೃತ್ತಿ ನೃತ್ಯಕಾರರು) ನಾಯುಡು (ಗವರ, ಬಳೆ ಮಾರುವವರು) ಪಾತ್ರದವರು (ನೃತ್ಯ ಮಾಡುವವರು) ಸನ್ಯಾಸಿ (ಪರಿತ್ಯಾಗಿಗಳಾಗಿ ಭಿಕ್ಷೆ ಎತ್ತುವರು). ಪಂಚಮರು (ಹೊಲೆಯ, ಮಾದಿಗ ಜಾಡಮಲ್ಲಿ ಜನಾಂಗದವರು) ಈ ರೀತಿಯಲ್ಲಿ ಸಂಸ್ಥಾನದ ಸಾಮಾಜಿಕ ರಚನೆಯಾಗಿತ್ತೆಂದು ಹೇಳಬಹುದಾಗಿದೆ. ಇವರುಗಳು ಕೈಗೊಂಡಿರುವ ಕೆಲಸಗಳ ಆಧಾರದ ಮೇಲೆ ಸ್ಪೃಶ್ಯ ಅಸ್ಪೃಶ್ಯ ಎಂದು ವರ್ಗೀಕರಣ ಮಾಡಲಾಗಿದೆ.

**ಸಂಸ್ಥಾನದಲ್ಲಿ ಸಾಮಾಜಿಕ ಜೀವನ :** ಪ್ರಾಚೀನ ಕಾಲದಲ್ಲಿದ್ದಂತೆ ಮಧ್ಯ ಯುಗದಲ್ಲಿಯೂ ಹಾಗೂ ಇಂದಿಗೂ ಸಹ ವ್ಯಕ್ತಿ ಸಮಾಜದ ಮೇಲೆ ಹೆಚ್ಚಿನ ಪ್ರಭಾವ ಬೀರಿದ ಶಕ್ತಿಯೆಂದರೆ ಧರ್ಮ. ಈ ಧರ್ಮದ ಚೌಕಟ್ಟಿನಲ್ಲಿಯೇ ಪ್ರಾರಂಭದಲ್ಲಿ ಒಡೆಯರ್ ರವರು ವರ್ಣಾಶ್ರಮ

ಧರ್ಮಪಾಲನೆಗಾಗಿ ಹಗಲು ರಾತ್ರಿ ಶ್ರಮಿಸಿದವರಾಗಿದ್ದರು. ಅದೇ ರೀತಿಯಲ್ಲಿ ತಮ್ಮ ತಮ್ಮ ಜಾತಿ ಮತಗಳ ಆಚಾರ ವಿಚಾರಗಳನ್ನು ಅವರವರ ಧರ್ಮಶಾಸ್ತ್ರಜ್ಞರು ವಿಧಿಸುವ ಕರ್ತವ್ಯಗಳನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬರಲು ಪ್ರಜೆಗಳು ಉತ್ಸುಕರಾಗಿದ್ದರು. ಈ ಹಂತದಲ್ಲಿ ಸಂಸ್ಥಾನದ ಸಾಮಾಜಿಕ ಸ್ಥಿತಿಯಲ್ಲಿ ಮೇಲು ಕೀಳುಗಳೆಂಬ ಅಸ್ಪೃಶ್ಯತೆಯು ಯಥೇಚ್ಛವಾಗಿ ಕಂಡುಬಂದು ಅನೇಕ ಸಮಯದಲ್ಲಿ ಕಲಹಗಳು ಸಂಭವಿಸುತ್ತಿತ್ತು. ಇಂತಹ ಸಮಯದಲ್ಲಿ ಒಡೆಯರ್ ರವರು ಒಗ್ಗಟ್ಟನ್ನು ಕಾಪಾಡಿಕೊಂಡು ಬರಲು ಕೈಗೊಂಡ ಕ್ರಮಗಳು ಅಂದು ಅವರು ಹೊಂದಿದ್ದ ಬಿರುದುಗಳಿಂದ ತಿಳಿಯಬಹುದಾಗಿದೆ. ಒಡೆಯ ವಂಶದಲ್ಲಿಯೇ ಸಮಾಜದ ಸಾಮರಸ್ಯವನ್ನು ಕುದುರಿಸಿ ಹಾಗೂ ರಾಜಕೀಯ ಭದ್ರತೆಯನ್ನೂ ವ್ಯಕ್ತಿ ಹಿತವನ್ನೂ ರಕ್ಷಿಸುವುದಕ್ಕಾಗಿ ತಮ್ಮ ಬಾಳನ್ನೆ ಮುಡಿಪಾಗಿಟ್ಟಿದ್ದರೆಂದು ಅಂದಿನ ಮೂಲಭೂತ ವ್ಯಕ್ತಿಗಳು ಬರೆದಿರುವ ಸಾಹಿತ್ಯಗಳಿಂದ ತಿಳಿದುಬರುತ್ತದೆ ಎಂದು ಹೇಳಬಹುದು ಹಾಗೂ ಆಯಾ ಜಾತಿ ಮತಗಳಿಗೆ ಸ್ವಧರ್ಮ ಪಾಲನೆಯನ್ನು ಕಟ್ಟುನಿಟ್ಟಾಗಿ ವಿಧಿಸಿದ್ದರು. ಇದಕ್ಕೆ ಸಾಕ್ಷಿಯಾಗಿ ಅವರೇ ರಚಿಸಿರುವುದರಂದು ಹೇಳಲಾಗಿರುವ "ಸಚ್ಛೂದ್ರಾಚಾರ ನಿರ್ಣಯ" ಎಂಬ ಸಾಮಾಜಿಕ ಗ್ರಂಥದಲ್ಲಿ ಅವರು ವರ್ಣಗಳಿಗೂ ಆಶ್ರಯಗಳಿಗೂ ಪುರಾತನ ಕಾಲದಿಂದ ನಡೆದು ಬಂದ ಧರ್ಮವನ್ನು ಮನಃಪೂರ್ವಕವಾಗಿ ಈಡೇರಿಸುವಂತೆ ಸಕಲರನ್ನು ವಿನಂತಿಸಿಕೊಂಡಿರುವುದೇ ಆಗಿದೆ ಎಂದು ಹೇಳಬಹುದು. ಅಂದರೆ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ಶೂದ್ರಗಳೆಂದು ವರ್ಣಗಳನ್ನು ಸೃಷ್ಟಿಸಿ ಅವುಗಳಿಗೆ ವಿಧಿಸಿರುವ ಉತ್ತಮ ಹಾಗೂ ಕೆಳಸ್ತರದ ಕೆಲಸಗಳಿಗೆ ಕರುಬದೆ ಸರ್ವರನ್ನೂ ಸಮನಾಗಿ ಕಾಣುವ ತತ್ತ್ವವನ್ನು ಈ ಗ್ರಂಥ ತಿಳಿಸುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲೂ ಜಾತಿ ಸಂಪ್ರದಾಯಗಳ ಉಲ್ಲಂಘನೆಗೆ ಕಠಿಣ ಶಿಕ್ಷೆವಿಧಿಸುವ ಶಾಸನ ಹೊರಡಿಸಲಾಗಿತ್ತು. ಇದು ಹೆಚ್ಚಾಗಿ ಆಧುನಿಕ ಮೈಸೂರಿನ ಶಿಲ್ಪಗಳಾಗಿರುವ ೧೦ನೇ ಚಾಮರಾಜ ಒಡೆಯರ್ ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಆಳ್ವಿಕೆಯ ಕಾಲದಲ್ಲಿ ಹೆಚ್ಚಾಗಿ ಬಳಕೆಯಲ್ಲಿ ಬಂದು ದೀನದಲಿತರ ಸಾಂಸ್ಕೃತಿಕ ಬದುಕಿನ ಕಡೆಗೆ ಹೆಚ್ಚಿನ ಗಮನಹರಿಸಿ ಅಮರರಾಗಿದ್ದಾರೆ ಎನ್ನಬಹುದು.

ಸಂಸ್ಥಾನದ ಪ್ರಮುಖ ಕಸುಬಾಗಿದ್ದ ಕೃಷಿಯಲ್ಲಿ ದುಡಿಯುವ ವರ್ಗ ಚಂಡಾಲರು ಅಥವಾ ಅಸ್ಪೃಶ್ಯರೆ ಹೆಚ್ಚಿನವರಾಗಿದ್ದರು. ಇವರು ಕೃಷಿ ಕಾರ್ಯದ ಜೊತೆಗೆ ಕೃಷಿ ಉತ್ಪನ್ನಗಳನ್ನು ತಯಾರಿಸುವ ಕೆಲಸದಲ್ಲಿಯೂ ತೊಡಗಿದವರಾಗಿದ್ದರು. ಹೆಚ್ಚಾಗಿ ಈ ಜನಾಂಗವು ನಗರ, ಪಟ್ಟಣಗಳಿಂದ ದೂರವಿದ್ದು ಹಳ್ಳಿಗಳಲ್ಲಿ ವಾಸಮಾಡುತ್ತಿದ್ದರು. ಸಮಾಜದ ದೃಷ್ಟಿಯಲ್ಲಿ ಇವರ ಸ್ಥಾನಮಾನವು ಅತ್ಯಂತ ಕೀಳಿನದಾಗಿದ್ದಿತ್ತು. ಒಂದು ದೃಷ್ಟಿಯಲ್ಲಿ ಅಂದು ಅಸ್ಪೃಶ್ಯನಾಗಿ ಜನಿಸುವುದೆಂದರೆ ಅದು ಆ ವ್ಯಕ್ತಿಯು ಮಾಡಿರುವ ಪೂರ್ವ ಜನ್ಮದ ಪಾಪದ ಫಲವೆಂದು ಭಾವನೆಯು ಎಲ್ಲಾ ಉನ್ನತ ಸಮುದಾಯಗಳಲ್ಲಿಯೂ ಮೂಡಿದ್ದಿತು. ಒಂದು ಹಂತದಲ್ಲಿ ಅಂದು ಬ್ರಾಹ್ಮಣರ ಹೆಚ್ಚಿನ ಪ್ರಬಲ್ಯವನ್ನು ವೀರಶೈವರೂ ಹಾಗೂ ಜೈನರೂ ಭಗ್ನಗೊಳಿಸಲು ಸವಾಲಾಗಿ ಬಂದೊದಗಿದ್ದ ಕಾಲವೆನ್ನಬಹುದು. ಆದರೆ ೧೨ನೇ ಶತಮಾನದಲ್ಲಿ ಕರ್ಮ ಸಿದ್ಧಾಂತ ಹಾಗೂ ಜಾತಿ ಭೇದದ ವೈಷಮ್ಯಗಳನ್ನು ಸಂಪೂರ್ಣವಾಗಿ ಕಿತ್ತೆಸೆಯುವ ಉದ್ದೇಶದಿಂದ ಹುಟ್ಟಿದ ವೀರಶೈವ ಪಮಥವು ಒಂದು ಪ್ರಬಲ ಜಾತಿಯಾಗಿ ನೆಲೆಯೂರಲಾರಂಭಿಸಿತು. ಬ್ರಾಹ್ಮಣರ ನಂತರ ಸಂಸ್ಥಾನದಲ್ಲಿ ಅಸ್ಪೃಶ್ಯರನ್ನು ಹೆಚ್ಚಾಗಿ ಶೋಷಣೆಗೆ ಒಳಪಡಿಸಿದವರೆಂದರೆ ವೀರಶೈವ ಸಮಾಜದವರೆನ್ನಬಹುದು. ಇದು ಇಂದಿಗೂ ಸಹ ಹೆಚ್ಚಾಗಿಯೇ ಕಂಡು ಬರುತ್ತದೆ. ದಿನನಿತ್ಯ ದಲಿತರು ಸವರ್ಣಿಯರಿಂದ ದೌರ್ಜನ್ಯಕ್ಕೆ ತುತ್ತಾಗುತ್ತಿರುವುದು ಸರ್ವೇ ಸಾಮಾನ್ಯವಾಗಿದೆ.

**ಸಂಸ್ಥಾನದಲ್ಲಿ ಮಹಿಳೆಯರ ಸ್ಥಾನಮಾನ :** ವಿಜಯನಗರದರಸರ ಆಳ್ವಿಕೆಯಲ್ಲಿದ್ದ ಮಹಿಳೆಯರ ಸ್ಥಾನಮಾನಕ್ಕೆ ತಾಳೆ ಹಾಕಿ ನೋಡುವುದಾದರೆ ಮೈಸೂರು ಸಂಸ್ಥಾನದ ಸ್ತ್ರೀಯರು ಹಲವಾರು ಬದಲಾವಣೆ ಕಂಡು ಮುನ್ನಡೆಯಲು ಪ್ರಯತ್ನಿಸಿದಳೆನ್ನಬಹುದು. ಏಕೆಂದರೆ ಈ ಸಮಯದಲ್ಲಿ ಸ್ತ್ರೀಗೆ ಧಾಮಿಕ ಇಲ್ಲವೆ ಸಾಮಾಜಿಕ ಕಟ್ಟುಪಾಡುಗಳೇನೋ ಹೆಚ್ಚಾಗಿ ಅಂಟಿಕೊಳ್ಳಲು ಪ್ರಯತ್ನಿಸುತ್ತಿರಲಿಲ್ಲ. ಅದಕ್ಕೆ ಬದಲಾಗಿ ಅಂಟಿಕೊಂಡಿರುವ ಅನಿಷ್ಟ ಪದ್ಧತಿಗಳನ್ನು ತೆಗೆದು ಹಾಕುವ ಕಾಯ್ದ ಕಡೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲು ಮುಂದಾಯಿತು. ಇದಕ್ಕ ಸಾಕ್ಷಿಯಾಗಿ ಸಂಚಿ ಹೊನ್ನಮ್ಮಳು ಅಂದೇ ಸ್ತ್ರೀ ಪುರುಷರ ಸಮನತಾ ತತ್ವವನ್ನು ಪ್ರತಿಪಾದಿಸಿ ಇಂದಿಗೂ ಸಹ ಚಾರಿತ್ರಿಕ ವ್ಯಕ್ತಿಯಾಗಿ ಉಳಿದಿದ್ದಾಳೆ. ವಿದೇಶಿ ಪ್ರವಾಸಿಗರಾದ ಫಾದರ್ ಸಿನಾಮಿ, ಬುಕನಸ್ ಮುಂತಾದವರು ಅಂದಿನ ಸ್ತ್ರೀಯರನ್ನು ಅವರ ಸ್ಥಾನಮಾನವನ್ನು ಶ್ಲಾಘಿಸಿದ್ದಾರೆ.

ಅಂದು ಬಾಲ್ಯ, ವಿವಾಹ ಹೆಚ್ಚಾಗಿ ಬಳಕೆಯಲ್ಲಿದ್ದಿತ್ತು. ಅದರಲ್ಲಿಯೂ ಬ್ರಾಹ್ಮಣ ಸಮಾಜವು ಹೆಚ್ಚಾಗಿ ತೊಡಗಿದ್ದಿತ್ತು. ತದನಂತರ ಬ್ರಾಹ್ಮಣೇತರ ಸಮಾಜದಲ್ಲಿಯೂ ಬಾಲ್ಯವಿವಾಹ ಬೆಳೆದು. ಮುಂದೆ ಸಾಮಾಜಿಕ ತೊಂದರೆಗಳಿಗೆ ಎಡೆ ಮಾಡಿಕೊಡುವ ಪರಿಸ್ಥಿತಿ

ಉದ್ಭವವಾಗುವಂತೆ ಸೃಷ್ಟಿಸುತ್ತಿತ್ತು. ಅಂದಿನ ಮತ್ತೊಂದು ಕೆಟ್ಟ ಸಂಪ್ರದಾಯವೆಂದರೆ ಅತಿ ವೃದ್ಧರು ಸಹ ಚಿಕ್ಕ ವಯಸ್ಸಿನ ಬಾಲಕಿಯರನ್ನು ಮದುವೆಯಾಗುವ ಪದ್ಧತಿ ಸರ್ವೇಸಾಮಾನ್ಯವಾಗಿ ಬಂದದ್ದು. ಹೀಗೆ ತಮ್ಮ ಇಳಿವಯಸ್ಸಿನಲ್ಲಿ ಪ್ರಾಯದ ಹುಡುಗಿಯನ್ನು ಮದುವೆ ಮಾಡಿಕೊಂಡರೆ ಅವರ ಮನೆತನದ ಘನತೆ ಗೌರವ ಹೆಚ್ಚುತ್ತದೆಂಬ ಕೆಟ್ಟ ಆಲೋಚನೆ ಅವರಲ್ಲಿ ಮನೆಮಾಡಿಕೊಂಡಿತ್ತು. ಅಂದು ಅರಸರು ವ್ಯಭಿಚಾರದಲ್ಲಿ ತೊಡಗಿದವರಿಗೆ, ಅನೀತಿಯಲ್ಲಿ ತಲ್ಲೀನರಾದವರಿಗೆ ಜಾತಿ ಬಹಿಷ್ಕಾರ, ವಿವಾಹ ವಿಚ್ಛೇದನ. ಮುಂತಾದ ಅನಿಷ್ಟ ಕೆಲಸಗಳಿಗೆ ಕೈಹಾಕಿದವರಿಗೆ ಜುಲ್ಮಾನೆಗೆ ಒಳಪಡಿಸುತ್ತಿದ್ದರು. ಅಲ್ಲದೆ ಕಾರಾಗೃಹದ ಶಿಕ್ಷೆ ಹಾಗೂ ಅತಿಯಾಗಿದ್ದರೆ ಮರಣ ದಂಡನೆಯ ಶಿಕ್ಷೆಗೆ ಗುರಿಯಾಗಬೇಕಾಗಿತ್ತು. ಆದರೆ ಇವುಗಳಾವುವೂ ಮೇಲ್ಜಾತಿಯವರಿಗೆ ಅನ್ವಯಿಸುತ್ತಿರಲಿಲ್ಲವೆಂದೇ ಹೇಳಬಹುದು. ಕೆಳಜಾತಿಯ ಸ್ತ್ರೀಯರ ಬದುಕು ಶೋಚನೀಯ ಸ್ಥಿತಿಯಲ್ಲಿದ್ದಿತು. ಇವರು ಆಹಾರ, ಮನೆ, ಬಟ್ಟೆಗಳಿಂದಲೂ ಸಂಪೂರ್ಣವಾಗಿ ವಂಚಿತರಾಗಿ ಶೋಚನೀಯ ಬದುಕನ್ನು ಕಳೆಯುತ್ತಿದ್ದರು. ಇಷ್ಟೆಲ್ಲ ಇದ್ದರೂ ಅಂದು ಮಹಿಳೆಯರ ಸ್ಥಾನದ ಬಗ್ಗೆ ಪ್ರಸಿದ್ಧ ವಿದೇಶೀ ಕ್ರೈಸ್ತ ಪಾದ್ರಿ ಹಾಗೂ ಪ್ರವಾಸಿ ಲೇಖಕ ಅಬೆ ದೂಬಾಯಿರವರು ಈ ರೀತಿಯ ವರ್ಣನೆ ನೀಡುತ್ತಾರೆ. “ಯಾರೂ ಏನೇ ಹೇಳಿದರೂ ಹಿಂದೂ ಸ್ತ್ರೀಯರು ಸಾಧ್ವಿಗಳು, ನಾಗರಿಕ ದೇಶಗಳೆಂದು ಹೇಳಿಕೊಳ್ಳುವ ಬೇರೆ ಹಲವಾರು ದೇಶಗಳ ಸ್ತ್ರೀಯರಿಗಿಂತ ಹಿಂದೂ ಸ್ತ್ರೀಯರೇ ಸಾಧ್ವಿಗಳೆಂದು ನಾನು ಹೇಳಬಲ್ಲೆ. ಜನ ಕಿಕ್ಕಿರಿದು ತುಂಬಿದ ಕಡೆಗಳಲ್ಲಿ ಹಿಂದೂ ರಮಣಿ ಒಬ್ಬಳೇ ಸಂಚರಿಸಬಲ್ಲಳು. ಬೀದಿ ಕಾಮಣ್ಣರ ದೃಷ್ಟಿ ದೀಕ್ಷೆಪಗಳಿಗಾಗಿ ಅಪಹಾಸ್ಯದ ಮಾತುಗಳಿಗಾಗಲಿ ಅವಳು ಬೆದರುವಂತಿರಲಿಲ್ಲ. ಕಲೀನೆಯೊಬ್ಬಳನ್ನು ಬೆರಳ ತುಸಿಯಿಂದ ಸ್ಪರ್ಶಿಸುವುದೂ ಅಸಭ್ಯತೆಯೆಂದು ಪರಿಗಣಿತವಾಗಿದ್ದಿತ್ತು. ಗಂಡನೊಬ್ಬನು ಪರಿಚಿತ ಸ್ತ್ರೀಯನ್ನು ದಾರಿಯಲ್ಲಿ ಕಂಡಾಗ ಅವಳನ್ನು ನಿಲ್ಲಿಸಿ ಮಾತನಾಡಿಸುವ ಧೈರ್ಯ ಅವನಿಗಿರಲಿಲ್ಲ” ಎಂಬ ಸುದೀರ್ಘವಾದ ಹೇಳಿಕೆ ನೀಡಬಯಸುತ್ತಾನೆ. ಆದರೆ ಈ ಹೇಳಿಕೆಯು ಕೆಲವೇ ಕೆಲವು ಉನ್ನತ ವರ್ಗದ ಸ್ತ್ರೀಯರ ಜೀವನಕ್ಕೆ ಮಾತ್ರ ಅನ್ವಯಿಸುವುದಾಗಿತ್ತು. ಸಾಮಾನ್ಯ ಸ್ತೀಯರು ಕಷ್ಟಕರವಾದ ಜೀವನದಲ್ಲಿದ್ದದ್ದು ಅನೇಕ ಆಧಾರಗಳಿಂದ ಗೋಚರವಾಗುತ್ತದೆ. ಏಕ ಪತ್ನಿತ್ವವು ಅಸ್ಥಿತ್ವದಲ್ಲಿದ್ದರೂ ಅರಸು ಮನೆತನದವರು, ಶ್ರೀಮಂತರುಗಳು ಬಹು ಪತ್ನಿತ್ವವನ್ನು ಹೆಚ್ಚಾಗಿ ಹೊಂದಿದ್ದರು. ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದ್ದ ಸಹಗಮನವೆಂಬ ಅನಿಷ್ಟ ಪದ್ಧತಿಯು ಸಂಸ್ಥಾನದಲ್ಲಿಯೂ ಜೀವಂತವಾಗಿದ್ದಿತ್ತು. ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನದಲ್ಲಿ ರಚಿತವಾದ ‘ಹದಿಬದೆಯ ಧರ್ಮ’ಗೂ ಸಚ್ಛೂದ್ರಾಚಾರ ನಿರ್ಣಯ’ಗಳ ಗ್ರಂಥದಲ್ಲಿ ವ್ಯಕ್ತಪಡಿಸಲಾಗಿರುವ ಸಂಪ್ರದಾಯಗಳನ್ನು ಗಮನಿಸುವುದಾದರೆ ಅಂದು ಸಹಗಮನಕ್ಕೆ ಸಾರ್ವಜನಿಕವಾಗಿ ಒಪ್ಪಿಗೆ ಇರಲಿಲ್ಲವೆಂದನ್ನಬಹುದು, ತದನಂತರದಲ್ಲಿ ಸಂಸ್ಥಾನದಾದ್ಯಂತ ಬಲವಂತವಾಗಿ ಬೇರೂರಲಾರಂಭಿಸಿದ ವೈಷ್ಣವ ಮತದ ಪ್ರಾಬಲ್ಯದಿಂದಾಗಿ ಮೈಸೂರು ಸಂಸ್ಥಾನದಲ್ಲಿ ಸತಿ ಸಹಗಮನದ ಅನಿಷ್ಟ ಪದ್ಧತಿಯು ನಿಂತು ಹೋಗಲು ಕಾರಣವಾಯಿತ್ತೆನ್ನುವುದು ಇತಿಹಾಸಗಾರರೊಬ್ಬರ ಅಭಿಪ್ರಾಯವಾಗಿದೆ. ಆಧುನಿಕ ಮೈಸೂರಿನಲ್ಲಿ ಇದು ಎಲ್ಲೂ ಸುಳಿಯುವುದಿಲ್ಲ. ಇದರ ಮರೆಯ ನೆರಳಿನಲ್ಲಿಯೇ ಬೇರೊಂದು ಬಗೆಯ ದುಷ್ಟ ಸಂಪ್ರದಾಯ ಸಂಸ್ಥಾನದುದ್ದಕ್ಕೂ ಬಳಕೆಯಲ್ಲಿದ್ದಿತ್ತು. ಅದೆಂದರೆ ವಿಧವೆಯರ ಶೋಷಣೆ. ಬುಕನೆನ್ ಮತ್ತು ಅಬೆ ದುಬಾಯಿಯವರು ಅಂದು ಬ್ರಾಹಣ ವರ್ಗದಲ್ಲಿದ್ದ ವಿಧವೆಯರು ಅದರಲ್ಲಿಯೂ ವಿಶೇಷವಾಗಿ ಬಾಲ ವಿಧವೆಯರ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಿರುವುದು ಕಂಡುಬರುತ್ತದೆ. ಇವರ ಸ್ಥಾನವು ಸಮಾಜದಲ್ಲಿ ಗೌರವಪೂರ್ಣವಾಗಿರಲಿಲ್ಲ. ಇವರು ಸಹಗಮನಕ್ಕೆ ಬದಲಾಗಿ ಅದಕ್ಕಿಂತಲೂ ಕಠಿಣವಾದ ನಿರ್ಬಂಧನೆಗಳನ್ನು, ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಜೀವನ ಪೂರ್ತಿ ಜೀವಂತ ಶವವಾಗಿ ಬದುಕಬೇಕಾಗುವ ಸಂಪ್ರದಾಯ ಪಾಲಿಸಬೇಕಾಗಿದ್ದಿತ್ತು. ಪ್ರಮುಖವಾಗಿದ್ದ ಸಂಪ್ರದಾಯಗಳೆಂದರೆ ತಿಂಗಳಿಗೊಮ್ಮೆ ಕೇಶ ಮುಂಡನ ಮಾಡಿಸಿಕೊಳ್ಳಬೇಕಿತ್ತು. ತಾಂಬುಲ ಸೇವನೆ ಮಾಡಲು ಅವರಿಗೆ ಅಧಿಕಾರವಿರಲಿಲ್ಲ. ಬಿಳಿಸೀರೆಯನ್ನುಡದೆ ಬಣ್ಣದ ಸೀರೆಯನ್ನುಡಬಾರದಾಗಿತ್ತು. ಅವರು ಮುಖಕ್ಕೆ ಹರಿಶಿಣ. ಕುಂಕುಮ ಹಾಕಿಕೊಳ್ಳಕೂಡದಾಗಿದ್ದಿತ್ತು. ಸಂತೋಷದ ಸಮಾರಂಭಗಳಲ್ಲಿ ಇವರು ಭಾಗವಹಿಸಕೂಡದಾಗಿತ್ತು. ಸ್ವಂತ ಮನೆಯಲ್ಲಿ ನಡೆಯುವ ಹಬ್ಬ ಹರಿದಿನಗಳಲ್ಲಿ ಅವರಿಗೆ ಯಾವುದೇ ಸ್ಥಾನಮಾನವಿರಲಿಲ್ಲ. ಅವರ ಆಗಮನವೂ, ದರ್ಶನವೂ ಅಪಶಕುನವೆಂಬ ಕಲ್ಪನೆಯು ಅಂದು ಯಥೇಚ್ಛವಾಗಿ ಮನೆಮಾಡಿಕೊಂಡಿದ್ದಿತ್ತು. ಬ್ರಾಹ್ಮಣರು ಹಾಗೂ ವೈಶ್ಯರಲ್ಲಿ ವಿಧವೆಯರ ಪುನರ್ವಿವಾಹವು ಸಂಪೂರ್ಣವಾಗಿ ನಿಷೇದವಾಗಿದ್ದಿತ್ತು. ಆದರೆ ಮಿಕ್ಕ ವರ್ಗ ಹಾಗೂ ಕೆಳವರ್ಗದವರಲ್ಲಿ ಪುನರ್ವಿವಾಹ ಜಾರಿಯಲ್ಲಿದ್ದಿತ್ತು. ಇದನ್ನು ಅವರು ದಾಂಪತ್ಯ “ಕೂಡಿಕೆ” ಎಂಬ ಹೆಸರಿನಿಂದ ಕರೆಯುತ್ತಿದ್ದರೆನ್ನಬಹುದು. ಈ ಪದವು ಈ ಭಾಗದಲ್ಲಿ ಈಗಲೂ ಹೆಚ್ಚಾಗಿ ಬಳಕೆಯಲ್ಲಿರುವುದು ಕಂಡು ಬರುತ್ತದೆ.

## ೪. ಸಾಮಾಜಿಕ ಪದ್ಧತಿ (೨)

**ವೈಶ್ಯೆಯರ ಬದುಕು**

ಮೈಸೂರು ಸಂಸ್ಥಾನದಲ್ಲಿ ಪ್ರಾರಂಭದಿಂದಲೂ ಯಾವುದೇ ರೀತಿಯ ತಿರಸ್ಕಾರವಿಲ್ಲದೆ ವೇಶ್ಯೆಯರ ಉತ್ತಮ ಜೀವನ ನಡೆಸುತ್ತಿದ್ದರೆಂದು ಅನೇಕ ಆಧಾರಗಳಿಂದ ತಿಳಿಯಬಹುದಾಗಿದೆ. ಗೋವಿಂದ ವೈದ್ಯ, ಮಲ್ಲಿಕಾರ್ಜುನ, ತಿರುಮಲಾಯರವರಲ್ಲದೆ ಇನ್ನೂ ಮೊದಲಾದವರ ಕೃತಿಗಳಲ್ಲಿ ವೇಶ್ಯೆಯರು ಸಮಾಜದಲ್ಲಿ ಉತ್ತಮ ಸ್ಥಾನ ಪಡೆದು ಜೀವಿಸುತ್ತಿದ್ದ ಬ್ರಾಹ್ಮಣ, ಕ್ಷತ್ರಿಯರ ಸ್ಥಾನದಲ್ಲಿ ನಿಲ್ಲುತ್ತಿದ್ದರೆಂದು ತಿಳಿಸಿದ್ದಾರೆ. ಅವರೂ ಸಮಾಜದ ಪ್ರಮುಖ ಭಾಗವೆಂದೇ ಅಂದಿನ ಕಲ್ಪನೆಯಾಗಿದ್ದಿತ್ತು. ಅವರಿಗೆ ತನ್ನದೆ ಆದ ಹಕ್ಕುಗಳನ್ನು ಹೊಂದಿರುವುದ ಜೊತೆಗೆ ಎಲ್ಲವನ್ನೂ ಮುಕ್ತವಾಗಿ ನಡೆಸಿಕೊಂಡು ಬರುವ ಸ್ವಾತಂತ್ರ್ಯ ಪಡೆದಿದ್ದವರಾಗಿದ್ದರು. ಅಂದಿನ ಕಾಲದ ಸಾಹಿತ್ಯದಲ್ಲಿ ಹೆಚ್ಚಾಗಿ ಶ್ರೀರಂಗಪಟ್ಟಣ. ಮೂಗೂರು, ತಿರುಮಕೂಡಲು ನರಸೀಪುರದ ವೇಶ್ಯಾವಾಟಿಕೆಗಳಲ್ಲಿನ ವಿವರಣೆ ಅಪಾರವಾಗಿ ದೊರೆಯುತ್ತವೆ. ವೇಶ್ಯೆಯರಲ್ಲಿಯೂ ಅಂದು ಉತ್ತಮ ವರ್ಗದ ವೇಶ್ಯೆ ಹಾಗೂ ಸಾಮಾನ್ಯ ವೇಶ್ಯೆ (ಸೂಳೆ) ಎಂದು ವಿಭಾಗಗಳಿದ್ದವು.

ವೇಶ್ಯೆಯರು ವಿದ್ಯಾವಂತರಾಗಿದ್ದುದರ ಜೊತೆಗೆ ಸಂಗೀತಾಭ್ಯಾಸ, ನೃತ್ಯಗಳಿಗೆ ಹೆಚ್ಚಿನ ಗಮನ ನೀಡಿ ಇದರ ಜೊತೆಗೆ ತಮ್ಮ ದೇಹ ಸೌಂದರ್ಯದ ಕಡೆ ಹೆಚ್ಚಿನ ಗಮನ ಹರಿಸುತ್ತಿದ್ದವರಾಗಿದ್ದರು. ರಾಜಧಾನಿಯಲ್ಲಿ ವೇಶ್ಯೆಯರು ವಿಲಾಸ ಜೀವನ ನಡೆಸುತ್ತಿದ್ದರು. ಹಲವಾರು ಸುರಸುಂದರಿಯರನ್ನು ಅಸ್ಥಾನದ ಪ್ರತಿಷ್ಠಿತರು, ಶ್ರೀಮಂತರುಗಳೂ ಅವರ ಸಹವಾಸಕ್ಕೆ ಹಾತೊರೆಯುತ್ತಿದ್ದರು ಎಂದು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ' ಹಾಗೂ ತಿರುಮಲಾಚಾರ್ಯನ 'ಚಿಕ್ಕದೇವರಾಜ ವಿಜಯ' ಕೃತಿಗಳು ಮನಮೋಹಕವಾಗಿ ವರ್ಣಿಸಿರುವುದು ಕಂಡುಬರುತ್ತದೆ. ದಿನನಿತ್ಯದ ರಾಜಸಭೆಗಳಲ್ಲಿ ವೇಶ್ಯೆಯರು ಸದಾ ಉಪಸ್ಥಿತರಾಗಬೇಕಾಗಿದ್ದಿತ್ತು. ವಿಶೇಷ ನವರಾತ್ರಿ ಸಮಾರಂಭಗಳಲ್ಲಿ ವೇಶ್ಯೆಯರು ರಾಜರ ಅಸ್ಥಾನ ಹಾಗೂ ರಾಜನ ಸನ್ನಿಧಾನಗಳಲ್ಲಿ ಗಾನ ನೃತ್ಯಗಳಿಂದ ರಂಜಿಸಬೇಕಾಗಿದ್ದಿತ್ತು. ಅರಮನೆಯಲ್ಲಿನ ವೇಶ್ಯೆಯರು ಅರಮನೆಯ ಗೂಢಾಚಾರರಾಗಿ, ಸಂಜೆಯ ಗೆಳತಿಯರಾಗಿ, ಅರಸನ ಅಂಗ ಮರ್ದನ ಕಾರ್ಯ ಮಾಡುವವರಾಗಿ, ಅರಸನಿಗೆ ಗಂಧಜಲ, ಅವರ ವೇಷ ಭೂಷಣಗಳನ್ನು ಸಜ್ಜುಗೊಳಿಸುವುದು ಮೊದಲಾದ ಕರ್ತವ್ಯಗಳನ್ನು ಚಾಚೂತಪ್ಪದೆ ಮಾಡಬೇಕಾಗಿತ್ತು. ಹದಿಬದೆಯ ಧರ್ಮ ಎಂಬ ಮಹತ್ವದ ಕೃತಿ ಬರೆದ ಸಂಚಿಯ ಹೊನ್ನಮ್ಮನು ಶೂದ್ರ ಜಾತಿಯ ಮನೆ ಕೆಲಸದವಳಾಗಿದ್ದರೂ ಸಹ ಸ್ವಪ್ರತಿಭೆಯಿಂದಲೇ ಮೇಲೇರಿ ಚಿಕ್ಕದೇವರಾಜ ಒಡೆಯರ ಅಸ್ಥಾನದಲ್ಲಿ ಅಗ್ರಮಾನ್ಯತೆ ಪಡೆದ ಕವಯತ್ರಿಯಾಗಿದ್ದಳು. ಇವಳೂ ಸಹ ಹೆಣ್ಣು ಮಕ್ಕಳನ್ನು ದೇವರ ಸೇವೆಗೆಂದು ಬಿಡುವ ಸಂಪ್ರದಾಯವಿತ್ತೆಂದು ಹೇಳುವುದಿಲ್ಲ. ವಿದೇಶಿಯರಾದ ಸಿನ್ನಮಿ, ಬುಕನನ್, ಅಬೆ ದುಬಾಯಿರ ಬರೆಹಗಳಲ್ಲಿಯೂ ಸಹ ದೇವದಾಸಿಯರ ಉಲ್ಲೇಖ ಕಂಡುಬರುವುದಿಲ್ಲ.

**ಅರಸರ ವೇಷಭೂಷಣಗಳು :** ಮೈಸೂರು ಅರಸರ ವೇಷಭೂಷಣಗಳನ್ನು ತಿಳಿಯಲು ನಾವು ಸಾಹಿತ್ಯ ಹಾಗೂ ಶಿಲ್ಪಿಗಳ ಮೊರೆಹೊಕ್ಕಲೇ ಬೇಕಾಗುತ್ತದೆ. 'ಚಿಕ್ಕದೇವರಾಜ ವಿಜಯ'ವು ಈ ಹಂತದಲ್ಲಿ ಮಹತ್ವದ ಸಾಹಿತ್ಯ ಕೃತಿಯಾಗಿತ್ತೆನ್ನಬಹುದು.

ಅರಸರು ದರ್ಬಾರು ನಡೆಯುತ್ತಿದ್ದ ಕಾಲದಲ್ಲಿ ಹಾಗೂ ದಸರಾ ಮಹೋತ್ಸವ, ಸಭೆ, ಸಮಾರಂಭಗಳಲ್ಲಿ ವೈಭವಪೂರಿತವಾದ ವೇಷಭೂಷಿತರಾಗಿ ಕಂಗೊಳಿಸುತ್ತಿದ್ದರು. ಅರಸರ ವಿಶೇಷ ಶೈಲಿಯ ವೇಷ ಹಾಗೂ ಅವರು ಧರಿಸುತ್ತಿದ್ದ ಪೇಟ ಇಂದಿಗೂ ಸಹ 'ಮೈಸೂರು ಪೇಟ' ಎಂದು ಜಗತ್ ಪ್ರಸಿದ್ಧಿ ಪಡೆದಿರುವುದು ಕಂಡುಬರುತ್ತದೆ. ಮೈಸೂರಿನ ತ್ರಿಣಯನೇಶ್ವರ ದೇವಾಲಯದಲ್ಲಿ ಕಂಠೀರವ ನರಸರಾಜರದೆನ್ನಲಾಗಿರುವ ಭಕ್ತಿಪೂರ್ವಕ ಭಂಗಿಯ ವಿಗ್ರಹವೊಂದು ಅವರ ವೇಷಭೂಷಣಕ್ಕೆ ಹಿಡಿದ ಕನ್ನಡಿಯಾಗಿದೆ. 'ಬೆಲೆಬಾಳುವ ಮುಕ್ತಾಭರಣ ಖಚಿತವಾದ ವೇಷಭೂಷಣಗಳನ್ನು ಧರಿಸಿ ಅಲಂಕೃತ ಕವಚವನ್ನು ಜರಿತಾರಿ ಕಸೂತಿಯ ಮುಂಡಾಸು (ರುಮಾಲು) ತೊಟ್ಟು, ಕಾಳಿಗೆ ವಜ್ರ ಖಚಿತವಾದ ಹೊನ್ನ ಹಾವುಗೆಗಳನ್ನು ಧರಿಸುತ್ತಿದ್ದರು. ವಿಶೇಷ ಸಮಾರಂಭಗಳಲ್ಲಿ ಪಟ್ಟಾಂಬರವುಟ್ಟು ತಲೆಗೆ ಬಣ್ಣ ಬಣ್ಣದ ಮುಂಡಾಸಿಟ್ಟು, ಹಣೆಗೆ ಕಸ್ತೂರಿ ತಿಲಕವಿಟ್ಟುಕೊಳ್ಳುತ್ತಿದ್ದರು". ಎಂದು ಸಮಕಾಲೀನ ಆಧಾರವನ್ನು ಆಧರಿಸಿ ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವ ಭಟ್ಟರು ತಿಳಿಯಪಡಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ ವೇಷಭೂಷಣವನ್ನು ನೋಡಿರುವ ಹಿರಿಯ ನಾಗರಿಕರು ಇಂದಿಗೂ ಇದ್ದು. ಅವರು ಅವರ ದರ್ಬಾರ್ ನಡೆಯುವಾಗಿನ ವೇಷಭೂಷಣವನ್ನು ವಿವರಿಸಿದ್ದಾರೆ. ಏಕೆಂದರೆ ಇದೇ ಸಂಸ್ಕೃತಿಯು

ಭಾರತಕ್ಕೆ ಸ್ವಾತಂತ್ರ ದೊರಕುವವರೆಗೂ ಮುಂದುವರೆದುಕೊಂಡು ಬಂದು ಒಂದಲ್ಲ ಒಂದು ದೃಷ್ಟಿಯಲ್ಲಿ ಇಂದಿಗೂ ಜೀವಂತವಾಗಿ ಉಳಿದೆನ್ನಬಹುದು.

ಚಿಕ್ಕ ದೇವರಾಜ ಒಡೆಯರ ವೇಷಭೂಷಣವನ್ನು 'ಚಿಕ್ಕದೇವರಾಜ ವಿಜಯ'ದಲ್ಲಿ ವರ್ಣಿಸಿರುವುದು ಕಂಡುಬರುತ್ತದೆ. ರಾಜರ ಥಳಥಳಿಸುವ ಬಿಳಿಯ ಪಟ್ಟಾಂಬರವುಟ್ಟು ರಾಜರ ದರ್ಬಾರಿಗೆ ಬರುತ್ತಿದ್ದರೆಂದು ಹಾಗೂ ರಾಜರು ಬರುವಾಗ ಅವರ ಆಗಮನವನ್ನು ಘೋಷಿಸುವ ವಂದಿ ಮಾಗಧರು ಧರಿಸುತ್ತಿದ್ದ ಬಟ್ಟೆಗಳ ವರ್ಣನೆಯೂ ಇಲ್ಲಿ ಸಿಗುತ್ತದೆ. ಶ್ರೀಮಂತರು ಪ್ರತಿಷ್ಠಿತವಾದ ರೇಷ್ಮೆ ಬಟ್ಟೆಗಳನ್ನು ಧರಿಸುತ್ತಿದ್ದರು. ದಳವಾಯಿ, ಮಂತ್ರಿಗಳು ಹಾಗೂ ಗಣ್ಯವ್ಯಕ್ತಿಗಳು ಜರತಾರಿ 'ಮುಂಡಾಸು'ಗಳನ್ನು ಧರಿಸುತ್ತಿದ್ದರೆಂದೂ ಈ ಕಾವ್ಯವು ತಿಳಿಸುತ್ತದೆ. ವೈದಿಕ ಬ್ರಾಹ್ಮಣರು ನಿರಾಡಂಬರವಾದ ದೋತರ ಹಾಗೂ ಉತ್ತರೀಯ (ಉತ್ತರಿಗೆ)ಯನ್ನು ಧರಿಸಿದರೆ ವೇಶ್ಯೆಯರು ವಿವಿಧ ಬಗೆಯ ಸಾಂಪ್ರದಾಯಿಕ ವೇಷಭೂಷಣಗಳ ಜೊತೆಗೆ ಮಿನುಗುತ್ತಿದ್ದರೆನ್ನಬಹುದು.

ಅಂದಿನ ಕಾಲದ ಹೆಣ್ಣು ಮಕ್ಕಳು ಧರಿಸುತ್ತಿದ್ದ ವೇಷಭೂಷಣವನ್ನು ಕವಿ ಗೋವಿಂದ ವೈದ್ಯರು ತನ್ನ ಕಂಠೀರವ ನರಸಿಂಹ ವಿಜಯ ಕೃತಿಯಲ್ಲಿ ವರ್ಣಿಸಿದ್ದಾರೆ. ಅವನು ಅಂದು ಸೀರೆ ರವಿಕೆಗಳ ವರ್ಣನೆಯಲ್ಲಿ ತಲ್ಲೀನರಾಗಿ ಸೆಲ್ಲಿಯ ಸೀರೆ, ಕಂಚಿಯ ಸೀರೆ, ಚಂದಗಲದ ಸೀರೆ ಅಂದರೆ ಸೇಲಂ, ಕಂಚಿ ಮತ್ತು ಚಂದಗಲ ಎಂಬ ಕಡೆ ಸಿದ್ಧವಾದ ಸೀರೆಗಳ ಬಳಕೆಯ ವರ್ಣನೆಯನ್ನು ಸಂಕ್ಷಿಪ್ತವಾಗಿ ವರ್ಣಿಸಿರುವುದು ಕಂಡುಬರುತ್ತದೆ. ಇದರ ಜೊತೆಗೆ ಕವಿಯು ಸಾಮಾನ್ಯ ಜನರ ಬಟ್ಟೆಯ ಬಗ್ಗೆ ತಿಳಿಸಲು ಸಹ ಪ್ರಯತ್ನಿಸಿ ಹತ್ತಿಯ ಸಾದಾಬಟ್ಟೆ ಎಂಬ ಹೇಳಿ ತೃಪ್ತರಾಗಿದ್ದಾರೆ. ಒಂದು ಹಂತದಲ್ಲಿ ಸಂಸ್ಥಾನದ ದೀನದಲಿತರಿಗೆ ಮಾನ ಮುಚ್ಚಿಕೊಳ್ಳಲೂ ಸಹ ಬಟ್ಟೆಯ ತೊಂದರೆ ಇತ್ತೆಂದು ಹೇಳಬಹುದು.

**ರಾಜಾಸ್ಥಾನದ ವೈಭವ :** ವೈಭವದ ವಿಜಯನಗರ ಸಾಮ್ರಾಜ್ಯದ ಪ್ರಖ್ಯಾತ ದೊರೆ ಎನ್ನಿಸಿಕೊಂಡಿರುವ ಕೃಷ್ಣದೇವರಾಯನ ಅಸ್ಥಾನದ ವೈಭವ ಹಾಗೂ ಅಲ್ಲಿ ತುಂಬಿ ತುಳುಕುತಿದ್ದ ವೈಭವೀಕೃತ ಜೀವನವನ್ನು ಪಾಯಸ್, ನ್ಯೂನಿಸ್‌ರ ವಿದೇಶಿ ಬರವಣಿಗೆಗಾರರು ಹಾಗೂ ಸ್ವದೇಶಿ ಬರವಣಿಗೆಗಾರರು ವರ್ಣಿಸಿ ಮನಸಾರೆ ವಿಜಯನಗರದ ಸಾಂಸ್ಕೃತಿಕ ಪರಂಪರೆಯನ್ನು ಚಾಚೂತಪ್ಪದೆ ಮೈಗೂಡಿಸಿಕೊಂಡ ಮೈಸೂರಿನ ರಾಜರು ವಿಜಯನಗರದ ಅರಸರಂತೆ ಕಲಾ ಸಂಸ್ಕೃತಿಗಳ ಉದಾರ ಪೋಷಕರಾಗಿ ಇಂದಿಗೂ ಇತಿಹಾಸ ಪ್ರಸಿದ್ಧರಾಗಿದ್ದಾರೆ. ಮೈಸೂರಿನ ಒಡೆಯರ್ ರವರು 'ಕರ್ನಾಟಕ ರತ್ನ ಸಿಂಹಾಸನಾಧೀಶ್ವರ'ರೆಂದೇ ಪ್ರಸಿದ್ಧರಾಗಿದ್ದಾರೆ. ಇವುಗಳ ಜೊತೆಗೆ ಕನಾಟಕ ಭೂಮಂಡಲೇಶ್ವರ 'ದಕ್ಷಿಣ ದ್ವಿಚಕ್ರವರ್ತಿ 'ಶೃಂಗಾರ ಕರ್ನಾಟಕ ಚಕ್ರಿ', ಕನಾರ್ಟಕ ಚಕ್ರೇಶ್ವರ' ಇತ್ಯಾದಿ ಬಿರುದುಗಳಿಂದ ಅಂಕಿತರಾಗಿ ವಿಜಯನಗರದ ರಾಜಕೀಯ ಮತ್ತು ಸಾಂಸ್ಕೃತಿಕ ಪರಂಪರೆಯ ಉತ್ತರಾಧಿಕಾರಿಗಳೆಂಬುದನ್ನು ನಾಡಿಗೆ ತೋರಿಸಿಕೊಟ್ಟಿದ್ದರೆನ್ನಬಹುದು. ಇದರ ವರ್ಣನೆ ಹಾಗೂ ವೈಭವವನ್ನು ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ವು ಎಳೆಎಳೆಯಾಗಿ ಹೊರಚಲ್ಲುತ್ತದೆ.

**ಸಂಗೀತ ಮತ್ತು ನಾಟ್ಯ:** ಮೈಸೂರು ಸಂಸ್ಥಾನವು ಸಂಗೀತ ಮತ್ತು ನಾಟ್ಯ ಕಲೆಗಳ ತವರೂರಾಗಿತ್ತೆಂದು ಹೇಳಬಹುದು. ಸಂಸ್ಥಾನದಲ್ಲಿ ಮಹಾನ್ ಸಂಗೀತ ವಿದ್ವಾಂಸರು, ನೃತ್ಯಕಲಾವಿದರು, ಕಲಾವಿದೆಯರು ಹೆಚ್ಚಿನ ಸಂಖ್ಯೆಯಲ್ಲಿ ಅಲಂಕರಿಸಿದ್ದರೆನ್ನಬಹುದು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ತಾತಾಚಾರ್ಯ ಹಾಗೂ ಇವರ ವಂಶದವನಾದ ವೆಂಕಟ ವರದಾಚಾರ್ಯನು ಪ್ರಮುಖರಾದರೆ, ವೆಂಕಟ ವರದಾಚಾರ್ಯರು ಅಂದು ರಾಜಗುರುಗಳಾಗಿಯೂ, ನ್ಯಾಯ ಶಾಸ್ತ್ರಜ್ಞನಾಗಿಯೂ ಪ್ರಸಿದ್ದಿಪಡೆದಿದ್ದದ್ದು ಸಮಕಾಲಿನ ದಾಖಲೆಗಳಿಂದ ತಿಳಿದುಬರುತ್ತದೆ. ಅಂದು ಸಂಗೀತ, ಗಾನ, ವಾದ್ಯ, ನೃತ್ಯಗಳೇ ಅರಸರ ಅಸ್ಥಾನದ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಮಹತ್ವವೆನ್ನಿಸಿಕೊಂಡಿದ್ದವು. ಅಂದಿನ 'ಪಾಡುವ ಗಾಯಕರು' ಎಂದು ಕರೆಸಿಕೊಳ್ಳುತ್ತಿದ್ದಂತವರು ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದವರಾಗಿದ್ದರೆನ್ನಬಹುದು. ವೀಣಾವಾದನವು ಅಂದು ಬಹು ಶ್ರೀಮಂತವಾದ ಹಾಗೂ ಜನಪ್ರಿಯವಾದದ್ದು ಆಗಿತ್ತು. ರಾಜಸಭೆಗಳಲ್ಲಿ ಸಂತೋಷ ಕೂಟಗಳಲ್ಲಿ ಸಂಗೀತದೊಡನೆ ವೇಶ್ಯೆಯರ ಚಿತ್ತಾಕರ್ಷಕ ನೃತ್ಯವೂ ನಡೆಯುತ್ತಿದ್ದಿತ್ತು.

**ಆಭರಣ ಮತ್ತು ಆಹಾರ :** ಸಂಸ್ಥಾನದ ಜನರು ಧರಿಸುತ್ತಿದ್ದ ಆಭರಣಗಳನ್ನು ತಿಳಿಯಲು ಮತ್ತೆ ನಾವು ಲಿಖಿತ ಸಾಹಿತ್ಯ, ಜನಪದ ಸಾಹಿತ್ಯ ಹಾಗೂ ಶಿಲ್ಪಕಲೆಗೆ ಸಂಪೂರ್ಣವಾಗಿ ಮೊರೆ ಹೋಗಬೇಕಾಗುತ್ತದೆ. ಅಂದೂ ಇಂದಿನಂತೆ ಸ್ತ್ರೀ ಪುರುಷರಿಬ್ಬರೂ ಆಭರಣ ಪ್ರಿಯರಾಗಿದ್ದರೆನ್ನಬಹುದು. ಏಕೆಂದರೆ ಇಬ್ಬರೂ ಕೊರಳಿಗೆ ಚಿನ್ನದಾರವನ್ನು ಧರಿಸಿರುವುದು ಅನೇಕ ಶಿಲ್ಪಿಗಳಿಂದ ತಿಳಿದುಬರುತ್ತದೆ. ವಿದೇಶಿ ಪ್ರವಾಸಿಗನಾದ ಅಬೆ ದುಬಾಯಿಯವರ 'ದಿ ಹಿಂದೂ ಮ್ಯಾನರ್ಸ್ ಅಂಡ್ ಕಸ್ಟಮಸ್' ಎಂಬ ಮಹತ್ವದ ಪುಸ್ತಕದಲ್ಲಿ ವರ್ಣಿಸಿರುವ ಹಾಗೆ ಪುರಷರ ಹಾರಕ್ಕೆ 'ಕಂಠೀಸರ' 'ಗೋಪು' ಎಂದು ಕರೆದರೆ, ಸ್ತ್ರೀಯರ ಹಾರಕ್ಕೆ ಸರಿಗೆ ಟೀಕು' ಎಂದು ಹೆಸರಿತ್ತೆಂದು, ನಂತರ ಮೂಗುತಿ, ಚೌಕುಳಿ, ಓಲೆ, ಬಳೆ, ಕಡಗ, ಕಂಕಣ, ಕಾಲಂದುಗೆ, ಜಡೆ ಬಂಗಾರ, ಸರಸಾತಿ, ಸರ, ಹಾರ, ಪದಕಗಳು ಹೆಣ್ಣು ಮಕ್ಕಳ ಚೆಲುವನ್ನು ಹೆಚ್ಚಿಸುತ್ತಿದ್ದವು. ಹಬ್ಬ ಹರಿದಿನಗಳಲ್ಲಿ ವಿಶೇಷ ಸಮಾರಂಭಗಳಲ್ಲೂ ಸ್ತ್ರೀಯರು 'ಮಿಸುಪ ಸಂಪಗೆಗಾವಿ, ಸಂದ್ಯವಳಿ' ಮೊದಲಾದ ಬಣ್ಣ ಬಣ್ಣದ ದಿವ್ಯ ಆಭರಣಗಳನ್ನು ಧರಿಸುತ್ತಿದ್ದರೆಂದು ತಿಳಿಸಿದ್ದಾನೆ. ಹೆಣ್ಣು ಮಕ್ಕಳು ಕಾಲಿಗೆ ಬೆಳ್ಳಿಯ ಚೈನು ಹಾಗೂ ಕಡಗಗಳನ್ನು ಧರಿಸುತ್ತಿದ್ದರು ಎಂದು ಸುಂದರವಾದ ವರ್ಣನೆಯನ್ನು ನೀಡಿದ್ದಾನೆ.

ಸಂಸ್ಥಾನದ ಜನರ ಆಹಾರ ಪದ್ಧತಿಯು ಪರಿಸರ, ಸನ್ನಿವೇಶ, ಆಚಾರ, ರೂಢಿಗಳಿಗೆ ಅನುಸಾರವಾಗಿತ್ತೆನ್ನಬಹುದು. ಅಂದು ಅಕ್ಕಿ, ರಾಗಿ, ಜೋಳ, ದ್ವಿದಳ ಧಾನ್ಯದ ಆಹಾರ ವಸ್ತುಗಳನ್ನು ಹೆಚ್ಚಾಗಿ ಸಂಸ್ಥಾನದಲ್ಲಿ ಬೆಳೆಯಲಾಗುತ್ತಿದ್ದಿತ್ತು. ಸಂಸ್ಥಾನದ ಜನರ ಮುಖ್ಯ ಆಹಾರವೆಂದರೆ ಅಕ್ಕಿಯಾಗಿದ್ದಿತ್ತು. ಮಾಂಸಹಾರಿ ಜನರುಗಳ ಕೋಳಿ, ಕುರಿ, ಆಡು, ಹಂದಿ, ಹಸು, ಎಮ್ಮೆಗಳನ್ನು ತಿನ್ನುತ್ತಿದ್ದರು. "ಸಾಮಾನ್ಯ ಜನತೆಗೆ ರಾಗಿ ಹಾಗೂ ಜೋಳ ಮುಖ್ಯಹಾರ, ವಸೂರಬಳ್ಳಿ ಮುಂತಾದ ತರಕಾರಿಯೊಂದಿಗೆ ರಾಗಿಯನ್ನು ಬೇಯಿಸಿ ತಿನ್ನುತ್ತಾರೆ, ಧನಿಕರು ಅಕ್ಕಿಯನ್ನು ಗೋಧಿಯ ರೊಟ್ಟಿಯನ್ನು ಉಪಯೋಗಿಸುತ್ತಾರೆ" ಎಂದು ೧೭೫೦ - ೬೩ರಲ್ಲಿ ಮೈಸೂರಿನಲ್ಲಿ ಪ್ರವಾಸ ಮಡಿದ ಫಾದರ್ ಸಿನ್ನಾಮಿ ತಿಳಿಸಿರುವುದು ಕಂಡುಬರುತ್ತದೆ.

ಕಂಠೀರವ ನರಸರಾಜ ವಿಜಯವು ಅರಮನೆಯ ರಾಜಭೋಜನದ ವೈಭವವನ್ನು ರಸವತ್ತಾಗಿ ವರ್ಣಿಸುವ ಕೆಲಸ ಮಾಡುತ್ತದೆ. ಅರಮನೆಯಲ್ಲಿ ಚಿನ್ನದ, ಬೆಳ್ಳಿಯ ಊಟದ ಪ್ಲೇಟುಗಳು ಬಳಕೆಯಲ್ಲಿದ್ದವು. ಬ್ರಾಹಣರು ಬಾಳೆಯ ಎಲೆ ಅಥವಾ ಅವರೇ ತಂದ ಎಲೆಯನ್ನಾಗಲಿ ಉಪಯೋಗಿಸಿ ಊಟ ಮಾಡುತ್ತಿದ್ದರೆಂದು ಈ ಕಾವ್ಯ ತಿಳಿಸುತ್ತದೆ.

**ಮದುವೆ ಸಂಪ್ರದಾಯ ಮತ್ತು ಜನಾಂಗಿಯ ಆಚರಣೆಗಳು**

ಅಂದಿನಿಂದ ಇಂದಿನವರೆವಿಗೂ ಪ್ರತಿಯೊಬ್ಬ ವ್ಯಕ್ತಿಯ ಉನ್ನತಿ, ಅವನತಿ, ಸುಖ, ಸುಃಖ ಮುಂತಾದವುಗಳೆಲ್ಲವೂ ಸಹ ಒಂದು ದೃಷ್ಟಿಯಲ್ಲಿ ವಿವಾಹದ ತಳಹದಿಯ ಮೇಲೆ ಅವಲಂಬಿಸಿರುವುದಾಗಿರುತ್ತದೆ ಎನ್ನಬಹುದು. ಸಂಸ್ಥಾನದಲ್ಲಿದ್ದ ಸಾಮಾಜಿಕ ವರ್ಗದವರೆಲ್ಲರೂ ಕಾಲ, ದೇಶ, ಪರಿಸ್ಥಿತಿಗಳಿಗನುಗುಣವಾಗಿ ಹಳೇ ಹಾಗೂ ಹೊಸ ಸಂಸ್ಕೃತಿಗಳ ಮಿಲನದಿಂದಾಗಿ (ವಿದೇಶಿ ಸಂಸ್ಕೃತಿಯೂ ಸಹ ಪ್ರಭಾವ ಭೀರಲಾರಂಭಿಸಿತು.) ವಿವಾಹ ಪದ್ಧತಿಯಲ್ಲಿ ಅನೇಕ ಬದಲಾವಣೆಯನ್ನು ಕಂಡುಕೊಳ್ಳುತ್ತಾ ಬಂದಿದೆ. ಅದರ ಜೊತೆಗೆ ತನ್ನ ಮೂಲ ಸಂಸ್ಕೃತಿಯನ್ನು ಚಾಚೂತಪ್ಪದೆ ಉಳಿಸಿಕೊಂಡು ಬೆಳೆಸಿಕೊಂಡು ಬರುತ್ತಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪ್ರಾಚೀನ ಕಾಲದಿಂದಲೂ ಮೈಸೂರು ಸಂಸ್ಥಾನದಲ್ಲಿಯೇ ಅಲ್ಲದೆ ಭಾರತೀಯ ಪ್ರಜೆಗಳ ಪ್ರತಿಯೊಬ್ಬರ ಜೀವನದಲ್ಲಿ ಕುಟುಂಬವೇ ಸಮಾಜದ ಮೂಲ ಹಾಗೂ ಮುಖ್ಯ ಘಟಕವಾಗಿ ಬೆಳೆದು ಬಂದಿದೆ. ಈ ಕುಟುಂಬ ಘಟಕಗಳ ಆಧಾರದ ಮೇಲೆಯೇ ಗ್ರಾಮ, ಹಳ್ಳಿ, ಜಿಲ್ಲೆ, ಪ್ರಾಂತ್ಯ, ರಾಷ್ಟ್ರಗಳೆಲ್ಲವೂ ಅವಲಂಬಿತವಾಗಿರುವುದು. ಒಂದು ದೃಷ್ಟಿಯಲ್ಲಿ ಇದನ್ನು ನಿಸರ್ಗ ನಿರ್ಮಿಸಿದ ವ್ಯವಸ್ಥೆಯೆಂದರೆ ತಪ್ಪಾಗದು. ಇಂತಹ ಕುಟುಂಬ ವ್ಯವಸ್ಥೆಗೆ ಮದುವೆಯೇ ಮುಖ್ಯವಾದ ಮಹಾದ್ವಾರ. ಮನುಷ್ಯರು ಕೂಡಿ ಬಾಳುವ ವ್ಯವಸ್ಥೆಯಲ್ಲಿ ಹೊಸಬರೇನೂ ಅಲ್ಲ. ಏಕೆಂದರೆ ಪಶು ಪಕ್ಷಿಗಳಿಲ್ಲಿಯೂ ಈ ಸಹಬಾಳ್ವೆ ಕಂಡುಬರುತ್ತದೆ. ಆದರೆ ಮದುವೆಯೆಂಬುದು ಮನುಷ್ಯನಿಗೆ ಮಾತ್ರ ಮೀಸಲಾಗಿರುವ ವೈಶಿಷ್ಟ್ಯವೆಂದು ಹೇಳಬಹುದು. ಪ್ರತಿಯೊಬ್ಬ ವ್ಯಕ್ತಿಗೂ ಅವರು ಗಂಡಾಗಲಿ ಹೆಣ್ಣಾಗಲಿ ಸಾಮಾನ್ಯವಾಗಿ ಎರಡು ಕುಟುಂಬಗಳಲ್ಲಿ ತಮ್ಮ ಜೀವಿತ ಕಾಲವನ್ನು ಕಳೆಯುತ್ತಾರೆ, ಹುಟ್ಟಿದ ಕುಟುಂಬ ಇದರಲ್ಲಿ ಇಂದಾದರೆ ನಂತರ ಕಟ್ಟಿಕೊಂಡ ಕುಟುಂಬ ಮತ್ತೊಂದೆನ್ನಬಹುದು. ಆದರೆ ಇಲ್ಲಿ. ಹುಟ್ಟಿದ ಕುಟುಂಬದ ಆಯ್ಕೆ ಯಾರಿಗೂ ಸಾಧ್ಯವಿಲ್ಲ. ಆದರೆ ಕಟ್ಟಿಕೊಳ್ಳುವ ಕುಟುಂಬದ ಆಯ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಿರುವ ಸಂಗತಿಯೇ, ಹುಟ್ಟಿನಿಂದ ಮೊದಲ ಕುಟುಂಬ

ನಿರ್ಧಾರಿತವಾದರೆ ಮದುವೆಯಿಂದ ಹೊಸ ಕುಟುಂಬ ಮೂಡಿಬರುತ್ತದೆ. ಹೀಗೆ ಸಮಾಜದ ರಚನೆಯಲ್ಲಿ ಕುಟುಂಬಕ್ಕೆ ಒಂದು ಸ್ಪಷ್ಟವಾದ ಚೌಕಟ್ಟು ಇರುವುದು ಕಂಡುಬರುತ್ತದೆ. ಕುಟುಂಬಕ್ಕೆ ತಳಹದಿಯೇ ವಿವಾಹ, "ಸಾಮಾಜಿಕ ಮನ್ನಣೆ ಮಡೆದ ಗಂಡು - ಹೆಣ್ಣುಗಳ ಸಂಯೋಗವನ್ನು ವಿವಾಹ ಎನ್ನುತ್ತಾರೆ. ವಿವಾಹದ ಮೂಲಕ ಗಂಡು - ಹೆಣ್ಣುಗಳು ಪತಿ - ಪತ್ನಿಯರಾಗಿ ಕುಟುಂಬವನ್ನು ಸ್ಥಾಪಿಸುವವರು" ಈ ಹಂತದಲ್ಲಿ ವಿವಾಹ ಪದ್ಧತಿಯು ಕುಟುಂಬ ವ್ಯವಸ್ಥೆಗೆ ತಳಹದಿಯಾಗುತ್ತದೆ ಎನ್ನಬಹುದಾಗಿದೆ. ಈ ವಿವಾಹ ಪದ್ಧತಿಯಲ್ಲಿ ಧರ್ಮ, ಜಾತಿ, ಜನಾಂಗಗಳಲ್ಲಿ ವಿವಿಧ ರೀತಿಯ ಸಂಸ್ಕೃತಿ, ಸಂಪ್ರದಾಯಗಳನ್ನು ಹೆಚ್ಚಾಗಿ ಕಾಣಬಹುದು. ಅಂದು ಮೈಸೂರು ಸಂಸ್ಥಾನದಲ್ಲಿ ಇದ್ದ ಸಾಮಾಜಿಕ ರಚನೆಯಲ್ಲಿ ವಿವಾಹದ ವಿವಿಧ ಸಂಪ್ರದಾಯಗಳನ್ನು ಚರ್ಚಿಸುವುದಾದರೆ. ವಿವಾಹದ ಮುನ್ನಾ ವಿವಾಹಕ್ಕೆ ಪೂರಕವಾದ ಕೆಲವು ವಿಧಿ ವಿಧಾನಗಳನ್ನು ಆಚರಿಸುತ್ತಿದ್ದುದ್ದನ್ನು ಸ್ಮರಿಸಬಹುದು. ಹೆಚ್ಚು ಕಡಿಮೆ ಇಂದಿಗೂ ಸಹ ಇದೇ ಸಂಪ್ರದಾಯ ಬೆಳೆದು ಬರುತ್ತಿದೆ.

**ನಿಶ್ಚಿತಾರ್ಥ ಅಥವಾ ವಾಗ್ದಾನ :** ವಿವಾಹಕ್ಕೆ ಹುಡುಗ - ಹುಡುಗಿ ಒಪ್ಪಿಕೊಂಡ ಮೇಲೆ, ಎರಡು ಮನೆಯವರಿಗೂ ಸಂಬಂಧ ಬೆಳೆಸಲು ಒಪ್ಪಿಗೆ ದೊರಕಿದ ನಂತರ ನಡೆಯುವ ಕಾರ್ಯಕ್ರಮವೇ ನಿಶ್ಚಿತಾರ್ಥ ಅಥವಾ ವಾಗ್ದಾನ, ವೈದಿಕ ವಿವಾಹದಲ್ಲಿ ವಧೂವರರನ್ನು ಆರಿಸುವಾಗ ಅವರ ವಂಶ, ಯಶಸ್ಸು, ಶಾರೀರಿಕ ಲಕ್ಷಣಗಳು, ವಿದ್ಯೆ, ಐಶ್ವರ್ಯಗಳನ್ನೆಲ್ಲ ಗಮನಿಸುತ್ತಾರೆ. ಮದುವೆ ನಿಶ್ಚಯಕ್ಕೆ ಮುನ್ನ ವಧೂವರರ ಪರೀಕ್ಷೆ ನಡೆಯುತ್ತದೆ. ಏಕೆಂದರೆ ಗಂಡು ಹೆಣ್ಣುಗಳ ನಡುವೆ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಸಾಮರಸ್ಯವಿರಬೇಕೆಂಬುದನ್ನು ನಮ್ಮ ಹಿರಿಯರು ಚೆನ್ನಾಗಿಯೇ ಮನಗಂಡಿದ್ದರೆಂದು 'ಯುಗಯಾತ್ರಿ ಭಾರತ' ಗ್ರಂಥವು ತಿಳಿಸುತ್ತದೆ. ನಂತರ ಗಂಡು ಹೆಣ್ಣುಗಳಿಬ್ಬರ ಹೆಸರು ಹಾಗೂ ಹುಟ್ಟಿದ ದಿನಾಂಕಗಳಿಗೆ ಅನುಗುಣವಾಗಿ ಜಾತಕ ಕೇಳಿ ತಾಳೆಯಾಗುತ್ತದೆಯೇ ಎಂಬುದನ್ನು ನೋಡಲಾಗುತ್ತದೆ. ಇಷ್ಟೆಲ್ಲವೂ ಎರಡು ಕುಟುಂಬದವರಿಗೆ ಸರಿಬಂದರೆ ವಾಗ್ದಾನ ಅಥವಾ ನಿಶ್ಚಿತಾರ್ಥದ ವಿಧಿವಿಧಾನಗಳು ನಡೆಯುತ್ತವೆ. ಇಲ್ಲಿ ನಿಶ್ಚಿತಾರ್ಥದ ಸಂಕೇತವಾಗಿ ಹೊಸ ಬಟ್ಟೆಯಲ್ಲಿ ಅಥವಾ ಹೊಸ ಬಿದುರಿನ ಬುಟ್ಟಿಯಲ್ಲಿ ಫಲತಾಂಬೂಲಗಳನ್ನು ಬದಲಾಯಿಸಿಕೊಂಡು ಕೆಲವು ಒಪ್ಪಂದದ ಮಾತನಾಡಿಸಿಕೊಳ್ಳುತ್ತಾರೆ. ಇನ್ನೂ ಮುಂದಿನ ಹಂತವೇ ಮದುವೆ. ಈ ಮದುವೆಗೆ ಮುನ್ನ ವಧುವಿನ ಕುಟುಂಬದಲ್ಲಿ ಉಂಟಾಗುವ ಆಶೋತ್ತರಗಳನ್ನು ನಮ್ಮ ಕವಿಗಳ ವರ್ಣನಾತ'ಕವಾಗಿ ವಿವರಿಸಿದ್ದಾರೆ.

*ಕನ್ಯಾವರಯತೇ ರೂಪಮ್*
*ಮಾತಾವಿತ್ತಂ ಪಿತಾಶ್ರುತಮ್*
*ಬಾಂಧ ವಾಃ ಕುಲಮಿಚ್ಛಂತಿ*
*ಮೃಷ್ಟಾನ್ನ ಮಿತರೇ ಜನಾಃ* ||

ಇದರರ್ಥ "ವಧುವಿಗೆ ವರನ ರೂಪ ಮೆಚ್ಚು, ತಾಯಿಗೆ ಅವನ ಸೌಕರ್ಯಗಳತ್ತ ದೃಷ್ಟಿ, ತಂದೆ ಬಯಸುವುದು ವಿದ್ಯೆಯನ್ನು, ಬಂಧುಗಳಿಗೆ ಮನೆತನ ಮುಖ್ಯವಾದರೆ ಮಿಕ್ಕವರಿಗೆಲ್ಲ ಅಂದಿನ ಊಟ ಸ್ವಾದಿಷ್ಟ ಮತ್ತು ಸಮೃದ್ಧವಾದರೆ ಸಾಕು" ಎಂದು ಆ ಸಂದರ್ಭದ ನೈಜ ಚಿತ್ರಣವನ್ನು ಸೂಕ್ಷ್ಮವಾಗಿ ವಿವರಿಸುತ್ತಾರೆ. ಇದು ಸತ್ಯವೂ ಕೂಡ.

**ಮದುವೆ :** ಮದುವೆಗೂ ಮುಂಚೆ ಅನೇಕ ದೇವತಾ ಕಾರ್ಯಗಳು, ವಿಧಿವಿಧಾನಗಳೂ ನಡೆದು ಕೊನೆಯಲ್ಲಿ ಮಂಗಳ ಸೂತ್ರ ಬಂಧನಕ್ಕೆ ಬರುತ್ತಾರೆ. ಇದು ಮದುವೆಯಲ್ಲಿ ಗಂಡು - ಹೆಣ್ಣು ಒಂದಾಗಲು ಅಂತಿಮ ಹಂತವೆನ್ನಬಹುದು. ಈ ಹಂತದಲ್ಲಿ ಅವರವರ ಜಾತಿ, ಧರ್ಮ ಸಂಪ್ರದಾಯಗಳಿಗೆ ಒಂದೊಂದು ರೀತಿಯಲ್ಲಿ ಮಂಗಳಸೂತ್ರವನ್ನು ಕಟ್ಟುವ ಪದ್ಧತಿ ಬೆಳೆದು ಬಂದಿತ್ತು. ಈ ಸಮಯದಲ್ಲಿ ಹೆಚ್ಚಾಗಿ ಸಮಾಜದ ಪ್ರಮುಖರು ಉಪಸ್ಥಿತರಿದ್ದು ಕುಟುಂಬದವರ ಪರವಾಗಿ ಲಕ್ಷ್ಮೀ, ಸರಸ್ವತಿ, ಗೌರಿ ದೇವರನ್ನು ಸ್ಮರಿಸಿಕೊಂಡು ಅರ್ಚಿಸಿ ನವ ದಂಪತಿಗಳಗೆ ಸ್ಥಿರದಾಂಪತ್ಯ, ಆರೋಗ್ಯ ಮತ್ತು ಪುತ್ರಲಾಭಗಳನ್ನು ಮಾಂಗಲ್ಯವನ್ನು ಕಟ್ಟುವಾಗ ವೇದದ ಶ್ಲೋಕವಾಗಿರುವ

*ಮಾಂಗಲ್ಯ ತಂತು ನಾನೇನ ಭರ್ತೃಜೀವನ ಹೇತು ನಾ* |
*ಕಂಠೇ ಬಧ್ನಾಮಿ ಶುಭಗೇ ಸಾಜೀನ ಶರದಃ ಶತಂ* ||

ಎಂಬ ವಾಗ್ದಾನದೊಂದಿಗೆ ವರನನ್ನು ವಧುವಿನ ಕೊರಳಿಗೆ ಕಟ್ಟುವಂತೆ (ಈ ಮಾಂಗಲ್ಯ ತಂತುವು ನನ್ನ ಜೀವನಕ್ಕೆ (ದಾಂಪತ್ಯ ಜೀವನಕ್ಕೆ)ಕಾರಣವಾದುದು. ಇದನ್ನು ನಿನ್ನ ಕೊರಳಲ್ಲಿ ಕಟ್ಟುವೆನು. ನೀನು ನನ್ನೊಡನೆ ನೂರು ವರ್ಷ ಕಾಲ ಬಾಳು ಎಂದು ವರನು ಹೇಳುವ ಅರ್ಥದಲ್ಲಿ) ಹಿರಿಯರು ನಡೆದುಕೊಳ್ಳುತ್ತಾರೆ. ಇದು ಅಪ್ಪಟ ವೈದಿಕರಿಂದ ಬಂದಿರುವ ಸಂಪ್ರದಾಯ. ಸಾವಿರಾರು ಸಾಮಾಜಿಕ ವರ್ಗೀಕರಣದಲ್ಲೂ, ಜಾತಿ ಜಾತಿಗಳಲ್ಲಿಯೂ ಈ ಸಂಪ್ರದಾಯ ಉಳಿದುಕೊಂಡು ಬರುವ ಹಾಗೆ ವೈದಿಕರು ಪ್ರಭಾವ ಬೀರಿ ಇಂತಹ ಸನ್ನಿವೇಶದಲ್ಲಿಯೂ ಪ್ರಭಾವಶಾಲಿಗಳಾಗಿಯೇ ಅಂದಿನಿಂದ ಇಂದಿನವರೆವಿಗೂ ಬೆಳೆದು ಬರುತ್ತಿದ್ದಾರೆ. ವಿವಾಹವಾದುದಕ್ಕೆ ಇಂದು ವಿಡಿಯೋ ಫೋಟೋ ಮುಂತಾದ ಸಾಕ್ಷಿಗಳಿವೆ. ಆದರೆ ಅಂದು ಇದ್ದ ಒಂದೇ ಒಂದು ಸಾಕ್ಷಿ ಎಂದರೆ 'ಅಗ್ನಿಸಾಕ್ಷಿ', ಸಂಸ್ಥಾನದ ವಿವಾಹ ವ್ಯವಸ್ಥೆಯಲ್ಲಿಯೇ ಅಲ್ಲದೆ ಭಾರತೀಯ ಹಿಂದೂ ವಿವಾಹ ಪರಂಪರೆಯಲ್ಲಿಯೂ 'ಅಗ್ನಿ'ಗೆ ಪವಿತ್ರವಾದ ಸ್ಥಾನ ಕಲ್ಪಿಸಲಾಗಿದೆ. ಅಗ್ನಿಯನ್ನು ಸಾಕ್ಷಿಯಾಗಿರಿಸದೆ ಮಾಡಿದ ವಿವಾಹವು ಧಾರ್ಮಿಕ ಮಾನ್ಯತೆ ಮಾತ್ರವಲ್ಲದೆ. ಸಾಮಾಜಿಕ ಮನ್ನಣೆಯಿಂದಲೂ ದೂರವಿರಬೇಕಾಗಿತ್ತು. ಚತುರ್ವರ್ಣಗಳಲ್ಲಿ ಮೂರು ವರ್ಗದ ಹಿಂದೂಗಳು ಇಂದಿಗೂ ಅಗ್ನಿಸಾಕ್ಷಿಯಾಗಿಯೇ ವಿವಾಹ ಸಂಸ್ಕಾರಗಳನ್ನು ನಡೆಸಿಕೊಂಡು ಅಂದಿನಿಂದ ಪಾಲಿಸಿಕೊಂಡು ಬರುತ್ತಿದ್ದಾರೆ. ಶೂದ್ರರು ಹಾಗೂ ದಲಿತು ಇದನ್ನು ಪಾಲಿಸುವುದು ಕಂಡುಬರುವುದಿಲ್ಲ. ಈ ಅಗ್ನಿಸಾಕ್ಷಿಗೆ ಇನ್ನೊಂದು ಅಧ್ಯಾತ್ಮಿಕವಾದ ಮಾನ್ಯತೆಯೆಂದರೆ, ಪಂಚಭೂತಗಳಲ್ಲಿ ಮೂರನೆಯದಾದ ಅಗ್ನಿಗೆ ಎಲ್ಲವನ್ನೂ ಸುಟ್ಟು ನಾಶ ಮಾಡುವ ಶಕ್ತಿ ಎನ್ನುವುದು. ವಿವಾಹದ ಸಮಯದಲ್ಲೂ ಪತಿ ಪತ್ನಿಯರಲ್ಲಿರುವ ಮಾಲಿನ್ಯ ದ್ವೇಷಾಸೂಯೆಗಳನ್ನು ಅಗ್ನಿ ನಾಶಮಾಡಲಿ ಎಂಬ ಅಕಾಂಕ್ಷೆ ಈ ಸಂದರ್ಭದಲ್ಲಿ ಅಡಕವಾಗಿ ಮೂಡಿ ಬಂದಿತ್ತೆನ್ನಬಹುದು. ಇನ್ನೊಂದರ್ಥದಲ್ಲಿ ಹೇಳುವುದಾಧರೆ ಅಗ್ನಿ ಉರ್ಧ್ವಗಾಮಿ, ಆದರೆ ಜ್ವಾಲೆಯು ಮೇಲ್ಮುಖವಾಗಿರುತ್ತಯೇ ವಿನಃ ಎಂದೂ ಕೆಳಮುಖವಾಗಿರುವುದಿಲ್ಲ. ಈ ರೀತಿಯಲ್ಲಿ ಯೇ ದಂಪತಿಗಳ ಜೀವನವೂ ಉತ್ತರೋತ್ತರವಾಗಿ ಎತ್ತರಕ್ಕೇರಲಿ, ಸದಾ ಮೇಲ್ಮುಖವಾಗಿರಲಿ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸಗಳತ್ತ ಏರುತ್ತಾ ಹೋಗಲಿ ಎಂಬ ಸಂದೇಶವನ್ನು 'ಅಗ್ನಿಸಾಕ್ಷಿ' ಸಾರುತ್ತದೆಂದು ನಂಬಿಕೆ.

**ಬ್ರಾಹ್ಮಣರ ಮದುವೆ :** ಇವರಲ್ಲಿ ಮಗಳನ್ನು ಮದುಮಗನಿಗೆ ಕನ್ಯಾದಾನವೆಂದು ಕೊಡುಗೆಯ ರೂಪದಲ್ಲಿ ಮದುವೆ ಮಾಡಿಕೊಡುವ ಸರ್ವಾತ್ರಿಕ ಪದ್ಧತಿಯಿದೆ. ಹೆಚ್ಚಾಗಿ ವಿವಾಹವು ಮಧುವಿನ ಮನೆಯಲ್ಲಿ ನಡೆಯುವುದು ಕಂಡುಬಂದರೆ ಅಥವಾ ಮನೆಯಲ್ಲಿ ಸ್ಥಳದ ತೊಂದರೆ ಕಂಡುಬಂದರೆ ದೇವಾಲಯಗಳಲ್ಲಿ, ಛತ್ರಗಳಲ್ಲಿ ನಡೆಯುತ್ತಿದ್ದನ್ನು ಗಮನಿಸಬಹುದು, (ಮಹಾರಾಜರು ಮೈಸೂರು ನಗರದಲ್ಲಿ ನಂಜಬಹದ್ದೂರ್ ಛತ್ರವನ್ನು ಕಟ್ಟಿಸಿ ವಿವಾಹ ಕಾರ್ಯಕ್ಕೆ ಅನುಕೂಲ ಮಾಡಿಕೊಟ್ಟಿದ್ದರು). ಇವರ ಎಷ್ಟೋ ಮದುವೆ ಸಂಪ್ರದಾಯಗಳು ನಮ್ಮ ಕೆಳಜಾತಿಗಳೆಂದು ಹೇಳಿಕೊಂಡಿರುವ ಸಮಾಜದಲ್ಲಿ ಬರುತ್ತವೆ. ಸಾಮಾನ್ಯವಾಗಿ ಮದುವೆ ಎಂದರೆ ಮೇಲೆ ತಿಳಿಸಿದಂತೆ ವೀಳ್ಯದ ಶಾಸ್ತ್ರ ನಿಶ್ಚಿತಾರ್ಥದ ನಂತರ ಪ್ರಸ್ತಾಪಗಳು ನಿಶ್ಚಿತವಾದ ರೂಪ ಪಡೆದುಕೊಳ್ಳುತ್ತವೆ. ವೇಶ್ಯರಲ್ಲಿ ವರನು ವಧುಗೃಹಕ್ಕೆ ಬಂದ ನಂತರ ವರನ ಪೂಜೆ, ಮದುಮಗನನ್ನು ಅವನ ತಂದೆತಾಯಿಗಳನ್ನು ಎದುರುಗೊಂಡು ಸತ್ಕರಿಸುವುದು, ವಧೂವರರ ಪೂರ್ವಜರನ್ನು ಆಹ್ವಾನಿಸುವುದು, ಕಂಕಣ ಧಾರನೆ, ವಧೂವರರ ಪರಸ್ಪರ ಕೈಗಳಿಗೆ ದಾರ ಕಟ್ಟುವುದು ಇವು ಬ್ರಾಹ್ಮಣರ ಪ್ರಮುಖ ವಿವಾಹ ಬದ್ಧವಾದ ಸೂಚನೆಗಳು, ನಂತರ ಕೆಂಬಣ್ಣದ ಅಕ್ಕಿಯನ್ನು ವಧೂವರರು ಪರಸ್ಪರ ತಲೆಗಳ ಮೇಲೆ ಎರಚಿಕೊಳ್ಳುವುದು, ಮಂಗಳ ಸೂತ್ರ ಕಟ್ಟುವುದು, ಈ ಸಮಯದಲ್ಲಿ ನೆರೆದಿದ್ದ ಎಲ್ಲ ಜನರೂ ಅಕ್ಕಿಯನ್ನು ವಧೂವರರಿಗೆ ಎದಚುವುದು, ಗಟ್ಟಿಮೇಳ ಮೊಳಗುವುದು ಸರ್ವೇಸಾಮಾನ್ಯವಾಗಿ ಬೆಳೆದುಬಂದಿರುವ ಸಂಪ್ರದಾಯ. ಈ ಪದ್ಧತಿಯನ್ನು ಸಾಮಾನ್ಯವಾಗಿ ಎಲ್ಲಾ. ಜಾತಿಯಲ್ಲಿಯೂ ಅನುಸರಿಸುತ್ತಿರುವುದು ಕಂಡುಬರುತ್ತದೆ.

**ವೀರಶೈವ ಮದುವೆ :** ವೀರಶೈವರು, ಲಿಂಗಾಯತರು ಸಂಸ್ಥಾನದಲ್ಲಿ ಅಂದು ಹೊಸ ಹೊಸ ಆಚಾರ, ವಿಚಾರ, ಸಂಸ್ಕೃತಿಯನ್ನು ಬೆಳಸಿಕೊಂಡು ಬರತೊಡಗಿದರು ಎನ್ನಬಹುದು. ಮೂಲದಲ್ಲಿ ವೈದಿಕ ಸಂಪ್ರದಾಯದಿಂದಲೇ ಬೇರ್ಪಟ್ಟು ಬಂದವರಾದರೂ ಅವರು ತಮ್ಮ ವಿವಾಹ ಪದ್ಧತಿಯ ಆಚರಣೆಗಳಲ್ಲಿ ಬ್ರಾಹ್ಮಣ ವಿವಾಹ ಪದ್ಧತಿಯನ್ನು ಆಚರಣೆ ಮಾಡಿಕೊಂಡು ಬರತೊಡಗಿದ್ದರು. ಇಂದಿಗೂ ಈ ಜನಾಂಗದಲ್ಲಿ ಇದನ್ನು ಕಾಣಬಹುದು. ಇವರಲ್ಲಿ ಪಂಚಕಲಶಗಳನ್ನಿಟ್ಟು ವಿವಾಹ ವಿಧಿಗಳನ್ನು ಪೂರೈಸುತ್ತಿದ್ದರು. ಅಂದು ಇವರ ಮದುವೆ ಸಂಪ್ರದಾಯವು ಐದು ದಿನಗಳ ಕಾಲ ನಡೆಯುತ್ತಿದ್ದಿತ್ತು. ಸಾಮಾನ್ಯವಾಗಿ ಇವರು ತುಲಸಿ ವಿವಾಹದಿಂದ ಕಾರಹುಣ್ಣಿಮೆಯ ಒಳಗಾಗಿ ಮದುವೆ ಕಾರ್ಯವನ್ನು ಪೂರೈಸುವ ಸಂಪ್ರದಾಯ ಹೊಂದಿದ್ದರು. ಸಾಮಾನ್ಯವಾಗಿ ಇವರು ಮಠಗಳಲ್ಲಿ ಶಿವದೇವಾಲಯಗಳಲ್ಲಿ ತಮ್ಮ

ಧರ್ಮದ ಸ್ವಾಮಿಯವರಾದ ಗುರು - ಜಂಗಮರ ಸಮ್ಮುಖದಲ್ಲಿ ಮಾಂಗಲ್ಯಧಾರಣೆಯನ್ನು ಮಾಡಿ ಅವರ ಆಶೀರ್ವಾದ, ತೀರ್ಥ, ಪ್ರಸಾದಗಳನ್ನು ಪಡೆದು ಹೊಸ ಜೀವನಕ್ಕೆ ಪಾದಾರ್ಪಣೆ ಮಾಡುವರು.

**ಒಕ್ಕಲಿಗರ ಮದುವೆ :** ಸಂಸ್ಥಾನದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದ್ದ ಒಕ್ಕಲಿಗರು ಪ್ರಮುಖವಾಗಿ ತಮ್ಮ ಆಧಾರ ಕಸುಬಾಗಿ ಹೊಂದಿದವರಾಗಿದ್ದರು. ಇವರು ವಿವಾಹಗಳನ್ನು ಪ್ರಾರಂಭದಲ್ಲಿ ತಮ್ಮ ಹತ್ತಿರದ ಸಂಬಂಧದಲ್ಲಿಯೇ (ಸೋದರ ಮಾವನ ಮಗ ಅಥವಾ ಮಗಳು, ಅಕ್ಕನ ಮಗಳು ಇತ್ಯಾದಿ) ಹೆಚ್ಚಾಗಿ ನಡೆಸಿಕೊಂಡು ಬರುತ್ತಿದ್ದದ್ದು ಕಂಡು ಬರುತ್ತದೆ. ಕಾರಣ ಇವರು ಹೆಚ್ಚಿನ ಪ್ರಮಾಣದಲ್ಲಿ ಭೂಮಿಯನ್ನು ಹೊಂದಿದವರಾಗಿದ್ದರಿಂದ ಅವರ ಆಸ್ತಿಗೆ ಬೇರೆಯವರ ಮಗಳು ಅಥವಾ ಮಗ ಬಂದು ಹಕ್ಕುದಾರನಾಗುವುದನ್ನು ಸಹಿಸುತ್ತಿರಲಿಲ್ಲ. ಇತ್ತೀಚೆಗೆ ಇವರಲ್ಲಿ ಸಂಪೂರ್ಣ ಬದಲಾವಣೆಯಾಗಿದೆ.

ಅಂದು ವರನ ಕಡೆಯವರು ವಧು ಪರೀಕ್ಷೆಗೆ ಹೋದಾಗ ವಧುವನ್ನು ಅನೇಕ ಪರೀಕ್ಷೆಗೆ ಒಳಪಡಿಸಿ ನಂತರ ಒಪ್ಪಿಗೆಯಾದರೆ 'ಒಪ್ಪು ವೀಳ್ಯಕ್ಕೆ' ಬರುವುದಾಗಿ ತಿಳಿಸಿ ಬರುತ್ತಿದ್ದರು. (ವಧು ಪರೀಕ್ಷೆಯಲ್ಲಿ ವಧುವಿನ ನಡೆ ನೋಡಲು ಸುಣ್ಣ ತರಲು ಹೇಳುವುದು. ಈರುಳ್ಳಿ ಸಿಪ್ಪೆಯ ಕಸಗುಡಿಸು ಎಂದು ಹೇಳುವುದು ಮುಂತಾದವುಗಳಾಗಿದ್ದವು) ಅಂದು ಇವರಲ್ಲಿ ವರದಕ್ಷಿಣೆಯು 'ತೆರ'ದ ರೂಪದಲ್ಲಿದ್ದಿತು. ಇಲ್ಲಿ ಗಂಡಿನ ಕಡೆಯವರು ಹೆಣ್ಣಿಗೆ ಕೊಡುವ ಒಡವೆ ವಸ್ತುಗಳು ಹಾಗೂ ಹೆಣ್ಣಿನ ಕಡೆಯವರು ಗಂಡಿಗೆ ಕೊಡುವ ವಸ್ತುಗಳ ಬಗ್ಗೆ ಮಾತುಕತೆ ನಡೆದು ಒಂದು ಒಪ್ಪಂದಕ್ಕೆ ಬರುತ್ತಿದ್ದರು. ಇದಾದ ಮೇಲೆ ಒಪ್ಪು ವೀಳ್ಯ ಶಾಸ್ತ್ರ ಇದಾದ ಮೇಲೆ ವಧುವನ್ನು ಬೇರೆಯವರಿಗೆ ಕೊಡುವಂತಿಲ್ಲ. ನಂತರ ಮದುವೆ ವೈಭವದಿಂದ ಅವರದೇ ಆದ ಸಂಪ್ರದಾಯದಲ್ಲಿ ನಡೆಯುತ್ತದೆ. ತಾಳಿಕಟ್ಟಿಸಿ, ಧಾರೆ ಮುಹೂರ್ತ ನಡೆಸಿ ನಂತರ ಗಂಡು ಹೆಣ್ಣುಗಳಲ್ಲಿ ಸಲುಗೆ ಬೆಳೆಸುವುದಕ್ಕಾಗಿ ಪಾದ ತೊಳೆಸುವ ಶಾಸ್ತ್ರ, ಹಸೆ ಕೂರಿಸುವ ಶಾಸ್ತ್ರ, ಸೆರಗು ಬಿಡಿಸುವ ಶಾಸ್ತ್ರ, ಅಕ್ಕಿಯಲ್ಲಿ ನಾಣ್ಯವನ್ನು ಹಾಕಿ ಹುಡುಕಿಸುವ ಶಾಸ್ತ್ರ. ನೀರನ್ನು ಎರಚಾಡುವ ಶಾಸ್ತ್ರ ಮುಂತಾದವುಗಳನ್ನು ನಡೆಸುತ್ತಿದ್ದರು. ನಂತರ ವಧುವು ವರನ ಮನೆಗೆ ಹೊರಡುವ ಮೊದಲು ತನ್ನ ತವರೂರಿನ ಬಂಧು ಬಳಗದವರೆಲ್ಲರಿಗೂ ವೀಳ್ಯ ನೀಡಿ ಕಾಲುಗಳಿಗೆ ನಮಸ್ಕರಿಸಿ ಆರ್ಶೀವಾದ ಪಡೆದು ಹೊರಡುತ್ತಾಳೆ. ಈ ಸನ್ನಿವೇಶ ಒಂದು ರೀತಿಯಲ್ಲಿ ಆನಂದದ ದುಃಖದ ಸಮಯವಾಗಿರುತ್ತದೆ.

ಸಂಸ್ಥಾನದಲ್ಲಿ ಹಿಂದುಳಿದ, ದಲಿತರ (ಹೊಲೆಯ, ಮಾದಿಗ) ವಿವಾಹಗಳು ಒಕ್ಕಲಿಗರ ಮಾದರಿಯಲ್ಲಿಯೇ ಕೆಲವೇ ಕೆಲವು ಸಣ್ಣಪುಟ್ಟ ಬದಲಾವಣೆಗಳೊಂದಿಗೆ ನಡೆಯುತ್ತಿದ್ದವು. ಎಲ್ಲ ಜಾತಿಯವರೂ ಸಹ ಪ್ರಮುಖವಾಗಿ (ವೀರಶೈವರನ್ನು ಹೊರತುಪಡಿಸಿ) ಬ್ರಾಹ್ಮಣ ಪುರೋಹಿತರನ್ನು ಮದುವೆ ಕಾರ್ಯಕ್ಕೆ ಅರ್ಚಕರಾಗಿ ಆಹ್ವಾನಿಸುತ್ತಿದ್ದರು. ಒಂದು ದೃಷ್ಟಿಯಲ್ಲಿ ಬ್ರಾಹ್ಮಣರೇ ತಮ್ಮನ್ನು ಕರೆಯುವ ಸನ್ನಿವೇಶವನ್ನು, ಧಾರ್ಮಿಕ ಕಾನೂನನ್ನು, ಸಾಮಾಜಿಕ ಸಂಪ್ರದಾಯವನ್ನು ಸೃಷ್ಟಿಸಿ ಪ್ರತಿಯೊಂದು ಹಂತದಲ್ಲಿಯೂ ಮೊದಲನೇ ಸ್ಥಾನದಲ್ಲಿಯೇ ಉಳಿದುಕೊಂಡು ಬರುತ್ತಿರುವರು.

ರಾಜ ವಂಶದವರ ಮದುವೆಯು ಅನೇಕ ಆಚಾರ, ವಿಚಾರ, ಧಾರ್ಮಿಕ ಸಂಪ್ರದಾಯಗಳಲ್ಲಿ ಬ್ರಾಹ್ಮಣರ ಮಾರ್ಗದರ್ಶನದಲ್ಲಿಯೇ ನಡೆಯುತ್ತಿತ್ತು. ಒಟ್ಟಿನಲ್ಲಿ ವಿವಾಹವೆಂಬುದು ಪ್ರತಿಯೊಂದು ಮನುಷ್ಯನಲ್ಲಿಯೂ ಹೊಸಹೊಸ ವಿಚಾರಗಳಿಗೆ, ಬಾಳ್ವಿಗೆ ಹೆದ್ದಾರಿಯನ್ನು ತೆರದಿಡುತ್ತದೆ ಎನ್ನಬಹುದು.

***

## ೫. ಸಾಹಿತ್ಯ

ಮೈಸೂರು ಒಡೆಯರ ಕಾಲದಲ್ಲಿನ ಸಂಸ್ಕೃತಿಯನ್ನು ತಿಳಿಯಲು ಹೆಚ್ಚಾಗಿ ನೆರವಾಗುವ ಸಾಧನವೆಂದರೆ ಸಾಹಿತ್ಯ, ಇದಕ್ಕೇನೂ ಸಂಸ್ಥಾನದಲ್ಲಿ ಕೊರತೆ ಇದ್ದಂತೆ ಕಂಡುಬರುವುದಿಲ್ಲ. ಅಂದಿನ ದಿನಗಳಲ್ಲಿ ರಚನೆಯಾಗಿರುವ ಕೃತಿಗಳಿಂದ ಸಾಮಾಜಿಕ, ಧಾರ್ಮಿಕ, ರಾಜಕೀಯ ಒಟ್ಟಾರೆ ಸಾಂಸ್ಕೃತಿಕ ಚರಿತ್ರೆಯನ್ನು ವಿವರವಾಗಿ ತಿಳಿಯಬಹುದಾಗಿದೆ.

ರಾಜ ಒಡೆಯರು ೧೫೭೮ ರಿಂದ ೧೬೩೭ರಲ್ಲಿ ರಾಜರಾಗಿ ಆಳ್ವಿಕೆ ನಡೆಸುತ್ತಿದ್ದ ಕಾರ್ಯ ವೈಖರಿಯನ್ನು ಚಿದಾನಂದ ಕವಿಯು ತನ್ನ "ಮುನಿವಂಶಾಭ್ಯುದಯ"ದಲ್ಲಿ ಸಂಪೂರ್ಣವಾಗಿ ವರ್ಣಿಸಿದ್ದಾನೆ. ಅವರು ಅಂದು ಹೇಗೆ ಜನಮತಗಳಿಸಿದ್ದನು ಹಾಗೂ ರೈತಾಪಿ ಪ್ರಜೆಗಳು ಹಿಂದಿನಿಂದ ಕೊಡುತ್ತಿದ್ದ ತೆರಿಗೆಯನ್ನು ಈಗ ಕೊಟ್ಟರೆ ಸಾಕು ಅದಕ್ಕಿಂತ ಹೆಚ್ಚೇನನ್ನೂ ಕೊಡಬೇಕಾಗಿಲ್ಲವೆಂದು ಹೇಳಿ ರೈತರ ಅನುರಾಗವನ್ನು ಪಡೆದು ಕೊಂಡಿದ್ದರ ಬಗ್ಗೆ ಬೆಳಕು ಚೆಲ್ಲುತ್ತಾನೆ. ಹಾಗೆಯೇ ಅವಿಧೇಯರಾಗಿ ವರ್ತಿಸಿದವರನ್ನು ಕಟು ಶಿಕ್ಷೆಗೆ ಗುರಿಪಡಿಸುತ್ತಿದ್ದದ್ದನ್ನು ಸುದೀರ್ಘವಾಗಿ ವಿವರಿಸಿದ್ದಾನೆ.

ಪ್ರಖ್ಯಾತ ದೊರೆ ಕಂಠೀರವ ನರಸರಾಜರ ಕಾಲದಲ್ಲಿ ಪ್ರಸಿದ್ಧ ಕವಿ ಗೋವಿಂದ ವೈದ್ಯ ರಚಿಸಿದ "ಕಂಠೀರವ ನರಸರಾಜ ವಿಜಯ" ಎಂಬ ಸಾಂಗತ್ಯ ಕೃತಿಯು ಚಾರಿತ್ರಿಕ ಗ್ರಂಥಗಳಲ್ಲಿ ಒಂದಾಗಿದೆ. ಅಂದಿನ ಕಾಲದಲ್ಲಿ ನಡೆದ ಯುದ್ಧದ ತಂತ್ರ ಹಾಗೂ ಸಾಹಸದ ಬಗ್ಗೆ ತಿಳಿಸುತ್ತದೆ. ಒಡೆಯರು ನಡೆಸುತ್ತಿದ್ದ ಯುದ್ಧ ಕಾರ್ಯ ತಂತ್ರಗಳ ಬಗ್ಗೆ ಹೇಳುತ್ತಾ ಈ ಕಾವ್ಯಕ್ಕೆ ಆಧಾರವಾಗಿ ಕಂಠೀರವ ನರಸರಾಜರನ್ನೇ ಅರಿಸಿಕೊಂಡು ಆತ ನಡೆಸಿದ ಮುಸ್ಲಿಂ ಸುಲ್ತಾನ ರಣದುಲ್ಲಾಖಾನನ ಮೇಲಿನ ವಿಜಯ ಮತ್ತು ಆತನು ಸೋತು ಪಲಾಯನ ಮಾಡಿದ ವಿವರಗಳು ಹೆಚ್ಚಾಗಿ ವಿವರಿಸುತ್ತದೆ. ಮುಂದುವರೆದು ಮೈಸೂರು ಮತ್ತು ಬಂಕಾಪುರದ ಸಂಬಂಧವನ್ನು ವಿವರಿಸುತ್ತಾನೆ. ಹಾಗೆಯೇ ಸಾಂಬಳ್ಳಿ, ಪಿರಿಯಾಪಟ್ಟಣಗಳ ಮುತ್ತಿಗೆ ಮತ್ತು ಅವುಗಳ ವಶವಾದ ವರ್ಣನೆಯು ಸಹ ಕಂಡುಬರುತ್ತದೆ. ಅಂದು ರಾಜರಿಗೆ ನೆರವಾಗಿ ನಿಂತಿದ್ದ ದಳಪತಿಗಳ ಕಾರ್ಯ ಕೌಶಲತೆಯ ಬಗ್ಗೆಯು ಮತ್ತು ಈ ಕಾವ್ಯದಲ್ಲಿ ಕಂಠೀರವ ನರಸರಾಜರು ಹೊಂದಿದ್ದ ಅನೇಕ ಬಿರುದುಗಳನ್ನು ಸಹ ಕಾಣಬಹುದಾಗಿದೆ ಉದಾ: ಏಕಾಂಗ ವೀರ, ಕರ್ನಾಟಕ ಚಕ್ರೇಶ, ಪರಬಲ, ಮೇಘಾನಿಲ, ಕೋಟಿ ಕೋಲಾಹಲ, ಆಂದ್ರ ಬಲ ಸಂಘ, ಕರಿಕುಲ, ಕಂಠೀರವೇಂದ್ರ, ಕೊಂಕಣ ಮಲೆಯಾಳ, ಕೊಡಗು ಭೂಪಾಲರ ಮರ್ಧಿಪಶೂರ ಮುಂತಾದ ಅನೇಕ ಬಿರುದುಗಳನ್ನು ಹೊಂದಿದ್ದ ಬಗ್ಗೆ ವಿವರವಾಗಿ ಈ ಕಾವ್ಯವು ತಿಳಿಸುತ್ತದೆ. ಕಾವ್ಯದ ಮುಕ್ತಾಯವು ಕಂಠೀರವನ ಧಾರ್ಮಿಕ ಕಾರ್ಯಗಳ ಚಿತ್ರಣದೊಂದಿಗೆ ಮುಗಿಯುತ್ತದೆ. ಈ ಕೃತಿಯು ಅರ್ಥಾಲಂಕಾರಗಳಿಂದ ಕೂಡಿದ್ದು. ಕಂಠೀರವ ನರಸರಾಜನ ವಿಜಯ ಕಾವ್ಯವಾಗಿ ಇಂದಿಗೂ ಐತಿಹಾಸಿಕ ದಾಖಲೆಯಾಗಿ ಉಳಿದಿದೆ.

ಚಾಮಯ್ಯನೆಂಬ ಕವಿಯು ಕ್ರಿ.ಶ. ೧೭೦೦ರ ಅವಧಿಯಲ್ಲಿ ದೊಡ್ಡ ದೇವರಾಜರನ್ನು ಕುರಿತು "ದೇವರಾಜ ಸಾಂಗತ್ಯ'ವನ್ನು ಬರೆಯುತ್ತಾ ಈ ರಾಜರ ಆಳ್ವಿಕೆಯ ಬಗ್ಗೆ ಹೃದಯಂಗಮವಾಗಿ ಬಣ್ಣಿಸಿದ್ದಾನೆ. ಅವರ ಶೌರ್ಯ ಅಪಾರ ಸಾಮರ್ಥ್ಯಕ್ಕಾಗಿ ಮೂರು ಮನ್ನೆಯರ ಗಂಡ', 'ಪರರಾಯ ಭಯಂಕರ' ಹಿಂದೂರಾಯ ಸುರತಾಣ' ಎಂಬ ಬಿರುದುಗಳನ್ನು ಇಲ್ಲಿ ರಸವತ್ತಾಗಿ ವರ್ಣಿಸಲಾಗಿದೆ. ಇವರ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಸ್ಥಾನವು ಇಕ್ಕೇರಿಯವರೆಗೂ ಹರಿಡಿತ್ತೆಂದು ತಿಳಿಸಲಾಗಿದೆ. (ಇದು ಸಮಕಾಲೀನ ಕೆಳದಿ ನೃಪವಿಜಯದಲ್ಲಿಯೂ ಕಂಡುಬರುತ್ತದೆ). ಹೀಗೆ ಮೈಸೂರು ಪ್ರಭುತ್ವದ ಎಲ್ಲೆಯನ್ನು ಗುರ್ತಿಸುವಲ್ಲಿ ಈ ಕೃತಿಗಳು ತುಂಬಾ ಸಹಕಾರಿಯಾಗಿವೆ. ಇವರ ಕಾಲದಲ್ಲಿಯೇ ಮೊದಲ ಬಾರಿಗೆ ಯುರೋಪಿನ ಒಬ್ಬ ಪ್ರವಾಸಿಗ ಪ್ಲೇಕರ್ ಎಂಬುವನು ಮೈಸೂರಿಗೆ ಭೇಟಿ ನೀಡಿದ್ದ ಹಾಗೂ ಅವನ ಸಂದರ್ಶನದ ವಿಷಯಗಳು ದೊರೆಯುತ್ತವೆ. ಇದರಿಂದ ಹೊರ ರಾಷ್ಟ್ರಗಳೊಂದಿಗೆ ಮೈಸೂರಿನ ಹಿರಿಮೆ ಮತ್ತು ಸಂಬಂಧಗಳನ್ನು ತಿಳಿಯಬಹುದಾಗಿದೆ.

ಸಂಸ್ಥಾನದಲ್ಲಿಯೇ ನವಕೋಟಿ ನಾರಾಯಣನೆನಿಸಿಕೊಂಡಿದ್ದ ಚಿಕ್ಕದೇವರಾಜ ಒಡೆಯರ್ ಕಾಲದಲ್ಲಿ ವಿದ್ಯಾಭ್ಯಾಸ ಮತ್ತು ಸಾಹಿತ್ಯದ ಅಭಿವೃದ್ಧಿಯು ಉತ್ತುಂಗ ಶಿಖರಕ್ಕೆ ಏರಿತ್ತೆಂದೇ ಹೇಳಬಹುದಾಗಿದೆ. ಇವರ ಕಾಲದಲ್ಲಿ ಸಾಹಿತ್ಯವು ತನ್ನ ವೈಭವದ ತುತ್ತತುದಿಯನ್ನು ತಲುಪಲು ಕಾರಣರಾದ ಗೋವಿಂದ ವೈದ್ಯ, ತಿರುಮಲಾರ್ಯ, ಚಿಕ್ಕೊಪಾದ್ಯಾಯ, ಸಿಂಗರಾರ್ಯ, ಸಂಚಿ ಹೊನ್ನಮ್ಮ, ಕೆಂಪು ನಾರಾಯಣ, ಲಿಂಗರಾಜ, ಅಲ್ಲದೆ ಸ್ವತಃ ಚಿಕ್ಕದೇವರಾಜ ಒಡೆಯರೇ ಅನೇಕ ಕೃತಿಗಳನ್ನು ಕಾವ್ಯಗಳನ್ನು ರಚಿಸಿದ್ದಾರೆ. ಚಿಕ್ಕದೇವರಾಜರ ಸಾಹಿತ್ಯ ಶ್ರೇಷ್ಠತೆಯನ್ನು ಕುರಿತು ಹಸ್ತಗಿರಿ ಮಹಾತ್ಮೆಯಲ್ಲಿ ನೂತನ ಸಾಹಿತ್ಯದ ಬ್ರಹ್ಮಾಂಗನುಪಮ 'ಚಿಕ್ಕದೇವ ಭೂಪತಿ' ಎಂದು ಪ್ರಶಂಸಿಸಿದ್ದಾನೆ.

ಚಿಕ್ಕದೇವರಾಜ ಒಡೆಯರ್ ರವರು ಸ್ವತಃ **ಸಪ್ತಪತಿ, ಚಿಕ್ಕದೇವರಾಜ ಸೂಕ್ತಿ ವಿಲಾಸ, ಚಿಕ್ಕದೇವರಾಯ ಭಿನ್ನಪಂ** ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಸೂಕ್ತಿವಿಲಾಸದಲ್ಲಿ ವರ್ಣಾಶ್ರಮ ಧರ್ಮದಲ್ಲಿನ ನಾಲ್ಕನೆಯದಾದ ಶೂದ್ರ ಆದರ್ಶ ಹಾಗೂ ಕರ್ತವ್ಯಗಳ ಬಗ್ಗೆ

ಸಂಕ್ಷಿಪ್ತವಾಗಿ ಹೇಳಿದ್ದಾರೆ. ವರ್ಣಾಶ್ರಮ ಧರ್ಮವನ್ನು ಉಳಿಸಿಕೊಂಡು ಶೂದ್ರರ ಉನ್ನತಿಗಾಗಿ ರಚಿಸಿರುವ ಈ ಕೃತಿಯು ಶ್ರೀ ಶೈಲಾರ್ಯನ ಸೂಕ್ತಿಯೊಂದಿಗೆ ಪ್ರಾರಂಭವಾಗುತ್ತದೆ. ಒಡೆಯರು ನಂಬಿದ್ದ ವಿಷ್ಣು ಭಕ್ತಿಯ ಬಗ್ಗೆ ಮತ್ತು ಇದರಲ್ಲಿನ ಶ್ರೀವೈಷ್ಣವ ಮತದ ತತ್ವಸಾರದ ಬಗ್ಗೆ ಸಂಕ್ಷಿಪ್ತವಾಗಿ ನಿರೂಪಿತವಾಗಿರುತ್ತದೆ.

'ಚಿಕ್ಕ ದೇವರಾಜ ವಂಶಾವಳಿ' ಕೃತಿಯು ಮೈಸೂರು ಮಹಾರಾಜರ ಚರಿತ್ರಾ ರೂಪವಾದ ವಚನ ಗ್ರಂಥಕರ್ತನ ಹೆಸರು ತಿರುಮಲಾರ್ಯ, ಇದು ಚಿಕ್ಕದೇವರಾಜರ ಅವಸಾನದ ಕಾಲದಲ್ಲಿ (ಅಂದರೆ ಕ್ರಿ.ಶ. ೧೭೦೪) ಮಂತ್ರಿ ತಿರುಮಲೈಂ ಗಾರ್ಯನನ್ನು ಪ್ರದಾನಿ ಅಪ್ಪಾಜಿಯನ್ನು ಕರೆಸಿ ತನ್ನ ಮಗನನ್ನು ಹಾಗೂ ರಾಜ್ಯವನ್ನು ನೋಡಿಕೊಳ್ಳುವಂತೆ ಹೇಳಿ ಅವರಿಗೆ ರಾಜ್ಯದ ಸಂಪೂರ್ಣ ಅಧಿಕಾರವನ್ನು ಕೊಟ್ಟಂತೆಯೂ, ಬಳಿಕ ಮಂತ್ರಿ ಪ್ರಧಾನಿಗಳು ಕಂಠೀರವ ನರಸರಾಜ ಒಡೆಯರಿಗೆ ಮಟ್ಟವನ್ನು ಕಟ್ಟಿ ತಾವೇ ರಾಜ್ಯದ ಆಡಳಿತವನ್ನು ನೋಡುತ್ತಿದ್ದುದನ್ನು ತಿಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ. ಅಂತೆಯೇ ರಾಜ ನೃಪನಂ ಕಾರುಗಳ್ಳಿ, ಕನ್ನಂಬಾಡಿ, ತಲಕಾಡು, ಅಮ್ಮ ಚಾವಡಿಗಳ ಪ್ರಭುಗಳು ತನ್ನ ವಿಚಾರವಾಗಿ ತರುಮಲೆ ರಾಜನಿಗೆ ತಿಳಿಸಿದ್ದ ಅಂಶಗಳನ್ನು ಬೇಹುಗಾರರಿಂದ ಹೇಗೆ ಯಾವ ರೀತಿಯಿಂದ ತಿಳಿಯುತ್ತಾನೆ ಎಂಬ ವಿಚಾರಗಳನ್ನು ತಿಳಿಸುವಲ್ಲಿ ಈ ಗ್ರಂಥವು ಅತ್ಯಂತ ಅಮೂಲ್ಯವಾದುದಾಗಿದೆ. ಇದರ ಜೊತೆಗೆ ನರಸರಾಜನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಳ್ಳುವನೆಂಬ ಹೆದರಿಕೆಯಿಂದ ತಿರುಮಲೆ ರಾಜನು ಊರನ್ನೇ ಬಿಟ್ಟು ಮಾಲಂಗಿಯ ಮಡುವಿನಲ್ಲಿ ಪ್ರಾಣ ಬಿಡುವ ಸನ್ನವೇಶವನ್ನು ಈ ಗ್ರಂಥವು ತಿಳಿಸುತ್ತದೆ. ಚಿಕ್ಕದೇವರಾಜ ಒಡೆಯರ ಬಾಲ್ಯ, ಪಟ್ಟಾಭಿಷೇಕ ಇತ್ಯಾದಿ ವಿಷಯಗಳ ಬಗ್ಗೆಯೂ ಸಹ ಬೆಳಕು ಹರಿಸುತ್ತದೆ.

"ಚಿಕ್ಕ ದೇವರಾಜ ವಿಜಯ ಅಥವಾ ಅಪ್ರತಿಮ ವೀರಚರಿತ" ಕೃತಿಯು ಚಂಪು ಕಾವ್ಯದಲ್ಲಿ ಇದೆ. ಇದು ತಿರುಮಲಾರ್ಯನಿಂದ ರಚನೆಯಾಗಿದೆ. ಇದರ ಹೆಸರೇ ಸೂಚಿಸುವಂತೆ ಮುಖ್ಯವಾಗಿ ಇಲ್ಲಿ ಚಿಕ್ಕದೇವರಾಯರು ಸಾಧಿಸಿದ ವಿಜಯಗಳನ್ನು ನೋಡಬಹುದಾಗಿದೆ. ಒಡೆಯರ್ ರವರು ಮಧುರೆಯ ನಾಯಕ, ಮಹಮ್ಮದೀಯರನ್ನು ಮತ್ತು ಮರಾಠರನ್ನು ಸೋಲಿಸಿದ ವಿವರಗಳನ್ನು ಹೆಚ್ಚಾಗಿ ನೋಡಬಹುದು. ೧೬೮೨ರಲ್ಲಿ ಶ್ರೀರಂಗಪಟ್ಟಣವನ್ನು ಮರಾಠರು ಮುತ್ತಿದ್ದ ಸಂದರ್ಭದಲ್ಲಿ ಚಿಕ್ಕದೇವರಾಜ ಒಡೆಯರು ಸಾಧಿಸಿದ ವಿಜಯವನ್ನು ಇಲ್ಲಿ ಚತ್ರಿಸಲಾಗಿದೆ. ಮುಖ್ಯವಾಗಿ ಯದುವಂಶದ ಮೂಲ, ರಾಜಕುಮಾರರು ಮೇಲು ಕೋಟೆಗೆ ಬಂದದ್ದು. ರಾಜವಂಶದ ಮೂಲ ಪುರುಷರಾಗಿ ನಿಂತದ್ದು ಇತ್ಯಾದಿ ವಿವರಗಳನ್ನು ಈ ಗ್ರಂಥದಲ್ಲಿ ವರ್ಣಿಸಲಾಗಿದೆ. ಸ್ವತಂತ್ರರಾದ ನಂತರ ಒಡೆಯರು ಮೊಗಲರ ಸಾಮ್ರಾಜ್ಯಕ್ಕೆ ಮಿತ್ರರಾದ ರೀತಿ, ಅಂತರಿಕ ಹಾಗೂ ಬಾಹ್ಯ ತೊಂದರೆಗಳಿಂದ ಸುರಕ್ಷಿತರಾದ ಬಗ್ಗೆ, ನೂತನ ರಾಜ್ಯಭಾರ ಪದ್ಧತಿಯ ಬಗ್ಗೆ ಮೇಲಿನ ಗ್ರಂಥದಲ್ಲಿ ತಿಳಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಶಿವಾಜಿಯ ಸೊಕ್ಕನ್ನು ಮುರಿದು ಕಪ್ಪವನ್ನು ಪಡದನೆಂದು ತಿಳಿಸುತ್ತಾ 'ಅಪ್ರತಿಮ ವೀರ' 'ಮಹಾರಾಜಾಧಿರಾಜಾ' 'ರಾಜಾ ಪರಮೇಶ್ವರ' 'ಪ್ರೌಢಪ್ರತಾಪ' ಮುಂತಾದ ಬಿರುದುಗಳನ್ನು ಚಿಕ್ಕದೇವರಾಜ ಒಡೆಯರು ಹೊಂದಿದ್ದರೆಂದು ಸಂಕ್ಷಿಪ್ತವಾಗಿ ವಿವರಿಸುತ್ತದೆ.

ಚಿಕ್ಕದೇವರಾಜರ 'ಗೀತಗೋಪಾಲ' ಚಿಕ್ಕದೇವ ರಾಜ ಬಿನ್ನಪಂ'ಗಳಲ್ಲಿ ವಿಷ್ಣು ಭಕ್ತಿಯ ಬಗ್ಗೆ ಹಾಗೂ ಸಂಗೀತದ ಬಗ್ಗೆ ಹೇಳುತ್ತಾ ಚಿಕ್ಕದೇವರಾಜರು ವೀಣೆ ನುಡಿಸಿದರೆಂದರೆ ಕಸ್ತೂರಿಯ ಕಂಪಿನಂಥೆ ಎಂದು ತಿರುಮಲಾರ್ಯರು ಹೇಳಿರುವುದು ಕಂಡುಬರುತ್ತದೆ. ಚಿಕ್ಕದೇವರಾಜ ಒಡೆಯರು ಆಡಳಿತಕ್ಕೆ ಕೊಟ್ಟ ಗಮನವನ್ನೇ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಕ್ಕೂ ಕೊಟ್ಟಿದ್ದನೆಂಬುದು ಅನೇಕ ಗ್ರಂಥಗಳಿಂದ ತಿಳಿದುಬರುತ್ತದೆ. ಆಡಳಿತ ಕ್ರಮ, ತೆರಿಗೆ, ಕಂದಾಯ ವಸೂಲಿ, ಪ್ರಾಂತ್ಯಗಳನ್ನು ಅನೇಕ ಸೀಮೆಗಳನ್ನಾಗಿಸಿ ಅವುಗಳಿಂದ ಹೆಚ್ಚು ಕಂದಾಯವನ್ನು ಸಂಗ್ರಹಿಸಿ ನವಕೋಟಿ ನಾರಾಯಣ ಎಂಬ ಹೆಸರಿಗೆ ಕಾರಣವಾದ ಎಲ್ಲಾ ಅಂಶಗಳನ್ನು ಚಿಕ್ಕದೇವರಾಜ ವಿಜಯದಲ್ಲಿ ವರ್ಣಿಸಲಾಗಿದೆ. ಕನ್ನಡದ ಪ್ರಥಮ ನಾಟಕ ಕೃತಿಯೆಂದು ಗುರುತಿಸಿಕೊಂಡಿರುವ ಸಿಂಗರಾರ್ಯರ "ಮಿತ್ರಾವಿಂದಾ ಗೋವಿಂದಾ" ಎಂಬ ಕೃತಿಯು ಪ್ರಕಟವಾದದ್ದು ಇವರ ಕಾಲದಲ್ಲಿಯೇ.

ಚಿಕ್ಕದೇವರಾಜ ಒಡೆಯರ ಸಮಕಾಲೀನ ಪ್ರತಿಭಾನ್ವಿತ ಕವಯತ್ರಿ ಸಂಚಿಯು ಹೊನ್ನಮ್ಮನಿಂದ ಪ್ರಸಿದ್ಧ ಕೃತಿ "ಹದಿಬದೆಯ ಧರ್ಮ" ರಚನೆಯಾಯಿತು. ಈ ಉತ್ತಮ ಕೃತಿಯಲ್ಲಿ ಅಂದಿನ ಸ್ತ್ರೀಯರ ಜೀವನವು ವಿಶದವಾಗಿ ನಿರೂಪಿತವಾಗಿದೆ. ರಾಮಾಯಣ, ಮಹಾಭಾರತ, ಮನ್ವಾದಿ ಧರ್ಮಶಾಸ್ತ್ರಗಳು ಮೊದಲಾದ ಗ್ರಂಥಗಳಲ್ಲಿ ಹಿರಿಯರು ಹೇಳಿದ್ದನ್ನೇ ತಾನು ಸಂಗ್ರಹಿಸಿದ್ದಾಗಿ ಈಕೆ

ಹೇಳಿಕೊಂಡಿದ್ದು, ಜೊತೆಗೆ ಸಮಾಜವು ಸ್ತ್ರೀಯರಿಗೆ ಕೊಟ್ಟ ಸ್ಥಾನಮಾನ, ರೂಢಿ, ಸಂಪ್ರದಾಯಗಳ ಶ್ರೇಷ್ಠತೆಯನ್ನು ಅಂದಿನ ಕಾಲಕ್ಕೆ ಯೋಗ್ಯವಾದ ರೀತಿಯಲ್ಲಿ ಬರೆದಿದ್ದಾಳೆ. ಈ ಗ್ರಂಥದಲ್ಲಿ ಪತಿವ್ರತಾ ಧರ್ಮದ ನಿಯಮಗಳು, ಭಾರತೀಯರ, ಸ್ತ್ರೀಯರ ಸ್ಥಾನಮಾನಗಳು ಹಾಗೂ ಪತಿಯೊಂದಿಗೆ, ಅತ್ತೆಮಾವರೊಂದಿಗೆ, ಗುರು ಹಿರಿಯರೊಂದಿಗೆ ಬಂಧು - ಬಳಗದವರೊಂದಿಗೆ ಹೆಣ್ಣು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕವಯತ್ರಿ ಸುಂದರವಾಗಿ ವರ್ಣಿಸಿದ್ದಾಳೆ. ಅದರಲ್ಲಿಯೂ ಮುಖ್ಯವಾಗಿ ಹೆಣ್ಣನ್ನು ಕಂಡು ತಾತ್ಸಾರ ಪಡುವವರ ವಿರುದ್ಧ ಹೇಳಿರುವ ಸಾಲುಗಳನ್ನು ಗಮನಿಸುವುದಾದರೆ :

*ಪೆಣ್ಣಲ್ಲವೆ ತಮ್ಮನೆಲ್ಲ ಹಡೆದ ತಾಯಿ?*
*ಪೆಣ್ಣಲ್ಲವೆ ಪೊರೆದವಳು?*
*ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು*
*ಕಣ್ಣು ಕಾಣದ ಗಾವಿಲರು?*

ಎಂದು ನುಡಿದ ಹೆಣ್ಣಿನ ಸರ್ವಶ್ರೇಷ್ಠತೆಯನ್ನು ಎತ್ತಿ ಹಿಡಿದಿರುವುದು ಕಂಡುಬರುತ್ತದೆ. ದಾನ, ಧರ್ಮಗಳ ಬಗ್ಗೆ, ಅಗ್ರಹಾರ, ಕೆರೆಕಟ್ಟೆಯನ್ನು ಕಟ್ಟಿಸಿದ್ದರ ಬಗ್ಗೆ ಈಕೆಯ ಬರವಣಿಗೆಯಲ್ಲಿ ನೋಡಬಹುದಾಗಿದೆ.

ವೈದ್ಯಕೀಯ ಶಾಸ್ತ್ರದ ಬಗ್ಗೆ ವೀರರಾಜನು ರಚಿಸಿದ "ವೀರ ರಾಜೋಕಿ ವಿಲಾಸ" "ಸಕಲ ವೈದ್ಯ ಸಂಗೀತಾ ಸಾರಾರ್ಣವ" ಎಂಬ ಕೃತಿಯಲ್ಲಿ ಸಕಲ ವೈದ್ಯಕೀಯವನ್ನು ಹಾಗೂ ಎಂ.ಎ.ಶ್ರೀ ಅಯ್ಯಂಗರ್ ಅವರು ಬರೆದ ಆಯುರ್ವೇದದ ಸುಲಭ ಚಿಕಿತ್ಸೆ ಎಂಬ ಕೃತಿಗಳನ್ನು ಒಡೆಯರು ತಮ್ಮ ಸರ್ಕಾರದ ಮೂಲಕ ೧,೦೦೦ ಪ್ರತಿಗಳನ್ನು ಅಚ್ಚು ಹಾಕಿಸಿ ಸಂಸ್ಥಾನದ ಗ್ರಾಮ ಪಂಚಾಯ್ತು ವೈದ್ಯ ಶಾಲೆಗಳಿಗೆ ಒದಗಿಸಿದ್ದರ ಬಗ್ಗೆ ಸಂಕ್ಷಿಪ್ತವಾದ ಮಾಹಿತಿ ತಿಳಿದುಬರುತ್ತದೆ.

ಕಂಠೀರವ ನರಸರಾಜರ ಕಾಲದಲ್ಲಿ ಶಾರದೆ ಗುವರ, ಗಣಿತ ವಿಲಾಸ ಎನ್ನುವ ಬಿರುದುಗಳಿದ್ದ ಬಾಸ್ಕರನು "ಬೇಹಾರ ಗಣಿತ"ವನ್ನು ಬರೆದಿದ್ದನು. ಇದು ಅಂದಿನ ಖಗೋಳಜ್ಞಾನ, ಕಾಲಮಾನವನ್ನು ತಿಳಿಸುವ ಹಾಗೂ ಹಬ್ಬಗಳನ್ನು, ಶುಭದಿನಗಳನ್ನು ತಿಳಿಯಲು ಸಹಕಾರಿಯಾಗಿತ್ತು. ಕೃಷ್ಣರಾಜ ಒಡೆಯರ್ ವರನಂದೀ ಕಲ್ಯಾಣ, ವೆಂಕಟಾಚಲ ಮಹಾತ್ಮೆ ಕೃತಿಗಳಲ್ಲಿ ಸ್ತ್ರೀಯರಿಗೆ ಅದರಲ್ಲಿಯೂ ಮದುವೆಯ ಸಮಯದ ವರ್ಣನೆ ಕಂಡುಬರುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರಿಂದಲೇ ೧೭೯೯ ರಿಂದ ೧೮೩೦ರ ಅವಧಿಯ ಆಡಳಿತ ವಿವರಣೆಯನ್ನು "ಶ್ರೀ ತತ್ವನೀಧಿ' ಎಂಬ ಗ್ರಂಥದಿಂಧ ತಿಳಿಯಬಹುದು. ಅದರಲ್ಲಿ ಶಕ್ತಿ ನಿಧಿ, ವಿಷ್ಣು ನಿಧಿ, ಬ್ರಹ್ಮ ನಿಧಿ, ಗ್ರಹ ನಿಧಿ ಹೀಗೆ ಒಂಬತ್ತು ನಿಧಿಗಳಿದ್ದು ಅವುಗಳಲ್ಲಿ ಉಲ್ಲೇಖಗೊಂಡಿವೆ. ಅವುಗಳ ಜೊತೆಗೆ ಆ ವಿಷಯಗಳ ಗ್ರಹಣಕ್ಕೆ ಅನುಕೂಲವಾಗುವಂತೆ ಚಿತ್ರಗಳನ್ನು ಸಹ ಬರೆದಿರುವುದನ್ನು ಕಾಣಬಹುದಾಗಿದೆ. ಅಲ್ಲದೆ ಈಜುಗಾರಿಕೆ, ದೊಣ್ಣೆವರಸೆ, ಕುಸ್ತಿ, ರಥ, ಗಜಿ, ಆಶ್ವ ಆರೋಹಣಗಳ ತರಭೇತಿಯ ಬಗ್ಗೆ ಜಟ್ಟಿಗಳ ಪ್ರಮುಖ್ಯ ಎಷ್ಟಿತ್ತು ಎಂಬ ಬಗ್ಗೆಯ ಸಂಕ್ಷಿಪ್ತ ವಿವರವನ್ನು ಶ್ರೀತತ್ವನಿಧಿಯಲ್ಲಿ ಕಾಣಬಹುದಾಗಿದೆ.

ಬಸಪ್ಪ ಶಾಸ್ತ್ರಿಗಳು ೧೮೪೩ - ೧೮೯೧ರ ಅವಧಿಯಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಚಾಮರಾಜ ಒಡೆಯರ ಅಸ್ಥಾನದಲ್ಲಿ ವಿದ್ವಾಂಸರಾಗಿದ್ದರು. ಇವರು ಕಾಳಿದಾಸನ ಶಾಕುಂತಲವನ್ನು ಅಪೂರ್ಣವಾಗಿ ಭಾಷಾಂತರಿಸಿ "ಅಭಿನವ ಕಾಳಿದಾಸ" ಎಂಬ ಬಿರುದಿಗೆ ಪಾತ್ರರಾಗಿದ್ದ ವಿಷಯವನ್ನು ಪ್ರಸ್ಥಾಪಿಸುತ್ತಾರೆ. ಆರನೇ ಚಾಮರಾಜ ಒಡೆಯರು ವಾಲ್ಮೀಕಿ ರಾಮಾಯಾಣವನ್ನು ಕನ್ನಡದಲ್ಲಿ ಮೊದಲಿಗೆ ಗದ್ಯಾನುವಾದವನ್ನಾಗಿ "ಚಮರಾಜೋಕ್ತಿ ವಿಲಾಸ" ಎಂಬ ಕೃತಿಯ ರೂಪದಲ್ಲಿ ರಚಿಸಿದ್ದಾರೆ. ಕವಿ ಮಲ್ಲಿಕಾರ್ಜುನರು "ಶ್ರೀರಂಗ ಮಹಾತ್ಮೆ'' ಎಂಬ ಕಾವ್ಯವನ್ನು ರಚಿಸಿದ್ದು, ಮತ್ತೊಬ್ಬ ಕವಿ ಚಿದಾನಂದ ಎಂಬುವರು "ಮುನಿವಂಶಾಭ್ಯುದಯ" ಎಂಬ ಗ್ರಂಥವನ್ನು ರಚಿಸಿ ಅಂದಿನ ಸಂಸ್ಕೃತಿಯ ಎಳೆಬಳೆಗಳನ್ನು ಹೊರಚೆಲ್ಲಿದ್ದಾರೆ. ದೊಡ್ಡ ಕೃಷ್ಣರಾಜ ಒಡೆಯರು ಬಾಲವೃದ್ಧ ಎಂಬ ಕವಿಗೆ ಪ್ರೋತ್ಸಾಹಕೊಟ್ಟು ಅವರಿಂದ 'ರತ್ನ ಶಾಸ್ತ್ರ'ವನ್ನು ಬರೆಸಿದ್ದಾರೆ ಇದರಲ್ಲಿ ಹೆಚ್ಚಿನದಾಗಿ ಅಂದಿನ ಗಣಿತ ವಿಷಯದ ಬಗ್ಗೆ ಗಮನ ಹರಿಸಿರುವುದು ಕಂಡುಬರುತ್ತದೆ. ಕೃಷ್ಣರಾಜ ಒಡೆಯರ್ ರವರ ಮಹಿಷಿಯವರಾದ ಚಲುವಾಂಬೆಯು "ವರನಂದೀ ಕಲ್ಯಾಣ" "ವೆಂಕಟಾಚಲ ಮಹಾತ್ಮ್ಯ" "ಲಾಲಿಯ ಪದ" "ಆಲಮೇಲು ಮಂಗಮ್ಮನ ಪದ" ತಲಕಾವೇರಿ ಮಹಾತ್ಮೆ" ಎಂಬ ಗ್ರಂಥಗಳನ್ನು ಬರೆದಿದ್ದಾಳೆ. ಮೈಸೂರು

ಸಂಸ್ಥಾನದಲ್ಲಿ ಪ್ರಮುಖ ಕ್ಷಿಪ್ರಕ್ರಾಂತಿಯಿಂದಾಗಿ ಪ್ರಸಿದ್ಧವಾಗಿರುವ ದಳವಾಯಿಗಳಾಗಿದ್ದ ಕಳಲೆಯ ನಂಜರಾಜರು ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪಾಂಡಿತ್ಯ ಪಡೆದವರಾಗಿದ್ದು ಅವರು "ಕುಕುದ್ಗಿರಿ ಮಹಾತ್ಮಾ" ಕಾಶೀ ಮಹಿಮೆ" "ಗಳಗಪುರಿ ಮಹಿಮೆ" "ಶಿವಭಕ್ತ ವಿಲಾಸ ದರ್ಪಣ" ಮಾರ್ಖಂಡೇಯ ಪುರಾಣ" ಗ್ರಂಥಗಳನ್ನು ಕನ್ನಡದಲ್ಲಿಯೂ ಹಾಗೂ "ಗೀತ ಗಂಗಾಧರ" ಮತ್ತು "ಶಿವಪದ ರೇಣುಕಾ ಸಹಸ್ರಂ" ಎಂಬ ಸಂಸ್ಕೃತ ಗ್ರಂಥಗಳನ್ನು ರಚಿಸಿ ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ್ದಾರೆ. ಬೆಟ್ಟದ ಚಾಮರಾಜ ಒಡೆಯರ ಕಾಲದಲ್ಲಿ ಉಪಾಧ್ಯಾಯರಾಗಿದ್ದ ಸಿಂಗರಾಚಾರ್ಯರು "ಶ್ರೀರಂಗ ಮಹಾತ್ಮೆ" ಎಂಬ ಗ್ರಂಥವನ್ನು ರಚಿಸಿರುವುದು ಕಂಡುಬರುತ್ತದೆ.

ಕರ್ನಾಟಕ ಭೋಜ ಎಂಬ ಹೆಸರಿನಿಂದ ಪ್ರಖ್ಯಾತರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಮಹಾಕವಿಗಳೂ ಹಾಗೂ ಕವಿಗಳ ಪೋಷಕರೂ ಅಗಿದ್ದರೆನ್ನಬಹುದು. ಇದಕ್ಕೆ ನಿದರ್ಶನವೆಂಬಂತೆ **ಆಧ್ಯಾತ್ಮ ರಾಮಾಯಣ, ಉಷಾ ಪರಿಣಯ್ಯ ಶಾಕುಂತಲ ಟೀಕೆ, ಸಿರಿ ನಂಜುಂಡ ಶತಕ, ಶಂಕರ ಸಂಹಿತೆ, ಹರಿವಂಶ ಹಾಲಾಸ್ಯ ಮಹಾತ್ಮೆ** ಗ್ರಂಥಗಳನ್ನು ಬರೆದಿದ್ದಾರೆ. ಇದರ ಫಲವಾಗಿ ಇವರು ಸಂಸ್ಥಾನದಲ್ಲಿ "ಉಭಯ ಕವಿತಾ ವಿಚಕ್ಷಣ" ಎಂಬ ಬಿರುದನ್ನು ಪಡೆದಿದ್ದರೆನ್ನಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ್ರವರ ಅಳಿಯರಾಗಿದ್ದ ಕವಿ ಲಿಂಗರಾಜರು ಹಲವು ಭಾಷಾ ಪಂಡಿತರಾಗಿದ್ದರೆಂದು ಕಂಡು ಬರುತ್ತದೆ. ಇವರು ಇಂದ್ರ ಕೀಲ, ನರಪತಿ ಬರಿತೆ, ಲಂಕಾದಹನ, ವೀರಭದ್ರ ಶತಕ, ಶಿವಭಕ್ತ, ರತ್ನಾಕರ, ಗಿರಿಜಾ ಕಲ್ಯಾಣ, ಗಯ ಚರಿತ್ರೆ ಮುಂತಾದ ಸುಮಾರು ೪೭ ಅಮೂಲ್ಯ ಗ್ರಂಥಗಳ ಕರ್ತೃ ಆಗಿದ್ದರೆಂದು ತಿಳಿಯಬಹುದು. ಇವರು ಕಲೆ, ಸಂಗೀತ ಸಾಹಿತ್ಯ, ವೇದಾಂತ ಮುಂತಾದ ಕ್ಷೇತ್ರಗಳಲ್ಲಿಯೂ ಪಂಡಿತರಾಗಿದ್ದುದರ ಫಲವಾಗಿ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಗ್ರಂಥಗಳನ್ನು ರಚಿಸಿ ಅಂದಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಈ ರಾಜರ ಆಸ್ಥಾನದಲ್ಲಿಯೇ ದೇವಲಾಪುರದ ನಂಜುಂಡ ಎಂಬ ಮತ್ತೊಬ್ಬ ಕವಿ ಇದ್ದರೆನ್ನಬಹುದು ಇವರು ಅಪರಾಧಿ ಸ್ತೋತ್ರ, ಪಟ್ಟಾಭಿಷೇಕ ವರ್ಣನೆ, ಭಕ್ತಸಾರ, ಭೋಗಾವಳಿ, ವೃತ್ತರತ್ನಾವಳಿ, ಟೀಕೆ, ಶಂಕರಾಷ್ಟಕ ಸೌಗಂಧಿಕಾದಂತಹ ಪ್ರಮುಖವಾದ ಗ್ರಂಥಗಳನ್ನು ಬರೆದಿದ್ದಾರೆ. ಅಂದಿನ ಹಾಸ್ಯರಸ ಪ್ರವಿಣರಾಗಿದ್ದ ಪುರೋಹಿತ ಮಾದಪ್ಪ ಶಾಸ್ತ್ರೀಯು ಮುಮ್ಮಡಿ ಕೃಷ್ಣರ ಆಸ್ಥಾನದಲ್ಲಿದ್ದರಂಬುವುದು ಗಮನ ಸೆಳೆಯುವ ವಿಷಯವೇ. ಇವನ ಮಗನೇ ಮೇಲೆ ತಿಳಿಸಿದ ಅಭಿನವ ಕಾಳಿದಾಸರೆಂದು ಬಿರುದು ಪಡೆದಿದ್ದ. ಬಸಪ್ಪ ಶಾಸ್ತ್ರಿ.

ಒಟ್ಟಾರೆ ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ಕನ್ನಡ ಹಾಗೂ ಸಂಸ್ಕೃತಿ ಭಾಷೆಯಲ್ಲಿ ಅಮೂಲ್ಯ ಕೃತಿಗಳು ರಚಿತವಾಗಿದ್ದವು. ರಚಿತವಾಗಿ ಅಂದು ಕನ್ನಡ ನಾಡಿನ ಸಂಸ್ಕೃತಿಯು ಭರತ ಖಂಡದಲ್ಲಿಯೇ ವಿಶೇಷತೆಯನ್ನು ಪಡೆದುಕೊಳ್ಳಲು ಸಹಕಾರಿಯಾದವೆನ್ನಬಹುದು ಇದರಿಂದಾಗಿ ಕರ್ನಾಟಕ ಸಂಸ್ಕೃತಿಯು ಸರ್ವತೋಮುಖವಾಗಿ ಪ್ರಗತಿ ಹೊಂದಿತ್ತೆಂದು ಹೇಳಬಹುದು.

ಜನಪದ ಸಾಹಿತ್ಯವು ಒಡೆಯರ ಸಂಸ್ಕೃತಿ ಚರಿತ್ರೆಯ ಅಧ್ಯಯನಕ್ಕೆ ಹೆಚ್ಚಿನ ಸಹಕಾರಿಯಾಗಿವೆ. ಮಲೆಮಹದೇಶ್ವರನ ಮೇಲಿನ ಕಾವ್ಯ, ಮಂಟೇಸ್ವಾಮಿಯ ಮೇಲಿನ ಕಾವ್ಯಗಳು ಇದಕ್ಕೆ ಹೆಚ್ಚಿನ ಸಾಕ್ಷಿಯಾಗಿವೆ. ಈ ಕಾವ್ಯಗಳು ಅಂದಿನ ಗ್ರಾಮೀಣ ಜನರ ಸಂಸ್ಕೃತಿಯನ್ನು ಹೊರ ಚೆಲ್ಲುತ್ತವೆ.

ಈ ಜನಪದ ಮಹಾಕಾವ್ಯಗಳೇ ಅಂದಿನ ಸಾಮಾನ್ಯ ಆಹಾರಪದ್ಧತಿ, ವಸತಿ, ಬಟ್ಟೆ, ಹಬ್ಬ, ಜಾತ್ರೆ ರಥೋತ್ಸವ, ಮದುವೆ, ಜನನ, ಮರಣ ಮುಂತಾದ ಸಂಸ್ಕೃತಿಯ ಅಧ್ಯಯನಕ್ಕೆ ಅರ್ಥವಾಗಿವೆ. ಸಂಸ್ಕೃತಿ ಅಧ್ಯಯನಕ್ಕೆ ಜನಪದ ಸಾಹಿತ್ಯವೇ ಮೂಲಬೇರು ಎಂದು ಹೇಳಬಹುದು.

***

## ೬. ಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ ಮತ್ತು ನಾಟಕ

೧೩೯೯ರಲ್ಲಿಯೇ ಅಸ್ತಿತ್ವಕ್ಕೆ ಬಂದ ಮೈಸೂರು ಒಡೆಯರು ತಮಗೆ ಸಿಕ್ಕಿದ್ದ ಅವಕಾಶವನ್ನು ಉತ್ತಮ ಕೆಲಸಗಳಿಗಾಗಿ ವಿನಿಯೋಗಿಸಿಕೊಂಡು ಚಾರಿತ್ರಿಕ ವ್ಯಕ್ತಿಗಳೆನ್ನಿಸಿಕೊಂಡಿದ್ದಾರೆ. ಇವರ ಕಾಲದಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ ಮತ್ತು ಚಿತ್ರಕಲೆಗಳು ಹೆಚ್ಚಿನ ಪ್ರೋತ್ಸಾಹ ಪಡೆದವು ವಿಶ್ವವಿಖ್ಯಾತವೆನ್ನಿಸಿರುವ ಮೈಸೂರು ಅರಮನೆಯ ಇದಕ್ಕೆ ಸಾಕ್ಷಿಯಾಗಿದೆ.

**ವಾಸ್ತುಶಿಲ್ಪ**

ಭಾರತದ ಮೇಲೆ ಪಾಶ್ಚಾತ್ಯ ಸಂಸ್ಕೃತಿಯು ಬೀರಿದ ಪ್ರಭಾವದ ಫಲವಾಗಿ ಮೈಸೂರು ಅರಸರು ಯುರೋಪಿನ ಪುರಾತನ ಶೈಲಿಯನ್ನೂ, ದೇಶಿಯ ಶೈಲಿಯನ್ನೂ ಮಿಶ್ರಣಗೊಳಿಸಿದ ವಾಸ್ತುವನ್ನು ಬಳಕೆಗೆ ತಂದರು. ಮೊದಲು ಎತ್ತಕಡೆ ನೋಡಿದರೂ ಪಾಶ್ಚಾತ್ಯರ ಗಾಥಿಕ್ ಶೈಲಿಯಲ್ಲೋ, ಗ್ರೀಕರ ಮತ್ತು ರೋಮನ್ನರ ಅನುಕರಣ ರೂಪವಾದ ಪುನರುಜ್ಜೀವನ ರೆನ್‌ಸೆಗ್ಸ್ ಶೈಲಿಯಲ್ಲೋ ಕಟ್ಟಡಗಳು ನಿರ್ಮಿತವಾಗ ತೊಡಗಿದವು. ನಂತರ ದೇಶೀಯ ಶೈಲಿಯಲ್ಲೇ ಕಟ್ಟಬೇಕೆಂಬ ಆಸೆ ಮೂಡತೊಗಿತು. ಸಂಸ್ಥಾನದಲ್ಲಿ ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಂಡ ಪ್ರಮುಖ ಕಟ್ಟಡಗಳೆಂದರೆ ಜಯಲಕ್ಷ್ಮಿ ವಿಲಾಸ ಅರಮನೆ, ಮಾನಸ ಗಂಗೋತ್ರಿ, ಮೈಸೂರು (೧೯೧೦), ರಾಜೇಂದ್ರ ವಿಲಾಸ ಅರಮನೆ, ಚಾಮುಂಡಿಬೆಟ್ಟ, ಮೈಸೂರು (೧೯೦೦-೧೯೧೦) ಕಾವೇರಿ ಪಟ್ಟನಂ ಛತ್ರ, ಗಾಂಧೀ ಚೌಕ, ಮೈಸೂರು (೧೯೧೦) ಗನ್ ಹೌಸ್ ಕಟ್ಟಡ, ಅರಮನೆಯ ದಕ್ಷಿಣಕ್ಕೆ, ಮೈಸೂರು (೧೯೧೦) ಬೆಂಗಳೂರು ಅರಮನೆ (೧೯೧೦ - ೨೦) ಸೆಂಟ್ರಲ್ ಕಾಲೇಜು, ಬೆಂಗಳೂರು (೧೯೧೦ - ೨೦) ಲೋಕರಂಜನ್ ಮಹಾಲ್, ಇಟ್ಟಿಗೆ ಗೂಡು, ಮೈಸೂರು (೧೯೦೦), ಅಂಬಾ ವಿಲಾಸ ಅರಮನೆ ಮೈಸೂರು ಅರಮನೆ (೧೯೧೧ - ೧೨) ಚಾಮುಂಡಿ ಗೆಸ್ಟ್ ಹೌಸ್, ಮೈಸೂರು (೧೯೧೦ - ೧೨), ಚಾಮರಾಜೇಂದ್ರ ಶೈಕ್ಷಣಿಕ ಶಾಲೆ, ಸಯ್ಯಾಜಿರಾವ್ ರಸ್ತೆ, ಮೈಸೂರು (೧೯೦೬ ೧೯೧೭), ಬನುಮಯ್ಯ ಶಾಲೆ, ಮೈಸೂರು (೧೯೧೭) ಕ್ಯಾಪ್ಟನ್ ಕೃಷ್ಣರವರ ವಸತಿಗೃಹ, ಮೈಸೂರು (೧೯೧೦-೧೯೨೦), ಕೇಂದ್ರ ಅಂಚೆ ಮತ್ತು ತಂತಿ ಕಛೇರಿ, ಮೈಸೂರು (೧೯೧೬ - ೧೯೧೮), ಕೃಷ್ಣರಾಜೇಂದ್ರ ಅಸ್ಪತ್ರೆ, ಮೈಸೂರು (೧೯೧೮) ಜನತಾ ಬಜಾರ್ ಕಟ್ಟಡ, ಮೈಸೂರು (೧೯೨೦) ವಿಕ್ಟೋರಿಯಾ ಅಸ್ಪತ್ರೆ ಬೆಂಗಳೂರು (೧೯೨೦) ಬ್ಯಾಂಡ್ ಹೌಸ್ ಮಿಜಾನ್ ರಸ್ತೆ ಮೈಸೂರು(೧೯೨೦) ಸಾರ್ವಜನಿಕ ಕಛೇರಿಗಳು, ಸಯ್ಯಾಜಿರಾವ್ ರಸ್ತೆ ಮೈಸೂರು (೧೯೨೧), ಮೈಸೂರು ಮಹಾನಗರ ಪಾಲಿಕೆ. ಮೈಸೂರು (೧೯೨೧) ಲಲಿತ ಮಹಲ್ ಅರಮನೆ, ಮೈಸೂರು(೧೯೨೧) ಸರ್ಕಾರಿ ವೈದ್ಯಕೀಯ ಕಾಲೇಜು (೧೯೨೪), ಯುವರಾಜ ಕಾಲೇಕು, ಮೈಸೂರು (೧೯೨೭) ವಾಣಿವಿಲಾಸ ಮಾರುಕಟ್ಟೆ ಮೈಸೂರು (೧೯೨೮) ವುಡ್ ಲ್ಯಾಂಡ್ಸ್ ಸಿನಿಮಾ ಮಂದಿರ (ಲಿಜೆನ್ಸಿ) ಮೈಸೂರು (೧೯೨೮ - ೩೨), ಚಲುವಾಂಬ ಅಸ್ಪತ್ರೆ ಮೈಸೂರು (೧೯೩೮) ಶ್ರೀ ಜಯದೇವ ಮುರುಘರಾಜೇಂದ್ರ ಪೆಥಾಲಜಿಕಲ್ ಅಸ್ಪತ್ರ ಮೈಸೂರು(೧೯೩೮) ಇನ್ನೂ ಹಲವಾರು ವಾಸ್ತುಶಿಲ್ಪ ಕಟ್ಟಡಗಳು, ಇವುಗಳಲ್ಲಿ ಮುಖ್ಯವಾದ ವಾಸ್ತುಶಿಲ್ಪಗಳ ಬಗ್ಗೆ ವಿವರಗಳನ್ನು ಕೊಡಲಾಗಿದೆ. ಬಹುಮುಖ್ಯವಾಗಿ ಅಂದಿನ ಐರೋಪ್ಯ ವಾಸ್ತುಶೈಲಿಯ ಸ್ವಾರಸ್ಯವನ್ನು ಸೆಳೆಯುವಲ್ಲಿ ಆ ಕಾಲದ ಕಟ್ಟಡಗಳತ್ತ ಕಣ್ಣು ಹಾಯಿಸಬೇಕು. ಮುಖ್ಯವಾಗಿ ಹಳೇ ಮೈಸೂರು ಸಂಸ್ಥಾನದಲ್ಲಿ ಐರೋಪ್ಯ ಶೈಲಿ ಜನಪ್ರಿಯವಾಯಿತು. ಇದರಿಂದ ನಾಡಿನ ವಾಸ್ತಿಶಿಲ್ಪಕ್ಕೆ ಹೊಸ ಆಯಾಮ ಸೇರಿಕೊಂಡಿತ್ತೆಂದರೂ ತಪ್ಪಾಗದು, ಐರೋಪ್ಯ ಇಂಜನಿಯರ್ ಗಳು ತಮಗೆ ಪರಿಚಿತವಾಗಿ ಆಯೋನಿಕ್, ಡೋಲಿಕ್, ಕೊರಿಂತಿಯನ್, ಗಾಂಥಿಕ್, ರಿನೋಸಾನ್ಸ್, ಅಮೆರಿಕನ್ ಮುಂತಾದ ವಿವಿಧ ವಿದೇಶಿ ಶೈಲಿಗಳನ್ನು ಈ ನಾಡಿಗೆ ಎರವಲು ತಂದರು. ಐರೋಪ್ಯ ವಾಸ್ತುಶೈಲಿಯಲ್ಲೇ ಗಂಡು ಶೈಲಿ ಎಂದು ಹೆಸರಾದ ಡೋರಿಕ್ ಮಾದರಿಯ ಕಂಬ ಸಾಲುಗಳನ್ನು ಸೊಗಸಾಗಿ ಅಳವಡಿಸಲಾಯಿತು. ಇದಕ್ಕೆ ಉದಾಹರಣೆ ಎಂದರೆ ಜಯಲಕ್ಷ್ಮಿ ಅರಮನೆ, ಲಲಿತ ಮಹಲ್ ಕಟ್ಟಡ ಚಲುವಾಂಬ ಮಹಿಳೆ, ಮೈಸೂರು ವಿಶ್ವವಿದ್ಯಾಲನಿಲಯ ಕೇಂದ್ರ ಕಛೇರಿ, ಕೃಷ್ಣರಾಜೇಂದ್ರ ಅಸ್ಪತ್ರೆ ಮುಂತಾದವುಗಳನ್ನು ಗುರುತಿಸಬಹುದು. ಈ ಕಂಬಗಳು ಅಲಂಕರಣದಲ್ಲಿ ಕಡಿಮೆಯಾದರೂ ನೋಟಕ್ಕೆ ಸೊಗಸಾಗಿರುತ್ತವೆ. ಒಂದೇ ಕಲ್ಲಿನಲ್ಲಿ ಕೆತ್ತಿದಂತೆ ಕಾಣುವ ಇಟ್ಟಿಗೆ ಗಾರೆ ಕಂಬಗಳು ಬುಡದಲ್ಲಿ ದಪ್ಪಾಗಿದ್ದು ಮೇಲೆ ಹೋದಂತೆ ತೆಳುವಾಗಿರುತ್ತವೆ. ದೂರದ ನೋಟಕ್ಕೆ ಈ ಸ್ತಂಭ ಮಾದರಿ ಅದ್ಭುತವಾಗಿರುತ್ತದೆ.

**ಮೈಸೂರು ಅರಮನೆ**

ಮೈಸೂರಿನ ಅರಮನೆಗಳ ನಗರ. ಈ ಅರಮನೆಗಳಲ್ಲೇ ಬಹುಮುಖ್ಯವಾದದ್ದು ವಿಶ್ವವಿಖ್ಯಾತವೆಂದೇ ಹೆಸರುವಾಸಿಯಾಗಿರುವ ಮೈಸೂರು ಅರಮನೆ ಅಥವಾ ಅಂಬಾ ವಿಲಾಸ ಅರಮನೆ. ಕ್ರಿ.ಶ. ೧೪ನೇ ಶತಮಾನದಲ್ಲಿಯೇ ಇಲ್ಲಿ ಅರಮನೆ ಇತ್ತೆಂದು ಮೈಸೂರು ರಾಜವಂಶಾವಳಿಯಿಂದ ತಿಳಿದುಬರುತ್ತದೆ. ಕ್ರ.ಶ. ೧೬೩೦ರಲ್ಲಿ ಸಿಡಿಲು ಬಡಿದು ಹಾನಿಯಾದ ಅರಮನೆಯನ್ನು ಕಂಠೀರವ ನರಸರಾಜ ಒಡೆಯರು ಅದೇ ಸ್ಥಳದಲ್ಲಿಯೇ ಪುನಃ ನಿರ್ಮಿಸಿದರು. ೧೮೦೧ರ ಒಳಗೆ ಪ್ರಾಚೀನ ಅರಮನೆ ಇದ್ದ ಸ್ಥಳದಲ್ಲಿಯೇ ಅದೇ ನಕ್ಷೆಯಂತೆ ಮರದ ಅರಮನೆಯೊಂದು ನಿರ್ಮಾಣವಾಯಿತ್ತೆಂದು ಐತಿಹಾಸಿಕ ದಾಖಲೆಗಳಿಂದ ನಮಗೆ ತಿಳಿದುಬರುತ್ತದೆ. ೧೮೯೭ರಲ್ಲಿ ಆಕಸ್ಮಿಕ ಅಗ್ನಿಸ್ಪರ್ಶದಿಂದಾಗಿ ಈ ಮರದ ಅರಮನೆಯು ನಾಶವಾಯಿತು. ಹೆನ್ರಿ ಇರ್ವಿನ್ ಎಂಬ ಐರೋಪ್ಯ ವಾಸ್ತುಶಿಲ್ಪಿಯ ನಕ್ಷೆಯಂತೆ ಇಂದು ನಾವು ನೋಡುವ ಅರಮನೆಯನ್ನು ನಿರ್ಮಿಸಲಾಯಿತು. ೧೫ ವರ್ಷಗಳು ನಿರ್ಮಾಣ ಕಾರ್ಯ ನಡೆದಿರುವ ಇಂಡೋ ಸಾರಸನಿಕ್ ಶೈಲಿಯ ಮೈಸೂರು ಅರಮನೆ ಸುವಿಖ್ಯಾತವಾದದ್ದು. ಇದು ೧೯೧೧ - ೧೨ರಲ್ಲಿ ಸಂಪೂರ್ಣವಾಯಿತು. ಅಂದ, ಚಂದ, ಕುಸುರಿ, ಕೆಲ, ನಯಗಾರಿಕೆ, ಭವ್ಯತೆ, ತಂತ್ರಗಾರಿಕೆಯ ಸಮನ್ವಯದಲ್ಲಿ ಅದ್ಭುತವಾದ ಈ ಅರಮನೆಯಂಥದ್ದು ಇನ್ನೊಂದಿಲ್ಲ. ಈ ಅರಮನೆಯ ಹಿಂದೂ, ಮುಸ್ಲಿಂ ಮತ್ತು ಐರೋಪ್ಯ ಶೈಲಿಗಳ ಆಕರ್ಷಣೆಯ ಸಂಗಮ. ಈ ಕಟ್ಟಡ ಮೈಸೂರಿನ ವಾಸ್ತುಶಿಲ್ಪಿಗೆ ಕೈಗನ್ನಡಿಯಂತಿದೆ.

**ಮೂರ್ತಿಶಿಲ್ಪ**

ಒಡೆಯರ್ ರವರು ಮೂರ್ತಿಶಿಲ್ಪಕ್ಕೆ ಹೆಚ್ಚಿನ ಆದ್ಯತೆ ನೀಡಿರುವುದು ಆಧಾರಗಳಿಂದ ತಿಳಿದುಬರುತ್ತದೆ. ಶಿಲ್ಪಶಾಸ್ತ್ರ ಮತ್ತು ಆಗಮಶಾಸ್ತ್ರಗಳಲ್ಲಿ ನಿರೂಪಿತವಾದ ಲಕ್ಷಣಗಳಿಗನುಸಾರವಾಗಿ ಪ್ರತಿಮೆಗಳನ್ನು ಕಲ್ಲಿನಲ್ಲಿ, ಗಾರೆಯಲ್ಲಿ, ಕಂಚಿನಲ್ಲಿ ರೂಪಿಸಿರುವುದನ್ನು ಹೆಚ್ಚು ಕಟ್ಟುನಿಟ್ಟಾಗಿ ಅನುಸರಿಸಿದ ಕಾರಣ ಶಿಲ್ಪಿಯ ಸ್ವಾತಂತ್ರ್ಯ ಮೊಟಕಾಗಿ ವಿಗ್ರಹಗಳು ಕೃತಕವೆಂಬಂತೆ ಕಾಣುತ್ತವೆ. ಮೈಸೂರು ಒಡೆಯರು ಈ ಕಲೆಯ ಅಭಿವೃದ್ಧಿಗಾಗಿಯೇ ಚಾಮರಾಜೇಂದ್ರ ಟೆಕ್ನಿಕಲ್ ಇನ್ ಸ್ಟಿಟ್ಯೂಟ್ ಸ್ಥಾಪಿಸಿದರು. ಲೋಹ ಶಿಲ್ಪಿ ಚೆನ್ನಾವಾರ್, ಮರದ ಶಿಲ್ಪಿ ಎಸ್. ನರಸಿಂಹಾಚಾರ್, ಶಿಲ್ಪಿ ಸಿದ್ಧಾಂತಿ ಅಭಿನವ ಜಕಣಾಚಾರ್ಯರೆಂದು ಪ್ರಸಿದ್ಧರಾದ ಸಿದ್ಧಲಿಂಗಸ್ವಾಮಿಗಳು ಪ್ರಾಚೀನ ಶಿಲ್ಪಶಾಸ್ತ್ರದ ನಿಯಮಗಳಿಗೆ ತಕ್ಕಂತೆ ದೇವರಮೂರ್ತಿ ಹಾಗೂ ವರ್ಣಚಿತ್ರಗಳನ್ನು ನಿರ್ಮಿಸಿ ಖ್ಯಾತರಾಗಿದ್ದಾರೆ. ಬೆಳ್ಳಿಯಲ್ಲಿನ ಕುಸುರಿ ಕೆಲಸಕ್ಕೆ ಹೆಸರಾಗಿದ್ದ ಡಿ.ವಿ ಸುಬ್ಬಣ್ಣಾಚಾರ್ಯರು ರಚಿಸಿರುವ ಸರಸ್ವತಿ, ಚಾಮುಂಡಿ, ಉಡುಪಿ ಕೃಷ್ಣ ಮೊದಲಾದವು ಸೇರಿವೆ. ಅಂಕಾಪ್ಪಾಚಾರ್ಯರು, ರೇಣುಕಾಚಾರ್ಯರು, ವಿ.ವಿ. ಚೆನ್ನಾಚಾರ್‌ರವರು ಪಂಚಲೋಹದ ವಿಗ್ರಹ ಕೆತ್ತನೆಯಲ್ಲಿ ನೈಪುಣ್ಯತೆಯನ್ನು ಹೊಂದಿದ್ದರು, ಚೆನ್ನಾಚಾರ್ ರವರು ನಿರ್ಮಿಸಿರುವ ಕೈಜೋಡಿಸಿ ನಿಂತಿರುವ ನಾಲ್ವಡಿ ಕೃಷ್ಣರಾಜರ ಪಂಚಲೋಹ ಪ್ರತಿಮೆ ಬೇಲೂರಿನ ದೇವಾಲಯದಲ್ಲಿದೆ. ಅಪೂರ್ವ ಶಿಲ್ಪಿಗಳೆನ್ನಿಸಿದ್ದ ಬಿ. ಬಸಪ್ಪನವರು ಮೈಸೂರು ಅರಮನೆಯಲ್ಲಿ ನಿರ್ಮಿಸಿರುವ ನಾಲ್ವಡಿ ಕೃಷ್ಣರಾಜರೇ ಯಥಾವತ್ತಾಗಿ ರಾಜಠೀವಿಯಿಂದ ಹಸನ್ಮುಖಿಗಳಾಗಿ ಕುಳಿತಿರುವ ಅಪೂರ್ವ ಪ್ರತಿಮೆ ಯಾರನ್ನಾದರೂ ಆಶ್ಚರ್ಯಪಡಿಸುವಂತೆ ಮಾಡದೆ ಇರದು. ಅಂದಿನ ಕಾಲದ ಶಿಲ್ಪ ಚಾತುರ್ಯಕ್ಕೆ ಇದೊಂದು ಕೃತಿ ಸಾಕು ಎಂದೆನ್ನಿಸುತ್ತದೆ.

**ಚಿತ್ರಕಲೆ**

ವಿಜಯನಗರದ ನಂತರ ಚಿತ್ರಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟವರು ಮೈಸೂರು ಅರಸರು. ಇವರ ಕಾಲದಲ್ಲಿ ಅನೇಕ ದೇವಾಲಯ, ಕಟ್ಟಡ ಹಾಗೂ ಅರಮನೆಗಳಲ್ಲಿ ವರ್ಣರಂಜಿತವಾದ ಅಪರೂಪದ ಭಿತ್ತಿ ಚಿತ್ರಗಳ ರಚನೆಯಾಗಿದೆ. ಆಧುನಿಕ ಕಾಲದ ಅರಸರ ಆಳ್ವಿಕೆಯಲ್ಲಿ ಮೈಸೂರು ದೇಶಿಯ ಶೈಲಿಯ ಅಪೂರ್ವ ಚಿತ್ರಪಟಗಳು, ಮನೆ, ಮಂದಿರ ಅರಮನೆ, ಗುರುಮನೆ, ಪಾಠಶಾಲೆಗಳಲ್ಲಿ ಹೆಚ್ಚಾಗಿ ದೊರಕುತ್ತವೆ. ಇವುಗಳನ್ನು ಮನೆಯಗೋಡೆ, ರಾಜ್ಯ ಹಲಗೆ, ತಾಟಗಳು ಹಾಗೂ ಬಟ್ಟೆಯ ಮೇಲೆ ಬರೆಯಲಾಗಿದೆ. ಹೆಚ್ಚಾಗಿ ಈ ಚಿತ್ರಕಲೆ ಇಂದು ದೇವಾಲಯಗಳು, ಮಠಗಳು, ಮಹಲುಗಳು, ಗೋಡೆ ಹಾಗೂ ಚಾವಣಿಗಳು ಮೇಲೆ ಅವು ಇಂದು ಉಳಿದುಬಂದಿವೆ. ಜಲ ಅಥವಾ ತೈಲವರ್ಣದಿಂದ ಗೋಡೆಗಳನ್ನೋ, ಚಾವಣಿಗಳನ್ನೋ, ತೊಲೆಗಳನ್ನೋ ಆಧಾರವಾಗಿ ಮಾಡಿಕೊಂಡು ವಿಸ್ತಾರವಾದ ಚಿತ್ರರಚನೆ ಮಾಡಿರುವುದು ಕಂಡುಬರುತ್ತದೆ.

ಅಂದು ಇದ್ದ ಚಿತ್ರ ಕಲಾಗಾರರೆಂದರೆ ಜರ್ಮನಿಯ ಜಿಲಾದೀನ್ ಉಡ್ ವಿಲ್ ಇಂಗ್ಲಿಂಡಿನ ಸ್ವರ್ಲಿಂಗ್, ಇಟಲಿಯ ಕೊಲ್ ಟನ್, ಮೈಕ್ ಸ್ಲರ್, ತಿರುವಾಂಕೂರಿನ ರಾಜು ರವಿವರ್ಮ, ಇವರ ತಮ್ಮ ರಾಮವರ್ಮ ಮುಂತಾದವರನ್ನು ಸೂಚಿಸಬಹುದು. ಸ್ಥಳೀಯ ಕಲಾವಿದರಾದ ಕೆ. ಕೇಶವಯ್ಯ, ವೈ. ನಾಗರಾಜು, ಎಸ್. ನಂಜುಂಡಸ್ವಾಮಿ ವೈ. ಸುಬ್ರಹ್ಮಣ್ಯರಾಜು, ಎಸ್. ಆರ್. ಆಯ್ಯಂಗಾರ್, ಶಂಕರರಾಜು, ಎಸ್. ಎನ್ ಸ್ವಾಮಿಗಳವರಿಂದ ಅರಮನೆಯ ಗೋಡೆಗಳ ಮೇಲೆ ಅಂದಿನ ಸಾಂಸ್ಕೃತಿಕ ಅಂಶವನ್ನು ಸೂಚಿಸುವ ಸನ್ನಿವೇಶಗಳನ್ನು ವರ್ಣನಾತ್ಮಕವಾಗಿ ಬರೆಸಿರುವುದು ಕಂಡುಬರುತ್ತದೆ. ಅರಮನೆಯ ಕಲಾವಿದರಾಗಿದ್ದ ಎಂ.ಎ. ಅಜೀಜ್ ರವರು ಹಿರಿಯ ವರ್ಣಚಿತ್ರಕಾರರಾಗಿದ್ದರು. ಜಲವರ್ಣ ಹಾಗೂ ತೈಲ ವರ್ಣದಲ್ಲಿ ಇವರು ರಚಿಸಿರುವ ಚಿತ್ರಗಳು ವಿಶ್ವವಿಖ್ಯಾತವಾಗಿವೆ.

ಹೀಗೆ ಮೈಸೂರಿನ ಅರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಸಂಸ್ಥಾನದಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಚಿತ್ರಕಲೆಗಳಿಗೆ ಅಪಾರ ಪ್ರೋತ್ಸಾಹವನ್ನು ಕೊಟ್ಟು ಅವುಗಳ ಬೆಳವಣಿಗೆಗೆ ಕಾರಣಕರ್ತರಾದರು. ಒಂದು ರೀತಿಯಲ್ಲಿ ಆಧುನಿಕ ಶಿಲ್ಪಕಲೆಗೆ ಬುನಾದಿ ಹಾಕಿದವರೆಂದರೆ ಮೈಸೂರಿನ ಅರಸರು.

**ಸಂಗೀತ**

ಮೈಸೂರು ಅರಸರ ಕಾಲದಲ್ಲಿ ಕರ್ನಾಟಕ ಸಂಗೀತವು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತೆನ್ನಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಚಾಮರಾಜ ಒಡೆಯರು ಈ ಕಲೆಯನ್ನು ಅತ್ಯಂತ ಆಸಕ್ತಿ ಮತ್ತು ಶ್ರದ್ಧೆಯಿಂದ ಪೋಷಿಸಿಕೊಂಡು ಬಂದಿದ್ದರು. ಆಧುನಿಕ ಮೈಸೂರಿನ ಶಿಲ್ಪಿ ಎಂದೇ ಹೆಸರಾಗಿರುವ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಕರ್ನಾಟಕ ಸಂಗೀತ, ಹಿಂದೂ ಸ್ಥಾನಿ ಸಂಗೀತ, ಪಾಶ್ಚಿಮಾತ್ಯ ಸಂಗೀತಗಳಲ್ಲಿ ಸಮಾನವಾದ ಆಸಕ್ತಿ ಹಾಗೂ ಪರಿಣಿತಯನ್ನು ಪಡೆದಿದ್ದರೆಂದು ಸಿ.ಕೆ ವೆಂಕಟರಾಮಯ್ಯನವರು ತಮ್ಮ 'ಆಳಿದ ಮಹಾಸ್ವಾಮಿಗಳು' ಎಂಬ ಪುಸ್ತಕದಲ್ಲಿ ಚರ್ಚಿಸುತ್ತಾರೆ.

ನಾಲ್ವಡಿಯವರ ಅಸ್ಥಾನದಲ್ಲಿ ಕರ್ನಾಟಕ ಸಂಗೀತದ ದಿಗ್ಗಜರೆನ್ನಿಸಿಕೊಂಡಿದ್ದ ಮೈಸೂರು ವಾಸುದೇವಾಚಾರ್ಯ, ವೀಣೇ ಶೇಷಣ್ಣ, ವೀಣೆ ವೆಂಕಟಗಿರಿಯಪ್ಪ ಚಂದ್ರಶೇಖರ ಶಾಸ್ತ್ರಿ, ಜಯರಾವ್, ಶ್ರೀಕಂಠಶಾಸ್ತ್ರಿ, ತಮ್ಮಯ್ಯ, ವೀಣೆ ಸುಬ್ಬಣ್ಣ ಶಿವರಾಮಯ್ಯ, ಬಿಡಾರ ಕೃಷ್ಣಪ್ಪ ಭೈರವಿ, ಕೆಂಪೇಗೌಡ, ಲಕ್ಷ್ಮಿ ನಾರಾಯಣಪ್ಪ ತಿಕಟ್ಟೆ ಕೃಷ್ಣಯ್ಯಾಂಗಾರ್, ಪಟೇಲ್ ಚೌಡಯ್ಯ. ಪಟೇಲು ಶಿವರುದ್ರಪ್ಪ, ದೇವೇಂದ್ರಪ್ಪ ವೆಂಕಟಗಿರಿಯಪ್ಪ. ದೊರೆಸ್ವಾಮಿ ಐಯ್ಯಂಗಾರ್, ಮೃದುಂಗದ ಮುತ್ತು ತೇವರ್, ಬಿ ಪುಟ್ಟಸ್ವಾಮಯ್ಯ, ಬೆಂಗಳೂರು ನಾಗರತ್ನಮ್ಮ, ಆರ್.ಎಸ್. ಕೇಶವಮೂರ್ತಿಗಳಿಗೆ ಆಶ್ರಯ ನೀಡಿ ಸಂಗೀತ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತ ಹೀಗೆ ಅಂದಿನ ಆಸ್ಥಾನವು ಅನೇಕ ಪ್ರಸಿದ್ದ ಕಲಾವಿದರಿಗೆ ಆಶ್ರಯ ಸ್ಥಾನವಾಗಿತ್ತು.

ಹಿಂದೂಸ್ತಾನಿ ಸಂಗೀತವು ಆಧುನಿಕ ಮೈಸೂರು ಸಂಸ್ಥಾನದಲ್ಲಿ ವಿಜೃಂಭಿಸಿ ನಾಡಿನ ಸಂಸ್ಕೃತಿಯನ್ನು ಹೆಚ್ಚಿಸಿದೆ. ಪ್ರಸಿದ್ಧ ಸಂಗೀತಗಾರಾದ ಆಗ್ರಾ ಘರಾನೆಯ ನಿಸ್ಸಾರ್ ಹುಸೇನ್ (ನತ್ತನ್ ಖಾನ್) ಅವರು ನಾಲ್ವಡಿಯವರ ಆಸ್ಥಾನದಲ್ಲಿದ್ದರು. ಫಯಜ್ ಹುಸೇನ್‌ಖಾನ್ ರವರು ಮೈಸೂರಿನಲ್ಲಿ ಅನೇಕ ವರ್ಷಗಳ ಕಾಲ ನೆಲೆನಿಂತು ಹಿಂದೂಸ್ಥಾನಿ ಸಂಗೀತಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ನಾಲ್ವಡಿಯವರ ಅಸ್ಥಾನದಲ್ಲಿದ್ದ ಹಿಂದೂಸ್ತಾನಿ ಸಂಗೀತಗಾರರೆಂದರೆ ಜೈಪುರದ ರಹಿಮತ್, ಹುಸೇನ್‌ಖಾನ್, ಷಂಸುದ್ದೀನ್‌ಖಾನ್, ಇಂದೂರಿನ ಜಮಾರ್ ಖಾನ್, ಇನಾಯತ್‌ಖಾನ್, ಲತೀಫ್‌ಖಾನ್ ಉದಯಪುರದ ಬೋರಾಖಾನ್, ಬರ್‌ಹಾಂಪುರದ ವಜೀರ್ ಖಾನ್, ಹಸನ್‌ಖಾನ್, ಬೊಂಬಾಯಿಯ ಕೃಷ್ಣಬಾಯಿ ಮತ್ತು ಅಬಸುಲ್ ಕರೀಂಖಾನ್ ಹಾಗೂ ದೆಹಲಿಯ ಮಹಮದ್‌ಖಾನ್ ಮೊದಲಾದವರು ಪ್ರಮುಖರೆನ್ನಿಸಿದ್ದಾರೆ. ಇದರಿಂದ ಮೈಸೂರಿನಲ್ಲಿ ಹಿಂದೂಸ್ತಾನಿ ಸಂಗೀತ ಭಾರತದಲ್ಲಿಯೇ ಪ್ರಸಿದ್ಧಿ ಪಡೆಯಿತು.

**ನಾಟಕ**

ಮೈಸೂರು ಸಂಸ್ಥಾನದ ಜನರ ಸಾಂಸ್ಕೃತಿಕ ಬದುಕಿನಲ್ಲಿ ಪ್ರಮುಖವಾಗಿ ರಂಗಭೂಮಿ ಕಲೆಯು ವಿಶಿಷ್ಟವಾದ ಇತಿಹಾಸ ಸೃಷ್ಟಿಸಿಕೊಂಡಿದೆ ಎನ್ನಬಹುದು. ಅಕ್ಷರಜ್ಞಾನ ತಿಳಿಯದಿದ್ದಾಗ ಮೌಖಿಕವಾಗಿಯೇ ಸೃಷ್ಟಿಗೊಂಡ ಈ ಕಲೆ ಮೊದಲು ಪ್ರಮುಖವಾಗಿ ಅಣಕು ದನಿಯಲ್ಲಿಯೇ ಪ್ರಯೋಗವಾಗುತ್ತಿತ್ತೆಂದು ಹೇಳಬಹುದು.

ಮೈಸೂರು ಸಂಸ್ಥಾನದ ಅರಸರು ಆಳ್ವಿಕೆಯು ರಂಗಭೂಮಿ ನಾಟಕಕ್ಕೆ ಹಾಗೂ ಕನ್ನಡ ನಾಟಕ ರಂಗಕ್ಕೆ ಅಮೂಲ್ಯ ಸೇವೆ ಸಲ್ಲಿಸಿದ್ದಾರೆ. ಜೊತೆಗೆ ಕನ್ನಡದ ಪ್ರಪ್ರಥಮ ನಾಟಕ ಕೃತಿಯೆನ್ನಿಸಿಕೊಂಡಿರುವ ಸಿಂಗರಾರ್ಯನ "ಮಿತ್ರಾವಿಂದ ಗೋವಿಂದ ಕೃತಿಯು ಇವರ ಕಾಲದಲ್ಲಿಯೇ ರಚನೆಗೊಂಡು ರಂಗ ಪ್ರವೇಶಿಸಿತ್ತೆಂದರೆ ಅದ್ಭುತವೇ ಸರಿ. ಏಕೆಂದರೆ ನಮ್ಮ ನಾಡಿಗೆ ಸಾವಿರಾರು ವರ್ಷಗಳಷ್ಟು ಇತಿಹಾಸವಿದ್ದರೂ, ವೀರ ಪರಾಕ್ರಮ ರಾಜಮಹಾರಾಜರ ವಂಶಗಳೂ ಆಳ್ವಿಕೆ ನಡೆಸಿ ಮೆರೆದು ಮಣ್ಣಾಗಿದ್ದರೂ ಇವರೆಲ್ಲರ ಸಾಲಿನಲ್ಲಿ ಈ ಹಂತದಲ್ಲಿ ಪ್ರಮುಖವಾಗಿ ನಿಲ್ಲುವ ಸಂಸ್ಥಾನವೇ ಮೈಸೂರು. ಈ ಕನ್ನಡದ ಪ್ರಥಮ ನಾಟಕವು ಕೂಡ ಮೂಲ ರಚನೆಯಾಗಿದೆ. ಶ್ರೀಹರ್ಷನು ಬರೆದ ರತ್ನಾವಳೀ ಎಂಬ ಕೃತಿಯ ರೂಪಾಂತರವೆಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಕ್ರಿ.ಶ. ೯ನೇ ಶತಮಾನದಷ್ಟು ಹಿಂದೆಯೇ ಈ ನಾಟಕ ರಂಗ ಪ್ರವೇಶಗಳ ಇತಿಹಾಸ ಉಲ್ಲೇಖವಿದ್ದರೂ ಅದನ್ನು ಸ್ವಸಂಸ್ಥಾನಕ್ಕೆ ಹೋಲಿಸಿಕೊಂಡರೆ ದೇಶಿ ಎನ್ನಲಾಗುವುದಿಲ್ಲ. ಏಕೆಂದರೆ ಅವುಗಳೆಲ್ಲವೂ ಸಂಸ್ಕೃತ ಮಯವಾಗಿರುತ್ತಿದ್ದವು.

ದೇಶದ ಮಹತ್ವದ ತತ್ವ ನೀತಿಯನ್ನು ಮೈಗೂಡಿಸಿಕೊಂಡು ರಚನೆಯಾಗಿರುವ ರಾಮಾಯಣ ಮತ್ತು ಮಹಾಭಾರತದ ಕಥೆಗಳು ತೋಂಡಿ ಸಂಪ್ರದಾಯದಲ್ಲಿ ದೊರಕಿದಾಗ ಸಂಸ್ಥಾನದ ಜನರಲ್ಲಿ ರಂಗಭೂಮಿಯ ಕ್ರಾಂತಿ ಉಂಟಾಗಿತ್ತೆನ್ನಬಹುದು, ಕಥೆ, ಧರ್ಮ, ನೀತಿ, ಮುಕ್ತಿ, ಕಾವ್ಯ ತತ್ವಭೋದನೆ, ರಸಿಕತೆಗಳೆಲ್ಲವೂ ಈ ಮಹಾ ಕಾವ್ಯಗಳಿಂದ ದೊರಕಲಾರಂಭಿಸಿತು. ಇಂದಿಗೂ ಸಹ ನಮ್ಮ ಹಳ್ಳಿಗಾಡಿನ ಅನಕ್ಷರಸ್ಥ (ಅಕ್ಷರಸ್ಥರೂ ಸಹ ಇತ್ತೀಚೆಗೆ ಹೆಚ್ಚಾಗಿ ಇಂತಹ ರಂಗ ಪ್ರದರ್ಶನಕ್ಕೆ ಒಲಿಯುತ್ತಿರುವುದು ಕಂಡುಬರುತ್ತದೆ) ಜನ ಸಾಮಾನ್ಯರ ಕಲ್ಪನೆಯ ಮೇಲೆ ಮನೆ ಮಾಡಿಕೊಂಡಿರುವ ಈ ಸಂಸ್ಕೃತಿಯು ಆಧುನಿಕತೆಯ ಅಲೆಯಲ್ಲಿಯೂ ಬೆಳೆದು ಬರುತ್ತಿದೆ. ಅಂದು ಈ ಕಾವ್ಯಗಳನ್ನು ತಿಳಿದಿದ್ದ ಕೆಲವೇ ಪಂಡಿತರು ಹಳ್ಳಿಯಲ್ಲಿಗೆ ಹೋಗಿ ನಾಟಕ ಕಲಿಸಿ ಜಾತ್ರೆ, ಹಬ್ಬ, ಉತ್ಸವ, ಸಂತೆಗಳ ಸಮಾರಂಭಗಳಲ್ಲಿ ಅಭಿನಯಿಸುವಂತೆ ಮಾಡುವಲ್ಲಿ ತಲ್ಲಿನರಾಗಿರುತ್ತಿದ್ದರು. ನಂತರ ದೇವತಾ ಕಥೆಗಳು ಹಾಗೂ (ಧಾರ್ಮಿಕ ಅಂಶ ಸೂಚಿಸುವ ಕಥೆ) ರಾಕ್ಷಸ ಕಥೆಗಳನ್ನು (ಕೆಟ್ಟದ್ದನ್ನು ತೊಲಗಿಸುವ ಸಂಕೇತವಾಗಿ) ಸೃಷ್ಟಿಸಿ ರಂಗದಲ್ಲಿ ಪ್ರದರ್ಶಿಸಲಾರಂಭಿಸಿದರು. ಹಳ್ಳಿಯ ನಾಟಕಗಳಲ್ಲಿ ಬಹುಪಾಲು ರೀತಿಯಲ್ಲಿ ಪೌರಾಣಿಕ ವಸ್ತುಗಳಿದ್ದು ಅಲ್ಲಿಯ ಪಾತ್ರಗಳು ಆ ಸನ್ನಿವೇಶಕ್ಕೆ ತಕ್ಕಂತೆ ಕಥೆಗೆ ಹೊಂದಿಕೊಂಡಂತೆ ಪುನರ್ ನಿರ್ಮಾಣ ಮಾಡಿಕೊಳ್ಳಲಾಗುತ್ತಿತ್ತೆನ್ನಬಹುದು.

ಈ ನಾಟಕಗಳಲ್ಲಿ ಮನೋರಂಜನೆಗೆ ಹೆಚ್ಚಿನ ಮಹತ್ವ ನೀಡಲಾಗಿರುತ್ತಿತ್ತು. ಸಂಸ್ಥಾನದಲ್ಲಿನ ರಂಗಭೂಮಿಯು ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಲಗ್ಗೆ ಹಾಕಿ ಅಲ್ಲಿನ ವ್ಯಾಪಾರಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಹಣಸಂಪಾದಿಸಲು ತೊಡಗಿದ ಮೇಲೆ ಇಲ್ಲಿನ ವ್ಯಾಪಾರಿ ಸಂಸ್ಥೆಗಳು ಪ್ರಮುಖ ಸ್ಥಾನವನ್ನು ಪಡೆಯತೊಡಗಿದ್ದವು. ಆಧುನಿಕ ಮೈಸೂರಿನ ಇತಿಹಾಸದಲ್ಲಿ ಇದು ಹೆಚ್ಚಾಗಿ ಕಂಡುಬಂದಿತ್ತು. ಇದರಲ್ಲಿ ವರದಾಚಾರ್ಯ ಕಂಪನಿ, ಗುಬ್ಬಿ, ವೀರಣ್ಣ ಕಂಪನಿ, ಮಹಮದ್ ಪೀರ್ ಕಂಪನಿ, ಮಳವಳ್ಳಿ ಸುಂದರಮ್ಮ ಕಂಪನಿ, ಹಿರಣ್ಣಯ್ಯ ಕಂಪನಿ ಮೊದಲಾದ ಮಹಾನ್ ಕಲಾವಿದರು ನಾಟಕ ಕಂಪನಿಗಳನ್ನು ಸ್ಥಾಪಿಸಿ ಕನ್ನಡ ನಾಟಕ ಸಂಸ್ಕೃತಿಯನ್ನು ಸಂಸ್ಥಾನದಲ್ಲಿಯೇ ಅಲ್ಲದೆ ಅಕ್ಕಪಕ್ಕದ ರಾಜ್ಯಗಳಲ್ಲಿಯೂ ಉತ್ತಮ ರೀತಿಯಲ್ಲಿ ಪ್ರದರ್ಶಿಸಿ ಪ್ರಸಿದ್ಧವಾಗಿ ಮೆರೆದವು. (ಇಂದಿಗೂ ಸಹ ಇವುಗಳ ಕಂಪು ಉಳಿದುಕೊಂಡಿರುವುದನ್ನು ಕಾಣಬಹುದಾಗಿದೆ) ಗುಬ್ಬಿ ವೀರಣ್ಣನವರ ನಾಟಕವನ್ನು ಸ್ವತಃ ಮಹಾರಾಜರೇ ಕುಳಿತು ಸಂಪೂರ್ಣವಾಗಿ ನೋಡಿ ಅನಂದಿಸಿರುವುದು ಅನೇಕ ದಾಖಲೆಗಳಿಂದ ಕಂಡುಬರುತ್ತದೆ. ಅಂದು ಉತ್ತಮ ನಟನೆ ಮಾಡುವವರಿಗೆ ಹಾಗೂ ಉತ್ತಮ ಹಾಡುಗಾರರಿಗೆ ವಿಶೇಷ ಪ್ರಶಸ್ತಿ ಸನ್ಮಾನಗಳನ್ನು ಮಾಡಿ ಗೌರವಿಸಲಾಗುತ್ತಿತ್ತು. ೨೦ನೇ ಶತಮಾನದ ಪ್ರಮುಖ (ಮೈಸೂರು ಸಂಸ್ಥಾನದ) ನಾಟಕಕಾರರೆಂದರೆ ಟಿ.ಪಿ. ಕೈಲಾಸಂ, ಕ್ಷೀರಸಾಗರ, ಅ.ನ. ಕೃಷ್ಣರಾಯರು ಹಾಗೂ ಪರ್ವತವಾಣಿ ಎಂದು ಹೆಸರಿಸಬಹುದು. ಆಧುನಿಕ ಸಂಸ್ಥಾನದಲ್ಲಿ ನಾಟಕಗಳನ್ನು ಹೆಚ್ಚಾಗಿ ಗಣೇಶೋತ್ಸವ ದಸರ ಮಹೋತ್ಸವ ಮೊದಲಾದ ಹಬ್ಬಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು. ಇಂದು ಇವು ಸಾರ್ವಜನಿಕ ಉತ್ಸವಗಳನ್ನು ಬಿಟ್ಟು ಸ್ವಾತಂತ್ರ ಪ್ರದರ್ಶನಗಳನ್ನು ನಡೆಸಿಕೊಂಡು ಬರುತ್ತಿವೆ.

ಅಂದು ಮಹಾರಾಜರ ಪ್ರೋತ್ಸಾಹವಿದ್ದ ಹಾಗೆ ಇಂದಿನ ಪ್ರಜಾಪ್ರಭುತ್ವದಲ್ಲಿ ಸರ್ಕಾರದ ಪ್ರೋತ್ಸಾಹದಿಂದ ತನ್ನದೆ ಆದ ಆಕಾಡೆಮಿಗಳನ್ನು ಸ್ಥಾಪಿಸಿಕೊಂಡು ನಾಟಕ ರಂಗವು ಬೆಳೆದುಬರುತ್ತಿದೆ.

***

# ಅನುಬಂಧ (೧)

**ಆಕರಗಳು**

ಯಾವುದೇ ವಿಷಯದಲ್ಲಿ ಸಂಶೋಧಕರು ಸಂಶೋಧನೆಯನ್ನು ಕೈಗೊಂಡು ಅದರಲ್ಲಿ ತಲ್ಲೀನರಾಗುವ ಮೊದಲು ಕೈಗೊಳ್ಳಬೇಕಾದ ಪ್ರಮುಖ ಕೆಲಸವೆಂದರೆ ತನ್ನ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ, ಇಲ್ಲಿಯವರೆಗೆ ಆಗಿರುವ ಕೆಲಸಕ್ಕೆ ಸಂಬಂಧಿಸಿದ ಗ್ರಂಥ ವಿವರಣ ಪಟ್ಟಿಯ ಸಿದ್ಧತೆಯಲ್ಲಿ ತೊಡಗುವುದು. ಇದರಿಂದ ಸಂಶೋಧಕರಿಗೆ ತನ್ನ ವಿಷಯಕ್ಕೆ ಸಂಬಂಧಿಸಿರುವ ವಿಷಯ ಸಾಮಗ್ರಿಗಳ ಸಂಪೂರ್ಣ ಅರಿವು ಉಂಟಾಗುತ್ತದೆ. ಹೀಗೆ ಸಂಗ್ರಹಿಸಿದ ವಿಷಯ ಸಾಮಗ್ರಿಗಳನ್ನು ವಿಭಿನ್ನ ನೆಲೆಗಳಿಂದ ಅಭ್ಯಾಸ ನಡೆಸಿ ಸೂಕ್ತ ಸಂದರ್ಭದಲ್ಲಿ ಸೂಕ್ತ ನಿರ್ಧಾರಕ್ಕೆ ಸಂಶೋಧಕ ಬರಬೇಕಾಗುತ್ತದೆ. ಸಂಶೋಧಕರು ಆಧಾರಗಳನ್ನು ಓದಿ ಅದರ ವಿವಿಧ ರೂಪರೇಷಗಳನ್ನು ವಿಶ್ಲೇಷಣೆ ಮಾಡಿಕೊಂಡು ಅದರ ಗರ್ಭದಲ್ಲಿ ಅಡಗಿರುವ ತಾತ್ವಿಕ ವಿಚಾರಗಳನ್ನು ಹೊರತರುವುದು ಹಾಗಿರುತ್ತದೆ ಹಾಗೂ ಅಂದು ಪ್ರಜ್ವಲಿಸಿರುವ ಸೈದ್ಧಾಂತಿಕ ಅಂಶಗಳು ಇಂದಿನ ಸಮಾಜದ ಜನತೆಗೆ ಎಷ್ಟು ಅವಶ್ಯಕ ಎಂಬುದನ್ನು ತುಲನಾತ್ಮಕ ದೃಷ್ಟಿಯಿಂದ ನೋಡಿ ಇತಿಹಾಸ ನಿರ್ಮಿಸಲು ಸಹಕರಿಸುವಂತೆ ಮಾಡಿಕೊಳ್ಳಬೇಕಾಗುತ್ತದೆ. ಈ ಹಂತದಲ್ಲಿ ಸಂಶೋಧಕರು ತಮ್ಮ ಶಕ್ತಿಮೀರಿ ಮುನ್ನಡೆಯಬೇಕಾಗುತ್ತದೆ. ಈ ದೃಷ್ಟಿಯಿಂದಾಗಿ ಇಲ್ಲಿ ಕೈಗೊಂಡಿರುವ ಕರ್ನಾಟಕ ಸಂಸ್ಕೃತಿ ಚರಿತ್ರೆ ಎಂಬ ವಿಷಯದಡಿಯಲ್ಲಿ ವಿಜಯನಗರದ ಸಂಸ್ಕೃತಿ, ಇಕ್ಕೇರಿ ಹಾಗೂ ಮೈಸೂರು ಒಡೆಯರ ಸಂಸ್ಕೃತಿಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಂಡಾಗ ಮೊದಲ ಮಾಹಿತಿ ಸಂಗ್ರಹಿಸಲಾಯಿತು. ಈ ಯೋಜನೆಗೆ ಸಹಕಾರಿಯಾದ ಅಮೂಲ್ಯ ದಾಖಲೆಗಳನ್ನು ಸಂಗ್ರಹಿಸಿ ಕೊನೆಯಲ್ಲಿ ನೀಡಬಯಸಿರುತ್ತೇನೆ.

ಏಕೆಂದರೆ 'No Source, No History' ಎಂದು ಹೇಳುವುದುಂಟು. ಆಕರಗಳ ಸಹಾಯವಿಲ್ಲದೆ ಚರಿತ್ರೆ ಬರೆಯಲು ಸಾಧ್ಯವಿಲ್ಲ. ಕರ್ನಾಟಕ ಸಂಸ್ಕೃತಿ ಚರಿತ್ರೆಯನ್ನು ಬರೆಯುವುದಕ್ಕೆ ಇರುವ ಆಧಾರಗಳು ಕಡಿಮೆ ಎಂದರೆ ತಪ್ಪಾಗದು. ಇರುವಂತಹ ಕೆಲವು ಕೂಡ ಪ್ರಶಂಸೆಗಳೇ ಹೆಚ್ಚು. ಇವುಗಳಲ್ಲಿ ಸಾಹಿತ್ಯ ಕೃತಿಗಳೇ ಇರಬಹುದು, ವಿದೇಶಿಯರ ದಿನಚರಿಗಳೇ ಇರಬಹುದು, ಶಾಸನಗಳಿರಬಹುದು, ಜಾನಪದ ಆಕರಗಳೇ ಇರಬಹುದು. ಇವುಗಳಲ್ಲಿ ತುಂಬ ಎಚ್ಚರಿಕೆಯಿಂದ ಸಂಶೋಧಕರು ಸತ್ಯವನ್ನು ಹುಡುಕಬೇಕಾಗುತ್ತದೆ. ಬೇಕಾದಂತಹ ಮಾಹಿತಿಯನ್ನು ಸತ್ಯನಿಷ್ಠೆಯಿಂದ ಎತ್ತಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಅವರ ಸಂಶೋಧನೆಗೆ ಫಲ ದೊರಕುತ್ತದೆ.

# ಗ್ರಂಥಗಳು


೧. ಶ್ರೀ ಜಯತೀರ್ಥ ರಾಜ ಪುರೋಹಿತ ಮತ್ತು ಶ್ರೀ ಬಿ.ಎ. ಸನದಿ (ಸಂ) "ತುಂಗಾ ತರಂಗ" ಪ್ರಕಾಶಕರು: ತುಂಗಭದ್ರಾ ಯೋಜನೆಯ ಆಡಳಿತಾಧಿಕಾರಿಗಳು. ಕಲಬುರ್ಗಿ - ೧೯೬೮

ಅ. ತುಂಗವೇಣಿ : ಪಾಂಡುರಂಗರಾವ್ ದೇಸಾಯಿ, ಕ.ವಿ.ವಿ. ಧಾರವಾಡ, ಪುಟ.೪೧

ಆ. ತುಂಗಭದ್ರಾ ಸೀಮೆಯ ಜನಜೀವನ : ಶ್ರೀ ನಾಗರಾಜು. ಶ. ಕಾಳೆ, ರಾಯಚೂರು, ಪು.೪೫

ಇ. ವಿಜಯನಗರದ ಕಾಲದಲ್ಲಿ ನೀರಾವರಿ ಕಾರ್ಯಗಳು: ಡಾ. ಬಾ.ರಾ.ಗೋಪಾಲ, ಕ.ವಿ.ವಿ. ಧಾರವಾಡ, ಪುಟ. ೫೨

ಈ. ತುಂಗಭದ್ರಾ ಪ್ರದೇಶ ಕಲೆಯ ಕಣಜ: ಕೆ.ವಿ. ಇರ್ನಿರಾಯ ಐ.ಎ.ಎಸ್. ಪು. ೬೧

ಉ. ವಿಜಯನಗರದ ಕಾಲದಲ್ಲಿ ನೀರಾವರಿ ಕಾರ್ಯಗಳು: ಡಾ. ಬಾ.ರಾ.ಗೋಪಾಲ, ಕೆ.ವಿ.ವಿ.ಧಾರವಾಡ, ಪುಟ.೫೨

ಊ. ತುಂಗಭದ್ರೆಯ ಪರಿಸರದಲ್ಲಿರುವ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರಗಳು: ಧ್ರುವನಾರಾಯಣ, ರಾಯಚೂರು, ಪು.೮೮
ಋ. ತುಂಗಭದ್ರ ಪರಿಸರದಲ್ಲಿ ಶರಣರು; ಸಾಧುಸಂತರು; ವೀರಶೈವ ಕವಿಗಳು, ಶ್ರೀ ಶಾಂತರಸ, ಬಿ.ಎ.ಇ.ಇಡ್, ಪು.೮೮
ಋ. ತುಂಗಭದ್ರಾ ತೀರದ ಇಕ್ಕೆಲಗಳಲ್ಲಿ ಹರಿದ ಹರಿದಾಸ ಸಾಹಿತ್ಯ, ಪಿ.ಎಂ. ಗಲಗಲಿ, ಎಂ.ಎ. ರಾಯಚೂರು, ಪು. ೧೧೪
ಎ. ತುಂಗಭದ್ರೆಯ ತಡಿಯಲ್ಲಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆ, ಹೆಚ್.ಎ. ಸುಬ್ಬರಾವ್. ರಾಯಚೂರು, ಪುಟ. ೧೨೭
೨. ನಾಗೇಶ ಶಾಸ್ತ್ರಿ. ವೈ. ಮತ್ತು ವೆಂಕಟೇಶಯ್ಯ, ಎಂ.ಜಿ. ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯ, ೧೯೫೭
೩. ಕೆ.ಕೆ. ಬಸವನಾಳ, ಹಂಪೆಯ ಹರಿಹರ ಸೇವೆ ರಚಿತ 'ರಕ್ಷಾಶತಕ' ೧೯೪೩
೪. ವಿಷ್ಣು ತೀರ್ಥ. ಪಿ. 'ಪಂಪಾ ಮಹಾತ್ಮ್ಯಂ', ೧೯೬೩
೫. ಆಲೂರು ವೆಂಕಟರಾವ್, 'ಕರ್ನಾಟಕ ಗತ ವೈಭವ'
೬. ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, 'ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ', ಸಂ. ೬ ರಿಂದ ೧೦
೭. ಬಿ. ವೆಂಕೋಬರಾವ್, 'ಮೈಸೂರು ದೇಶದ ವಾಸ್ತುಶಿಲ್ಪ' - ೧೯೫೯
ಅ. ಚಾರಿತ್ರಿಕ ಹಿನ್ನೆಲೆ, ಪುಟ.೧
ಆ. ವಾಸ್ತುಕಲೆ, ಪುಟ. ೨೧
ಇ. ಕರ್ನಾಟಕ ಶೈಲಿ, ಪುಟ.೩೭
ಈ. ಶಿಲ್ಪಕಲೆ, ಪುಟ. ೫೩
ಉ. ವಿಜಯನಗರದ, ಪುಟ.೧೪೯
೮. ಧ್ರುವ ನಾರಾಯಣ, 'ನಾರಾಯಣ ದೇವರ ಕೆರೆ' - ೧೯೭೯
೯. ಚಿಕ್ಕೇರೂರು ಗೋವಿಂದಾಚಾರ್ಯ, ಹರಪನಹಳ್ಳಿ ಚರಿತ್ರೆ' (ಅಪ್ರಕಟಿತ)
೧೦. ದೇವೇಂದ್ರ ಕ್ರಿಷ್ಣಾಚಾರ್ಯ, 'ನರಹರಿ ತೀರ್ಥ ಸ್ತುತಿ'
೧೧. ವಿ.ಸೀ. 'ಪಂಪಾಯಾತ್ರೆ'
೧೨. ಬಾದರಾಯಣ ಕೂಡ್ಲಿಗಿ, 'ತಾಯೆ ತುಂಗೆ - ಭದ್ರೆ ಚೌಪದಿ ಕಥನ ಕವನ'
೧೩. ಎಸ್.ಆರ್. ಕರೂರ್, 'ಶ್ರೀಕೃಷ್ಣದೇವರಾಯ'
೧೪. ಸಂ.ಪ್ರೊ.ಸಂ.ಶಿ. ಭೂಸನೂರಮಠ, 'ವಿಜಯ ಕಲ್ಯಾಣ' (ವಿಜಯನಗರ ಸಂಸ್ಕೃತಿಯ ಸಮಗ್ರ ದರ್ಶನ)
೧೫. ಕೆ.ವೆಂಕಟರಾಮಪ್ಪ, 'ಶ್ರೀ ಕೃಷ್ಣದೇವರಾಯನ ಕಾಲದ ಕರ್ಣಾಟಾಂದ್ರ ಸಾಹಿತ್ಯ ಸಮೀಕ್ಷೆ', ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. - ೧೯೭೪
೧೬. ಡಾ. ಎ.ವಿ. ವೆಂಕಟರತ್ನಂ, 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ', ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ೧೯೭೪
೧೭. (ಸಂ.) ಜಿ.ಎಸ್. ದೀಕ್ಷಿತ್, ಸಂಗಮರ ಕಾಲದ ವಿಜಯನಗರ: ಅದರ ಇತಿಹಾಸ ಮತ್ತು ಸಾಂಸ್ಕೃತಿಗಳ ಅಧ್ಯಯನ, ಬಿ.ಎ.ಶ್ರೀ. ಪ್ರತಿಷ್ಠಾನ, ಬೆಂಗಳೂರು
೧೮. ವಿ. ಫಿಲಿಯೋಜ, 'ಅಳಿದುಳಿದ ಹಂಪೆ' - ೧೯೮೨
೧೯. ವಿ. ಫಿಲಿಯೋಜ, 'ಹಂಪೆ' - ೧೯೭೬
೨೦. ವಿ. ಫಲಿಯೋಜ, 'ವಿಜಯನಗರ ಸಾಮ್ರಾಜ್ಯ ಸ್ಥಾಪನೆ' - ೧೯೮೦
೨೧. ಡಿ.ವಿ. ಗುಂಡಪ್ಪ, 'ವಿದ್ಯಾರಣ್ಯರ ಸಮಕಾಲೀನರು' - ೧೯೩೩
೨೨. ಈಶ್ವರ ದತ್ತ. ಕೆ., 'ಜೀರ್ಣ ವಿಜಯನಗರ ಚರಿತ್ರೆ' - ೧೯೨೮
೨೩. ಎಸ್.ಬಿ. ಕೋಡದ, 'ವಿಜಯನಗರ ನಿರ್ಣಾಯಕ ಯುದ್ಧ', ಧಾರವಾಡ ೧೯೭೨
೨೪. ಕೆ. ಕೃಷ್ಣರಾವ್, 'ಕರ್ನಾಟಕ ಸಂಸ್ಕೃತಿಯ ಸಂಶೋಧನ, ಸಂಶೋಧಾತ್ಮಕ ಲೇಖನಗಳು' ಮೈಸೂರು - ೧೯೭೦
೨೫. ಎಂ.ವಿ. ಕೃಷ್ಣರಾವ್ ಮತ್ತು ಎಂ.ಕೆ. ಭಟ್ಟ್, (ಸಂ) 'ಕರ್ನಾಟಕ ಇತಿಹಾಸ ದರ್ಶನ' ಮೈಸೂರು - ೧೯೭೦
೨೬. ಜಿ.ಎಸ್. ಕುಲಕರ್ಣಿ, 'ವಿಜಯ ನಗರ ಸ್ಮಾರಕೋತ್ಸವ' - ೧೯೩೯

೧೭. ಪಿ. ಕುಲಕರ್ಣಿ, 'ಹಾಳು ಹಂಪೆ' - ೧೯೩೧

೧೮. ಜಿ.ಡಿ. ನಾಡಕರ್ಣಿ, 'ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ' ಧಾರವಾಡ - ೧೯೭೫

೧೯. ಹೆಚ್.ಎಲ್. ನಾಗೇಗೌಡ, 'ಪ್ರವಾಸಿ ಕಂಡ ಇಂಡಿಯಾ' ಭಾಗ - ೨, ಮೈಸೂರು ವಿಶ್ವವಿದ್ಯಾನಿಲಯ - ೧೯೬೬

೨೦. ಎ.ಎಸ್. ನಂಜುಂಡಸ್ವಾಮಿ, 'ವಿಜಯನಗರ ಇತಿಹಾಸ' - ೧೯೭೨

೨೧. ಆರ್. ನರಸಿಂಹಾಚಾರ್ ಮತ್ತು ಇತರರು, ಕರ್ನಾಟಕ ಕವಿ ಚರಿತ್ರೆ, ೧೯೦೭

೨೨. ಆರ್.ಎಸ್. ಪಂಚಾಕ್ಷಿ, 'ವಿರೂಪಾಕ್ಷ ವಸಂತೋತ್ಸವ ಚಂಪು' - ೧೯೫೩

೨೩. ರಾಮಸ್ವಾಮಿ ಅಯ್ಯಂಗಾರ್, 'ಜೀರ್ಣ ವಿಜಯನಗರ ದರ್ಶನ', ಮೈಸೂರು, ೧೯೭೬

೨೪. ಎಸ್. ಸಧ್ಯೋಜಾತ, 'ವಿಜಯನಗರ ಕಾಲದ ಧಾರ್ಮಿಕ ಜೀವನ' - ೧೯೮೧

೨೫. ಬಿ.ಎ. ಸಾಲೆತೊರೆ ಮತ್ತು ಇತರರು, 'ಕನ್ನಡ ನಾಡಿನ ಚರಿತ್ರೆ' (೧೯೬೯ ಮತ್ತು ೧೯೭೦) I, II, III, ಸಂಪುಟಗಳು, ಬೆಂಗಳೂರು, ೧೯೬೯ ಮತ್ತು ೧೯೭೦

೨೬. ಫ.ಟಿ . ಶರ್ಮ, 'ರಾಮರಾಯನ ಬಖೈರು', ಮೈಸೂರು - ೧೯೨೨

೨೭. ಡಿ.ಎಸ್. ಶಾನಭಾಗ್(ಸಂ), 'ಗಂಗಾ ದೇವಿಯ ಮಧುರ ವಿಜಯ' ಧಾರವಾಡ - ೧೯೦೨

೨೮. ಸಿದ್ಧಲಿಂಗೇಶ್ವರ ಸ್ವಾಮಿ ಸಿ.ಆರ್., (ಅನು) 'ಶ್ರೀ ಪಂಪಾ ಮಹಾತ್ಮೆ' ಹೊಳಗುಂಡಿ - ೧೯೮೩

೨೯. ಬಿ.ಎಂ. ಶ್ರೀಕಂಠಯ್ಯ, (ಸಂ), 'ಕನ್ನಡ ನಾಡಿನ ಚರಿತ್ರೆ' - ೧೯೪೧

೪೦. ಕೆ. ಶ್ರೀಕಂಠಯ್ಯ, 'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ' ಮೈಸೂರು - ೧೯೮೩

೪೧. ಪಿ.ಆರ್. ಸುಬ್ಬರಾವ್, ಕ್ರಿಯಾಶಕ್ತಿ ವಿದ್ಯಾರಣ್ಯ' (ಒಂದು ಕಟ್ಟು ಕಥೆಯ ಸಮೀಕ್ಷೆ) ಮೈಸೂರು - ೧೯೪೭

೪೨. ಪಿ.ತಾತಚಾರ್ಯ (ಸಂ), 'ರಾಮರಾಯನ ಬಖೈರು' ಮೈಸೂರು - ೧೦೨೨

೪೩. ಸಿ.ಟಿ.ಎಮ್. ಕೊಟ್ರಯ್ಯ, 'ಹಂಪೆ ವಿರೂಪಾಕ್ಷ ದೇವಾಲಯದ ವರ್ಣಚಿತ್ರಗಳು'

೪೪. ಪ್ರೊ. ಎಂ.ವಿ. ಸೀತಾರಾಮಯ್ಯ ಮತ್ತು ಡಾ. ಎಸ್.ಎಸ್. ಆಚಾರ್ಯ(ಸಂ), 'ಶ್ರೀ ಕೃಷ್ಣದೇವರಾಯನ ದಿನಚರಿ' ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು - ೧೯೮೩

೪೫. ಬೆಲ್ಲದ ಚೆನ್ನಪ್ಪ, 'ಶ್ರೀ ಕಲ್ಮಟೇಶ್ವರ ದೇವಸ್ಥಾನ ಮತ್ತು ಜಾತ್ರೆ' ಚಿತ್ರವಾಡಿಗೆ – ಹೊಸಕೋಟೆ

೪೬. ಟಿ.ಬಿ. ಕೇಶವರಾವ್ (ಸಂಗ್ರಹಕರು), '೧೯೫೮ - ಭಾರತ - ೧೯೪೫ ಸ್ವತಂತ್ರ್ಯ ಸಂಗ್ರಾಮ' ಬಳ್ಳಾರಿ ಜಿಲ್ಲೆಯ ಕಾಣಿಕೆ

೪೭. ಎ. ಶಿವರಾಮಪ್ಪ, ಹೊಸಪೇಟೆ ತಾಲೂಕ್ ದರ್ಶನ, ಬಿ.ಎಚ್. ಪಬ್ಲಿಕೇಷನ್, ಬೆಂಗಳೂರು ೧೯೮೭

೪೮. ರಂ.ಶ್ರೀ. ಮುಗಳಿ, 'ಕನ್ನಡ ಸಾಹಿತ್ಯ ಚರಿತ್ರೆ', ಮೈಸೂರು - ೧೯೬೦

೪೯. ಯು. ರಾಘವೇಂದ್ರರಾವ್, ಶ್ರೀ ಕುಂಟೋಜಿ ದಾಸರು, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ, ೧೯೯೧

೫೦. 'ಕರ್ನಾಟಕ ಚರಿತ್ರೆ ಸಂಪುಟ', ಭಾಗ ೧ರಿಂದ ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೭

೫೧. ಬೆಟಗೇರಿ ಕೃಷ್ಣಶರ್ಮ, 'ಕರ್ನಾಟಕ ಜನ ಜೀವನ' ಸಮಾಜ ಪುಸ್ತಕಾಲಯ ಧಾರವಾಡ - ೧೯೫೫. ಕನ್ನಡ ನಾಡಿನ ಚರಿತ್ರೆ, ಭಾಗ ೧ ಮತ್ತು ೨, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ, ಬೆಂಗಳೂರು., ಪು. ೨೨೯

೫೨. ಡಾ. ತಿಪ್ಪೇರುದ್ರಸ್ವಾಮಿ, ಡಿ.ವಿ.ಕೆ. ಮೂರ್ತಿ, 'ಕರ್ನಾಟಕ ಸಂಸ್ಕೃತಿ ಸಮೀಕ್ಷೆ' ಮೈಸೂರು ೪, ೧೯೬೮

೫೩. ಡಾ. ಎಂ. ಚಿದಾನಂದ ಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೬೬

೫೪. ಪ್ರೊ. ಎಂ. ಮರಿಯಪ್ಪ ಭಟ್, 'ಕನ್ನಡ ಸಂಸ್ಕೃತಿ', ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು - ೧೯೬೭

೫೫. ಕಟ್ಟಿ ಶೇಷಾಚಾರ್ಯ, 'ಕವಿ ಕನಕದಾಸರು' ಬೆಳಗಾಂ - ೧೯೩೮.

೫೬. ಜಿ. ವರದರಾಜರಾವ್, 'ಕುಮಾರರಾಮನ ಸಾಂಗತ್ಯಗಳು' ಪ್ರಸಾರಾಂಗ, ಮೈಸೂರು ವಿ.ವಿ. - ೧೯೬೬

೫೭. ದೇ. ಜವರೇಗೌಡ, 'ನಂಜುಂಡ ಕವಿ', ಸರಸ ಸಾಹಿತ್ಯ ಪ್ರಕಾಶನ, ಮೈಸೂರು - ೧೯೬೪

೫೮. ಬೆಟಗೇರಿ ಕೃಷ್ಣಶರ್ಮ, 'ನಮ್ಮ ಸಂಸ್ಕೃತಿ ಪರಂಪರೆ', ಸಮಾಜ ಪುಸ್ತಕಾಲಯ, ಧಾರವಾಡ, – ೧೯೬೯

೫೯. ನಿರುಪಮ, 'ಶ್ರೀಕೃಷ್ಣದೇವರಾಯನ ಆಮುಕ್ತಮೌಲ್ಯದ', ಬೆಂಗಳೂರು - ೧೯೭೯

೬೦. ಡಾ. ಬಸವರಾಜ ಮಲಶೆಟ್ಟಿ, 'ಹಂಪೆ ಒಂದು ಪರಿಚಯ', ಮಹಾಕವಿ ಹರಿಹರ ಸ್ಮಾರಕ ಸಂಶೋಧನಾ ಕೇಂದ್ರ, ಶ್ರೀ ಜಗದ್ಗುರು ಕೊಟ್ಟೂರು ಸ್ವಾಮಿ ಮಠ, ಹಂಪೆ, – ೧೯೮೧

೬೧. ಪಿ.ಎಸ್. ದೇಸಾಯಿ, 'ವಿಜಯನಗರ ಸಾಮ್ರಾಜ್ಯ', ವಿಜಯನಗರ ಸ್ಮಾರಕೋತ್ಸವ ಮಂಡಲ, ಧಾರವಾಡ - ೧೯೩೬

62. Appadorai, Economic conditions in South India, (1000 – 1500 AD) – Madras – 1936
63. Bala Sundaram.A.K., Relies of the Vijayanagar glory geography of Bellary District – 1948
64. Francis.W., 'Madras District gazetteers, Bellary 1904 and 1906, Madras
65. Halappa.G.S., History of freedom movement in Karnataka
66. Hayavadana Rao.C., 'Mysore gazetteers'
67. M.V. KrishnaRao, Goboardhana Rao, and K.Jeevanna Rao. 'Glimpses of Karnataka', 1960
68. Tandh Mudaliar., A.D. 'Hampi'
69. B.P. Radha Krishna., 'A survey of the Iron ore resources ;of Mysore State'
70. Appadorai Pillai. K., 'Krishanadava Raya' – AD 1509 – 1529. Nanhamibakkam – 1949
71. KR. Basavaraju (Ed), 'Vijayanagar Urbanity: A reies issued by the committee of National Symposium on urban development, Hospet', Hospet – 1978
72. R. Chakravarthi, (Vidyaranga Vimarsh) Mysore – 1977
73. A.L. Dallapiyaola (Ed), Vijayanagar city and empire: New currents of Research, Vol – . 1st and IInd Stuttguart – 1985
74. D. Devakunjari, 'Hampi' (Archeological Survey of India), New Delhi – 1974
75. G.S. Dikshit (Ed), Early – Vijayanagara: Studies in its 'History and Culture' B.M.S. Memorial foundation Bangalore – 1988
76. RE. Diwakar (Ed), 'Karnataka through the ages' From pre Historic times today of independence of India – 1968
77. P.S. Filliozat and V. Fillioat, 'Hampi – Vijayanagar' The temple of Vithala, New Delhi – 1988
78. Fritzy John. M. Etal, : 'The Royal centre at Vijayanagar', Preliminary Report Victoria – 1984
79. B.R. Gopal, 'Vijayanagar Inscriptions' vol – 1,2,3(1986) Directorate of Archaeology and Museums govt. of Karnataka 1986
80. P.B. Desai. 'History of Karnataka from pre history to unification' Dharwar – 1970
81. P. Gururaja Bhat, 'Studies in Tuluva History and culture' – *1975*
82. F.R. Hermingway and others, Gazetteer of India – (1905 – 1933)
83. H. Heras, 'The Aravida dynasty of Vijayanagara' Vol – Ist
84. J. Kelsall, 'Bellary, Madras District, gazetteers' :4 volumes – 1872
*85.* D. Kotecha 'Hindu ritual movement, Study of Sri virupaksha temple' – Hampi – 1982
86. M. Kripachoryala 'Sayana and Madhava, Vidyaranya' Guntur – 1986
87. K.G. Krishnan (Ed) 'Uttankita Sanskrit Vidyaranya epigropus' vol – 1st. Mysore – 1985
88. 5. Krishna Swamy Aiyangur, 'A Little known chapter of Vijayanagar History', Madras – 1919
89. S. Krishna Swamy Aigangur, 'Somces of vijayanagar History' Madras – 1919
90. S. Krishna Swamy Aigangur, 'The get remembned rules of the long Forgotten empire' Krishnadavaraya of Vijayanagar – *1509* – 1530 AD. – 1917
91. A.H. Longhurst, 'Hampi Ruins' – 1917
92. T.V. Mahalingum, 'Administration and Social life under Vijayanagar', Madras – 1940
93. T.V. Mahalingum, 'Economoic life in the Vijayanagar Emprire' Madras – 1951
94. T.N. Mallappa. 'Kriyasakti Vidyaranaya' Mysore – 1974
95. R.S. Magali, 'The Heritage of Karnataka' Bangalore – 1946
96. Nanjundaradhya. (Ed), 'Girija Kalyana of Harihara – 1976

97. A.V. Narasimha Murthy, ‘The colus of Karnataka’ – 1975
98. P.A. Narayana Pillai, ‘Krishnadevaraya’ (Malayulam) N.P. – 1936
99. V.R. Natu, ‘Monograph on the empire of Vijayanagar with a guide of Hampi’, Belgam – 1900
100. K.A. Nilakanta Shastri, ‘History of South India from prehistory time to the fall of Vijayanagara’, London – 1958
101. R. Oruganti, ‘Studies on Krishnadevaraya of Vijayanagar’, Andhra university, Waltair – 1953
102. N.K.V. Pantulu. ‘Ruins of Hampi’, Anantapur – 1935
103. N. peraraju, ‘History of Vijayanagar Emprire’, Vravakonda – 1941
104. K. RaghavaChuryalu. ‘Sri krishna devaraya’ – 1960
105. S. Rajashekara, ‘Inscriptions of vijayanagar’ – 1984
106. S. Rajashakara, ‘Karnataka Architecture’ – (1984)
107. S. Rajashakara. ‘Master pices of vijayagar art’, Bombay – 1983
108. M. Rama Rao, ‘Krishadevaraya’ New Delhi – 1971
109. M. Rama Rao, ‘Vijayanagar coritramu’ (Telugu), Madras – 1967
110. Rama Sharma, ‘History of the Vijayanagar Empire’ Bombay – 1978 – 80
111. N. Rameshan, ‘A catalorgue of the Vijayanagara coins of the Andhra Govt. Musurm’, Archaeological Serier – 4, – 1962
112. B.R.A. Rao and B.S. Nanjndaiah, ‘An Historical attas of karnataka’, Bangalore – 1978
113. Rea – Alexander, ‘Vijayanagar Art’, New Delhi – 1982
114. B.A. Saletore, ‘Social and political life in the Vijayanagar Empere’, Madras – 1934

## ಅನುಬಂಧ (೨)

115. B.A. Saletore, ‘Medival Jainism with special reference to the Vijayanagar Emprire’, Bombay – 1938
116. B.A. Saletore, ‘Social and political life in the Vijayanagar Empire’, (1346 to 1646 AD). Iind volum, Madras – 1934
117. R.N.Saletore, ‘Vijayanagara art’, Delli – 1980
118. S. Satyanatham, ‘Achyuta Raya’, Darwad – 1977
119. Rebast Sewell, ‘A Forgotten Empire’, London – 1900
120. C. Sivarama Murthy, ‘Vijayanagara paintings’, New Delhi – 1985
121. A.L. Somanatha Rao, ‘Sri Krishnadevaraya Charitramu’ (Teluga), Madras – 1907
140. Venkayya Andugula, ‘Ramarajiyamu of Narapativijayamu’ (Telugu), Madras – 1923
141. Vidyaranya Vidyapitha Trust, ‘Sri Vidyaranya’, (Hampi) – 1983
142. Vidyaranya Vidyapitha Trast, ‘Vijayanagar Empire As seen by Dommingo paes and Fernao Nuniz, Two 16th century portuguese chroninles, New Delhi – 1977
143. Vijayanagar Empire six centerary Association and Karnataka Historical Reseurch Society – (Eds) Vijayanagar six centerary, commemoration Volume. Vijayanagar Empire six centerary Association, Dhurwad – 1936
144. C. Virabhadra Rao, ‘Aliya Ramarajaulu’ (Telugu) Rajahmundry – 1931
145. C. Virabhadra Rao, ‘Krishnaraya Caritramu’ (Telugu) Ellore – 1903.
146. C. Virabhadra Rao, ‘Mahamantri Thimmarasu’ (Telugu) Madras

– 1917
147. C. Virabhadra Rao, 'Thimmarasa Mantri' – 1937
148. Dr. P. Sree Rama Sharma, 'A History of Vijayanagar Empire' Hydrabad – 1992
149. Vijayanagar, 'The New Combridge History, Combridge history of India' – vol – 3rd
150. Conti Nicolo, 'The Travels of Nicolo conti, by J.W. Johes, in India is the 15th century', Madras – 1957
151. Danvers, 'The portuguese in India' 137. RB. Desai. 'Felicitation Volume'
152. H.Heras, 'The Begihings of Vijayanagara'
153. J.S. King, 'History of the Bahumani Dynasty', London – 1900
154. Percy Brown, 'Indian Architecture (Buddhist and Hindu periods), Bombay – 1959
155. R. Sewell, 'The kings of Vijayanagara', Madras – 1932
156. Sherwani and Joshir (Ed), 'History and Medieval Decean' (1294 to 1724 AD), Hydarbad – 1974
157. Venkata Rao Guitti, 'Sources for the History of Vijayanagar Hampi'
158. Channabasappa.S.Patile, 'Tempes of Raichur and Bellary District' Mysore)
159. K.A. Nilakanta Sastry, 'Foreign Notices of South India' Madras – 1939
160. G.S. Dikshit, 'Local self *Govt. in* Mediaeval Karnataka', Dharwad 1964
161. Bhandarkar. R.G., 'Early History of the Decn Down the muslim Conanest', Calcutta – 1928
162. K.A. Nilakanta sastry, 'A History of South India', 2nd Edition' Madras – 1966
163. Konduri Srojini Devi, Religion in Vijayanagar Emprire' New Delhi – 1990
164. B.A. Acharya, 'Haridasa Sahitya', Mysore
165. T.A. Achyata Rao, 'History of Andra literature in the Vii ayanagar Emprire' – Ananthapura.
166. H. Heras Rev, 'Beginings of Vijayanagar History' Bombay – 1934
167. Kamesvara Rao, 'Select Vijayanagar temple of Rayala Seema', Hyderbad – 1976
168. A.P. Karmarkar and N.B.Kalamdani, 'Mystic teachings of the Hariclas of Kamataka', Dharwad – 1939
169. M.V. Krishna Rao, 'Mystic tradition in religion and art in karnataka', Bangalore – 1943
170. S. Krislmaswamy Aiyangur, 'South India and has Mahammadan Invaders', Madras – 1921
171. Mahadevan, 'The philosophy of Advaita, with Special referanc,. to Bharati tirtha Vidayaranya', Ganesh and **Co.** – 1969
172. B.A. Satelore, Medieval Jainism with reference to Vijayanagar', Bombay – 1938
173. G. Yazdani, 'The early history**.**
174. N. Venkataramanayya, 'The early in south India', Madras – 1942
175. George Michell, 'The Vijayanagar courtly style Incorporation and synthesis in the royal orctitecture of southern India' – 15th, 17th centurary, New Delhi – 1992
176. V. Filliojat, Lepigraphice de Vijayanagar du debut a 1337 paris – 1973
177. V. Filliojat. 'The town planning of Vijayanagar' Art and Archaology Research pepers, XIV, pp. 54 – 64, – 1978
178. J.M. Fritz, 'The Roads of vijayanagar in Nagaraja Rao 1983, pp. 51 – 56, – 1983
179. J.M.Fritz, 'Was Vijayanagar a cosmic city?' in Dallapiceolla – 1985, vol – Ist, pp. 257 – 273
180. J.M.Fritz, 'Vijayanagar; Authority and meaning of a south Indian imperial Cojoital', Americon Authropologists – 88/1, pp 45 – 48, – 1986
181. J.M. Fritz and G. Michell, 'The Vijayanagara Documentation and Research project' in South Asian Archaeology – 198, (Ed) B. Alichin, Cambridge. pp. *295 – 304,* – 1984.

182. J.M. Fritz and G. Michell, ‘Interpreting the plan of a medieval Hindu capital; Vijayanagar would Archaeology, 19/1, pp. 105 – 129, – 1987
183. J.M. Fritz and G. Michell and M.S. Nagaraju Rao, ‘Where kings and god’s ment; the royal centre at Vijayanagara’ (University of Arizona press) Tucson – 1985
184. H. Goctz, ‘Muslims in Vijaganagar; the Record of the Monuments’ Studies in Indian cultures. (Dr. Gnnram yezdami commemoration volumes), Hyderbad , pp 66 – 70, – 1966
185. C. Hayavadana Rao. ‘Mysore gazatter’1 Bangalore – 1930
186. C. Hayavadana Rao, ‘History of Mysore’ – 1399 – 1799 AD Bangalore – 1943
187. C.T.M. Cotraiah, ‘Hampi before founding of Vijayanagar’ Srinidhi: perspectives in Indian Archacology, Art and Culture – pp – 38l – 389. Madras – 1983
188. H. Kulke, ‘Maharajas, Mahants and Historians’ (reflections on the Historiography of Early Vii ayanagar and Sringeri in dallapiccolla – *1985),* Vol – Ist, pp – i20 – 143, – *1985*
189. C. Mackenjie, ‘Sketch plan of the ruins at Beejnagur’, Unpublished maga, Indian office librory, London – 1800
190. Madras survey, ‘Hampi Ruins map (12 – 1 mile), Madras – 1881
191. Madras survey, ‘Ruins of Hampi; map (6 – imile), Madras – 1882
192. R.H. Major, India in the Fifteenth century; A collection of Narrative voyages to India, London – 1857
193. G. Michell. ‘Vijayanagar city of victory’, History Today – XXXII, pp – 38 – 42, 1982
194. G. Michell, ‘The Royal Centre at Vijayanagara’,Transactions II/2, Royal institute of British Architents, pp – 92 – 99, – 1984
195. G.Michell, ‘A Never Forgotten city’ in Vijayanagara city and empire; Ed; A.L. Dallápiceolla, Stuttgart; 1985 – Vol – I, pp – il96 – 207, – 1985
196. G. Michell, ‘Architectural Traditions of Vijayanagar; 1st Temples styles and lInd – 1st slamic styles’, In dullapiccdla , – 1985. vollst, pp – 2’74 – 286, – 1985
197. G.Michell, “Architecture of the Muslim Quorters at Vijayanagar; In NagarajuRao. pp – lOl – ll8. – 1985
198. G. Michell, “A small dated temple at Vijayanagara” In Nagaraju Rao – 1985. pp:45 – 49, 1985
199. G. Michell, Ed: “Islamic Heritage of the decon” Marg, publications. Bombay – 1986
200. G. Michell, “Two temples from the early Vijayanagar period; Studies in monwemented orchaism” In kusumanjali. New Interpratations of Indian Art and culture, (Ed.) M.S. Nagarju Rao. pp. 2 13 – 216. New Delhi – 1987
201. G. Michell, ‘Vijaganagar; Architectural inventory of the urban core’ (2, volumes), Mysore – 1990
202. G. Michell, ‘Two Tambs at Hospet’ in sundara – A Mysore – 1990
203. G. Michell, “Royal orchitature and imperial style at vejayanagar” In the power of art; patronage in Indian culture. (Ed.) B.Stoler miller, New Delhi – 1990
204. G. Michell, ‘Revivalism as the imperial mode; Religion Architature under Vijayanagara’ In perceptions of Indians past. (Ed) C. Asher and T. Metclfe. New Delhi – 1991
205. G. Michell and V. Filliojat, ‘Splendours of the vijayanagar empire’, Marey publications, Bombay – 1981
206. M.S. Nagraju Rao. (Ed), ‘Vijayanagar, progress of Resurch – 1979 – 83. (Diretorate of Archaeology and Museums) Mysore – 1983
207. M.S. Nagraju Rao (Ed), ‘Vijayanagar progress of Resurch’, 1983 – 84. (Directorate of Archacology and museems), Mysore – 1985

208. Devaraja and C.S. patil (Eds), 'Vijayanagar, progress of Resurch, 1984 – 87, (Directorate of Archaeology and musems) Mysore – 1991
209. Devaraju and C.S. Patial (Eds) 'Vijayanagar, progress of Resurch, 1987 – 88. (Directorate of Archacology and museems), Mysore – 1991
210. C.S. Patel, 'Palace Architicture at Vijayanagara' In Nagaraju Rao – 1985. pp – 119 – 132, – 1985
211. S. Rajashakara, "Inscriptions at Vijayanagar" In dallapicoila Vol1st. pp. 101 – 119. – 1985
212. S Rajashakura, 'Vijayanagar Studies; a bibiolography in dallapicalla, Vol – IInd, pp.11 – 16. – 1985
213. S. Rajashakara, 'Vijayanagara History; a map approach', Dharwar1987
214. Rama Sharma M.H., "The History of the Vijayanagar empire, Beginnings and Expansion", (1308 – 1569) (Ed.) M.H. Gopal. Bombay – 1978
215. K.V. Raman, 'Temple Architecture Under the Vijayanagar' (In temple art and archilicture proceedings of the seminor held at the Ananthacharya Indologinal institute), pp – 86 – 87. Bombay – 1981
216. S.R. Rao and B.V.K. Sastry, 'Triditional paintings of karnataka', Bangalore – 1980
217. R.N. Saletor, "Some Aspects of Art during the right of krishnadevaraya the great in Vijayanagara six centurary commemoration", p: 197 – 206, Dharwad – 1936
218. H.K. Sherwani, 'The Bahamanis of Delan' Hyderbad – 1953
219. Srinopoli, carla. 'pots and palaces: The earthenwara ceramies of the Noblemn's quarters at Vijayanagara. New Delhi – 1991
220. B. Stein, "All the kings, Mana: perspective an medival south Indian kingship" 'In kingship and anthority in South Asia' (Eds) 1.J.F. Richords 2. Madison, p. 115 – 168. – 1978.
221. B. Stein, 'Peasant state and society in medeval south India', New Delhi – 1980
222. B. Stein, 'Mahanavami: Medival and Modern vingly ritnal in South India' In Guyota age. pp.67 – 90. (Eds.) B.L. Smith and E.Zelliot – 1983
223. B. Stein, 'Reapproaching Vijayanagara' In studies of south India An Authology of recent research and scholurship (Eds:) R.E. Frykenbery and p. Kolenda. New Delhi – 1985
224. B. Stein, 'Vijayanagara, The New combridge History of India'. 1/ 2, combridge – 1989
225. A. Sundara, (Ed) 'Vijayanagara: Progress of Reseurch *(1985* – 1987), Directorate of Archacology and musams Mysore – 1990
226. W.M. Thackston, "Kamaluddin Abdul – Razza Samar Quandi; Mission to caticut and Vijayanagara" in a Contury of prices; sources on Timurid History and Art cambridge – Mass. pp. 299 – 321
227. N. Tobert, 'An ethnographic Discription of houses in Anegoudi' (unpublished momuscript) pp. 218. G. Yezdani Bidar, Its History and momumonts OXFORD – 1947
228. H.G. Hanumappa, 'Socio – Economic structure of Hospet Institute for social and economic change', Bangalore – 1978
229. Anna. L. Dallapiccolta, John. M. Fritz, George Michell and S. Rajashakara. 'The Ramachandra Temple at Vijayanagar', New Delhi – 1992
230. V. Filliozat, 'Le Ramayana a Vijayanagara' Publication Orientalistes deFrance Paris – 1983
231. B.Siein, 'Vijayanagara, circa 1350 – 1564 AD, 'In the cambridge economic History of India' (Ed:) D. Kumar and T. Raychanadhuri. Cambridge. pp.102 – 124. – 1982
232. R.Subrahmanya, 'Architature; Vijayanagara' In History of Medieval Decean (1295 – 1724) (Eds;) H.K. Sherwani and P.M. Joshi. pp.31 5 – 344. Govt. of AndrapradeSh. Hyderbad – 1974
233. M. Chandra Murthy, 'Vijayanagara paintings at Tiruvilimilali' (Prof – K.A.N. Sastry, Felicition volume) pp. 472 and plats – Madras – 1971

234. Chitra Viji, 'An Early Vijayanagara Paintings South India Studies', p: 166 – 168 and 2 plats. Madras – 1998

# ಅನುಬಂಧ (೩)

**Literature**

೧೩೫. ಅನುಭವಾಮೃತ, ಮಹಾಲಿಂಗರಂಗ ಕ್ರಿ.ಶ. ೧೯೬೫ (ಸಂ) ಹೊಸಗೆರೆ ಚಿದಂಬರಯ್ಯ. ಭಕ್ತಬಂಧು ಕಾವ್ಯಾಲಯ, ಬೆಂಗಳೂರು – ೧೯೨೫

೧೩೬. ಅಶ್ವಶಾಸ್ತ್ರ, ಅಭಿನವಚಂದ್ರ, ಕ್ರಿ.ಶ. ೧೪೦೦ ಮದ್ರಾಸ್ ಸರ್ಕಾರದ ಪ್ರಾಚ್ಯಶಾಖೆ, – ೧೯೫೦

೧೩೭. ಅನುಭವಸಾರ, ನಿಜಗುಣ ಶಿವಯೋಗಿ, ಕ್ರಿ.ಶ. ೧೫೦೦ ಶಾಂತಾನಂದ, ಗಾಂಧಿನಗರ, ಬೆಂಗಳೂರು – ೧೯೪೯

೧೩೮. ಉದ್ಭಟದೇವ ಚರಿತೆ, ಬಸವಾಂಕ. ಕ್ರಿ.ಶ. ೧೫೫೦, (ಸಂ), ಸಂ.ಎನ್. ಬಸವಾರಾಧ್ಯ. ಕ.ಸಾ.ಪ. – ೧೯೫೭

೧೩೯. ಏಕೋತ್ತರ ಶತಸ್ಥಲ ಷಟ್ಪದಿ, ಮಗ್ಗೆಯ ಮಾಯಿದೇವ, ಕ್ರಿ.ಶ.೧೪೩೦, ಮುರುಘಾಮಠ, ಧಾರವಾಡ – ೧೯೬೨

೧೪೦. 'ಕುಮಾರವ್ಯಾಸ ವಿರಚಿತ ಐರಾವತ' (ಸಂ) ಆರ್.ಎಸ್. ಪಂಚಮುಖಿ, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ – ೧೯೪೯

೧೪೧. ಕನಕದಾಸರ ಕೀರ್ತನೆಗಳು, ಕನಕದಾಸರು, ಕ್ರಿ.ಶ ೧೫೫೦, ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ, ಉಡುಪಿ – ೧೯೪೮

೧೪೨. ಕರ್ನಾಟಕ ಕವಿ ಚರಿತೆ, ಭಾಗ – ೨, ಆರ್. ನರಸಿಂಹಚಾರ್

೧೪೩. 'ಕೃಷ್ಣರಾಜ ಭಾರತ', ತಿಮ್ಮಣ್ಣ ಕವಿ ಕ್ರಿ.ಶ.೧೫೦೦ (ಸಂ) ಕೃಷ್ಣಯ್ಯ ಶೆಟ್ಟಿ, ಬೆಂಗಳೂರು

೧೪೪. ಕೈವಲ್ಯ ಪದ್ಧತಿ, ನಿಜಗುಣಶಿವಯೋಗಿ, ವೇದಾಂತ ಗ್ರಂಥಾವಳಿ, ಬೆಂಗಳೂರು – ೧೯೪೯

೧೪೫. ಕೌಶಿಕ ರಾಮಾಯಣ, ಬತ್ತಲೇಶ್ವರ, ಕ್ರಿ.ಶ. ೧೫೦೦, (ಸಂ) ಶಿವರಾಮ ಕಾರಂತ, ಹರ್ಷ ಪ್ರಕಟನಾಲಯ, ಪುತ್ತೂರು ೧೯೬೬

೧೪೬. ಖಗೇಂದ್ರ ಮಣಿದರ್ಪಣ, ಒಂದನೆ. ಮಂಗರಸ ಕ್ರಿ.ಶ. ೧೩೫೦, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್ – ೧೯೪೨

೧೪೭. 'ಗಣಭಾಷ್ಯ ರತ್ನ ಮಾಲೆ' ಗುಬ್ಬಿ ಮಲ್ಲಣ ಕ್ರಿ.ಶ. ೧೪೭೫, ಮುರುಘಮಠ, ಧಾರವಾಡ – ೧೯೪೮

೧೪೮. 'ಗದುಗಿನ ಭಾರತ' ಕುಮಾರವ್ಯಾಸ ಕ್ರಿ.ಶ. ೧೪೦೦ ಮೈಸೂರು ಸಂಸ್ಥಾನದ ಸಾಹಿತ್ಯ ಸಂಸ್ಕೃತಿ, ಪ್ರ.ಇ. – ೧೯೫೮

೧೪೯. 'ಚೆನ್ನಬಸವ ಪುರಾಣ' ವಿರೂಪಾಕ್ಷ ಪಂಡಿತ ಕ್ರಿ.ಶ. ೧೫೮೫, ಲಿಂಗಾಯಿತ ವಿದ್ಯಾಭೀವೃದ್ಧಿ ಸಂಸ್ಥೆ, ಧಾರವಾಡ – ೧೯೩೪

೧೫೦. 'ಚೇರಮ ಕಾವ್ಯ' ಚೇರಮಾಂಕ, ಕನ್ನಡ ಸಾಹಿತ್ಯ ಪರಿಷತ್ – ೧೯೫೬

೧೫೧. ಜಯನೃಪಕಾವ್ಯ, ಮೂರನೇ ಮಂಗರಸ, ಕ್ರಿ.ಶ.೧೫೧೧, ಕರ್ನಾಟಕ ಕಾವ್ಯಮಂಜರಿ ೧೮೯೭

೧೫೨. 'ಜೀವಂಧರ ಚರಿತೆ', ಭಾಸ್ಕರ ಕವಿ – ಕ್ರಿ.ಶ. ೧೪೧೩, ಕರ್ನಾಟಕ ಕಾವ್ಯ ಕಲಾನಿಧಿ, – ೧೯೦೮

೧೫೩. 'ಜೈಮಿನಿ ಭಾರತ' (ಕನ್ನಡ ಜೈಮಿನಿ ಭಾರತ), ಲಕ್ಷ್ಮೀಶ ಕ್ರಿ.ಶ.೧೫೩೦, ಎಲೆಕ್ಟ್ರೀಕ್ ಪ್ರೆಸ್, ತುಮಕೂರು – ೧೯೪೧

೧೫೪. 'ತೊರೆವೆ ರಾಮಾಯಣ' – ಭಾಗ ೧,೨ ತೊರೆವ ನರಹರಿ – ಕ್ರಿ.ಶ. ೧೫೦೦, ಪ್ರಾಚ್ಯಾವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೬ – ೫೯

೧೫೫. 'ತ್ರಿಪುರದಹನ ಸಾಂಗತ್ಯ', ಶಿಶುಮಾಯಣ – ಕ್ರಿ.ಶ. ೧೪೭೨, ಕನ್ನಡ ಸಾಹಿತ್ಯ ಪರಿಷತ್ – ೧೯೫೯

೧೫೬. 'ತ್ರಿಭುವನ ತಿಲಕ', ವಿರುಪರಾಜ – ಕ್ರಿ.ಶ.೧೫೨೪, ಮದ್ರಾಸ್ ಸರ್ಕಾರದ ಪ್ರಾಚ್ಯಾಶಾಖೆ, – ೧೯೫೪

೧೫೭. 'ತ್ರಿಷಷ್ಠಿ ಪುರಾತನ ಚರಿತ್ರೆ', ಸುರಂಗಕವಿ – ಕ್ರಿ.ಶ.೧೫೦೦, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೫೮. 'ಧರ್ಮನಾಥ ಪುರಾಣ', ಮಧುರ – ಕ್ರಿ.ಶ.೧೪೦೦, ಜೈನ ಸಾಹಿತ್ಯ ಪ್ರಚಾರ ಸಂಘ, ಮೈಸೂರು – ೧೯೫೫

೧೫೯. 'ನಂದಿ ಮಹಾತ್ಮ್ಯಂ' ಗೋಪ ಕವಿ – ಕ್ರಿ.ಶ.೧೬೦೦, ಕರ್ನಾಟಕ ಕಾವ್ಯಕಲಾನಿಧಿ – ೧೯೦೭

೧೬೦. 'ನಳಚರಿತ್ರೆ', ಕನಕದಾಸರು – ಕ್ರಿ.ಶ.೧೫೫೦, (ಸಂ) ಪಿ.ಎನ್.ಕೃಷ್ಣಯ್ಯ ಶೆಟ್ಟಿ (ಪರಿಸ್ಕೃತ ಮುದ್ರಣ)

೧೬೧. 'ನೇಮಿಜಿನೇಶ್ ಸಂಗತಿ', ಮೂರನೆ ಮಂಗರಸ – ಕ್ರಿ.ಶ.೧೫೦೮, ವರ್ಧಮಾನ ಪವರ್ ಪ್ರೆಸ್, ಬೆಂಗಳೂರು – ೧೯೩೧

೧೬೨. 'ಪದ್ಮರಾಜ ಪುರಾಣ' ಪದ್ಮಣಾಂಕ - ಕ್ರಿ.ಶ. ೧೪೨೦, ಮುರುಘಾಮಠ, ಧಾರವಾಡ - ೧೯೫೮
೧೬೩. 'ಪರಮಾನುಭವ ಬೋಧೆ', ನಿಜಗುಣ ಶಿವಯೋಗಿ, ವೇದಾಂತ ಗ್ರಂಥಾವಳಿ - ೧೬೫, ಸಿದ್ಧವಿಲಾಸ, ಬೆಂಗಳೂರು - ೧೯೪೯
೧೬೪. ಪರಮಾರ್ಥ ಪ್ರಕಾಶಿಕೆ, ನಿಜಗುಣ ಶಿವಯೋಗಿ, ವೇದಾಂತ ಗ್ರಂಥಾವಳಿ - ೧೬೫, ಸಿದ್ದವಿಲಾ, ಬೆಂಗಳೂರು
೧೬೫. 'ಪರಮಾರ್ಥ ಗೀತೆ', ನಿಜಗುಣ ಶವಿಯೋಗಿ ವೇದಾಂತ ಗ್ರಂಥಾವಳಿ ೧೬೫, ಸಿದ್ದವಿಲಾಸ, ಬೆಂಗಳೂರು
೧೬೬. 'ಪಾಲ್ಕುರಿಕೆ ಸೋಮನಾಥ ಪುರಣಾ', ತೋಂಟದಾರ್ಯ - ಕ್ರಿ.ಶ. ೧೫೬೦, ವೀರಶಯವ ಗ್ರಂಥ ಪ್ರಕಾಶಿಕಾ ಗ್ರಂಥಾವಳಿ, ಮೈಸೂರು - ೧೯೧೨
೧೬೭. 'ಪುರಂದರ ದಾಸರ ಕೀರ್ತನೆಗಳು', ಪುರಂದರದಾಸರು - ಕ್ರಿ.ಶ.೧೫೫೦, ಶ್ರೀಮನ್ಮಧ್ವಸಿದ್ಧಾಂತಿ ಗ್ರಂಥಾಲಯ, ಉಡುಪಿ
೧೬೮. 'ಪ್ರಭುಲಿಂಗ ಲೀಲೆ', ಚಾಮರಸ - ಕ್ರಿ.ಶ. ೧೪೩೦, ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
೧೬೯. 'ಪ್ರೌಢರಾಯನ ಕಾವ್ಯ' (ಅದೃಶ್ಯ ಕವಿ) ಕ್ರಿ.ಶ. ೧೫೨೫, ಮುರುಘಾಮಠ, ಧಾರವಾಡ - ೧೯೫೭
೧೭೦. 'ಬಸವ ಪುರಾಣ', ಭೀಮ ಕವಿ, ಕ್ರಿ.ಶ. ೧೪೦೦ (ಜನಪ್ರಿಯ ನೂತನ ಆವೃತ್ತಿ) ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ - ೧೯೬೭
೧೭೧. 'ಭರತೇಶ ವೈಭವ', ರತ್ನಕರ ವರ್ಣಿ - ಕ್ರಿ.ಶ. ೧೫೬೦, (ಸಂ) ಜಿ. ಬ್ರಹ್ಮಪ್ಪ, ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು - ೧೯೬೭
೧೭೨. 'ಭರತೇಶ ವೈಭವ', ರತ್ನಾಕರ ವರ್ಣಿ - ಕ್ರಿ. ಶ. ೧೫೬೦, (ಸಂ) ಪಿ.ಸ್. ಶಾಮರಾಮ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೬೬
೧೭೩. 'ಭಾಗವತ' (ಕನ್ನಡ ಭಾಗವತ), ನಿತ್ಯಾತ್ಮಕ ಶುಕಯೋಗಿ - ಕ್ರಿ.ಶ. ೧೫೦೦ (ಸಂ) ಕೆ.ವೆಂಕಟರಾಮಪ್ಪ, ಶಾರದ ಮಂದಿರ, ಮೈಸೂರು ೧೯೬೪
೧೭೪. 'ಭಾವಚಿಂತಾರತ್ನ' ಗುಬ್ಬಿ ಮಲ್ಲಣಾರ್ಯ - ಕ್ರಿ.ಶ. ೧೫೧೩, (ಸಂ) ಎಂ.ರಾಮಾನುಜಯ್ಯಂಗಾರ್, ಕರ್ನಾಟಕ ಕಾವ್ಯಮಂಜರಿ - ೧೯೩೩
೧೭೫. 'ಭಿಕ್ಷಾಟನ ಚರಿತೆ', ಗುರುಲಿಂಗವಿಭು, (ಸಂ) ಎಂ.ಎ. ರಾಮಾನುಜಯ್ಯಂಗಾರ್, ಕರ್ನಾಟಕ ಕಾವ್ಯಕಲಾ ನಿಧಿ, – ೧೯೦೮
೧೭೬. 'ಭೈರವೇಶ್ವರ ಕಾವ್ಯ', ನಂಜುಂಡ ಕವಿ, – ಕ್ರಿ.ಶ. ೧೫೫೦, (ಸಂ) ಶ್ರೀ ಬಸವ ಸ್ವಾಮಿಗಳು, ವಾಙ್ಞಾಯ ಪ್ರಕಾಶನ ಕಾವ್ಯಾಲಯ, ಮೈಸೂರು - ೧೯೫೬
೧೭೭. 'ಮನ್ಮಥವಿಜಯ', ಕವಿಮಲ್ಲ, – ಕ್ರಿ.ಶ.೧೪೦೦, (ಸಂ) ಹೆಚ್.ಶೇಷಯ್ಯಂಗಾರ್, ಮದ್ರಾಸ್ ಸರ್ಕಾರದ ಪ್ರಾಚ್ಯಶಾಖೆ - ೧೯೫೪
೧೭೮. 'ಮನೋವಿಜಯ ಕಾವ್ಯ', ಗುರುಬಸವ, ಕ್ರಿ.ಶ. ೧೪೩೦, (ಸಂ) ಎಂ.ಎ.ನರಸಿಂಹಾಚಾರ್ಯ, ಗುರುವಿಲಾಸ ಮುದ್ರಣಾಲಯ, ಬೆಂಗಳೂರು - ೧೯೨೪
೧೭೯. 'ಮಹಾದೇವಿ ಅಕ್ಕ ಪುರಾಣ', ಚೆನ್ನಬಸವಣಾಂಕ, – ಕ್ರಿ.ಶ. ೧೫೫೦, (ಸಂ) ಎನ್.ಚಂದ್ರಯ್ಯ, ಶರತ್ ಪ್ರಕಾಶನ, ಮೈಸೂರು - ೧೮೬೮
೧೮೦. 'ಮೋಹನ ತರಂಗಿಣಿ', ಕನಕದಾಸ, ಕ್ರಿ.ಶ. ೧೫೫೦, (ಸಂ) ಎಂ.ಎ. ರಾಮಾನುಜಾಯ್ಯಂಗಾರ್, ಕರ್ನಾಟಕ ಕವ್ಯಕಲಾನಿಧಿ - ೧೯೬೮
೧೮೧. 'ಮೈರಾವಣನ ಕಾಳಗ', ಕುಮಾರ ವಾಲ್ಮೀಕಿ, – ಕ್ರಿ.ಶ. ೧೫೦೦, (ಸಂ) ಎಂ.ಎ. ರಾಮಾನುಜ ಅಯ್ಯಂಗಾರ್, ಶ್ರೀನಿವಾಸ ಪ್ರೆಸ್, ಮೈಸೂರು - ೧೯೧೨
೧೮೨. 'ಯೋಗಾಂಗ ವಿಭೂಷಣ' (ಶಿವಯೋಗಾಂಗ ವಿಭೂಷಣ) ಗುರುಬಸವ, – ಕ್ರಿ.ಶ. ೧೪೩೦, (ಸಂ) ಎಂ.ಎ. ಸುಂಕಾಪುರ, ಮುರುಘ ಮಠ ಧಾರವಾಡ - ೧೯೬೬
೧೮೩. 'ರತ್ನಾಕರನ ಶತಕಗಳು' ೧.ತ್ರಿಲೋಕ ಶತಕ, ೨. ಅಪರಾಜಿತೇಶ್ವರ ಶತಕ, ರತ್ನಾಕರ ವರ್ಣಿ, (ಸಂ) ಜಿ.ಬ್ರಹ್ಮಪ್ಪ, ರತ್ನಾಕರನ ಶತಕ ಸಾಹಿತ್ಯ, ರತ್ನಾಕರ ಪ್ರಕಾಶಮಂಡಳಿ, ಬೆಂಗಳೂರು - ೧೯೬೨
೧೮೪. 'ರಾಮಧಾನ್ಯ ಚರಿತೆ', ಕನಕದಾಸರು, – ಕ್ರಿ.ಶ.೧೫೫೦, (ಸಂ) ಪಂಚಲಿಂಗೇಗೌಡ, ಕಲಾಕ್ಷೇತ್ರ, ಮೈಸೂರು

೧೮೫. 'ರಾಮನಾಥ ಚರಿತೆ', – ಭಾಗ ೧, ೩, ನಂಜುಂಡ ಕವಿ, – ಕ್ರಿ.ಶ. ೧೫೧೫, (ಸಂ) ಹೆಚ್. ದೇವೀರಪ್ಪ, ಮೈಸೂರು ವಿಶ್ವವಿದ್ಯಾಲಯ, ಪ್ರಾಚ್ಯಶಾಖೆ, ೧೯೫೯ ೧೯೬೪
೧೮೬. 'ವಿರೂಪಾಕ್ಷ ದೇವಸ್ಥಾನ ವರ್ಣನಂ', ಚಂದ್ರ ಕವಿ, ಕ್ರಿ.ಶ. ೧೪೩೦, (ಸಂ) ಬಿ.ಶಿವಮೂರ್ತಿ ಶಾಸ್ತ್ರೀ, ಶರಣ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು - ೧೯೫೫
೧೮೭. 'ವಿವೇಕ ಚಿಂತಾಮಣಿ', ನಿಜಗುಣ ಶಿವಯೋಗಿ, – ಕ್ರಿ.ಶ.೧೫೫೦, ೧. 'ವೇದಾಂತ ಗ್ರಂಥಾವಳಿ' (ಸಂ) ಶಾಂತಾನಂದ, ಬೆಂಗಳೂರು - ೧೯೪೯.೨. ಎಂ.ಉಮಾಪತಿ ಶಾಸ್ತ್ರಿ, ಮೂರು ಸಾವಿರ ಮಠ, ಹುಬ್ಬಳ್ಳಿ - ೧೯೬೯
೧೮೮. 'ವೀರಶೈವಾಮೃತ ಪುರಾಣ', ಗುಬ್ಬಿಮಲ್ಲಣಾರ್ಯ, ಕ್ರಿ.ಶ.೧೫೨೦, (ಸಂ) ವೇ.ನಂಜುಂಡ ಶಾಸ್ತ್ರಿಗಳು, ೧೯೦೭ - ೦೮
೧೮೯.ವ್ಯಾಸರಾಯರ ಕೀರ್ತನೆಗಳು
೧೯೦. 'ಶಂಕರ ಶತಕ', ಚಂದ್ರಕವಿ, 'ಕ್ರಿ.ಶ.೧೪೩೦, (ಸಂ) ಸಿ.ಮಹಾದೇವಪ್ಪ, ಸಂಶೋಧನ ಕೂಟ, ಪ್ರಥಮದರ್ಜೆ ಕಾಲೇಜ್, ಚಿಕ್ಕಮಗಳೂರು - ೧೯೬೫
೧೯೧. 'ಶತಕತ್ರಯ', ಮಗ್ಗೆಯ ಮಾಯಿದೇವ, – ಕ್ರಿ.ಶ.೧೪೩೦, (ಸಂ)
೧೯೨. 'ಶ್ರೀಪಾದರಾಯ ಕೀರ್ತನೆಗಳು' (ಕ್ರಿ.ಶ.೧೫೦೦), (ಸಂ.) ಡಾ. ಜಿ.ವರದರಾಜ ರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, – ೧೯೭೩
೧೯೩. 'ಷಟ್‌ಸ್ಥಲ ಗದ್ಯ,' ಮಗ್ಗೆಯ ಮಾಯಿದೇವ, – ಕ್ರಿ.ಶ.೧೪೩೦, (ಸಂ.) ಚೆನ್ನಮಲ್ಲಿಕಾರ್ಜುನ, ಮುರುಘಾಮಠ, ಧಾರವಾಡ - ೧೯೬೨
೧೯೪. 'ಷಟ್‌ಸ್ಥಲ ಜ್ಞಾನಸಾರಮೃತ' ತೋಂಟದ ಸಿದ್ದಲಿಂಗ ಶಿವಯೋಗಿಗಳು, – ಕ್ರಿ.ಶ.೧೪೭೦, (ಸಂ.) ಆರ್.ಸಿ. ಹಿರೇಮಠ, ಮುರುಘಾಮಠ, ಧಾರವಾಡ - ೧೯೬೪
೧೯೫. 'ಕರ್ನಾಟಕ ಕೈಫಿಯತ್ತುಗಳು'. (ಸಂ.) ಡಾ. ಎಂ.ಎಂ.ಕಲಬುರ್ಗಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೯೬. 'ಸದ್ಗುರು ರಹಸ್ಯ' ಗುರುಬಸವ, – ಕ್ರಿ.ಶ. ೧೪೩೦, (ಸಂ.) ಎಂ.ಮರಿಯಪ್ಪ ಭಟ್, ಮದ್ರಾಸ್ ಸರ್ಕಾರದ ಪ್ರಾಚ್ಯಾಶಾಖೆ, – ೧೯೫೧
೧೯೭. 'ಸನತ್ಕುಮಾರ ಚರಿತೆ', ತೆರಕಣಾಂಬಿ ಬೊಮ್ಮರಸ, – ಕ್ರಿ.ಶ.೧೪೮೪, (ಸಂ.) ಜಿ.ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೭೦
೧೯೮. 'ಸಮ್ಯಕ್ತ್ವ ಕೌಮುದಿ', ೩ನೇ ಮಂಗರಸ, ಕ್ರಿ.ಶ.೧೫೦೮, ದೇ.ಫ. ಚೌಗುಲೆ, ಮಹಾವೀರ ಪ್ರೆಸ್, ಬೆಳಗಾವಿ - ೧೯೨೩.
೧೯೯. 'ಸರ್ವಜ್ಞನ ವಚನಗಳು', ಸರ್ವಜ್ಞ, – ಕ್ರಿ.ಶ. ೧೭೦೦ (ಸಂ.) ಚೆನ್ನಪ್ಪ ಉತ್ತಂಗಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು - ೧೯೫೦, ೧೯೬೦, ೧೯೭೦.
೨೦೦. 'ಸಿಂಗಿರಾಜ ಪುರಾಣ', ಸೂಗಿರಾಜ, – ಕ್ರಿ.ಶ.೧೫೦೦, (ಸಂ.) ಹೆಚ್. ದೇವಿರಪ್ಪ, ಪ್ರಾಚ್ಯಾಶಾಖೆ (ಮೈ.ವಿ.ವಿ.), ಮೈಸೂರು - ೧೯೫೦
೨೦೧. 'ಸಿದ್ದೇಶ್ವರ ಪುರಾಣ', ವಿರಕ್ತ ತೋಂಟದಾರ್ಯ, ಮಹಾರಾಜ ನಿರಂಜನ ಜಗದ್ಗುರು ತೋಂಟದಾರ್ಯ ಮಹಾಸಂಸ್ಥಾನ ಮಠ, ಗದಗ - ೧೯೫೮
೨೦೨. 'ಸೂಪಶಾಸ್ತ್ರ' ೩ನೇ ಮಂಗರಸ, – ಕ್ರಿ.ಶ.೧೫೦೮, (ಸಂ), ಎಸ್.ಎಸ್. ಕೃಷ್ಣ ಜೋಯಿಸ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು - ೧೯೬೯
೨೦೩. 'ಸೊಬಗಿನ ಸೋನೆ', ದೇಪರಾಜ, – ಕ್ರಿ.ಶ.೧೪೧೧, (ಸಂ.), ಬಿ.ಎಸ್.ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು - ೧೯೭೦
೨೦೪. 'ಸೋಮೇಶ್ವರ ಶತಕ', ಪಾಲ್ಕುರಿಕೆ ಸೋಮನಾಥ, – ಕ್ರಿ.ಶ.೧೩೦೦, (ಸಂ.) ರಂ.ಶ್ರೀ. ಮುಗಳಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳುರು - ೧೯೭೦

೨೦೫. 'ಸೌಂದರ್ಯ ಪುರಾಣ' ಬೊಮ್ಮರಸ, – ಕ್ರಿ.ಶ.೧೪೫೦, (ಸಂ) ಕರಿಬಸವ ಶಾಸ್ತ್ರಿ, ವೀರಶೈವ ಗ್ರಂಥ ಪ್ರಕಾಶಿಕಾ ಗ್ರಂಥಾವಳಿ - ೧೯೦೯
೨೦೬. 'ಹರಿಭಕ್ತಿಸಾರ' ಕನಕದಾಸರು, – ಕ್ರಿ.ಶ. ೧೫೫೦, ಕರ್ನಾಟಕ ಹರಿದಾಸ ಕೀರ್ತನಾ ತರಂಗಿಣಿ, – ೧೯೫೯
೨೦೭. 'ಹರಿಶ್ಚಂದ್ರ ಸಾಂಗತ್ಯ', ಬೊಂಚೆಯಲಕ್ಕ, – ಕ್ರಿ.ಶ. ೧೫೩೮, (ಸಂ.) ಎಲ್. ಬಸವರಾಧ್ಯ, ವಯಸ್ಕರ ಶಿಕ್ಷಣ ಸಮಿತಿ, ಮೈಸೂರು - ೧೯೩೪
308. Amukta Malyada (of krishnadewaraya)
309. Achyntarayabhyadayam (of Rajanatha Dindima) Ed: RN. Krishnamachur – 1907
310. Madhuravijayam (of Gangadevi)
Ed: Hyderbad – 1984
311. Jaimini Bharatam (of pilialamarri pinavirabhadra)
312. Saluvabhyudayam (of Rajanatha Dindima)
Ed. R.V. Krishnamachur. – 1907
313. Krishnaraja Vijayam (of Kumara Dhnrjate)

**Chronivies and Travels**

314. **Abdur – Razaak: In** Elthiot and Dowson, history of India as told by its own historians, vol – lVth London – 1872
315. **Caesar Frederick** : Samual parchas, His pilgrims. (Ed:) Maclehose. vol – x (GolasgoW – 1905)
316. **Chronicle of domingopaeS** : Translated by Roburt Sewell in 'A Forgotten Empire', pp. 229 – 27 8
317. **Chronicle of Frnao Numiz** : Translated by Robert Sewell in 'A Forgotten Empire', pp. 279 – 380
318. **Firishtah, Mahamed Kassim** : History of the rise of the mahomedam power in India, Till the year – 16I2, Translated by John Brigys 4 volumes, Calcutha – 1908 – I0
319. **Ibn Batnta** : Edited by Denison Ross and Eileen power London – 1929
320. **Nicolo conti :** Travels of Nicolo conti in the early part of the fifteenth century.
*Translated: J.Winter Jones in R.H.Majar India in the fifteenth century, Haklngt Society – 1857 (London) Delhi – 1974
321. **Pietro della valla :** The Travels of pietro della valla in India, (Ed):) E.Grey – 2 – volumes, London – 1892
322. **Jordanus, Friar:** Mirabilia descripta (the wonders of the world) Tr. by. H.Yale, Hakluyt society, London – 1863
323. **Odoric, Frior** : The travels of father odoric of prodenone, Tran. by. H.Yale and H.Cordier cathay and the way thither, lInd – 1 – 277

**Chronicles and Travels**

**Pession – Works**

324. Amir Khustan, Khazainul Futuh, (Ed.) wahid merza, Calcutta – 1953
325. Ferishta Mahammad Qasim bin Hindusthan, Tarikh – 1 – FeriShta – 2. volumes, Lucknow – 1905, Calcutta – 1938
326. Isami, Futuhus Salatin. Trans and Ed: Aghamahdi Hussaih, Agra – 1938
327. Shams Siraj Afif, Tarikh – I – Firuzshahi, Bid: md: Calcutta – 1890

328. Zianddjn Boranj, Trikh – I – Firuz shahi, Ed: Saiyid Ahmad Khan W.N. Less and Kahimddin, Bid. Ind. Calcutta – 1860 – 62

**Ph.D Dissertations:**

೩೨೯. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ, ಎಸ್.ಜಿ. ವಿರಕ್ತ ಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೧೯೭೧
329. "Regional study on form cast of sugareame" (A case study of the sugar belt in Tungabhadra project area of karnataka) by. M.J. Basavaraj, Gulburga University – 1988
330. 'Non – Bank financial Intesmedieves – A study of finance corporation in Bellary District) by. S.Jayanna, *Kamataka University, Dharawad – 1990
331. Religions Tradition in the city of Vijayanagar period to *1565* AD, (Based on a study of the momuments), by. Anila verghese. Bombay University, Bombay – 1989
332. Krishnadevaraya of Vijayanagur (1509 – 1530) by. Krishna swamy. A.K. Bombay University, Bombay – 1953
333. 'Some aspects of Fundal Eliments in the Vijayanagur Polity' (1336 – 1565 AD), by. Keshva Naik.H.P., Mysore University, Mysore – 1985
334. Medeval Temples of Raichur and Bellary region – A Study, by. Channabasappa soodayya patile, *KaJca University, Dharwad – 1989
335. Dance and other fine arts in karnataka sculpture and painting (From early chalukya and vijayanagur times) by. Choodamani M.S., *Mysore university – 1988
336. The Impact of Islam on south India, by. Cherian.A., *Bombay University – 1961
337. Industries and commerce in kamataka during the Vijayanagur period (1336 to 1565AD), by. KS. Nanjundappa, Mysore University, Mysore – 1982
338. Education under the vijayanagar state (1336 – 1565), by. Satish Kumar Setty. Kuvempu university, B.R. project
339. Achyuta Raja, by. Sathyanathan *Kamataka university, Dharwad – 1978
340. The position of women during the Vijayanagur period (1336 – 1646), by. N. Saraswathi. Mysore University – 1990.
341. Irrigation in the Vijayanagur Empire, by. Saraswathi.M.L., Mysore University – 1984
342. Tuluva in Vijayanagur Times, (1336 – 1646), by. Suryanatha. V. Kamath, Bombay University – 1965
343. Non – orgrian Taxation in karnataka under Vijayanagur (1336 – 1565) (A study in economic transpormation based on fiseal system other than land revenue) by.Syed Abdul Ban, Mangalore University – 1989
344. Urban csnters and urbuijation, under the vijayanagur empire. by. Nagraja B.S. Mysore University – 1985
345. Devaraya IInd and his times, by. Iagaraja. H.M., Mysore University – 1979
346. Sangama dynasty of vijayanagar (1346 – 1494) by. Bhandurkar. V.K., Mysore University – 1936
347. Veerasaivism Under Vijayanagar by. Manjula khydiggin, Mysore University
348. Integration of Hydrbad karnataka, by. Mahabaleswarappa. B.S., Gulbarga University –
349. Administration and social life Under vijayanagar, D.Lit – dissertalions by. Mahalingam.T.V., Madras University – 1934
350. Court life Under the vijayanagar rulers, by. Madhava.p. patil. Shivaji University, Kollahpur – 1986
351. Vijayanagar Art, by. Rajaram.N., Bombay University – 1930

352. Trade and Commerce Under Vijayanagar, by. Vijayalakshmi Aldi, Gulburga University
353. The agrasion system Under the vijayanagar empire, by. Viswaniantha.K., Mysore University – 1985
354. Local government in the vijayanagar empire, by.A.V. Venkataraman, Karnataka University – 1970
355. The agrarion system of kartiataka (1336 – 1761 AD), Mysore University – 1978
356. Studies in the History of the Telugu Country during the Vijayanagar period (1336 – 1650 AD) by. Snramarnurthy ***Y.*** Karnataka University – 1973
357. Freedom movement in Hyderbad karnataka, by. Naina Shankar, Gulburga University
358. Krishnadevaraya: His life and achievements, by. Shiva Bhargavi. Karnataka University, Dharwad, 1972
359. History and Archaeology of Anegondi, by. purandhure.S. Department of Archaeology, Duean college,Puuna – 1986
360. Royal Evenings: Sanskrit poetry of queen and count, by. Hicbert.J., Horvard University, Combridge – 1988
361. Local Government in the Vijayanagar Empire, by. A.V. Venkatarathman, Karnataka University, Dharwad – 1970
362. A critical study of sayanachuryas commontory on the A tharvaveda, (Unpublished thesis) by. veerabhadra swamy.M.R. karnataka University – 1979
363. Salava dynasty of vijayanagar, by. Sree Ram.S.P. Osmania University, Hyderbad – 1962
364. Vityaranyan Countribution to advaita by. Shastri. Vermadhava, Karnataka University, Dharwad
365. Sangama Dynasty of Vijayanagar, by. P.T. Lakshmi, Osmana University – Hyderabad – 1962
366. Amakta Malyada of krishnadevaraya. by. Kotesvara Rao.T. Osmania University, Hyderbad – 1964 – 66

## ಅನುಬಂಧ (ಳ)

**M. Phil. Dissertaions:**

೩೬೭. ಹಂಪಿಯ ಬಜಾರುಗಳು, ಎಸ್.ವೈ. ಸೋಮಶೇಖರ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೭೮. ವಿಜಯನಗರ ಕಾಲದ ಸಮಾಜ ಕೆಲವು ಅನಿಷ್ಟ ಪದ್ಧತಿಗಳು, ಸಂಶೋಧಕರು ಬಸವರಾಜಯ್ಯ ಮಠದ್, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

379. Working capital management (A case study ofTungabhadra steel production limited) Tungadhadra Dam, Hospet. by. Shailaja.S.M., Gulburga University – 1991
380. Problems and prospects of poultry Industry in Bellary district of karnataka. by. Ramakrishna, Gulburga University – 1992
381. Kolar region and the Vijayanagar Rule, by. Aswathamma.C. Bangalore University – 1982
382. Decline and fall of vijayanagar empire, by. Hanamanthappa, Gulburga University – 1988 – 89

**M.A. (By Resurch):**

383. Vijayanagar Art, by. Rajaram.N., *Bombay University – 1930
384. Krishanadavarayga of Vijayanagar, by. Rao.M.S., Bombay University – 1931
385. Jainism in South India, by. Sharma.S.R. Bombay University – 1928
386. The puttabhirama Temple at vijayanagar, by. pascher.B., Norwich University, Vermont – 1987

**Epigraphs:**

೩೮೭. ಬಳ್ಳಾರಿ ಜಿಲ್ಲಾ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ. (ಸಂ.) ಡಾ. ದೇವರಕೊಂಡಾರೆಡ್ಡಿ.

೩೮೮. ಕೊಪ್ಪಳ ಜಿಲ್ಲಾ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂ. ಡಾ. ದೇವರಕೊಂಡಾರೆಡ್ಡಿ

೩೮೯. ಹಂಪಿ ಪರಿಸರದ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂ. ಡಾ. ದೇವರಕೊಂಡಾರೆಡ್ಡಿ

390. Epigraphia Indica – 1892, onwords vol – 1st, lInd, Ilird, IVth
391. South Indian Inscripations – 1890 onwards, Vol – I, IV, V, IX, p – land II, XV, XVI,XVII, XX, XXIII.
392. A Topogragohical list of Inscriptions of the Madras presidency (3 volumes) by. Rangacharya.V. Madras – 1919
393. List of Inscriptions copied by the office of the superintendent for eprigraphy, Madras, (compiled up to 31st march 1938)
394. Topographical list of lnscriptions, – 1939, 1972, 1974
395. Dynastic list of copperplate inscriptions (1887 – 1969)
396. Annual Reports on South Indian Epigraph's. 1889, 1893, 1896,
1904, 1907, 1918, 1919, 1922, 1823
397. Annual report on Indian EpigrapWs 1935, 1936, 1939, 1945, 1951, 1953, *1956, 1857 – 58,* 1960, 1964 – 65, 1972 – 73, *1975 – 76,* 1980 – 8 1
398. Archaeological Sarvey of Sadrain Indian – Lists of autioquarian permains in the presidency of Madras – 2 volumes, by. Sewell, Robert. – Madras – 1882 – 84
399. Vijayanagara Inscriptions. vol – 1,2,3. (Ed.) – Gopal.B.R. Directrote of Archaeology and musemes govt. of karnataka. Mysore
400. The Historical Inscriptions on Southern India, – Robert Sewell Historical series – No.5 Madras University , Madras – 1932
401. List of Antiquities, – Robert Sewell
402. Epigraphica cornatica, Volumes – ito 12
403. Archaeological survey of India, Reports for 1907 – 1908; 1908 – 1909. Vijayanagara Dynasties, pp. 164 – 20 1, H.K.Shastry 404. The Annual report of Mysore (Archaeological department) from 1886 to 1956
404. The Annual report of Mysore (Archaeological Department) from 1886 to 1956

**Journals**

೪೦೫. ಕರ್ನಾಟಕ ಭಾರತಿ (೧೯೭೪ರ ಸಂಕ್ರಮಣ ಸಂಪುಟ, ಪುಟ ೨೭ - ೩೮) 'ಹೊಯ್ಸಳ - ಸಂಗಮರ ಸಂಬಂಧ' ಎನ್ನುವ ವಿದ್ವತ್ಪೂರ್ಣ ಲೇಖನದಲ್ಲಿ ಎಸ್. ರಾಜಶೇಖರರು ಸಂಗಮರು ಮಹಾ ಮಂಡಲೇಶ್ವರರೆಂದು ಕರೆದುಕೊಂಡರೂ ಸ್ವತಂತ್ರರಾಗಿದ್ದರೆಂದು ವಾದಿಸುತ್ತಾರೆ ಮತ್ತು ಹೊಯ್ಸಳ ಸಂಗಮರ ಸಂಬಂಧಗಳು ಅನ್ಯೂನ್ಯವಾಗಿರಲಿಲ್ಲೆಂದು ಅಭಿಪ್ರಾಯ ಪಡುತ್ತಾರೆ.

೪೦೬. ದೀಪದಾನ (೧೯೫೨)

೪೦೭. ಗ್ರಾಮಾಭ್ಯುದಯ ಮತ್ತು ಸಹಕಾರ (೧೯೫೩)
೪೦೮. ನಗರ ನಗಾರಿ (೧೯೫೭ - ೫೮)
೪೦೯. ಮೈಸೂರು ವಾರ್ತಾ ಸಂಗ್ರಹ (೧೯೫೩)
೪೧೦. ಶರಣ ಸಾಹಿತ್ಯ (೧೯೫೩)
೪೧೧. ಡಾ. ಅ. ಸುಂದರ, ಹಂಪೆಯಲ್ಲಿ ದೊರೆತಿರುವ ಎರಡನೆಯ ಶತಮಾನದ ಎರಡು ಅಪೂರ್ವ ಬಿಳಿಯ ಜೇಡಿಮಣ್ಣಿನ ಗೊಂಬೆಗಳು. (ಕರ್ನಾಟಕ ಇತಿಹಾಸ ಅಕಾಡೆಮಿ, ಇತಿಹಾಸ ದರ್ಶನ ಸಂ. ೪, – ೧೯೮೯, ಬೆಂಗಳೂರು)
೪೧೨. ೨೪ನೇ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ
(ಅ.) ಪುಟ ೨, ಹಂಪೆಯ ಇತಿಹಾಸದ ಕಥೆಗಳು ಟೇಕೂರು ಕೃಷ್ಣಮೂರ್ತಿ ಬಳ್ಳಾರಿ - ೧೯೭೨
(ಆ.) ಅದೇ ಪುಟ ೫೬, 'ಬಡವಿಯ ಲಿಂಗ' |ಕು| ಹೇಮಲತ, ೫ನೇ ತರಗತಿ ಬಳ್ಳಾರಿ - ೧೯೭೨
೪೧೩. ಉದಯ ಸ್ಮರಣ ಸಂಚಿಕೆ, ತಾಲ್ಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಮತ್ತು ಶಾಲಾಭಿವೃದ್ಧಿ ಸಮಿತಿಗಳ ಸಮ್ಮೇಳನ, ಪುಟ ೫, ಗೋಪಾಲಪುರ, ಪಿ. ಷರೀಫ್ ಸಾಹೇಬ್. ಹೊಸಪೇಟೆ - ೧೯೮೭
೪೧೪. ವಿಜಯನಗರ ಭಾರದ ಸೇವಾದಳ (ಸ್ಮರಣ ಸಂಚಿಕೆ) : ರಾಜ್ಯ ಮಟ್ಟದ ಯುವಜನ ಮತ್ತು ಮಕ್ಕಳ ಮೇಳ, ವಿಜಯನಗರ ಸಾಮ್ರಾಜ್ಯ : (ಒಂದು ಪಕ್ಷಿ ನೋಟ) - ಇಟ್ಟಗಿ ಈರಣ್ಣ, ಹೊಸಪೇಟೆ - ೧೯೮೭
೪೧೫. ಸ್ಕಂದ - ಶ್ರೀಗಂಧ; ಸ್ಮರಣ ಸಂಚಿಕೆ; ೧೯೯೧ ಜನವರಿ ೧೨ ಮತ್ತು ೧೩. ಬಳ್ಳಾರಿ ಜಿಲ್ಲಾ ಐದನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಸಂಡೂರು.
ಅ. ಬಳ್ಳಾರಿ ಜಿಲ್ಲೆಯ ಪ್ರಾಚೀನ ಸಾಹಿತ್ಯ - ಡಾ. ಶಾಂತಿನಾಥ ದಿಬ್ಬದ
ಆ. ಬಳ್ಳಾರಿ ಜಿಲ್ಲೆಯ ಶಿಲ್ಪಕಲೆ - ಡಾ. ವೃಷಭೇಂದ್ರಚಾರಿ ಅರ್ಕಸಾರಿ
ಇ. ಬಳ್ಳಾರಿ ಜಿಲ್ಲೆಯಲ್ಲಿ ಚಿತ್ರಕಲೆ - ವೆಂಕಟೇಶ ಕಾಳೆ
ಈ. ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ - ಜಿ. ಬಸವಂತಪ್ಪ
೪೧೬. 'ಸುವರ್ಣ ಪುಷ್ಪಾಂಜಲಿ' (Hospet munipal council – golden jublee sources) Hospet – 1964 ಭಾಗ - ೧. ಹೊಸಕೋಟೆ.
ಅ. ಪ್ರಾಕೃತಿಕ ಸ್ವರೂಪ - ಪು.೧
ಆ. ಇತಿಹಾಸ - ಪು.೪ - ೨೦
ಇ. ಹೊಸಪೇಟೆ ಪುರಸಭೆ - ಪು.೨೭
ಈ. ಆಡಳಿತ - ಪು.೩೫
ಉ. ಋತುಮಾನ - ಪು. ೪೮
ಊ. ಸಮಾಜ - ಪು.೫೨
ಋ. ಊರಮ್ಮನ ಮಹಿಮೆ (ಕರ್ನಾಟಕ ವಾರ್ಧಕ ಷಟ್ಪದಿ) ರೆಚೋಂಡ ನಾಗರಾಜುರಾಯ, ಪು. xxx – xxxxi
ಋ. ಶ್ರೀ ಚಿತ್ತವಾಡಿಗಿ ನಗರೇಶ್ವರ ದೇವಸ್ಥಾನ, ಪು. xxxii ಎ. ಶ್ರೀ ಚಿತ್ತವಾಡಿಗಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ. ಹೊಸಪೇಟೆ ಇತಿಹಾಸದ ಸಂಕ್ಷಿಪ್ತ ವರದಿ. ಪುಟ. xxxiv
೪೧೭. ಮೈಸೂರು ರಾಜ್ಯ - ನವೆಂಬರ್ - ೧ - ೧೯೫೬
೧. ನಮ್ಮ ಸಂಸ್ಕೃತಿ - ರಂಗನಾಥ ದಿವಾಕರ, ಪುಟ.
೨. ಕನ್ನಡ ನಾಡಿನ ಚರಿತ್ರೆ - ಡಾ. ಎಸ್.ಶ್ರೀಕಂಠಯ್ಯ, ಪುಟ.೧
೩. ಕನ್ನಡ ನಾಡಿನ ಸ್ವರೂಪ - ಎಚ್.ರಾಮರಾವ್, ಪುಟ.೩೩
೪. ಕನ್ನಡ ನಾಡಿನ ಆದಿವಾಸಿಗಳು - ಡಿ. ಕೃಷ್ಣ ಅಯ್ಯಂಗಾರ್, ಪುಟ.೪೯
೫. ಕನ್ನಡ ನಾಡಿನ ಧಾರ್ಮಿಕ ಚಲನವಲನಗಳು - ಆಸ್ಥಾನ ವಿದ್ವಾನ್,

ಪಂಡಿತರತ್ನ, ಬಿ.ಶಿವಮೂರ್ತಿ ಶಾಸ್ತ್ರಿಗಳು. ಬೆಂಗಳೂರು.ಪು.೭೩
೬. ಕನ್ನಡ ಜನಪದದ ರಾಜಕೀಯದ ಹೃದಯ - ತಿರುಮಲ ತಾತಾಚಾರ್ಯಶರ್ಮ, ಪುಟ.೮೩
೭. ಕನ್ನಡ ನಾಡಿನ ಸಂಪ್ರದಾಯಗಳು - ಸಿ.ಕೆ. ವೆಂಕಟರಾಮಯ್ಯ, ಪು.೧೦೫
೮. ಕನ್ನಡ ನಾಡಿನ ಲಲಿತಕಲೆಗಳು, ವಾಸ್ತುಶಿಲ್ಪ - ಡಾ. ಎಂ.ಶೇಷಾದ್ರಿ, ಪು.೧೨೧"
೯. ಕನ್ನಡ ನಾಡಿನ ಲಲಿತಕಲೆಗಳು, ನೃತ್ಯ - ಎಸ್.ಎನ್. ಸ್ವಾಮಿ. ಪು.೧೧೩
೧೦. ಕನ್ನಡ ನಾಡಿನ ಲಲಿತಕಲೆಗಳು ನಾಟಕ - ಶ್ರೀ ದೇವುಡು ನರಸಿಂಹ ಶಾಸ್ತ್ರಿ, ಪು.೧೪೯
೧೧. ಕನ್ನಡ ನಾಡಿನ ಲಲಿತಕಲೆಗಳು, ಸಂಗೀತ - ಬಿ.ವಿ. ಕೃಷ್ಣಶಾಸ್ತ್ರಿ.ಪು. ೧೬೩
೧೨. ಕನ್ನಡ ನಾಡಿನ ಲಲಿತಕಲೆಗಳು, ಚಿತ್ರಕಲೆ - ಅ.ನ. ಸುಬ್ಬರಾವ್. ಪು.೧೭೯
೪೧೮. ಚೆಲ್ಲುವ ಕನ್ನಡ ನಾಡು, ಸಂಪುಟ ೧, ಸಂಚಿಕೆ ೪, ಡಿಸೆಂಬರ್ ೯೨, ಜನವರಿ ೯೩, ಕನ್ನಡ ವಿಶ್ವವಿದ್ಯಾಲಯ, ಹಂಪಿ
419. Journals of Indian History VI, VII, IX, X
420. Q.J.M.S. (all the volumes)
421. Indian Historical councieal, XVII
422. Acharyalu, Raghana.K. Rayavachakama and other telugu Socrees for krishnadevarayas reign. Journal of the Andra Historical Society – IV 423. S. Krishnaswamy Aiyangar
a. Land mark in South Indian History (Q.J.M.Ss. – V pp. 227 – 27)
b. Mysore and the decline of the vij ayanagar empire
(Q.J.M.S. XIII, pp. 621 – 627)
c. Foundation of vijayanagar (Q.J.M.S. XI – pp.742 – 754)
d. Virupaksha II (Bandarkar commemoration volume) – 1917. pp. *255 – 264*
e. A letter known chapter of vijayanagar history from 1450 – 1509 Hindustan Review – 1911
f. Ramaraya of vii ayanagar Sardesai commemoration, volume, 1938
424. Aiyar Ramanatha.A.S., The ctimacteric of Talikota (Journal of Indian History) VI part 1, pp. 67 – 69
425. T.Desikachuri, ‘Numismatics with special reference to the city of vijayanagar Q.J.M.S. Iii, pp.1
426. G.S. Dikshit, Economic conditions in the time of krishnadevaraya, (Vij ayanagar Six – centuary commemosation volume) pp. 213 – 31
427. Iswara Duthe.K. Studies in vijayanagar polity 1336 – 1542 AD. (Journals of Andra historical society) IV – 1930, pp.165 – 188, V – 1931, pp.7 – 20
428. Fleet. J.V. Three cepper plote grants of the kings of vijayanagar. (Journals of Bombay Branch of Rayal Asiatic Society) XII, pp. 336 – 399
429. Heras Henry
a. Goa virgerial at he time of Harihara 11 of vijayanagar (Q.J.M.S. pp. 1 – 28)
b. Jeshit influence at the court of vijayanagar (Q.J.M.S. pp. 130 – 140)
c. Venkatapatiraya I and the Fortnguese. (Q.J.M.S. XIV, pp. 3 12 – 3 17)
d. Early relations between vijayanagar and portngal, (Q.J.M.S. XI, pp. 63 – 74)
e. Seven days at vijayanagar Q.J.M.S. XX, pp.103.
f. Ramadevaraya II An Unknown comperor of vijayanagar
(J.B.O.R.S. XVI – pp. 137 – 153)
g. The great civil wars of vijayanagar
(J.1.H.V. – pp. 164 – 189)
h. A New pratapa of krishnadevaraya of vijayanagar
(J.I.A.VIII, pp. *34 – 35)*
i. Ramaraya of vijayanagar (J.H.Q.I. – pp. *79 – 85,* 226 – 233)

430. B.S. Krishna swamy Iyengur, Expansion of vijayanagar in the south (Half – yearly journal of Mysore University) – XI, pp. 21 – 30
431. V. Subramanya Iyer, 'Madhavacharya and his younger Brothers' (J.M.S. VIII, pp.217, 224)
432. C.K.Krishnama churguiu
a. The religion of Vijayanagara house (Indian Artionory XLIV, pp. 219 – 225)
b. The origin, growth and decline of the vijayanagar empire. (Indian Anlionary LII, pp. 9 – 12)
433. R. Nurasimhachurya, Madhavacharya and his younger brothers (Q.J.M.S. VI, pp.318 – 20)
434. K.A. Nilakanta Sastri, Last days of vijayanagar (Sardevi commemoration volume – 1938)
435. R.Rama Rao. Some problems of identity in the early history of vijayanagar,
Q.J.M.S. **XIX,** pp. 215 – 69.
436. S. Rama Rao, Vidyaranya and medhaevaraya. (I.H.Q. – VI, pp. 701 – 717)
437. S. Hanumantha Rao, The influence of the Religions school of sri Madhwa on the history of vijayanagar (Q.J.M.S. XX, pp. 284 – 287)
438. Venkata Murty Rao, Sources for the history of Vijayanagar (J.1.H. pp. 249 – 264)
439. B.A.Saletore
a. The rise of Vijayanagar
(IHQ. VIII, pp. 294 – 301, 768 – 774, IX pp. 521 – 566)
b. Dynastic continuty of vijayanagar history (l.A. Lxii, pp. 1 – 11, – 1933)
c. Yachama Nayaka, The king marks (J.I.H. Vol XIII, pp.S 1)
440. Rama Sarma. Studies in vijayanagar history (Q.J.M.S. XY, pp.5 –
14, 89 – 106 and 210 – 211)
441. Srikanta Sastri.S. Devaraya II (I.A.VII, pp.77 – 85) 30, Krishna Sastri.H.
a. The first vijayanagar dynasty its viceroys and minTsters, (ASI 1907 – 08, pp. 235 – 253)
b. The second Vijayanagar dynasty its viceroys and ministers,
(ASI 1908 – 09, pp. 164 – 201)
c. The third Vijayanagar dynasty its viceroys and ministers.
(ASI. 1911 – 12, pp. 177 – 197)
442. Robert Sewell, A note on Virupaksha of Vijayanagar (l.A. XXXIV – p.19)
443. Sherwani. Mahamad III and the fall of Vijayanagar. (J.I.H. XIX, pp. 45 – 55, 249)
444. A.R. Slater. Ruins of Vijayanagar (Q.J.M.S. II, pp. 49 – 55)
445. S. Thiruvenkata chari. Kampana, a viceroy of vijayanagar. (P.I.H.C. – 1945) (Proceedings of the Indian History congress)
446. N.Venkataramahayya
a. Foundas of Vijayanagar before the foundation of the city,
(J.O.R. XII, pp. 17 – 30)
b. Ballale III and Vijayanagar J.A.H.R.S. Vth, pp. 123 – 136
447. R. Basu. Vijayanagar in Bangal Tradition, (Indian historical
quarterly III 26 1 – 263)
448. H. Goetz. The jesuit influence in the court of Vijayariagar, Q.J.M.Ss. XIV, **pp.** 130 – 40
449. H.Heras and V.K. Bhandarkur, 'Vijayanagar empire, A synthesis of South Indian culturer'. (Vijayanagar six centurary commomoration volume , pp. 29 – 38)
450. Krishnaswamy Aigangur.S, 'The character and significance of the empire of Vijayanagar in Indian history, (Vijayanagar six centurary commemoration volume – 1936, pp. 1 to 28)
451. G.H. Khare, Krishnadevaraya of Vijayanagar and vithala image **&** ponddhurapura. (Vijayanagar six centurary commemoration volume, Dharwad – 1936, pp. 19 1 – 195)
452. M. Rama Rao, 'Hindusim Under vijayanagar kings, (Vijayanagar ix centurary commemoration volume – Dharwad – 1936, pp. 39 – 51)

453. G.V. Rao, The status of muslims in Vijayanagar emprire, (P.1.H.C. VII, pp. 25 1 – 256) Seven the session Aleahabad – 1944.
454. B.A. Saletore, Vaishnavism in vijayanagar (Dr.R.BhondarkUr volume , pp. 183 – 196)
455. B.V. Srinivasa Rao, ‘The Religious policy of sangama rulers’ (Journal of Andra History and cultural, XXIX – pp37)
456. S.Srikantaya,
a. Vijayanagar and Vidyaranya. (Vijayanagar six century commemoration voluume, Dharwad – 1936. pp. 16 1 – 68)
b. The vijayanagar emprire and Hindu policy, (Proceeding of the Indian History congress – Vth, pp.333 – 34)
457. Sripad Rama Sharma, Vijayanagar and Jainism. (Vijayanagar six cenlurary commemoration voluume – pp.69 – 73)
458. A.Venkata Subbaiah, Religions Cotholicism in medieval karnataka. (Dr. Krishnaswamy Aigangur commemoration volume – pp. 264 – 73) Madras – 1936
459. N.S. Ranguraja. Settlement of land dispute during the time of devaraja 1st. (Q.J.M.S. LXXVII, pp. 398 – 402, – 1986)
460. A. RangaswamY Saraswathi, “Political maxims of the emperor poet krishna Devaraya” (Journal of Indian History – IV, pp.62 – 69,
– 1926)
461. A.Rao, ‘Vijayanagar’ (Christian college magazine, pp.428 – 436,
*502 – 509)* – 1886 – 87
462. O.Sama Rao, ‘The Art heritage of the Vijayanagar empire’ (Journal of the Andra historical pesurch society XVII, pp. 65 – 112) – 1946 – 47
463. S. Sadananada, ‘Islamic influence in vijayanagar capital’ (Journal of the Andra Historical resurch society – XXX, pp. 85 – 88) – 1964 – 65
464. N.VenkataramaflaYYa, ‘The date of the coustruction of the temples of Tajara RamaswamY and vithala at Vijayanagara’ (Journal of oriental research XV, pp.84 – 90) – 1945
465. Little flower convent and school, Golden jubilee, 1940 – 1990.

## ಅನುಬಂಧ (೫)

**ಕೆಳದಿ ಅರಸರ ಅಧ್ಯಯನಕ್ಕೆ ಆಕಾರ ಸೂಚಿ ಪುಸ್ತಕಗಳು**

೪೬೬. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಮೈಸೂರು ೧೯೬೬.

೪೬೭. ಜಿ.ಎಸ್. ದೀಕ್ಷಿತ್, ಕೆಳದಿ ನಾಯಕರು, ಧಾರವಾಡ - ೧೯೬೯

೪೬೮. ದೇವೀರಪ್ಪ ಎಚ್., (ಸಂ), ಹಿರಿಯ ಬಸಪ್ಪ ನಾಯಕನ ಶಿವತತ್ವ ರತ್ನಾಕರಂ, ಮೈಸೂರು - ೧೯೬೪

೪೬೯. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರ - ೧೯೮೫

೪೭೦. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಶಿಸ್ತುಗಾರ ಶಿವಪ್ಪನಾಯಕ, ಮೈಸೂರು - ೧೯೬೪

೪೭೧. ಹೆಚ್.ಎಲ್. ನಾಗೇಗೌಡ, ಪ್ರವಾಸಿ ಕಂಡ ಇಂಡಿಯ, – ಸಂಪುಟ ೪,೭, ಮೈಸೂರು ವಿ.ವಿ.

೪೭೨. ಎಂ.ಎಸ್. ಪುಟ್ಟಣ್ಣ, ಇಕ್ಕೇರಿ ಸಂಸ್ಥಾನದ ಚರಿತ್ರೆ, ಬೆಂಗಳೂರು - ೧೯೩೧

೪೭೩. ಬಸವರಾಜ ಕಲ್ಗುಡಿ, ಮಹಾಸತಿ ಒಂದು ಅಧ್ಯಯನ, ಕ.ಸಾ.ಪ. ಬೆಂಗಳೂರು - ೧೯೮೨

೪೭೪. ಎಂ.ಎಂ. ಕಲಬುರ್ಗಿ, ಬಸವಣ್ಣನವರನ್ನು ಕುರಿತ ಶಾಸನಗಳು, ಕ.ವಿ.ವಿ. ಧಾರವಾಡ - ೧೯೭೩
೪೭೫. ಸಾ.ಶಿ. ಮರುಳಯ್ಯ, ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು - ೧೯೮೦
೪೭೬. ಕೆಳದಿ ಗುಂಡಾಜೋಯ್ಸ್, ಕೆಳದಿ ಸಂಕ್ಷಿಪ್ತ ಇತಿಹಾಸ, ಕೆಳದಿ - ೧೯೬೩
೪೭೭. ಕೆಳದಿ ಗುಂಡಾಜೋಯ್ಸ್, ಇಕ್ಕೇರಿ ಅರಸರು, ಕ.ವಿ.ವಿ., ಧಾರವಾಡ - ೧೯೭೨
ಕೆಳದಿ ಗುಂಡಾಜೋಯ್ಸ್, ಕೆಳದಿ ಸಂಸ್ಥಾನ ಐ.ಬಿ.ಎಚ್., ಬೆಂಗಳುರು - ೧೯೭೨
ಕೆಳದಿ ಗುಂಡಾಜೋಯ್ಸ್, ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ, ಕೆಳದಿ ವಸ್ತು ಸಂಗ್ರಹಾಲಯ - ೧೯೭೫
೪೭೮. ಕೆಳದಿ ಗುಂಡಾಜೋಯ್ಸ್, ಕೆಳದಿ ನೃಪವಿಜಯ (ಗದ್ಯಾನುವಾದ) ಕ.ಸಾ.ಪ., ೧೯೭೭
೪೭೯. ಕೆಳದಿ ಗುಂಡಾಜೋಯ್ಸ್, ಕೆಳದಿ ರಾಜಧಾನಿಗಳು, ಐ.ಬಿ.ಎಚ್., ಬೆಂಗಳೂರು - ೧೯೮೧
೪೮೦. ಕೆಳದಿ ಗುಂಡಾಜೋಯ್ಸ್, ಬಿದನೂರಿನ ಕೆಳದಿ ನಾಯಕರು, ಮೈಸೂರು ವಿ.ವಿ. ಮೈಸೂರು - ೧೯೮೦
೪೮೧. ಕೆಳದಿ ಗುಂಡಾಜೋಯ್ಸ್, ಕೆಳದಿ ವೆಂಕಣ್ಣನ ಕೃತಿಗಳು, ಕೆಳದಿ ವಸ್ತು ಸಂಗ್ರಹಾಲಯ - ೧೯೮೦
೪೮೨. ಡಾ. ಕೆ.ಜಿ. ವೆಂಕಟೇಶ ಜೋಯಿಸ್, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ.ಸಾ.ಪ., ಬೆಂಗಳೂರು - ೮, ೧೯೯೬
೪೮೩. ಡಾ. ಬಿ.ಷೇಕ್ಆಲಿ ಮತ್ತು ಜಿ.ಆರ್.ರಂಗಸ್ವಾಮಯ್ಯ : ದಕ್ಷಿಣ ಭಾರತದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. - ೧೯೭೭
೪೮೪. ಬೆಟಗೇರಿ ಕೃಷ್ಣಶರ್ಮ, ಕರ್ನಾಟಕದ ಜನಜೀವನ, ಧಾರವಾಡ - ೧೯೩೯
೪೮೫. ಕೆ.ವಿ. ರಮೇಶ್, ತುಳುನಾಡಿನ ಇತಿಹಾಸ ಮೈಸೂರು - ೧೯೬೯, ತುಳುನಾಡಿನ ಶಾಸನಗಳು, ಮೈಸೂರು - ೧೯೭೮. ಕರ್ನಾಟಕ ಶಾಸನಗಳ ಸಮೀಕ್ಷೆ, ಮೈಸೂರು - ೧೯೭೧
೪೮೬. ಎನ್. ಲಕ್ಷ್ಮೀನಾರಾಯಣರಾವ್ ಮತ್ತು ಆರ್.ಸಿ. ಪಂಚಮುಖಿ, ಕರ್ನಾಟಕದ ಅರಸು ಮನೆತನಗಳು, ಧಾರವಾಡ
೪೮೭. ಆರ್. ಶಾಮಶಾಸ್ತ್ರಿ (ಸಂ) ಲಿಂಗಣ್ಣ ಕವಿಯ, ಕೆಳದಿನೃಪ ವಿಜಯ ಮೈಸೂರು - ೧೯೨೧
೪೮೮. ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ (ಸಂ). ಶಿವತತ್ತ್ವರತ್ನಾಕರ, ಕನ್ನಡ ವಿ.ವಿ. ಹಂಪಿ
೪೮೯. ಬಿ.ಎಸ್. ಶಾಸ್ತ್ರಿ, ಕೆಳದಿ ಅರಸರು ಮತ್ತು ಪೋರ್ಚುಗೀಸರು, ಧಾರವಾಡ - ೧೯೭೨.
೪೯೦. ಅ. ಸುಂದರ, ಕೆಳದಿ ಅರಸರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ, ಮೈಸೂರು - ೧೯೮೬
೪೯೧. ಫ.ಗು. ಹಳಕಟ್ಟಿ, ಕೆಳದಿ ಸಂಸ್ಥಾನದ ರಾಯರ ವಂಶಾವಳಿ, ವಿಜಾಪುರ - ೧೯೪೦
೪೯೨. ಬಿ.ಆರ್. ಹಿರೇಮಠ, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಧಾರವಾಡ ೧೯೮೫
೪೯೩. ಜಿ.ಪಿ. ರಾಜರತ್ನಂ, ಬಿದನೂರಿನ ರಾಣಿ ವೀರಮ್ಮಾಜಿ, ಮೈಸೂರು - ೧೯೭೧
೪೯೪. ಕರ್ನಾಟಕ ಪರಂಪರೆ, ಸಂಪುಟ ೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ - ಬೆಂಗಳೂರು

**ಲೇಖನಗಳು**

೪೯೫. ಕೆಳದಿ ಗುಂಡಾಜೋಯ್ಸ್, ಕೆಳದಿ ಚೆನ್ನಮ್ಮಾಜಿ ಮಾತೋಶ್ರೀ (ಶ್ರೀಮತಿ ಗಂಗಮ್ಮ ವೀರಪ್ಪ ಚಿನಿವಾರ ಅಭಿನಂದನ) ಮುದ್ದೇಬಿಹಾಳ - ೧೯೮೬
೪೯೬. ಕೆಳದಿ ಗುಂಡಾಜೋಯ್ಸ್, ಲಿಂಗಣ್ಣ ಕವಿಯ ಕೃತಿಗಳು, ಆಸ್ವಾದ ಎಂ.ವಿ.ಸೀ. ಅಭಿನಂದನಾ ಗ್ರಂಥ
೪೯೭. ಕೆಳದಿ ಗುಂಡಾಜೋಯ್ಸ್, ಕರ್ನಾಟಕ ಇತಿಹಾಸದಲ್ಲಿ ಕೆಳದಿ ಪಾತ್ರ, ಕರ್ನಾಟಕ ವಿದ್ಯಾ ವೈಭವ (ಜೆ.ವಿ.ಶಂಕರರಾವ್ ಅಭಿನಂದನಾ ಗ್ರಂಥ) - ೧೯೮೪
೪೯೮. ಕೆಳದಿ ಗುಂಡಾಜೋಯ್ಸ್, ಕೆಳದಿ ಅರಸರು ಮತ್ತು ಚಿತ್ರದುರ್ಗದ ಪಾಳೆಯಗಾರರು. (ಕೆ.ಆರ್.ಲಿಂಗಪ್ಪ ಅಭಿನಂದನಾ ಗ್ರಂಥ) - ೧೯೭೬
೪೯೯. ಕೆಳದಿ ಗುಂಡಾಜೋಯ್ಸ್, ಲಿಂಗಣ್ಣ ಕವಿ ಮತ್ತು ವೆಂಕಣ್ಣ ಕವಿ, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, (ಸಂ.)೫, - ೧೯೮೨

೫೦೦. ಕೆಳದಿ ಗುಂಡಾಜೋಯ್ಸ್, ಕೆಳದಿ ಸೋಮಶೇಖರ ನಾಯಕನ ಕಾಲದ ಶಾಸನ ಪ್ರತಿ., ಕ.ಬಾ.ಸಂ.೮, (ಸಂ.)೩, – ೧೯೭
೫೦೧. ಕೆಳದಿ ಗುಂಡಾಜೋಯ್ಸ್, ಕೆಳದಿ ಅರಸರ ಕಾಲ ನಿರ್ಣಯ ಕ.ಬಾ.ಸಂ. ೮, (ಸಂ.) ೨ - ೧೯೭೫
೫೦೨. ಕೆಳದಿ ಗುಂಡಾಜೋಯ್ಸ್, ಕೆಳದಿ ಅರಸರ ಕಾಲದ ಕವಿಗಳು ಸಾಧನೆ, (ಸಂ.) ೧೧, (ಸಂ.) ೩, – ೧೯೮೦
೫೦೩. ಕೆಳದಿ ಗುಂಡಾಜೋಯ್ಸ್, ಕೆಳದಿನೃಪ ವಿಜಯ, ಕ.ಬಾ. (ಸಂ.) ೫,೩
೫೦೪. ಕೆಳದಿ ಗುಂಡಾಜೋಯ್ಸ್, ಕೆಳದಿ ಅರಸರ ಕುಲದೇವರುಗಳು, ಮಾ.ಕ. (ಸಂ)೩ - ೧೯೭೩
೫೦೫. ಕೆಳದಿ ಗುಂಡಾಜೋಯ್ಸ್, ಕೆಳದಿ ಇತಿಹಾಸದಲ್ಲಿ ಸರ್ಜಾ ಮನೆತನ, ಕ.ಬಾ.ಸಂ.೬, ೪, – ೧೯೭೪
೫೦೬. ಕೆಳದಿ ಗುಂಡಾಜೋಯ್ಸ್, ಕೆಳದಿ ಮತ್ತು ಇಕ್ಕೇರಿ ದೇವಾಲಯಗಳ ಪ್ರಾಚೀನ ಶಿಲ್ಪಕಲೆ, ಮಾ.ಕ.ಸಂ.೧೦, ಸಂ.೩, – ೧೯೮೦
೫೦೭. ಜಿ. ಗೋವಿಂದರಾಜು, ಶಿವಮೊಗ್ಗ ಜಿಲ್ಲೆಯ ಪ್ರಾಚೀನ ದೇವಾಲಯಗಳು, ಶಿಲ್ಪಕಲೆ, ಶಿವಮೊಗ್ಗ - ೧೯೭೬
೫೦೮. ನಾ. ಡಿಸೋಜ, ಕರ್ನಾಟಕ ಭವ್ಯ ಇತಿಹಾಸಕ್ಕೆ ಕಲಶವಿದ್ದ ಇಕ್ಕೇರಿ ಅರಸರು, ಕನ್ನಡ ಪ್ರಭ, ಪು.೨, ೨೯ - ೧೦ - ೧೯೩೮
೫೦೯. ಬಾಳು, ಅಳಿಯದ ಉಳಿದಿರುವ ಇಕ್ಕೇರಿಯ ಹೆಗ್ಗುರುತು, ಕ.ಪ್ರ. ಪು. - ೮, ೧೮ - ೩ - ೧೯೭೫
೫೧೦. ಬೆಟಕಲ ರಾಮನಾಯಕ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಕ್ಕೇರಿ ಅರಸರ ಆಳ್ವಿಕೆ, ತೆಂಕನಾಡು - ೧೯೪೭
೫೧೧. ಬಿ. ರಾಮನಾಯಕ, ದಕ್ಷಿಣ ಕನ್ನಡದಲ್ಲಿ ಇಕ್ಕೇರಿ ನಾಯಕರ ಆಳ್ವಿಕೆ, ತೆಂಕನಾಡು - ೧೯೪೨
೫೧೨. ಕೆ.ಜಿ. ವಸಂತ ಮಾಧವ, ಗೇರುಸೊಪ್ಪೆಯ ಅರಸರು ಮತ್ತು ಕೆಳದಿ ನಾಯಕರು ಮಾ.ಕ.ಸಂ.೨, ೨೩ - ೧೯೭೨
೫೧೩. ಬ.ನಾ. ಸುಂದರರಾವ್, ಕೆಳದಿಯ ಇತಿಹಾಸದ ಮೇಲೆ ಹೊಸಬೆಳಕು, ಪ್ರಜಾಮತ, ಸಂ.೪೧, ಸಂ. – ೪, – ೧೯೬೯
೫೧೪. ಎಪಿಗ್ರಾಫಿಯ ಕರ್ನಾಟಕ
೫೧೫. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್
೫೧೬. ಆನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಫಿ
೫೧೭. ಆನ್ಯುಯಲ್ ರಿಪೋರ್ಟ್‌ಆಫ್ ಮದ್ರಾಸ್ ಆರ್ಕ್ಯುಲಾಜಿಕಲ್ ಡಿಪಾರ್ಟ್‌ಮೆಂಟ್
೫೧೮. ಆನ್ಯುಯಲ್ ರಿಪೋರ್ಟ್ ಆಫ್ ಸೌತ್ ಇಂಡಿಯನ್ ಎಫಿಗ್ರಫಿ
೫೧೯. ಆನ್ಯುಯಲ್ ರಿಪೋರ್ಟ್ ಆಫ್ ಆರ್ಕ್ಯುಲಾಜಿಕಲ್ ಸರ್ವೆ ಆಫ್ ಇಂಡಿಯಾ
೫೨೦. ವಿಜಯನಗರ ಸಿಕ್ಸ್ ಸೆಂಟನರಿ ಕಮೆಮೊರೇಷನ್ ವ್ಯಾಲ್ಯೂಂ, ಧಾರವಾಡ, ೧೯೩೬

**ಮೈಸೂರು ಒಡೆಯರ ಸಂಸ್ಕೃತಿ ಅಧ್ಯಯನಕ್ಕೆ ಆಕಾರ ಸೂಚಿ**

೫೨೧. ಕರ್ನಾಟಕ ಇತಿಹಾಸ ದರ್ಶನ - ಎಂ.ವಿ. ಕೃಷ್ಣರಾವ್, ಎಂ. ಕೇಶವಭಟ್
೫೨೨. ಆಳಿದ ಮಹಾಸ್ವಾಮಿಗಳು - ಸಿ.ಕೆ. ವೆಂಕಟರಾಮಯ್ಯ
೫೨೩. ನಾಲ್ವಡಿ ಕೃಷ್ಣರಾಜ ಒಡೆಯರ್ - ಎಂ. ಶಿಂಗ್ರಯ್ಯ
೫೨೪. ನಮ್ಮ ಮಹಾರಾಜರು - ಡಿ.ಆರ್. ಚನ್ನೇಗೌಡ
೫೨೫. ಕರ್ನಾಟಕ ಪರಂಪರೆ (ಸಂ) ಆರ್.ಆರ್. ದಿವಾಕರ್
೫೨೬. ಮೈಸೂರು ರಾಜ್ಯದ ಮಹಾಶಿಲ್ಪಿ, ಶ್ರೀ ಕೃಷ್ಣರಾಜ ಒಡೆಯರ್ - ಸಿ.ಆರ್. ಶ್ರೀನಿವಾಸ ಅಯ್ಯಂಗಾರ್
೫೨೭. ಮೈಸೂರು ಕೈಪಿಡಿ (ಸಂಪುಟ ೧)
೫೨೮. ಕನ್ನಡ ವಿಷಯ ವಿಶ್ವಕೋಶ - ಕರ್ನಾಟಕ - (ಪ್ರ) ಮೈಸೂರು ವಿಶ್ವವಿದ್ಯಾನಿಲಯ
೫೨೯. ದಿವಾನ್. ಸರ್. ಎಂ. ವಿಶ್ವೇಶ್ವರಯ್ಯನವರ, ಕಾರ್ಯಸಾಧನೆಗಳು - ಡಾ. ಡಿ.ಎಸ್. ಜಯಪ್ಪಗೌಡ
೫೩೦. ಆಧುನಿಕ ಮೈಸೂರು ನಿರ್ಮಾಪಕರು - ವಿ.ಎನ್. ರಾಜಾರಾವ್
೫೩೧. ಕರ್ನಾಟಕ ಪರಂಪರೆ (ಸಂಪುಟ ೨ ಆರ್ಥಿಕ ಸ್ಥಿತಿಗಳ ಸಮೀಕ್ಷೆ) ಎ.ಪಿ. ಶ್ರೀನಿವಾಸಮೂರ್ತಿ
೫೩೨. ಮೈಸೂರು ರಾಜರ ಚರಿತ್ರೆ - ವೆಂಕಟರಮಣಯ್ಯ

೫೩೩. ಮೈಸೂರು ದೊರೆಗಳ ವಂಶಾವಳಿ ಕನ್ನಡ ನಾಡಿನ ಕಥೆಗಳು - ನಾರಾಯಣ ಶರ್ಮ

೫೩೪. ಕರ್ನಾಟಕ ಪರಂಪರೆ - ಕೆಂ. ಸಂಪದ್ಗರಿರಾವ್

೫೩೫. ಮೈಸೂರು ಒಂದು ಅಧ್ಯಯನ - ಎಂ.ಕೆ.ಲಿಂಗಯ್ಯ

೫೩೬. ಶ್ರೀಕೃಷ್ಣ ರಾಜೇಂದ್ರ ಒಡೆಯರವರು - ನಾ.ಕಸ್ತೂರಿ

೫೩೭. ಮಹಿಶೂರ ಮಹಾರಾಜ ಚರಿತ್ರಂ - ಸೋಸಲೆ ಅಯ್ಯಶಾಸ್ತ್ರಿ

೫೩೮. ಸಂಸ್ಕೃತ ಕವಿ ಚರಿತ್ರೆ (ಸಂಪುಟ.೨) - ಎಂ.ಎನ್.ಶ್ರೀನಿವಾಸ ಅಯ್ಯಂಗಾರ್

೫೩೯. ಭಗವತ್ಪ್ರಾರ್ಥನಾ - ಮಂಡಿಕಲ್ ರಾಮಶಾಸ್ತ್ರಿ

೫೬೦. ಮೇಘಪ್ರತಿ ಸಂದೇಶ - ಮಂಡಿಕಲ್ ರಾಮಶಾಸ್ತ್ರಿ

೫೬೧. ಮುಜರಾಯಿ ಫೈಲುಗಳು - ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ

೫೬೨. ಪ್ರಬುದ್ಧ ಕರ್ನಾಟ (ಸಂ.೬೮, ಸಂಚಿಕೆ.೪) ಮೈಸೂರು ವಿ.ವಿ.ನಿಲಯ (ಮೈಸೂರು ವಿ.ವಿ. ನಿಲಯದ ರಜತ ಮಹೋತ್ಸವದ ಸವಿನೆನಪಿನ ಸಂಪುಟ)

೫೬೩. ಮೈಸೂರಿನ ದಿವಾನರು - ಡಿ.ವಿ. ಗುಂಡಪ್ಪ

೫೬೪. ಅರಮನೆಯ ಸರಸ್ವತಿ ಪುಸ್ತಕ ಭಂಡಾರದಲ್ಲಿನ ಮೂಲ ದಾಖಲೆಗಳು, – ಮೈಸೂರು

೫೬೫. ಪ್ರವಾಸಿ ಕಂಡ ಇಂಡಿಯಾ - (ಸಂ) ಎಚ್.ಎಲ್. ನಾಗೇಗೌಡ, ಮೈಸೂರು ವಿ.ವಿ.

೫೬೬. ಬಡತನಕ್ಕೆ ಭಾಗದ ಧೀಮಂತರು - ವಿ.ಎಸ್. ನಾರಾಯಣರಾವ್

**ಪತ್ರಿಕೆಗಳು**

೫೬೭. ವೃತ್ತಾಂತ ಚಿಂತಾಮಣಿ, ೧೮೮೪ ರಿಂದ ೧೮೯೫ ಹಾಗೂ ೧೯೦೩ ರಿಂದ ೧೯೦೬

೫೬೮. ಕರ್ನಾಟಕ ಪ್ರಾದೇಶಿಕ, ೧೮೯೨ ರಿಂದ ೧೯೦೨, ಮಾಸಿಕ ಪತ್ರಿಕೆಗಳು

೫೬೯. ಮೈಸೂರು ವೃತ್ತಾಂತ ಬೋಧಿನಿ, ೧೮೯೪ ರಿಂದ ೧೯೦೮

೫೭೦. ಸೂರ್ಯೋದಯ ಪ್ರಕಾಶನ, ೧೮೯೨ ರಿಂದ ೧೯೧೬

೫೭೧. ಸ್ವದೇಶ ಮಿತ್ರನ್ (ಮದ್ರಾಸಿನ ದೈನಿಕ)

೫೭೨. ಮಂಗಳೂರಿನ ಪತ್ರಿಕೆ, ೧೯೦೭ ರಿಂದ ೧೯೦೮ ಹಾಗೂ ೧೯೧೨

೫೭೩. ಮದ್ರಾಸ್ ಮೈಲ್ (ಮದ್ರಾಸ್) ೧೮೯೧, ೧೯೯೨ ರಿಂದ ೧೯೧೪

೫೭೪. ನಾಡಗನ್ನಡಿ, ೧೯೦೩ ರಿಂದ ೧೯೦೮

೫೭೫. ಕರ್ನಾಟಕ ವಾರಪತ್ರಿಎಕ ೦೬.೧೧.೧೯೧೭, ಸಂ.ಡಿ.ವಿ.ಗುಂಡಪ್ಪ

೫೭೬. ಎಕನಾಮಿಕ್ಸ್ ಟೈಮ್ಸ್, ಬೆಂಗಳೂರು, ೧೯೮೭ - ೮೮, ೮೯ರ ಪ್ರತಿಗಳು

೫೭೭. ದಿ.ಹಿಂದೂಸ್ತಾನ್ ಟೈಮ್ಸ್, ದೆಹಲಿ, ೩ನೇ ನವೆಂಬರ್, ೧೯೩೯

೫೭೮. ಪಂಚಮರ ಪತ್ರಿಕೆ,

೫೭೯. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, (ಕ.ಸಾ.ಪ.) ಬೆಂಗಳೂರು

೫೮೦. ಆಂಧ್ರ ಕೇಸರಿ

೫೮೧. ವೀರ ಕೇಸರಿ

೫೮೨. ತಿಲಕ್ ಸಂದೇಶ್

೫೮೩. ಲೋಕಪಕಾರಿ ಪತ್ರಿಕೆ

೫೮೪. ದೇಶ ಭಕ್ತನ್ (ಹಿಂದಿ ಪತ್ರಿಕೆ)

೫೮೫. ನ್ಯೂ ಇಂಡಿಯಾ ಪತ್ರಿಕೆ
೫೮೬. ಜಸ್ಟಿಸ್ ಪತ್ರಿಕೆ ೧೯೨೩ ರಿಂದ ೧೯೨೭, ೨೮
೫೮೭. ಕೇರಳ ಪತ್ರಿಕಾ ಹಾಗೂ ಕೇರಳ ಸಂಚಾರಿ ಪತ್ರಿಕೆಗಳು
೫೮೮. ದ್ರಾವಿಡಿಯನ್, (ತಮಿಳು ವಾರಪತ್ರಿಕೆ)
೫೮೯. ದೀನಬಂಧು, (ತಮಿಳು ವಾರಪತ್ರಿಕೆ)
೫೯೦. ವೆಂಕಟೇಶ ಪತ್ರಿಕಾ (ತೆಲುಗು), ೧೯೨೦ ೨೫
೫೯೧. ಒಕ್ಕಲಿಗರ ಪತ್ರಿಕೆ
೫೯೨. ಸಾಧ್ವಿ ಪತ್ರಿಕೆ
೫೯೩. ಕೊಡಗು ಸಮಾಚಾರ್
೫೯೪. ಪ್ರಜಾವಾಣಿ
೫೯೫. ಸಂಯುಕ್ತ ಕರ್ನಾಟಕ
೫೯೬. ಪ್ರಜಾಮತ
೫೯೭. ಸುಧಾ
೫೯೮. Mysore State
೫೯೯. The Hindu (18 July, 1891 to 1918)
600. The Tradition Social Reformer
601. The Karnataka
602. The Modran Mail

**Engish**

604. Karnataka gazetter – Ed. Suryanatha Kamath
605. Mysore gazetter – Ed. C. Hayavadana Rao
606. History of karnata – P.B. Desai
607. Histoty of Mysore – Marks vilks
608. Modran Mysore – M.Shama Rao
609. Sri Krishna Ragendara Wodeyer – Ed. S. Srikantaiah (Silver jubilee souvenir)
610. Mysore Administration Report’s
611. Castes and Tribes of south India – (print 2)
612. Marriage and Family in Mysore – M.N. Srinivas
613. All about Mysore – D.V. Gundappa
614. Dasara cultral Festivial – 1981
615. The Royal city – T.P. Issar